ವೇಮನ ಗ್ರಂಥಮಾಲಾ, ಹುಲಕೋಟಿ - 582 205 ಇವರಿಂದ ಪ್ರಕಟಿತವಾದ, ಇದೇ ಲೇಖಕರ ಈ ಕೆಳಗಿನ ಗ್ರಂಥಗಳು ೧ ರಿಂದ ೮ ನಮ್ಮಲ್ಲಿ ಲಭ್ಯವಿವೆ.

**ಗ್ರಂಥಗಳು**

| | | |
|---|---|---|
| 1. | ವೇಮನ<br>( ಮೂರನೆಯ ಆವೃತ್ತಿ ) | 240 ಪದ್ಯಗಳ ಸಂಕಲನ |
| 2. | ವೇಮನ ( ವಿದ್ಯಾರ್ಥಿಗಳಿಗಾಗಿ )<br>( ಮೂರನೆಯ ಆವೃತ್ತಿ ) | 108 ಪದ್ಯಗಳ ಸಂಕಲನ |
| 3. | ಮಹಾಯೋಗಿ ವೇಮನ<br>( ಜೀವನ, ಸಾಧನೆ ಮತ್ತು ಬೋಧನೆ ) | 344 ಪುಟಗಳು |
| 4. | ಅವರಿವರು ಕಂಡಂತೆ : ವೇಮನ<br>( ಸಂಶೋಧನಾತ್ಮಕ ವಿವರಗಳೊಂದಿಗೆ ) | 422 ಪುಟಗಳು |
| 5. | ಯುಗಪುರುಷ : ಪಿ. ಆರ್. ಸರಕಾರ<br>( ಅಪೂರ್ವ ಕೃತಿ ) | 437 ಪುಟಗಳು |
| 6. | ವೇಮನ-ಜೀವನ ಚರಿತ್ರೆ | 208 ಪುಟಗಳು |
| 7. | ವೇಮನ ಮತ್ತು ಒಮ್ಮನದ ಹಕ್ಕಿಗಳು | 198 ಪುಟಗಳು |
| 8. | ವೇಮನ ಮತ್ತು ಮುತ್ತಿನಹಾರ<br>( ವೇಮನರ ಜೀವನ ಮತ್ತು ಆಯ್ದ ಪದ್ಯಗಳು ) | 291 ಪುಟಗಳು |
| 9. | ರಾಜಯೋಗಿ ವೇಮನ | 188 ಪುಟಗಳು<br>( ಅಚ್ಚಿನಲ್ಲಿದೆ ) |

ಮಹಾಯೋಗಿ ವೇಮನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಂದ ಪ್ರಕಟಿತ/ಪ್ರಕಟಗೊಳ್ಳುವ ಲೇಖಕರ ಕೃತಿಗಳು

| | | |
|---|---|---|
| 1. | ವೇಮನ ವಿಶ್ವಗೀತೆ ( 1998 ) | 270 ಪುಟಗಳು |
| 2. | ವೇಮನರ ಯೋಗ ಮೀಮಾಂಸೆ ( ಭಾಗ-I )<br>( ಕರ್ಮಯೋಗ, ಸಾಂಖ್ಯಯೋಗ, ಭಕ್ತಿಯೋಗ ) | ( ಅಚ್ಚಿನಲ್ಲಿದೆ )<br>600 ಪುಟಗಳು |
| 3. | ವೇಮನ ಯೋಗ ಮೀಮಾಂಸೆ ( ಭಾಗ-II )<br>( ಶಿವ ( ಜ್ಞಾನ ) ಯೋಗ, ರಾಜಯೋಗ ) | 700 ಪುಟಗಳು |
| 4. | ವೇಮನ ವೇದ<br>( ಕವಿ ಆರುದ್ರರ ಪುಸ್ತಿಕೆಯ ಅನುವಾದ ) | 80 ಪುಟಗಳು |
| 5. | ವೇಮನ ಸೂಕ್ತಿ, ಮಾಣಿಕ್ಯ ದೀಪ್ತಿ | 200 ಪುಟಗಳು |
| 6. | ವೇಮನ ಮತ್ತು ಸಿ. ಆರ್. ರೆಡ್ಡಿ | 875 ಪುಟಗಳು |

ವೇಮನ ಮತ್ತು ಮುತ್ತಿನಹಾರ

ಎಸ್. ಆರ್. ಪಾಟೀಲ

# ವೇಮನ ಮತ್ತು ಮುತ್ತಿನಹಾರ



ಎಸ್. ಆರ್. ಪಾಟೀಲ

# ವೇಮನ ಮತ್ತು ಮುತ್ತಿನ ಹಾರ

ಶ್ರೀ ಎಸ್. ಆರ್. ಪಾಟೀಲ

VGM

ವೇಮನ ಗ್ರಂಥ ಮಾಲಾ

ಹುಲಕೋಟಿ – 582 205 ಜಿಲ್ಲೆ : ಗದಗ

" VEMAN MATTU MUTTINA HARA "
a biography by :
Sri. S. R. Patil BE
Hulkoti - 582 205

Published by :
Sri. R. R. Sawkar, Secretary
Veman Granthalaya,
Hulkoti - 582 205

Printed by :
Veman Printers, Pvt. Ltd.,
Hulkoti - 582 205

( ಗ್ರಂಥದ ಎಲ್ಲ ಹಕ್ಕುಗಳು ಪ್ರಕಾಶಕರ ಸ್ವಾಧೀನದಲ್ಲಿವೆ. )

ಪ್ರಥಮ ಮುದ್ರಣ : ಅಕ್ಟೋಬರ ೨೦೦೦

ಪ್ರತಿಗಳು : ೧೦೦೦

ಕ್ರಯ : ರೂ. ೧೦೦-೦೦

ಮುದ್ರಕರು :
ವೇಮನ ಪ್ರಿಂಟರ್ಸ್ ಪ್ರೈ. ಲಿ.,
ಹುಲಕೋಟಿ - ೫೮೨ ೨೦೫

## ಮಹಾ ಪೋಷಕರು

ಎಸ್. ಆರ್. ಪಾಟೀಲ ಬಿ.ಈ
ಹುಲಕೋಟಿ-582 205

ಪ್ರೊ. ಕೆ. ಎಂ. ತಿಮ್ಮನಗೌಡರ
(ಬಿಂಕದಕಟ್ಟಿ)
ವಿದ್ಯಾನಗರ, ಹುಬ್ಬಳ್ಳಿ

## ಪ್ರೋತ್ಸಾಹಕರು

1. ವೇಮನ ವಿದ್ಯಾವರ್ಧಕ ಸಂಘ
ಹುಬ್ಬಳ್ಳಿ-ಧಾರವಾಡ.

2. ಕರ್ನಾಟಕ ರಾಜ್ಯ ರೆಡ್ಡಿ ಜನಸಂಘ
ಕೋರಮಂಗಲ ಲೇಔಟ,
ಬೆಂಗಳೂರು-೩೪

3. ಹೇಮ ವೇಮ ಸಂಸ್ಥೆ
ಬಾಗಲಕೋಟಿ

4. ರಡ್ಡಿ ಸಂಘ
ಬೆಳಗಾವಿ

5. ಶ್ರೀ ಮಹಾಯೋಗಿ ವೇಮನ ಸೇವಾ ಸಮಿತಿ
ಗೋಕಾಕ.

6. ವೇಮನ ವಿಚಾರ ವೇದಿಕೆ
ಹುಲಕೋಟಿ-582 205

# ಕೊಡುಗೆ

-೧-

ಅ. ದಾನ ಒಪ್ಪೆ ಗೆಯ್ಯೆ, ದಡವ ಸೇರಬಹುದು.
ಮನವ ನಂಬಿ ಇರಲು ಮಾಯೆ ಮುಳುಗು.
ಜ್ಞಾನ ಕಳೆಯ ನಂಬಿ ಜಡಿಯೊ ವೈರಿಗಳನು.
ವಿಶ್ವದಾಭಿರಾಮ ಕೇಳು ವೇಮ.

-೨-

ಆ. ತನ್ನ ಸುತ್ತು ನೋಡಿ, ದಾನವೀಯ್ದಲು,
ಅವನಿಯೊಳಲ್ಲ ಹಿರಿಯ, ಆವನಿರಲಿ
ಅದರಿ ಬೆದರದಿದ್ದು ಅನ್ಯನಿಗೆ ಸೊತ್ತನು,
ದಾನವೀಯುವವನ ದಾತ ವೇಮ.

-೩-

ಕ. ನೀಡುತ್ತಿರುವರ ಸಂಪದ,
ಈಡಾಗದೆ, ಎಂದಾದರು ಕುಂಠಿತನಹುದೇ?
ನೋಡೋರತೆ ಜಲ, ಹೊಡೆದಂತೆ
ಕೂಡಿ ಸೇರುತಿಹುದು, ತೀರಡ ವಿಧನಿದು ವೇಮ.



# ಪರಿವಿಡಿ


| ಕ. ಸಂ. | ವಿಷಯ | ಪುಟ ಇಂದ | ಪುಟ ವರೆಗೆ |
|---|---|---|---|
| | ಪ್ರಕಾಶಕರ ಮಾತು | v | vi |
| | ಮುನ್ನುಡಿ | vii | viii |
| 1. | ಯಾರೀ ವೇಮನ | 1 | 3 |
| 2. | ಜನನ, ಊರು, ಕೇರಿ | 4 | 11 |
| 3. | ಬಾಲ್ಯ, ಯೌವನ | 12 | 19 |
| 4. | ವಿಶ್ವದಾಳ ಸಂಗ | 20 | 38 |
| 5. | ಶೋಷಣೆಯ ವಿರುದ್ಧ ಚಳುವಳಿ | 39 | 44 |
| 6. | ವೈದಿಕ ಮತ | 45 | 51 |
| 7. | ಮೂರ್ತಿ ಪೂಜೆ | 52 | 61 |
| 8. | ತೀರ್ಥಯಾತ್ರೆ | 62 | 67 |
| 9. | ಆಚಾರ ವಿಧಿ | 68 | 77 |
| 10. | ಸಮಾಜ ಸುಧಾರಣೆ | 78 | 98 |
| 11. | ಧನ ಸಂಚಯು | 99 | 109 |
| | ಧನ ವಿಹೀನತೆ, ವಿತರಣೆ, ಪಾತ್ರಾಪಾತ್ರತೆ, | | |
| | ಧನಮದ, ಧನಕ್ಕೆ ಅವಾಸ್ತವ | | |
| | ಮಹತ್ವ, ಧನಾಕಾಂಕ್ಷೆ | | |
| 12. | ಸಾಮಾಜಿಕ ಶೋಷಣೆ | 110 | 129 |
| | ಕಾಪು, ಒಕ್ಕಟ್ಟು | | |
| 13. | ದುಶ್ಚರಿತಗಳು | 130 | 145 |
| | ಪ್ರಾಣ ಹಿಂಸೆ, ಕೊಲೆ ಸುಲಿಗೆ, ಜಗಳ ಕಾದಾಟ, | | |
| | ಕಳವು, ಮದ್ಯಪಾನ, ಜೂಜಾಟ, ವಾಚಿಕ ದುಶ್ಚರಿತೆ | | |
| | ಮಾನಸಿಕ ದುಶ್ಚರಿತೆಗಳು | | |
| 14. | ಸುಚರಿತ್ರೆಗಳು | 146 | 155 |
| | ಶಾರೀರಿಕ, ವಾಚಿಕ, ಮಾನಸಿಕ | | |
| 15. | ಗುರು | 156 | 194 |
| | ಬೆಟ್ಟ-ಗುಹೆ ವಾಸ, ಸದ್ಗುರು ಪ್ರಾಪ್ತಿ, ಗುರುವಿನ | | |
| | ಸ್ಮರಣೆಯಲ್ಲಿ, ಉನ್ಮನೀ ಅವಸ್ಥೆ, ಗುರುವಿನಲ್ಲಿ | | |
| | ಬೇಡಿಕೆ, ಗುರುಭಕ್ತಿ, ಗುರುಶಕ್ತಿ, ಗುರುವನ್ನು | | |
| | ಸೇರುವುದು, ಭೌತಿಕ ಕ್ಷೇತ್ರದಲ್ಲಿ, | | |
| | ಮಾನಸಾಧ್ಯಾತ್ಮಿಕ ಕ್ಷೇತ್ರದಲ್ಲಿ, ಫಲಶ್ರುತಿ | | |
| 16. | ಯೋಗಮಹಿಮೆ ಮತ್ತು ಜನಜನಿತ ಕಥಾನಕಗಳು | 195 | 217 |

# ಪರಿವಿಡಿ


| ಕ. ಸಂ. | ವಿಷಯ | ಪುಟ | |
|---|---|---|---|
| | | ಇಂದ | ವರೆಗೆ |
| | ಕಾವ್ಯ ಪ್ರತಿಭೆ, ರಸವಿದ್ಯೆ, ಹೇಮಕಾರಕ ವಿದ್ಯೆ, ಕಾಶಿಗೆ ಹೋದರೂ ಕಾಸು ತಾಮ್ರವೇ, ವೇಮನರ ಸ್ನಾನ ವಿಧಾನ, ಕುಚೋದ್ಯ ಕೆಲಸದ ಅಂತರಾರ್ಥ, ಬಂಗಾರ ಬೀಜಗಳುಳ್ಳ ಪಾಪರ ಕಾಯಿ ಬೆಳೆ, ಮಳಲು ಬಿತ್ತಿ ಬೆಳೆ, ಮಳೆ ತರಿಸುವಿಕೆ. | | |
| 17. | ಮಹಾನಿರ್ಯಾಣ | 218 | 226 |
| | ಅ. ಜೀವ ಸಮಾಧಿ | | |
| | ಆ. ಗವಿ ಪ್ರವೇಶ | | |
| 18. | ಮುತ್ತಿನಹಾರ | 227 | 246 |
| | 1. ದೇವರು | | |
| | 2. ಗುರುಶಿಷ್ಯ | | |
| | 3. ಸಾಧನೆ | | |
| | 4. ಸಿದ್ಧಿ | | |
| | 5. ನೀತಿವಾದ | | |
| | 6. ದಾನ | | |
| | 7. ಲೋಭ | | |
| | 8. ಆಸೆ | | |
| | 9. ಕಾಮ | | |
| | 10. ಸಮಾಜ | | |
| 19. | ನುಡಿಮುತ್ತು | 247 | 272 |
| | ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳು, ಎಂಟು, ಒಂಭತ್ತು, ಹತ್ತು, ಹನ್ನೊಂದು, ಹನ್ನೆರಡು, ಹದಿಮೂರು, ಹದಿನಾಲ್ಕು, ಹದಿನೈದು, ಹದಿನಾರು, ಹದಿನೇಳು, ಹದಿನೆಂಟು, ಹತ್ತೊಂಭತ್ತು, ಇಪ್ಪತ್ತು, ಇಪ್ಪತ್ತೊಂದು, ಇಪ್ಪತ್ತೆರಡು, ಇಪ್ಪತ್ತ-ಮೂರು, ಇಪ್ಪತ್ತನಾಲ್ಕು, ಇಪ್ಪತ್ತೈದು. | | |
| 20. | ಇಂಚರ | 273 | 280 |
| | ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳು, ಎಂಟು, ಒಂಭತ್ತು, ಹತ್ತು. | | |
| | ಗ್ರಂಥ ಋಣ | 281 | 282 |
| | ಪದ್ಯಗಳ ಅಕ್ಷರಾನುಕ್ರಮಣಿಕೆ | 283 | 291 |




# ಪ್ರಕಾಶಕರ ಮಾತು

ಮಹಾಯೋಗಿ ವೇಮನರ ತತ್ತ್ವಪ್ರಸಾರವು ಇಪ್ಪತ್ತನೆಯ ಶತಮಾನದ ಆರಂಭದಿಂದಲೂ ಕನ್ನಡ ನಾಡಿನಲ್ಲಿ ನಡೆದಿದೆ. ಶತಮಾನದ ಆದಿಯಲ್ಲಿ ವೇಮನ ಪದ್ಯಗಳ ಕನ್ನಡಾನುವಾದ ಗ್ರಂಥಗಳು ಹೆಚ್ಚಾಗಿ ಪ್ರಕಟಗೊಳ್ಳದ ಕಾರಣ, ಜಯಂತಿ, ಸಭೆ ಸಮಾರಂಭಗಳಲ್ಲಿಯೇ ವೇಮನರ ನೆನಪು ನಿಲ್ಲುವಂತಾಯಿತು. ಆರನೆಯ ದಶಕದಲ್ಲಿ ಚಿತ್ರದುರ್ಗದ ದಿ. ಬಿ. ಭೀಮರಾಜು ವಿರಚಿತ 'ವೇಮನ ಪದ್ಯಗಳು' ಎಂಬ ಗ್ರಂಥವು ಮೊದ ಮೊದಲು ವೇಮನ ಸಾಹಿತ್ಯ ಸೌಧದ ಬೆಳಕಿಂಡಿ ಎನಿಸಿತ್ತು. ಏಳನೇ ದಶಕದಲ್ಲಿ ಆಂಧ್ರ ನಾಡಿನ ಗದ್ವಾಲ ಸಂಸ್ಥಾನದ ರಾಜಾಶ್ರಯದಲ್ಲಿ ಶ್ರೀ ರಾಮ ನರಸಿಂಹಮೂರ್ತಿ ಕವಿದ್ವಯರು ಸಂಸ್ಕೃತ ಮತ್ತು ಆಂಗ್ಲ ಅನವಾದಗಳೊಂದಿಗ ವೇಮನ ಗೀತಾ-೧ ಮತ್ತು ವೇಮನ ಗೀತಾ-೨ ಗ್ರಂಥಗಳನ್ನು ಪ್ರಕಟಿಸಿದರು. ಒಂದೊಂದರಲ್ಲಿ ಐದು ನೂರು, ಪದ್ಯಗಳಿದ್ದವು. ಇವುಗಳನ್ನು ಅನುಸರಿಸಿ, ಶ್ರೀ ಎಸ್. ಆರ್. ಪಾಟೀಲರು ತೆಲುಗು ಪಂಡಿತರ ನೆರವಿನೊಂದಿಗೆ ಕ್ರಿ. ಶ ೧೯೬೭ ರಲ್ಲಿ ವೇಮನ ಗೀತೆ-೧ ಮತ್ತು ವೇಮನ ಗೀತೆ-೨ ಎಂಬ ಕನ್ನಡಾನುವಾದವನ್ನು ವಿವರವಾದ ಟೀಕಾರ್ಥದೊಂದಿಗೆ ಹುಬ್ಬಳ್ಳಿಯ ವಿಶಾಲ ಕರ್ನಾಟಕ, ಪ್ರಕಟಣಾಲಯದ ಮೂಲಕ ದಿ. ಕೆ. ಎಚ್. ಪಾಟೀಲರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಿಸಿದರು. ಈ ಪ್ರಕಟಣೆಗಳ ೨೦೦೦ ಪ್ರತಿಗಳ ಮಾರಾಟಕ್ಕೆ ಇಪತ್ತೈದು ವರ್ಷಗಳೇ ಬೇಕಾದವು. ಏಕೆಂದರೆ, ಜನರಲ್ಲಿ ವೇಮನ ಸಾಹಿತ್ಯ ಕುರಿತು ಆಸಕ್ತಿಯನ್ನು ಮೂಡಿಸುವುದನ್ನು, ಜೊತೆ ಜೊತೆಯಾಗಿ ಮಾಡಬೇಕಿತ್ತು.

ಇಪ್ಪತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಹತ್ತಾರು ಊರುಗಳಲ್ಲಿ ನಡೆಯಲಾರಂಭಿಸಿದ ವೇಮನ ಜಯಂತಿ ಸಮಾರಂಭಗಳು, ಅಲ್ಲಲ್ಲಿ ನಡೆದ ಭಾಷಣ ಮಾಲೆ, ವಿಚಾರ ಸಂಕಿರಣಗಳು, ವೇಮನ ಸಾಹಿತ್ಯ ಕುರಿತು ಜನರಲ್ಲಿ ತೀವ್ರ ಆಸಕ್ತಿ ಕೆರಳಿಸಿದವು. ಈ ಸುಸಂಧಿಗೆ ಅನುಗುಣವಾಗಿ ಶತಮಾನದ ಕೊನೆಯ ದಶಕದಲ್ಲಿ ನಮ್ಮ ಗ್ರಂಥಮಾಲೆಯ ಪ್ರಕಟಣೆಗಳು ಹೊರಬಂದು ಜನತೆಯ ಜಿಜ್ಞಾಸೆಯನ್ನು ತಣಿಸಿದವು. ನಾವು ಇದು ವರೆಗೆ ಆರು ಚಿಕ್ಕದೊಡ್ಡ ಗ್ರಂಥಗಳನ್ನು ಕಳೆದ ದಶಕದಲ್ಲಿ ಪ್ರಕಟಿಸಿದ್ದು, ಕೆಲವು ಗ್ರಂಥಗಳು ಈಗಾಗಲೇ ಮೂರನೆಯ ಆವೃತ್ತಿಯನ್ನು ಕಂಡಿವೆ. ನಮ್ಮ ಪ್ರಯತ್ನಗಳಿಗೆ ಪೂರಕವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಮಹಾಯೋಗಿ ವೇಮನ ಪೀಠವು ಶ್ರೀ ಎಸ್. ಆರ್. ಪಾಟೀಲರ 'ವೇಮನರ ವಿಶ್ವಗೀತ' ಎಂಬ ೮೯೦ ಪುಟಗಳ ಬೃಹತ್ ಗ್ರಂಥವನ್ನು ಕ್ರಿ. ಶ. ೧೯೯೮ ರಲ್ಲಿ ಪ್ರಕಟಿಸಿದೆ. ಇತ್ತೀಚೆಗಂತೂ ವೇಮನ ವಿದ್ಯಾವರ್ಧಕ ಸಂಘ, ಹುಬ್ಬಳ್ಳಿ ಇವರು ಮಹಾಯೋಗಿ ವೇಮನ'

ಎಂಬ ಚಲನಚಿತ್ರದ ವ್ಹಿಡಿಯೋ ಕ್ಯಾಸೆಟ್ಟುಗಳನ್ನು ಹೊರತಂದಿದ್ದು ವೇಮನರ ಜೀವನ ಸಾಧನೆಯನ್ನು ಜನ ಮನದಲ್ಲಿ ಬಿಂಬಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬೇರೆ ಸಂಸ್ಥೆಯವರು ಮಹಾಯೋಗಿ ವೇಮನರ ಛಾಯಾ ಚಿತ್ರಗಳನ್ನು ಪ್ರಕಟಿಸಿ, ಮನೆ ಮನೆಗಳಲ್ಲಿ ರಾರಾಜಿಸುವಂತೆ ಮಾಡಿದ್ದಾರೆ. ಮೇಲಾಗಿ, ಜನಪ್ರಿಯ ಕಲಾವಿದರಿಂದ 'ವೇಮನ ಮತ್ತು ಮುತ್ತಿನಹಾರ' ಪುಸ್ತಿಕೆಯಿಂದ ಆಯ್ದ ಪದ್ಯಗಳ ಧ್ವನಿಮುದ್ರಿತ ಕ್ಯಾಸೆಟ್ಟುಗಳನ್ನು ಸಿದ್ಧಪಡಿಸಿ ಹಂಚಿದ್ದಾರೆ.

ಹೀಗೆ, ಹಲವಾರು ಪ್ರಚಾರ ಮಾಧ್ಯಮಗಳಿಂದ ವೇಮನ ಸಾಹಿತ್ಯ ಕುರಿತು ಆಸಕ್ತಿ, ಆದರಾಭಿಮಾನಗಳು ಕನ್ನಡ ನಾಡಿನ ಜನಮನದಲ್ಲಿ ಚಿಗುರೊಡೆಯುತ್ತಿವೆ. ಬೆಂಗಳೂರಿನ ಕರ್ನಾಟಕ ರೆಡ್ಡಿ ಜನ ಸಂಘದವರು ನಮ್ಮ ಸೇವಾ ಕಾರ್ಯದಲ್ಲಿ ಸಕ್ರಿಯ ಸಹಕಾರ ನೀಡುತ್ತಿದ್ದಾರೆ. ಜನರ ಬೇಡಿಕೆಯನ್ನು ಗಮನಿಸಿ ನಾವು ವೇಮನರ ಜೀವನ ಚರಿತ್ರೆಯನ್ನು ಮತ್ತು ಅವರ ಆಯ್ದ ಪದ್ಯಾಗಳನ್ನು 'ವೇಮನ ಮತ್ತು ಮುತ್ತಿನ ಹಾರ' ವೆಂಬ ಶೀರ್ಷಿಕೆಯಡಿ ಪ್ರಕಟಿಸುತ್ತಿದ್ದೇವೆ. ಇದರಲ್ಲಿಯ ಬಹಳಷ್ಟು ಪದ್ಯಗಳು ಧ್ವನಿ ಮುದ್ರಿತ ಕ್ಯಾಸೆಟ್ಟುಗಳಲ್ಲಿ ಹೊರಬಂದಿದ್ದು, ಜನರ ನಾಲಗೆಯ ಮೇಲೆ ಮೊಳಗುತ್ತಿವೆ. ಓದುಗರೆಲ್ಲ ಈ ಪುಸ್ತಿಕೆಯನ್ನು ತಮ್ಮಲ್ಲಿ ಇರಿಸಿಕೊಳ್ಳುವರೆಂದು ಆಶಿಸುತ್ತೇವೆ.

ಹುಲಕೋಟಿ　　　　　　　　　　ಎಸ್. ಆರ್. ಸಾವಕಾರ
೧೫-೧೦-೨೦೦೦　　　　　　　　　ಪ್ರಕಾಶಕರು



# ಮುನ್ನುಡಿ

ಮಹಾಯೋಗಿ ವೇಮನರು ಶಿವಕವಿಗಳು. ಶಿವ ಎಂದರೆ, ಮಂಗಳ, ಕಲ್ಯಾಣ, ಸತ್ಯ, ಸುಂದರ. ಅವರು ಆನಂದಲೋಲರಾಗಿ ಉಲಿದ ನುಡಿಮುತ್ತುಗಳ ಮಾಲೆಯೇ ಈ 'ವೇಮನ ಮತ್ತು ಮುತ್ತಿನಹಾರ'. ತಮ್ಮನ್ನು ಸರ್ವದಲ್ಲಿ, ಸರ್ವವನ್ನು ತಮ್ಮಲ್ಲಿ, ದರ್ಶಿಸಿದ ಸರ್ವಭೂತಾಂತರಾತ್ಮರವರು. ಅದರಿಂದ, ವಿಶ್ವದಾಭಿರಾಮ ಕೇಳು ವೇಮ ಎಂದು ತಮ್ಮನ್ನೇ ಉದ್ದೇಶಿಸಿ ಹಾಡಿದ್ದಾರೆ. ರಾಜಯೋಗದ ಅಸಂಪ್ರಜ್ಞಾತ ಸಮಾಧಿ ಸ್ಥಿತಿಯನ್ನು ತ್ವರಿತಗತಿಯಲ್ಲಿ ತಲುಪಿದ ವೇಮನರು, ವಿರಳ ಯೋಗಿಗಳು. ನಿದ್ರೆಯಲ್ಲಿಯ ನಿದ್ರೆಯ ಅವಸ್ಥೆಯಿಂದ ಮೇಲೇರಿ ನಿರ್ಗುಣ ಅರ್ಥಾತ್ ಗುಣಾತೀತ ಅವಸ್ಥೆಯಲ್ಲಿ ನೆಲೆ ನಿಂತವರು. ಪ್ರಜ್ಞಾತೀತ ಅವಸ್ಥೆಯಲ್ಲಿ ತೂರಿ ಬಂದ ಸೂಕ್ತಿ ರತ್ನಗಳನ್ನು ಪದ್ಯ ಗುಚ್ಛಗಳಲ್ಲಿ ವ್ಯಕ್ತಪಡಿಸಿದ್ದಾರೆ. ದಾರ್ಶನಿಕ ಸಾಹಿತ್ಯವನ್ನು ಹೆಚ್ಚಾಗಿ, ಗೀತ, ತೇಟ, ಕಂದ, ಸೀಸ ಛಂದಸ್ಸುಗಳಲ್ಲಿ ಹಾಡಿದ್ದರೆ, ಧರ್ಮಾರ್ಥಕಾಮ ವರ್ಗಗಳಿಗೆ ಸಂಬಂಧಿಸಿದ ಪದ್ಯಗಳು ಹೆಚ್ಚಾಗಿ ಆಟವೆಲದಿ ಛಂದಸ್ಸಿನಲ್ಲಿವೆ.

ವೇಮನರ ಬಾಲ್ಯ, ಯೌವನಗಳು ರಸಮಯವಾಗಿವೆ. ಪ್ರೀತಿ, ಅನುರಾಗಗಳು ಅವರ ಸಹಜ ಸ್ವಭಾವವಾಗಿದ್ದರೂ, ಪ್ರೇಮ, ಭೋಗಲಾಲಸೆಯೂ ಅವರ ಜೀವನಕ್ಕೆ ಅಂಟಿಕೊಂಡಿತ್ತು. ಸಂಗೀತ ನೃತ್ಯ ಕಲಾವಿದರಾದ ವೇಮನರು, ತಮ್ಮ ವೃತ್ತಿಯ ಸೆಳವಿಗೆ ಸಿಲುಕಿ, ಕೆಲವು ವರುಷ ಓರ್ವ ದೇವದಾಸಿಯ ಸಂಗದಲ್ಲಿ ಜೀವನ ವ್ಯಯಿಸಿದರು. ಪೂರ್ವ ಸಂಸ್ಕಾರ ಫಲರೂಪವಾಗಿ ಅಂಟಿಕೊಂಡ ಭೋಗಲಾಲಸೆಯು, ಯೌವನವು ಚಿಗುರೊಡೆಯುವ ಮುನ್ನವೇ ಉಡುಗಿ ಹೋಯಿತು. ಪೂರ್ವ ಜನ್ಮದಲ್ಲಿ ಯೋಗ ಭ್ರಷ್ಟರಾದ ಅವರಿಗೆ ಈ ಮರುಜನ್ಮದಲ್ಲಿ ಸದ್ಗುರು ಸಮಾಗಮವು ಸುಲಭವಾಗಿ ಲಭಿಸಿತು. ಯೋಗ ಸಾಧನೆಯಲ್ಲಿ ನಾಗಾಲೋಟದಿಂದ ಪ್ರಗತಿ ಸಾಧಿಸಿದರು. ಬರುಬರುತ್ತ ಅವರು ಎಂಥ ಉನ್ನತ ಸ್ಥಿತಿ ತಲುಸಿದರೆಂದರೆ, ಅವರು ನುಡಿದುದು ವೇದವಾಗಿತ್ತು. ನಡೆದುದು ಧರ್ಮವಾಯಿತು. ಮುಟ್ಟಿದುದು ಚಿನ್ನವಾಗುತ್ತಿತ್ತು. ಅವರು ಸರ್ವಜ್ಞರಾಗಿದ್ದರು, ಸಿದ್ಧ ಪುರುಷರಾಗಿದ್ದರು.

ಹೃದಯದಲ್ಲಿ ಶಿವನನ್ನು ಕಂಡ ಈ ಶಿವಯೋಗಿಗೆ ಸರ್ವವೂ ಶಿವಮಯವಾಗಿತ್ತು. ಸರ್ವರಿಗೂ ಶಿವಗೋತ್ರವೊಂದೇ ಗೋತ್ರವಾಯಿತು. ಶಿವನು ತಂದೆ, ಪಾರ್ವತಿಯು ತಾಯಿ, ಸಕಲ ಜನರು ಬಂಧುಬಳಗವೆನಿಸಿದರು. ಅವರು ಜಾತಿಯ ಮೇಲು ಕೀಳು ಭಾವನೆಯನ್ನು

ಕೊಚ್ಚಿ ಹಾಕಿದರು. ರಾಜಯೋಗ ಸಾಧನೆಗೆ ಅನುಗುಣವಾದ ಸುಖ ಸಂಸಾರವನ್ನು ಪ್ರೋತ್ಸಾಹಿಸಿದರು. ಜಾತಿ-ಕುಲ ಗುರುಗಳ ಸಂಪ್ರದಾಯವನ್ನು ಬಲವಾಗಿ ಖಂಡಿಸಿ, ಸಾಧನ ಸಿದ್ಧ ಗುರುಗಳ ಶರಣು ಕೋರಲು ಪ್ರೋತ್ಸಾಹಿಸಿದರು.

ಜೀವನದ ಸರ್ವ ಮುಖಗಳನ್ನು ಕಂಡರಿತ ಮಹಾಯೋಗಿ ವೇಮನರ ಉಪದೇಶವು ಜೀವನಕ್ಕೆ ದಾರಿ ದೀಪವಾಗಿದೆ. ಗುರು ಕರುಣೆ ಪಡೆದು, ಸಾಧನ ಸಿದ್ಧಿ ಹೊಂದಲು ಸರ್ವರೂ ಅಧಿಕಾರಿಗಳು ಎಂಬುದಕ್ಕೆ ಜ್ವಲಂತ ನಿದರ್ಶನವಾಗಿದ್ದಾರೆ, ವೇಮನ. ಹೀಗಾಗಿ, ಅವರ ನುಡಿಯು ಮುತ್ತಿನ ಹಾರವಾಗಿದೆ. ಇಂಥ ನುಡಿಮುತ್ತುಗಳನ್ನು ಜನಮನದಲ್ಲಿ ಬಿತ್ತಲು ನಾಡಿನ ಖ್ಯಾತ ಕಲಾವಿದರಿಗೆ ಅನುಕೂಲವಾಗಲೆಂದು 'ವೇಮನ ಮತ್ತು ಮುತ್ತಿನಹಾರ' ಪುಸ್ತಿಕೆಯನ್ನು ಹೊರ ತಂದಿದ್ದೇವೆ. ಈ ಪದ್ಯಗಳೆಲ್ಲ 'ವೇಮನ ವಿಶ್ವ ಗೀತೆ' ಗ್ರಂಥದಿಂದ ಆಯ್ದುವುಗಳೇ ಆಗಿವೆ. ನಮ್ಮೀ ಕೊಡುಗೆಯನ್ನು ಸಹೃದಯೀ ಓದುಗರು ಸಾದರ ಸ್ವೀಕಾರ ಮಾಡುವರೆಂದು ನಂಬಿದ್ದೇವೆ.

ಈ ಗ್ರಂಥವನ್ನು ತ್ವರಿತವಾಗಿ ಮುದ್ರಿಸಿಕೊಟ್ಟ ಮೆ॥ ವೇಮನ ಪ್ರಿಂಟಿಂಗ್ ಪ್ರೆಸ್ ಪ್ರೈ. ಲಿ., ಹುಲಕೋಟಿ ಇವರಿಗೆ ತುಂಬಾ ಕೃತಜ್ಞತೆಗಳು ಗ್ರಂಥ ಮುಖಪುಟದ ವಿನ್ಯಾಸ ನೀಡಿದ ಕಲಾವಿದ ಶ್ರೀ ಇವರಿಗೂ ನಾವು ಉಪಕೃತರಾಗಿದ್ದೇವೆ.

ಹುಲಕೋಟಿ
೧೯-೧೦-೨೦೦೦

ಎಸ್. ಆರ್. ಪಾಟೀಲ
ಗ್ರಂಥಕರ್ತ

# ೧. ಯಾರೀ ವೇಮನ ?

ಕರೆದೊಡೆ ಮಾತನಾಡದೆ. ಮರಳಿ ಕರೆಯೆ ಮೌನವಿರುವಾ,
ಅರಿತೊಡೆ ಯಾರೆ ಆಡಲೇನನು ಅಲ್ಲವೆಂದು ನಗುತಿಪ್ಪನ್.
ಪರತತ್ತ್ವನಾತ್ಮದೊಳು ವಿಚಾರಿಸಿ ನಿತ್ಯವು ತಾನೆ ಇಪ್ಪ ಸದಾ.
ಅರಿತಿಹ ಯೋಗಿ ವೇಮನ ಗತಿಯು, ಶಿವರೂಪನೆ ಸರ್ವ ತಾಣದೋಳ್.

ಇದು ರಾಜಯೋಗಿ ವೇಮನರ ಅಸಂಪ್ರಜ್ಞಾತ ಸಮಾಧಿ ಸ್ಥಿತಿ. ಶಿವರೂಪರೇ ಅದ ವೇಮನರು ಪ್ರಜ್ಞಾತೀತ ಅವಸ್ಥೆಯಲ್ಲಿ ಇರುತ್ತಿದ್ದರು. ಬಾಹ್ಯ ಕ್ರಿಯೆಗಳಿಗೆಲ್ಲ ಪ್ರತಿಕ್ರಿಯಿಸುವ ಪ್ರವೃತ್ತಿಯು ಉಡುಗಿರುತ್ತಿತ್ತು ಯಾರಾದರೂ ಮಾತನಾಡಿಸಲೆಂದು ಕರೆದರೆ ಮಾತನಾಡುತ್ತಿರಲಿಲ್ಲ. ಮತ್ತೆ ಮತ್ತೆ ಕರೆದರೂ ಮೌನವಾಗಿರುತ್ತಿದ್ದರು. ಲೋಕಪ್ರಜ್ಞೆಯ ಜನರು ಏನನ್ನೇ ಆಡಿದರೂ, ಅದೆಲ್ಲ ಸರಿಯಲ್ಲವೆಂದು ನಗುತ್ತಿದ್ದರಷ್ಟೇ. ನಿತ್ಯವೂ ಪರತತ್ತ್ವದಲ್ಲಿಯೇ ವಿಚಾರಿಸುತ್ತ ಸದಾ ತಮ್ಮಲ್ಲಿ ತಾವೇ ಇರುತ್ತಿದ್ದರು. ಇದುವೇ ಸರ್ವ ತಾಣಗಳಲ್ಲಿ ಶಿವರೂಪಿಗಳಾದ ಅರಿತಿಹ ವೇಮನರ ಗತಿಯಾಗಿತ್ತು.

ಧ್ಯಾನಿಯಂತೆ ಉಂಟು, ಮೌನಿಯಂತೆ ಉಂಟು,
ಭೋಗಿಯಂತೆ ಉಂಟು, ರೋಗಿಯಂತೆ;
ಸಕಲವ ತಿಳಿದಿಪ್ಪ ಸರ್ವಜ್ಞನಾಗಿಯಂಟು.
ಪರಮ ಯೋಗಿಯಂತೆ ಪೊಳೆಯೊ ವೇಮ.

ಜೀವನ್ಮುಕ್ತಿ ಹೊಂದಿದ ಯೋಗಿ ವೇಮನರು ಧ್ಯಾನಮಗ್ನರಾಗಿ ಬಹುಕಾಲ ಇರುತ್ತಿದ್ದರು. ಬಾಹ್ಯಕ್ರಿಯೆಗಳಿಗೆ ಪ್ರತಿಕ್ರಿಯಿಸದೆ ಮೌನಿಯಾಗಿ ಜೀವಿಸುತ್ತಿದ್ದರು. ಒಮ್ಮೊಮ್ಮೆ ಊಟೋಪಚಾರಗಳಲ್ಲಿ, ಭೋಗಿಯಂತೆ ಕಾಣಿಸಿ, ಪೂರ್ವ ಸಂಸ್ಕಾರಾನುಸಾರ, ರೋಗಿಯಂತೆ ಸಹ ಬಾಳುತ್ತಿದ್ದರು. ಆದರೆ ಯಾವ ಸ್ಥಿತಿಯಲ್ಲಿದ್ದರೂ, ಅವರು ತ್ರಿಕಾಲ ಜ್ಞಾನಿಗಳಾಗಿರುತ್ತಿದ್ದರು. ಸಕಲವನ್ನೂ ತಿಳಿದ ಸರ್ವಜ್ಞರಾಗಿರುತ್ತಿದ್ದರು.

ದಾಟಿ ಬಂದು ನದಿಯ, ದಡ ತಲುಪಿದ ಪುರುಷ
ನಾವೆಯನಿಚ್ಛಿಸದೆ ನಡೆಯುವಂತೆ,
ಯೋಗಿ ಪುರುಷಗೇಕೆ ಒಡಲು ಚಿಂತೆಯೆಲ್ಲ ?
ವಿಶ್ವದಾಭಿರಾಮ ಕೇಳು ವೇಮ

ಭವವು ಭವಿಗೆ ಅಡ್ಡವಾದ ನದಿಯಂತೆ. ಅದನ್ನು ದಾಟಲು ಭವಿಯು ಹೊಟ್ಟೆ-ಬಟ್ಟೆಯ ಚಿಂತೆ ಮಾಡಬೇಕು. ದೇಹದ ಪರಿವೆ ಹೊಂದಬೇಕು. ಇವ್ರುಗಳೇ, ಭವದಲ್ಲಿ ತೇಲುವ ಅವನಿಗೆ ನಾವೆಯಂತೆ. ಆದರೆ ತನ್ನ ಜೀವಾತ್ಮನನ್ನು ಪರಮಾತ್ಮನಲ್ಲಿ ಒಂದಾಗಿಸಿದ ಯೋಗಿ ಪುರುಷನಿಗೆ ಡಲು ಚಿಂತೆ ಬೇಡ. ಎಲ್ಲವೂ ಪರಮಾತ್ಮನ ಕೃಪೆಯಿಂದ ಒದಗಿ ಬರುತ್ತದೆ. ಅವನು ಭವದ ನದಿ ದಾಟಿದ ಪುರುಷನು; ದಂಡೆಗೆ ಸೇರಿದವನು, ಅವನಿಗೇಕೆ ನಾವೆಯ ಗೊಡವೆ?

ಪರಮ ನಿರ್ಗುಣ ವಿದ್ಯೆಯಲಿ ಭಾವದುಂಬಿ,
ಮಾನಸ ಜ್ಞಾನ ಪರಿಪೂರ್ಣ ಮನನದಲ್ಲಿ,
ಏಕ ರೂಪವ ಮನದೆಣಿಸಿ ನಿತ್ಯಕಾಣು.
ಶಾಶ್ವತಾನಂದ ಸಿದ್ಧಿ ಜರುಗು ವೇಮ.

ಸಂಪ್ರಜ್ಞಾತ ಸಮಾಧಿ ಸ್ಥಿತಿಯಿಂದ ಅಸಂಪ್ರಜ್ಞಾತ ಸಮಾಧಿಗೇರುವ ಪ್ರಕ್ರಿಯೆ ಇದು. 'ಸಾ ವಿದ್ಯಾ ಯಾ ವಿಮುಕ್ತಯೇ'. ಯಾವುದು ಮುಕ್ತಗೊಳಿಸುವುದೋ ಅದುವೇ ವಿದ್ಯೆ. ಗುಣಾತೀತವಾದುದು ನಿರ್ಗುಣ. ಪರಮ ನಿರ್ಗುಣ ವಿದ್ಯೆಯಲ್ಲಿ, ಭಾವ ತುಂಬಿ, ಜ್ಞಾನ ಪರಿಪೂರ್ಣವಾದ ಮನನದಲ್ಲಿ ಸರ್ವವೂ ಒಂದೇ ಎಂದು ಮನದಲ್ಲಿ ಎಣಿಸಬೇಕು. ಆಗ ಶಾಶ್ವತ ಆನಂದವು ಸಿದ್ಧಿಸುವುದನ್ನು ನಿತ್ಯ ಕಾಣಬಹುದು.

ಉತ್ತಮ ಶಿವಯೋಗಿ ಊಹಿಸಿ ಮನದಾಟಿ
ಸತ್ವದಲ್ಲಿ ಹೋರಿ, ಸರಿದುಕೊಳದೆ,
ಹೊಂದಿ ಮರೆತು ಇಹನು ಪೂರ್ಣ ಭಾವದಲ್ಲಿ.
ವಿಶ್ವದಾಭಿರಾಮ ಕೇಳು ವೇಮ.

ಉತ್ತಮ ಶಿವಯೋಗಿಯಾದವನು ತನ್ನ ತಮೋಗುಣವನ್ನೂ ಮತ್ತು ರಜೋಗುಣವನ್ನೂ ಮೊದಲೇ ದಾಟಿರುತ್ತಾನೆ. ಕೊನೆಗೆ ಜ್ಞಾನಸಂಗ ಮತ್ತು ಸುಖಸಂಗಗಳ ಸತ್ವಗುಣವನ್ನೂ ದಾಟಲು ಹೋರಾಡಿ, ಮನವನ್ನು ದಾಟುತ್ತಾನೆ. ಆಗ ಬ್ರಹ್ಮವನ್ನು ಊಹಿಸಿ ಹೊಂದಿಕೊಂಡು ಪೂರ್ಣ ಭಾವದಲ್ಲಿ ತನ್ನ ದೇಹಭಾವನ್ನು ಮರೆತು ಇರುತ್ತಾನೆ.

ಆದರೆ, ಲೌಕಿಕ ಜನರಿಗೆ ಪ್ರಜ್ಞೆಯಾಚೆಗಿನ ಸಮಾಧಿ ಸ್ಥಿತಿಯ ತಿಳಿವಳಿಕೆ ಇರದು. ಇಂಥ ಮಹಾಮಹಿಮರನ್ನು ಅವರು ಕಂಡಿರುವುದೇ ವಿರಳ. ಹೀಗಾಗಿ ಅವರ ಪ್ರತಿಕ್ರಿಯೆ ವಿಚಿತ್ರವಾಗಿರುವುದು ಸಹಜ.

ಕಂಡು ಜ್ಞಾನವಂತನ ಕರ್ಮ ಸಂಬದ್ಧರು,
ಹುಚ್ಚನೆನ್ನುತಿಹರು ಪ್ರಕೃತಿ ಬಡದೆ,
ಹುಚ್ಚಿರದೆ ಪ್ರಕೃತಿ ಹುಡುಕಲು ಸಿಗುವುದೇ ?
ವಿಶ್ವದಾಭಿರಾಮ ಕೇಳು ವೇಮ

ಕರ್ಮ ಜಾಲದಲ್ಲಿ ಸಿಲುಕಿದ ಬದ್ಧ ಜನರು ಕಡು ಜ್ಞಾನವಂತನನ್ನು, ಸರ್ವಜ್ಞನನ್ನು ನೋಡಿ, ತಮ್ಮ ರೀತಿ ನೀತಿಗಳಿಂದ ಬೇರಾದ, ಅವರನ್ನು ಹುಚ್ಚನೆಂದು ತಿಳಿದು ಬಿಡುತ್ತಾರೆ. ಆದರೆ ಪ್ರಕೃತಿಯ ಬಂಧನದಿಂದ ಹೊರಬಂದು ಜ್ಞಾನಿಗಳನ್ನು ಅರಿಯುವುದಿಲ್ಲ. ಪರಮಾತ್ಮನನ್ನು ಅರಿಯಲು ಒಂದು ಬಗೆಯ 'ದಿವ್ಯ ಹುಚ್ಚು' ಬೇಕೇ ಬೇಕು. ಪರಮಾತ್ಮನನ್ನು ಕಾಣುವ ಹುಚ್ಚು. ಎಲ್ಲವನ್ನೂ ಮರೆಸಬೇಕು. ಇಂಥ ದಿವ್ಯ ಹುಚ್ಚು ಇಲ್ಲದೆ, ಪರಮಾತ್ಮನು ಪ್ರಕೃತಿಯಲ್ಲಿ ಹುಡುಕಿದರೆ ಸಿಗುವನೇನು ?

ಇತ್ತೀಚಿನ ಉದಾಹರಣೆಗಳನ್ನು ನೋಡಿದರೂ, ಕಲಕತ್ತೆಯ ರಾಮಕೃಷ್ಣ ಪರಮಹಂಸರಿಗೆ ಇಂಥ ದಿವ್ಯ ಹುಚ್ಚು ಆವರಿಸಿತ್ತು. ಸಮಾಧಿ ಸ್ಥಿತಿಯಲ್ಲಿರುವ ತಿರುವಣ್ಣ





ಮಲೆಯ ರಮಣ ಮಹರ್ಷಿಗಳಿಗೆ ಕಿಡಿಗೇಡಿ ಹುಡುಗರು ಕಲ್ಲು ಒಗೆಯುತ್ತಿದ್ದರು. ಸಮಾಧಿಯಲ್ಲಿರುವಾಗ, ಹುಬ್ಬಳ್ಳಿ ಸಿದ್ಧಾರೂಢರಿಗೆ ಹೊಡೆದು ಬಡಿದು, ತಲೆಯ ಮೇಲೆ ನಿಗಿ ನಿಗಿ ಕೆಂಡವಿಟ್ಟು ಪೀಡಿಸಿದರು. ಕೋಡಿಕೊಪ್ಪದ ಈರಪ್ಪಜ್ಜನಿಗೆ ಹುಚ್ಚೀರಪ್ಪ ಎಂದೇ ಮೂದಲಿಸಿದರು. ಚೇಳುಗುರ್ಕಿಯ ತಾತನಿಗೆ ವೆರ್ರಿ (ಹುಚ್ಚ) ತಾತನೆಂದೇ ಕರೆದರು. ಇಂಥ ಉನ್ಮನೀ ಅವಸ್ಥೆಯ ಸಾಧಕ ಸಿದ್ಧರು ಉನ್ಮತ್ತವತ್, ಪಿಶಾಚವತ್ ಮತ್ತು ಬಾಲವತ್ ಕ್ರೀಡೆಗಳಲ್ಲಿ ತೊಡಗುವುದನ್ನು ಜನರು ಕಂಡರಿಯುತ್ತ ಬಂದಿದ್ದಾರೆ.

ಬಯ್ದು ಹೊಡೆದರೆಂದು ಬಳಿಕ ಮಾತು ತೊರೆದು,
ಬಾಯಿ ಮುಚ್ಚಿ ಇರಲು ಭೂಮಿ ಮೇಲೆ.,
ಪರಮಾತ್ಮನಾಗುವ ಬಣ್ಣಿಸಲು ಶಕ್ಯವೆ?
ವಿಶ್ವದಾಭಿರಾಮ ಕೇಳು ವೇಮ

ಘನ ಜ್ಞಾನವಂತನ ಇರವನ್ನು ಗುರುತಿಸಲಾರದೆ ಲೌಕಿಕಮತಿಗಳು ಅವರನ್ನು ಕೆಲವೊಮ್ಮೆ ಬಯ್ಯುತ್ತಾರೆ, ಕೆಲವೊಮ್ಮೆ ಹೊಡೆಯುತ್ತಾರೆ ಕೂಡ. ಇದರಿಂದ ಈ ಮಹಾತ್ಮನಿಗೇನೂ ಕೋಪವಿಲ್ಲ. ಅವನು ಅಜ್ಞ ಜನರ ಗೊಡವೆ ಏಕೆಂದು ಯಾರೊಂದಿಗೂ ಮಾತನಾಡದೆ ಮೌನಿಯಾಗಿ, ಭೂಮಿಯ ಮೇಲೆ ಬಾಯಿ ಮುಚ್ಚಿಕೊಂಡು ಇರುತ್ತಾನೆ. ಮುಂದೊಂದು ದಿನ ಅವನು ಪರಮಾತ್ಮನೇ ಎಂದು ಜನರು ಗುರುತಿಸುತ್ತಾರೆ. ಇಂಥ ಮಹಿಮಾತ್ಮನನ್ನು ಮಾತುಗಳಿಂದ ಬಣ್ಣಿಸಲು ಶಕ್ಯವೇ ?

ಜನರು ಅರಿಯಲಿ, ಅರಿಯದಿರಲಿ, ಜ್ಞಾನಿಗಳು ತಮ್ಮ ಉಪದೇಶ ನೀಡಲು ಕಾಲಕಾಲಕ್ಕೆ ಅವತರಿಸುತ್ತಾರೆ.

ಉಂಟು ಉಂಟು ಜ್ಞಾನಿ, ಯುಗ ಯುಗಾದಿ ಕಳೆಯೆ,
ಪ್ರಾಣ ಹಾನಿಯಿಲ್ಲ, ಪ್ರಳಯವಿರಲು,
ಪ್ರಳಯವಿರಲು ಮತ್ತೆ ಪರಮಾತ್ಮನ ಸೇರ್ವ.
ವಿಶ್ವದಾಭಿರಾಮ ಕೇಳು ವೇಮ

ಯುಗವೆಂದರೆ ಅಧ್ಯಾತ್ಮಿಕ ಪ್ರಗತಿಯ ಹಂತ. ಪ್ರತಿ ಯುಗದಲ್ಲಿಯೂ ಜ್ಞಾನಿಗಳು ಇದ್ದೇ ಇರುತ್ತಾರೆ. ಜನರಿಗೆ ಸೂಕ್ತ ಮಾರ್ಗದರ್ಶನ ಮಾಡುವುದು ಅವರ ಬರುವಿಕೆಯ ಉದ್ದೇಶ. ಸೃಷ್ಟಿ ಕಾಲದಲ್ಲಿ ಸೂಕ್ಷ್ಮ ತರಂಗಗಳು, ಗುಣಗಳ ಪ್ರಭಾವದಿಂದ ಸ್ಥೂಲವಾಗುತ್ತವೆ. ಕೊನೆಗೆ ಪ್ರಳಯ ಕಾಲದಲ್ಲಿ ಸ್ಥೂಲ ತರಂಗಗಳು ಸೂಕ್ಷ್ಮವಾಗುತ್ತ ಸಾಗಿ, ಆಕಾಶ ತತ್ವವಾಗಿ , ಪ್ರಾಣ ತತ್ವವಾಗಿ ಮಾರ್ಪಡುತ್ತವೆ. ಅಂತಿಮ ಪ್ರಳಯದಲ್ಲಿ ಪ್ರಾಣ ತತ್ವದ ತರಂಗಗಳೂ ಪರಮಾತ್ಮನಲ್ಲಿ ನಿಸ್ತರಂಗವಾಗಿ ಲಯಿಸುತ್ತವೆ.

ಹೀಗೆ, ಮಹಾಯೋಗಿ ವೇಮನರಂಥ ದಿವ್ಯ ಜ್ಞಾನಿಗಳು ಲೋಕದಲ್ಲಿ ಬಾಳಿ ಬೆಳಗಿ ಯುಗ ಯುಗಗಳಲ್ಲಿ ಜನರಿಗೆ ದಾರಿದೀಪ ತೋರುತ್ತಾರೆ. ಪ್ರಳಯದಲ್ಲಿ ಸಹ ಅಂಥ ಜ್ಞಾನಿಗಳು ಪ್ರಣಾಶ ಹೊಂದದೆ, ಪರಮಾತ್ಮನಲ್ಲಿ ಐಕ್ಯಗೊಂಡು ಅಮರರಾಗುತ್ತಾರೆ.

-----

# ೨. ಜನನ : ಊರು-ಕೇರಿ

ರಾಜಯೋಗದ ಉತ್ತುಂಗ ಶಿಖರವೇರಿದ, ಜನರಿಗೆ ನೀತಿ ಬೋಧೆಯ ಸುಧೆಯನ್ನು ಉಣಬಡಿಸಿದ, ಆಧ್ಯಾತ್ಮಿಕ ಸಾಧಕರಿಗೆ ದಾರಿ ದೀಪ ಹಿಡಿದ, ಈ ವೇಮನರು ಯಾರು ?

ವೇಮನೆಂಬ ಯೋಗಿ ವಾಸಿಸಿದ ಲೋಕದಿ,
ಪೂಜೆ ಸಲಿಸಿರವಗೆ ಪುಣ್ಯ ಪುರುಷರೆ!
ಸಲಿಸಿದಷ್ಟು ಪೂಜೆ ಸೌಖ್ಯಭಾಗ್ಯ ಲಭ್ಯ
ವಿಶ್ವದಾಭಿರಾಮ ಕೇಳು ವೇಮ.

ವೇಮ + ಅನ್ನ-ವೇಮನ. ಈ ಲೋಕದಲ್ಲಿ ವೇಮನ ಎಂಬ ಯೋಗಿ ವಾಸಿಸಿದ್ದರು ಜನರೇ! ಅವರಿಗೆ ಪೂಜೆ ಸಲ್ಲಿಸಿರಿ. ಅದರಿಂದ ನೀವು ಪುಣ್ಯ ಪುರುಷರಾಗುತ್ತೀರಿ. ಎಷ್ಟು ಪೂಜೆ ಸಲ್ಲಿಸುವಿರೋ, ಅಷ್ಟು ಸುಖ ಸೌಖ್ಯಗಳು ನಿಮಗೆ ಲಭ್ಯ.

ಏನಿದು ವಿಚಿತ್ರ ಸಂದೇಶ! ಗುಡಿಗಳಲ್ಲಿಯ ಮೂರ್ತಿ ಪೂಜೆ, ಅರ್ಚನೆಗಳನ್ನು ಖಡಾ ಖಂಡಿತವಾಗಿ ತಿರಸ್ಕರಿಸುವ ಮನುಷ್ಯನನ್ನು ಪೂಜಿಸುವುದೇ ? ಆಗದಾಗದು. ಎಂದು ವಿಚಾರ ವಿಮರ್ಶಕರು ಇದನ್ನೆಲ್ಲ ಒಪ್ಪದಿರಬಹುದು. ಅದು ಸಹಜ ತಾನೇ? ಆದರೆ ನೆನೆಪಿರಲಿ. ಇಲ್ಲಿ ಪೂಜೆ ಎಂದರೆ ಹೂ, ಪತ್ರಿ, ಫಲಗಳ ಅರ್ಚನೆಯಲ್ಲ. ಪೂಜೆಯ ನಿಜವಾದ ಅರ್ಥವೆಂದರೆ ಸೇವಿಸು, ಗೌರವಿಸು. ನಾವು ನಮಗೆ ಗುರುಗಳಾದವರನ್ನು, ಮಾರ್ಗದರ್ಶಿಕರಾದವರನ್ನು ಮನಸಾ ಗೌರವಿಸಬೇಕು. ಕಾಯಾ ಸೇವಿಸಬೇಕು. ಅವರ ಮಹಿಮೆಯನ್ನು ಅರಿತು ಅವರಿಗೆ ಶರಣಾಗಬೇಕು. ಅವರ ಸಂದೇಶವನ್ನು ಅರಿತು, ಪ್ರಸಾರ ಮಾಡಿ, ಜನಮನವನ್ನು ಬೆಳಗುವ ಸೇವೆ ಮಾಡಬೇಕು. ಇದು ಪುಣ್ಯ ಕಾರ್ಯ. ಪುಣ್ಯ ಕಾರ್ಯಕ್ಕೆ ಸೌಖ್ಯವೇ ಫಲ.

ದೇವ ಪೂಜೆ ಗೆಯ್ಯೆ ದಿವ್ಯ ಭೋಗವುಂಟು
ತತ್ವವರಿಯುವವನು ದೈವ ಸಮನು.
ಏನು ಇರದ ನರಗೆ ಯಾವ ಗತಿಯು ಇಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಮಾನವನ ಮಾನಸಿಕ ಮಟ್ಟವನ್ನು ಪರಿಗಣಿಸಿ, ಪಶು, ವೀರ ಮತ್ತು ದೇವ ಎಂದು ವಿಂಗಡಿಸುತ್ತಾರೆ. ಜಡ ವಸ್ತುಗಳಲ್ಲಿ ಆತ್ಮವನ್ನು ಕಲ್ಪಿಸಿಕೊಳ್ಳುವವರು ಪಶುಗಳಂತೆ. ವಿಭೂತಿ ಪುರುಷರಲ್ಲಿ ಆತ್ಮವಿಕಸನವಾಗಿರುವುದನ್ನು ಗುರುತಿಸುವವರು ವೀರರು. ತಮ್ಮ ಹೃದಯದಲ್ಲಿಯೇ ಪರಮಾತ್ಮನ ಪ್ರಕಾಶವನ್ನು ಕಂಡು ಗೌರವಿಸುವವರು ದೇವತೆಗಳು. ಇಂಥ ದೇವ ಪೂಜೆಯನ್ನು ಮಾಡಿದರೆ, ರಜೋಗುಣವು ಅಳಿದು, ದಿವ್ಯ ಭೋಗ ಪ್ರಾಪ್ತಿಯಾಗುತ್ತದೆ. ಆನಂದ ಸ್ಫುರಿಸುತ್ತದೆ ಆದರೂ ಸೇವಕ ಸೇವ್ಯ ಭಾವವಿನ್ನೂ ಉಳಿದಿರುತ್ತದೆ. ಇನ್ನೊಂದು ಹೆಜ್ಜೆ ಮುಂದಿರಿಸಿ, ಯೋಗಿಯಂತೆ ಆತ್ಮ ಅನಾತ್ಮ ತತ್ವಗಳನ್ನು ಅರಿತು ಅನುಭವಿಸಿದರೆ ಅವನು 'ಯದ್ಭಾವಂ ತದ್ಭವತಿ' ಎಂಬಂತೆ, ಭಾವವು ಹೇಗೋ ಹಾಗೆಯೇ ಆಗುತ್ತಾನೆ. ದೈವ ಸಮನಾಗುತ್ತಾನೆ. ದೇವ ಪೂಜೆಯನ್ನು ಮಾಡುವ ಭಕ್ತಿಯು ಸ್ಫುರಿಸದ, ತತ್ವವರಿಯುವ ಯೋಗಿ ದೃಷ್ಟಿಯೂ ಮೊಳೆಯದ,





ನರನಿಗೆ ಯಾವ ಗತಿಯೂ ಇರದು.

ಈ ಮಹಾಪುರುಷರ ಊರು ಕೇರಿ ಯಾವುದು? ವಾಸಭೂಮಿ ಯಾವುದು? ಅವರು ಜನಿಸಿದ ಪರಿಸರವಾವುದು? ಈ ಕುರಿತು ಅಲ್ಪ ಸ್ವಲ್ಪ ತಿಳಿದವರು ಏನನ್ನೇ ಹೇಳಿರಲಿ, ಬರೆದಿರಲಿ, ವೇಮನರೇ ಏನು ಬರೆದಿರುವುದೆಂಬುದನ್ನು ಅರಿಯುವುದು ಲೇಸು. ಅವರೊಂದು ಪದ್ಯದಲ್ಲಿ ಹೀಗೆ ಹೇಳಿದ್ದಾರೆ.

ಊರು ಕೊಂಡವೀಡು, ವಾಸ ಪಶ್ಚಿಮ ವೀಧಿ,
ಮೂಗು ಚಿಂತಪಲ್ಲೆ ಮೊದಲ ಮನೆಯು.
ಎಟ್ಟಿ ರೆಡ್ಡಿ ಕುಲವು, ಏನು ಹೇಳಲದನು ?
ವಿಶ್ವದಾಭಿರಾಮ ಕೇಳು ವೇಮ.

ಇಂದಿನ ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯ ನರಸರಾವು ಪೇಟೆ ತಾಲ್ಲೂಕಿಗೆ ಸೇರಿದ ಕೊಂಡವೀಡು ಪಟ್ಟಣವೇ ಹುಟ್ಟಿದೂರು. ಕುಂಡಿನ ಪುರವೆಂದು ಪುರಾಣ ಇತಿಹಾಸ ಪ್ರಸಿದ್ಧ ಪಟ್ಟಣವದು. ಈ ಪಟ್ಟಣದ ಪಶ್ಚಿಮ ಬೀದಿಯಲ್ಲಿ ಮೂಗಚಿಂತೆಪಲ್ಲಿ ಮೊಹಲ್ಲಿನಲ್ಲಿ ಮೊದಲ ಮನೆಯೇ ವಾಸಸ್ಥಾನ. ಜನಿಸಿದ್ದು ಎಟ್ಟಿ ರೆಡ್ಡಿ ಕುಲದಲ್ಲಿ. ಅದನ್ನೇನು ಹೇಳುವುದು?

ಅವರು ಹುಟ್ಟಿದ ಕಾಲವನ್ನು ಕುರಿತು ಸಹ ಅವರದೊಂದು ಪದ್ಯವಿದೆ.

ನಂದನ ಸಂವತ್ಸರದಲಿ
ಹೊಂದುವ ಕಾರ್ತಿಕ ಶುದ್ಧ ಪೂರ್ಣಿಮೆ ದಿನದೋಳ್
ವಿಂಧ್ಯಾದ್ರಿ ಸೇತು ಬಂಧನ
ಸಂದಿಯನೋರ್ವ ವೀರನಾಳ್ಕ, ಸಾರೆಲೊ, ವೇಮಾ

ಕಾಲಗಣನೆಯಲ್ಲಿ ಸಂವತ್ಸರಗಳು ಅರವತ್ತು ವರ್ಷಕ್ಕೊಮ್ಮೆ ಆವರ್ತಿಸುತ್ತವೆ. ಇಂಥ ಸಂವತ್ಸರಗಳಲ್ಲಿ ನಂದನ ಸಂವತ್ಸರವೂ ಒಂದು. ಕ್ರಿ. ಶ. ೧೪೧೨ ರಲ್ಲಿ ನಂದನ ಸಂವತ್ಸರವಿತ್ತು. ಆ ಕಾಲದ ಇನ್ನಿತರ ಘಟನಾವಳಿಗಳೂ, ವೇಮನರ ಜನನವು ಇದೇ ವರುಷ ಘಟಿಸಿತೆಂದು ಸಾಕ್ಷಿ. ಕ್ಯಾಲೆಂಡರು ಪ್ರಕಾರ ಜನೆವರಿ ಹತ್ತೊಂಬತ್ತನೆಯ ತೇದಿ. ಹೀಗಾಗಿ ಜನರ ಅನುಕೂಲಕ್ಕಾಗಿ ಪ್ರತಿ ವರ್ಷ ಜನೆವರಿ ಹತ್ತೊಂಬತ್ತರಂದು ಮಹಾಯೋಗಿ ವೇಮನರ ಜಯಂತಿಯನ್ನು ಆಚರಿಸುತ್ತಾರೆ. ಏಕೆಂದರೆ ಪದ್ಯದಲ್ಲಿ ಹೇಳಿದ ಮೇರೆಗೆ ಆ ದಿನದಂದು ವಿಂಧ್ಯಾ ಪರ್ವತದಿಂದ ಸೇತು ಬಂಧನ (ರಾಮೇಶ್ವರ) ದ ವರೆಗೆ ಹಬ್ಬಿದ ನಾಡಿನಲ್ಲಿ ಆತ್ಮಿಕ ಪ್ರಭಾವ ಬೀರುವ ವೀರನೋರ್ವನು ಜನಮನವನ್ನು ಆಳಿದನು.

ಈ ಕಾಲದ ಸಮರ್ಥನೆಗೆ ಇನ್ನೂ ಒಂದೆರಡು ಪದ್ಯಗಳನ್ನು ಅವಲೋಕಿಸಬಹುದು.

ಸತ್ತು ಬಿದ್ದ ಪಶುವ ಕತ್ತು ಚರ್ಮ ಹಿಡಿದು,
ಮತ್ತೆ ಹರಿದು ತಿನ್ನುವುದು ರಣಹದ್ದು.
ಗೃಧ್ರನಂಥವ ತಾ ಗಜಪತಿಯು ಅಲ್ಲವೆ?
ವಿಶ್ವದಾಭಿರಾಮ ಕೇಳು ವೇಮ

ವೇಮನರ ಜೀವಿತ ಕಾಲದಲ್ಲಿ (ಕ್ರಿ. ಶ. ೧೪೧೨-ಕ್ರಿ.ಶ ೧೪೮೦) ವೇಮನರು ತಮ್ಮ ಕಿಶೋರಾವಸ್ಥೆಯನ್ನು ಕಳೆದ ರಾಜಮಹೇಂದ್ರವರಂನ್ನು ನೆರೆಯ ಕಳಿಂಗ ದೊರೆಗಳಾದ ಗಜಪತಿ. ರಾಜರು ಗೆದ್ದುಕೊಂಡರು. ಸೋತ ಪ್ರಜೆಗಳನ್ನು ಗಜಪತಿಯ ಸೈನಿಕರು ಕೋಲೆ ಸುಲಿಗೆ ಮಾಡಿದರು. ಕೈಗೆ ಸಿಕ್ಕವರನ್ನು ಕತ್ತು ಹಿಸುಕಿ ಕೊಂದೇ ಬಿಟ್ಟರು. ರಣ ಹದ್ದುಗಳು ಸತ್ತುಬಿದ್ದ ಪಶುವಿನ ಕತ್ತು ಚರ್ಮ ಸುಲಿದು ತಿನ್ನುವಂತೆ ನಿರ್ದಯವಾಗಿ ವರ್ತಿಸಿದರು.

ಅಧಿಕ ರಾಜನೊಬ್ಬ ಅಲ್ಪನ ಕೈ ಹಿಡಿಯೆ,
ಅವನಿ ಸೈಗುಡುವುದು ಅವನ ನುಡಿಗೆ.
ಗಜಪತಿ ಸೈ ಎನಲು. ಕವಡಿ ನಾಣ್ಯವಹುದು.
ವಿಶ್ವದಾಭಿರಾಮ ಕೇಳು ವೇಮ

ಗಜಪತಿಯ ಆಳ್ವಿಕೆಯಲ್ಲಿ ಕಳಿಂಗ ರಾಜ್ಯದಲ್ಲಿ ಮತ್ತು ಅವರು ಗೆದ್ದುಕೊಂಡ ಇತರ ಪ್ರದೇಶಗಳಲ್ಲಿ ಕವಡಿಗಳನ್ನೇ ನಾಣ್ಯವಾಗಿ ಬಳಸುತ್ತಿದ್ದರು. ವ್ಯಾಪಾರಿಗಳ ಕೊಡ ಕೊಳ್ಳುವ ವ್ಯವಹಾರವೆಲ್ಲ ಕವಡಿಗಳ ಮೂಲಕವೇ ನಡೆಯುತ್ತಿತ್ತು. ಅಂದರೆ ಅಧಿಕ ರಾಜನೊಬ್ಬ ಅಲ್ಪ ವ್ಯಾಪಾರಿಯ ಕೈಹಿಡಿದರೆ ತೀರಿತು; ಅವನು ಹೇಳಿದುದೇ ವಿನಿಮಯ ನಾಣ್ಯವೆನಿಸುತ್ತಿತ್ತು. ಗಜಪತಿ ದೊರೆಯು ಸೈ ಎಂದರೆ ತೀರಿತು ಕವಡಿಯೇ ನಾಣ್ಯವೆನಿಸುತ್ತದೆ.

ವೇಮನರ ಕುಲಕ್ಕೆ ಸಂಬಂಧಿಸಿದಂತೆ ಒಂದು ಮಾತು ಹೇಳಬೇಕು. ತಮ್ಮ ನಿರ್ಣಯಕ್ಕೆ ಆಧಾರವಾಗಿ ಪದ್ಯಗಳು ಲಭ್ಯವಿರದ ಕಾಲದಲ್ಲಿ, ವೇಮನ ಸಾಹಿತ್ಯವನ್ನು ಜಗತ್ತಿಗೆ ಪರಿಚಯಿಸಿದ ಆಂಗ್ಲ ಅಧಿಕಾರಿ ಚಾರ್ಲಸ ಫಿಲಿಪ ಬ್ರೌನರು, ಒಂದೆಡೆ ವೇಮನರನ್ನು ಜಂಗಮ ಜಾತಿಯವನೆಂದು ತರ್ಕಿಸಿದರು. ವೇಮನರ ಪದ್ಯಗಳಲ್ಲಿ ಶಿವ, ಶಿವಯೋಗಿ ಎಂಬಿತ್ಯಾದಿ ಪದಗಳ ಬಳಕೆಯೇ ಇವರಿಗೆ ಆಧಾರವಾಗಿ ಕಂಡು ಬಂದು ಅವರನ್ನು ಜಂಗಮನೆಂದು ಕರೆದರು. ಇದನ್ನೇ ಕನ್ನಡದ ವೀರಶೈವರು ಗ್ರಹಿಸಿ, ವೇಮನರನ್ನು ವೀರಶೈವನೆಂದೂ ಪ್ರತಿಪಾದಿಸಿ, ಅದನ್ನು ಪುಷ್ಟೀಕರಿಸುವಂತೆ ಲೇಖನ ಬರೆದುರು. ಚರಿತ್ರೆ ಬರೆದರು. ನಾಟಕಗಳಲ್ಲಿ ಹುಚ್ಚಪ್ಪ ವೇಮನ ಎಂದೂ ಚಿತ್ರಿಸಿದರು. ಆದರೆ ಮಿ. ಬ್ರೌನರು ಆ ಮುಂದೆ ತಮ್ಮ ನಿಲುವು ಬದಲಿಸಿದರು. ಇನ್ನೊಂದು ವಿಪ್ರ ಪಂಡಿತ ವರ್ಗವು ವೇಮನ ತಮ್ಮ ಕುಲಕ್ಕೆ ವಿರೋಧಿಯೆಂದು ಬಗೆದು, ತಾವು ಜನರ ಶೋಷಣೆಗಾಗಿ ಬಳಸುತ್ತಿದ್ದ ಕರ್ಮ ವಿಧಿಗಳನ್ನು ಖಂಡಿಸಿ, ತಮ್ಮ ಶೋಷಕ ತಂತ್ರದ ಗುಟ್ಟು ರಟ್ಟು ಮಾಡಿದನೆಂದು ಕೆಂಡ ಕಾರಿ, ವೇಮನರು ರೆಡ್ಡಿಯೇ ಅಲ್ಲ. ಕೊಂಡವೀಡು ರಾಜವಂಶಕ್ಕೆ ಅವನ ಸಂಬಂಧವಿಲ್ಲ. ಅಭಿರಾಮಯ್ಯನ ಸಂಬಂಧವೆಲ್ಲ ಕಟ್ಟು ಕತೆ. ಅವರು ಕಾಪು ಕುಲವನ್ನಷ್ಟೇ ಟೀಕಿಸಿಲ್ಲ. ಅಂದ ಮೇಲೆ ಅವರು ಕಾಪು ಜಾತಿಯವರು, ಎಂದು ಮುಂತಾಗಿ ಏನೇನೋ ಪ್ರಲಾಪಿಸಿದ್ದಾರೆ. ಸಾಲದೆ ವೇಮನ ಪದ್ಯಗಳಲ್ಲಿ ಬಹಳಷ್ಟು ಪದ್ಯಗಳು ಪ್ರಕ್ಷಿಪ್ತ ಪದ್ಯಗಳು. ವೇಮನರಿಗೆ ತತ್ತ್ವಜ್ಞಾನದಲ್ಲಿ ನಿಯಮ ಬದ್ಧತೆಯೇ ಇಲ್ಲ; ಬಹಳಷ್ಟು ಕ್ಲಿಷ್ಟ ಪದ್ಯಗಳಿಗೆ ಅರ್ಥವೇ ಇಲ್ಲ. ತಾನೊಬ್ಬ ಪಂಡಿತನೆನ್ನಿಸಿಕೊಳ್ಳಲು ಏನನ್ನೋ ಹಾಡಿದ್ದಾರೆ, ಎಂದು ಸಹ ದಿ. ರಾಳ್ಲಪಲ್ಲಿ ಅನಂತ ಕೃಷ್ಣಶರ್ಮರು ಬರೆದು ಕೈತೊಳೆದಿದ್ದಾರೆ. ವೇಮನರು ಕ್ರಿ.ಶ. ಹದಿನೇಳನೆಯ ಶತಮಾನದವನೆಂದು ಬೇರೆ ವಾದಿಸಿದ್ದಾರೆ. ಸಂಗೀತ ಕಲೆಯ ಘನ ವಿದ್ವಾಂಸರಾದ ಇವರು ಮೈಸೂರು ವಿಶ್ವದ್ಯಾಲಯದಲ್ಲಿ ಡಾ. ಸಿ. ಆರ್. ರೆಡ್ಡಿಯವರ ಪುಣ್ಯ ಪ್ರಭಾವದಿಂದ, ತೆಲುಗು ಪಂಡಿತ





ಹುದ್ದೆಗೆ ನೇಮಕಗೊಂಡು, ಕೊನೆಗೆ ಅವರಿಗೇ ತಿರುಗಿ ಬಿದ್ದ, ಉಂಡ ಮನೆಯ ಗಳ ಎಣಿಸಿದವರು. ಈ ಪಂಡಿತರ ಜಲ್ಪಕ್ಕೆ ಒಂದು ನಿದರ್ಶನವೆಂದರೆ,

ಅವನು ಅವನು ಅಲ್ಲ; ಅವನ ಒಳಗೆ ಉಂಟು.
ಅವನೆ ಅವನು, ಅವನು ಅವನು ಅಲ್ಲ.
ಅವನು ಅವನ ಬೆರೆಯೆ, ಅವನೆ ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ

ಎಂಬ ಮಹಾಯೋಗಿಗಳ "ಪದ್ಯಕ್ಕೆ ಅರ್ಥವೇ ಇಲ್ಲ ತಮ್ಮ ಶುಷ್ಕ ಪಾಂಡಿತ್ಯ ಪ್ರದರ್ಶಿಸಲು ವೇಮನ ಇಂಥ ಪದ್ಯ ರಚನೆಗೆ ಕೈ ಹಾಕಿದ್ದಾನಷ್ಟೆ" ಎಂದು ಮೂದಲಿಸಿದ್ದಾರೆ.

ಈ ಪದ್ಯದ ಅರ್ಥವು ಹೀಗೆ. ಅವನು ಎಂದರೆ ನಿರ್ಗುಣ ಬ್ರಹ್ಮ. ಅವನು ಎಂದರೆ ಸುಗುಣ ಬ್ರಹ್ಮ. 'ಪೂರ್ಣ ಮದಃ, ಪೂರ್ಣಮಿದಂ' ಎನ್ನುವಂತೆ. ಅವನು ಅವನು ಅಲ್ಲ, ಅಂದರೆ ನಿರ್ಗುಣ ಬ್ರಹ್ಮನು ಸುಗುಣ ಬ್ರಹ್ಮನಲ್ಲ. ಅವನ ಒಳಗೆ ಉಂಟು. ಅಂದರೆ ಸಗುಣ ಬ್ರಹ್ಮನು ನಿರ್ಗುಣ ಬ್ರಹ್ಮದ ಒಳಗೆ ಉಂಟು. ಅವನೆ ಅವನು. ಅಂದರೆ ವ್ಯಾಪ್ತಿಯಲ್ಲಿ ಸಗುಣ ಬ್ರಹ್ಮನೇ ನಿರ್ಗುಣ ಬ್ರಹ್ಮನು. ಅವನು ಅವನು ಅಲ್ಲ. ಅಂದರೆ ಗುಣಗಳ ಪ್ರಭಾವದ ಗಣನೆಯಿಂದ ನಿರ್ಗುಣ ಬ್ರಹ್ಮನು ಸಗುಣ ಬ್ರಹ್ಮನಲ್ಲ. ಅವನು ಅವನ ಬೆರೆಯೆ, ಅಂದರೆ, ಸಗುಣ ಬ್ರಹ್ಮನು ನಿರ್ಗುಣ ಬ್ರಹ್ಮದಲ್ಲಿ ಬೆರೆಯಲು, ಅವನೆ ಹೋಗು ಬ್ರಹ್ಮ. ಅಂದರೆ ಆ ಸಂಯೋಗದ ನಿರ್ಗುಣ ಬ್ರಹ್ಮವೇ ಪರಬ್ರಹ್ಮವಾಗಿದೆ.

ಸಗುಣ ಬ್ರಹ್ಮ ಮತ್ತು ನಿರ್ಗುಣ ಬ್ರಹ್ಮರ ಗ್ರಹಿಕೆಯನ್ನು ಜಲಧಿಯ ನೀರು ಮತ್ತು ಅದರಲ್ಲಿ ತೇಲುವ ಹಿಮ ಬಂಡೆಗಳ ರೂಪಕದಿಂದ ವಿಶದಪಡಿಸಬಹುದು.

ಹಿಮಬಂಡೆಯು ಜಲ ರಾಶಿಯಲ್ಲ. ಆದರೂ ಹಿಮಬಂಡೆಯು ಜಲರಾಶಿಯ ಒಳಗೇ ಇದೆ. ಜಲರಾಶಿಯೂ ಜಲವೇ, ಹಿಮ ಬಂಡೆಯೂ ಜಲವೇ. ಆದರೂ ಶೀತ ಗುಣದಿಂದಾಗಿ ಹಿಮ ಬಂಡೆಯು ಜಲರಾಶಿಯಲ್ಲ. ಶೀತ ಗುಣವು ಹಿಂಗಿ, ಹಿಮಬಂಡೆಯು ಜಲರಾಶಿಯಲ್ಲಿ ಬೆರೆಯಲು ಈ ಜಲರಾಶಿಯೇ ಜಲಧಿ ಎನಿಸುತ್ತದೆ.

ಇದೇ ರೀತಿ, ಸಂಸ್ಕೃತದ ಶಾಂತಿ ಮಂತ್ರವಿದೆ.

ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣಮುದಚ್ಯತೇ
ಪೂರ್ಣಸ್ಯ ಪೂಣಮಾದಾಯ
ಪೂರ್ಣಮೇವಾವಶಿಷ್ಯತೇ
ಓಂ ಶಾಂತಿಃ ಶಾಂತಿಃ ಶಾಂತಿಃ
ಇದರ ಅರ್ಥವೂ ಸರಳವಾಗಿದೆ
ಅದೂ ಪೂರ್ಣವಿದೆ, ಇದೂ ಪೂರ್ಣವಿದೆ.
ಪೂರ್ಣದಿಂದಲೇ ಪೂರ್ಣವು ಹೊರಬಂದಿದೆ.
ಪೂರ್ಣಕ್ಕೆ ಪೂರ್ಣವನ್ನು ಸೇರಿಸಿದರೆ
ಅವಶೇಷವೂ ಪೂರ್ಣವೇ ಇರುತ್ತದೆ.

ಇದನ್ನು ಗಣಿತೀಯ ಸೂತ್ರದಲ್ಲಿ ವಿವರಿಸುವುದಾದರೆ,

$0 = 0$ ಅರ್ಥಾತ್ $\Sigma = \Sigma$

$0 - 0 = 0$ $\Sigma - \Sigma = \Sigma$

$0 + 0 = 0$ $\Sigma + \Sigma = \Sigma$

ಇಂಥ ಅರ್ಥಗರ್ಭಿತ ವೇಮನರ ಪದ್ಯಗಳನ್ನು ಅರ್ಥಶೂನ್ಯವೆರಿದು ಗಳುಪುವ ವಿತಂಡವಾದಿ ವಿಪ್ರನೋರ್ವನು ವೇಮನ ಸಾಹಿತ್ಯಕುರಿತು ಅಧಿಕಾರ ಸಂಪನ್ನನೆಂದು ಮೆರೆದ ಕಾಲವು ಹಿಂದಾಯಿತು. ವೇಮನರ ಕುಲ ಜಾತಿಗಳನ್ನು ಬಾಯಿಗೆ ಬಂದಂತೆ ಗಳುಪುವ ವಿತಂಡವಾದಿಗಳ ಕಾಲ ಇನ್ನು ಮುಗಿಯಿತು.

ಕಲಿಯುಗದಲ್ಲಿ ಇಷ್ಟ ಕಾಪು ಕುಲದ ಜನರೆ,
ವೇಮನ ತನ ಕೀರ್ತಿ ವಿಕ್ರಯಿಸಿದ.
ಉಳ್ಳ ಧರ್ಮವೆಲ್ಲ ಉರ್ವಿ ಜನರ ಮಧ್ಯೆ
ಹಂಚಿ ಪರವ ಸೇರಿ ಹೋದ ವೇಮ.

ಇದು ಕಲಿಯುಗ. ಪುಣ್ಯದ ಪೂರ್ಣಾಂಶವಿರುವ ಕೃತಯುಗವೂ ಅಲ್ಲ. ಮುಕ್ಕಾಲು ಭಾಗ ಪುಣ್ಯಾಂಶವಿರುವ ತ್ರೇತಾಯುಗವೂ ಅಲ್ಲ, ಅರ್ಧ ಭಾಗ ಪುಣ್ಯಾಂಶ ಉಳಿದಿರುವ ದ್ವಾಪರ ಯುಗವೂ ಅಲ್ಲ. ಆದರೆ ಕೇವಲ ಕಾಲು ಭಾಗ ಪುಣ್ಯಾಂಶದೊಂದಿಗೆ ಮುಕ್ಕಾಲು ಭಾಗ ಪಾಪಾಂಶ ತುಂಬಿದ ಕಲಿಯುಗವಿದು. ಇಂಥ ಶೋಷಕ, ವಂಚಕರ ಮಧ್ಯೆ, ಬಾಳುತ್ತಿರುವ ಕಾಪು ಕುಲದ ಜನರೇ! ಕಿವಿಗೊಟ್ಟು ಕೇಳಿರಿ. ವೇಮನ ಯೋಗಿಯು ತನ್ನ ಆಧ್ಯಾತ್ಮಿಕ ಸಾಧನ ಸಿದ್ಧಿಯ ಕೀರ್ತಿಯನ್ನೆಲ್ಲ ಕಾಪು ಕುಲಜರಿಗಾಗಿ ಅಂದರೆ ರೈತಾಪಿ ಜನರಿಗಾಗಿ ವಿಕ್ರಯ ಮಾಡಿದನು. ಅಂದರೆ ಉರ್ವಿಯ ಜನರ ಮಧ್ಯೆ ಧರ್ಮ ನೀತಿಯನ್ನೂ, ಆಚಾರ ವಿಚಾರಗಳನ್ನೂ ಹಂಚಿ, ಅವರು ಇದು ವರೆಗೆ ವಂಚಿತರಾಗಿದ್ದ ಅಮೂಲ್ಯ ವಸ್ತುವನ್ನು ಅವರಿಗೆ ನೀಡಿ, ಪರವನ್ನು ಸೇರಿ ಹೋದನು.

ಕಾಪು ಕುಲಜರೆಷ್ಟೊ ಕರ್ಮಿಗಳಾಗಿರಲಿ,
ಕೊಂಚ ಪಾಪ ರಾಶಿ ಕಡಿಮೆಯಾಯ್ತು.
ವಿವರವರಿಯದಂಥ ವಿಚಿತ್ರ ಜನರಲ್ತೆ ?
ವಿಶ್ವದಾಭಿರಾಮ ಕೇಳು ವೇಮ

ಕಾಪು ಕುಲಜರು ಅಂದರೆ ರೈತಾಪಿ ಜನರು ತಮ್ಮ ಕೃಷಿ ವ್ಯವಸಾಯದಲ್ಲಿ ಸದಾ ನಿರತರಾದ ಕರ್ಮಿಗಳು. ಶುದ್ಧ ಮನಸ್ಸಿನಿಂದ ತಮ್ಮ ಕರ್ಮದಲ್ಲಿ ತೊಡಗುವ ಅವರು ಪುಣ್ಯಜೀವಿಗಳೇ ಸರಿ. ಜನರಿಗೆ ಅನ್ನ ನೀಡುವ ನೇಗಿಲು ಯೋಗಿಗಳವರು. ಅವರು ಪುಣ್ಯಕಾರ್ಯದಲ್ಲಿ ತೊಡಗುವುದರಿಂದ ಜಗತ್ತಿನಲ್ಲಿ ಪಾಪದ ರಾಶಿ ಸ್ವಲ್ಪ ಕಡಿಮೆಯಾಯಿತೆಂದೇ ಹೇಳಬೇಕು. ಇಂಥ ಪಾಪ-ಪುಣ್ಯಗಳ ವಿವರವನ್ನು ತಿಳಿದು ಅಹಮಹಮಿಕೆಯನ್ನು ಬೆಳಸಿಕೊಳ್ಳದ, ವಿಚಿತ್ರ ನಿರಪರಾಧಿ ಜೀವಿಗಳವರು. ಹೀಗೆ, ವೇಮನರು ಡಾಂಭಿಕ ಉಚ್ಚ ವರ್ಣೀಯರ ಶುಷ್ಕ ಆಚಾರಗಳನ್ನು ಖಂಡಿಸಿ, ಅವರ ಶೋಷಣೆಯ ತಂತ್ರಗಳ ರಹಸ್ಯವನ್ನು ಬಿಚ್ಚಿಟ್ಟು ಕ್ರಾಂತಿಯ





ಕಿಡಿ ಹೊತ್ತಿಸಿದ್ದಾರೆ. ಆದರೆ ಕಾಪು ಕುಲಜರ ಬಗೆಗೆ ಒಳ್ಳೆಯ ಮಾತುಗಳನ್ನೇ ಆಡಿದ್ದಾರೆ. ಅಂದ ಮೇಲೆ, ಅವರು" ಕಾಪು" ಕುಲದವರೇ ಇರಬೇಕು. ರೆಡ್ಡಿ ಕುಲದವರಲ್ಲ. ತಮ್ಮ ಕುಲಾಭಿಮಾನದಿಂದ ಪ್ರೇರಿತರಾಗಿ ಆ ಕಾಪು ಕುಲವನ್ನು ಪ್ರಶಂಸಿದ್ದಾರೆ" ಎಂದು ಕೆಲವು ವಿಪ್ರ ಪಂಡಿತರ ಊಹೆ. ಆದರೆ ಇದೆಲ್ಲ ದೂಷಿತ ಭಾವನೆಯ ಫಲವಷ್ಟೇ. ವಾಸ್ತವವೆಂದರೆ, ಇತ್ತೀಚಿನ ವರೆಗೆ 'ಕಾಪು' 'ರೆಡ್ಡಿ' ಪದಗಳು ಕೇವಲ ಪರ್ಯಾಯ ಪದಗಳಾಗಿದ್ದವು. ಎಡ್ಗರ ಥರ್ಸ್ಟನ್ನರ 'Castes and tribes of South India" (ದಕ್ಷಿಣ ಭಾರತದ ಜಾತಿಗಳು ಮತ್ತು ಬುಡಕಟ್ಟುಗಳು) ಎಂಬ ಗ್ರಂಥದಲ್ಲಿ ರೆಡ್ಡಿ ಎಂಬುದನ್ನು ಪ್ರತ್ಯೇಕ ಸತ್ತೆಯಾಗಿ ಪರಿಗಣಿಸದೆ, ಕಾಪು ಶಬ್ದದಡಿಯಲ್ಲಿಯೇ ರೆಡ್ಡಿಗಳ ರೂಢಿ ಸಂಪ್ರದಾಯಗಳನ್ನು ಕುಂತು ಸುದೀರ್ಘ ವಿವರಣೆ ನೀಡಿದ್ದಾರೆ. ಸಿ. ಪಿ. ಬ್ರೌನರ ತೆಲುಗು-ಇಂಗ್ಲೀಷ ಅರ್ಥಕೋಶದಲ್ಲಿ ಕಾಪು ಎಂದರೆ 'ಲಾವಣಿದಾರ, ರೈತ, ಸಾಗುವಳಿದಾರ ಎಂದು ಅರ್ಥವಿದೆ. ಆದ್ದರಿಂದ ವ್ಹಿ. ಆರ್. ನಾರ್ಲಾರು ಬರೆದ 'ವೇಮನ' ಎಂಬ ಇಂಗ್ಲೀಷ ಗ್ರಂಥದಲ್ಲಿ ವೇಮನರನ್ನು ಕಾಪು ರೆಡ್ಡಿ ಎಂದು ಕರೆಯಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಹಾಗೆ ನೋಡಿದರೆ, ಮಹಾಯೋಗಿ ವೇಮನರು ಜಾತಿಮತಗಳ ಬಂಧನವನ್ನು ಹರಿದೊಗೆದ ಮುಕ್ತ ಪುರುಷರು.

ಜಾತಿ ಮತವ ತೊರೆದು ಯೋಗಿಯಾಗೆ ಮೇಲು.
ಜಾತಿ ಮುಳುಗಿ, ನೀತಿ ಹೇಳಲೇನು ?
ಮತವು ತಿಳಿಯೆ ಜಾತಿ ಬಿಡವು ಅಂಜಬೇಡ.
ವಿಶ್ವದಾಭಿರಾಮ ಕೇಳು ವೇಮ.

ಜಾತಿ ಯಾವುದು ? ಮತವು ಯಾವುದು ? ಜನಸಾಮಾನ್ಯರು ಜಾತಿ ಮತ್ತು ಮತ ಶಬ್ದಗಳನ್ನು ಪರ್ಯಾಯ ಪದಗಳಾಗಿ ಬಳಸುತ್ತಾರೆ. ನಿಮ್ಮ ಮತವಾವುದು ? ಎಂದು ಕೇಳುತ್ತಾರೆ. ಅವರಿಗೆ ತಿಳಿಯಬೇಕಾಗಿರುವುದು ಅವರ ಜಾತಿಯಷ್ಟೇ. ಹುಟ್ಟಿನಿಂದ ಅಂಟಿಕೊಂಡ ಕುಲ ಸಂಬಂಧವು ಜಾತಿ ಎನಿಸುತ್ತದೆ. ಅದು ಆಯಾ ಕುಲಜರ ವ್ಯವಸಾಯಕ್ಕೆ ಸಂಬಂಧಿಸಿದ್ದು. ಇನ್ನು ಯಾವೊಂದು ನೀತಿ ಸಂಪ್ರದಾಯ ಒಪ್ಪಿ ನಡೆಯುವುದು ಮತವೆನಿಸುತ್ತಿದೆ. ಭಕ್ತ ಕನಕದಾಸರು ಹುಟ್ಟಿನಿಂದ ಕುರುಬ ಜಾತಿಗೆ ಸೇರಿದವರು. ಅವರು ಒಪ್ಪಿಕೊಂಡ ಮತ-ಸಂಪ್ರದಾಯವು ಭಾಗವತ. ಶಿವಭಕ್ತರನ್ನು ಶರಣ ಎನ್ನುವಂತೆ, ಈ ಭಾಗವತರಿಗೆ ಹರಿದಾಸ ಎಂದೂ ಕರೆಯುತ್ತಾರೆ. ಒಬ್ಬನ ಜಾತಿ ಬ್ರಾಹ್ಮಣನಾಗಿರಬಹುದು. ಆದರೆ ಅವರ ಮತ-ಸಂಪ್ರದಾಯಗಳು ನೂರಾಹದಿನೆಂಟು. ಮಧ್ವಾಚಾರ್ಯರ ಮತದವರು ಮಾಧ್ವರು, ದ್ವೈತಿಗಳು, ವೈಷ್ಣವರು. ರಾಮಾನುಜರ ಮತದವರು ರಾಮನುಜೀಯ, ವಿಶಿಷ್ಟಾದ್ವೈತಿ, ಶ್ರೀ-ವೈಷ್ಣವರು. ಇನ್ನು ಶಂಕರಾಚಾರ್ಯರ ಮತದವರು ಶಾಂಕರ, ಅದ್ವೈತಿ ಇಲ್ಲವೆ ಸ್ಮಾರ್ತರು. ಇದೇ ರೀತಿ ಕಾಣ್ವರೂ, ಸಾರಸ್ವತರೂ, ಗೌಡ ಸಾರಸ್ವತರೂ ಇದ್ದಾರೆ. ವೀರಶೈವರಲ್ಲಿ ಮತವು ಲಿಂಗಾಯತ ಇಲ್ಲವೆ ವೀರಶೈವ. ಆದರೆ ಪಂಗಡಗಳಲ್ಲಿ ಬಣಜಿಗ, ಪಂಚಮಸಾಲಿ, ಗಾಣಿಗ, ಜಾಡರು,ಸಾದರು, ಮಡಿವಾಳ, ಕುಂಬಾರ, ಕುರುಬ, ತಳವಾರ, ರೆಡ್ಡಿ ಇತ್ಯಾದಿ ಜಾತಿಗಳಿವೆ. ಎಲ್ಲ ಕುರುಬರೂ ವೀರಶೈವ ಇಲ್ಲವೆ ಲಿಂಗಾಯತ ಕುರುಬರಲ್ಲ. ವೀರಶೈವ ಇಲ್ಲವೆ ಲಿಂಗಾಯತ ಮತವನ್ನು

ಅಪ್ಪಿದವರು ಮಾತ್ರ ಲಿಂಗಾಯತ ಕುರುಬರು. ಇತ್ತೀಚೆಗೆ ಭಾಗವತ ಮತದ ಕನಕರ ಹೆಸರಿನಲ್ಲಿ ಹೊಸ ಮತವು ಕುಡಿಯೊಡೆಯುತ್ತಿದೆ. ಎಲ್ಲ ರೆಡ್ಡಿಗಳೂ ವೀರಶೈವ ಇಲ್ಲವೆ ಲಿಂಗಾಯತ ರೆಡ್ಡಿಗಳಲ್ಲ. ವೀರಶೈವ ಇಲ್ಲವೆ ಲಿಂಗಾಯತ ಮತವನ್ನು ಒಪ್ಪಿಕೊಂಡವರಷ್ಟೇ ವೀರಶೈವ ಇಲ್ಲವೆ ಲಿಂಗಾಯತ ರೆಡ್ಡಿಗಳು. ಮತವು ಹುಟ್ಟಿನಿಂದ ಅಂಟುವುದಿಲ್ಲ. ಅನುಸರಿಸುವ ಸಂಪ್ರದಾಯದಿಂದ ಅಂಟುತ್ತದೆ. ಹೀಗಾಗಿ, ಹುಟ್ಟಿನಿಂದ ಬ್ರಾಹ್ಮಣ ಜಾತಿಯವರಾಗಿ, ಹಿರಿಯರ ಮತಾನುಸಾರ ಸ್ಮಾರ್ತರಾಗಿ, ತಮ್ಮ ಕಿಶೋರಾವಸ್ಥೆ ತಲುಪಿದ ಬಾಗೇವಾಡಿಯ ಬಸವಣ್ಣನವರು ವೀರಶೈವ ಇಲ್ಲವೆ ಲಿಂಗಾಯತ ಮತವನ್ನು ಅಪ್ಪಿದರು. ಪೂರ್ವ ಸಂಪ್ರದಾಯದ ಚಿಹ್ನೆಯಾದ ಜನಿವಾರವನ್ನು ಕಿತ್ತೆಸೆದರು. ಲಿಂಗ ದೀಕ್ಷೆ ಪಡೆದು ಕೂಡಲ ಸಂಗಮದಲ್ಲಿ ಶಿವದಾರ ಧರಿಸಿದರು. ಆದ್ದರಿಂದ ಅವರು ಸಾರುತ್ತಾರೆ; ತಮಗಿಂತ ಪೂರ್ವದ ಶರಣ ಧರ್ಮೀಯ ಚೆನ್ನಯ್ಯನವರನ್ನು ಮಾದರವನೆಂದು ಕರೆದು, ಆನು ಹಾರುವನೆಂದರೆ ಜಗ ನಗುವುದು. ಅದೇ ರೀತಿ, ಪೂರ್ವದಲ್ಲಿ ಸ್ಮಾರ್ತ ಬ್ರಾಹ್ಮಣರಾದ ಆನಂದ ತೀರ್ಥ ಇಲ್ಲವೆ ಮಧ್ವಾಚಾರ್ಯರು ಪಾಠಶಾಲೆಯಲ್ಲಿ ಗುರುಗಳು ನೀಡಿದ ವಿವರಣೆಯನ್ನು ಒಪ್ಪದೆ, ಸಿಡಿದು ನಿಂತು, ಕೊನೆಗೆ ಗೀತೆ, ಉಪನಿಷತ್ತು, ಮತ್ತು ಬ್ರಹ್ಮ ಸೂತ್ರಗಳಿಗೆ ಆಚಾರ್ಯ ಶಂಕರರು ಬರೆದ ಭಾಷ್ಯಗಳಿಗೆ, ತಮ್ಮ ಮತಿಗೆ ತಕ್ಕಂತೆ, ತಿದ್ದುಪಡಿ ಮಾಡಿ ತಮ್ಮದೇ ಆದ ದ್ವೈತ ಮತವನ್ನು ಸಾರಿದರು. ಪ್ರಸ್ಥಾನ ತ್ರಯಗಳನ್ನು ಆಧರಿಸಿ ತಮ್ಮ ತಮ್ಮ ಮತ ಪ್ರತಿಪಾದಿಸಿ, ಬ್ರಾಹ್ಮಣ ಸಂಪ್ರದಾಯೂನುಸಾರ, ಆಚಾರ್ಯರೆನಿಸಿದರು. ಇನ್ನೋರ್ವ ಬಂಗಾಳೀ ಬ್ರಾಹ್ಮಣ ಶ್ರೀ ರಾಮಕೃಷ್ಣ ಪರಮಹಂಸರು ಜಾತಿ ಮತಗಳಿಗೆ ಇಂಬಿಲ್ಲದ ತಂತ್ರ ಸಾಧನೆಯನ್ನು ಅಪ್ಪಿಕೊಂಡು ತಂತ್ರದ ವಾಮಾಚಾರಕ್ಕೂ ನುಗ್ಗಿ ಜಯ ಶೀಲರಾದರು. ಅಷ್ಟು ದೂರದ ಮಾತೇಕೆ ? ನಮ್ಮ ಕಳಸದ ಗೋವಿಂದ ಭಟ್ಟರು ಬ್ರಾಹ್ಮಣಿಕೆಯನ್ನು ತಿರಸ್ಕರಿಸಿ, ತಂತ್ರ ಸಾಧನೆಯಲ್ಲಿ ಸಿದ್ಧಿ ಸಂಪಾದಿಸಿ, ತಮ್ಮ ನಿಕಟ ಶಿಷ್ಯನನ್ನಾಗಿ ಶಿಶುನಾಳ ಗ್ರಾಮದ ಮುಸಲ್ಮಾನ ತರುಣ ಶರೀಫ ಸಾಹೇಬನನ್ನು ಸ್ವೀಕರಿಸಿ ಜಗತ್ತಿಗೆ ಸಾರಿದರು.

ಆದರೆ. ಇಲ್ಲಿ ಇನ್ನೊಂದು ಮಾತನ್ನು ಪ್ರಸ್ತಾಪಿಸಬೇಕಾಗಿದೆ. ಅದೆಂದರೆ, ಜಾತಿ ಮತ್ತು ವರ್ಣ. ಜಾತಿ ಹುಟ್ಟಿನಿಂದ ಅಂಟುತ್ತದೆ. ಮತವು ಮತೀಯ ಸ್ವೀಕಾರದಿಂದ ಅಂಟುತ್ತದೆ. ಆದರೆ, ವರ್ಣದ ವಿಚಾರವೇ ಬೇರೆ. ಒಬ್ಬನು ಯಾವುದೇ ವೃತ್ತಿಯ ಕುಲದಲ್ಲಿ ಹುಟ್ಟಿರಲೊಲ್ಲನೇಕೆ? ಅವನು ಜೀವನದಲ್ಲಿ ಆಧ್ಯಾತ್ಮಿಕ ಸಾಧನದಲ್ಲಿ ಏರಿದ ಮಟ್ಟವನ್ನು ಅವನ ವೈಯಕ್ತಿಕ ಗುಣ ಕರ್ಮಗಳನ್ನು ಆಧರಿಸಿ ನಿರ್ಧರಿಸುತ್ತಾರೆ. ಇಂಥ ನಿರ್ಣಯವೇ ಅವನ ವರ್ಣವನ್ನು ನಿರ್ಧರಿಸುತ್ತದೆ. ಘೋರ ತಪಸ್ಸಿನಿಂದ ರಾಮಾಯಣ ಕರ್ತೃ ಬೇಡ ಜಾತೀಯ ವಾಲ್ಮೀಕಿ ದ್ವಿಜನಾದ. ಮಾದಿಗ ಸತಿ ಅರುಂಧತಿಯ ಪತಿ ಮಾದಿಗ ವಶಿಷ್ಠ ಸೂಳೆಯ ಮಗನಾದರೂ, ಬ್ರಾಹ್ಮಣ ಶ್ರೇಷ್ಠನೆನಿಸಿದ. ಕ್ಷತ್ರಿಯ ವಿಶ್ವಾಮಿತ್ರ ತಪಸ್ಸಿನಿಂದ ಬ್ರಹ್ಮರ್ಷಿಯಾದ. ಗೊಲ್ಲರ ಹುಡುಗ ಶ್ರೀ ಕೃಷ್ಣ ತನ್ನ ಉನ್ನತ ನಿಲುವಿನಿಂದ ಸಮಸ್ತ ಬ್ರಾಹ್ಮಣರಿಗೂ ಆರಾಧ್ಯ ಪುರುಷನಾದ. ಅದೇ ಬ್ರಾಹ್ಮಣ ಪೌಲಸ್ತ್ಯ ಋಷಿಯ ಮೊಮ್ಮಗನಾದ ರಾವಣನು ತನ್ನ ದುಷ್ಟ ಪ್ರವೃತ್ತಿಯಿಂದ ರಾಕ್ಷಸ ವರ್ಣಕ್ಕಿಳಿದ. ಹೀಗೆ ವರ್ಣವು ವೈಯಕ್ತಿಕ ಸಾಧನೆ ಸಿದ್ಧಿಗಳ ಅಳತೆಗೋಲು. ಹಾಗಾಗಿ ಬ್ರಾಹ್ಮಣ ವರ್ಣಕ್ಕೇರಿದ ವ್ಯಕ್ತಿಯ ಪ್ರಭಾವಳಿಯು ಬಿಳಿಯ ವರ್ಣದ್ದಾಗಿ, ಕ್ಷತ್ರಿಯ ವರ್ಣಕ್ಕೇರಿದ ವ್ಯಕ್ತಿಯ ಪ್ರಭಾವಳಿಯು ಕೆಂಪು ವರ್ಣವಾಗಿ, ವೈಶ್ಯ ವರ್ಣಕ್ಕೇರಿದ ವ್ಯಕ್ತಿಯ





ಪ್ರಭಾವಳಿಯು ಹಳದಿ ವರ್ಣವಾಗಿ, ಮತ್ತು ಶೂದ್ರ ವರ್ಣದಲ್ಲಿಯೇ ನಿಂತ ವ್ಯಕ್ತಿಯ ಪ್ರಭಾವಳಿಯು ಕಪ್ಪು ವರ್ಣವಾಗಿ ಕಂಡುಬರುತ್ತದೆ. ಈ ದೈವೀ ವರ್ಗೀಕರಣವನ್ನು ಶೋಷಕ ವಿಪ್ರರು ತಮ್ಮ ಜಾತಿಗೆ ಅನುಕೂಲವಾಗುವಂತೆ ಅರ್ಥೈಸಿ ಮೇಲು ಕೀಳಿನ ಭಾವವನ್ನು ಸಮಾಜದಲ್ಲಿ ಬೆಳೆಸಿದರು, ಹೀಗಾಗಿ, ವರ್ಣ ವ್ಯವಸ್ಥೆಯ ವಿರೋಧವೇ ಧರ್ಮ ಪುನರುತ್ಥಾನವೆನಿಸುವಂತಾಗಿದೆ. ವೇಮನರು ಇದನ್ನು ಒಪ್ಪಿಲ್ಲ. ಶೂದ್ರರು ಬ್ರಾಹ್ಮಣ ವರ್ಣಕ್ಕೇರಬೇಕೆಂದು ಅವರ ಪ್ರತಿಪಾದನೆ. ವೀರಶೈವರಂತೂ ಜಾತಿಗೂ ಮತಕ್ಕೂ ಇರುವ ಭೇದವನ್ನೇ ಉಪೇಕ್ಷಿಸಿ, ಹುಟ್ಟಿದ ಹಸುಳೆಗೇ ಲಿಂಗ ದೀಕ್ಷೆ ನೀಡಿ, ಮತದ ಆಯ್ಕೆಯ ಸ್ವಾತಂತ್ರ್ಯವನ್ನೇ ಜನರಿಂದ ಕಿತ್ತುಕೊಳ್ಳುತ್ತಿದ್ದಾರೆ.

ಈಗ ವೇಮನರ ಪದ್ಯದ ಟೀಕಾರ್ಥದತ್ತ ಬರೋಣ.

ಜಾತಿಯ ಅಂಟನ್ನೂ ಮತಾಭಿಮಾನವನ್ನೂ ತೊರೆದು ಯೋಗಿಯಾಗುವುದು, ಮೇಲು. ಹಾಗಿರದೆ ಯಾವುದೊಂದು ಜಾತಿಗೆ ಅಂಟಿಕೊಂಡು, ಮನಸ್ಸನ್ನು ಸೂಕ್ಷ್ಮವಾಗಿಸುವುದು ಕಷ್ಟಸಾಧ್ಯ. ಅಂಥವರು ಹೇಗೆ ನಡೆಯಬೇಕೆಂಬ ನೀತಿಯನ್ನು ಜನರಿಗೆ ಬೋಧಿಸುವುದರಿಂದ ಯಾವ ಪರಿಣಾಮ ಕಂಡು ಬಂದೀತು ? ಜಾತಿಯಲ್ಲಿ ಮುಳುಗಿ ನೀತಿ ಹೇಳಿದರೇನು ಪ್ರಯೋಜನ ? ಕನಿಷ್ಠ ಗುರುವನ್ನು ಸಂಧಿಸಿ ತನ್ನ ಸಂಸ್ಕಾರಕ್ಕೆ ಅನುಗುಣವಾಗಿ ಮತವನ್ನು ಆಯ್ಕೆ ಮಾಡಿಕೊಳ್ಳಬೇಕು. ಒಮ್ಮೆ ಮತದ ಆಳ ಅರ್ಥವು ತಿಳಿದರೆ, ಜಾತಿಯ ಅಂಟನ್ನು ತೊಡೆಯಲು ಹಿಂದುಮುಂದೆ ನೋಡಬೇಕಿಲ್ಲ. ಮತವು ತಿಳಿಯೆ, ಜಾತಿಯನ್ನು ಬಿಡಲು ಅಂಜಿಕೆ ಬೇಡ.

-----

# ೩. ಬಾಲ್ಯ - ಯೌವನ

ವೇಮನರು, ಈ ಮುನ್ನ ತಿಳಿಸಿದಂತೆ, ಕೊಂಡವೀಡು ಪಟ್ಟಣದ ಭಾಗವೊಂದರಲ್ಲಿ ಕ್ರಿ. ಶ. ೧೪೧೨ ರಲ್ಲಿ ಜನಿಸಿದರು. ಆಗ ಕೊಂಡವೀಡು ರಾಜ್ಯಪಟ್ಟವು ಇವರ ದೊಡ್ಡಪ್ಪನಾದ ಪೆದಕೊಮಟಿ ವೇಮಾರೆಡ್ಡಿಯ ಕೈವಶವಾಗಿ ಹನ್ನೆರಡು ವರ್ಷವಾಗಿತ್ತು. ವೇಮನರ ತಂದೆ ಕೊಮರು ಗಿರಿ ಊರ್ಫ ಕುಮಾರಗಿರಿ ರೆಡ್ಡಿಯು ಪಟ್ಟ ಕಳೆದುಕೊಂಡ ಮಾಜೀ ದೊರೆಯಾಗಿದ್ದನು. ಕುಮಾರಗಿರಿಯ ತಂಗಿ ಅನ್ನಮಾಂಬೆಯ ಪತಿ ಕಾಟಯ ವೇಮಾರಡ್ಡಿಯು ರಾಜಮಹೇಂದ್ರವರಂ ರಾಜ್ಯದ ದೊರೆಯಾಗಿದ್ದನು. ವೇಮನ ತಮ್ಮ ಬಾಲ್ಯದ ದಿನಗಳನ್ನು ಕೊಂಡವೀಡುವಿನಲ್ಲಿ ಕಳೆದರೂ ಮುಂದೆ ತಂದೆ ಕುಮಾರಗಿರಿಯ ಮರಣಾನಂತರ ತನ್ನ ಸೋದರತ್ತೆಯಾದ ಅನ್ನಮಾಂಬೆಯ ಮನೆಗೆ ರಾಜಮಹೇಂದ್ರಕ್ಕೆ ತೆರಳಿದನು. ವೇಮನ ಇನ್ನೂ ಎರಡು ವರ್ಷದ ಶಿಶುವಿದ್ದಾಗಲೇ ಮಾವ ಕಾಟಯ ವೇಮಾರೆಡ್ಡಿಯು ಯುದ್ಧದಲ್ಲಿ ಮಡಿದು ವೀರ ಸ್ವರ್ಗ ಸೇರಿದನು. (ಕ್ರಿ.ಶ.೧೪೧೪) ಹೀಗಾಗಿ, ಕಾಟಯ ವೇಮಾರೆಡ್ಡಿಯ ಮಗನೂ ಅಲ್ಪವಯಿಯೂದ್ದರಿಂದ, ಸಮೀಪದ ಸಂಬಂಧಿಯಾದ ದುವ್ವೂರಿ ವಂಶದ ಅಲ್ಲಾಡರೆಡ್ಡಿಯು ರಾಜ್ಯಭಾರವನ್ನು ವಹಿಸಿಕೊಂಡು ಕ್ರಿ. ಶ. ೧೪೧೬ ರಿಂದ ಕ್ರಿ.ಶ. ೧೪೨೬ ರ ವರೆಗೆ ಸಮರ್ಥ ರೀತಿಯಿಂದ ರಾಜ್ಯಭಾರವನ್ನು ನಿರ್ವಹಿಸಿದನು. ಈ ಅವಧಿಯಲ್ಲಿ ವೇಮನರ ಬಾಲ್ಯವು ಸ್ವಲ್ಪ ಕಾಲ ಕೊಂಡವೀಡುವಿನಲ್ಲಿ, ಸ್ವಲ್ಪ ಕಾಲ ರಾಜವರೇಂದ್ರವರಂ ಅರಮನೆಯಲ್ಲಿ ಕಳೆಯುತ್ತಿತ್ತು. ಅಲ್ಲಾಡರೆಡ್ಡಿ ದೊರೆಯು ವೇಮನರ ಅಜ್ಜ ಅನಪೋತರೆಡ್ಡಿಯ (೧೩೫೦-೧೩೬೧) ತಮ್ಮನಾದ ಕೊಂಡನೀಡುವಿನ ಅರಸು ಅನವೇಮಾರೆಡ್ಡಿಯ (೧೩೬೨-೧೩೮೦) ಅಳಿಯನೇ ಆಗಿದ್ದನು. ಇವನ ಹೆಂಡತಿಯುದ ಕೂತುರ ವೇಮಾಂಬೆಯು ವೇಮನನ ಸೋದರತ್ತೆ ಅನ್ನಮಾಂಬೆಯ ಸೋದರಿ ಸಂಬಂಧಿಯೇ ಆಗಿದ್ದಳು. ಹಾಗಾಗಿ, ಬಾಲಕ ವೇಮನನು ಮನೆಯಲ್ಲಿ ಮುದ್ದಿನ ಕಣೆಯಾಗಿದ್ದನು. ಅವನ ಸುಂದರ ಮುಖಚರ್ಯೆಯು ಎಲ್ಲರ ಹೃದಯವನ್ನೂ ಅರಳಿಸುತ್ತಿತ್ತು. ಬಾಲಕ ವೇಮನರನ್ನು ವಿದ್ಯಾಭ್ಯಾಸಕ್ಕೆಂದು ಇವ್ವಟೂರಿನ ಸೋಮಶೇಖರ ಗುರುಕುಲಕ್ಕೆ ಸೇರಿಸಿದರು.

ಬಾಲಕ ವೇಮನರಿಗೆ ಪೂರ್ವಜನ್ಮ ಸಂಸ್ಕಾರದಿಂದಾಗಿ, ಕಾಗುಣಿತ ಕಲಿಕೆಯಲ್ಲಿ ಆಸಕ್ತಿ ಇರಲಿಲ್ಲ. ಅವರು ಸೋಮಶೇಖರ ಗುರುಗಳ ಛತ್ರದಲ್ಲಿದ್ದರೂ, ಪುಸ್ತಕಗಳ ಓದಿನತ್ತ ಲಕ್ಷ್ಯ ಹರಿಸದೆ ಸಂಗೀತ, ವಾದ್ಯ ವಾದನಗಳತ್ತ ಹೆಚ್ಚು ಗಮನ ನೀಡಿದರು. ಮೇಲಾಗಿ, ಸೋಮಶೇಖರ ಗುರುಗಳ ಪ್ರೀತಿಯ ಶಿಷ್ಯನಾಗಿದ್ದರಿಂದ ಅವರು ಇವನ ವಿಶೇಷ ಆಸಕ್ತಿಯನ್ನು ಅರಿತು, ಸಂಗೀತ ಪಾಠಕ್ಕೂ, ವಾದ್ಯವಾದನ ಅಭ್ಯಾಸಕ್ಕೂ ಅನುವು ಮಾಡಿಕೊಟ್ಟು ಪ್ರೋತ್ಸಾಹಿಸಿದರು. ಸದಾ ಅಂತರ್ಮುಖಿಯಾಗಿರುತ್ತಿದ್ದ ಬಾಲಕನಿಗೆ ಪ್ರಾರಂಭಿಕ ಯೋಗಾಭ್ಯಾಸದ ಕ್ರಮಗಳನ್ನೂ ತಿಳಿಸಿಕೊಟ್ಟರು. ವೇಮನರು ಪೂರ್ವ ಸಂಸ್ಕಾರದ ಫಲವಾಗಿ ಶೀಘ್ರವೇ ತೋಡಿ ರಾಗದಲ್ಲಿ ಸಿದ್ಧ ಹಸ್ತರಾದರು. ಯೋಗಾಭ್ಯಾಸದಲ್ಲಿ ಸಹ ಮನವನ್ನು ಕೇಂದ್ರೀಕರಿಸುವಲ್ಲಿ ಯಶಸ್ಸು ಕಂಡರು. ವೇಮನರು ಛಾತ್ರ ವೃತ್ತಿಯಿಂದ ಸೋಮಶೇಖರ ಗುರುಗಳಲ್ಲಿ ಸಂಗೀತ, ಯೋಗ ವಿದ್ಯಾರ್ಜನೆ ಮಾಡಿದ ಬಗ್ಗೆ ಹೀಗೆ ನುಡಿದಿದ್ದಾರೆ.





ಛಾತ್ರ ಧರ್ಮವರಿತು, ಚೊಕ್ಕ ಭಕ್ತಿಯಿಂದ,
ಗುರುವ ಸೇವೆ ಗೆಯ್ದು, ಕುದುರಿದೊಡನೆ,
ಎಲ್ಲ ಮರ್ಮಗಳನು ಎಸೆದು ಹೋಗುತಿರುವ.
ವಿಶ್ವದಾಭಿರಾಮ ಕೇಳು ವೇಮ

ಗುರುವಿನ ಬಗೆಗೆ ಚೊಕ್ಕ ಭಕ್ತಿ ಹೊಂದಿ, ಅವರ ಛತ್ರದಲ್ಲಿದ್ದು ಛಾತ್ರ ಧರ್ಮವನ್ನು ಅರಿತು, ಗುರುವಿನ ಸೇವೆ ಗೆಯ್ಯುತ್ತಿದ್ದರೆ, ದೇಶಿಕನಾದ ಗುರುವು ಹೃದಯವನ್ನು ಅರಳಿಸಿ, ವಿದ್ಯೆಯ ಕುಸುಮವು ಅರಳುವಂತೆ ಮಾಡುತ್ತಾನೆ. ವಿದ್ಯೆಯ ಎಲ್ಲ ರಹಸ್ಯಗಳನ್ನು ಬಯಲು ಮಾಡಿ ಹೋಗುತ್ತಾನೆ.

ಯೋಗಿ ವೇಮನರ ಸಮಕಾಲೀನರಾದ, ಪ್ರಸಿದ್ಧ ತೆಲುಗುಭಾರತದ ಕರ್ತೃ ಪೊತೆನ ಊರ್ಫ ಪೋತರಾಜರು ಸೋಮ ಶೇಖರ ಗುರುಗಳಲ್ಲಿಯೇ ವ್ಯಾಸಂಗ ಮಾಡಿದರು. ಅವರು 'ವೀರಭದ್ರ ವಿಜಯ' ಎಂಬ ಕಾವ್ಯದಲ್ಲಿ ತಮ್ಮ ಗುರುಗಳನ್ನು ಹೀಗೆ ಸ್ಮರಿಸಿದ್ದಾರೆ.

ಪರಮ ಭದ್ರಾಸನ, ಪ್ರಮುಖ ಮಾರ್ಗಗಳು,
ಯೋಗೀಂದ್ರರಿವರಾದಿ ಯೋಗಿಯೆನಲು,
ಅನಘರಿವ್ವಟೂರಿ ಆರಾಧ್ಯ ಚಂದ್ರರೈ.
ಸೋಮನಾಥ ಸಮರು ಸೋಮಗುರುವು.

ಮಹಾಕವಿ ಪೋತನರ ಗದ್ಯಗಳೆರಡರಲ್ಲೂ ಸೋಮನಾಥ ಮತ್ತು ಸೋಮಶೇಖರ ಎಂಬ ಎರಡೂ ಹೆಸರುಗಳ ಉಲ್ಲೇಖವಿರುವುದು ಕಂಡುಬಂದಿದೆ. ಮಹಾಯೋಗಿ ವೇಮನರು ಸಹ ತಮ್ಮ ವಿದ್ಯಾಭ್ಯಾಸದ ಗುರುವನ್ನು ಸ್ತುತಿಸಿದ್ದಾರೆ.

ಭವದೂರನು ಶರಭಾಂಕನು,
ಶಿವಶೀಲನು, ಸಹಸ್ರ ಕೋಟಿ ಸಿದ್ಧೇಶ್ವರನೈ.
ಶಿವ ಭೃತ್ಯನು, ವಟಮೂಲನು,
ಶಿವಮಯ ಚಿನ್ಮಯನು, ಸೋಮಶೇಖರ ಗುರುವೈ.

ಮಹಾನ್ ಶಿಷ್ಯರಿಬ್ಬರೂ ಸೋಮಶೇಖರ ಗುರುಗಳನ್ನು ಬಣ್ಣಿಸಲು ಬಳಸಿದ ಶಬ್ದಾವಳಿಯನ್ನು ಪರಿಕಿಸಿದರೆ, ಅವರು ಅಸಾಮಾನ್ಯ ಗುರುಗಳೆಂದು ವೇದ್ಯವಾಗದಿರದು. ಅವರೊಬ್ಬ ಯೋಗಿ ಪುಂಗವರು; ಶಿವಸ್ವರೂಪರು; ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಸೋಮಶೇಖರ ಗುರುಗಳು ಶಿಷ್ಯರಿಗೆ ಅಧ್ಯಾತ್ಮಪ್ರಕಾಶವನ್ನು ಬೀರಿ ಅವರು ಭವಬಂಧನದಿಂದ ದೂರಾಗುವಂತೆ ಮಾಡುವವರು. ವೀರಭದ್ರಾವತಾರಿಗಳು. ಅವರ ಶೀಲವು ಮಂಗಳಕರ; ಕಲ್ಯಾಣಮಯಿ ಅರ್ಥಾತ್ ಅವರು ಶಿವಶೀಲರು; ಯೋಗ ಸಿದ್ಧರಿಗೆ ನಿಯಂತ್ರಕನಾದ ಸಿದ್ಧೇಶ್ವರನ ಮಹಿಮೆಯ ಸಾವಿರ ಪಟ್ಟು ಮಹಿಮೆ ಹೊಂದಿದವರು. ಆದರೂ ಮಂಗಳಮಯ ತತ್ತ್ವವಾದ ಶಿವ ತತ್ತ್ವಕ್ಕೆ ಶರಣು ಹೋದ ಶಿವಭೃತ್ಯರು. ಸಂಸಾರ ವೃಕ್ಷಕ್ಕೆ ಬೇರಿನಂತಿರುವ ಪರಮಾತ್ಮರೂಪರು. ಸೊಮಶೇಖರ ಗುರುವು ಶಿವನನ್ನೇ ಒಳಗೂ ಹೊರಗೂ ಕಂಡುಕೊಂಡ ಶಿವಮಯರು. ಅರಿವಿನ ಸ್ವರೂಪವೇ ಆದ ಅವರು ಚಿನ್ಮಯರು.

ಇಂಥ ಮಹಾಗುರುವನ್ನು ವಿದ್ಯಾಭ್ಯಾಸದ ಕಾಲದಲ್ಲಿಯೇ ಸಂಧಿಸಿದ ವೇಮನರು ಪುಣ್ಯಭಾಗಿಗಳು. ಅವರ ಸನ್ನಿಧಿಯಲ್ಲಿ ವೇಮನರು ಆಧ್ಯಾತ್ಮಿಕ ಸಾಧನೆಗೆ ಮೊದಲಾಗಿ ತುಂಬ ಪ್ರಗತಿ ಸಾಧಿಸಿದರು.

ಏತನ್ಮಧ್ಯೆ, ವೇಮನರ ಪಾಲಕರಾದ ರಾಜಮಹೇಂದ್ರವರಂ ದೊರೆ ಅಲ್ಲಾಡರೆಡ್ಡಿಯು ಕ್ರಿ.ಶ. ೧೪೨೦ ರಲ್ಲಿ ಕಾಲವಶವಾದನು. ಆಗ ಅರಾಜಕವಾದ ರಾಜಮಹೇಂದ್ರವರಂ ರಾಜ್ಯಭಾರವನ್ನು ಅಲ್ಲಾಡರೆಡ್ಡಿಯ ಅಣ್ಣನ ಮಗನು ವಹಿಸಿಕೊಂಡನು. ಆದರೆ ಮುಂದೆ ಮೂರೇ ವರ್ಷಗಳಲ್ಲಿ ಅಲ್ಲಾಡರೆಡ್ಡಿಯ ಹಿರಿಯ ಮಗನಾದ ವೇಮಾರೆಡ್ಡಿ ಊರ್ಫ ಅಳ್ಳಯ ವೇಮಾರಡ್ಡಿಯು ಕೊಸರಿ ಮುಂದೆ ಬಂದು ಪಟ್ಟಾಧಿಕಾರಕ್ಕಾಗಿ ಕಚ್ಚಾಡುತ್ತಿದ್ದ ದಾಯಾದಿಗಳನ್ನೆಲ್ಲ ಸದೆಬಡಿದು, ತಾನೂ ಸಹ ಅಧಿಕಾರದ ಆಕರ್ಷಣೆಗೆ ಬಲಿಬೀಳದೆ, ದಿ. ದೊರೆ ಕಾಟಯ ವೇಮಾರೆಡ್ಡಿಯ ಅಳಿಯನೂ, ತನ್ನ ತಮ್ಮನೂ, ಆದ ವೀರಭದ್ರಾರೆಡ್ಡಿಗೆ ಪಟ್ಟಗಟ್ಟಿದನು. (ಕ್ರಿ.ಶ. ೧೪೨೩) ವೀರಭದ್ರಾರೆಡ್ಡಿಯು ಸಹ ಸ್ವಾರ್ಥತ್ಯಾಗಿ, ವೀರ ಯೋಧನಾಗಿದ್ದ. ತನ್ನ ಅಣ್ಣನನ್ನೇ ಪ್ರಧಾನ ಮಂತ್ರಿಯಾಗಿ ನೇಮಿಸಿ, ಅಧಿಕಾರದ ಬಹ್ವಂಶವನ್ನು ಅವನಿಗೇ ಬಿಟ್ಟುಕೊಟ್ಟನು.

ತನ್ನ ಸೋದರತ್ತೆಯ ಮನೆಯಲ್ಲಿ ಇಷ್ಟೆಲ್ಲ ಸ್ಥಿತ್ಯಂತರಗಳಾದರೂ ಕಿಶೋರ ವೇಮನರ ವಿದ್ಯಾಭ್ಯಾಸಕ್ಕೇನೂ ಅಡ್ಡಿ ಆತಂಕಗಳುಂಟಾಗಲಿಲ್ಲ. ವೇಮನರು ತಮ್ಮ ಯೋಗಾಭ್ಯಾಸವನ್ನೂ, ಸಂಗೀತಾಭ್ಯಾಸವನ್ನೂ ಮುಂದುವರಿಸಿದರು. ತೋಡಿರಾಗದ ಪ್ರಸಿದ್ಧ ಪಂಡಿತರಾದರು. ಕಾಗುಣಿತದ ಓದಿನತ್ತ ಲಕ್ಷ್ಯ ಹರಿಸದ ವೇಮನರು, ಗುರುಗಳು ಪಾಠಶಾಲೆಯಲ್ಲಿ ವಿವರಿಸುವ ಪುರಾಣೇತಿಹಾಸಗಳ ದೃಷ್ಟಾಂತ ಕಥೆಗಳನ್ನು ಕುರಿತು ಶುದ್ಧ ಶ್ರವಣ ಮಾಡುತ್ತಿದ್ದರು. ತಮ್ಮ ಕಿಶೋರಾವಸ್ಥೆ ಮುಗಿಯುವ ವರೆಗೆ ವೇಮನರು ಸೋಮಶೇಖರ ಗುರುಗಳ ಸನ್ನಿಧಿಯಿಂದ ದೂರಾಗಲಿಲ್ಲ. ಕೊನೆಗೆ ಗುರುಕುಲದಿಂದ ಮನೆಗೆ ಮರಳಿದ ವೇಮನರು ರಾಜ ಕಾರ್ಯದಲ್ಲಿ ತೊಡಗಲೇ ಇಲ್ಲ. ತನ್ನ ಸೋದರತ್ತೆಯ ಅಳಿಯ ವೀರಭದ್ರಾರೆಡ್ಡಿಯು ಪಟ್ಟದ ದೊರೆಯಾಗಿದ್ದರೂ, ರಾಜ್ಯಭಾರವನ್ನು ಹೆಚ್ಚಾಗಿ ಅವರ ಅಣ್ಣಅಳ್ಳಯ ವೇಮರೆಡ್ಡಿಯೇ ನೋಡಿಕೊಳ್ಳುತ್ತಿದ್ದನು. ಸೋದರರಿಬ್ಬರ ಸಮರ್ಥ ಆಡಳಿತದಲ್ಲಿ ಮೂರನೆಯವರು ಹೆಚ್ಚು ತಲೆಕೆಡಿಸಿಕೊಳ್ಳಬೇಕಿರಲಿಲ್ಲ. ಕಲಾವಿದನೂ ಯೋಗಸಾಧನದ ಅಭ್ಯಾಸಿಯೂ ಆದ ವೇಮನರು ಸ್ವಭಾವತಃ ಅಂತರ್ಮುಖಿಗಳಾಗಿದ್ದು ರಾಜ್ಯದ ಆಗು ಹೋಗುಗಳನ್ನು ಹೊರಗಿನಿಂದ ಗಮನಿಸುತ್ತಿದ್ದರೇ ಹೊರತು, ಅದರಲ್ಲಿ ಸಕ್ರಿಯವಾಗಿ ಪಾಲುಗೊಳುತ್ತಿರಲಿಲ್ಲ. ವೇಮನರು, ಗುರುಕುಲದ ವಿದ್ಯಾರ್ಥಿಯಾಗಿರುವಾಗಲೇ ಕೊಂಡವೀಡು ರಾಜ್ಯವು ಉತ್ತರದಿಂದ ಪದ್ಮನಾಯಕರ ಮತ್ತು ದಕ್ಷಿಣದಿಂದ ವಿಜಯನಗರದ ರಾಯರ ದಾಳಿಗೆ ತುತ್ತಾಗಿ (೧೯೨೪) ಆಯಾ ಭಾಗವು ಅವರವರ ವಶವಾಗಿತ್ತು. ಕೊಂಡವೀಡು ರಾಜ್ಯದ ಪತನಾನಂತರ ರಾಜಮಹೇಂದ್ರವರಂ ರಾಜ್ಯವೂ, ಬಲಿಷ್ಠವಾಗತೊಡಗಿದ ವಿಜಯನಗರ ಸಾಮ್ರಾದಜ್ಯದ ಅಂಕಿತಕ್ಕೊಳಗಾಗಿ ಸಾಮಂತ ಪಟ್ಟಕ್ಕಿಳಿದಿತ್ತು. ಹೀಗಾಗಿ ಭಾವ ಜೀವಿಯಾದ ವೇಮನರು ಕಲೋಪಾಸನೆಯಲ್ಲಿಯೇ ತಲ್ಲೀನರಾಗಿ ಕಾಲ ವ್ಯಯಿಸುತ್ತಿದ್ದರು. ರಾಜ್ಯದ ಪ್ರಧಾನಿ ಅಳ್ಳಯ ವೇಮಾರೆಡ್ಡಿಯ ಪತ್ನಿ ಮಲ್ಲಮ್ಮನು ಮೈದುನ ವೇಮನರ ಬೇಕು ಬೇಡಗಳತ್ತ ಗಮನಿಸುತ್ತಿದ್ದರು. ಪಟ್ಟಾಧಿಕಾರಿ ವೀರಭದ್ರಾರೆಡ್ಡಿಯ ಪತ್ನಿ ನರಸಾಬೆ ಊರ್ಫ ಅನತಲ್ಲಿಯೂ ಮಲ್ಲಮ್ಮನಿಗೆ ನೆರವು ನೀಡುತ್ತಿದ್ದಳು. ಮಲ್ಲಮ್ಮನಿಗೆ ಕೃಷ್ಣಾ ಎಂಬ ಹೆಸರಿನ ಐದು ವರ್ಷದ ಮುದ್ದು ಮಗುವಿತ್ತು. ಭಾವ ಜೀವಿಯಾದ ವೇಮನರಿಗೆ ಸಹಜವಾಗಿ ಕೃಷ್ಣಾಳನ್ನು ಕಂಡರೆ





ಎಲ್ಲಿಲ್ಲದ ಅನುರಾಗ. ಅವಳೊಂದಿಗೆ ಸರಸ ಸಲ್ಲಾಪ, ಆಟಪಾಟಗಳಲ್ಲಿ ತುಂಬಾ ಅನುರಕ್ತರಾಗಿದ್ದರು, ವರ್ಷಗಳುರುಳಿದಂತೆ ಕೃಷ್ಣಾ ಬಾಲೆಗೆ ವೇಮನ ಕಕ್ಕನನ್ನು ಬಿಟ್ಟಿರಲು ಆಗದಷ್ಟು ಅಕ್ಕರೆ ಬೆಳೆಯಿತು. ಹಾಲು ಕುಡಿಯುವ ಬಟ್ಟಲನ್ನೂ ವೇಮನರೇ ಕೊಡಬೇಕು. ಊಟದ ತಟ್ಟೆ ಇರಿಸಿದಾಗ ಸಹಪಂಕ್ತಿಯಲ್ಲಿ ವೇಮನರಿರಲೇ ಬೇಕು. ವೇಮನರಿಗೂ ಅಷ್ಟೇ. ಅವಳನ್ನು ಬಿಟ್ಟು ಬಹಳ ಹೊತ್ತು ಇರಲಾಗುತ್ತಿರಲಿಲ್ಲ. ಮನೆಯವರೆಲ್ಲ ಈ ಮುದ್ದು ಮಗು ಮತ್ತು ಭಾವಜೀವಿ ವೇಮನರ ಪರಸ್ಪರ ಮಧುರ ಬಾಂಧವ್ಯವನ್ನು ನೋಡಿ ಅಚ್ಚರಿ ಪಡುತ್ತಿದ್ದರು.

ಈ ಮಧ್ಯೆ ಯುವಕ ವೇಮನರಿಗೆ ಅತ್ತಿಗೆ ನರಸಾಂಬೆ ಮತ್ತು ಮಲ್ಲಮ್ಮರ ಮೂಲಕ ಸ್ವರ್ಣಶಾಲೆಯ ಕರ್ಮಚಾರಿ ಅಭಿರಾಮಯ್ಯನೆಂಬ ಅಕ್ಕಸಾಲಿಗನ ಪರಿಚಯವಾಯಿತು. ಅಭಿರಾಮಯ್ಯನು ಬಾಬಾ ಬೈರಾಗಿಗಳ, ಸಾಧು ಸಂತರ ಸಂಪರ್ಕದಲ್ಲಿ ವಿಶೇಷ ಆಸಕ್ತಿ ಹೊಂದಿದ್ದನು. ಅವನ ಆಸಕ್ತಿಗೆ ರಸವಾದದಲ್ಲಿ ಅವನಿಗಿರುವ ಕುತೂಹಲವೇ ಕಾರಣವಾಗಿತ್ತು. ಈ ವಿಷಯದಲ್ಲಿ ಅವನು ರಾಜ್ಯದಲ್ಲಿ ಸಂಚರಿಸುವ ಬೈರಾಗಿಗಳನೇಕರ ನಿಕಟ ಸಂಪರ್ಕ ಪಡೆದಿದ್ದನು. ನಿಮ್ನ ಧಾತುಗಳನ್ನು ಕೆಲವು ರಾಸಾಯನಿಕ ಕ್ರಿಯೆಗಳ ಮೂಲಕ ಮತ್ತು ಯೋಗ ಶಕ್ತಿಯ ಮೂಲಕ ಮೇಲು ಧಾತುಗಳಾಗಿ ರೂಪಾಂತರಿಸಿ, ಬೆಳ್ಳಿ ಬಂಗಾರಗಳನ್ನು ತಯಾರಿಸುವುದೇ ಪ್ರಚಲಿತವಿದ್ದ ರಸವಾದವಾಗಿತ್ತು. ಅವನು ತಾಮ್ರದ ತಗಡಿನಿಂದ, ಪಾರಜದಿಂದ ಸ್ವರ್ಣ ತಯ್ಯಾರಿಸುವುದನ್ನು ಕಣ್ಣಾರೆ ಕಂಡಿದ್ದ. ಮೇಲಾಗಿ ಅದರ ಪ್ರಕ್ರಿಯೆಯನ್ನೂ ಅರಿತುಕೊಂಡಿದ್ದ. ಆದರೆ, ಅವನ ದುರ್ದೈವವೆಂದರೆ ಯೋಗ ಶಕ್ತಿಯ ಕೊರತೆ. ಇದರಿಂದ ಅವನು ಚಿಂತಿತನಾಗಿದ್ದನು.

ಒಂದು ಸಲ ಯುವಕ ವೇಮನರೊಂದಿಗೆ ಬೆಟ್ಟದ ಪ್ರದೇಶದಲ್ಲಿ ಸಂಚರಿಸುವಾಗ ಅಭಿರಾಮಯ್ಯನಿಗೆ ಪೂರ್ವ ಪರಿಚಯವಿದ್ದ ಬೈರಾಗಿಯೋರ್ವ ಸಂಧಿಸಿದನು. ಬಳಿಗೆ ನಿಂತ ಅಪರಿಚಿತ ಯುವಕನ ಒಳನೋಟದ ಕಣ್ಣುಗಳನ್ನು ನೋಡಿ, ಅವನತ್ತ ಆಕರ್ಷಿತನಾದನು. ಇವನು ಮಂತ್ರಸಿದ್ಧಿ ಪಡೆಯಲು ಪೂರ್ವ ಸಂಸ್ಕಾರವುಳ್ಳವನು ಎಂದು ಊಹಿಸಿದನು.

" ಅಭಿರಾಮಯ್ಯನವರೇ ! ಈ ಯುವಕನಾರು ? " ಎಂದು ಪ್ರಶ್ನಿಸಿದನು

" ವೇಮನ. ನಮ್ಮ ದೊರೆಗಳ ಸಂಬಂಧಿ. ಕೊಂಡವೀಡು ರಾಜವಂಶಕ್ಕೆ ಸೇರಿದ, ಆದರೆ ರಾಜಪಟ್ಟದಿಂದ ವಂಚಿತನಾದ ದುರ್ದೈವಿ" ಎಂದರು ಅಭಿರಾಮಯ್ಯ.

" ಒಳ್ಳೆಯದೇ ಆಯ್ತು. ಇವನು ರಾಜ್ಯಭಾರ ಹೊರುವ ಸಂಸ್ಕಾರದವನಲ್ಲ."ಎಂದು ಖಡಾಖಂಡಿತವಾಗಿ ನುಡಿದುಬಿಟ್ಟ ಬೈರಾಗಿ.

ಅಭಿರಾಮಯ್ಯರಿಗೆ ತುಂಬಾ ಅಚ್ಚರಿ ಎನಿಸಿತು.

"ಅಂದರೆ .....?" ಎಂದು ಪ್ರಶ್ನಾರ್ಥಕ್ಕಾಗಿ ತವಕಿಸಿದರು.

" ಅವನಿಗೆ ಒಳ್ಳೆಯ ಪೂರ್ವ ಸಂಸ್ಕಾರವಿದೆ. ಯೋಗಿಯಾಗುವ ಸಂಭವವೇ ಹೆಚ್ಚು" ಎಂದನು ಬೈರಾಗಿ.

" ಅದೇನೋ ನಿಜ. ಸೋಮಶೇಖರ ಗುರುಗಳ ಛತ್ರದಲ್ಲಿದ್ದರೂ, ಶಾಸ್ತ್ರಾಭ್ಯಾಸ ಮಾಡದೆ ಯೋಗಾಭ್ಯಾಸ, ಸಂಗೀತಗಳಲ್ಲಿಯೇ ಮಗ್ನರಾಗಿರುತ್ತಿದ್ದರು"ಎಂದರು ಅಭಿರಾಮಯ್ಯ.

" ಸರಿ, ಸರಿ ರಸವಾದದಲ್ಲಿ ಇವರಿಗೆ ಆಸಕ್ತಿ ಇದೆಯೇ ?'' ಎಂದು ಕೇಳಿದರು.

" ವಿಚಾರಿಸಿಲ್ಲ.''ಎಂದರು ಅಭಿರಾಮಯ್ಯ.

ಆಗ ಬೈರಾಗಿ ವೇಮನರನ್ನೇ ಉದ್ದೇಶಿಸಿ ನೇರವಾಗಿ,

"ತಮ್ಮಾ ! ನಿನಗೆ ಸೋಮಶೇಖರ ಗುರುಗಳು ಏನಾದರೂ ಭವಿಷ್ಯ ನುಡಿದಿದ್ದರೇ ?''ಎಂದು ಪ್ರಶ್ನಿಸಿದನು

"ಇಲ್ಲವಲ್ಲ. ಇವರು ಭವಿಷ್ಯ ಹೇಳುವವರಲ್ಲ. ಶಿವಸ್ವರೂಪಿಗಳು'' ಎಂದರು ವೇಮನ.

"ಹಾಗಾದರೆ, ನಿನಗೆ ಯೋಗಾಭ್ಯಾಸ, ಸಂಗೀತಾಭ್ಯಾಸವನ್ನಷ್ಟೇ ಏಕೆ ಮಾಡಿಸಿದರು?''

"ನನಗೆ ಅದರಲ್ಲಿ ವಿಶೇಷ ಆಸಕ್ತಿ ಇರುವುದನ್ನು ಗುರುತಿಸಿ, ನನ್ನ ಸಹಜ ಅಭಿರುಚಿಗೇ ಪ್ರೋತ್ಸಾಹವಿತ್ತರಷ್ಟೇ.'' ಎಂದರು ವೇಮನ.

"ಅದೇ ಅವರ ಮಹಿಮೆ! ಭವಿಷ್ಯ ನುಡಿಯದೆ ಪೂರ್ವ ಸಂಸ್ಕಾರಗಳನ್ನು ಗುರುತಿಸಿ, ಶಿಷ್ಯರ ಸುಪ್ತ ಶಕ್ತಿಗಳನ್ನು ವಿಕಾಸಗೊಳಿಸುವರಲ್ಲವೇ ? ಇರಲಿ; ಈಗ ನಮ್ಮ ವಿಷಯಕ್ಕೆ ಬರೋಣ'' ಎಂದರು ಬೈರಾಗಿ.

" ಏನದು ? ಬಿಡಿಸಿ ಹೇಳಿರಿ'' ಎಂದರು ವೇಮನ.

"ಅಭಿರಾಮಯ್ಯನವರ ಉದ್ದೇಶಿತ ರಸವಿದ್ಯೆಯಲ್ಲಿ ನೆರವಾಗುವುದು.'' ಎಂದರು ಬೈರಾಗಿ.

"ನನಗೆ ಬಂಗಾರ ಮಾಡುವಲ್ಲಿ ಆಸಕ್ತಿ ಇಲ್ಲವಲ್ಲ.'' ಉತ್ತರಿಸಿದರು ವೇಮನ.

"ಇಲ್ಲದಿರಬಹುದು. ಆದರೆ ಅಭಿರಾಮಯ್ಯನವರು ಕಳೆದ ಕೆಲವು ವರ್ಷ ಪ್ರಯತ್ನಿಸಿದರೂ ಸಫಲರಾಗಿಲ್ಲ. ಅವರ ಯೋಗ ಶಕ್ತಿಯು ಸಾಲದು. ನಿನ್ನ ಲಕ್ಷಣ ನೋಡಿದರೆ ನಿನ್ನಲ್ಲಿ ಆ ಶಕ್ತಿಯು ಶೀಘ್ರ ಕುದುರಬಹುದು. ಹಲವು ಮಂತ್ರ ಧ್ಯಾನ ಮಾಡಿದರೆ ಸಾಕು.'' ಎಂದರು ಬೈರಾಗಿ.

ಅಭಿರಾಮಯ್ಯನವರೂ ಕುತೂಹಲಭರಿತರಾಗಿ ವೇಮನರ ಅಭಿಪ್ರಾಯ ತಿಳಿಯಲು. ಕಾತರಸ್ಸಿ,

"ಒಪ್ಪಿಕೊಂಡು ಬಿಡಿ ಚಿಕ್ಕ ದೊರೆ .'' ಎಂದು ಆಗ್ರಹಿಸಿದರು.

"ದೈವೇಚ್ಛೆಯಂತೆ ಆಗಲಿ''ಎಂದು ಸಮ್ಮತಿ ಸೂಚಿಸುತ್ತ ತಲೆಯಲ್ಲಾಡಿಸಿದರು ವೇಮನ.

"ಭೇಷ್; ಬೇಷ್. ಶುಭಮಸ್ತು. ಕಲ್ಯಾಣಮಸ್ತು. ಹಾಗಾದರೆ, ನಾಳೆ ಬೆಳಿಗ್ಗೆ ಇಲ್ಲಿಗೆ ಬನ್ನಿ '' ಎಂದು ಆಮಂತ್ರಿಸಿದರು ಬೈರಾಗಿ.

ಮರುದಿನ ಬೆಳಿಗ್ಗೆ ವೇಮನ ಒಂಟಿಯಾಗಿ ಅಲ್ಲಿಗೆ ಹೋದರು. ಬೈರಾಗಿ ಬಾವಾ ಅವರ ಬರುವಿಕೆಯನ್ನೇ ನಿರೀಕ್ಷಿಸುತ್ತ ಧ್ಯಾನಮಗ್ನರಾಗಿದ್ದರು. ವೇಮನರು ಆಗಮಿಸಿದೊಡನೆ





ಅವರಿಗೆ ಅನುಷ್ಠಾನ ಕ್ರಮವನ್ನು ತಿಳಿಸಿ, ಹೇಳಿ, ಮಂತ್ರೋಪದೇಶ ಮಾಡಿದರು.ಧ್ಯಾನ ಕ್ರಮವನ್ನು ವಿವರವಾಗಿ ಬಣ್ಣಿಸಿ, ಮಂತ್ರಾರ್ಥವನ್ನೂ, ಮನವನ್ನು ಕೇಂದ್ರೀಕರಿಸುವ ನ್ಯಾಸವನ್ನೂ ತಿಳಿಸಿದರು. ಉಪದಿಷ್ಟರಾದ ವೇಮನರು ಅವರ ಪಾದ ಪದ್ಮಗಳಿಗೆರಗಿ ಮನೆಗೆ ಹಿಂತಿರುಗಿದರು. ಅಂದಿನಿಂದ ಅಭಿರಾಮಯ್ಯನವರೇ ವೇಮನರ ಧ್ಯಾನ ಅನುಷ್ಠಾನಗಳ ವ್ಯವಸ್ಥೆ ವಹಿಸಿಕೊಂಡರು. ಅಭಿರಾಮಯ್ಯನವರ ಸಾತ್ವಿಕ ನಡೆಯನ್ನೂ, ಸದುದ್ದೇಶಗಳನ್ನೂ, ಮೊದಲಿನಿಂದ ಮೆಚ್ಚಿಕೊಂಡಿದ್ದ ವೇಮನರ ಅತ್ತಿಗೆಯರಾದ ರಾಣಿ ಅನತಲ್ಲಿ ಮತ್ತು ಮಲ್ಲಮ್ಮನವರು ಈ ರಹಸ್ಯ ಸಾಧನೆಗೆ ಪ್ರೋತ್ಸಾಹಕರಾಗಿ ನಿಂತರು. ದೊರೆ ಭೀಮಲಿಂಗಾರೆಡ್ಡಿಯಾಗಲಿ, ಪ್ರಧಾನಿ ಅಳ್ಳಯ ವೇಮಾರೆಡ್ಡಿಯಾಗಲಿ ಇಂಥ ವಿಷಯಗಳಲ್ಲಿ ಆಸಕ್ತಿತೋರದೆ ಉದಾಶೀನರಾಗಿದ್ದರು

ಮುಂದೆ ಅನತಿ ಕಾಲಾವಧಿಯಲ್ಲಿ ಸಂಚಾರಿ ಬೈರಾಗಿ ಬಾಬಾ ಮರಳಿ ರಾಜಮಹೇಂದ್ರವರಂಗೆ ಬಂದನು. ಅವನು ವೇಮನರನ್ನು ಸಂಧಿಸಿ ಅವರ ಅನುಷ್ಠಾನದ ಅವಧಿ ಸಮಾಧಾನಕರವಾಗಿ ಮುಕ್ತಾಯಗೊಂಡಿದೆಯೆಂದು ತಿಳಿದು ಸಂತಸ ಗೊಂಡನು. ಅಭಿರಾಮಯ್ಯನವರನ್ನು ಬರಮಾಡಿಕೊಂಡು, ಈ ಮುನ್ನವೇ ವಿವರಿಸಿದಂತೆ ತಯ್ಯಾರಿಸಲು ಆದೇಶಿಸಿದನು. ಅಭಿರಾಮಯ್ಯನವರು, ಉಪ್ಪು ಡಬಗಳ್ಳಿಯ ಹಾಲು, ಸತುವಿನ ತಗಡನ್ನು ತಂದು, ಒಲೆ ಹೊತ್ತಿಸಿದರು. ಬೈರಾಗಿ ಮತ್ತು ವೇಮನರು ಅಲ್ಲಿಯೇ ಇದ್ದರು. ಕೊನೆಗೆ ದ್ರವವು ಒಂದು ಹದಕ್ಕೆ ಬಂದ ಮೇಲೆ ಸತುವಿನ ತಗಡಿನ ಮೇಲೆ ಸುರುವಿ ಬೈರಾಗಿಯ ಮುಖ ನೋಡಿದರು. ಬೈರಾಗಿ ವೇಮನರಿಗೆ ಸೂಚನೆ ನೀಡಿ, ಆ ಸತುವಿನ ತಗಡಿನ ಮೇಲ ಮನಸ್ಸು ಕೇಂದ್ರೀಕರಿಸಲು ಹೇಳಿದರು. ಆಗ ಸತುವಿನ ತುಂಡು ಬಂಗಾರದಂತೆ ಹೊಳೆಯ ಹತ್ತಿತು. ಅದರ ತೂಕವೂ ಬಂಗಾರದ ತೂಕಕ್ಕೆ ಸಮವಾಯಿತು. ಇದನ್ನು ಕಂಡು ಅಭಿರಾಮಯ್ಯನಿಗಾದ ಸಂತೋಷಕ್ಕೆ ಮಿತಿಯೇ ಉಳಿಯಲಿಲ್ಲ. ವೇಮನರು ಮುಗುಳು ನಕ್ಕರಷ್ಟೇ. ಬೈರಾಗಿ ವೇಮನರ ಬೆನ್ನು ತಟ್ಟಿದರು. ಮಾರನೆಯ ದಿನ ಬೈರಾಗಿ ಅಲ್ಲಿಂದ ಹೊರಟು ಹೋದನು. ಅಭಿರಾಮಯ್ಯನವರು ವೇಮನರ ನೆರವಿನಿಂದ ಆಗೀಗ ವಿವಿಧ ವಸ್ತುಗಳನ್ನು ಬಳಸಿ ಬಂಗಾರ ತಯ್ಯಾರಿಸುತ್ತಿದ್ದರು.

ಅದರಿಂದಾಗಿಯೇ ವೇಮನರು ರಸವಾದ ಕುರಿತು ಹೀಗೆ ಹಾಡಿದ್ದಾರೆ.

ಹಾಯಾಗಿರೆ ಇಹದಿ ಹೇಮಕಾರಕ ವಿದ್ಯೆ,
ಪರದಲ್ಲಿ ಸುಖಿಸಲು ಬ್ರಹ್ಮವಿದ್ಯೆ.
ಅನ್ಯವಿದ್ಯೆಯೆಲ್ಲ ಅರ್ಥಹೀನವಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಈ ಭೂಮಿಯ ಮೇಲೆ ಸುಖವನ್ನು ಅನುಭವಿಸಲು ಬಂಗಾರ ಮಾಡುವ ವಿದ್ಯೆ ಬೇಕು. ಆದರೆ ಬಂಗಾರದಿಂದ ದೊರೆಯುವ ಭೋಗವಸ್ತುಗಳು ಪರದಲ್ಲಿ ಪ್ರಯೋಜನಕ್ಕೆ ಬಾರವು. ಪರದಲ್ಲಿ ದೊರೆಯುವ ಸುಖವು ಇಂದ್ರಿಯಾತೀತ ಅವಸ್ಥೆಯಲ್ಲಿ ಪಡೆಯುವುದಾಗಿದೆ. ಅಲ್ಲಿ ವಿಷಯ ಭೋಗವಿರುವುದಿಲ್ಲ,. ಅಲ್ಲಿ ಸುಖ ಇಲ್ಲವೆ ಆನಂದವನ್ನು ಪಡೆಯಲು ಬ್ರಹ್ಮವಿದ್ಯೆ ಬೇಕು. ಈ ಉಭಯ ವಿದ್ಯೆಗಳನ್ನುಳಿದು ಅನ್ಯ ವಿದ್ಯೆಗಳೆಲ್ಲ ಪ್ರಯೋಜನಕ್ಕೆ ಬಾರವು.

ರಸವಾದಿಗಳಿಗೆ ಒಂದು ಎಚ್ಚರಿಕೆಯ ಗಂಟೆಯನ್ನೂ ಬಾರಿಸಿದ್ದಾರೆ.

ಹೊನ್ನು ಗೆಯ್ಯು ವಿದ್ಯೆ ಹೊಳೆದ ಮನುಜರೆಲ್ಲ,
ವ್ಯಥೆ ಪಡುವರಂಥ ವಿದ್ಯೆಯಿಂದ.
ತತ್ತ್ವ ತಿಳಿದ ಬಳಿಕ ತನಗೆ ಚಿಂತೆಯಿಲ್ಲ.
ವಿಶ್ವದಾಭಿರಾಮ ಕೇಳು ವೇಮ,

ರಸಸಿದ್ಧರು ನಿಮ್ನ ಧಾತುಗಳನ್ನು ಬಂಗಾರವನ್ನಾಗಿ ಮಾಡುವರು. ಸತುವು, ಲೋಹ, ತವರು, ತಾಮ್ರ, ಪಾದರಸಗಳಿಂದ ಬೆಳ್ಳಿ, ಬಂಗಾರ ಮಾಡುತ್ತಾರೆ. ಇಂಥ ಬಂಗಾರ ಮಾಡುವ ವಿದ್ಯೆಯಿಂದ ಅವರು ಇಹದಲ್ಲಿ ಸುಖ ಪಡುವುದೇನೋ ನಿಜ. ಆದರೆ ಇಹದ ಸುಖವು ನಿತ್ಯವಾದುದಲ್ಲ. ಸುಖದ ಬೆನ್ನಿಗೆ ದುಃಖವೂ ಉಂಟು. ಈ ಇಹದ ಬಂಧನವನ್ನು ಕೊಚ್ಚಿಮುಂದೆ ಹೋಗುವಾಗ ತುಂಬಾ ವ್ಯಥೆಯಾಗುತ್ತದೆ, ಕೊನೆಗೆ ಪರಿಶ್ರಮಿಸಿ ದೈವದ ಕರುಣೆಯಿಂದ, ಗುರುವಿನ ಮಾರ್ಗದರ್ಶನದಿಂದ ತತ್ತ್ವವನ್ನು ತಿಳಿದರೆ ಸಾಕು. ತನಗಾವ ಚಿಂತೆಯೂ ಇರದು.

ತತ್ತ್ವವರಿತಿರುವನು ದೈವವರಿಯುತಿಹನು.
ಸರ್ವ ಕಾಮಗಳನು ಸಾವ ಹೊಡೆವ.
ಬಾಳೆ ನುಂಗುವವನು ವಿಷವ ನುಂಗಬಹುದೆ?
ವಿಶ್ವದಾಭಿರಾಮ ಕೇಳು ವೇಮ.

ತತ್ತ್ವವರಿತ ಬಳಿಕ ತನಗೆ ಚಿಂತೆಯಿಲ್ಲ. ಏಕೆಂದರೆ, ತತ್ ಎಂದರೆ ಪರಮ ಪದ. ನಿರ್ಗುಣ ಬ್ರಹ್ಮ. ಹಾಗಾಗಿ, ತತ್ತ್ವವನ್ನು ಅರಿತಿರುವವನು ತನ್ನ ಆಗು ಹೋಗುಗಳನ್ನು ನಿಯಂತ್ರಿಸುವ ದೈವವನ್ನೂ ಅರಿಯುತ್ತಾನೆ. ಆ ಸ್ಥಿತಿಗೇರಿದ ಮನಸ್ಸಿನ ಕಾಮನೆಗಳೆಲ್ಲ ಇಲ್ಲವಾಗುತ್ತವೆ. ಹೊನ್ನು, ಹೆಣ್ಣು ಮತ್ತು ಮಣ್ಣುಗಳೆಂಬ ಈಷಣಗಳಿಂದ ದೂರವಾಗುತ್ತಾನೆ. ಆಗ ಅವನು ತನ್ನಲ್ಲಿ ತಾನು ಏಕಾಂತದಲ್ಲಿ ಆತ್ಮರತನಾಗಿ ಆನಂದ ಸಾಗರದಲ್ಲಿ ಮಗ್ನನಾಗಿರುತ್ತಾನೆ. ಇದು ಬಾಳೆಯನ್ನು ನುಂಗಿದಂತೆ. ಅವನು ವಿಷಯ ಭೋಗವೆಂಬ ವಿಷವನ್ನೇಕೆ ನುಂಗುತ್ತಾನೆ?

ಆದರೆ, ಒಂದು ಕಿವಿ ಮಾತು.

ಇಹನಲ್ಲಿ ಸುಖವು ಈಡೇರದು ಎಂದು
ಪರವ ನಂಬಿ ತಾನು ಬದುಕಬಹುದೆ ?
ಆದಿಗಿರದ ಸುಖವು ಅಂತ್ಯದಲ್ಲಿ ಬರದು.
ವಿಶ್ವದಾಭಿರಾಮ ಕೇಳು ವೇಮ

ಸುಖ ಸಂಗವು ಸತ್ತ್ವಗುಣದ ಸೂಚಕ. ಮನಸ್ಸು ಸತ್ತ್ವದಲ್ಲಿ ನೆಲೆಸಬೇಕು. ಮನಸ್ಸು ಸಾಧನದಿಂದ ಊರ್ಧ್ವಸ್ತರ ತಲುಪಿ ಸೂಕ್ಷ್ಮವಾಗುವ ವರೆಗೆ ಅದು ಇಹದ ಸ್ಥೂಲವಸ್ತು ಭೋಗದಲ್ಲಿಯೇ ಕ್ರೀಡಿಸುತ್ತ ಸುಖ ಪಡೆಯುತ್ತದೆ. ಇಂಥ ಸುಖಾಪೇಕ್ಷೆಯೂ ಆ ಮಟ್ಟದಲ್ಲಿ ಸಾತ್ವಿಕಾಂಶವೇ ಸರಿ. ಆದರೆ ಮೊದಲು ಅಜ್ಞಾನಿಯಾಗಿ, ಆಲಸಿಯಾಗಿ ಸುಖವು ಈಡೇರದು, ಎಂದು ಬಗೆದು, ಸತ್ತಮೇಲೆ ಪರಲೋಕವಿದೆ; ಅಲ್ಲಿ ಸುಖ ಪಡೆಯಬಹುದು; ಎಂದು ನಂಬಿ ಬದುಕಬಹುದೇ? ಸುಖ ಸಂಗವೆಂಬ ಸಾತ್ತ್ವಿಕ ಗುಣವು ಮೊದಲು ಇಲ್ಲದಿದ್ದರೆ ಅದು ಕೊನೆಗೂ ಬಾರದು.

ಈ ಸಂದರ್ಭಕ್ಕನುಸರಿಸಿ ಒಂದೆರಡು ರಸವಿದ್ಯೆಯ ಪದ್ಯಗಳನ್ನು ಅವಲೋಕಿಸುವಾ.





ಉಪ್ಪು ಕಳ್ಳಿಹಾಲು ಊರೊಳಗಿರುವಾಗ,
ಕೊರತೆ ಕೊರತೆ ಎನುವ ಕಾಪು ಜನರೆ !
ಸತುವ ಮೇಳವಿಸುತ ಸಾಧಿಸಲಾರರೇ ?
ವಿಶ್ವದಾಭಿರಾಮ ಕೇಳು ವೇಮ.

ಉಪ್ಪು ಹುಣಸೆ ಹಣ್ಣು ಊರೊಳಗಿರುವಾಗ,
ಕ್ಷಾಮವೆಲ್ಲಿ ಬಂತು 'ಕಾಪು' ಜನರೆ ?
ತಾಳಕರಿಯರೇನು ? ತವರವರಿಯರೇನು ?
ವಿಶ್ವದಾಭಿರಾಮ ಕೇಳು ವೇಮಮ.

ತಾಳಕ ಎಂದರೆ 'ಹಳದಿ' orpiment gold pigment, As2 S3=trisulplate of Arsenic, locally available as yellow brilliant mass.ಸ್ವರ್ಣ ವರ್ಣ ದ್ರವ್ಯ.

* * * *

ಒಂದೆಡೆ ವೇಮನರು ಅಭಿರಾಮಯ್ಯನ ಸಂಗದಿಂದ ಸ್ವರ್ಣವಿದ್ಯೆಯಲ್ಲಿ ಆಸಕ್ತರಾಗಿದ್ದರೂ ಅವರ ಕೋಮಲ, ಮೃದು ಸ್ವಭಾವವು ಸೋದರ ಸಂಬಂಧಿಯಾದ ಅಳ್ಳಯ ವೇಮಾರೆಡ್ಡಿ-ಮಲ್ಲಮ್ಮರ ಪುತ್ರಿ ಕೃಷ್ಣಾಳ ಬಾಲಲೀಲೆಯಲ್ಲಿ ಮಗ್ನವಾಗಿತ್ತು. ಅವಳ ಆಗ್ರಹಕ್ಕೆ ಮಣಿದು ಆ ಎಳೆಯ ವಯಸ್ಸಿನಲ್ಲಿಯೇ ಆಕೆಗೆ ಸಂಗೀತ ಪಾಠ ಆರಂಭಿಸಿದರು.

ಸರಿಗಮ। ಪಧ। ನಿಸ ॥
ಸನಿಧಪ । ಮಗ । ರಿಸ ॥

ಸರಿಗಮ ಸರಿಗಮ । ಸರಿಗಮ ಪಧನಿಸ ॥
ಸನಿಧಪ ಸನಿಧಪ । ಸನಿಧಪ ಮಗರಿಸ ॥

ಸರಿಗಮ ಸರಿ ಸರಿ । ಸರಿ ಗಮ ಪಧನಿಸ ॥
ಸನಿಧಮ ಸನಿಸನಿ । ಸನಿಧಪ ಮಗರಿಸ ॥

ಎಂಬ ಪ್ರಾರಂಭಿಕ ಸರಳ ವರಸೆಗಳನ್ನು ಹೇಳಿಕೊಟ್ಟು ಅಭ್ಯಾಸ ಮಾಡಹಚ್ಚಿದರು. ರಾಗ, ತಾಳ ಮತ್ತು ಲಯಗಳ ಮಥಿತಾರ್ಥವನ್ನೂ ತಿಳಿಸುತ್ತಿದ್ದರು. ಸಂಗೀತ ಪಾಠವಿಲ್ಲದಾಗ ಅವಳಿಗೆ ಕಥೆಗಳನ್ನು ಹೇಳುತ್ತಿದ್ದರು. ಅವಳ ಆಟಪಾಟಗಳಲ್ಲಿ ತಾವೂ ಸೇರಿ ಆನಂದಿಸುತ್ತಿದ್ದರು. ಅವಳ ಕುತೂಹಲದ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ನೀಡುತ್ತಿದ್ದರು. ಕೃಷ್ಣಾ ಶಿಶುವಾಗಿದ್ದಾಗ ವೇಮನರು ಸೋಮಶೇಖರರಗುರುಕುಲದಲ್ಲಿಯೇ ಇದ್ದರಾದರೂ ಆಗೀಗ ಬಂದು ಹೋಗುತ್ತಿದ್ದರು. ಅವಳು ಮಗುವಾಗಿರುವಾಗ ಎತ್ತಿ ಮುದ್ದಿಸುತ್ತಿದ್ದರು.

ಮನೆಯಲ್ಲಿ ಕೃಷ್ಣಾಳೊಂದಿಗೆ ಆಟ ಪಾಟ, ಸಂಗೀತ ಪಾಠಗಳಲ್ಲಿ ನಿರತರಾಗುತ್ತಿದ್ದ ವೇಮನ ಉಳಿದ ವೇಳೆಯಲ್ಲಿ ಅರಮನೆಯ ಸ್ವರ್ಣಕಾರ್ಯಗಾರದ ಉಸ್ತುವಾರಿಯನ್ನೂ ನೋಡಿಕೊಳ್ಳತೊಡಗಿದರು. ಹೀಗಾಗಿ ಅಭಿರಾಮಯ್ಯನ ನಂಟು ಇನ್ನೂ ಗಾಢವಾಯಿತು. ಅವನ ಆಗ್ರಹದ ಬೇಡಿಕೆಗಳನ್ನು ಹಗುರವಾಗಿ ತೆಗೆದುಹಾಕುವಂತಿರಲಿಲ್ಲ.

-----

# ೬. ವಿಶ್ವದಾಳ ಸಂಗ

ಒಂದು ಸಾಯಂಕಾಲ ಅಭಿರಾಮಯ್ಯನವರೊಡನೆ ತಿರುಗಾಡಲು ಹೋದಾಗ ನಟರಾಜ ದೇವಾಲಯದೆದುರು ನೃತ್ಯ- ಸಮಾರಂಭವೊಂದು ನಡೆಯುವುದರಲ್ಲಿತ್ತು. ಕಲೋಪಾಸಕರಾದ ವೇಮನರ ಲಕ್ಷ್ಯವು ಅತ್ತ ಹೊರಳಿತು. ಸಂಗಡಿಗ ಅಭಿರಾಮಯ್ಯನವರೂ ಅದನ್ನು ನೋಡೋಣವೇ ? ಎಂದು ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ಹಸಿದ ಕುದುರೆಗೆ ಹುಲ್ಲು ತೋರಿಸಿದಂತಾಯಿತು. ಕಾಲುಗಳು ತಾವೇ ಅಲ್ಲಿಗೆ ಕರೆತಂದವು. ನಾಡಿನ ಖ್ಯಾತ ನಟಿ ವಿಶ್ವದಾಳ ನೃತ್ಯವೆಂದ ಮೇಲೆ ಜನ ಸಂದಣಿ ಭಾರಿಯಾಗಿತ್ತು. ಆದರೆ ಸೋಜಿಗವೆಂದರೆ ಕಾರ್ಯಕ್ರಮದ ಪ್ರಾರಂಭಕ್ಕೆ ಏನೋ ಅಡಚಣೆಯಾಗಿತ್ತು. ಸಹನೆ ಕಳೆದುಕೊಂಡ ಪ್ರೇಕ್ಷಕರು ಸೀಟಿ ಊದಿದರು. ಕಿರುಚಿದರು. ಆಗ ನರ್ತಕಿಯ ತಾಯಿ ಅಟ್ಟವೇರಿ ಬಂದು 'ಮಹನೀಯರೇ ! ಶಾಂತರಾಗಿರಿ. ನಮ್ಮ ಗೀತಕಾರರು ಬಂದಿಲ್ಲ. ಕಾರಣ ಸಭಿಕರಲ್ಲಿ ಯಾರಾದರೂ ನೃತ್ಯಕ್ಕೆ ಮೇಳವಿಸಿ ತಾಳಕ್ಕನುಗುಣವಾಗಿ ರಾಗಾಲಾಪನೆ ಮಾಡಬಲ್ಲವರಿದ್ದರೆ ಮುಂದೆ ಬಂದು ಸಹಕರಿಸಬೇಕು. ಅವರಿಗೆ ಸೂಕ್ತ ಸಂಭಾವನೆಯನ್ನು ನೀಡಲಾಗುತ್ತದೆ' ಎಂದು ನುಡಿದರು. ಪ್ರಸಿದ್ಧ ನರ್ತಕಿ ವಿಶ್ವದಾಳೊಂದಿಗೆ ರಾಗಾಲಾಪನೆಯೇ ? ಛೇ ! ಛೇ! ನಮಗಂತೂ ಆಗದು; ಎಂದು ಅಳ್ಳೆದೆಯ ಕಲಾವಿದರು ಕೈ ಚೆಲ್ಲಿ ಕುಳಿತರು. ಈ ಸ್ಥಿತಿಯಲ್ಲಿ ಅಭಿರಾಮಯ್ಯನವರು ವೇಮನರ ಕಿವಿಯಲ್ಲಿ, "ಜನರ ಕುತೂಹಲ ತುಂಬಾ ಹೆಚ್ಚಾಗಿದೆ. ತಾವೇಕೆ ಮುಂದೆ ಬರಬಾರದು?" ಎಂದು ಸೂಚಿಸಿದರು. ಆಗ ವೇಮನರು, "ಜನರಿಗೆ ಆನಂದವಾಗುವಂತಿದ್ದರೆ ಆಗಲಿ" ಎಂದು ಸಮ್ಮತಿ ನೀಡಿದರು. ಅಭಿರಾಮಯ್ಯನವರು, ಸಂಘಟಕರನ್ನು ಕರೆದು, "ರಾಗಾಲಾಪನೆಗೆ ದೊರೆಮಗ ಒಪ್ಪಿದ್ದಾರೆ. ಹೆಸರು ಘೋಷಿಸಬಹುದು," ಎಂದರು ಸಾರ್ವಜನಿಕ ಸಮಾರಂಭಗಳಲ್ಲಿ ಅದು ವರೆಗೆ ಕಾಣಿಸಿಕೊಳ್ಳದ, ಏಕಾಂತದ ಭಾವಜೀವಿ ವೇಮನರ ಹೆಸರು ಕೇಳಿ, ಜನರ ಕುತೂಹಲ ಇನ್ನೂ ಹೆಚ್ಚಾಯಿತು. ನವ ಯುವಕ ಕಲಾಕಾರ; ಅದೂ ರಾಜವಂಶೀಯ, ಎಂದಾಗ ಎಲ್ಲರ ಕಣ್ಣು ವೇಮನರತ್ತ ತಿರುಗಿದವು. ಎಲ್ಲರಿಗಿಂತ ಹೆಚ್ಚಾಗಿ ನೃತ್ಯ ಕಲಾವಿದೆ ವಿಶ್ವದಾಳಂತೂ ಬೆರಗುಗಣ್ಣುಗಳಿಂದ ವೇಮನರತ್ತ ದೃಷ್ಟಿ ಬೀರಿದಳು. 'ಅಬ್ಬಾ! ಎಂಥ ಏರುಜವ್ವನ! ಏನು ಅಂಗ ಸೌಷ್ಟವ ! ಮನಮೋಹಕ ರೂಪ! ಕಲೆಯ ಪರಿಣತಿ ಬೇರೆ. ಬಂಗಾರಕ್ಕೆ ಕುಂದಣ ಲೇಪಿಸಿದಂತೆ. ತನ್ನ ಸಾಥಿ ಹಾಡುಗಾರನ ಜೊತೆ ನಾಟ್ಯ ಪ್ರದರ್ಶನವನ್ನು ಚೆನ್ನಾಗಿಯೇ ಪ್ರದರ್ಶಿಸಬೇಕು. ಕಲಾಭಿಮಾನಿಗಳಿಂದ ಸೈ ಸೈ ಎನ್ನಿಸಿಕೊಳ್ಳಬೇಕು. ಅವರು ನನ್ನ ಕಲೆಯನ್ನು ಮೆಚ್ಚಿಕೊಳ್ಳುವುದಂತೂ ನಿಜ. ಜೊತೆಗೆ ನನ್ನನ್ನು ಮೆಚ್ಚಿಕೊಂಡರೆ......" ಎಂದು ಗುನುಗುನಿಸುತ್ತ ಮೈಮರೆತಳು.

ವೇಮನರು ತಮ್ಮ ಛಾತ್ರ ಜೀವನಾರಭ್ಯ ಸಂಗೀತದ ಆಳ ಅಭ್ಯಾಸಿಗಳಾಗಿದ್ದರೇನೋ ನಿಜ. ಆದರೆ ಅವರ ಈ ವಿದ್ಯಾರ್ಜನೆಯ ಗುರಿಯು ಸಾರ್ವಜನಿಕ ಪ್ರದರ್ಶನಕ್ಕಾಗಿ ಎಂದಿರಲಿಲ್ಲ. ಕೇವಲ ಆತ್ಮ ಸಂತುಷ್ಟಿಗಾಗಿ ಅವರ ವಿದ್ಯೆ ಇದು ವರೆಗೆ ಮೀಸಲಾಗಿತ್ತು. ಕೇವಲ ಆತ್ಮ ಸಂತೋಷಕ್ಕಾಗಿ ಮರ್ಯಾದಿತವಾದರೆ, ಈ ವಿದ್ಯೆಗೆ ಒಂದು ಪಾವಿತ್ರ್ಯ ಬರುತ್ತದೆ ಎಂಬ ವಿಚಾರಗಳು ವೇಮನರ ಮನದಲ್ಲಿ ಸುಳಿದು ಹೋದವು. ಅವರು ಸುತ್ತಲೂ ನೋಡಿದರು. ಜನರ ತವಕ. ಅಭಿರಾಮಯ್ಯನ ಆತುರದ ಪ್ರತೀಕ್ಷೆ. ಎಲ್ಲಕ್ಕಿಂತ ಹೆಚ್ಚಾಗಿ ವಿಶ್ವದಾಳು ತನ್ನ





ಅನುಪಮ ಸಾಥಿಗಾಗಿ ಎದುರು ನೋಡುತ್ತಿದ್ದ ಚಾತಕ ಪಕ್ಷಿಯಂಥ ನಿರೀಕ್ಷೆ.

ವೇಮನರು ಸುತ್ತಲೂ ದೃಷ್ಟಿ ಹಾಯಿಸಿದರು. ಶ್ರೋತೃಗಳ ಹೃದಯಮಿಡಿತ ಜೋರಾಗಿದ್ದವು. ವಾತಾವರಣವು ಗಂಧರ್ವ ಲೋಕವನ್ನು ನೆನಪಿಗೆ ತರುತ್ತಿತ್ತು. ಅಷ್ಟೊಂದು ಪ್ರಸನ್ನತೆ, ಅಷ್ಟೊಂದು ಗಂಭೀರತೆ.

ಅಷ್ಟರಲ್ಲಿ ವಾದ್ಯಗಾರರು ವಾದನದ ಶ್ರುತಿ ಪ್ರಾರಂಭಿಸಿದರು. ಕಾರ್ಯಕ್ರಮದ ಪ್ರಾರಂಭವನ್ನು ಸಾರಲಾಯಿತು. ವೇಮನರು ರಾಗಾಲಾಪಾನೆಯನ್ನು ರಾಗದೊಂದಿಗೆ ಶುರು ಮಾಡಿದರು. ವಿಶ್ವದಾ ಸಹ ತಾಳ ಲಯಬದ್ಧವಾಗಿ ನೃತ್ಯವನ್ನಾರಂಭಿಸಿ ನಟರಾಜನಿಗೆ ನಮಿಸಿದಳು. ನೃತ್ಯವನ್ನು ಹಾವ ಭಾವ ತುಂಬಿ ಪ್ರದರ್ಶಿಸಿದಳು. ಪ್ರೇಕ್ಷಕರು ಅವಳ ನೃತ್ಯದ ಭಾವ ಭಂಗಿಗಳನ್ನೂ ಯುವಕ ವೇಮನರ ಸುಮಧುರ ಶ್ರೀಕಂಠದಿಂದ ಹೊರಸೂಸುವ........ಸುಮಧುರ ರಾಗಾಲಾಪನೆಯನ್ನೂ ನೋಡಿ, ಕೇಳಿ ಮಂತ್ರಮುಗ್ಧರಾದರು. ತಾವು ಯಾವುದೋ ಗಂಧರ್ವಲೋಕದಲ್ಲಿ ವಿಹರಿಸುವಂತೆ ಆನಂದತುಂದಿಲರಾದರು. ಕೇಕೆ ಚಪ್ಪಾಳೆಗಳ ಲಘು ಭಾವನೆಗಳೆಲ್ಲ ಉಡುಗಿ, ಗೋಣು ಹಾಕುವುದು, ತಾಳ ಕುಟ್ಟುವುದು ನಡೆಯಿತು. ಒಂದು ಚೀಜ ಆದ ಕೂಡಲೇ ಇನ್ನೊಂದು ಚೀಜಿಗಾಗಿ ಒತ್ತಾಯದ ಕರೆಗಳು ಬಂದವು. ನೃತ್ಯವೂ ಮುಂದುವರಿಯಿತು, ರಾಗಾಲಾಪಾನೆಯೂ ಮುಂದುವರಿಯಿತು. ಜನರಿಗೆ ವೇಳೆ ಕಳೆದುದೇ ಗೊತ್ತಾಗಲಿಲ್ಲ. ಕೊನೆಗೆ ನರ್ತಕಿಯೇ ಸೋತು, ಹಾಡುತ್ತಿರುವ ವೇಮನರ ಚರಣಗಳಲ್ಲಿ ತಲೆಯಿಟ್ಟು, ಶರಣಾದಳು. ವೇಮನ ಕೈ ಹಿಡಿದು ಎಬ್ಬಿಸಿದರು. ವಿಶ್ವದಾಳ ತಾಯಿ ಮೊದಲು ಘೋಷಿಸಿದ ಮೇರೆಗೆ ವೇಮನರಿಗೆ ನಾಣ್ಯಗಳ ಚೀಲ ಒಪ್ಪಿಸಿದಳು. ವೇಮನರು ಮುಗುಳ್ನಕ್ಕು ಸಂಭಾವನೆಯನ್ನು ಸ್ವೀಕರಿಸಿದರಾದರೂ, ಆ ಚೀಲದಲ್ಲಿದ್ದ ನಾಣ್ಯಗಳನ್ನೆಲ್ಲ ವಿಶ್ವದಾಳ ಸೆರಗಿನಲ್ಲಿ ಸುರುವಿದರು.

ಇದನ್ನು ಕಣ್ಣಾರೆ ಕಂಡ ವಿಶ್ವದಾಳ ತಾಯಿ ವಿಸ್ಮಯಚಕಿತಳಾದಳು. ಅವಳು ವೇಮನರನ್ನು ಕುರಿತು, "ದೊರೆ , ಈ ಬಡವರ ನಿವಾಸಕ್ಕೊಮ್ಮೆ ಪಾದವಿಟ್ಟು ನಮ್ಮನ್ನು ಕೃತಾರ್ಥರನ್ನಾಗಿಸಬೇಕು" ಎಂದು ಬಿನ್ನವಿಸಿದಳು.

ವಿಶ್ವದಾಳಿಗೆ ಹರ್ಷಾತಿರೇಕದಿಂದ ಕಂಠ ಉಬ್ಬಿ ಮಾತುಗಳು ಹೊರಡಲಿಲ್ಲ. ಕೇವಲ ಆನಂದಾಶ್ರುಗಳ ಮಳೆ ಸುರಿದು ಬೀಳ್ಕೊಳ್ಳುವಾಗ ಮತ್ತೊಮ್ಮೆ ಪಾದ ಮುಟ್ಟಿ ನಮಸ್ಕರಿಸಿದಳು.

ಅಭಿರಾಮಯ್ಯನವರೊಡನೆ ಮನೆಗೆ ಮರಳಿದರು. ಹಾದಿಯಲ್ಲಿ ಅಭಿರಾಮಯ್ಯನವರು 'ಅದ್ಭುತ ಅದ್ಭುತ!' ಎಂದು ಸಂಗೀತ-ನೃತ್ಯಗಳ ಬಗ್ಗೆ ಪ್ರಶಂಶೆ ವ್ಯಕ್ತಪಡಿಸಿದರೇ ಹೊರತು ತಮ್ಮ ಪ್ರಶಂಸೆಯನ್ನು ಶಬ್ದಗಳಲ್ಲಿ ಹಿಡಿಯದಾದರು.

ವೇಮನರು ತಮ್ಮ ಜೀವನದಲ್ಲಾದ ವಿಶೇಷ ಘಟನೆ ನಡೆದಿಲ್ಲವೇನೋ ಎಂಬಂತೆ ಶಾಂತಚಿತ್ತರಾಗಿದ್ದರು. ಪ್ರಸನ್ನ ಮುಖಿಗಳಾಗಿದ್ದರು. ರಾತ್ರಿ ಗಾಢ ನಿದ್ರೆ ಹೊಂದಿ, ಬೆಳಿಗ್ಗೆ ತಮ್ಮ ಪೂರ್ವದ ಚೈತನ್ಯದಿಂದ ಯೋಗ ಸಾಧನದ ಅಭ್ಯಾಸದಲ್ಲಿ ನಿರತರಾದರು. ಕೃಷ್ಣಾಳೊಂದಿಗೆ ಚಿನ್ನಾಟ, ಮುದ್ದಾದ ಸಂಭಾಷಣೆಗಳು, ಅವಳಿಗೆ ಪ್ರಾರಂಭದ ಸಂಗೀತ ಪಾಠಗಳು ಎಂದಿನಂತೆ ನಡೆದವು.

ಇತ್ತ ವಿಶ್ವದಾಳ ಮನಸ್ಥಿತಿ ವಿಕ್ಷುಬ್ಧವಾಯಿತು. ಕಣ್ಣಿಗೆ ನಿದ್ರೆ ಬಾರದು. ಮನಸ್ಸು ಕನಸಿನಲ್ಲಿಯೂ ಕನವರಿಸುತ್ತಿತ್ತು. ಎಷ್ಟೋ ದಿನ ಧಾರಣ, ಧ್ಯಾನ ಮಾಡಿ ಇಷ್ಟ ದೇವತೆಯನ್ನು ಬೇಕೆಂದಾಗ ತನ್ನೊಳಗೆ ನೋಡಬಲ್ಲ ಯೋಗಿಣಿಯಂತೆ, ಅವಳು ಸದಾ ಯುವಕ ಕಲಾವಿದ ದೊರೆಕುಮಾರನ ಸುಂದರ ಆಕರ್ಷಕ ಮುಖವನ್ನು ಕಾಣ ತೊಡಗಿದಳು. ಕನಸಿನಲ್ಲಿ ಕನವರಿಸತೊಡಗಿದಳು. ಅವಳಿಗೆ ತನ್ನ ಕಲಾಪ್ರೌಢಿಮೆಯೆಲ್ಲ ವೇಮನರ ಪಾದಕ್ಕರ್ಪಿಸಬೇಕಾದ ಪುಷ್ಪವಷ್ಟೆ ಎನಿಸಿತು. ಸರಿಯಾಗಿ ಊಟ ಮಾಡಲಿಲ್ಲ. ಇತರರೊಂದಿಗೆ ಚಿಕ್ಕಂದವಾಡಲಿಲ್ಲ. ಸದಾ ಗಂಭೀರ ಮೌನ ತಾಳಿ, ನಟರಾಜ ಮೂರ್ತಿಯೆದುರು ಏಕಾಂತದಲ್ಲಿ ಕುಳಿತುಬಿಡುತ್ತಿದ್ದಳು. ಇದನ್ನು ಕಂಡ ಅವಳ ತಾಯಿ ಗಾಬರಿಯಾದಳು. ಮಂತ್ರವಾದಿಗಳ ಮೊರೆ ಹೊಕ್ಕಳು. ಪ್ರಯೋಜನವಾಗಲಿಲ್ಲ. ಕೊನೆಗೆ ಮಾನಸ ಶಾಸ್ತ್ರಜ್ಞನೊಬ್ಬನು ವಿಶ್ವದಾಳನ್ನು ಕೂಲಂಕಷವಾಗಿ ಪರೀಕ್ಷಿಸಿ, "ಇವಳಿಗೆ ಯಾವುದೋ ವ್ಯಕ್ತಿಯ ಬಗ್ಗೆ ಗಾಢ ಪ್ರೇಮ ಕುದುರಿದೆ. ಅದರಿಂದ ಮನಸ್ಸು ವಿಹ್ವಲವಾಗಿದ್ದು, ಆ ಪುರುಷನ ಸಂಗ ಸಹವಾಸ ದೊರೆತರೆ, ಪೂರ್ಣ ಗುಣಮುಖಳಾಗುತ್ತಾಳೆ. ಭಯಕ್ಕೆ ಕಾರಣವಿಲ್ಲ" ಎಂದು ಹೇಳಿದರು.

ವಿಶ್ವದಾ ಗಾಢ ಚಿಂತೆಯಲ್ಲಿ ಮುಳುಗಿದಳು. ದೊರೆ ಮಗನನ್ನು ಕರೆಯುವುದು ಹೇಗೆ? ತಾನೇ ಸ್ವತಃ ಅರಮನೆಗೆ ಹೋಗುವಂತಿಲ್ಲವಲ್ಲ ಎಂದು ಯೋಚಿಸಿದಳು, ವಿಶ್ವದಾಳ ತಾಯಿ. ಹಾಗಾಗಿ ಇರುವ ಒಂದೇ ಮಾರ್ಗವೆಂದರೆ, ಪರಿಚಿತ ಅಭಿರಾಮಯ್ಯನವರನ್ನು ಸಂಪರ್ಕಿಸಿ, ಮನೋವೈದ್ಯರ ಸಲಹೆಯನ್ನು ತಿಳಿಸುವುದೆಂದು ನಿಶ್ಚಯಿಸಿದಳು. ಅವರಲ್ಲಿ ಹೋಗಿ, ಇರುವ ಪರಿಸ್ಥಿತಿಯನ್ನು ವಿವರಿಸಿ, ತನ್ನ ಮಗಳ ಬದುಕಿಗೆ ದಾರಿ ತೋರಬೇಕೆಂದು ಬೇಡಿಕೊಂಡಳು.

ಸಾಧು-ಸಂತರು, ಬಾವಾ-ಬೈರಾಗಿಗಳ ಸಂಗದಿಂದ ವಿವೇಕ ಜಾಗ್ರತನಾದ ಅಭಿರಾಮಯ್ಯನವರೆದುರು ದೊಡ್ಡ ಸವಾಲೇ ಎದುರಾಯಿತು. ಈ ಬಗ್ಗೆ ವೇಮನರಿಗೆ ಏನೆಂದು ಸೂಚಿಸುವುದು? ದೇವದಾಸಿಯರ ಮನೆಗೆ ಹೋಗುವುದಾಗಲಿ, ಅವರ ಸಂಗ ಬೆಳೆಸುವದಾಗಲಿ, ವಿಹಿತವೇ? ಎಂಬ ಪ್ರಶ್ನೆಗಳು ಮನದಲ್ಲಿ ಎದ್ದವು. "ಎಷ್ಟಾದರೂ ವೇಮನರು ಕೊಂಡವೀಡು ರಾಜ್ಯದ ಹಿಂದಿನ ದೊರೆ ಕುಮಾರಗಿರಿ ವೇಮಾರೆಡ್ಡಿಯ ಮಗ. ಕುಮಾರಗಿರಿ ದೊರೆಗೆ ಲಕುಮಾದೇವಿ ಎಂಬ ಉಪಪತ್ನಿ ಇದ್ದುದೂ ಸರ್ವವೇದ್ಯ. ಅವರು ಸಂಸ್ಕೃತ ವಿದ್ವಾಂಸರಾಗಿದ್ದರು. ಅಷ್ಟೇ ಆಳ ಕಲೋಪಾಸಕರೂ ಆಗಿದ್ದರು. ಯುವಕ ವೇಮನರಿಗೆ ಈ ಸಂಗತಿಯು ಅವರಿವರಿಂದ ಕೇಳಿ ತಿಳಿದ ಸಂಗತಿಯೇ. ಈಗಂತೂ ನಾಡಿನ ಖ್ಯಾತ ನೃತ್ಯವಿಶಾರದೆ ಯುವತಿ ವಿಶ್ವದಾಳ ಸಾವು ಬದುಕಿನ ಪ್ರಶ್ನೆ ಇದೆ. ಆದ್ದರಿಂದ ವಿಶ್ವದಾಳ ಮನೋವ್ಯಾಧಿ ಗುಣವಾಗಲು ವೇಮನರು ಇವರ ಮನೆಗೆ ಹೋದರೆ ಅಂಥ ಪ್ರಮಾದವಾಗದು" ಎಂದು ನಿರ್ಧರಿಸಿ ಅವರು ಪ್ರಸನ್ನವದನರಿರುವ ಸಮಯಕ್ಕೆ ವೇಮನರೆದುರು ವಿಷಯ ಪ್ರಸ್ತಾಪಿಸಿದರು. ಅಚ್ಚರಿಯೆಂಬಂತೆ ವಿಶ್ವದಾಳ ಮನೋವ್ಯಾಧಿಯ ವಿಷಯ ತಿಳಿದು, ಭಾವ ಜೀವಿ ವೇಮನರು ಅವಳನ್ನು ಕಾಣಲು ಕೂಡಲೇ ಒಪ್ಪಿದರು. ಅಭಿರಾಮಯ್ಯನವರು ವೇಮನ ಅವರ ಒಪ್ಪಿಗೆಯನ್ನು ವಿಶ್ವದಾಳ ತಾಯಿಗೆ ಕೂಡಲೇ ತಿಳಿಸಿದರು.

ಈ ಸುದ್ದಿಯಿಂದ ವಿಶ್ವದಾಳ ಮನೆಯಲ್ಲಿ ವಿದ್ಯುತ್ಸಂಚಾರವಾದಂತಾಯಿತು. ಅವಳ ಮುದುಡಿದ ಮುಖಕಮಲವು ಅರಳಿ ಪ್ರಸನ್ನವಾಯಿತು. ಭಯದಿಂದ ಕೂರ್ಮವು ಅಂಗಗಳನ್ನು





ಒಳಗೆ ಸೆಳೆದುಕೊಂಡಂತೆ,ತನ್ನ ಅಂಗಾಂಗಳ ಚಟುವಟಿಕೆಯನ್ನು ಸ್ತಬ್ಧಗೊಳಿಸಿ, ಶವದಂತಾಗಿದ್ದ ಆ ಕಲೋಪಾಸಕಿ ಚೈತನ್ಯದ ಚಿಲುಮೆಯಾದಳು. ಮುಖದಲ್ಲಿ ಮಂದಹಾಸ ಮೂಡಿತು. ಕನವರಿಸುವ ಚಕೋರ ಪಕ್ಷಿಗೆ ಚಂದ್ರನ ಬೆಳದಿಂಗಳು ಪಸರಿಸಿದಂತೆ ಉಲ್ಲಾಸವೆನಿಸಿತು. ಚಂದದ ಬಟ್ಟೆ ಉಟ್ಟಳು. ಅಂದವಾದ ಆಭರಣ ತೊಟ್ಟಳು. ಸುಗಂಧ ಲೇಪಿಸಿಕೊಂಡಳು. ಸುಂದರ ಬಣ್ಣದ ಹೂ ಮುಡಿದಳು. ಪ್ರಥಮ ಸಂಪರ್ಕದಲ್ಲಿ ತನ್ನ ಮನವನ್ನು ಸೂರೆಗೊಂಡಿದ್ದ, ಆರಾಧ್ಯ ಮೂರ್ತಿಯನ್ನು ಬರಮಾಡಿಕೊಳ್ಳಲು ಸಿದ್ಧಳಾಗಿದ್ದಳು. ಅತ್ತ ವಿಶ್ವದಾಳ ತಾಯಿ ವೇಮನರಿಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ಅಭಿರಾಮಯ್ಯನ ಮೂಲಕ ತಿಳಿದುಕೊಂಡಿದ್ದಳು. ಅವರೂ ಕವಿ ವೇಮನರ ಶಬ್ದಗಳಲ್ಲಿಯೇ ಅವರ ಇಷ್ಟ ಖಾದ್ಯಗಳನ್ನು ಸೂಚಿಸಿದ್ದರು

ಪಾಯಸ. ವಡೆ, ಸಾರು ಪರಮಾನ್ನವಾದಿ,
ಹೋಳಿಗೆ, ಮೆತ್ತನ್ನ ಹೂರ್ಣ ಕಡುಬು,
ನಾಲಗೆಯ ವಿಲಾಸ! ನವನೀತವು ಬೆರೆಯೆ. ವಿಶ್ವ

ತುಪ್ಪವಿರದ ಊಟ ತೃಣದ ಸರಿಯ ಕಸವು.
ಸಾರು ಇರದ ಊಟ ಶ್ವಾನ ಯೋಗ್ಯ.
ಪ್ರೀತಿ ಇರದ ಊಟ ಪಿಂಡಕಿಟ್ಟ ಊಟ. ವಿಶ್ವ

ಅಡಲು ಬಂದರಾಗ, ಅಡುಗೆ ಅಮೃತವಹುದು.
ಕಣ್ಣಿಗಿಂಪು ಆಗಿ ಕಾಣುತಿಹುದು.
ಒಡಲ ತಿನಿಸು ತಿಂಡಿ ಕಷ್ಟ ಕಡೆಗಾಗೆ. ವಿಶ್ವ

ನಿರೀಕ್ಷಿಸಿದಂತೆ ದೊರೆ ಕುಮಾರ ವೇಮನರ ಆಗಮನವಾಯಿತು. ಆಗ ಸಂಜೆಯ ಸಮಯ. ಪಶ್ಚಿಮ ದಿಗಂತದಲ್ಲಿ ಮುಳುಗುವ ಸೂರ್ಯನು ವರ್ಣಮಯವಾಗಿ ಶೋಭಿಸುತ್ತಿದ್ದನು. ಆಗ ರಾಗ ರತಿಯ ಸಂಜೆಯಾಗಿತ್ತು. ಸೂರ್ಯಾಸ್ತದೊಂದಿಗೆ ಅರಳುವ ನೈದಿಲೆಯಂತೆ ವಿಶ್ವದಾ ಹುಸಿ ನಗೆ ಸೂಸುತ್ತ ಹೊರ ಬಂದು, ವೇಮನರ ಪಾದ ಪದ್ಮಗಳಿಗಳಿಗೆರಗಿ ಸ್ವಾಗತಿಸಿದಳು. ಅದು ವಸಂತ ಮಾಸ. ಪ್ರಕೃತಿಯಲ್ಲಿ ಚೂತ ವೃಕ್ಷಗಳು ಪೂತು, ಕಾಮನ ಬಿಲ್ಲಾದ ಸಿಹಿ ಕಬ್ಬಿಗೆ ಅಂಬುಗಳಾದ ಹೂವು ಬಿಟ್ಟಿದ್ದವು. ವಿಷಯ ಭೋಗದ ವೃತ್ತಿಗಳೆಂಬ ಭೃಂಗಿಗಳು ಮುತ್ತಿದ್ದವು. ಪಾದದಲ್ಲಿ ಪವಡಿಸಿದ ಲತಾಂಗಿಯನ್ನು ಹಿಡಿದೆತ್ತಿ ವೇಮನ ತನಗರಿವಿಲ್ಲದಂತೆ ಅವಳನ್ನು ಮುದ್ದಿಸಿದರು. "ಛೀ ! ಛೀ ! ಇದೇನು ? ಇವಳು ತನ್ನ ಅತ್ತಿಗೆ ಮಗಳು 'ಕೃಷ್ಣಾ'ಳೇನು, ಮುದ್ದಿಸಲು ? ಅಲ್ಲ ; ಅಲ್ಲ; ಯೌವನವೇ ಕೊಸರಿ ಹೊರಸೂಸುತ್ತಿರುವ ಸುಂದರ ಯುವತಿ ! ಮೇಲಾಗಿ ಸಮವಯಸ್ಕಳು. ಎಂದು ತನ್ನಲ್ಲಿಯೇ ಚಿಂತಿಸಿದರು.

'ಒಳಗೆ ಬನ್ನಿ' ಎಂದು ವಿಶ್ವದಾಳ ತಾಯಿ ಆಹ್ವಾನಿಸಿ, 'ವಿಶ್ವದಾ ! ದೊರೆಗಳನ್ನು ಒಳಗೆ ಕರೆದುಕೊಂಡು ಹೋಗಮ್ಮ' ಎಂದು ಆದೇಶಿಸಿದಳು.

ವಿಶ್ವದಾ ಮುಂದೆ ಮುಂದೆ, ವೇಮನ ಹಿಂದೆ ಹಿಂದೆ, ಮೌನವಾಗಿ ಶಯನ ಗೃಹ ಪ್ರವೇಶಿಸಿದರು. ಅಲ್ಲಿ ಪುಷ್ಪ ತೂಲಿಕಾ ಹಾಸುಗೆಯ ಮೇಲೆ, ವಿಶ್ವದಾಳ ಕಣ್ಸನ್ನೆಯಂತೆ,

ಪವಡಿಸಿದರು. ಒಡೆಯನಿಗೆ ತನ್ನ ತನುಮನಗಳನ್ನು ಅರ್ಪಿಸಿದ ದಾಸಿಯಂತೆ, ವಿಶ್ವದಾ, ವೇಮನರ ಪಾದ ಯುಗ್ಮಗಳ ಬಳಿ, ತನ್ನ ಮೃದುವಾದ ಕೈಗಳಿಂದ ಅಂಗ ಮರ್ದನ ಮಾಡತೊಡಗಿದಳು. ವೇಮನರಿಗೆ ಇದು ಪ್ರಥಮ ಅನುಭವವಾದರೂ ಪುರುಷನ ಸಹಜ ಪ್ರವೃತ್ತಿಗನುಸಾರ ಸಹಕರಿಸಿದರು. ಹುಟ್ಟಿದೊಡನೆ ಆಮೆ ಮರಿಯು ನೀರಿಗಿಳಿಯುವಂತೆ ತಾನೂ ಕೈ ಚಾಚಿ ಅವಳ ಮೈ ಸವರಿದರು.

ಕಡು ವಿಚಿತ್ರ ! ಅರಿಯೆ, ಕಾಮ ಗೆಯ್ವ ಯಂತ್ರ,
ಚೆಲುವ ನಾರಿ ಹಣೆಯ ಚುಕ್ಕಿ ಕಂಡು,
ಗಾಡಿ ಮೋಡಿ ನೋಡಿ ಕಡು ಮೋಹ ಮೂಡದೆ ? ವಿಶ್ವ

ಎಂದು ಮನದಲ್ಲಿ ಪ್ರಿಯತಮೆಯ ಮೈಮಾಟ ಕುರಿತು, ಕಾಮನ ಆಟ ಕುರಿತು, ಹಲವು ವಿಚಾರಗಳು ಸುಳಿದವು.

ಇಷ್ಟರಲ್ಲಿ ವಿಶ್ವದಾಳಿಗೆ ವೇಮನರ ಸಲುಗೆಯಿಂದಾಗಿ ಸ್ವಲ್ಪ ಧೈರ್ಯ ಬಂದಿತು.

"ದೊರೆ ! ದಿನಾಲು ಸಾಯಂಕಾಲ ಈ ಕಡೆಗೆ ಬರಬಹುದಲ್ಲವೇ ?" ಎಂದು ಕೇಳಿ ಕುತೂಹಲದಿಂದ ಅವನ ಉತ್ತರವನ್ನು ನಿರೀಕ್ಷಿಸ ತೊಡಗಿದಳು.

'ನೋಡುವಾ...." ಎಂದಿಷ್ಟೇ ಚುಟುಕಾಗಿ ಉತ್ತರಿಸಿದರು, ವೇಮನ.

ಅಷ್ಟರಲ್ಲಿ ವಿಶ್ವದಾಳ ತಾಯಿ "ಊಟಕ್ಕೆ ಬನ್ನಿ" ಹೊರಗೆ ನಿಂತು ಕರೆದಳು. ಮೃಷ್ಟಾನ್ನ ಭೋಜನಾ ನಂತರ, ಅಲ್ಲಿಯೇ ವಿಶ್ರಮಿಸಬೇಕೆಂಬ ಆಗ್ರಹದ ಬಿನ್ನಹವಿದ್ದರೂ, ವೇಮನರು,

ಮತ್ತೆ ಬರೋಣ" ಎಂದು ಹೇಳಿ ಹೊರ ನಡೆದರಾದರೂ, ನಾಲ್ಕು ಹೆಜ್ಜೆ ಮುಂದಿಟ್ಟು ತಮ್ಮನ್ನೇ ದಿಟ್ಟಿಸುತ್ತಿದ್ದ ವಿಶ್ವದಾಳತ್ತ ಮುಗುಳ್ನಗೆ ಬೀರಲು ಮರೆಯಲಿಲ್ಲ.

ಹೀಗೆಯೇ ಹೊರ ಬಂದ ವೇಮನರು ವಿಶ್ವದಾಳ ದೇಹ ಸಂಪರ್ಕವು ವಿಚಿತ್ರ ಕಂಪನಗಳನ್ನು, ನೆನಪಿಸಿದಾಗಲೆಲ್ಲ, ಹುಟ್ಟಿಸುತ್ತಲೇ ಇತ್ತು ಅವರಿಗರಿಯದಂತೆ ಅವರ ಮನಸ್ಸಿನ ಸೆಳೆತವು ಅವಳತ್ತ ತೀವ್ರಗೊಳ್ಳುತ್ತಿತ್ತು.

ನಾರಿಯನ್ನು ಆರು ಪಾರು ನೋಡಿದಾಗ,
ಯಾರೆ ಆದರೇನು ? ಅಂಟಿ ಭ್ರಾಂತಿ.
ಏರಿ ನಿಂತ ಕಾಮ ಮೀರಿ ಮೆಟ್ಟರಯ್ಯ ! ವಿಶ್ವ

ಮುಂದೆ ಒಂದೆರಡು ತಿಂಗಳು ವೇಮನರು ತಮ್ಮ ನಿತ್ಯದ ಯೋಗಾಭ್ಯಾಸ, ಕೃಷ್ಣಾಳ ಸಂಗೀತ ಪಾಠದೊಡನೆ ರಸವಿದ್ಯೆಯ ಪ್ರಕ್ರಿಯೆಗಳಲ್ಲಿ ಮನ ತೊಡಗಿಸಿದರು. ಬೈರಾಗಿ ಸೂಚಿಸಿದ ಇನ್ನೂ ಹಲವು ಭಿನ್ನ ಕಚ್ಚಾ ಸಾಮಗ್ರಿ ಬಳಸಿ, ಯೋಗ ಶಕ್ತಿಯಿಂದ ಸ್ವರ್ಣ ತಯ್ಯಾರಿಸುವಲ್ಲಿ ಅಭಿರಾಮಯ್ಯನೊಡನೆ ಸಹಕರಿಸಿದರು. ಯೋಗ ಶಕ್ತಿಯ ಅನಿವಾರ್ಯತೆಯ ಕಾರಣ, ಅಭಿರಾಮಯ್ಯನವರಿಲ್ಲದೆ ಸ್ವರ್ಣ ತಯ್ಯಾರಿಸಬಹುದಾಗಿತ್ತು. ಆದರೆ ವೇಮನರಿಲ್ಲದೆ ಅದು ಸಾಧ್ಯವಿರಲಿಲ್ಲ. ಹೀಗೆ ತಯ್ಯಾರಿಸಿದ ಸ್ವರ್ಣದಿಂದ ನರಸಾಂಬೆ ಮತ್ತು ಮಲ್ಲಮ್ಮ ಅತ್ತಿಗೆಯರೀರ್ವರಿಗೂ ಅವರ ಮೆಚ್ಚಿನ ಆಭರಣಗಳನ್ನು ಸಿದ್ಧಪಡಿಸಿಕೊಟ್ಟರು. ಕ್ರಿ. ಶ. 1424 ರಿಂದ ರಾಜಮಹೇಂದ್ರವರಂ ರಾಜ್ಯವು ವಿಜಯ ನಗರದ ರಾಯರ ಸಾಮಂತ ರಾಜ್ಯವಾದುದರಿಂದ ಅವರಿಗೆ ಕಪ್ಪ ಕಾಣಿಕೆಗಳನ್ನು ಅರ್ಪಿಸುವಲ್ಲಿ ಜನಹಿತದ ಕಾರ್ಯಗಳನ್ನು ನೆರವೇರಿಸುವಲ್ಲಿ





ಭಂಡಾರದ ಧನವೆಲ್ಲ ಬರಿದಾಗುತ್ತಿದ್ದ ಕಾಲವದು. ಇಂಥ ಸಂದರ್ಭದಲ್ಲಿ ಅತ್ತಿಗೆಯವರಿಗೆ ಲಭ್ಯವಾದ ಆಭರಣಗಳು ತುಂಬಾ ಸಕಾಲಿಕ ಕೊಡುಗೆ ಎನಿಸಿದವು. ಅವುಗಳನ್ನು ಪಡೆದು ಅವರು ಮನವಾರೆ ಹರುಷಪಟ್ಟರು. ಜನರಾಡಿಕೊಳ್ಳುವಂತೆ ವೇಮನ ದೇವದಾಸಿಯ ಸೆಳವಿಗೆ ಸಿಲುಕಿಲ್ಲ. ಭಂಡಾರವನ್ನು ಬರಿದು ಮಾಡುವ ದುಂದುಖೋರರಲ್ಲ ; ಎಂದು ಅವರಲ್ಲಿ ಅಭಿಮಾನ ತಾಳಿದರು. ವೇಮನರ ಯೋಗ ಶಕ್ತಿಯಿಂದ ಸ್ವರ್ಣ ಸಿದ್ಧವಾಗುವುದನ್ನು ಅಭಿರಾಮಯ್ಯನವರಿಂದ ತಿಳಿದು, ವೇಮನರನ್ನು ಕುರಿತು ಗೌರವಾದರಗಳು ಹೆಚ್ಚಿದವು.

ಅತ್ತ ವಿಶ್ವದಾಳಿಗೆ ವೇಮನರಿಂದ ಅಗಲಿ ಇರುವುದು ಸಹ್ಯವೆನಿಸದಾಯಿತು. ಅವಳ ತಾಯಿ ಸೂಚಿಸಿದಂತೆ, ಒಬ್ಬರನ್ನೇ ನೆಚ್ಚದೆ, ಅನ್ಯರ ಸಂಗದಲ್ಲಿ ಸುಖ ಅನುಭವಿಸಲು ಅವಳ ಮನ ಒಪ್ಪಲಿಲ್ಲ. ನಟರಾಜ ದೇವಾಲಯದ ವಿಶೇಷ ಪೂಜಾ ಸಮಾರಂಭಗಳಲ್ಲಿ ನರ್ತಿಸುವುದಕ್ಕೆ ಮಾತ್ರ ಒಪ್ಪಿದಳು. ಇದರಿಂದ ವೇಮನರನ್ನು ಆಗ್ರಹಿಸಿ ಬರಮಾಡಿಕೊಳ್ಳುವುದು ಅನಿವಾರ್ಯವಾಯಿತು. ಕೂಡಲೇ ವೇಮನರೂ ಅರಳಿದ ಪುಷ್ಪದತ್ತ ಸುಳಿಯುವ ತುಂಬಿಯಂತೆ, ಆಗೀಗ ಬಂದು ಸುರಭಿಯನ್ನು ಆಘ್ರಾಣಿಸಿ, ಅಧರದಿಂದ ಮಕರಂದವನ್ನು ಹೀರಿ ಹೋಗುತ್ತಿದ್ದರು. ಕೆಲವೊಮ್ಮೆ ಅಲ್ಲಿಯೇ ವಾಸ್ತವ್ಯ ಮಾಡುತ್ತಿದ್ದರು. ಹೀಗಿರುತ್ತಿರಲು ವಿಶ್ವದಾಳ ಹುಟ್ಟುಹಬ್ಬದ ದಿನ ಸಮೀಪಿಸಿತು. ಅಂದು ಅವಳ ಕನಕಾಭಿಷೇಕದ ಸಮಾರಂಭ ನಡೆಯಬೇಕಿತ್ತು. ವೇಮನರಿಗೆ ಸಂದೇಶ ಹೋಯಿತು. ಅಂದು ರಾಜ್ಯ ಭಂಡಾರದ ನಾಣ್ಯಗಳ ಚೀಲಗಳನ್ನು ತಂದರು. ನರ್ತಕಿ ವಿಶ್ವದಾ ಹುಮ್ಮಸದ ಚಿಲುಮೆಯಾಗಿದ್ದಳು. ಅವಳ ಅಂದದ ಉಡುಪು, ಚೆಂದದ ಆಭರಣಗಳು, ಹೂ ಮುಡಿದ ಹೆಳಲು,ಹಣೆಗೆ ಇಟ್ಟ ತಿಲಕ, ತುಂಬಿದ ಎದೆ, ತೆಳುವಾದ ನಡು, ಒಂದಕ್ಕೊಂದು ಒಪ್ಪುವಂತೆ, ಜನರನ್ನು ಆಕರ್ಷಿಸುವ ರತಿದೇವಿಯೇ ಆಗಿದ್ದಳು. ವೇಮನ ಕಣ್ಣರಳಿಸಿ ನೋಡಿದರು. ಕಣ್ಣಿಗೆ ಧನ್ಯತೆ ಎನಿಸಿತು ! ಕನಕಾಭಿಷೇಕದ ಸುಮುಹೂರ್ತದಲ್ಲಂತೂ ವೇಮನ ತಾವು ತಂದ ಸ್ವರ್ಣ ನಾಣ್ಯಗಳನ್ನೇ ಅವಳ ಮಸ್ತಕದ ಮೇಲೆ ಅಭಿಷೇಚನ ಮಾಡಿದರು. ಬಂಗಾರದ ನಾಣ್ಯಗಳು ಮಳೆಯಲ್ಲಿ ಬೀಳುವ ಆಲಿಕಲ್ಲಿನಂತೆ ಸುರಿದವು. ಅಭಿಷೇಕ ಸಮಾರಂಭ ಮುಗಿದ ಬಳಿಕ ಅಭಿಷಿಕ್ತ ವಿಶ್ವದಾ ವೇಮನರ ಪಾದಗಳಲ್ಲಿ ಶಿರವಿಟ್ಟು ಶರಣು ಕೋರಿದಳು. ಕಾಮೋನ್ಮಾದದಲ್ಲಿ ವೇಮನರು ಹಿಡಿದೆತ್ತಿ ಮುದ್ದಿಸಿದರು.

ತೊಡೆ ಕುಂಡಿಯ ಕಂಡು, ತುಂಬಿದೆದೆಯ ಕಂಡು,
ಶಬ್ದ ಬಳಸದಂಥ ಸ್ಥಳವ ಕಂಡು,
ಮೋಹ ಮುಕುರುತಿಹುದು ಮುನಿಯೆ ಆದರೂನು. ವಿಶ್ವ

ಕೊಡೆಯ ಮೆರಗು ಕಂಡು, ತೂಗುವ ಮೊಲೆ ಕಂಡು,
ಕಡೆ ಸರಿದ ಮುಡಿಯನು ಕಂಡು, ವನಿತೆ
ಬಿಡದೆ, ವಿರಹಾಗ್ನಿಗೆ ಬೀಳದಿರುವನೆಂತು ? ವಿಶ್ವ

ವಿರಹಾಗ್ನಿಯಿಂದ ಬೇಯುತ್ತಿದ್ದ ವಿಶ್ವದಾಳಿಗೆ ವೇಮನರ ಸಮಾಗಮವು ಅಮೃತ ಸಿಂಚನ ಮಾಡಿದಂತಾಯಿತು. ಬಿಗಿಯಾಗಿ ಪ್ರಿಯಕರನನ್ನು ಬಂಧಿಸಿದ ಬಾಹುಗಳು ಇನ್ನೂ ಹೆಚ್ಚು ಬಿಗಿಯಾದವು. ಇತ್ತ ವೇಮನರು ಅರಳಿದ ಪುಷ್ಪಗಳಿಂದ ಮಧುವನ್ನು ಹೀರುವಂತೆ

ವಿಶ್ವದಾಳ ಮಧುರ ಅಧರಗಳಿಂದ ಸುಖದ ಸುಧೆಯನ್ನು ಮನವಾರೆ ಹೀರಿದರು. ಕೆನ್ನೆಗಳಿಗೆ ಮನವಾರೆ ಮುದ್ದಿನ ಮಳೆಗರೆದರು. ಉಬ್ಬಿದ ಎದೆಯ ಮೇಲೆ ಕೋಮಲ ಹಸ್ತಗಳಿಂದ ಕೈಯಾಡಿಸಿ ರೋಮಾಂಚನಗೊಂಡರು.

ಐಹಿಕ ಭೋಗವು ಎಷ್ಟಾದರೂ ಕ್ಷಣಿಕವಾದುದು. ಕನಕಾಭಿಷೇಕ ಸಮಾರಂಭದ ನಂತರ ಸುಖದ ಸೋನೆಯೇ ಸುರಿಯುವಂತೆ ಕಂಡು ಬಂದಿತು. ಆದರೆ, ಮುಂದಿನ ಅಲ್ಪ ಕಾಲದಲ್ಲಿಯೇ ವಿಶ್ವದಾಳ ತಾಯಿಯ ಹದ್ದಿನಕಣ್ಣು ವೇಮನರ ಅತ್ತಿಗೆ ಮಲ್ಲಮ್ಮ ರಾಣಿಯ ರತ್ನಖಚಿತ ಮೂಗುತಿಯ ಮೇಲೆ ಹರಿಯಿತು.

ಆಸೆಯಿಂದ ಮನುಜ ಆಯುವಿರುವ ಕಾಲ,
ತಿರುಗುತಿಪ್ಪ ಭ್ರಮೆಯ ತೊರೆಯದಿದ್ದು,
ಮುಸುರೆ ಪಾತ್ರೆಯಲ್ಲಿ ಮುಕುರುವ ನೊಣದಂತೆ.
ವಿಶ್ವ

ತನ್ನ ಮಗಳು ವೇಮನರನ್ನೇ ನಂಬಿ, ಅನ್ಯ ಪುರುಷರ ಸಂಗ ತಿರಸ್ಕರಿಸುತ್ತಿರುವದನ್ನು ತಿಳಿದು ವಿಶ್ವದಾಳ ತಾಯಿ, ತಮ್ಮ ಆದಾಯದ ಗತಿಯೇನು ? ಎಂದು ಚಿಂತಿಗೀಡಾದಳು. ಅವಳೊಂದು ಹಂಚಿಕೆ ಹೂಡಿದಳು. "ವಿಶ್ವದಾ, ವೇಮನ ದೊರೆಯ ಪ್ರೀತಿ ನಿಜವೆಂದು ನಂಬಿರುವೆಯಾ?" ಎಂದು ಕೇಳಿದಳು.

"ಅದರ ಬಗೆಗೆ ಸಂಶಯವೇಕೆ ? ಅವರು ನನ್ನ ಪ್ರಾಣ" ಎಂದಳು.

"ಹಾಗಾದರೆ, ಅವರನ್ನು ಮದುವೆಯಾಗುವಿಯಾ ?' ಎಂದು ಪ್ರಶ್ನಿಸಿದಳು.

"ಸಮಾಜ ಒಪ್ಪಿದರೆ.....". ಎಂದಳು.

"ಹಾಗಾದರೆ, ನೀನು ದೇವದಾಸಿಯಲ್ಲ, ಕುಲೀನ ಸ್ತ್ರೀಯೆಂದು ತೋರಬೇಕಲ್ಲವೇ?"

"ಅಹುದು ಮತ್ತೆ' ಎಂದು ಸಹಜ ಭಾವದಿಂದ ಉತ್ತರಿಸಿದಳು ವಿಶ್ವದಾ.

"ನೀನು ದೊರೆಯ ಬಳಿ, ಅವರ ಪ್ರೀತಿಯ ಅತ್ತಿಗೆ ಮುತ್ತೈದೆ ಮಲ್ಲಮ್ಮನ ಆಭರಣಗಳನ್ನು ಮತ್ತು ರತ್ನಖಚಿತ ಮೂಗುತಿಯನ್ನು ತಂದು ಕೊಡಲು ಕೇಳು. ಅವರು ನಿನ್ನನ್ನು ಪೂರ್ಣ ನೆಚ್ಚಿ ಸಪ್ತಪದಿ ತುಳಿಯಲು ಸಿದ್ಧರಿದ್ದರೆ, ನಿನ್ನ ಅಪೇಕ್ಷೆಯನ್ನು ಈಡೇರಿಸುತ್ತಾರೆ. ಇಲ್ಲವಾದರೆ, ಅವರೊಬ್ಬರನ್ನೇ ನಂಬಿ, ನಿನ್ನ ಭವಿಷ್ಯವನ್ನು ಹಾಳು ಮಾಡಿಕೊಳ್ಳಬೇಡ" ಎಂದು ನಿಖರವಾಗಿ ನುಡಿದಳು. ವಿಶ್ವದಾ ಮನದಲ್ಲಿ, ತನ್ನ ತಾಯಿಯ ಹಂಚಿಕೆಯ ಹಿಂದೆ ಏನೋ ಸಂಚು ಇದೆಯೆಂದು ಅನ್ನಿಸಿದರೂ, ತನ್ನ ಪ್ರಿಯತಮನಲ್ಲಿ ಇರಿಸಿದ ವಿಶ್ವಾಸಕ್ಕೆ ಕುಂದುಂಟಾಗಲಿಲ್ಲ.

ಸಮಯಕ್ಕೆ ಸರಿಯಾಗಿ ಮಲ್ಲಮ್ಮ ರಾಣಿಯ ಸೂಚನೆಯ ಮೇರೆಗೆ ಅಭಿರಾಮಯ್ಯನವರು ವಿಶ್ವದಾಳ ಕಲಾಮಂದಿರಕ್ಕೆ ಆಗಮಿಸಿ, ತಾಯಿ-ಮಗಳ ಸಂವಾದವನ್ನು ಆಲಿಸಿದರು. ತಾವು ತಿಳಿದಂತೆ ವಿಶ್ವದಾ ಬೆಲೆವೆಣ್ಣು ಅಲ್ಲ. ವೇಮನರ ವಿಷಯದಲ್ಲಿ ಅವಳಿಗಿರುವ ವಿಶ್ವಾಸ, ಗೌರವಾದರಗಳು ಅಪಾರ, ಅಚಲ, ಎಂದು ತಿಳಿದು ಬಂತು. ಬಳಿಕ, ವಿಶ್ವದಾ ಕೊಠಡಿಯಿಂದ ಹೊರಬಂದು, ಸನಿಹದಲ್ಲಿ ನಿಂತ ಅಭಿರಾಮಯ್ಯನವರನ್ನು ಕಂಡು, 'ಬನ್ನಿ ಅಣ್ಣನವರೇ !" ಎಂದು ಕರೆದು ಕೂಡ್ರಿಸಿದಳು. ತಂಪು ಪಾನೀಯವನ್ನು ಕೊಟ್ಟು, ಎದುರು





ಆಸನದ ಮೇಲೆ ಕುಳಿತಳು.

"ಬಹುದಿನಗಳ ಮೇಲೆ ಬಂದಿರಿ. ದೊರೆಗಳು ಕ್ಷೇಮವೇ ? ಎರಡು ದಿನದಿಂದ ಇತ್ತ ಬಂದಿಲ್ಲ" ಎಂದಳು.

"ಅವರು ಚೆನ್ನಾಗಿದ್ದಾರೆ. ಮಗು ಕೃಷ್ಣಾಳಿಗೆ ಸ್ವಲ್ಪ ಜ್ವರಬಾಧೆ. ಅವಳ ಬಳಿ ಇರುತ್ತಾರೆ" ಎಂದರು.

"ತಾವು ಒಬ್ಬರೇ ಬಂದಿರಿ, ಏನು ಸಮಾಚಾರ ?" ಎಂದು ಪ್ರಶ್ನಿಸಿದಳು.

"......................"

'ಬಿಡಿಸಿ ಹೇಳಬಹುದೇ ?" ಪ್ರಶ್ನಿಸಿದಳು ವಿಶ್ವದಾ.

"ತಂಗೀ ! ವೇಮನ ದೊರೆಯನ್ನು ನೀನು ಮನಸಾರೆ ಪ್ರೇಮಿಸಿರುವೆ. ಅವರೊಂದಿಗೆ ಹೃದಯದ ಸ್ಪಂದನಗಳನ್ನು ಮೇಳೈಸಿಕೊಂಡಿರುವೆ. ನಿನ್ನ ನಲ್ಮೆಯಿಂದ ಅವರನ್ನು ನಿನ್ನ ತೋಳ ತೆಕ್ಕೆಯಲ್ಲಿ ಬಂಧಿಸಿರುವೆ, ನಿಜ. ಆದರೆ ಅವರನ್ನು ಬಾಲ್ಯದಿಂದಲೂ ಅಕ್ಕರೆಯಿಂದ ಬೆಳೆಸಿದ ಅತ್ತಿಗೆ ಇದ್ದಾಳೆ. ಅವರ ಹಿತ ಚಿಂತನೆಯನ್ನೇ ಸದಾ ಮಾಡುತ್ತಿರುವ ಅಣ್ಣಂದಿರಾದ ಅಳ್ಳಯ ವೇಮಾರೆಡ್ಡಿ ದೊರೆಗಳಿದ್ದಾರೆ. ವಿಶ್ವಕ್ಕೆ ಅವರ ಸೇವೆಯು ಈಗ ಅನಿವಾರ್ಯ ಅಗತ್ಯವಾಗಿದೆ. ಹೀಗಿರುವಾಗ ವಿಶ್ವದ ಹಿತವನ್ನು ಉಪೇಕ್ಷಿಸಿ, ವಿಶ್ವದಾಳ ಬಾಹು ಬಂಧನದ ಸುಖಭೋಗಕ್ಕಷ್ಟೇ ಅವರ ಪ್ರಯೋಜನವು ಮರ್ಯಾದಿತವಾಗಬೇಕೇ ? ಇದು ಗಂಭೀರ ವಿಷಯ. ನೀನು ಆಳವಾಗಿ ವಿಚಾರಿಸಿ ಹೇಳು. ವೇಮನರನ್ನು ಸಮಾಜ ಸೇವೆಗೆ, ರಾಜ ಕುಟುಂಬದ ನೆರವಿಗೆ ಬಿಟ್ಟುಕೊಡುವ ಔದಾರ್ಯ ತೋರುವಿಯಾ ? ಎಂದು ಬಿನ್ನವಿಸಲು ಬಂದೇ"ಎಂದರು.

"ದೇವರು ಮಾಡಿದಂತಾಗಲಿ" ಎಂದಳು.

ಒಂದೆಡೆ ತನ್ನ ತಾಯಿಯ ದುರಾಲೋಚನೆ, ಇನ್ನೊಂದೆಡೆ ಅಭಿರಾಮಯ್ಯನವರ ದೂರಾಲೋಚನೆ. ಇವುಗಳ ಮಧ್ಯೆ ತನ್ನ ಸ್ವಾರ್ಥ ತ್ಯಾಗದ ಅಗ್ನಿ ಪರೀಕ್ಷೆ. ವಿಶ್ವದಾಳಿಗೆ ಏನೂ ತೋಚದಾಯಿತು. ಇಂಥ ಪೇಚಿನ ಪ್ರಸಂಗದಿಂದ ತನ್ನನ್ನು ಪಾರುಗಣಿಸು, ನಟರಾಜಾ !" ಎಂದು ದೇವರಲ್ಲಿ ಮೊರೆಯಿಟ್ಟಳು.

ಮಾರನೆಯ ದಿನ ವೇಮನ ಕಲಾಮಂದಿರಕ್ಕೆ ಆಗಮಿಸಿದರು. ವಿಶ್ವದಾ ಎಂದಿಗಿಂತ ಹೆಚ್ಚಿನ ಸುಲುಗೆಯಿಂದ ವೇಮನರನ್ನು ಬರಮಾಡಿಕೊಂಡು ಉಪಚರಿಸಿದಳು. ಕಳೆದೆರಡು ವರ್ಷಗಳಿಂದ ಬೆಳೆದು ಬಂದ ಆತ್ಮೀಯತೆ ಗಾಢವಾಗಿತ್ತು. ಹೊರಗೆ ತರುಗಳು ಹೂ ಬಿಟ್ಟು ನಿಸರ್ಗದ ಸೌಂದರ್ಯವನ್ನು ಹೆಚ್ಚಿಸಿದ್ದವು. ಬದಿಯ ಕೊಳದ ನೀರಿನಲ್ಲಿ ಕಮಲ ಪುಷ್ಪಗಳು ಅರಳಿ ಕಣ್ಣಿಗೆ ಆಹ್ಲಾದವೀಯುತ್ತಿದ್ದವು. ರಾತ್ರಿ ಚಂದಿರನು ದಿವ್ಯ ಕಾಂತಿಯನ್ನು ಬೀರುತ್ತಿದ್ದನು. ಮಾಮರವು ಹೂ ಗೊಂಚಲುಗಳ ಭಾರದಿಂದ ಬಳುಕುತ್ತಿದ್ದವು. ಇಂಥ ಮನ್ಮಥನ ಮೆಚ್ಚುಗೆಯ ವಸಂತ ಮಾಸದಲ್ಲಿ ತರುಣಿಯರು ತಮ್ಮ ಸೌಂದರ್ಯ ಕುರಿತು ಅಭಿಮಾನ ಪಡುತ್ತಿದ್ದರು. ಇಲ್ಲಿ ತರುಣಿ ವಿಶ್ವದಾ ತನ್ನ ಪ್ರಿಯತಮನೊಂದಿಗೆ ಸರಸ ಸಲ್ಲಾಪದಲ್ಲಿ ತೊಡಗಿದ್ದಳು.

'ದೊರೆ ! ನಮ್ಮ ಆನಂದದ ಸಮಯವು ಅಲ್ಪ ಕಾಲ ಮಾತ್ರವಲ್ಲವೇ ?" ಎಂದಳು

'ಹಾಗೇನಿಲ್ಲ, ನಾನು ನಿನ್ನಿಂದ ದೂರವಾಗಿ ಇರಲಾರೆನು'' ಎಂದರು ವೇಮನ.

ತಮ್ಮ ಮದುವೆ ನಡೆದರೆ.... ಎಂದು ಶಂಕಿಸಿದಳು.

''ಆ ಮದುವೆಯು ನಿನ್ನ ಜೊತೆಗೆ ತಾನೇ. ನಿನ್ನೊಂದಿಗೇ ಸಪ್ತಪದಿ ತುಳಿಯುವೆ'' ಎಂದರು ವೇಮನ.

''ಅದು ಹೇಗೆ ಸಾಧ್ಯ ? ತಾವು ಕುಲ ಸ್ತ್ರೀಯನ್ನು ವಿವಾಹವಾಗುವಿರಲ್ಲವೇ ?'' ಎಂದಳು.

''ನೀನೇ ನನ್ನ ದೃಷ್ಟಿಯಲ್ಲಿ ಸತ್ಕುಲಜಳು. ಏಕೆಂದರೆ ನಿನ್ನ ಪ್ರೇಮ ನಿರ್ವ್ಯಾಜವಾಗಿದೆ. ನಿನ್ನ ಮನಸ್ಸು ನಿರ್ಮಲವಾಗಿದೆ'' ಎಂದರು ವೇಮನ.

''ಹಾಗಾಗಬೇಕಾದರೆ, ಕುಲೀನ ಸ್ತ್ರೀಯ ಸಂಕೇತಗಳಾದ ಮಲ್ಲಮ್ಮ ರಾಣಿಯ ವಜ್ರಖಚಿತ ಮೂಗುತಿ ನತ್ತನ್ನೂ, ಕಿವಿಯ ಬೆಂಡೋಲೆಗಳನ್ನೂ ತಂದು ಕೊಡಿರಿ. ನಾನು ಅವುಗಳನ್ನು ಮುಡಿದು, ಅತ್ತೆಯವರ ಪಾದಕ್ಕೆರಗಿ ಆಶೀರ್ವಾದ ಪಡೆಯುತ್ತೇನೆ'' ಎಂದಳು.

''ಆಗಲಿ.......' ಎನ್ನುತ್ತ ಮನೆಯ ಹಾದಿ ಹಿಡಿದರು.

ಮನೆಯಲ್ಲಿ ಕೃಷ್ಣಾ ವೇಮನರ ಅನುಪಸ್ಥಿತಿಯನ್ನು ಸಹಿಸಲಾರದೆ, ಅವರ ಬರವಿಗಾಗಿ ಕನವರಿಸಿ, ಊಟ ಸಹ ಮಾಡದೇ ನಿದ್ರೆ ಹೋಗಿದ್ದಳು. ವೇಮನರು ಮನೆಗೆ ಬಂದವರೇ ಕೃಷ್ಣಾಳ ಹಾಸುಗೆಯ ಬಳಿ ಹೋಗಿ ಅವಳನ್ನು ಮುದ್ದಾಡಿ, ಮಾತನಾಡಿಸಿದರು. ಇದೇ ಸಂದರ್ಭವನ್ನು ಬಳಸಿ, ಅತ್ತಿಗೆ ಮಲ್ಲಮ್ಮನವರು,

''ವೇಮನಾ ! ಬಾಲ್ಯದಿಂದಲೂ ಮುದ್ದಿಸಿ ಸಾಕಿ ಸಲಹಿದ ನಮ್ಮನ್ನು ಸಂಪೂರ್ಣ ಮರೆತು, ಕುಣಿಯುವ ಹೆಣ್ಣಿನ ಹಿಂದೆ ಹೋಗುತ್ತೀಯೇನಪ್ಪಾ ? ವಿಷಯವು ದೊರೆಗಳಿಗೂ ದೊಡ್ಡ ಚಿಂತೆಯಾಗಿದೆ. ಯಾರೊಬ್ಬ ಕುಲೀನ ಕನ್ನೆಯೊಂದಿಗೆ ಲಗ್ನವಾಗಬಾರದೇ ? ಎಂದರು.

''ಛೀ ! ಛೀ ! ಅತ್ತಿಗೆ. ಶಾಂತಂ ಪಾಪಂ, ವಿಶ್ವದಾ ನೃತ್ಯ ಕಲಾವಿದೆ, ಸರಿ. ಆದರೆ ಬೆಲೆವೆಣ್ಣು ಅಲ್ಲ. ಅವಳ ಪ್ರೀತಿ ಅಪಾರ. ನನ್ನಲ್ಲಿ ಅವಳ ನಿಷ್ಠೆ ಅಸದೃಶ. ಅವಳು ನನ್ನ ಜೀವದ ಜೀವ. ಮದುವೆಯಾಗುವುದೂ ಅವಳನ್ನೇ. ಅವಳು ಕುಲೀನ ಸ್ತ್ರೀ ಎನಿಸಲು ನಿಮ್ಮ ರತ್ನಖಚಿತ ಬೆಂಡೋಲೆ ಮತ್ತು ಮುತ್ತಿನ ಮೂಗುತಿ ಬೇಕಾಗಿವೆ. ಅವುಗಳನ್ನು ಧರಿಸಿ ತಮ್ಮಲ್ಲಿ ಬಂದು ಆಶೀರ್ವಾದ ಪಡೆಯುತ್ತಾಳಂತೆ ! ಕುಲೀನಳೆನಿಸಿಕೊಳ್ಳುವಳಂತೆ'' ಎಂದರು ವೇಮನ. ಪ್ರಯಾಸದಿಂದ ಅಷ್ಟು ಹೇಳಿ, ಮೌನವಾದರು.

ಜೋರಾಗಿ ಮಳೆ ಸುರಿದು ಮೌನವಾದಂತೆ ಎಲ್ಲವೂ ಸ್ತಬ್ಧವಾಯಿತು. ಮಲ್ಲಮ್ಮ ಕಣ್ಣು ಮುಚ್ಚಿ, ಕೊಡಬೇಕಾದ ಉತ್ತರಕ್ಕಾಗಿ ಚಿಂತಿಸಿದಳು. ''ದೇವರೇ ! ಏನಾದರೂ ಉಪಾಯ ಹೇಳು'' ಎಂದು ಅಂತರಾತ್ಮನಲ್ಲಿ ಪ್ರಾರ್ಥಿಸಿದಳು. ಎರಡು ನಿಮಿಷಗಳ ನಂತರ,

''ಆಗಲಿ, ವೇಮನಾ ! ನಿನ್ನವಳ ಕೋರಿಕೆಯಂತೆಯೇ ಆಗಲಿ'' ಎಂದು ನುಡಿದಳು.

ಆ ಮಾತು ಕೇಳಿ, ವೇಮನ ತನ್ನ ಕಿವಿಯನ್ನೇ ನಂಬದಾದ. ಅವನಲ್ಲಿ ಹರ್ಷ





ಉಕ್ಕಿತು. ವಿಶ್ವದಾಳನ್ನು ತನ್ನವಳಾಗಿ ಪಡೆಯುವ ಕಾಲ ಸನ್ನಿಹಿತವಾಗಿದೆ'' ಎಂದು ಬಗೆದು ಮನದಲ್ಲಿಯೇ ಅವಳನ್ನು ನೆನೆದು ಮುದ್ದಿಸಿದನು.

''ಆದರೆ, ವೇಮನಾ ! ಒಂದು ಮಾತು. ಈ ಆಭರಣಗಳನ್ನು ಆ ಕುಣಿತದವಳಿಗೆ ಕೊಡುವ ಮುನ್ನ ಅವಳು ಬೆತ್ತಲೆಯಾಗಿ ನಿನ್ನೆದುರಿನಿಂದ ಏಳು ಹೆಜ್ಜೆ ನಡೆದು ಬರಬೇಕು. ಮತ್ತು ನಿನ್ನತ್ತ ಬೆನ್ನು ಮಾಡಿ ನಿಂತು ಬಾಗಿ ತನ್ನ ತೊಡೆಗಳ ಮಧ್ಯೆ ತಲೆಯನ್ನುತೂರಿ, ಈ ಮೂಗುತಿ ನತ್ತುಗಳನ್ನು ಹಲ್ಲು ಕಚ್ಚಿ ಎತ್ತಿಕೊಳ್ಳಬೇಕು'' ಎಂದು ಕರಾರು ಹಾಕಿದಳು.

''ಆಗಲಿ, ಅತ್ತಿಗೆ'' ಎಂದುರು ವೇಮನ.

''ಕುಲೀನ ಸ್ತ್ರೀ ಎನಿಸುವುದು ಬಾಳೆ ನುಂಗಿದಂತಲ್ಲ. ಯಾವ ಕುಲೀನ ಸ್ತ್ರೀಯೂ ಪುರುಷನೆದುರು ಪೂರ್ಣ ಬೆತ್ತಲೆಯಾಗಿ ನಿಲ್ಲಳು. ಅವಳಿಗೆ ಲಜ್ಜೆ ಅಡ್ಡ ಬರುತ್ತಿದೆ. ಸ್ವೈರಿಣಿಯು ಸಾಧ್ವಿಯ ಮಹಿಮೆಯನ್ನು ಅರಿಯಳು. ನಿನ್ನ ಕುಣಿತದ ಹುಡುಗಿ ಈ ಪರೀಕ್ಷೆಯಲ್ಲಿ ಗೆಲ್ಲಲಿ ; ನೋಡುವಾ'' ಎಂದು ಅತ್ತಿಗೆ ಮಲ್ಲಮ್ಮನವರು ಆಹ್ವಾನವಿತ್ತರು.

## ವೈರಾಗ್ಯದ ಸೆಳವು :

ವೇಮನ ತಲೆಯಾಡಿಸಿ ಒಪ್ಪಿಗೆ ಸೂಚಿಸಿ, ಆಭರಣಗಳನ್ನು ಪಡೆದರು. ಮುಂದೆ ತಡಮಾಡದೆ ಕಲಾಮಂದಿರಕ್ಕೆ ಧಾವಿಸಿ, ಬಾಗಿಲಲ್ಲಿಯೇ, ''ವಿಶ್ವದಾ ! ವಿಶ್ವದಾ ! ಎಲ್ಲಿರುವೆ?'' ಎಂದು ಕೂಗಿದರು.

ಶಯನ ಗೃಹದಲ್ಲಿ ವಿರಮಿಸುತ್ತಿದ್ದ ವಿಶ್ವದಾ, ತನ್ನ ಬೇಡಿಕೆಯ ಫಲದ ಕುರಿತು ಕುತೂಹಲ ಕೆರಳಿತು. ತನ್ನ ಕುಲ ಶೀಲಗಳ ಅಗ್ನಿ ಪರೀಕ್ಷೆಯನ್ನು ಎದುರು ನೋಡುತ್ತಿದ್ದ ಅವಳಿಗೆ ಸಂತೋಷ ವಿಷಾದಗಳ ಮಿಶ್ರ ಭಾವ ತುಂಬಿತ್ತು. ಹೊರಬಂದು ಪ್ರಿಯತಮನನ್ನು ಕಂಡಾಗ ಕಣ್ಣಿನಿಂದ ಜಲಧಾರೆಯೇ ಸುರಿಯಿತು.

''ಏನು ವಿಶ್ವದಾ ಅಳುವೇಕೆ ? ನೋಡಿಲ್ಲಿ, ನಿನ್ನ ಅಪೇಕ್ಷೆಯ ಮೂಗುತಿ ಬೆಂಡೋಲೆಗಳನ್ನು ಅತ್ತಿಗೆಯವರಿಂದ ಪಡೆದು ತಂದಿದ್ದೇನೆ'' ಎಂದು ಕೈಯಲ್ಲಿ ಹಿಡಿದ ಆಭರಣದ ಪೆಟ್ಟಿಗೆಯನ್ನು ತೋರಿಸಿದ. ಅದನ್ನು ಕಂಡು ಅವಳು ಇನ್ನಷ್ಟು ಭಾವಪರವಶಳಾದಳು. ಆದರೂ ಸಾವರಿಸಿಕೊಂಡು, ಪ್ರಿಯತಮನು ಕೇಳಿದ ಪ್ರಶ್ನೆಗೆ ಉತ್ತರಿಸುತ್ತ,

''ದುಃಖವಲ್ಲ ದೊರೆ. ಕಣ್ಣಿನಿಂದ ಆನಂದ ಭಾಷ್ಪಗಳು ಸುರಿಯುತ್ತಿವೆಯಷ್ಟೇ, ಇಲ್ಲಿ ಕೊಡಿ'' ಎಂದು ಆಭರಣ ಪಡೆಯಲು ಕೈ ಚಾಚಿದಳು.

''ಇಲ್ಲ ; ಹಾಗೆಯೇ ಕೊಡುವಂತಿಲ್ಲ, ಅದನ್ನು ಪಡೆಯಬೇಕಾದರೆ ಅತ್ತಿಗೆಯವರು ವಿಧಿಸಿದ ಕರಾರಿನಂತೆ ನಡೆಯಬೇಕು'' ಎಂದರು ವೇಮನ.

''ಏನದು ಕರಾರು ? ಬೇಗ ಹೇಳಿ'' ಎಂದು ಕುತೂಹಲವರಳಿ ಕೇಳಿದಳು ವಿಶ್ವದಾ.

''ಅಂಥ ಕ್ಲಿಷ್ಟವಾದುದೇನಲ್ಲ, ನೀನು ನನ್ನೆದುರು ಪೂರ್ಣ ನಗ್ನಳಾಗಿ ಏಳು ಹೆಜ್ಜೆ ನಡೆದು ಬಂದು ಹಿಂತಿರುಗಿ ನಿಲ್ಲಬೇಕು. ಬಳಿಕ ಬಾಗಿ ನಿನ್ನ ತೊಡೆ ಸಂದಿಯಲ್ಲಿ ಮುಖವನ್ನು

ತೂರಿ ಹಲ್ಲಿನಿಂದ ಈ ಆಭರಣಗಳನ್ನು ಎತ್ತಿಕೊಳ್ಳಬೇಕಷ್ಟೇ'' ಎಂದು ವಿವರಿಸಿ ಮುಂದಿನ ಘಟನೆಗಳನ್ನು ಕುರಿತು ಕಾತರದಿಂದ ನಿರೀಕ್ಷಿಸುತ್ತ ನಿಂತರು.

ಅವರ ಮಾತು ಕೇಳಿ ವಿಶ್ವದಾ ಮುಗುಳ್ನಕ್ಕಳು. ಕರಾರುವಕ್ಕಾಗಿ ವರ್ತಿಸಿ ಆಭರಣ ಪಡೆದರೆ ತನ್ನ ತಾಯಿಯ ಆಭರಣದ ಮೋಹ ತೀರುತ್ತದೆ. ತಾನು ನಗ್ನಳಾಗಿ ನಾಚುಗೆ ತೊರೆದು ನಡೆದರೆ ತನ್ನ ಕುಲೀನತೆಯ ಶೀಲಕ್ಕೆ ಕುಂದು ಉಂಟಾಗಿ ವೇಮನ, ಅಭಿರಾಮಯ್ಯನವರ ಕೋರಿಕೆಯಂತೆ, ವಿಶ್ವಕ್ಕೆ ದೊರೆಯುತ್ತಾರೆ. ವೇಮನ ತನಗೆ ದಕ್ಕಿದರೆ, ಸ್ವಾರ್ಥ ; ವಿಶ್ವಕ್ಕೆ ದಕ್ಕಿದರೆ ಪರಾರ್ಥ ಎರಡೂ ಅರ್ಥಪೂರ್ಣವಾದವುಗಳೇ'' ಎಂದು ಮಾನಸಿಕ ಸ್ತಿಮಿತ ಹೊಂದಿ,

''ಆಗಲಿ ದೊರೆ, ನಾನಂತೂ ದೇವದಾಸಿ ಕುಲದ ಗಣಿಕೆ. ನಗ್ನತೆ ನನ್ನ ಶೀಲ ಕೆಡಿಸದಲ್ಲ'' ಎನ್ನುತ್ತ ವೇಮನರಿಂದ ಸ್ವಲ್ಪು ದೂರ ಸರಿದು ತನ್ನ ಸೀರೆಯನ್ನು ಕಳಚಿದಳು. ಕುಪ್ಪಸವನ್ನೂ ಬಿಚ್ಚಿದಳು. ಅಲ್ಲಿಂದ ವೇಮನರತ್ತ ಏಳು ಹೆಜ್ಜೆ ನಡೆದು ಬಂದು ಹಿಂತಿರುಗಿ ನಿಂತು, ಮುಂಬಾಗಿ ತನ್ನ ತೊಡೆಗಳ ಸಂದಿಯಿಂದ ಮೊಗ ತೂರಿ, ಹಲ್ಲಿನಿಂದ ಕಚ್ಚಿ ವೇಮನರ ಕೈಯಲ್ಲಿರುವ ಆಭರಣಗಳನ್ನು ತೆಗೆದುಕೊಂಡಳು.

ವೇಮನರು ಮಂತ್ರಮುಗ್ಧರಂತೆ ನಿಂತು, ಈ ಅಸಡ್ಡಾಳ ದೃಶ್ಯವನ್ನು ನೋಡಿ ಹೇಸಿಕೊಂಡರು. ಆ ಅಸಹ್ಯ ಬೆತ್ತಲೆ ದೇಹವನ್ನು ನೋಡಲಾರದೆ, ಅದನ್ನು ಮುಚ್ಚುವಂತೆ ತಾವು ಹೊತ್ತ ಶಲ್ಯವನ್ನು ವಿಶ್ವದಾಳ ಮೈ ಮುಚ್ಚುವಂತೆ ತೂರಿ, ಅವಳ ಮುಖದತ್ತ ಬಂದು 'ಥೂ ಹೇಸಿ' ಎಂದು ಕೆನ್ನೆಗೆ ಜೋರಾಗಿ ಏಟು ನೀಡಿ, ಅಲ್ಲಿ ನಿಲ್ಲದೆ ಸರ ಸರನೆ ಹೊರಟು ಹೋದರು.

ಮನೆಗೆ ಬಂದು ಅತ್ತಿಗೆಯನ್ನು ಸಮೀಪಿಸಿ, ''ಅತ್ತಿಗೆ ! ತಮ್ಮ ಮಾತು ನಿಜ. ನನ್ನ ಕಣ್ಣು ತೆರೆಸಿದಿರಿ'' ಎಂದು ಕಣ್ಣೀರು ಸುರಿಸಿದರು.

ಅತ್ತಿಗೆ ಮಲ್ಲಮ್ಮ ನಡೆದುದನ್ನು ಊಹಿಸಿಕೊಂಡು ಮನದಲ್ಲಿಯೇ ಹರ್ಷಿತಳಾಗಿ,

''ಕೃಷ್ಣಾ ನಿನ್ನ ಬರುವಿಕೆಗಾಗಿ ಕಾಯುತ್ತಾಳೆ'' ಎಂದಿಷ್ಟೇ ಹೇಳಿ, ಒಳಹೋದರು.

ವೇಮನರು ಕೃಷ್ಣಾಳನ್ನು ಕಾಣಲು ಅವಳು ಮಲಗಿದಲ್ಲಿಗೆ ಬಂದಾಗ ಅವಳು ಅದೇ ಕಣ್ಣು ಮುಚ್ಚಿದ್ದಳು. ಆಗ ಒಬ್ಬರೇ ಕುಳಿತಾಗ ತಮಗೆ ಹೊಳೆದ ವಿಚಾರಗಳನ್ನು ಪದ್ಯಗಳಲ್ಲಿ ಹಾಡಿಕೊಂಡರು.

ಗುಣವು ತೀರಿತಲ್ಲ ! ಕುಲವು ನಾಶವಾಯ್ತು.
ಲಲನೆ ನಡತೆಯಿಂದ ಲಜ್ಜೆ ಹೋಯ್ತು.
ಜವುಗು ಭೂಮಿಯಿಂದ ಜಲವು ಕೆಟ್ಟು ಹೋಯ್ತು.
ವಿಶ್ವದಾಭಿರಾಮ ಕೇಳು ವೇಮ.

ಸಾಧು ಚರಿತೆಯುಳ್ಳ ಸತಿ ಸದ್ವರ್ತನವ
ಜಾರೆಯೇನರಿವಳು ಸಾಧು ಜನರ ?
ಬ್ರಹ್ಮನಿಷ್ಠನರಿವ ಪ್ರಾಕೃತನರಿಯುವನೇ ?
ವಿಶ್ವದಾಭಿರಾಮ ಕೇಳು ವೇಮ.





ಅಂಗ ಭಾವವೆಲ್ಲ ಅರಿತು ನೋಡಿದಾಗ,
ಅಖಿಲ ಹೇಯಗಳಿಗೆ ಆಲಯವದು.
ಅನ್ಯ ಲಲನೆ ಸಂಗ ಅದು ಪ್ರತ್ಯಕ್ಷ ನರಕ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ರಕ್ತಿಯಿಂದ ದಾಸಿ ಕೈಗೆ ಸಿಕ್ಕು,
ಮಿಕ್ಕಿ ಹೊರಗೆ ಬರದೆ ಮಿಡುಕುತಿರುವ,
ನರನಿಗೆಲ್ಲಿ ಮುಕ್ತಿ ದೊರೆಯುವುದು ? ಹೇಳಿ.
ವಿಶ್ವದಾಭಿರಾಮ ಕೇಳು ವೇಮ

ಊರ ಹಂದಿಗಿರದು ಉಚಿತ ಗಂಧದರಿವು.
ಭೂರಿ ನರಕ ತಿಂದು ಬೀಗುತಿಹುದು.
ಸ್ವೈರಿಣಿ ಬಲ್ಲಳೆಂತು ಸಾಧ್ವಿ ಮಹಿಮೆಯನ್ನು ?
ವಿಶ್ವದಾಭಿರಾಮ ಕೇಳು ವೇಮ.

ಹೀಗೆ ವೇಮನ ತನ್ನ ಕುಪಿತ ಮನಸ್ಸಿನಲ್ಲಿ ನಡೆದ ಪ್ರಸಂಗವನ್ನು ನೆನೆದು ಏನೇನೋ ವಿಚಾರಗಳನ್ನು ಹೆಣೆಯ ತೊಡಗಿದ್ದರು. ಆಗ ಕಲಾ ಮಂದಿರದಿಂದ ಚಿಕ್ಕ ದೊರೆ ಬೇಗ ಮರಳಿದುದನ್ನು ತಿಳಿದು'' ತಮ್ಮ ಪ್ರಯತ್ನದ ಫಲವೇನಾಯಿತೆಂಬುದನ್ನು ತಿಳಿಯಲು ಅಭೀರಾಮಯ್ಯನವರು ಬಂದರು.

''ಏನಾಯಿತು ದೊರೆ ಕಲಾ ಮಂದಿರದಲ್ಲಿ ? ಮನವೇಕೋ ಮ್ಲಾನವಾದಂತಿದೆ. ವಿಶ್ವದಾ ಕುಲೀನ ಸ್ತ್ರೀಯೆಂದು ಸಿದ್ಧವಾಯಿತೇ ?'' ಎಂದು ಪ್ರಶ್ನಿಸಿದರು.

''ಏನು ಹೇಳುವುದು ಅಭಿರಾಮಯ್ಯ ? ಸ್ವೈರಿಣಿ ಸಾಧ್ವಿಯಾಗುವಳೇ ? ಗಣಿಕೆ ಗರತಿ ಎನಿಸುವಳೇ ?'' ಎಂದು ನುಡಿದು, ನಡೆದ ಘಟನೆಯನ್ನು ಯಥಾವತ್ತಾಗಿ ಬಣ್ಣಿಸಿದರು. ನಾನು ಆ ಕುರಿತು ಚಿಂತಿಸುತ್ತಿದ್ದೆ ; ಎಂದು ಹೇಳಿ ಮೇಲಿನ ಪದ್ಯಗಳ ಸಾರವನ್ನು ತಿಳಿಸಿದರು.

''ಅದು ಹಾಗಲ್ಲ ದೊರೆ, ವಿಶ್ವದಾ ನಿಮ್ಮನ್ನು ವಿಶ್ವಕ್ಕೆ ಬಿಟ್ಟು ಕೊಡುವುದಾಗಿ ಮಾತು ಕೊಟ್ಟಿದ್ದಳು. ಹಾಗಾಗಿ, ಆ ರೀತಿ ವರ್ತಿಸಿದ್ದಾಳಷ್ಟೇ'' ಎಂದು ವೈಯಕ್ತಿಕ ಕಹಿಯನ್ನು ದೂರಗೊಳಿಸಿದರು.

''ಅದೇನೇ ಇರಲಿ; ದೈವ ಕೃಪೆಯಿಂದ, ಶಿವನ ಕಣ್ಣು ತೆರೆಯಿತು. ಕಾಮ ದಹನವಾಯಿತು. ಸಾಕು ಈಗ ಮತ್ತೆ ಆ ಮಾತು ಬೇಡ'' ಎಂದರು ವೇಮನ.

ಇವರ ಮಾತಿನ ಗದ್ದಲಕ್ಕೆ ಕೃಷ್ಣಾ ಎಚ್ಚೆತ್ತಳು. ''ಕಕ್ಕ ಎಲ್ಲಿ ಹೋಗಿದ್ದಿರಿ? ಯಾವಾಗ ಬಂದಿರಿ ?'' ಎಂದು ವಿಚಾರಿಸಿ, ತಾನು ಎದ್ದು ಮುಖ ಮಾರ್ಜನೆ ಮಾಡಿಕೊಂಡು ಬಂದು, ಸಂಗೀತ ಪಾಠಕ್ಕೆ ಅಣಿಯಾದಳು. ಅಭಿರಾಮಯ್ಯನವರು ಮೆಲ್ಲನೆ ಅಲ್ಲಿಂದ ಹೊರ ನಡೆದರು.

ಅಂದಿನಿಂದ ವೇಮನರು ಮನೆಯಲ್ಲಿಯೇ ಉಳಿಯತೊಡಗಿದರು. ಹೊರಗೆ

ತಿರುಗಾಡಲು ಹೊರಟರೆ ಅಭಿರಾಮಯ್ಯ ಜತೆಗೆ ಇರುತ್ತಿದ್ದರು. ರಾಜ್ಯಭಾರದ ಹೆಚ್ಚಿನ ಹೊಣೆ ಹೊತ್ತುಕೊಳ್ಳದಿದ್ದರೂ, ಸ್ವರ್ಣ ಶಾಲೆಯ ಉಸ್ತುವಾರಿಯನ್ನಂತೂ ನೋಡಿಕೊಳ್ಳುತ್ತಿದ್ದರು. ವಿಶ್ವದ ಜನರ ಇರುವಿನಲ್ಲಿ ತಲೆ ಹಾಕಿದರು. ಒಂದೆಡೆ ಧಾರ್ಮಿಕ ಶೋಷಣೆ ನಡೆದಿತ್ತು. ಗುಡಿ ಗುಂಡಾರಗಳು ಅಲ್ಲಲ್ಲಿ ಆಗಿಲ ನಿರ್ಮಾಣಗೊಳ್ಳುತ್ತಿದ್ದವು. ಭಕ್ತಿ ಪ್ರಸಾರದ ಹೆಸರಿನಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಶೋಷಣೆಯ ಕೇಂದ್ರಗಳನ್ನು ನಿಯಂತ್ರಿಸುತ್ತಿದ್ದರು. ಯಜ್ಞ ಯಾಗಗಳು ವೈಭವ ಪೂರ್ಣವಾಗಿ ನಡೆದಿದ್ದವು. ಕರ್ಮಕಾಂಡಿಗಳು ಯಜ್ಞದಿಂದಲೇ ಮಳೆಯಾಗುತ್ತದೆ. ಮಳೆಯಿಂದಲೇ ಭೂಮಿಯಲ್ಲಿ ಬೆಳೆ ಬೆಳೆಯುತ್ತದೆ. ಬೆಳೆಯಿಂದ ಉಣ್ಣುವ ಅನ್ನ ; ಮಳೆಯಿಂದ ಕುಡಿಯುವ ನೀರು ಲಭ್ಯ. ಹೀಗೆ ಯಜ್ಞದಿಂದ ಜಗತ್ತಿನ ಇರವು. ಯಜ್ಞವೇ ಪರಮ ದೈವ ; ಎಂದು ಪ್ರತಿಪಾದಿಸಿ ಯಜ್ಞಗಳಲ್ಲಿ ಮಣಗಟ್ಟಲೆ ತುಪ್ಪ ಸುರಿಯುತ್ತಿದ್ದರು. ಖಂಡಗಟ್ಟಲೆ ಸಮಿತ್ತು ಸುಡುತ್ತಿದ್ದರೆ ಅಗಣಿತ ಪಶುಬಲಿ ನೀಡುತ್ತಿದ್ದರು. ಆರ್ಥಿಕ ಶೋಷಣೆಯೂ ಹೆಚ್ಚಾಗಿತ್ತು. ಬಲಿಷ್ಠ ರಾಜರು ಬಲಹೀನ ರಾಜರನ್ನು ಸೋಲಿಸಿ ಕಪ್ಪು ಕಾಣಿಕೆಯನ್ನು ಪಡೆಯುತ್ತಿದ್ದರು. ಅವರ ಸರದಾರರು ಮತ್ತು ಸೈನಿಕರು, ಸೋತ ರಾಜ್ಯದ ಪ್ರಜೆಗಳ ಸೊತ್ತು ಸಾಮಗ್ರಿಗಳನ್ನು ದೋಚುತ್ತಿದ್ದರು. ಸಿರಿವಂತರು ಹೆಚ್ಚಿನ ಬಡ್ಡಿ ಆಕರಣೆ ಮಾಡಿ, ಕೊಟ್ಟ ಸಾಲದಲ್ಲಿ ಬಡವರ ಆಸ್ತಿಗಳನ್ನೇ ಕಬಳಿಸುತ್ತಿದ್ದರು. ರಾಜರಿಗೆ ಉಪದೇಶಿಸುವ ವಿಪ್ರರು, ಅತಿಶೂದ್ರರಿಗೆ ಆಸ್ತಿ ಹೊಂದುವ ಹಕ್ಕೇ ಇಲ್ಲದಂತೆ ರಾಜಾಜ್ಞೆ ಹೊರಡಿಸಿದ್ದರು. ಸಾಮಾಜಿಕ ರಂಗದಲ್ಲಿಯೂ ಜಾತಿಯ ಮೇಲು-ಕೀಳು ಭಾವನೆಯ ವಿಷ ಬೀಜವು ಮೊಳೆತು ಮರವಾಗಿ ಬೆಳೆದಿತ್ತು. ಸ್ಪೃಶ್ಯ ಅಸ್ಪೃಶ್ಯ ಭೇದಗಳನ್ನು ಸೃಷ್ಟಿಸಿ, ಆದಿ ವಾಸಿಗಳಿಗೆ, ಹೊಲೆಯ ಮಾದಿಗರಿಗೆ, ಊರೊಳಗೆ ಇರುವ ಅಧಿಕಾರ ಕಿತ್ತುಕೊಂಡು ಅವರನ್ನು ಅಂತ್ಯಜರನ್ನಾಗಿಸಿದ್ದರು. ಅಂತೇ ವಾಸಿಗಳನ್ನಾಗಿಸಿದ್ದರು. ಹೊಲಗೇರಿಗಳು ಪ್ರತ್ಯೇಕವಾಗಿದ್ದವು. ಸ್ತ್ರೀಯರಿಗೆ ಶ್ರುತಿ ಪಾಠದ ಹಕ್ಕು ಇರಲಿಲ್ಲ. ಶೂದ್ರರಿಗೂ ಇರಲಿಲ್ಲ. ಧರ್ಮ ದೀಕ್ಷೆಗೂ ಅವರು ಅಧಿಕಾರಿಗಳೆನಿಸಿರಲಿಲ್ಲ. ಅಂದ ಮೇಲೆ ಅವರು ದ್ವಿಜರಾಗುವುದೆಂತು? ಸಿರಿವಂತರು, ವರದಕ್ಷಿಣೆಯ ಆಸೆಗಾಗಿ ಸಿರಿವಂತ ಕನ್ನೆಯನ್ನೇ ವರಿಸುತ್ತಿದ್ದರು. ಹೀಗಾಗಿ ಸಮಾಜದಲ್ಲಿ ಸಿರಿವಂತರು, ಬಡವರು, ಎಂಬ ವರ್ಗ ಭೇದವೂ ಉಂಟಾಗಿತ್ತು. ಹೊಲ ಗದ್ದೆಗಳ ಒಡೆಯನೊಬ್ಬ ; ಹೊಲ ಗದ್ದೆಗಳನ್ನು ಊಳುವ ರೈತನೊಬ್ಬ ; ಉತ್ತುವ ಬಿತ್ತುವ ಕೂಲಿಕಾರ ಇನ್ನೊಬ್ಬ. ಹೀಗೆ ವರ್ಗ ಭೇದಗಳು ಬೇರು ಬಿಟ್ಟಿದ್ದವು. ಜನರನ್ನು ಅವರವರ ಗುಣ ಕರ್ಮಗಳಿಂದ ಗುರುತಿಸುವ, ಅವರು ಬೀರುವ ಪ್ರಭಾವಳಿಗಳಿಂದ ಗುರುತಿಸುವ ವರ್ಣೀಯ ವ್ಯವಸ್ಥೆಯು, ಜಾತೀಯ ವ್ಯವಸ್ಥೆಯಾಗಿ ಅಪಾರ್ಥ ಪಡೆದಿತ್ತು. ವಿಶ್ವದಾಳನ್ನು ತೊರೆದು, ವಿಶ್ವ ಕಲ್ಯಾಣಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿರಿಸಿದ ವೇಮನರು, ಈ ವಿವಿಧ ರಂಗಗಳ ಶೋಷಣೆಯನ್ನು ಕುರಿತು ಚಿಂತಿಸತೊಡಗಿದರು.

ಇಹದ ಒಳಗೆ ಸುಖವು ಇಂಪಾಗಿ, ಇರದನಕ,
ಪರದ ಒಳಗೆ ಸುಖವ ಪಡೆವುದೆಂತು ?
ಧನವು ಇರದೆ ಸುಖವು ದೊರೆವುದೆಂತು ತನಗೆ ?
ವಿಶ್ವದಾಭಿರಾಮ ಕೇಳು ವೇಮ



೪. ವಿಶ್ವದಾಳ ಸಂಗ ವೇಮನ ಮತ್ತು ಮುತ್ತಿನಹಾರ

ಧನವು ಇರದೆ ಗುಣವು ತಕ್ಕದೆನಿಸದಲ್ಲ !
ಧನವು ಇರದೆ ಕೀರ್ತಿ ಕೊಲಗಿ ಹೋಯ್ತು.
ಧನವು ಇರದೆ ಶುಚಿಯು ತಾನು ಹುಟ್ಟಿ ಬರದು.
ವಿಶ್ವದಾಭಿರಾಮ ಕೇಳು ವೇಮ.

ಹಾಯಾಗಿರೆ ಇಹದಿ ಹೇಮಕಾರಕ ವಿದ್ಯೆ.
ಪರದಲ್ಲಿ ಸುಖಿಸಲು ಬ್ರಹ್ಮವಿದ್ಯೆ.
ಅನ್ಯ ವಿದ್ಯೆ ಎಲ್ಲ ಅಂತೆ ನಿಷ್ಫಲವದು.
ವಿಶ್ವದಾಭಿರಾಮ ಕೇಳು ವೇಮ.

ಈ ಮುನ್ನ, ಪ್ರಾಯೋಗಿಕವಾಗಿ ಸ್ವರ್ಣವಿದ್ಯೆಯ ಪ್ರಯೋಗಗಳನ್ನು ಮಾಡಿ ಸಿದ್ಧಿ ಪಡೆದ ವೇಮನರು ಅದರಲ್ಲಿ ಹೆಚ್ಚಿನ ಆಸಕ್ತಿಯನ್ನು ತಳೆದರು.

ಉಪ್ಪು ಹುಣಸೆ ಹಣ್ಣು ಊರೊಳಗಿರುವಾಗ,
ಕ್ಷಾಮವೆಲ್ಲಿ ಬಂತು ಕಾಪು ಜನರೆ !
'ಹಳದಿ'ಯರಿಯರೇನು ? ತವರವರಿಯರೇನು ?
ವಿಶ್ವದಾಭಿರಾಮ ಕೇಳು ವೇಮ.

ಉಪ್ಪು ಕಳ್ಳಿಹಾಲು ಊರೊಳಗಿರುವಾಗ,
'ಕೊರತೆ ಕೊರತೆ' ಎನುವ ಕಾಪು ಜನರೆ ?
ಸತುವ ಮೇಳವಿಸುತ ಸಾಧಿಸಲಾರರೇ ?
ವಿಶ್ವದಾಭಿರಾಮ ಕೇಳು ವೇಮ.

ಎಂದು ಹೊಲಗದ್ದೆಗಳ ಸಾಗುವಳಿಯಲ್ಲಿಯೇ ಜೀವನ ಸಾಗಿಸುತ್ತಿದ್ದ, ಸಿರಿವಂತರ ಶೋಷಣೆಗೆ ಗುರಿಯಾಗಿದ್ದ, ಕಾಪು ಜನರು ತಮ್ಮ ಒಕ್ಕಲುತನದ ವ್ಯವಸಾಯದೊಂದಿಗೆ ಸ್ವಲ್ಪ ಯೋಗ ಸಾಧನೆ ಮಾಡಿ, ಮನೋಶಕ್ತಿಯನ್ನು ಬೆಳೆಸಿಕೊಂಡು, ಸ್ವರ್ಣ ತಯ್ಯಾರಿಕೆಯಲ್ಲಿ ತೊಡಗಬಾರದೇಕೆ ? ಎಂದು ವೇಮನರ ವಿಚಾರ. ಯೋಗ ಶಕ್ತಿಯ ಉತ್ಕರ್ಷದೊಂದಿಗೆ ಅಲ್ಪ ಪ್ರಮಾಣದ ಸ್ವರ್ಣ ತಯ್ಯಾರಿಕೆಗೆ ಸೂಕ್ತವಾದ ಈ ಸ್ವರ್ಣ ವಿದ್ಯೆಯಿಂದ ನಾಡಿನ ಬಡ ರೈತರಿಗೆ ನೆರವಾಗುವುದೆಂದು ಅವರ ನಂಬುಗೆ. ಅದಕ್ಕಾಗಿ ಅವರು ಶ್ರಮಿಸಿದರು.

ಹೀಗೆ, ಕಾಲ ಚಕ್ರ ಉರುಳುತ್ತಿತ್ತು. ವಿಜಯನಗರದ ರಾಯರು ಚಕ್ರವರ್ತಿಗಳೆನಿಸಿದ್ದರು. ರಾಜಮಹೇಂದ್ರವರಂ ದೊರೆಗಳು ಅವರಿಗೆ ಕಪ್ಪ ಕೊಡುವ ಸಾಮಂತ ಮಟ್ಟಕ್ಕಿಳಿದಿದ್ದರು. ಮೇಲಾಗಿ ಇತ್ತೀಚೆಗೆ ಅಂದರೆ ಕ್ರಿ. ಶ. 1432ರಲ್ಲಿ ಗಜಪತಿ ರಾಜರೊಡನೆ ನಡೆದ ಘೋರ ಸಂಗ್ರಾಮದಲ್ಲಿ ಜಯಿಸಿ, ಅಳಿಯ ವೇಮಾರೆಡ್ಡಿ ದಕ್ಷಿಣ ಕಳಿಂಗ ರಾಜ್ಯವನ್ನು ಆಕ್ರಮಿಸಿ ತನ್ನ ರಾಜ್ಯವನ್ನು ಸಿಂಹಾಚಲದ ವರೆಗೆ ವಿಸ್ತರಿಸಿದನು. ಆದರೆ ರಾಜ್ಯದ ಬೊಕ್ಕಸ ಬರಿದಾಗಿತ್ತು. ಅಳಿದುಳಿದ ಸ್ವಲ್ಪ ಹಣವನ್ನು ವೇಮನ ತನ್ನ ಪ್ರಿಯತಮೆಯ ಕನಕಾಭಿಷೇಕ ಇತ್ಯಾದಿಗಳಿಗೆ ವೆಚ್ಚ ಮಾಡಿದ್ದರು. ಕಳೆದ ವರ್ಷದ ಕಪ್ಪ-ಕಾಣಿಕೆಗಳನ್ನು ಕಟ್ಟಿರಲಿಲ್ಲ. ಪ್ರಚಲಿತ ವರ್ಷದ ಕಪ್ಪ-ಕಾಣಿಕೆಗಳನ್ನೂ ಕಟ್ಟಿರಲಿಲ್ಲ.

ವಿಜಯನಗರದ ರಾಯರ ಸರದಾರನೊಬ್ಬನು ಕಪ್ಪ-ಕಾಣಿಕೆ ವಸೂಲಿಗಾಗಿ ಆಗಮಿಸಿದ್ದನು. ಚಿಕ್ಕವನಾದ ವೀರಭದ್ರಾರಡ್ಡಿಯ ಹೆಸರಿನಲ್ಲಿ ಅಳ್ಳಯ ವೇಮಾರೆಡ್ಡಿಯೇ ರಾಜ್ಯದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದುದರಿಂದ, ವಿಜಯನಗರದ ಪ್ರತಿನಿಧಿಯು ನೇರವಾಗಿ ಅವರನ್ನು ಸಂಧಿಸಿ,

"ಚಕ್ರವರ್ತಿಗಳು ತಮ್ಮ ಕಡೆಯಿಂದ ಕಪ್ಪ ವಸೂಲ ಮಾಡಿ ತರಲು ಕಳಿಸಿದ್ದಾರೆ. ನೀವು ಹೋದ ವರ್ಷದ ಕಪ್ಪಕಾಣಿಕೆಗಳನ್ನು ಸಲ್ಲಿಸಿಲ್ಲ. ಈ ಮುನ್ನ ಬಂದಾಗ, ಇಷ್ಟರಲ್ಲಿಯೇ ಸಲ್ಲಿಸುವುದಾಗಿ ವಚನ ಕೊಟ್ಟಿದ್ದಿರಿ. ಈಗ ಒಪ್ಪಿಸಿರಿ" ಎಂದು ಕೇಳಿದರು.

"ನಿಜ ಸರದಾರರೇ ! ನಾವು ತಪ್ಪಿತಸ್ಥರು. ನಮ್ಮ ದುರ್ದೈವ. ಕೆಲ ದಿನಗಳ ಹಿಂದೆ ಭಂಡಾರದಲ್ಲಿರಿಸಿದ ನಗ-ನಾಣ್ಯಗಳು ಕಾಣೆಯಾಗಿವೆ. ಚಕ್ರವರ್ತಿಗಳಿಗೆ ನಮ್ಮ ಪರಿಸ್ಥಿತಿಯನ್ನು ನಿವೇದಿಸಿ, ಸ್ವಲ್ಪು ಕಾಲಾವಕಾಶ ಕೊಡಲು ತಿಳಿಸಿರಿ" ಎಂದರು ವೇಮಾರೆಡ್ಡಿ.

"ಆಗದಾಗದು. ನಿಮ್ಮ ಪರವಾಗಿ ಕಳೆದ ಆರು ತಿಂಗಳು ಹಿಂದೆ ಕಾಲಾವಕಾಶಕ್ಕೆ ನಾವು ಸಿಫಾರಸ್ಸು ಮಾಡಿದ್ದೆವು. ರಾಯರೂ ಒಪ್ಪಿದ್ದರು. ಈಗ ಅದರ ಪುನರುಕ್ತಿ ಸಾಧ್ಯವಿಲ್ಲ. ಕಪ್ಪ ಕಟ್ಟದವರನ್ನು ಬಂಧಿಸಿ ತರಲು ಹೇಳಿದ್ದಾರೆ. ನೀವು ನಮ್ಮೊಂದಿಗೆ ಬಂದಿಯಾಗಿ ನಡೆಯಿರಿ" ಎಂದು ಕಠಿಣವಾಗಿ ನುಡಿದನು ರಾಜಪ್ರತಿನಿಧಿ.

ವೇಮಾರೆಡ್ಡಿ ದೊರೆ ಮರು ಮಾತಾಡಲಿಲ್ಲ. ತಾನು ಈ ಮುನ್ನ ಕೊಟ್ಟ ವಚನ ಪಾಲಿಸಲಾಗದೆ, ವಚನ ಭ್ರಷ್ಟತೆಯ ಅಳುಕಿನಿಂದ ಕೈಗೆ ಕೋಳ ತೊಟ್ಟು, ರಾಜ ಪ್ರತಿನಿಧಿಯೊಂದಿಗೆ ನಡೆದನು. ಹೋಗುವಾಗ ಪತ್ನಿ ಮಲ್ಲಮ್ಮ ಕಣ್ಣೀರಿಟ್ಟಳು, ಗೋಗರೆದಳು. ಅಭಿರಾಮಯ್ಯ ಮತ್ತಿತರರು ಮಮ್ಮಲನೆ ಮರುಗಿದರು. ಇಷ್ಟರಲ್ಲಿ ವೇಮನರಿಗೂ ಸುದ್ದಿ ತಿಳಿದು ಧಾವಿಸಿ ಬಂದು ಅಣ್ಣನ ಕಾಲು ಹಿಡಿದು, ತಾನು ಈ ಕಾಣಿಕೆಯ ಮೊತ್ತದ ಸ್ವರ್ಣವನ್ನು ಒಂದು ವಾರದಲ್ಲಿ ತಂದು ಒಪ್ಪಿಸುವುದಾಗಿಯೂ ಮತ್ತು ಅದು ವರೆಗೆ ಮನೆಯ ಹೊಸ್ತಿಲು ತುಳಿಯುವುದಿಲ್ಲವಾಗಿಯೂ ಪ್ರತಿಜ್ಞೆ ತೊಟ್ಟು, ಅಲ್ಲಿಯೇ ಇದ್ದ ಅಭಿರಾಮಯ್ಯನನ್ನು ಕರೆದುಕೊಂಡು ಸ್ವರ್ಣಶಾಲೆಗೆ ನಡೆದರು.

"ಅಭಿರಾಮಯ್ಯ ! ಅಣ್ಣನವರಿಗೆ ಅವಮಾನವಾಯಿತಲ್ಲ ! ಇನ್ನು ದೇವಿಯಂಥ ಅತ್ತಿಗೆಗೆ ಹೃದಯ ಬಿರಿಯುವ ಕಂಗಾಲ ಸ್ಥಿತಿ. ನಾವು ಕೂಡಲೇ ಏನಾದರೂ ಮಾಡಬೇಕು. ಬೇಗನೇ, ಕಲ್ಲುಪ್ಪು ಹುಣಸೆ ಹಣ್ಣು, ತಾಳಕ (ಹಳದಿ) ಮತ್ತು ತವರಗಳನ್ನು ಬೇಗ ಜಮಾಯಿಸು. ವೇಳೆ ಕಳೆಯದೇ ಭಟ್ಟಿಗಿಳಿಸೋಣ" ಎಂದರು ವೇಮನ.

ವಿಜಯನಗರ ರಾಯರ ಕಠಿಣ ಕ್ರಮ ಕುರಿತು,
ಕನಕವಿಪ್ಪ ಕಾಲ ಕಠಿಣ ಭಾವ ತಾಳಿ,
ತಿಳಿಯಲಾರರು ಜನ ತಿಳಿವುಗೆಟ್ಟು,
ಕನಕ ಜೊನ್ನಿನಂತೆ ; ಕಾಣದಿರುವರಲ್ಲ ?
ವಿಶ್ವದಾಭಿರಾಮ ಕೇಳು ವೇಮ.

ಎಂದು ಗುನುಗುನಿಸಿದರು.

"ಅಭಿರಾಮಯ್ಯನವರೇ, ಸ್ವರ್ಣ ತಯ್ಯಾರಿಕೆಯ ಸಕಲ ಸಿದ್ಧತೆಗಳನ್ನು ಮಾಡಿ,





ನನ್ನನ್ನು ಕರೆಯಿರಿ. ನಾನು ಬಳಿಯ ಗ್ರಾಮದ ಮಾವಿನ ತೋಪಿನಲ್ಲಿ ಇರುವ ಕುಟೀರದಲ್ಲಿ ಇರುತ್ತೇನೆ. ಮನೆಯಲ್ಲಿ ಈ ವಿಷಯ ತಿಳಿಸಬೇಡಿರಿ" ಎಂದರು.

"ತಮ್ಮ ಊಟದ ಏರ್ಪಾಟು ಮಾಡಲೇ ?" ಎಂದರು ಅಭಿರಾಮಯ್ಯ.

"ಬೇಡ, ಬೇಡ, ಇದು ಬೇಸಗೆಯ ಕಾಲವಲ್ಲವೇ ? ಮಾಮರಗಳು ಫಲಭರಿತವಾಗಿರುತ್ತವೆ. ಅವು ಹೊಟ್ಟೆಗೆ ತೃಪ್ತಿ ನೀಡುತ್ತವೆ. ಆದಷ್ಟು ಏಕಾಂತದಲ್ಲಿದ್ದು, ಧ್ಯಾನ ಸಾಧನೆಯನ್ನು ತೀವ್ರಗೊಳಿಸಲಿಚ್ಛಿಸಿದ್ದೇನೆ" ಎಂದು ನುಡಿದು ಒಬ್ಬರೇ ಹೊರಟೇ ಬಿಟ್ಟರು.

ಇತ್ತ ವಿಶ್ವದಾ ಅಗ್ನಿ ಪರೀಕ್ಷೆಗೊಳಗಾಗಿ ತನ್ನ ಪರಾಜಯದಲ್ಲಿಯೇ ವಿಶ್ವದ ವಿಜಯವನ್ನು ಕಂಡು ಸಂತೋಷಿಸಿದಳು. ಅವಳಿಗೆ ಸುಖವಾವುದು ? ದುಃಖವಾವುದು ? ಇವುಗಳ ಮಧ್ಯರೇಖೆ ಯಾವುದು ? ತಿಳಿಯದಾಯಿತು. ವೇಮನರೆದುರು ತಾನು ಕುಲೀನಳಲ್ಲವೆಂದು ಸಿದ್ಧವಾದರೂ ಅವಳು ಅಂತರಂಗದಲ್ಲಿ ಪರಿಶುದ್ಧಳಾಗಿದ್ದಳು. ಸಮಾಜದ ಎಣಿಕೆಯಲ್ಲಿ ಗಣಿಕೆ ಕುಲಟೆಯಾಗಿದ್ದರೂ ಪ್ರಿಯತಮನಲ್ಲಿ ನಿಷ್ಠೆ ಶ್ರದ್ಧೆಗಳಿದಾಂಗಿ ಗರತಿಯಾಗಿದ್ದಳು. ಕುಲೀನಳಾಗಿದ್ದಳು. ತನಗಾಗಿ ವೇಮನರು ತಂದು ಸುರಿದ ಸ್ವರ್ಣ ನಾಣ್ಯಗಳಿಂದಾಗಿ ಅಳ್ಳಯ ವೇಮಾರೆಡ್ಡಿ ದೊರೆ ಬಂಧಿಯಾಗಿ ವಿಜಯನಗರಕ್ಕೆ ಹೋಗಬೇಕಾಗಿ ಬಂದುದಕ್ಕಾಗಿ ಪರಿತಪಿಸಿದಳು. ಪಶ್ಚಾತ್ತಾಪ ಪಡಲು ನಿರ್ಧರಿಸಿ, ತನ್ನಲ್ಲಿ ಇರುವ ವಸ್ತು ಒಡವೆಗಳನ್ನೆಲ್ಲ ಗಂಟು ಕಟ್ಟಿ ಒಯ್ಯಲು ಮೆಟ್ಟಿಲಿಳಿದು ಬಂದಳು. ಅವಳನ್ನು ಕಂಡು ಸಂದೇಹಿಸಿದ ಅವಳ ತಾಯಿ, ಎದುರಾಗಿ ಎಲ್ಲಿಗೆ ಹೊರಟೆ ? ಇನ್ನೂ ಆ ಹಾಳು ಯುವಕನ ಆಸೆಯೇ? ಕೈಯಲ್ಲಿ ಹಿಡಿದಿರುವ ಗಂಟಿನಲ್ಲೇನಿದೆ ?" ಎಂಧು ಪ್ರಶ್ನಿಸಿ, ಕೈ ಹಿಡಿದು ತಡೆದಳು.

"ಅಮ್ಮಾ ನನ್ನನ್ನು ದಯವಿಟ್ಟು ತಡೆಯಬೇಡ. ನನ್ನ ಹೃದಯ ದೇವತೆಯನ್ನು ಕುರಿತು ಲಘುವಾಗಿ ಆಡಬೇಡ. ನಮ್ಮ ದೈಹಿಕ ಸಂಬಂಧ ಮೊನ್ನೆಗೆ ತೀರಿದೆ ನಿಜ. ಆದರೆ ನಮ್ಮ ಹೃದಯ ಸಂಬಂಧ ಪ್ರಾಣವಿರುವ ಪರ್ಯಂತ ಉಳಿಯುತ್ತದೆ. ಈ ಗಂಟಿನಲ್ಲಿ ಅವರು ಪ್ರೀತಿಯಿಂದ ನೀಡಿದ ನಗ ನಾಣ್ಯಗಳಿವೆ. ಮಲ್ಲಮ್ಮ ರಾಣಿ ಈಗ ತೊಂದರೆಯಲ್ಲಿದ್ದಾರೆ. ಇವುಗಳನ್ನು ಅವರಿಗೆ ಸಲ್ಲಿಸಿ ಪಾಪಮುಕ್ತಳಾಗ ಬಯಸಿರುವೆ" ಎಂದು ನಿರರ್ಗಳವಾಗಿ, ನಿಷ್ಠುರವಾಗಿ ನುಡಿದಳು.

"ಛೀ ! ಕುಲಕ್ಕೆ ದ್ರೋಹ ಬಗೆವವಳೇ ! ದೇವದಾಸಿಯ ಮಗಳಾಗಿ ಗರತಿಯ ಮಾತನಾಡುವುದಕ್ಕೆ ಹೇಗೆ ಧೈರ್ಯ ಬಂತು ? ತಾರೆ ಆ ಗಂಟನ್ನಿಲ್ಲಿ". ಎನ್ನುತ್ತ ಗಂಟನ್ನು ಸೆಳೆದುಕೊಂಡು ವಿಶ್ವದಾಳನ್ನು ಬಾಗಿಲತ್ತ ನೂಕಿದಳು.

ವಿಶ್ವದಾ ಧೈರ್ಯಗುಂದದೆ, ತನ್ನ ಪೂರ್ವ ನಿರ್ಧಾರದಂತೆ ಅರಮನೆಯತ್ತ ಕಾಲು ಹಾಕಿದಳು. ಕಾವಲುಗಾರರಿಗೆ ನರ್ತಕಿಯ ಪರಿಚಯ ಸಿಕ್ಕು ಇವಳೇಕಪ್ಪ ಮತ್ತೆ ಇಲ್ಲಿ ?" ಎಂದು ಹುಬ್ಬೇರಿಸಿದರು.

"ಮಲ್ಲಮ್ಮ ರಾಣಿಯನ್ನು ಭೆಟ್ಟಿಯಾಗಬೇಕಿತ್ತು" ಎಂದು ಕಾವಲುಗಾರನಿಗೆ ತಿಳಿಸಿ ಬಾಗಿಲು ಬಳಿ ನಿಂತಳು.

ಕಾವಲುಗಾರ ಒಳಗೆ ಹೋಗಿ ರಾಣಿಗೆ ಈ ಸಂಗತಿ ತಿಳಿಸಿದನು. ಮಲ್ಲಮ್ಮ ರಾಣಿಗೆ ಸ್ವಲ್ಪ ಅಚ್ಚರಿ ಎನಿಸಿದರೂ ವಿಷಯ ತಿಳಿಯುವ ಕುತೂಹಲವಿತ್ತು. "ಆಗಲಿ ; ಒಳಗೆ ಬರಹೇಳು" ಎಂದಳು.

ಕಾವಲುಗಾರ ರಾಣಿಯ ಸಂದೇಶ ತಿಳಿಸಿದೊಡನೆ, ವಿಶ್ವದಾ ಗಂಭೀರ ವದನೆಯಾಗಿ ಮೆಲ್ಲನೆ ಒಳ ಬಂದಳು. ಮಲ್ಲಮ್ಮನನ್ನು ಒಂದೆರಡು ಬಾರಿ ದೇವಾಲಯದಲ್ಲಿ ಕಂಡಂತೆ ನೆನಪು, ಪರಿಚಯ ಹಿಡಿದು, ಅವಳ ಪಾದಕ್ಕೆ ಮಣಿದಳು. ಕಣ್ಣು ಕಂಬನಿಗೂಡಿತ್ತು.

"ಏನು ಇಲ್ಲಿಗೆ ಬಂದೆ ?" ಎಂದರು, ಸುಂದರ ಹೃಷ್ಟಪುಷ್ಟ ಮೈಕಟ್ಟಿನ ನರ್ತಕಿಯನ್ನು ಉದ್ದೇಶಿಸಿ.

"ಚಿಕ್ಕ ದೊರೆಗಳು ನೀಡಿದ ನಗ-ನಾಣ್ಯಗಳ ಮೂಟೆಯನ್ನು ಹಿಂತಿರುಗಿಸಲು ಹೊರಟಿದ್ದೆ. ಆದರೆ ನನ್ನ ತಾಯಿಯ ದುರಾಸೆಯಿಂದ ಬರಿಗೈಯಿಂದ ಬರಬೇಕಾಯಿತು. ಕೊನೆಗೆ ತಮ್ಮ ದರ್ಶನ ಪಡೆದು, ಕುಟೀರ ವಾಸಕ್ಕೆ ಹೋಗುವ ಮುನ್ನ ತಮ್ಮ ಆಶೀರ್ವಾದ ಪಡೆದು ಹೋಗೋಣವೆಂದು ಬಂದೆ. ದಯವಿಟ್ಟು, ಸಂತಳಂತೆ ಬಾಳಲು ಆಶೀರ್ವದಿಸಿ" ಎಂದು ಬೇಡಿಕೊಂಡಳು.

ವಿಶ್ವದಾಳ ಶ್ರದ್ಧಾ ಭಕ್ತಿಗಳನ್ನೂ, ನಯ ವಿನಯಗಳನ್ನೂ ಕಣ್ಣಾರೆ ಕಂಡ ಮಲ್ಲಮ್ಮ ರಾಣಿ ಅವಳ ಪ್ರಾಮಾಣಿಕ ಮಾತುಗಳನ್ನು ಪೂರ್ಣ ನಂಬಿದಳು. ಹೆಚ್ಚಿನ ಪ್ರಶ್ನೆಗಿಳಿಯದೆ,

"ಎಲ್ಲಿ ವಾಸ ಮಾಡಬೇಕೆಂದಿರುವೆ ?" ಎಂದು ಕೇಳಿದಳು ರಾಣಿ. "ಸಿಂಹಾಚಲ ಬೆಟ್ಟದಲ್ಲಿ, ಎಲ್ಲಾದರೂ ಸರಿ" ಎಂದು ಉತ್ತರಿಸಿದಳು ವಿಶ್ವದಾ.

"ಹಾಗಾದರೆ, ನೀನು ಅಭಿರಾಮಯ್ಯನವರ ಜೊತೆಗೆ ಚರ್ಚಿಸು. ಅವರು ನಿನಗಾಗಿ ಕುಟೀರ ನಿರ್ಮಾಣದ ವ್ಯವಸ್ಥೆ ಮಾಡುತ್ತಾರೆ. ಅಲ್ಲಿ ದೇವರ ಸಂಕೀರ್ತನೆಯಲ್ಲಿ ಕಾಲ ಕಳೆ, ಒಳ್ಳೆದಾಗಲಿ" ಎಂದು ಹೇಳಿ, ಕೆಲ ಹಣ್ಣು ಹಂಪಲುಗಳನ್ನು ಕೊಟ್ಟು, ಬೀಳ್ಕೊಟ್ಟರು.

ವಿಶ್ವದಾ, ಆಬಳಿಕ, ಅಭಿರಾಮಯ್ಯನವರು ಏರ್ಪಡಿಸಿದಂತೆ ಸಿಂಹಾಚಲದ ಬೆಟ್ಟದಡಿಯ ಕುಟೀರವೊಂದರಲ್ಲಿ ವಾಸವಾದಳು. ಏಕಾಂತದಲ್ಲಿ ನರ್ತಿಸಿ, ದೇವರ ನಾಮ ಹಾಡಿ, ಹರ್ಷ ಪಡುತ್ತಿದ್ದಳು. ಜನರು ಬಂದಾಗ ವಿಭೂತಿ ಪುರುಷರ ಕತೆಗಳನ್ನು ಹೇಳುತ್ತಿದ್ದಳು. ಆಗಾಗ ಲಭ್ಯವಾಗುತ್ತಿದ್ದ ವೇಮನರ ಪದ್ಯಗಳನ್ನು ಕಂಠ ಪಾಠ ಮಾಡಿ, ಜನರೆದುರು ಹಾಡುತ್ತಿದ್ದಳು.

ರಾಜಮಹೇಂದ್ರವರಂ ಸ್ವರ್ಣ ಶಾಲೆಯಲ್ಲಿ ಸ್ವರ್ಣ ತಯ್ಯಾರಿಕೆಯ ಪೂರ್ಣ ಸಿದ್ಧತೆ ಮಾಡಿ, ಅಭಿರಾಮಯ್ಯನವರು ವೇಮನರಿಗೆ ಬರಬೇಕೆಂದು ಹೇಳಿ ಕಳಿಸಿದರು. ತಮ್ಮ ಧ್ಯಾನ ಸಾಧನದಲ್ಲಿ ತನ್ಮಯರಾಗಿದ್ದ ವೇಮನರು ತಮ್ಮಲ್ಲಿಗೆ ಬಂದ ಪರಿಚಾರಕನಿಂದ ಎಲ್ಲ ವಿಷಯ ತಿಳಿದು, ಮಾರನೆಯ ದಿನ ಸಾಯಂಕಾಲ ಬರುವುದಾಗಿ ಹೇಳಿ ಕಳಿಸಿದರು.

ಪರಿಚಾರಕನು ಮರಳಿ ಬಂದು, ಚಿಕ್ಕ ದೊರೆಗಳ ಬರವಿನ ಸಮಾಚಾರವನ್ನು ಅಭಿರಾಮಯ್ಯನವರಿಗೆ ತಿಳಿಸಿದನು.

ಅಭಿರಾಮಯ್ಯನವರು ಸಕಲ ಸಿದ್ಧತೆ ಮಾಡಿಕೊಂಡು ವೇಮನರ ಬರವಿಗಾಗಿ ಕಾಯುತ್ತಿದ್ದರು. ವೇಮನರು ಬಂದವರೇ ಕಚ್ಚಾ ಸಾಮಗ್ರಿಗಳನ್ನು ಕುದಿಸಿ ರಸಾಯನ ತಯ್ಯಾರಿಸಿದರು. ಅದರಲ್ಲಿ ಸೀಸದ ತುಂಡುಗಳನ್ನು ಹಾಕಿ ಇಡೀ ರಾತ್ರಿ ಕುದಿಸಿದರು. ತವರ ತುಂಡಿಗೆ ಬಣ್ಣ ಬರಲು ತಾಳಕ (ಹಳದಿ) ವನ್ನು ಸೇರಿಸಿದರು. ಬಂಗಾರ ಬಣ್ಣದ ಧಾತುವೊಂದು ತಯ್ಯಾರಾಯಿತು. ಅದಕ್ಕೆ ಬಂಗಾರದ ಅಣು ಸಂರಚನೆ ಮತ್ತು ಸಮತೂಕಗಳು ಉಂಟಾಗುವಂತೆ ಮಾಡಲು ಯೋಗ ಶಕ್ತಿಯದು ಅಗತ್ಯವಿತ್ತು. ತಮ್ಮ ಮಂತ್ರ ಚೈತನ್ಯದಿಂದ ಸೂಕ್ಷ್ಮ ಸ್ಪಂದನಗಳನ್ನು ಸೃಷ್ಟಿಸಿ, ಚೊಕ್ಕ





ಬಂಗಾರದ ಗಟ್ಟಿಗಳನ್ನೇ ಕೊನೆಗೆ ಸಿದ್ಧಪಡಿಸಿದರು. ಅದನ್ನು ಕಂಡು, ತಮ್ಮ ಯಶಸ್ಸಿನ ಬಗೆಗೆ ತಾವೇ ಹರುಷಗೊಂಡರು.

ಇಷ್ಟರಲ್ಲಿ ಮನೆ ಬಿಟ್ಟು ಬಂದು 7-8 ದಿನಗಳೇ ಸಂದಿದ್ದವು. ಮೊದಲು ಛಳಿ-ಜ್ವರದಿಂದ ಪೀಡಿತಳಾದ ಬಾಲೆ ಕೃಷ್ಣಾಳ ರೋಗವು ವಿಷಮಿಸಿ ಕಟ್ಟಿನ ಜ್ವರವಾಗಿ ಪರಿಣಮಿಸಿತ್ತು. ರಾಜ ವೈದ್ಯರು ಔಷಧಿ ಕೊಟ್ಟರೂ ಫಲಕಾರಿಯಾಗಲಿಲ್ಲ. "ಅಮ್ಮ ! ಚಿಕ್ಕಪ್ಪ ಎಲ್ಲಿ ? ನನ್ನನ್ನು ಬಿಟ್ಟು ಎಲ್ಲಿಗೂ ಹೋಗುವುದಿಲ್ಲ, ಎಂದು ವಚನಕೊಟ್ಟ ಚಿಕ್ಕಪ್ಪ ಈಗೆಲ್ಲಿ ?" ಎಂದು ತಾಯಿ ಮಲ್ಲಮ್ಮ ರಾಣಿಯನ್ನು ಕೇಳುತ್ತಿದ್ದಳು. ಕೃಷ್ಣಾ ಅರೆ ನಿದ್ರೆಯಲ್ಲಿ ಸಹ 'ಚಿಕ್ಕಪ್ಪ ಚಿಕ್ಕಪ್ಪ' ಎಂದು ಬಡಬಡಿಸುತ್ತಿದ್ದಳು. ಆದರಿಂದಾಗಿ, ಮಲ್ಲಮ್ಮ ರಾಣಿ ಹಿಂದಿನ ದಿನವೇ ವೇಮನರನ್ನು ಕರೆ ತರಲು ಪರಿಚಾರಕನನ್ನು ಕಳುಹಿಸಿದ್ದಳು. ಅವನು ಅಭಿರಾಮಯ್ಯನವರನ್ನು ಸಂಪರ್ಕಿಸಿ, ವಿಷಯ ತಿಳಿಸಿದನು. "ಚಿಕ್ಕ ದೊರೆಗಳು ಈಗ ಮಂತ್ರ ಧ್ಯಾನದಲ್ಲಿ ತನ್ಮಯರಾಗಿದ್ದಾರೆ. ನಾಳೆ ಬೆಳಗ್ಗೆ ಕರೆ ತರುವೆ. ಹಾಗೆಂದು ರಾಣಿಯವರಿಗೆ ತಿಳಿಸು" ಎಂದು ಹೇಳಿ ಕಳಿಸಿದ ಅಭಿರಾಮಯ್ಯ. ಒಂದೆಡೆ ಕಷ್ಟ ಕಾಣಿಕೆಯ ಮೂಲ್ಯದ ಸ್ವರ್ಣ ಗಟ್ಟಿಗಳನ್ನು ಸಲ್ಲಿಸಿ, ಬಂಧಿತ ಹೇಮರಡ್ಡಿ ದೊರೆಗಳ ಬಿಡುಗಡೆಯ ಪರದಾಟ, ಇನ್ನೊಂದೆಡೆ ಅವರ ಮುದ್ದು ಮಗಳ ಪ್ರಾಣ ಪಕ್ಷಿಯ ಹಾರಾಟ ; ಸಂಕಟಗಳೇನು ಒಂಟಿಯಾಗಿ ಬರುತ್ತವೆಯೇ ? ಒಂದು ಕಾಗೆ ಕೂಗಿ ತನ್ನ ಬಳಗವನ್ನೇ ಸೇರಿಸುವಂತೆ ಈ ಸಂಕಟಗಳೂ ಒಂದರ ಜೊತೆಗೊಂದು ಸೇರುವವೇನೋ ?

ವೇಮನ ಕೈಯಲ್ಲಿ ಒಂದು ಸ್ವರ್ಣ ಗಟ್ಟಿಯನ್ನೂ ಮತ್ತು ಕೃಷ್ಣಾಳ ಪ್ರೀತಿಯ ಗುಲಾಬಿ ಪುಷ್ಪವನ್ನೂ ಹಿಡಿದುಕೊಂಡು ಮನೆಯತ್ತ ಧಾವಿಸಿದರು. 'ಕೃಷ್ಣಾ ! ಕೃಷ್ಣಾ !' ಎನ್ನುತ್ತ ಮನೆಯನ್ನು ಪ್ರವೇಶಿಸಿದರು. ಅತ್ತಿಗೆ ಎದುರಾದಾಗ, "ಅತ್ತಿಗೆ ! ಕೃಷ್ಣಾ ಹೇಗಿದ್ದಾಳೆ ?" ಎಂದು ವಿಚಾರಿಸಿದರು.

"ಚಿಕ್ಕಪ್ಪ, ಚಿಕ್ಕಪ್ಪ ! ಎಂದು ಕನವರಿಸುತ್ತ ಇದೀಗ ನಿದ್ರೆ ಹೋಗಿದ್ದಾಳೆ" ಎಂದು ಹೇಳಿ, ವಿಷಮ ಜ್ವರದ ಬಾಧೆ ಕುರಿತು ವಿವರಿಸಿ, ರಾಜ ವೈದ್ಯರ ಔಷಧಿಯು ಇದು ವರೆಗೆ ಫಲಕಾರಿಯಾಗಿಲ್ಲವೆಂಬ ವಾಸ್ತವ ಸತ್ಯವನ್ನೂ ಗದ್ಗದಿತ ಕಂಠದಿಂದ ತಿಳಿಸಿದರು.

ವೇಮನ ಕೃಷ್ಣಾಳ ಹಾಸುಗೆಯ ಬಳಿ ಹೋಗಿ, 'ಕೃಷ್ಣಾ ! ನಾನು ಬಂದಿರುವೆನಮ್ಮಾ' ಎನ್ನುತ್ತ, 'ನೋಡಿಲ್ಲಿ ನಿನ್ನ ಗುಲಾಬಿ ತಂದಿರುವೆ' ಎಂದು ನುಡಿದು ಅವಳ ಕೆನ್ನೆಗೆ ಸಿಹಿಮುತ್ತು ಕೊಟ್ಟರು. ತನ್ನ ಸ್ವಪ್ನ ಚಿತ್ರದಲ್ಲಿಯೂ ಚಿಕ್ಕಪ್ಪನ ಮುತ್ತು ಮತ್ತವನು ನೀಡುವ ಅರಳಿದ ಗುಲಾಬಿಗಳನ್ನು ಕನವರಿಸುತ್ತಿದ್ದ ಕೃಷ್ಣಾ ಕಣ್ತೆರೆದಳು. ತಾನು ಸ್ವಪ್ನದಲ್ಲಿ ಕಂಡದ್ದು ಸತ್ಯವಾದುದನ್ನು ನೋಡಿ ಹರ್ಷಿತಳಾಗಿ,

"ಯಾವಾಗ ಬಂದೆ ಚಿಕ್ಕಪ್ಪ ? ಎಲ್ಲಿ ಹೋಗಿದ್ದೆ ?" ಎಂದು ಪ್ರಶ್ನಿಸಿದಳು ಅಕ್ಕರೆಯಿಂದ.

"ನಿನ್ನನ್ನು ಹೇಗೆ ಮರೆಯಲಮ್ಮ, ಅಣ್ಣನವರನ್ನು ಬಿಡಿಸಿಕೊಳ್ಳಬೇಡವೇ ? ಆ ಕೆಲಸದಲ್ಲಿ ತೊಡಗಿದ್ದೆ. ನಿನಗಾಗಿ ಏನು ತಿಂದಿರುವೆನು ನೋಡು" ಎಂದು ಸುಂದರ ಗುಲಾಬಿ ಪುಷ್ಪವನ್ನು ತೋರಿಸಿ ಅವಳ ಬಲಗೆನ್ನೆಗೊಂದು ಸಿಹಿ ಮುದ್ದನಿತ್ತರು.

"ಮತ್ತೆ ಈ ಕೆನ್ನೆಗೆ ?" ಎನ್ನುತ್ತ ಹೊರಳಿ ಮಲಗಿದಳು, ಆ ಸಾವಿನ ಕ್ಷಣದ ನೋವನ್ನೂ ಮರೆತು.

ಆ ಕೆನ್ನೆಗೆ ಮುತ್ತನೀಯಲು ಬಾಗಿದೊಡನೆಯೇ ಕೃಷ್ಣಾಳ ಎತ್ತಿದ ಕತ್ತು ನಿಯಂತ್ರಣ ತಪ್ಪಿ ದಿಂಬಿಗೊರಗಿತು. ನೋಡು ನೋಡುತ್ತಲೇ ಪ್ರಾಣ ಪಕ್ಷಿ ಹಾರಿ ಹೋಯಿತು.

"ಕೃಷ್ಣಾ, ಕೃಷ್ಣಾ...... ಅತ್ತಿಗೆ ಕೃಷ್ಣಾ....." ಎಂದು ಗದ್ಗಿದಿತರಾಗಿ ಕೂಗಿದರು.

ಮುಂದೆ ಮಾತು ಹೊರಡಲಿಲ್ಲ. ಮೋಹಿಸಿದ್ದ ಪ್ರಿಯತಮೆಯನ್ನು ತಾನು ತ್ಯಜಿಸಿ ಬಂದಿದ್ದ. ಪ್ರೀತಿಸಿದ ವಾತ್ಸಲ್ಯಮಯ ಕೃಷ್ಣಾ ತನ್ನನ್ನು ತ್ಯಜಿಸಿದಳು. ವಿಧಿಯ ಅಟ್ಟಹಾಸ ! ಸ್ವರ್ಣ ಸಿದ್ಧಗೊಳಿಸಿ ಅಣ್ಣನ ಬಿಡುಗಡೆ ಮಾಡಿ ಧನ ಋಣದಿಂದಲೂ ಮುಕ್ತನಾಗಿದ್ದ. ವಿತ್ತೇಷಣ, ದಾರೇಷಣ, ಪುತ್ರೇಷಣಗಳಿಂದ ಬಂಧಿತರಾದ ತಾವು ಈಷಣ ತ್ರಯಗಳಿಂದ ದೂರವಾದರು.

ಕೃಷ್ಣಾಳ ಶವ ಸಂಸ್ಕಾರಕ್ಕಾಗಿ ಮಸಣಕ್ಕೆ ತೆರಳಿದ ವೇಮನರು ದಹನ ಕ್ರಿಯೆಯ ನಂತರ ಮನೆಯತ್ತ ಮರಳಲಿಲ್ಲ.

ಜನಿಸಿದ ಜನರೆಲ್ಲ ಮಹಿಯ ಮೇಲುಳಿಯಲು,
ಅನುವು ಇಹುದೆ ಜಗದಿ ? ಆಗದೆಂದು
ಗಣನೆ ಯಮನದು ; ಬೆಳೆದಂತ ಕಳೆಯುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಸಾಯುವವರ ಕಂಡು, ಸಾವು ನಿಶ್ಚಿತೆಂದು,
ತತ್ತ್ವವೆಲ್ಲ ಆತ್ಮ, ತಿಳಿದುಕೊಂಡು,
ಬೆದರಿ ಅದರಂತೆ ಬಾಳುವವನೆ ಭಕ್ತ.
ವಿಶ್ವದಾಭಿರಾಮ ಕೇಳು ವೇಮ.

ಜನನ ಮರಣವೆಲ್ಲ ಸ್ವಪ್ನ ನಿದ್ರೆಯಂತೆ,
ಭೂಮಿ ಮೇಲೆ ತೋರ್ಪ ಬಿಸಿಲುಗುದುರೆ.
ನರನು ಜಗಕಂಟಲು ನಗುಪಾಟಲಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಎಂಬಿತ್ಯಾದಿ ವಿಚಾರಗಳು ಮನದಲ್ಲಿ ಮೂಡಿ ಮರೆಯಾದವು.

------



# ೫. ಶೋಷಣೆಯ ವಿರುದ್ಧ ಚಳುವಳಿ

ಅಜ್ಞರ ವಿರುದ್ಧ ಬುದ್ಧಿ ಜೀವಿಗಳು, ಅಬಲೆಯರ ವಿರುದ್ಧ ಸಬಲ ಪುರುಷರು, ದಲಿತರ ವಿರುದ್ಧ ಕುಲೀನರು, ಬಡವರ ವಿರುದ್ಧ ಧನಿಕರು, ಪ್ರಜೆಗಳ ವಿರುದ್ಧ ಆಳುವವರು, ಶೋಷಣೆಯ ಅಸ್ತ್ರ ಝಳಪಿಸುತ್ತಿದ್ದರು. ವಿಶ್ವದಾಳ ತೋಳಿನಿಂದ ಬಿಡುಗಡೆಯಾಗಿ ವಿಶ್ವದ ಸೇವೆಗೆ ಮುಡಿಪಾಗಿ ಲಭ್ಯವಾದ ವೇಮನರ ಪ್ರಬುದ್ಧತೆಯು ಕಾವೇರ ತೊಡಗಿತ್ತು.

## ಧಾರ್ಮಿಕ ಶೋಷಣೆ :

ಭಾರತದಲ್ಲಿ ಧಾರ್ಮಿಕ ಶೋಷಣೆಗೆ ವಿಪುಲ ಅವಕಾಶಗಳಿವೆ. ಇಲ್ಲಿ ಹಲವಾರು ಮತಗಳಿವೆ. ವೈದಿಕ ಮತವು ಅವುಗಳಲ್ಲೊಂದಾದರೆ, ತಾಂತ್ರಿಕ ಮತವು ಇನ್ನೊಂದು. ವೈದಿಕ ಮತದಲ್ಲಿ ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಕೌಮಾರ, ಸೌರ ಎಂಬ ಉಪಾಸ್ಯ ದೇವತಾ ಭೇದದಿಂದ ಆರು ಮತಗಳಿವೆ. ಜೀವ, ಜಗತ್, ಈಶ್ವರರನ್ನು ವ್ಯಾಖ್ಯಾನಿಸಿ ಪರಸ್ಪರ ಸಂಬಂಧವನ್ನು ವಿವರಿಸುವ ಆರು ದರ್ಶನಗಳಿವೆ. ಕಪಿಲರ ಸಾಂಖ್ಯ, ಗೌತಮರ ನ್ಯಾಯ, ಕಣಾದರ ವೈಶೇಷಿಕ, ಜೈಮಿನಿಯವರ ಪೂರ್ವ ಮೀಮಾಂಸೆ, ಬಾದರಾಯಣ ವ್ಯಾಸರ ಉತ್ತರ ಮೀಮಾಂಸೆ ಎಂಬವೇ ಷಡ್ದರ್ಶನಗಳು. ಇದಲ್ಲದೆ ಅವೈದಿಕವಾದ ಸಾಕ್ಯಮುನಿಯ ಬೌದ್ಧ ಮತವಿದೆ. ಮಹಾವೀರರ ಜೈನ ಮತವಿದೆ. ನಾನಕರ ಸಿಕ್ಕ ಮತವಿದೆ. ಇವುಗಳೆಲ್ಲ ಭಾರತೀಯ ಮೂಲದ ಮತಗಳೇ. ಭಾರತ ದೇಶದ ಹೊರಗಿನಿಂದ ಬಂದ ಮೊಹಮ್ಮದರ ಇಸ್ಲಾಂ ಮತವಿದೆ. ಏಸು ಕ್ರಿಸ್ತನ ಕ್ರೈಸ್ತ ಮತವಿದೆ. ಚಿಕ್ಕ ಪುಟ್ಟ ಮತಗಳು ಇವೆ. ಅನೇಕ ಕಾಡು ಜನರ ಪಂಗಡಗಳಲ್ಲಂತೂ ಭಿನ್ನ ಭಿನ್ನ ದೇವತಾ ಕಲ್ಪನೆಗಳಿವೆ. ಮೇಲಾಗಿ ಭೂತಾರಾಧನೆಯೂ ಇದೆ.

ಇಂಥ ಕ್ಲಿಷ್ಟ ಪ್ರಸಂಗದಲ್ಲಿ ಯಾವುದನ್ನು ಒಪ್ಪಬೇಕು ? ಮತ್ತಾವುದನ್ನು ತಿರಸ್ಕರಿಸಬೇಕು? ಎಂಬ ಸಂದಿಗ್ಧ ಸ್ಥಿತಿಯಲ್ಲಿ ಜಿಜ್ಞಾಸುಗಳಿದ್ದಾರೆ. ಇನ್ನು ಅಜ್ಞರಂತೂ ಏನೂ ಅರ್ಥವಾಗದ ಅಂಧಕಾರದಲ್ಲಿದ್ದಾರೆ.

ದರ್ಶನಗಳೊಳು ಸಲೆ ಷಣ್ಮತಂಗಳೊಳಗೆ,
ಧರೆಯ ವರ್ಣಾಶ್ರಮ ಬಿಡದೆಂದಿಗು,
ಬರಿದೆ ತಿರುಗುವವನು ಧರಣಿಯೊಳಗಜ್ಞಾನಿ.
ವಿಶ್ವದಾಭಿರಾಮ ಕೇಳು ವೇಮ.

ಈ ದರ್ಶನಗಳ ಪರಸ್ಪರ ವಿರೋಧಿ ನಿಲುವೆಗಳನ್ನು, ಮನದಲ್ಲಿ ಭೇದದ ಬೀಜ ಊರುವ ಷಣ್ಮತಗಳನ್ನೂ, ಧರೆಯಲ್ಲಿ ಜನರು ಪಾಲಿಸುವ ಚತುರಾಶ್ರಮ ನೇಮಗಳನ್ನೂ ತ್ಯಜಿಸಲೇಬೇಕು. ಹಾಗೆ ಮಾಡದೆ, ಅತ್ತ ಇತ್ತ ಪರ್ಯಟನ ಮಾಡುವವನು ಈ ಭೂಮಿಯ ಮೇಲಿನ ಅಜ್ಞಾನಿಯಷ್ಟೇ ಎನ್ನುತ್ತಾರೆ, ವೇಮನ ಯೋಗಿ.

ಓದನೋದಲೇಕೆ ? ಸನ್ಯಾಸವು ಏಕೆ ?
ಷಣ್ಮತದಲಿ ಸಿಕ್ಕು ಸಾಯಲೇಕೆ ?
ಹರನ ಭಜನೆ ಗೆಯ್ದು ಆತ್ಮದಿಹುದನು ತಿಳಿ.
ವಿಶ್ವದಾಭಿರಾಮ ಕೇಳು ವೇಮ.

ವೇದಗಳನ್ನೆಲ್ಲ ಓದುವುದೇಕೆ ? ಸನ್ಯಾಸ ಆಶ್ರಮ ಸ್ವೀಕರಿಸಿ, ಮನೆಮಾರು ತೊರೆಯುವುದೇಕೆ? ಷಣ್ಮತಗಳ ಬಹು ದೇವತಾ ವಿಧಿ ಕರ್ಮಗಳಲ್ಲಿ ಸಿಲುಕಿ ಸಾಯುವುದೇಕೆ ? ಮನಸ್ಸಿನ ಹರಣ ಮಾಡುವ ಪರಮ ತತ್ತ್ವದ ಭಜನೆ ಮಾಡಿ, ಆತ್ಮದಲ್ಲಿ ಏನಿದೆಯೋ, ಅದನ್ನು ತಿಳಿ. ಆತ್ಮವಿದನಾಗು.

> ಮೊದಲು ಬಿಡದೆ ತನ್ನ ಮತವ,
> ತುದಿಗಾವ ಮತವೆ ಇದ್ದರು ದೂಷಿಸದಿರುತ್ತಾ,
> ಕದಲದೆ, ಕೋರಿಕೆ ಕೋರದೆ,
> ಮುದದಿಂದ ಚರಿಸುತಿಪ್ಪನು, ಮುಖ್ಯನು ವೇಮಾ.

ತನ್ನ ಪೂರ್ವ ಸಂಸ್ಕಾರವನ್ನು ಗಮನದಲ್ಲಿಟ್ಟು, ಗುರುವು ತೋರಿದ್ದ, ತನಗೆ ತಕ್ಕದಾದ ಮತವನ್ನು ಬಿಡದೆ ಅನುಸರಿಸಬೇಕು. ಕೊನೆಗೆ ಬೇರಾವ ಮತದ ಸಂಬಂಧ ಬಂದರೂ, ಅದನ್ನು ದೂಷಿಸಕೂಡದು. ತನ್ನ ಮತಾನುಸಾರ ವಿಧಿಸಿದ ಆಚರಣೆಯಿಂದ ಕದಲಕೂಡದು. ಪರಮಾತ್ಮನು ನಂಬುವರ ಯೋಗಕ್ಷೇಮವನ್ನು ತಾನೇ ವಹಿಸುತ್ತಾನೆ. ಅವನು ಸರ್ವಜ್ಞನು. ಆದ್ದರಿಂದ ನಮ್ಮ ಮನಸ್ಸಿನಿಂದ ಕೋರಿಕೆ ಕೋರದೆ, ಮನವನ್ನು ನಿರ್ಮಲವಾಗಿರಿಸಿಕೊಳ್ಳಬೇಕು. ಇರುವಷ್ಟರಲ್ಲಿ ತೃಪ್ತಿ ಹೊಂದಿ, ಮುದದಿಂದ ಚರಿಸುವವನೇ ಜನರಲ್ಲಿ ಮುಖ್ಯನೆನಿಸುತ್ತಾನೆ.

## ಮತ ವಿಭೇದ :

ನಾವು ಈ ಮೇಲೆ ತಿಳಿಸಿದ ಆರು ವೈದಿಕ ಮತಗಳೂ, ಕಾಪಾಲಿಕ ಎಂಬ ತಾಂತ್ರಿಕ ಮತವೂ ಇದೆ. ದೇಹವನ್ನೂ, ಪುನರ್ಜನ್ಮವನ್ನೂ, ಪೂರ್ಣ ನಂಬದ ವೀರಶೈವ ಮತವೂ ಇದೆ. ಇತರ ಅವೈದಿಕ ಮತಗಳಿವೆ. ಭಾರತೀಯ ಮೂಲವಿಲ್ಲದ ಮತಗಳೂ, ಸಂಪ್ರದಾಯಗಳೂ ಇವೆ. ಒಬ್ಬೊಬ್ಬ ವಿಭೂತಿ ಪುರುಷನು ತನ್ನ ಮತಿಗೆ ಹೊಳೆದಂತೆ, ಜೀವ, ಜಗತ್ ಮತ್ತು ಈಶ್ವರರ ಸ್ವರೂಪ ಸಂಬಂಧಗಳನ್ನೂ ಕುರಿತು ಹೇಳಿರುತ್ತಾನೆ. ಸಮಾಜ ಮತ್ತು ವ್ಯಕ್ತಿಯ ಸಂಬಂಧವನ್ನೂ, ವ್ಯಕ್ತಿ ವ್ಯಕ್ತಿಗಳ ಸಂಬಂಧವನ್ನೂ ಕುರಿತು ತನ್ನ ಮತಿಗೆ ತಿಳಿದಂತೆ ಹೇಳಿರುತ್ತಾನೆ. ದೃಷ್ಟಾರರು ಅಂತರ್ವಾಣಿಯ ಅಭಿವ್ಯಕ್ತಿಯಾಗಿ, ಪೈಗಂಬರರು ದೇವದೂತ ಗೆಬ್ರಿಯಲ್‌ನ ಸಂದೇಶ ಕೇಳಿ, ಯೇಸು ಸ್ವಾಮಿಯು ತನ್ನ ಹೃದಯದಲ್ಲಿರುವ ತಂದೆಯ ವಕ್ತಾರನಾಗಿ ತಮಗೆ ತಿಳಿದು ಬಂದದನ್ನು ಆಯಾ ಕಾಲಕ್ಕೆ ಮತ್ತು ಆಯಾ ಜನಾಂಗಕ್ಕೆ ಸೂಕ್ತವೆನಿಸುವಂತೆ ಬಹಳಷ್ಟು ಸತ್ಯವನ್ನು ತಿಳಿಸಿದ್ದಾರೆ. ಅದರಲ್ಲಿ ಸರ್ವಕಾಲಿಕ ಸತ್ಯಗಳೂ ಅಡಗಿವೆ.

ಆ ವಿಭೂತಿ ಪುರುಷರ ಪ್ರತಿನಿಧಿಗಳಾಗಿ, ವಾರಸುದಾರರಾಗಿ, ಶಿಷ್ಯರಾಗಿ, ಪೀಠಾಧಿಪತಿಗಳಾಗಿ ಇಂದಿನವರೆಗೆ ಅನೇಕ ತಲೆಮಾರಿನ ಗುರು ಜಗದ್ಗುರುಗಳೂ, ಪೋಪ-ಬಿಶಪಗಳೂ, ಖಲೀಫ-ಇಮಾಮರೂ ಆಗಿ ಹೋಗಿದ್ದಾರೆ. ಮೇಲಾಗಿ, ವಿಭೂತಿ ಪುರುಷರ ವಾಣಿಗಳಿಗೆ ಹಲವರು ಭಾಷ್ಯ ಬರೆದಿದ್ದಾರೆ. ಹಲವರು ಟೀಕಾ ಗ್ರಂಥ ಬರೆದಿದ್ದಾರೆ. ಸಾಲದೆ ಕ್ಲಿಷ್ಟ ತತ್ತ್ವಗಳನ್ನು ತಿಳಿಯಾಗಿಸುವ ಪುರಾಣ ಕತೆಗಳನ್ನು ಕೆಲವರು ಬರೆದರೆ, ಕೆಲವರು ಆ ತತ್ತ್ವಗಳನ್ನು ಅಳವಡಿಸಿ ಇತಿಹಾಸ ಗ್ರಂಥವನ್ನು ಲೇಖಿಸಿದ್ದಾರೆ. ಇಂಥ ಇತಿಹಾಸ ಗ್ರಂಥವೊಂದರ ಭಾಗವಾಗಿ ಭಗವದ್ ಗೀತೆಯೂ ಬಂದಿದೆ.

ಸ್ಥೂಲ ದೃಷ್ಟಿಯಿಂದ ಈ ಪ್ರಕ್ರಿಯೆಯಲ್ಲಿ ಅಂಥ ದೋಷವೇನೂ ಕಾಣಬರುವುದಿಲ್ಲ





ಆದರೆ ಸ್ವಾರ್ಥದ ಸೊಡರಿನಿಂದ ಎಲ್ಲವೂ ವಿಶ್ಬುಬ್ಧಕಾರಿಯಾಗಿದೆ. ಮತೀಯ ಮತ್ಸರ, ಮತೀಯ ಕಲಹ, ಮತ ಮತಗಳ ಮಧ್ಯೆ ಯುದ್ಧಗಳು ನಡೆದಿವೆ, ನಡೆಯುತ್ತಿವೆ. ಪರಧರ್ಮ ಸಹಿಷ್ಣುತೆಯು ಲೋಪವಾಗಿ, ಸಹನಶೀಲತೆ ಇಲ್ಲವಾಗಿದೆ. ಇದಕ್ಕೆ ನಿದರ್ಶನವಾಗಿ, ಶೈವನಾದ ಚೋಳರಾಜನು ವೈಷ್ಣವನಾದ, ರಾಮಾನುಜರನ್ನು ದಕ್ಷಿಣ ದೇಶದಿಂದ ಹೊರದಬ್ಬಿದನು. ಆ ರಾಜನು ಸಾಯುವ ವರೆಗೂ ರಾಮಾನುಜರು ಕರ್ನಾಟಕದ ಮೇಲುಕೋಟೆಯಲ್ಲಿಯೇ ಬೀಡು ಬಿಟ್ಟರು. ವೀರಶೈವರು ಜೈನರ ವಿರುದ್ಧ ಸೆಣಸಾಡಿ ಅವರ ಸಾವಿರಾರು ಬಸದಿಗಳನ್ನು ಶಿವಾಲಯಗಳನ್ನಾಗಿಸಿದರು. ಜೈನರು ವ್ಯಾಪಾರೀ ವೀರಶೈವರಾಗಿ ಬಣಜಿಗರೆನಿಸಿದರು. ಇನ್ನು ಉತ್ತರದಲ್ಲಂತೂ ಹೊರನಾಡಿನಿಂದ ಬಂದ ಇಸ್ಲಾಂ ಮತೀಯ ತುರುಕರು, ಅಫಘಾನರು, ಸಿಕ್ಕ ಧರ್ಮದ ಗುರುಗಳನ್ನೂ ಬಿಡದೆ ರುಂಡ ಕತ್ತರಿಸಿದರು. ವೈದಿಕರ ಗುಡಿಗಳನ್ನು ಮಸೀದೆಗಳಾಗಿಸಿದರು. ಜನರನ್ನು ಬಲಾತ್ಕರಿಸಿ ಮತಾಂತರ ಮಾಡಿದರು. ಇದಕ್ಕೂ ಬಹು ಪೂರ್ವದಲ್ಲಿ ವೈದಿಕರು, ಎಲ್ಲೆಡೆ ಹರಡಿದ್ದ ಬೌದ್ಧ ಮತವನ್ನು ಸದೆಬಡಿದು, ಅವರ ವಿಹಾರಗಳನ್ನು ಗುಡಿಗಳಾಗಿ ಪರಿವರ್ತಿಸಿದರು. ಅವರನ್ನು ಮತಾಂತರಗೊಳಿಸಿದರು.

ಭಾರತದ ಹೊರಗಂತೂ ಕ್ರೈಸ್ತ ಮುಸ್ಲಿಂ ಮತೀಯರ ನಡುವೆ ಘೋರ ಸಂಗ್ರಾಮಗಳೇ ನಡೆದಿವೆ. ಯಹೂದ್ಯರು ಮತ್ತು ಮುಸ್ಲಿಂರ ಮಧ್ಯೆ ಸಂಗ್ರಾಮವಿನ್ನೂ ನಡೆದಿದೆ. ಕ್ರೈಸ್ತ ಯಹೂದ್ಯ ಕಾದಾಟ ನಡೆದು ಯಹೂದ್ಯರು ದೇಶಾಂತರ ಹೋಗುವಂತಾಗಿತ್ತು. ಇತ್ತೀಚೆಗೆ ಅವರೆಲ್ಲ ಸಮುದ್ರ ತೀರದ ತುಂಡು ಭೂಮಿಯನ್ನು ಇಸ್ರೇಲ ಎಂಬ ಪುಣ್ಯ ಭೂಮಿಯಾಗಿ ಗ್ರಹಿಸಿ ಒಂದೆಡೆ ಒಕ್ಕಲಾಗಿದ್ದಾರೆ. ಇಷ್ಟಾದರೂ ಮತಗಳ ಸೃಷ್ಟಿ ನಿಂತಿಲ್ಲ. ಮತೀಯ ಗಲಭೆಗಳೂ ನಿಂತಿಲ್ಲ.

'ಏಕಂ ಸತ್, ವಿಪ್ರಾಃ ಬಹುಧಾ ವದಂತಿ'. ಅಂದರೆ ಸತ್ಯವು ಒಂದೇ. ವಿಪ್ರರು ಬಹುವಾಗಿ ಬಣ್ಣಿಸುತ್ತಾರೆ. ಇದನ್ನೇ ಮಹಾತ್ಮಾ ಗಾಂಧೀಜಿ ಸತ್ಯವೇ ದೇವರು. ರಾಮ ನಾಮವೇ ತಾರಕ ಮಂತ್ರ ಎಂದು ಸಾರಿದರು. ಇದಲ್ಲದೆ ರಾಮ ರಹೀಮ ಒಂದೇ. ಈಶ್ವರ ಅಲ್ಲಾ ಒಂದೇ ಸತ್ಯದ ಹೆಸರುಗಳು.

ಈ ದಿಶೆಯಲ್ಲಿ ವೇಮನರ ಸೂಕ್ತಿ ಸುಧೆಯತ್ತ ಹೊರಳುವಾ :

> ಶಿವನ ಮಂತ್ರವದು ಶ್ರೀಹರಿಯ ಮಂತ್ರವು.
> ತಿಳಿದು ತಿಳಿಯದಿಹರು ತುಚ್ಛ ನರರು.
> ದೇವರನೆ ಮರೆತರು ; ತಮ್ಮ ದೇಹ ನಂಬಿ.
> ವಿಶ್ವದಾಭಿರಾಮ ಕೇಳು ವೇಮ.
>
> ಧ್ವಜವನೆತ್ತಿ ಸಾರು ದೇವನೊಬ್ಬನೆಂದು,
> ನಿಜವಿದಿಹುದು ಒಳಗೆ ನಿಂತಿರುವನು.
> ಚೊಕ್ಕ ನೋಡಲವನ ಸಂತಸದಿ ಮುಳುಗುವೆ.
> ವಿಶ್ವದಾಭಿರಾಮ ಕೇಳು ವೇಮ.
>
> ವಿಷ್ಣು ಭಕ್ತರೆಲ್ಲ ಕೊನೆಗೆ ಬೂದಿ ಪಾಲು ;
> ವಾದದೇಕೆ ? ಮತ ವಿಭೇದವೇಕೆ ?
> ಲಿಂಗಧಾರಿ ಮರಳಿ ಆದ ಮಣ್ಣುಪಾಲು.
> ವಿಶ್ವದಾಭಿರಾಮ ಕೇಳು ವೇಮ.

ವೇಮನರು ವೀರಶೈವ ಸುಧಾರಕ ಕ್ರಮಗಳನ್ನು ಮೆಚ್ಚಿದ್ದಾರೆ. ಏಕೆಂದರೆ ಅವರು ಧರ್ಮದ ಹೆಸರಿನಲ್ಲಿ ಹಿಂಸೆ ನಡೆಯುವುದನ್ನೂ, ಹಾದರ ಮಾಡುವುದನ್ನೂ ಸಹಿಸರು.

ಪಂಚಮ ವೇದವೆನೆ ಭಾರತವೆ ಎನ್ನುತ,
ಸ್ತುತಿಪರೇಕೆ ಜನರು ಮತಿಯ ತೊರೆದು ?
ಹಿಂಸೆಯರಿತು ನೋಡೆ ಹೇಗೆ ಇಷ್ಟವಹುದು ?
ವಿಶ್ವದಾಭಿರಾಮ ಕೇಳು ವೇಮ.

ಹಾದರದ ಕಥೆಯಿದು, ಸೋದರರ ವಧೆಯಿದು.
ಪರಿಕಿಸಲುಂಟೆ ಪುಣ್ಯ ಭಾರತವನು ?
ಪಾಪ ಹರಣದಯ್ಯ ಬಸವ ಪುರಾಣವೇ.
ವಿಶ್ವದಾಭಿರಾಮ ಕೇಳು ವೇಮ.

ಬಸವಣ್ಣನವರು ಲಿಂಗೈಕ್ಯರಾದ ಅರ್ಧ ಶತಮಾನದಲ್ಲಿಯೇ ಪಾಲ್ಕುರುಕಿ ಸೋಮನಾಥರು ಬರೆದ ತೆಲುಗು ಬಸವ ಪುರಾಣದ ವಸ್ತುವನ್ನೂ, ಶೈಲಿಯನ್ನೂ, ಅವರು ಮೆಚ್ಚಿದ್ದಾರೆ. ಆದರೆ ಬಸವ ಭಕ್ತರಿಗೆ ಅವರದೊಂದು ನಮ್ರ ಸೂಚನೆ.

ವೀರಶೈವ ಧರ್ಮ ವಿಭವವರಿತ ಜನರು,
ಮತ್ತೆ ಬ್ರಹ್ಮವಿದ್ಯೆ ಮನದೊಳಿಡಲು,
ಗುಡುಗುವ ಹುಲಿಗೆ, ಮರಿ ಸಿಂಹ ರಕ್ಷಣೆಯಂತೆ.
ವಿಶ್ವದಾಭಿರಾಮ ಕೇಳು ವೇಮ.

ವೀರಶೈವವೆಂಬ ವಿಭವವ ಕೈಹಿಡಿದು,
ಬ್ರಹ್ಮವಿದ್ಯೆ ಮೀರಿ ಬೆಳಗುತಿರಲು,
ಊರಿಗೆ ಮೃಗರಾಜ ಹೋದ ಚೆಂದವಾಯ್ತು.
ವಿಶ್ವದಾಭಿರಾಮ ಕೇಳು ವೇಮ.

ವೇಮನರ ಸಲಹೆ ಸೂಚನೆಗಳನ್ನು ಸುಜ್ಞ ವೀರಶೈವರು ತಿರಸ್ಕರಿಸಿಲ್ಲ. ಏಕೆಂದರೆ, ವೇಮನರ ಸಮಕಾಲೀನ ವೀರಶೈವ ಕವಿ ನಿಜಗುಣಾರಾಧ್ಯರು. ಇದೇ ವಿಚಾರವನ್ನು ಪ್ರತಿಪಾದಿಸಿ, ತಮ್ಮ ಷಟ್‌ಶಾಸ್ತ್ರಗಳಲ್ಲಿ ಹೆಚ್ಚಾಗಿ ಬ್ರಹ್ಮವಿದ್ಯೆಯನ್ನು ಕುರಿತು, ಉತ್ಕೃಷ್ಟ ಸಂಸ್ಕೃತ ಗ್ರಂಥವನ್ನು ಕನ್ನಡಿಸಿದ್ದಾರೆ. ಸ್ವಂತ ಅನುಭವ ನಿರೂಪಿಸುವ 'ಅನುಭವ ಸಾರ'ವನ್ನು ಲೇಖಿಸಿದ್ದಾರೆ. ಯೋಗವನ್ನೂ ಮರೆತಿಲ್ಲ. ಮುಂದೆ, ವೀರಶೈವರಲ್ಲಿ ವಿಭೂತಿ ಪುರುಷರಾಗಿ ಮೆರೆದ ಹುಬ್ಬಳ್ಳಿಯ ಸಿದ್ಧಾರೂಢರು, ಗರಗದ ಮಡಿವಾಳ ಸ್ವಾಮಿಗಳು, ಉಪನಿಷತ್ತುಗಳಷ್ಟೆ ಮಹತ್ವವನ್ನು ನಿಜಗುಣಾರಾಧ್ಯರ ಗ್ರಂಥಗಳಿಗೂ ನೀಡಿದ್ದಾರೆ. ಗದುಗಿನ ಶಿವಾನಂದರು ವೀರಶೈವಾಚಾರದೊಂದಿಗೆ ಬ್ರಹ್ಮವಿದ್ಯೆಯ ಸಾಧನ ಮಾಡಿ, ಅಪ್ರತಿಮ ಸಂಪ್ರದಾಯವನ್ನೇ ಹಿಂದೆ ಬಿಟ್ಟು ಹೋಗಿದ್ದಾರೆ.

ಒಂದು ಮತದಲ್ಲಿ ಇರುವ ವಿಭವ ಇಲ್ಲವೆ ಶ್ರೇಷ್ಠತೆಯನ್ನು ಸ್ವೀಕರಿಸಬೇಕು. ಅಂತೆಯೇ





ಹೀನವಾದುದನ್ನು ತಿರಸ್ಕರಿಸಬೇಕು. ಆದರೆ, ಮುಖ್ಯವಾಗಿ ಪರಧರ್ಮ ಸಹಿಷ್ಣುತೆ ಬೇಕು. ವೇಮನರ ಈ ಕಲ್ಪನೆಗೆ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿಗಳು ಜೀವಂತ ನಿದರ್ಶನವಾಗಿದ್ದರು. ನಾನು ಕಂಡ ಮಹಾ ಪುರುಷರಲ್ಲಿ ಯಾನಗುಂದಿಯ ಮಾಣಿಕ್ಯಮ್ಮ, ಸತ್ಯಸಾಯಿ ಬಾಬಾ, ಹುಲ್ಯಾಳ ಮಠದ ಬಹು ಭಾಷಾ ಪಂಡಿತ ಶಂಭುಲಿಂಗ ಶ್ರೀಗಳು, ವೇಮನ ಸಾಹಿತ್ಯ ಪ್ರಸಾರವನ್ನು ತುಂಬಾ ಮೆಚ್ಚಿ ನನ್ನನ್ನು ಹುರುದುಂಬಿಸಿದ್ದಾರೆ. ಸಮಾಜ ಸುಧಾರಕ ತತ್ತ್ವಗಳನ್ನು ಬೋಧಿಸುವ, ಆದರೆ ಆತ್ಮದ ಗ್ರಹಿಕೆಯನ್ನು ಒಪ್ಪದ, ಬೌದ್ಧರ ಬಗ್ಗೆ ವೇಮನರಿಗೆ ಮೆಚ್ಚುಗೆಯಿಲ್ಲ.

ಬೌದ್ಧ ಮತದ ಜನರು ಬುದ್ಧಿ ದೈವವೆಂದು,
ಹೆಚ್ಚು ಕಡಿಮೆ ಗೆಯ್ವ ಹೀನ ಬುದ್ಧಿ.
ಗಾರ್ದಭಕ್ಕೆ ಲಕ್ಷ್ಮಿ ಗಕ್ಕನೆ ಒಲಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ಬೌದ್ಧರು ಸ್ಥೂಲ ಇಂದ್ರಿಯಕ್ಕೆ ಗೋಚರವಾಗದೆಂಬ ಕಾರಣ ತೋರಿಸಿ, ಪಂಚಭೂತಗಳಲ್ಲಿ ಆಕಾಶ ತತ್ತ್ವವನ್ನು ಒಪ್ಪಿಲ್ಲ. ಅದೇ ರೀತಿ, ಸೂಕ್ಷ್ಮ ಇಂದ್ರಿಯವಾದ ಮನಸ್ಸಿಗೆ ಗೋಚರಿಸುವುದಿಲ್ಲ ; ಎಂದು ಆತ್ಮ ತತ್ತ್ವವನ್ನೂ ಒಪ್ಪಿಲ್ಲ. ಅವರ ಮೇರೆಗೆ ಬುದ್ಧಿ ತತ್ತ್ವವೇ ಪರಮ ತತ್ತ್ವ. ಅದುವೇ ದೈವ. ಬುದ್ಧನು ಜೀವಾತ್ಮ ಎಂಬ ಯಾವುದೇ ಶಬ್ದವನ್ನು ಬಳಸಿಲ್ಲ. "ಅತ್ತಾಹಿ ಅತ್ತಾನಂ ನಾಥ" ಅಂದರೆ ತಾನೇ ತನ್ನ ಅಧೀಶ್ವರ ಎಂದನು. ಅವನು ವೇದೋಪನಿಷತ್ತುಗಳನ್ನು ಒಪ್ಪಲಿಲ್ಲ. ಹೀಗಾಗಿ, ಬ್ರಹ್ಮ ವಿದ್ಯೆಗೆ ಬೌದ್ಧರಲ್ಲಿ ಸ್ಥಾನವಿಲ್ಲ. ಆದ್ದರಿಂದ ಬುದ್ಧಿಯೇ ದೈವವೆಂದು ಸಾಧಿಸುವ ಸುಲಭ ಉಪಾಯಕ್ಕೆ ಬೌದ್ಧರು ಕೈ ಹಾಕಿದರು. ಅಂದರೆ ಕತ್ತೆಗೆ ಲಕ್ಷ್ಮಿ ಗಕ್ಕನೆ ಒಲಿದಂತೆ; ಎಂದು ವೇಮನರು ಟೀಕಿಸಿದ್ದಾರೆ.

ಸಾಕು ಇನ್ನುಮೇಲೆ ಚಾರ್ವಾಕ ಮತ ರೀತಿ,
ಶಕ್ತಿ ಶೈವವೆಂದು ಚೊಕ್ಕ ನಂಬು,
ಸರಣಿ ಮೀರಿ ಕೆಡುಗು ಚಂಡಾಲ ಸೇವೆಯು.
ವಿಶ್ವದಾಭಿರಾಮ ಕೇಳು ವೇಮ.

ಇಂದಿನಿಂದ ಸುಮಾರು ಎರಡೂವರೆ ಸಾವಿರ ವರುಷ ಮೊದಲು, ಆರ್ಷ ಧರ್ಮ ಸೂರ್ಯನು ಮುಳುಗ ಹತ್ತಿದ್ದನು. ಆಗ ಭಕ್ತಿಹೀನ ಮತ್ತು ಆದರ್ಶಹೀನ ಯಜ್ಞ ಯಾಗಗಳಲ್ಲಿ ಮತ್ತು ತೋರಿಕೆಯೇ ತುಂಬಿದ ಅನುಷ್ಠಾನಗಳಿಗೆ ಮಾತ್ರ ಧರ್ಮವು ಸೀಮಿತವಾಗಿತ್ತು. ಜನರಲ್ಲಿ ಕ್ಷೋಭೆ ಮೂಡಿತ್ತು. ಕಲವೇ ಜನರು ಲೋಭ ವೃತ್ತಿಯಿಂದ ಪ್ರೇರಿತರಾಗಿ ಭಾವಜಡತೆಯನ್ನು ಬೆಳೆಸುತ್ತ ಜನರನ್ನು ಶೋಷಿಸತೊಡಗಿದ್ದರು. ಜಲವಿಲ್ಲದ, ರಾಡಿ ತುಂಬಿದ, ಸಮಾಜ ಸರೋವರದಲ್ಲಿ ಜೀವನ ಸ್ಪಂದನ ಮೂಡಿಸಲು ಕೆಲವರು ಪ್ರಯತ್ನಿಸಿದರು. ಇವರಲ್ಲಿ ಚಾರ್ವಾಕ (ಚಾರುವಾಕ ಅಂದರೆ ಸಿಹಿಮಾತಿನ) ಮಹರ್ಷಿ ಬೃಹಸ್ಪತಿಯೂ ಒಬ್ಬರು.

ಯಾವಜ್ಜೀವೇತ್ ಸುಖಂ ಜೀವೇತ್.
ಋಣಂ ಕೃತ್ವಾ ಘೃತಂ ಪಿಬೇತ್.

ಅಂದರೆ, ಜೀವಿಸಿರುವ ವರೆಗೆ ಸುಖವಾಗಿಯೇ ಜೀವಿಸಿರಿ. ಸಾಲ ಮಾಡಿದರೂ

ಚಿಂತೆಯಿಲ್ಲ. ತುಪ್ಪ ತಿನ್ನಿರಿ ಎಂದು ಸಾರುತ್ತಿದ್ದರು. ಈ ಪ್ರಕಾರದ ಮತವಾದವು. ಮಾನವನನ್ನು ಭೋಗ ಪಿಪಾಸುನನ್ನಾಗಿಸಿ ಅವನ ಮಾನವತ್ವದ ಅಡಿಪಾಯವನ್ನೇ ಅಲುಗಿಸುತ್ತದೆ. ಚಾರ್ವಾಕನು ಇನ್ನೂ ಮುಂದೆ ಹೋಗಿ,

ಯಾವಜ್ಜೀವಂ ಸುಖಂ ಜೀವಂ, ನಾಸ್ತಿ ಮೃತ್ಯೋರ ಗೋಚರಃ
ಭಸ್ಮೀ ಭೂತಸ್ಯ ದೇಹಸ್ಯ, ಪುನರಾಗಮನಂ ಕುತಃ ?

ಅಂದರೆ, ಭೂಮಿಯ ಮೇಲೆ ಜೀವಿಸಿರುವ ತನಕ ಸುಖವಾಗಿ ಜಿವಿಸಿರಿ. ಶರೀರವು ಮರಣಾ ನಂತರ ಏನೊಂದೂ ಇರದು. ಸುಟ್ಟು ಭಸ್ಮವಾದ ದೇಹವು ಅದೆಂತು ಮರಳಿ ಬರುವುದು?

ತ್ರಯೊ ವೇದಸ್ಯ ಕರ್ತಾರಃ ಭಂಡ, ಧೂರ್ತ ನಿಶಾಚರಃ

ಅಂದರೆ, ಆಗ ಪ್ರಚಲಿತವಿದ್ದ, ಮೂರು ವೇದಗಳ ಕರ್ತರು, ಭಂಡರು, ಧೂರ್ತರು, ನಿಶಾಚರರು. ಇದೆಂಥ ಅಸಭ್ಯ, ಭಾಷೆ ! ಶುಷ್ಕ ವ್ರತನೇಮಗಳನ್ನು ನಿಂದಿಸುವ ಭರದಲ್ಲಿ ತನ್ನನ್ನು ತಾನು ನೀಚ ಮಟ್ಟಕ್ಕೆ ಇಳಿಸಿಕೊಂಡಿದ್ದಾನೆ, ಚಾರ್ವಾಕ. ಚಾರ್ವಾಕ ಜಡವಾದವು ದೋಷ ಪೂರ್ಣವಾಗಿದೆ. ನೀತಿ ವರ್ಜಿತವೂ ಆಗಿದೆ. ಆದ್ದರಿಂದ ವೇಮನರು ಸಾರುತ್ತಾರೆ. ಇನ್ನು ಮೇಲೆ ಚಾರ್ವಾಕ ಮತದ ಗೊಡವೆ ಬೇಡ. ಶಕ್ತಿಯೆಲ್ಲ ಶೈವವೇ ಎಂದು ಚೊಕ್ಕವಾಗಿ ನಂಬು. ಪಶುಬಲಿ ಕೊಡುವ ಯಜ್ಞ ಯಾಗಗಳ ಚಂಡಾಲ ಸೇವೆಯು, ಕಡೆಗೂ ಹೆಚ್ಚಾಗಿ ಕೆಡಿಸುತ್ತದೆ. ಜಿಹ್ವೆಯ ರುಚಿಗೆ ಸೆಳೆಯುತ್ತದೆ.

ಇನ್ನು ಜೈನ ಮತದಲ್ಲಿ ಸಾಕಷ್ಟು ನೀತಿವಾದವಿದೆ. ಆದ್ದರಿಂದ ಅದನ್ನು ತಿರಸ್ಕರಿಸಿಲ್ಲ. ಅದು ಪರಮಾತ್ಮನ ಇರವನ್ನು ಗ್ರಹಿಸಿಲ್ಲ. ಆದ್ದರಿಂದ ಅದನ್ನು ಪುರಸ್ಕರಿಸಿಲ್ಲ. ಜೈನ ಧರ್ಮ ಕುರಿತು ವೇಮನರು ಮೌನವಾಗಿದ್ದಾರೆ.

------



# ೬. ವೈದಿಕ ಮತ

ಎಂಟು ಸಾವಿರ ವರ್ಷ ಪೂರ್ವದಲ್ಲಿ ಲಿಪಿಯ ಉದಯವಾಗಿರಲಿಲ್ಲ. ಬಹಳಷ್ಟು ಶಾಸ್ತ್ರಗಳೇನೋ ಇದ್ದವು. "ಶಾಸನಾತ್ ಇತಿ ಶಾಸ್ತ್ರಃ" ಆಚರಣೀಯವಾದುದು ಶಾಸ್ತ್ರವೆನಿಸುತ್ತಿತ್ತು. ಈ ಶಾಸ್ತ್ರಗಳನ್ನು ಕಿವಿಯಿಂದ ಗುರುಮುಖದಿಂದ ಕೇಳಿ, ಕಲಿಯಬೇಕಿತ್ತು. ಮತ್ತು ಅವುಗಳನ್ನು ಸ್ಮರಿಸಿ ಕಂಠಸ್ಥಗೊಳಿಸಿಕೊಳ್ಳಬೇಕಿತ್ತು. ಹೀಗಾಗಿ ಇವುಗಳನ್ನು ಶ್ರುತಿ ಎನ್ನುತ್ತಿದ್ದರು. ಲಿಪಿಯ ಬಗೆಗೆ ಹೇಳುವುದಾದರೆ ಇಂದಿನಿಂದ ಆರು ಸಾವಿರ ವರ್ಷ ಪೂರ್ವದಲ್ಲಿ ಚೀನದಲ್ಲಿ ಮೊತ್ತಮೊದಲು ಚಿತ್ರಲಿಪಿಯ ಉದ್ಭವವಾಯಿತು. ಅದುವೇ ಮುಂದೆ ಚೀನದ ಆಧುನಿಕ ಲಿಪಿಯ ರೂಪ ತಾಳಿತು. ಚೀನದ ಚಿತ್ರಲಿಪಿಯ ಬಳಕೆಯು ಸೈಬೇರಿಯಾ, ಮಂಗೋಲಿಯಾ, ಬಹಿರ್ಮಂಗೋಲಿಯಾ, ಕೋರಿಯಾ, ಜಪಾನ, ತೈವಾನ ಮತ್ತು ಉಕಿನಹಾವಾ ದ್ವೀಪ ಪುಂಜದಲ್ಲಿತ್ತು. ಚೀನದಲ್ಲಿ ಲಿಪಿಯ ಉದ್ಭವವಾದ ಅನತಿ ಕಾಲದಲ್ಲಿ ಭಾರತದಲ್ಲಿ ಸಹ ದ್ರಾವಿಡ ಚಿತ್ರಲಿಪಿ ಇಲ್ಲವೆ ಸೈಂಧವೀ (ಮೊಹೆಂಜೋ ದಾರೊ ಲಿಪಿ) ಲಿಪಿಯ ಉದಯವಾಯಿತು. ದ್ರಾವಿಡ ಚಿತ್ರಲಿಪಿಯ ರೂಪಕಾಧಾರದಿಂದ ಭಾರತೀಯ ಬ್ರಾಹ್ಮೀ ಮತ್ತು ಖರೋಷ್ಠೀ ಅಕ್ಷರ ಲಿಪಿಯನ್ನು ಗ್ರಹಿಸಲಾಯಿತು. ಈ ಪ್ರಾಚೀವ ಭಾರತದ ಅಕ್ಷರ ಲಿಪಿಯು ಸಮಗ್ರ ಪಶ್ಚಿಮ ಮತ್ತು ದಕ್ಷಿಣ ಏಷಿಯಾ, ತಿಬೇಟ, ಲಂಕಾ, ದಕ್ಷಿಣ ಮತ್ತು ಪೂರ್ವ ಏಷಿಯಾಗಗಳಲ್ಲಿ ಬಳಕೆಯಲ್ಲಿತ್ತು.

ಸಮಗ್ರ ಶಾಸ್ತ್ರಗಳ ಅಸ್ತಿತ್ವ ಮತ್ತು ಸ್ಥಿತಿಯು ಸ್ಮರಣ ಶಕ್ತಿಯನ್ನೇ ಅವಲಂಬಿಸಿತ್ತು. ಈ ಕಾರಣದಿಂದ ಒಂದಕ್ಕಿಂತ ಹೆಚ್ಚು ಶಾಸ್ತ್ರಗಳಲ್ಲಿ ಪಾರಂಗತವಾದ ವ್ಯಕ್ತಿಗೆ ಸಮಾಜದಲ್ಲಿ ವಿಶೇಷ ಮಾನ ಸನ್ಮಾನ ನೀಡುತ್ತಿದ್ದರು. ವೇದದ ಷಡಂಗಗಳಾದ ಛಂದ, ವ್ಯಾಕರಣ, ಶಿಕ್ಷಾ, ಕಲ್ಪ, ನಿರುಕ್ತ ಮತ್ತು ಜ್ಯೋತಿಷ ಇವುಗಳನ್ನು ಕಂಠಸ್ಥ ಮಾಡಿದವನಿಗೆ ಪಂಡಿತ ಗಣವು ಸಮ್ಮಾನ ಪೂರ್ವಕ ಷಡಂಗೀ ಅಭಿಜ್ಞಾನ ಪತ್ರ ಕೊಡುತ್ತಿದ್ದರು. ಒಬ್ಬ ವ್ಯಕ್ತಿಯು ಒಂದು ವೇದದಲ್ಲಿ ಪಾರಂಗತನಿದ್ದರೆ ಆ ವೇದವನ್ನು ಕಂಠಪಾಠ ಮಾಡುತ್ತಿದ್ದನು. ಅವನು ಪಾಂಡಾ ಇಲ್ಲವೆ ಪಾಂಡೇಯ (ಪಾಂಡೆ) ಎಂಬ ಹೆಸರಿನಿಂದ ಪ್ರಸಿದ್ಧನಾಗುತ್ತಿದ್ದನು. ಎರಡು ವೇದಗಳನ್ನು ಕಂಠಸ್ಥ ಮಾಡಿಕೊಂಡವನು ದ್ವಿವೇದಿ ಇಲ್ಲವೆ ದುಬೆ ಎಂದೂ, ಮೂರು ವೇದಗಳನ್ನು ಕಂಠಸ್ಥ ಮಾಡಿಕೊಂಡವನು ತ್ರಿವೇದಿ ಎಂದೂ, ಮತ್ತು ನಾಲ್ಕು ವೇದಗಳನ್ನು ಕಂಠಸ್ಥ ಪಡೆದುಕೊಂಡವನು ಚತುರ್ವೇದಿ ಇಲ್ಲವೆ ಚೌಬೆ ಎಂದು ಪ್ರಸಿದ್ಧರಾಗುತ್ತಿದ್ದರು. ಮೂರು ವೇದಗಳನ್ನು ಜನರಿಗೆ ಒಳ್ಳೇ ರೀತಿಯಿಂದ ತಿಳಿಸಿ ಹೇಳುವವನನ್ನು ತ್ರಿಪಾಠಿ ಎನ್ನುತ್ತಿದ್ದರು.

ಲಿಪಿಯ ವಿಕಾಸಾ ನಂತರ, ಮತ್ಸ್ಯಗಂಧಿ ಎಂಬ ಅಂಬಿಗ ಕನ್ನೆಯ ಉದರದಿಂದ ಪರಾಶರ ಋಷಿಯ ವೀರ್ಯದಿಂದ ಜನಿಸಿದ, ಕೃಷ್ಣಾ ನದಿಯ ಎರಡು ಟಿಸಿಲುಗಳಿಂದಾದ ನಡುಗಡ್ಡೆಯಲ್ಲಿ ಬಾಳಿದ, ಕೃಷ್ಣದ್ವೈಪಾಯನ ವ್ಯಾಸರು ವೇದಗಳನ್ನು ಸಂಗ್ರಹಿಸಿ, ಋಕ್, ಯಜುಸ್, ಸಾಮ ಮತ್ತು ಅಥರ್ವ ವೇದಗಳೆಂದು ವಿಂಗಡಿಸಿದರಲ್ಲದೆ, ಪ್ರತಿಯೊಂದು ವೇದದಲ್ಲೂ ಮಂತ್ರ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳೆಂದು ವಿಭಜಿಸಿದರು. ಇದರಿಂದ ಅವರು ವೇದ ವ್ಯಾಸರೆಂದು ಪ್ರಸಿದ್ಧರಾದರು. ಮಂತ್ರ ಭಾಗದಲ್ಲಿ ವಿವಿಧ ದೇವತಾ ಸ್ತುತಿ ಪರ ಋಕ್ಕುಗಳಿವೆ. ಬ್ರಾಹ್ಮಣ ಭಾಗದಲ್ಲಿ ಯಜ್ಞದ ವಿಧಿ ಕರ್ಮಗಳಿವೆ. ಆರಣ್ಯಕದಲ್ಲಿ ಸ್ವಲ್ಪ ಯಜ್ಞ ಭಾಗದೊಂದಿಗೆ ಬ್ರಹ್ಮ

ವಿದ್ಯೆಯ ಮಂತ್ರಗಳೂ ಇವೆ. ಉಪನಿಷತ್ತುಗಳಲ್ಲಿ ಬ್ರಹ್ಮ ವಿದ್ಯೆಯನ್ನು ಕುರಿತ ಮಂತ್ರಗಳಿವೆ. ವೇದದಲ್ಲಿ ಕರ್ಮಕಾಂಡ (ಮಂತ್ರ ಮತ್ತು ಬ್ರಾಹ್ಮಣ) ಮತ್ತು ಜ್ಞಾನಕಾಂಡ (ಆರಣ್ಯಕ ಮತ್ತು ಉಪನಿಷತ್ತು) ಗಳೆರಡೂ ಇವೆ. ಕರ್ಮಕಾಂಡವನ್ನು ಅಜ್ಞತೆಯೆಂದೋ ಇಲ್ಲವೆ ಶೋಷಕರ ಚೂರಿ ಎಂದೋ ತಿಳಿಯಬಹುದು.

ವೇಮನರು ಕರ್ಮಕಾಂಡವನ್ನು ಒಪ್ಪಿಲ್ಲ. ಜ್ಞಾನ ಕಾಂಡವನ್ನು ಮಾತ್ರ ಒಪ್ಪಿದ್ದಾರೆ.

ವಿಪ್ರವರರು ಎಂದು ವೇದ ಓದುತಿಪ್ಪ,
ಪ್ರಾಕೃತರನು ಕಂಡು ಹಾಸ್ಯ ಗೈವ
ಧರಣಿ ಸುರರಿಗಿಂತ ದಾಸರ ಮತ ಒಪ್ಪ.
ವಿಶ್ವದಾಭಿರಾಮ ಕೇಳು ವೇಮ.

'ವೇದ ಪಾಠಾತ್ ಇತಿ ವಿಪ್ರಃ' ಅಂದರೆ ವೇದ ಪಾಠ ಮಾಡುವುದರಿಂದ ವಿಪ್ರನೆನಿಸುತ್ತಾನೆ. ವೇದ ಪಾಠ ಮಾಡಬೇಕಾದರೆ ದ್ವಿಜನಾಗಬೇಕು. 'ಜನ್ಮತಾ ಜಾಯತೇ ಶೂದ್ರಃ ಸಂಸ್ಕರಾತ್ ದ್ವಿಜ ಉಚ್ಯತೇ' ಅಂದರೆ ಹುಟ್ಟಿನಿಂದ ಎಲ್ಲರೂ ಶೂದ್ರರೇ. ಉಪವೀತ ಧಾರಣ ಮತ್ತು ಮಂತ್ರೋಪದೇಶ ಸ್ವೀಕಾರಗಳ ಸಂಸ್ಕಾರದಿಂದ ದ್ವಿಜನೆನಿಸುತ್ತಾನೆ. ಉಪನಯನ ಸಂಸ್ಕಾರ ಪಡೆಯಲು ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗಷ್ಟೇ ಅಧಿಕಾರ ನೀಡಿದ್ದಾರೆ. ಹೀಗಾಗಿ, ಭಾರತದ ಹಿಂದುಗಳಲ್ಲಿ ಮುಕ್ಕಾಲು ಭಾಗದ ಜನರಿಗೆ ವೇದ ಪಾಠದ ಅಧಿಕಾರವೇ ಇಲ್ಲ. ಅವರೆಲ್ಲ ಶೂದ್ರರು. ಅಧಿಕಾರವಿಲ್ಲದವರು. ವೇದ ಪಾಠವನ್ನು ಕೇಳಿದರೆ ಅವರ ಕಿವಿಯಲ್ಲಿ ಸೀಸ ಸುರುವಬೇಕೆಂಬ ವಿಧಿ ಹೇರಿದ್ದರು. ಇನ್ನು ಅವರು ವೇದ ಪಾಠ ಮಾಡಿದರೆ, ಅವರ ನಾಲಗೆ ಕೊಯ್ಯಬೇಕೆಂಬ ವಿಧಿಯೂ ಜಾರಿಯಲ್ಲಿತ್ತು. ಹೀಗಾಗಿ ಅವರಿಗೆ ವೇದದ ಜ್ಞಾನವಾಗುವುದಾದರೂ ಹೇಗೆ ? ವೇದ ಓದಿದ ಕೆಲವು ವಿಪ್ರವರರು, ವೇದ ಓದುವ ಅಧಿಕಾರವೇ ಇಲ್ಲದ, ಪ್ರಾಕೃತರನ್ನು ಕಂಡು ಹಾಸ್ಯ ಮಾಡುವ, ಈ ಭೂಮಿಯ ಮೇಲೆ ಸುರ ಸಮಾನರೆಂದು ಬೀಗುವವರ ಮತಕ್ಕಿಂತಲೂ ದಾಸರು ಪಾಲಿಸುವ, ಎಲ್ಲರೂ ಸ್ವೀಕರಿಸಬಹುದಾದ, ಭಾಗವತ ಮತವೇ ಮೇಲು. (ಆರ್ಯರು ಈ ದೇಶಕ್ಕೆ ಬರುವ ಮುನ್ನ ಸಪ್ತ ಸಿಂಧು ನಾಡಿನಲ್ಲಿ, ದಾಸ ಜನರು ವಾಸಿಸುತ್ತಿದ್ದರು. ದಾಸ ಎಂದರೆ ದಾನಶೀಲ ಎಂದು ಆ ಶಬ್ದದ ಅರ್ಥವಿತ್ತು.) ವಿಜೇತ ಆರ್ಯರು ಅವರನ್ನು ಶೂದ್ರರೆಂದು ವರ್ಣ ವ್ಯವಸ್ಥೆಯ ಕೆಳವರ್ಣದಲ್ಲಿ ಸೇರಿಸಿದರು.

ವೇದಗಳನು ಓದಿ ಒಣ ಜಂಭ ಪಡುತಿಹ,
ಅಧೋಗತಿಗಿಳಿದರು ಅಯ್ಯರೆಲ್ಲ.
ಬ್ರಹ್ಮಮಹಿಮೆಯರಿತು ಬದುಕುತಿಹುದೆ ಮೇಲು.
ವಿಶ್ವದಾಭಿರಾಮ ಕೇಳು ವೇಮ.

ವೇದದ ಕರ್ಮಕಾಂಡವನ್ನು ಓದಿ, ಬಹಳ ತಿಳಿದಿದ್ದೇವೆಂದೂ, ಇತರರಿಗೆ ವೇದ ಪಾಠದ ಅಧಿಕಾರವೇ ಇಲ್ಲವಾದುದರಿಂದ ಅವರದನ್ನು ತಿಳಿಯಲಾರರೆಂದೂ ಒಣ ಜಂಭ ಪಡುತ್ತಿರುವ ಆರ್ಯರು, ತಮ್ಮ ಭೇದ ಬುದ್ಧಿಯಿಂದ ಅಧೋಗತಿಗಿಳಿಯುತ್ತಾರೆ. ಬ್ರಹ್ಮ ಮಹಿಮೆಯನ್ನು, ಉಪನಿಷತ್ತುಗಳನ್ನು ಓದಿ, ಇಲ್ಲವೆ ತಂತ್ರವನ್ನು ಓದಿ ಇಲ್ಲವೆ ಯೋಗಿಗಳ ಉಪದೇಶ ಹೊಂದಿ





ಅರಿತುಕೊಂಡು, ಬದುಕುವುದೇ ಮೇಲು.

ವೇದ ವಿದ್ಯೆಯೆಲ್ಲ ವೇಶ್ಯೆ ಸಮನಿಹುದು,
ಭ್ರಮೆ ಹಿಡಿಸಿ ಬಯಲು ಪಡೆಯಗೊಡದು.
ಗುಪ್ತ ವಿದ್ಯೆಯೊಂದೆ ಕುಲಕಾಂತೆಯಂತಿದೆ.
ವಿಶ್ವದಾಭಿರಾಮ ಕೇಳು ವೇಮ.

ಈ ಸಂದರ್ಭದಲ್ಲಿ, ವೇದ ವ್ಯಾಸರೇ, ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ಮುಖದಿಂದ ಏನು ಹೇಳಿಸಿದ್ದಾರೆಂಬುದನ್ನು ತಿಳಿಯುವುದು ಲೇಸು. ಕೃಷ್ಣನು ಅರ್ಜುನನಿಗೆ ಕರ್ಮಯೋಗದಲ್ಲಿ ನಿಶ್ಚಯ ಬುದ್ಧಿಯ ಅಗತ್ಯವನ್ನು ಬೋಧಿಸುತ್ತ,

"ಎಲೈ ಅರ್ಜುನ ! ಅವಿವೇಕಿಗಳೂ, ವೇದ ವಾಕ್ಯಗಳಲ್ಲಿ ಆಸಕ್ತರೂ, ಮತ್ತೇನೂ ಇಲ್ಲವೆಂದು ವಾದಿಸುವವರೂ, ಕಾಮಾತ್ಮರೂ, ಸ್ವರ್ಗವೇ ಮುಖ್ಯವೆಂದು ಭಾವಿಸಿದವರೂ ಆದ ಜನರು, ಜನ್ಮ ಕರ್ಮ ಫಲಪ್ರದವಾಗಿರುವ ಭೋಗೈಶ್ವರ್ಯಗಳನ್ನು ಹೊಂದುವುದಕ್ಕೆ ಉಪಾಯವಾದ, ವಿವಿಧ ಕ್ರಿಯಾ ಕಲಾಪದಿಂದ ಕೂಡಿದ, ಯಾವ ಆಪಾತ ಮನೋಹರವಾದ ಮಾತನ್ನು ನುಡಿಯುತ್ತಾರೋ, ಆ ಮಾತಿನಿಂದ ಅಪಹರಿಸಲ್ಪಟ್ಟ ಮನಸ್ಸುಳ್ಳವರಾಗಿ ಭೋಗೈಶ್ವರ್ಯಗಳಲ್ಲಿಯೇ ಆಸಕ್ತರಾಗಿರುವವರಿಗೆ, ಮನಸ್ಸಿನಲ್ಲಿ ನಿಶ್ಚಯ ಸ್ವಭಾವವುಳ್ಳ ಬುದ್ಧಿಯು ಉಂಟಾಗಲಾರದು. ಎಲೈ ಅರ್ಜುನ ! ವೇದಗಳು ತ್ರೈಗುಣ್ಯದ ವಿಷಯವನ್ನು ಹೇಳುತ್ತಿವೆ. ನೀನು ತ್ರೈಗುಣ್ಯರಹಿತನಾಗು" ಎಂದು ತಿಳಿಸಿದ್ದಾನೆ. ಯಜ್ಞ ಯಾಗಗಳಲ್ಲಿ ಅಡಕವಾದ ಕಾಮ್ಯ ಕರ್ಮವನ್ನೂ, ಸ್ವರ್ಗ ಫಲವನ್ನೂ ಕುರಿತು ಹೀಗೆಳೆಯುತ್ತ ಮುಂಡಕ ಉಪನಿಷತ್ತು ಹೀಗೆ ಹೇಳಿದೆ :

"ಈ ನಿಮ್ಮ ಕರ್ಮಗಳನ್ನು ಶ್ರೇಷ್ಠವೆಂದು ಜಂಭಕೊಚ್ಚುವ ಮೂರ್ಖರು ಹೊರಳಿ, ಹೊರಳಿ ಹುಟ್ಟು, ರೋಗ, ಮುಪ್ಪುಮತ್ತು ಸಾವುಗಳಿಗೆ ಈಡಾಗುವರು (II-I) ತಾವು ಅವಿದ್ಯೆಯಲ್ಲಿ ಮುಳುಗಿದ್ದರೂ ದೊಡ್ಡ ಪಂಡಿತರೆಂದು ಭಾವಿಸಿ, ಈ ಮೂರ್ಖರು ಕುರುಡನು ಕುರುಡನನ್ನು ಕರೆದೊಯ್ಯುವ ಪರಿಯಾಗಿ ಬಾಧೆ ಪಡುತ್ತಾರೆ"

ಹೀಗೆ, ಗೀತೆ ಹಾಗೂ ಉಪನಿಷತ್ತುಗಳ ಹಿನ್ನೆಲೆಯಲ್ಲಿ ಯೋಗಿ ವೇಮನರ ಸೂಕ್ತಿಗಳನ್ನು ಅರಿತುಕೊಳ್ಳಬೇಕು :

ಯಾವ ರೀತಿ ವೇಶ್ಯೆ ಅಲ್ಪ ಕಾಲೀನ ಕಾಮ ತೃಪ್ತಿಗಾಗಿ, ವಿಟ ಪುರುಷನ ಭೌತಿಕ ಮತ್ತು ಮಾನಸಿಕ ಸಂಪತ್ತುಗಳನ್ನು ಸೆಳೆದು, ಅವನನ್ನು ಅಧೋಗತಿಗಿಳಿಸುವಳೋ, ಅದೇ ರೀತಿ, ವೇದದ ಕರ್ಮಕಾಂಡವು ಕರ್ಮಫಲಾಸಕ್ತರನ್ನು ಭೋಗೈಶ್ವರ್ಯಗಳಲ್ಲಿ ಮುಳುಗಿಸಿ, ಅಧೋಗತಿಗೆ ಕರೆದೊಯ್ಯುವುದು. ಹೀಗೆ ವೇದ ವಿದ್ಯೆಯೆಲ್ಲ ವೇಶ್ಯೆಯಂತೆ ಇಹುದು. ಅದು ಮನಸ್ಸನ್ನು ಆತ್ಮಮುಖೀ ಮಾರ್ಗದಿಂದ ಸೆಳೆದು, ಐಹಿಕ ಸುಖ ಭೋಗದತ್ತ ತಿರುಗಿಸಿ ಭ್ರಮೆ ಹಿಡಿಸುತ್ತದೆ. ಮಾನವನ ಲಕ್ಷ್ಯವಾದ ಸಂಕಲ್ಪ ಶೂನ್ಯ, ಮಾತು ಮನಂಗಳಿಂದತ್ತತ್ತವಾದ ಬಯಲನ್ನು ಅಂದರೆ ಚಿದಾಕಾಶವನ್ನು ಪಡೆಯಗೊಡದು. ಆದ್ದರಿಂದ ಉಪನಿಷತ್ತುಗಳು, ಗುಹ್ಯಾತ್ ಗುಹ್ಯ ಗುಪ್ತ ವಿದ್ಯೆಯೆಂದು ಕರೆಯುವ ಬ್ರಹ್ಮವಿದ್ಯೆಯು, ಕುಲಕಾಂತೆಯಂತೆ, ಮಾನವನನ್ನು ಹಾಳಾಗದೆ

ಬಾಳಗೊಡಲು ಅನುವು ಮಾಡುತ್ತದೆ.

ಋಗ್ಯಜುಸ್ಸನರಿತು, ಯೋಗ್ಯತೆ ಇರದಾಗ,
ವಿಪ್ರನೆನಿಸಲೆಂತು ವಿಹಿತವಹುದು ?
ಗಂಡನಿರಲು ಅನ್ಯಗೊಲಿವ ಪತ್ನಿಯಂತೆ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಋಗ್ವೇದವನ್ನೂ ಮತ್ತು ಯುರ್ವೇದವನ್ನೂ ಅರಿತಿರಬಹುದು. ಆದರೆ ಅವುಗಳಲ್ಲಿರುವ ಕರ್ಮಕಾಂಡ (ಮಂತ್ರ ಮತ್ತು ಬ್ರಾಹ್ಮಣ) ಮತ್ತು ಜ್ಞಾನಕಾಂಡ (ಅರಣ್ಯಕ ಉಪನಿಷತ್) ಗಳನ್ನು ವಿಂಗಡಿಸಿ, ಅರಗಿಸಿಕೊಳ್ಳುವ ಮತ್ತು ಜ್ಞಾನಕಾಂಡದ ಬ್ರಹ್ಮ ವಿದ್ಯೆಯನ್ನು ಸಾಕ್ಷಾತ್ಕರಿಸಿಕೊಳ್ಳುವ ಯೋಗ್ಯತೆ ಇಲ್ಲದಾಗ, ವಿಪ್ರ ಎನಿಸಿಕೊಂಡರೆ ಎಷ್ಟು ವಿಹಿತವಾದೀತು ? ಆತ್ಮೋದ್ಧಾರಕ್ಕಾಗಿ ಜ್ಞಾನಕಾಂಡದ ಬ್ರಹ್ಮವಿದ್ಯೆಯು ಭವ ಬಂಧನದಿಂದ ರಕ್ಷಿಸುವ ಗಂಡನಿದ್ದಂತೆ. ಕರ್ಮಕಾಂಡವು ಸಾಧಕನ ಮನವನ್ನು ಬೇರೆಡೆಗೆ ಸೆಳೆಯುವ ಪರಪುರುಷನಂತೆ. ಬ್ರಹ್ಮ ಸಾಕ್ಷಾತ್ಕಾರದತ್ತ ಒಲಿಯದವನು, ಗಂಡನಿದ್ದೂ ಅನ್ಯರಿಗೊಲಿವ ಪತ್ನಿಯಂತೆಯೇ ಸರಿ.

ದರ್ಶನಗಳೊಳು, ಧರೆ ಷಣ್ಮತಗಳೊಳು,
ಧರೆಯ ವರ್ಣಾಶ್ರಮ ಸಾರವೆನ್ನುತಿಹರು.
ಬರಿದೆ ತಿರುಗುವವನು ಧರಣಿಯೊಳಜ್ಞಾನಿ.
ವಿಶ್ವದಾಭಿರಾಮ ಕೇಳು ವೇಮ.

ಸಾಂಖ್ಯ, ನ್ಯಾಯ, ವೈಶೇಷಿಕ, ಪೂರ್ವ ಮೀಮಾಂಸೆ, ಉತ್ತರ ಮೀಮಾಂಸೆ, ಯೋಗ ಎಂಬ ಆರು ದರ್ಶನಗಳಿವೆ. ಶೈವ, ವೈಷ್ಣವ, ಶಾಕ್ತ, ಗಾಣಪತ್ರ ಕೌಮಾರ, ಸೌರ ಎಂಬ ಆರು ವೈದಿಕ ಮತಗಳೂ ಇವೆ. ಇವುಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ಧರೆಯ ಚಾತುರ್ವಣ್ಯ ಮತ್ತು ವಿದ್ಯಾರ್ಥಿ, ಗೃಹಸ್ಥ, ವಾನಪ್ರಸ್ತ ಹಾಗೂ ಸನ್ಯಾಸ ಎಂಬ ಧರೆಯ ನಾಲ್ಕು ಆಶ್ರಮಗಳ ಸಾರವೇ ಇದೆ ಎಂದು ವೈದಿಕರು ಹೇಳುತ್ತಾರೆ. ಬ್ರಹ್ಮವನ್ನರಿತು ಬ್ರಾಹ್ಮಣನಾಗದೆ, (ಬಹ್ಮಂ ವಿಜಾನಾತಿ ಇತಿ ಬ್ರಾಹ್ಮಣಃ) ಜೀವನದ ಐಹಿಕ ಭೋಗವಸ್ತುಗಳನ್ನೂ, ಸಂಬಂಧಗಳನ್ನೂ, ಪರಮಾತ್ಮವನಿಗೆ ಅರ್ಪಿಸಿ, ಸನ್ಯಾಸಿಯಾಗದೆ, ಬರಿದೆ ತಿರುಗುವವನು ಧರಣಿಯಲ್ಲಿ ಅಜ್ಞಾನಿಯಷ್ಟೇ.

ಋಷಿಯರಿಯದಂಥ ವಿಷಯವಿಲ್ಲ ಜಗದಿ ;
ಅವರು ನುಡಿದುದೆಲ್ಲ ಅದುವೆ ಕ್ರಮವು,
ತಿಳಿಯದೆ ನಡೆವವರು ತಾವು ಜಡರು ಸತ್ಯ.
ವಿಶ್ವದಾಭಿರಾಮ ಕೇಳು ವೇಮ.

ಋಷಿಗಳು, ಮುನಿಗಳು, ಬ್ರಹ್ಮವಿದರು ಅಂದರೆ ಬ್ರಹ್ಮತ್ವದಲ್ಲಿ ನೆಲೆ ನಿಂತವರು ಆದ್ದರಿಂದ ಅವರು ಸರ್ವಜ್ಞರಾಗಿರುತ್ತಾರೆ. ಹಾಗಾಗಿ, ಈ ಜಗತ್ತಿನಲ್ಲಿ ಋಷಿಯು ಅರಿಯದಂಥ ವಿಷಯವೇ ಇರದು. ಅವರು ತಮ್ಮ ಅಂತರ್ವಾಣಿಯಿಂದ ಏನೇನು ನುಡಿಯುತ್ತಾರೋ, ಅದೆಲ್ಲ ಕ್ರಮಬದ್ಧವಾಗಿರುತ್ತದೆ. ಅದನ್ನು ಶ್ರವಣ ಮಾಡಿ, ಮನನ ಮಾಡಿ, ನಿದಿಧ್ಯಾಸ ಮಾಡಿ, ಅಂತೆಯೇ ನಡೆಯದ ಜನರು ನಿಜವಾಗಿಯೂ ಜಡರೇ ಸರಿ. ಅವರಲ್ಲಿ ಆತ್ಮಚೈತನ್ಯ ಸ್ಫುರಿಸದು.





ಟಿಪ್ಪಣಿಗಳ ಗೆಯ್ದು ತಿಳಿಸಿದ ಮಾತುಗಳ,
ಸಾರುತಿಹವು ಸಕಲ ಸ್ಮೃತಿ ಶ್ರುತಿಗಳು.
ವಿವರಿಸದಿಹರೇಕೆ ವೇದಾಂತ ಸಾರವ ?
ವಿಶ್ವದಾಭಿರಾಮ ಕೇಳು ವೇಮ.

ಬಳಿಗೆ ಕುಳಿತ ಶಿಷ್ಯರಿಗೆ ಬೋಧಿಸಲೆಂದೇ ಟಿಪ್ಪಣಿಗೆಯ್ದು ತಿಳಿಸಿದ ಮಾತುಗಳನ್ನೇ ಎಲ್ಲ ಶ್ರುತಿಗಳೂ, ಸ್ಮೃತಿಗಳೂ ಸಾರುತ್ತಿವೆ. ಅವುಗಳಲ್ಲಿ ಅಡಕವಾದ ವೇದಾಂತಸಾರವಾದ ಬ್ರಹ್ಮವಿದ್ಯೆಯನ್ನು ಜನರಿಗೆ ಏಕೆ ತಿಳಿಸುತ್ತಿಲ್ಲ ? ಅವುಗಳಿಂದ ಜನರನ್ನೇಕೆ ದೂರವಿರಿಸಿದ್ದಾರೆ ? ಶೋಷಣಾಮುಕ್ತ ಸಮಾಜ ಸಂರಚನೆಗೆ ಜ್ಞಾನ ಪ್ರಸಾರ ಅಗತ್ಯ ತಾನೇ ?

ಬ್ರಾಹ್ಮಣನಿಗೆ ಸಕಲ ಭಾಗ್ಯವಿರಲು ಲೇಸು.
ಗೌರವ ನಿಧಿ ಲೇಸು, ಸೌಖ್ಯ ಲೇಸು.
ಜ್ಞಾನ ನೀಡಿ, ತೋರೆ, ಜನಕ ಮುಕ್ತಿ ಮಾರ್ಗ.
ವಿಶ್ವದಾಭಿರಾಮ ಕೇಳು ವೇಮ.

'ಬ್ರಹ್ಮಂ ವಿಜಾನಾತಿ ಇತಿ ಬ್ರಾಹ್ಮಣಃ' ಅಂದರೆ ಬ್ರಹ್ಮವನ್ನು ತಿಳಿದವನೇ ಬ್ರಾಹ್ಮಣನು. ಅಂಥ ಬ್ರಾಹ್ಮಣನಿಗೆ ಕುಲ ಜಾತಿಗಳಿರವು. ಅವರಿಗೆ ಎಲ್ಲ ಭಾಗ್ಯವಿದ್ದರೂ ಲೇಸು. ಅವರಿಗೆ ಗೌರವದಿಂದ ನಿಧಿಯನ್ನು ಅರ್ಪಿಸಿದರೂ ಲೇಸು. ಅವರ ಸೌಖ್ಯವೂ ಲೇಸು. ಏಕೆಂದರೆ, ಅವರು ತಾವು ಅರ್ಜಿಸಿದ ಜ್ಞಾನ ಸಂಪತ್ತನ್ನು ಜನರಿಗೆ ನೀಡಿ ಮುಕ್ತಿ ಮಾರ್ಗ ತೋರುತ್ತಾರೆ. ಆದರೆ ಜಾತಿ ಮಾತ್ರದಿಂದ ಬ್ರಾಹ್ಮಣನೆಂದೂ, ಗುರುವೆಂದೂ ಪ್ರತಿಪಾದಿಸುವವರನ್ನು ಪುರಸ್ಕರಿಸಕೂಡದು. ಅವರು ಶೋಷಕರಷ್ಟೇ. ಅಂಥವರಿಗೆ ತಮ್ಮ ಮುಕ್ತಿ ಮಾರ್ಗದ ದಾರಿಯೇ ತಿಳಿಯದು. ಅನ್ಯರಿಗೆ ಹೇಗೆ ದಾರಿ ತೋರಬಲ್ಲರು ?

ಯಜ್ಞದ ಹೆಸರಿನಲ್ಲಿ ಸೊಂಪಾಗಿ ತಿಂದು, ಕುಡಿದು, ಮತ್ತರಾಗುವ ಕಾಮ್ಯ ಕರ್ಮಿಗಳ ಹೂರಣವನ್ನು ವೇಮನರು ಬಯಲು ಮಾಡಿದ್ದಾರೆ.

ಸೋಮಯಾಜಿಯೆಂದು ಸೊಂಪಿನ ವೇಷದವ
ಕೆಟ್ಟ ಮಾಂಸ ಪಾಕ ಮಾಡಿ ತಿನುವ.
ಮತ್ತೆ ದ್ವಿಜನೆನಲು ಮೆರೆವನೆಂತು ತಾನು ?
ವಿಶ್ವದಾಭಿರಾಮ ಕೇಳು ವೇಮ.

ಸೋಮಯಾಜ ಎಂದರೆ ಸೋಮ (ಸುರಾ) ಪಾನ ಮಾಡುವ ಯಾಜಕನು. ಮದವೇರಿಸುವ ಸೋಮಪಾನವು ಯಾರಿಗೆ ಪ್ರಿಯವಲ್ಲ ? ಸೋಮ ರಸ ಕುಡಿದು ಹೋರಿಯನ್ನು ಬಲಿಗೊಟ್ಟರೆ, ದೇವತೆಗಳು ಪ್ರೀತರಾಗುವರೆಂದು ವೇದದಲ್ಲಿ ಹೇಳಲಾಗಿದೆ. ಸೋಮಯಾಜಿ ಎಂಬ ಸೊಂಪಿನ ವೇಷದವನು, ಕಟ್ಟ ಮಾಂಸವನ್ನು ಪಾಕ ಮಾಡಿ ತಿನ್ನುತ್ತಾನೆ. ಇಂಥವನು ತನಗೆ ಸಂಸ್ಕಾರವಾಗಿದೆ. ನನಗೆ ಉಪನಯನವಾಗಿದೆ. ಆದ್ದರಿಂದ ನಾನು ದ್ವಿಜನು ಎಂದು ಮೆರೆದಾಡಿದರೆ ಎಂತು ಸಹಿಸಬಹುದು ?

'ಎಂಬರು' ಮತವೇಷ ಧರಿಸಿ, ಮಾಂಸ ಬಗಿದು,
ಅನ್ಯ ಹೆಸರು ಹೊತ್ತು, ಮದ್ಯ ಕುಡಿದು,
ರಕ್ತ ಮಾಂಸ ತೊರೆದು ರತಿ ಸುಖದಿ ಕೆಡುವರು,
ವಿಶ್ವದಾಭಿರಾಮ ಕೇಳು ವೇಮ.

ಯಜ್ಞ ನಡೆಸಿಕೊಡುವ ಪುರೋಹಿತರು, ತಾವು ಬಲಿ ನೀಡುವವನ ಪಾತ್ರವನ್ನೂ, ಕಟುಕನ ಪಾತ್ರವನ್ನೂ ವಹಿಸಿ, ಅಧ್ವರ್ಯು, ಹೋತಾರ, ಪ್ರತಿಹರ್ತ ಇತ್ಯಾದಿ ಹೆಸರು ಹೊತ್ತು, 'ಎಂಬರು' ಮತವೇಷಧರಿಸಿ, ಮಾಂಸವನ್ನು ಕಚ್ಚಿ ಹೀರುತ್ತಾರೆ. ಮದ್ಯವನ್ನು ಕುಡಿಯುತ್ತಾರೆ. ಹೀಗೆ ಮತ್ತರಾಗಿ ಬೇರೆ ಹೆಸರು ಹೊತ್ತು ರಕ್ತ ಮಾಂಸ ಸಂಬಂಧವನ್ನು ತೊರೆದು ರತಿ ಸುಖದಲ್ಲಿ ಕೆಡುತ್ತಾರೆ.

ಈ ವೈದಿಕ ಪ್ರಕ್ರಿಯೆಯ ಅವಶೇಷವಾಗಿ, ಕೆಲವು ಊರುಗಳಲ್ಲಿ ದೇವಿಯ ಜಾತ್ರೆಯ ದಿನ ರಾತ್ರಿ ಯುವಕ ಯುವತಿಯರು ತಿಂದು, ಕುಡಿದು, ಮತ್ತರಾಗಿ ಮುಖವಾಡ ಧರಿಸಿ, ತಮ್ಮ ಹೆಸರು ಬದಲಿಸಿಕೊಂಡು, ರಕ್ತ ಸಂಬಂಧದ ಗಣನೆಯಿಲ್ಲದೆ, ರತಿ ಸುಖವನ್ನು ಅನುಭವಿಸುವ ರೂಢಿಯು ಇನ್ನೂ ಅಲ್ಲಲ್ಲಿ ಪ್ರಚಲಿತವಿದೆ.

ಹೆಂಡ ಮಡಿಕೆ ಮೈಗೆ ಬಹಳ ಬೂದಿ ಬಳಿಯೆ,
ಆ ಕಂಪು ವಾಸನೆ ಅಡಗಬಹುದೆ ?
ದಾರ ಕತ್ತಿಗೆ ಬಿಗಿಯೆ ದ್ವಿಜನು ತಾನದೆಂತು ?
ವಿಶ್ವದಾಭಿರಾಮ ಕೇಳು ವೇಮ.

ವೈದಿಕ ಕರ್ಮದಲ್ಲಿ ಬಳಸುತ್ತಿದ್ದ ಜೇಡಿ ಮಣ್ಣಿನ ಮಡಕೆಯೂ ಸಹ, ಪರಮಾಧಿಕಾರದ ಸಾಕ್ಷಾತ್ ದೇವತೆಯೇ ಎಂಬಂತೆ ಆರಾಧನೆಯ ವಸ್ತುವಾಯಿತು. ಹೆಂಡ ತುಂಬಿದ ಆ ಮಡಿಕೆಗೆ ಎಷ್ಟು ಬೂದಿ ಬಳಿದರೇನು ? ಆ ಹೆಂಡದ ಕಂಪು ಅಡಗಬಹುದೇ ? ಅದೇ ರೀತಿ, ಯಜ್ಞ ಯಾಗದಲ್ಲಿ ನಿರತನಾದ ಕಾಮ್ಯ ಕರ್ಮಿಯ ಕಾಮನೆಯ ವಾಸನೆಯು ಕೊರಳಲ್ಲಿ ಉಪನೀತ ಇಲ್ಲವೆ ದಾರ ಬಿಗಿಯಲು ಹೋಗಬಹುದೆ ? ಅಂಥವನು ಐಹಿಕ ಜೀವನ ತೊರೆದು, ಪರಮಾರ್ಥದ ಎರಡನೆಯ ಜನ್ಮ ಪಡೆದ ದ್ವಿಜನು ಹೇಗಾಗುತ್ತಾನೆ ?

ಸುರರು ಮೌನವಿಹರು, ಸರಿಯಾಗಿ ನಡೆವರು.
ಧರ್ಮ ಮಾರ್ಗವೊಂದೆ ತಾರಕವಲ !
ಅಂತೆ ಅಲ್ಲದವರು ಅಸುರರಾಗಿ ಕೆಡುಗು
ವಿಶ್ವದಾಭಿರಾಮ ಕೇಳು ವೇಮ.

ಆಡದೇ ಮಾಡುವನು ರೂಢಿಯೊಳಗುತ್ತಮನು ; ಎನ್ನುವಂತೆ, ಹೆಚ್ಚು ಮಾತಿಗಿಳಿಯದೆ, ಮೌನಿಗಳಾಗಿದ್ದು, ಸರಿಯಾಗಿ ನಡೆದು ತೋರಿಸುವವರೇ ಆಚಾರ್ಯ ಪುರುಷರು, ಸುರರು. ಭವಸಾಗರವನ್ನು ದಾಟಲು, ಅಲ್ಲಿಂದ ಪಾರುಗಾಣಲು ಧರ್ಮ ಮಾರ್ಗವೊಂದೇ ತಾರಕವಾಗಿದೆ. ಹಾಗೆ ಮಾಡುವವರು ಧರ್ಮಭ್ರಷ್ಟರಾಗಿ, ವಾದ, ಜಲ್ಪ, ವಿತಂಡಗಳಲ್ಲಿ ಮಗ್ನರಾಗಿ ಅಸುರರಾಗಿ ಕೆಡುವರು.





ಹುಚ್ಚು ನರಿಗಳಂತೆ ಹೆಚ್ಚು ವೇದ ಓದಿ,
ಆಸೆಗಳನರಿಯರು ಅಯ್ಯರೆಲ್ಲ.
ವೇದ ಸಾರವೆಲ್ಲ ವೇಮನನರಿಯುವನು.
ವಿಶ್ವದಾಭಿರಾಮ ಕೇಳು ವೇಮ.

ಹಲವು ಋತ್ವಿಕರು ಸೇರಿ ವೇದ ಮಂತ್ರಗಳನ್ನು ಉಚ್ಚಕಂಠದಿಂದ ಸಾಮಗಾನದಲ್ಲಿ ಪಠಿಸಿದಾಗ ಹುಚ್ಚು ನರಿಗಳು ಕೂಗಿದ ಸ್ವರದಂತೆ ಕೇಳಿ ಬರುತ್ತದೆ. ಠಕ್ಕ ನರಿಗಳು ಏನೋ ಹೊಂಚು ಹಾಕಿ ಕೂಗು ಹಾಕುವಂತೆ, ಈ ಋತ್ವಿಕರು ಯಜ್ಞ ಶೇಷದ ಮಾಂಸದ ಪಿಂಡಕ್ಕಾಗಿ ಪಠಿಸುತ್ತಾರೆ. ಹೀಗೆ ಎಷ್ಟು ಹೆಚ್ಚು ಕಾಲ ವೇದ ಮಂತ್ರ ಪಠಣ ಮಾಡಿದರೂ, ಅವರು ತಮ್ಮ ಕರ್ಮಫಲಾಪೇಕ್ಷೆಯನ್ನು ತೊರೆಯರು. ಅವರ ಮನದಲ್ಲಿ ಆಸೆಯು ತುಂಬಿರುತ್ತದೆ. ಆಶೆಯನ್ನು, ಅರಿತು ತೊರೆಯದವರು ಆರ್ಯರಾದರೇನು ? ವೇದ ಸಾರವನ್ನೆಲ್ಲ ಯೋಗಿ ವೇಮನನು ಅರಿಯುತ್ತಾನೆ.

ವೇದ ವಿದ್ಯೆಯಲ್ಲ, ವೀರ ವಿದ್ಯೆಯಲ್ಲ
ಬಾಧೆ ವಿದ್ಯೆಯಲ್ಲ, ಭಾರವಲ್ಲ
ಮಧುರವಾಗಿರುವಂಥ ಮನಸು ನಿಲಿಪ ವಿದ್ಯೆ.
ಸ್ವಾದ ವಿದ್ಯೆಯೆನಲು ಸರಳ ವೇಮ.

"ಸಾ ವಿದ್ಯಾ ಯಾ ವಿಮುಕ್ತಯೇ" ಅಂದರೆ ಯಾವುದು ಬಂಧನದಿಂದ ವಿಮುಕ್ತಗೊಳಿಸುವುದೋ, ಅದುವೇ ವಿದ್ಯೆ ಎನಿಸುತ್ತದೆ. ಹೀಗೆ, ಕರ್ಮಕಾಂಡೀಯ ವೇದವೂ ವಿದ್ಯೆಯಲ್ಲ. ವೀರನಾಗಿ, ಶೂರನಾಗಿ ಹೋರಾಡುವ ರಾಜನ ಕಲೆಯೂ ವಿದ್ಯೆಯಲ್ಲ. ದೇಹ ದಂಡಿಸುವ ತಪಾನುಷ್ಠಾನವೂ ವಿದ್ಯೆಯಲ್ಲ. ಮನಸ್ಸಿಗೆ ಭಾರವಾಗುವ ಭಾವ ಜಡತೆಯ ವ್ರತಾದಿಗಳೂ ವಿದ್ಯೆಯಲ್ಲ. ಹಾಗಾದರೆ, ಯಾವುದು ವಿದ್ಯೆ ? ವಿಶೇಷ ಮೃದು ಮಧುರವಾದ, ಮನಸ್ಸನ್ನು ನಿಲ್ಲಿಸುವ, ಕೌಶಲವೇ ವಿದ್ಯೆಯೆನಿಸುತ್ತದೆ. ವಿದ್ಯೆಯೆಂದರೆ ಸರಳವಾದ, ಇಂಪಾದ, ಕಂಪಾದ, ಆನಂದ ಸವಿಯುಪಿಕೆಯೇ ಆಗಿದೆ.

------

# ೨. ಮೂರ್ತಿ ಪೂಜೆ

ದೇವರೆಂದರೆ ಯಾರು ? ದೇವರ ಸ್ವರೂಪವೇನು ? ದೇವರು ಇರುವುದೆಲ್ಲಿ ? ದೇವರನ್ನು ಒಲಿಸಿಕೊಳ್ಳುವ ಬಗೆ ಹೇಗೆ ? ದೇವರಿಗೂ ಜೀವರಿಗೂ ಇರುವ ಸಂಬಂಧವಾವುದು ? ಎಂಬುದನ್ನು ಅರಿಯುವುದೇ ಅಧ್ಯಾತ್ಮವಾಗಿದೆ. ನಿದ್ರೆ, ಆಹಾರ, ಭಯ ಮತ್ತು ಮೈಥುನಗಳು ಪಶುಗಳಿಗೆ ಮತ್ತು ಮನುಷ್ಯರಿಗೆ ಸಾಮಾನ್ಯವಾದ ವೃತ್ತಿಗಳು ; ಧರ್ಮ ಅಂದರೆ ಮೋಕ್ಷ ಸಾಧನೆಯ ಆಕಾಂಕ್ಷೆಯು. ಮುಮುಕ್ಷುತ್ವ ಮನುಷ್ಯನ ವಿಶೇಷ ಧರ್ಮ. ಮೋಕ್ಷವೆಂದರೆ ಪ್ರಪಂಚದ ಬಂಧನಗಳಿಂದ ಬಿಡುಗಡೆ ಮತ್ತು ದೇವರೊಂದಿಗೆ ಒಂದಾಗುವುದೇ ಆಗಿದೆ.

ದೇವರು ಸರ್ವವನ್ನೂ ವ್ಯಾಪಿಸಿದ್ದಾನೆ. ಸರ್ವಾನುಸ್ಯೂತನಾಗಿದ್ದಾನೆ. ಅಂದರೆ ಎಲ್ಲವನ್ನೂ ಹೆಣೆದುಕೊಂಡಿದ್ದಾನೆ. ಆದರೆ, ದೇವರ ಸ್ವರೂಪವು ಭೂತಗಳನ್ನು ದಾಟಿ ಇದೆ.

ಪಂಚಭೂತಗಳನು ಪರಿಗಣಿಸಿ ಮನದಲಿ,
ಮಿಂಚಿ ಹೊಂದಬೇಕು ಮೃತ್ಯುಂಜಯನ.
ಅಲ್ಲಿ ತಿಳಿಯುವವನೆ ಅಖಿಲಜ್ಞನಹ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

ಇದನ್ನೇ ಗೀತೆಯಲ್ಲಿ ಬಾಲ ಭಾಷೆಯಲ್ಲಿ ಹೇಳಲಾಗಿದೆ. "ಈ ಆತ್ಮನು ಕತ್ತರಿಸಲಾಗದವನು, ದಹಿಸಲಾಗದವನು, ನೆನೆಯಿಸಲಾಗದವನು ಮತ್ತು ಒಣಗಿಸಲೂ ಆಗದವನು. ಈತನು ನಿತ್ಯನು, ಸರ್ವಗತನು, ಸ್ಥಿರನು, ಅಚಲನು, ಸನಾತನನು". (ಗೀತೆ 2-24) ಅಂದರೆ ಆತ್ಮನು ಭೂತಗಳನ್ನು ಮೀರಿ ಇದ್ದಾನೆ. ಅವನನ್ನು ಗಾಳಿ ಒಣಗಿಸದು, ಅಗ್ನಿಯು ಸುಡದು, ಅಪ್ ತೊಯ್ಯಿಸದು, ಕತ್ತರಿಯು ಕತ್ತರಿಸದು, ಅವನು ಅಚಲನೂ, ಸರ್ವಗತನೂ ಆಗಿದ್ದಾನೆ.

ದೇವರು ಇಂದ್ರಿಯಗೋಚರನೇ ? ಅಲ್ಲ, ಮನ-ಬುದ್ಧಿಗಳಿಗೆ ಗೋಚರನೇ ? ಅಲ್ಲ.

ಕಣ್ಣು ಕಂಡಿತೆನಲು ಕರ್ಮಾಧಿಕಾರವು,
ಹಿಂದೆ ಬಿದ್ದು ಕೆಡುವ ಹುಚ್ಚು ಮನುಜ.
ಬಟ್ಟ ಬಯಲು ಬ್ರಹ್ಮ, ಪರಿಪರಿಯಲಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ದೇವರ ಸ್ವರೂಪವು ಸೂಕ್ಷ್ಮಾತಿಸೂಕ್ಷ್ಮವು. ಕಾರ್ಯ-ಕಾರಣಾತೀತನು. ಅವನನ್ನು ಯಾರಾದರೂ ಕಣ್ಣಿನಿಂದ ನೋಡಿದೆವೆಂದರೆ ಅದು ಅವರ ಕರ್ಮಾಧಿಕಾರವಷ್ಟೇ. ಅಂದರೆ ತಾವೇ ಕಲ್ಪಿಸಿಕೊಂಡ ರೂಪವಷ್ಟೇ. ಹುಚ್ಚು ಮನುಷ್ಯನು ಅದೇ ಕಲ್ಪಿತ ರೂಪದ ಹಿಂದೆ ಬಿದ್ದು ಕೆಡುತ್ತಾನೆ. ಬ್ರಹ್ಮವು ಮಾತು ಮನಂಗಳನ್ನು ದಾಟಿದ ಬಯಲಿನಾಚೆಯ ಬಟ್ಟ ಬಯಲು. ಇದನ್ನು ಪರಿಪರಿಯಾಗಿ ಅರಿತು ನೋಡು. ಅವನು ಇಂದ್ರಿಯಗಳಿಗೆ ಗೋಚರನಲ್ಲ, ಇಂದ್ರಿಯಾತೀತನು.

ಹಾಗಾದರೆ ಮನ ಬುದ್ಧಿಗಳಿಗೆ ಗೋಚರನೇ ? ಹಾಗೂ ಇಲ್ಲ.





ಗೀತ : ಆವುದಾವುದೆಂದು ಮನದಲಿ ಅರುಹಿ, ಸಾಧಿಸಿ,
ಅಲ್ಲ, ಅಲ್ಲವೆಂದು ಪರಿಕಿಸಿ, ಅಕ್ಷಿ ತೆರೆದು,
ಆದಿ ಮೂಲವ ಕಾಣುವವನೆ ಆತ್ಮವೇತ್ತ.
ಅವನೇ ಪರಮಾನಂದವ ಆಂತಿಹ ವೇಮ.

ಕಲ್ಪಿತ ದೇವರ ನಾಮ ರೂಪಗಳನ್ನು ಮನಸ್ಸಿಗೆ ಅರುಹಿ, ಅವುಗಳನ್ನು ಮನದಿಂದ ಗ್ರಹಿಸಿ, ಸಾಧಿಸಿ, ಕೊನೆಗೆ ಅರಿವಿನ ಕಣ್ಣು ತೆರೆದು, ಪರೀಕ್ಷಿಸಿ ನೋಡಿ, ಇದು ಅಲ್ಲವಲ್ಲ ; ಎಂದು ದೃಢಪಡಿಸಿಕೊಂಡು, ಅನಾತ್ಮವನ್ನು ತೊರೆದು ಹೋಗುವ ಆತ್ಮವಿದನು, ಆದಿ ಮೂಲವನ್ನು ಕಾಣುವನು. ಮನವು ಹುಟ್ಟುವ ಮುನ್ನ, ಇರುವ ಆ ಪರಮನನ್ನು ಕಾಣುವನು. ಹೀಗೆ ಸಾಧಿಸಿದವನೇ ಪರಮಾನಂದವನ್ನು ಪಡೆದವನು. ಅನಂತ ಸುಖವೇ ಆನಂದ. ಆನಂದವೇ ಬ್ರಹ್ಮ.

ಏಕೆಂದರೆ, 'ಈ ಆತ್ಮನು ಅವ್ಯಕ್ತನು, ಅಚಿಂತ್ಯನು, ವಿಕಾರ ರಹಿತನು ; ಎಂದು ಹೇಳಲ್ಪಟ್ಟಿರುತ್ತಾನೆ. (ಗೀತೆ 2-25) ಹಾಗಾಗಿ, ಅವನು ಮನ ಬುದ್ಧಿಗಳಿಗೆ ಅತೀತನು.

ಆದ್ದರಿಂದ ಮಹಾಯೋಗಿಗಳು ಹೀಗೆ ಹಾಡಿದ್ದಾರೆ.

ಊರ್ಧ್ವ ಲೋಕದಲ್ಲಿ ಉಚಿತ ಕ್ರಮದಿಂದ,
ರೂಪವೇನು ಇರದ ರೀತಿಯಲ್ಲಿ,
ಪರಮ ಯೋಗಿ ನೋಳ್ಪ ಪರಮಾತ್ಮನಿರವನು.
ವಿಶ್ವದಾಭಿರಾಮ ಕೇಳು ವೇಮ.

ಪರಮಾತ್ಮನಿಗೆ ರೂಪವಿಲ್ಲ, ನಾಮವಿಲ್ಲ, ಬೃಹತ್ ಆಗಿರುವುದರಿಂದ ಅವನು ಬ್ರಹ್ಮ. ಸರ್ವಾನುಸ್ಯೂತನಾಗಿರುವದರಿಂದ ಅವನು ವಿಷ್ಣು. ಮಂಗಳಕರನಾದುದರಿಂದ ಅವನು ಶಿವ. ಅವನು ಭೌತಿಕ ಲೋಕದಲ್ಲಿ ಸ್ವರೂಪದಲ್ಲಿ ಇಲ್ಲ. ಅವನಿರುವುದು ಊರ್ಧ್ವ ಲೋಕದಲ್ಲಿ. ಧ್ಯಾನ ಸಾಧನದ ಉಚಿತ ಕ್ರಮದಿಂದ ಮಾತ್ರ ಪರಮ ಯೋಗಿಯು ಪರಮಾತ್ಮನ ಇರವನ್ನು ನೋಡುತ್ತಾನೆ.

ಕಾಣಲಾರ ಹಣೆಯ ; ಕರ್ಣ ಬೆನ್ನು ಭಾಗ,
ಕಾಣಲಾರ ನೆತ್ತಿ, ಕೇಶ ಮೇಲೆ.
ತನ್ನ ಕಾಣಲಾರ, ತತ್ತ್ವವೇನರಿವನು ?
ವಿಶ್ವದಾಭಿರಾಮ ಕೇಳು ವೇಮ.

ತನ್ನ ಸ್ಥೂಲ ಇಂದ್ರಿಯಗಳಿಂದ ತನ್ನ ದೇಹದ ಅಂಗಾಗಗಳನ್ನೇ ಕಾಣಲಾರದ ಮಾನವನು ಸೂಕ್ಷ್ಮಾತಿಸೂಕ್ಷ್ಮವಾದ ತತ್ತ್ವವನ್ನು ಅಂದರೆ ದೇವರನ್ನು ಹೇಗೆ ತನ್ನ ಸ್ಥೂಲ ಇಂದ್ರಿಯಗಳಿಂದ ಅರಿಯಬಲ್ಲನು ?

## ಮೂರ್ತಿ ಕಲ್ಪನೆ :

ದೇವರ ಸ್ವರೂಪವು ನಿಜವಾಗಿ ಅಮೂರ್ತವಾಗಿದೆ. ನಾಮ ರೂಪಗಳಿಗೆ ಅತೀತವಾಗಿದೆ. ಅಂಥವನನ್ನು ಮೂರ್ತಗೊಳಿಸುವುದೆಂತು ಸಾಧು ? ಆಕಾರವಿಲ್ಲದ ನಿರಾಕಾರನಿಗೆ ಆಕಾರ

ಕಲ್ಪಿಸುವುದು ಹೇಗೆ ಸರಿಯಾಗುತ್ತದೆ ? ಇನ್ನು ಸೃಷ್ಟಿಯ ಸಂಚರ ಧಾರೆಯ ಕೊನೆಯ ಹಂತದ ಜಡ ಶಿಲೆ, ಲೋಹಗಳಲ್ಲಿ ಮೂರ್ತಿ ಕಟೆಯುವುದಾಗಲೀ, ಆ ಮೂರ್ತಿಯನ್ನು ಪೂಜಿಸುವುದಾಗಲಿ, ಇಲ್ಲವೆ ಆ ಮೂರ್ತಿಗೆ ಪ್ರಾಣ ಪ್ರತಿಷ್ಠೆ ಮಾಡುತ್ತೇವೆಂದು ಗಳಪುವುದಾಗಲಿ ಎಷ್ಟೊಂದು ಸಮಂಜಸವಾದೀತು ?

ಮಣ್ಣು ಲೋಹಗಳಲಿ, ಮರ ಶಿಲಾದಿಗಳಲಿ,
ಪಟ ಗೋಡೆಗಳಲ್ಲಿ, ಪ್ರತಿಮೆಗಳಲಿ,
ತನ್ನ ನೆನಪು ಕೊಡಲು ತವಕಿಸನು ಪರಮಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ಆದುದರಿಂದಲೇ ತಂತ್ರದಲ್ಲಿ ಹೀಗೆ ಹೇಳಲಾಗಿದೆ.

ಮೃಚ್ಛಿಲಾ ಧಾತು ದಾರವಾದಿ ಮೂರ್ತಾನೀಶ್ವರಾ ಬದ್ಧಯೋ
ಕ್ಲಿಶ್ಯಂ ತಪಸಾ ಜ್ಞಾನ ವಿನಾ ಮೋಕ್ಷಂ ನ ಯಾಂತಿ ತೇ.

ಅಂದರೆ, ಮಣ್ಣು, ಕಲ್ಲು, ಲೋಹ, ಕಟ್ಟಿಗೆ ಮೊದಲಾದವುಗಳಿಂದ ತಯ್ಯಾರಿಸಿದ ಮೂರ್ತಿಗಳಿಗೆ ಈಶ್ವರನನ್ನು ಬದ್ಧಗೊಳಿಸಿದರು. ಆದರೆ ನಿಜವೆಂದರೆ ತಪಸ್ಸು ಮತ್ತು ಜ್ಞಾನದ ಹೊರತು, ಅವರು ಮೋಕ್ಷವನ್ನು ಪಡೆಯರು.

ಶಿವನೆಂದು ಭ್ರಮಿಸಿ ಶಿಲೆಗೆ ಶರಣೆಂಬಿರಿ ;
ಮೂರ್ಖ ಜೀವಿಗಳೇ ! ಮೋಹ ಬಿಡಿರಿ.
ಜೀವಿಯೊಳಿರುತಿಹುದು, ಶಿಲೆಯೊಳಗೇನುಂಟು ?
ವಿಶ್ವದಾಭಿರಾಮ ಕೇಳು ವೇಮ.

ಹೃದಯದಲ್ಲಿ ಶಿವನು ಇರುವುದನು ತಿಳಿಯದೆ,
ಎರಗಲೇಕೆ ಶಿಲೆಗೆ ಎತ್ತಿ ಕೈಯ ?
ಅಂಧ ಕನ್ನಡಿಯನು ಅರಸಿ ನೋಡಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ವಿಷ್ಣು ಪುರಾಣದಲ್ಲಿಯೂ ಸಹ, 'ಕಾಷ್ಟ ಲೋಹೇಷು ಮೂರ್ಖಾಣಾಂ, ಪಂಡಿತಾನಾಂ ಹೃದಯೇಷು ಚ' ಎಂದರೆ ಮೂರ್ಖರ ದೇವರು ಕಟ್ಟಿಗೆ ಲೋಹಗಳಲ್ಲಿ ರಬಹುದು. ಆದರೆ, ಪಂಡಿತನಿಗೆ ತನ್ನ ಹೃದಯದಲ್ಲಿಯೇ ದೇವರು ಇರುತ್ತಾನೆ.

ತನ್ನ ಹೃದಯದಲ್ಲಿಯೇ ದೇವರು ಇರುವನೆಂದು ತಿಳಿದುಕೊಳ್ಳದೆ, ಶಿಲೆಯ ಮೂರ್ತಿಗಳಿಗೆ ಕೈಯನ್ನು ಎತ್ತಿ ಎರಗಲೇಕೆ ? ಕನ್ನಡಿಯು ಎಲ್ಲಿದೆಯೆಂದು ಹುಡುಕುವ ಕುರುಡನಿಗೆ ಕನ್ನಡಿಯು ಎಲ್ಲಿದೆಯೆಂದೂ ಕಾಣದು. ಕನ್ನಡಿಯಲ್ಲಿ ತನ್ನ ಪ್ರತಿಬಿಂಬವೂ ಕಾಣದು. ಅದೇ ರೀತಿ ಹೃದಯವನ್ನು ತೊರೆದು, ಶಿಲೆಗಳಲ್ಲಿ ದೇವರನ್ನು ಹುಡುಕುವ ಜ್ಞಾನಾಂಧನಿಗೆ ದೇವರೂ ಕಾಣನು, ತನ್ನ ಸ್ವರೂಪದ ಪ್ರತಿಬಿಂಬವೂ ಕಾಣದು.





ಅಕ್ಷರಾದಿ ಹಿಂದೆ, ಅಡವಿಯಾದಿ ಹಿಂದೆ,
ಬೆಟ್ಟಕಲ್ಲು ಹಿಂದೆ, ಬವಣೆಯೇಕೆ ?
ಹೃದಯದಲ್ಲಿ ಶಿವನು ಹಾಯಾಗಿಹದರಿಯರೆ ?
ವಿಶ್ವದಾಭಿರಾಮ ಕೇಳು ವೇಮ.

ಹೃದಯದಲ್ಲಿಯೇ ಶಿವನು ಹಾಯಾಗಿ ಇರುತ್ತಿರುವಾಗ, ಅವನನ್ನು ಅರಸುತ್ತ, ವೇದ ಪುರಾಣಗಳನ್ನು ಓದುವ, ಮನೆ ಮಾರು ತೊರೆದು ಅಡವಿ, ಗವಿಗಳಲ್ಲಿ ಸೇರಿ, ದೇಹ ದಂಡಿಸಿ ತಪಸ್ಸು ಮಾಡುವ, ಬೆಟ್ಟಗಳನ್ನು ಸುತ್ತುವ, ಕಲ್ಲಿನ ಮೂರ್ತಿಗೆ ಮಣಿಯುವ, ಬವಣೆಯೆಲ್ಲ ಏಕೆ ಬೇಕು ?

ಅಂತರಂಗದಲ್ಲಿ ಅಭವನನುದ್ದೇಶಿಸಿ,
ನಿಲಿಸಿ ನೋಡೆ, ನೋಡೆ, ನಿಲುವುದಲ್ತೆ ?
ಬಾಹ್ಯದಲ್ಲಿ ಶಿವನ ಭಾವಿಸಿ ನಿಲಿಸುವರೆ ?
ವಿಶ್ವದಾಭಿರಾಮ ಕೇಳು ವೇಮ.

ಭವ ಎಂದರೆ ಸೃಷ್ಟಿ ಆಗುವಿಕೆ. ಸೃಷ್ಟಿ ಪೂರ್ವದ ತತ್ತ್ವವೇ ಅಭವ. ಅಂತರಂಗದಲ್ಲಿ ಅಭವನನ್ನು ಉದ್ದೇಶಿಸಿ, ಏಕಾಗ್ರ ದೃಷ್ಟಿಯನ್ನು ನಿಲ್ಲಿಸಿ, ನೋಡುತ್ತ ನೋಡುತ್ತ ಇರಲು ದೃಷ್ಟಿಯು ಅಲ್ಲಿಯೇ ನಿಲ್ಲುವುದಲ್ಲವೇ ? ಅಲ್ಲಿ ಅಚಲವಾದ, ಸ್ಥಿರವಾದ ತತ್ತ್ವದಲ್ಲಿ ಒಂದಾಗುವುದು. ಹಾಗೆ ಮಾಡದೆ ಬಾಹ್ಯದಲ್ಲಿ ಯಾವುದೋ ಕಲ್ಪಿತ ಮೂರ್ತಿಯಲ್ಲಿ ದೃಷ್ಟಿಯನ್ನು ಕೇಂದ್ರಿಕರಿಸಿದರೆ ಪ್ರಯೋಜನವೇನು ? ಮನವು ಇನ್ನಷ್ಟು ಸ್ಥೂಲವಾಗುತ್ತದೆ.

ಕಿವಿಯ ಗೂಡು ಗೆಯ್ದು ಕೂಗಿದನು ವೇಮನ,
ಬಟ್ಟ ಬಯಲೊಳುಂಟು ; ಬ್ರಹ್ಮವೆಂದು.
ಹೊಳೆಯೆ ಬುದ್ಧಿಗದನೆ ಹೊಂದಿ ಸುಖಿಸಬಹುದು.
ವಿಶ್ವದಾಭಿರಾಮ ಕೇಳು ವೇಮ.

ವಿಚಾರ ತರಂಗಗಳಿರದ, ಇಂದ್ರಿಯಾತೀತವಾದ ಚಿದಾಕಾಶವೇ ಬಯಲು. ಆ ಬಯಲಿನೊಳಗಿನ ಬಯಲು ಬಟ್ಟ ಬಯಲೆನಿಸುತ್ತದೆ. ಮಾತು ಮನಗಳಿಂದತ್ತ ಮೀರಿದ, ಸಾತಿಶಯ, ನಿರುಪಾಧಿಕ, ನಿರ್ಮಲ ತತ್ತ್ವವಿದು. ಇದುವೇ ಬ್ರಹ್ಮ. ಅದನ್ನೇ ವೇಮನರು ಕಿವಿಯನ್ನು ಗೂಡು ಮಾಡಿಕೊಂಡು ಕೂಗಿ ಹೇಳುತ್ತಾರೆ. ಅಗ್ರ್ಯ ಬುದ್ಧಿಗೆ ಅದು ಹೊಳೆದರೆ, ಅದನ್ನು ಹೊಂದಿ ಸುಖಿಸಬಹುದು.

ವೇದ ಶಾಸ್ತ್ರಗಳಲ್ಲಿ, ತಂತ್ರಾಗಮಗಳಲ್ಲಿ, ಈ ಪರಮ ತತ್ತ್ವವನ್ನೇ ದೇವರೆಂದು ಪ್ರತಿಪಾದಿಸಿದ್ದರೂ, ಈ ಮೂರ್ತ ದೇವ ಕಲ್ಪನೆಯ ಮೂಲವೆಲ್ಲಿದೆ ? "ಬೃಹದೇಷಾ ಬ್ರಹ್ಮ ಇತ್ಯಾಹುಃ" ಬೃಹತ್ತಿಗಾಗಿ ಇಚ್ಛೆಯೇ ಬ್ರಹ್ಮ. ಈ ಬ್ರಹ್ಮ ತತ್ತ್ವವನ್ನೇ ಕಲ್ಪಿಸಲಾರದ ಪುರಾತನ ವೈದಿಕ ಜನರು ನಿಸರ್ಗ ಶಕ್ತಿಗಳನ್ನೇ ಶಕ್ತಿವಂತ ದೇವತೆಗಳೆಂದು ಗ್ರಹಿಸಿ, ಗೌರವಿಸಿ ಪೂಜಿಸತೊಡಗಿದರು. ಅಗ್ನಿ, ವರುಣ, ಮೇಘ, ಮರುತ್, ಸೋಮ ಇತ್ಯಾದಿ ನಿಸರ್ಗ ಶಕ್ತಿಗಳನ್ನು ದೇವತೆಗಳೆಂದು ಮಂತ್ರ ಮೂಲಕ ಸ್ತುತಿಸಿದರು. ತಮ್ಮ ವೈರಿಗಳನ್ನು ಸದೆ ಬಡಿಯುವಂತೆ ಈ ಶಕ್ತಿಗಳಿಗೆ ಬೇಡಿಕೊಳ್ಳುತ್ತಿದ್ದರು. ಮುಂದೆ ಪುರಾಣ ಕಾಲದಲ್ಲಿ ಶಿಲ್ಪ ಶಾಸ್ತ್ರವೂ ಸ್ವಲ್ಪ ವಿಕಾಸಗೊಂಡಾಗ, ಶಿವ, ವಿಷ್ಣು, ಶಕ್ತಿ,

ಗಣಪತಿ, ಸುಬ್ರಹ್ಮಣ್ಯ, ಸೌರ ಇತ್ಯಾದಿ ದೇವತೆಗಳಿಗೆ ವಿಭಿನ್ನ ಆಕೃತಿ ಕಲ್ಪಿಸಿ ಪುರಾಣಗಳಲ್ಲಿ ಬಣ್ಣಿಸಿದರಲ್ಲದೆ, ಶಿಲೆ, ಲೋಹ, ಕಟ್ಟಿಗೆಗಳಲ್ಲಿ ಅವುಗಳ ಆಕೃತಿಗಳನ್ನು ಕಟೆದು, ಇಲ್ಲವೆ ಎರಕ ಹೊಯ್ದು ಇಲ್ಲವೆ ಕೆತ್ತಿ ಮೂರ್ತಿಗಳನ್ನು ಮಾಡಿದರು. ಈ ಮೂರ್ತಿಗಳನ್ನಿಡಲು ಮಂದಿರ ನಿರ್ಮಾಣವಾಯಿತು. ಅತ್ಯಂತ ಸೋಜಿಗದ ಸಂಗತಿಯೆಂದರೆ, ರಾಜರು, ಪುರೋಹಿತರು ಒಂದುಗೂಡಿ, ಮೂರ್ತಿ ಪ್ರತಿಷ್ಠಾಪನೆಯ ಕಾಲಕ್ಕೆ ಅವುಗಳ ಬುಡದಲ್ಲಿ ಜನತೆಯಿಂದ ಸಂಗ್ರಹಿಸಿದ ದ್ರವ್ಯಾಭರಣಗಳನ್ನು ಹುಗಿಯತೊಡಗಿದರು. ಯುದ್ಧ ಕಾಲದಲ್ಲಿ ಈ ನಿಧಿಯನ್ನು ಎಬ್ಬಿಸಿ, ಬಳಕೆ ಮಾಡುವ ಹೊಂಚು ಅವರಿಗಿತ್ತೆಂದು ತಿಳಿದಿದೆ. ಪೂಜಾರಿ ಪುರೋಹಿತರು ದೇವರಿಗೆ ತಮ್ಮ ಮೂಲಕ ಮಾತ್ರ ಮುಡಿಪು ಕಟ್ಟಬೇಕು, ಹರಕೆ ಹೊರಬೇಕು, ದೇವ ಮೂರ್ತಿಯನ್ನು ಸ್ಪರ್ಶಿಸುವುದಿರಲಿ, ಗರ್ಭ ಗುಡಿಯ ಪ್ರವೇಶವೂ ಸಹ ಜನರಿಗೆ ನಿರಾಕರಿಸಲ್ಪಟ್ಟಿತು. ದೇವರನ್ನು ಅಲಂಕರಿಸಲು, ನೈವೇದ್ಯಕ್ಕಾಗಿ ಮೃಷ್ಟಾನ್ನ ತಯ್ಯಾರಿಸಲು, ಷೋಡಶೋಪಚಾರ ಪೂಜಾರ್ಚನೆ ಮಾಡಲು, ಜನರಿಂದ ಸಾಕಷ್ಟು ಹಣ ಸೆಳೆಯತೊಡಗಿದರು. ವಿಚಾರಿಸಿ ನೋಡಿದರೆ,

ಕಲ್ಲು ಬೊಂಬೆಗೇಕೆ ಕೆಲ ಬಣ್ಣದ ವಸ್ತ್ರ ?
ಗುಡಿ ಗೋಪುರವೆಲ್ಲ, ಕಂಭ ಮತ್ತೆ ?
ಒಟ್ಟೆ ಅನ್ನ ತಾನು ಬಯಸುತಿಹನೆ ದೇವ ?
ವಿಶ್ವದಾಭಿರಾಮ ಕೇಳು ವೇಮ.

ಮೂರ್ತಿಗಳಿಗೆ ಬಹು ಮೂಲ್ಯದ ವಸ್ತು ಒಡವೆಗಳನ್ನು ಹಾಕಿ ಸಿಂಗರಿಸುತ್ತಾರೆ. ಕೆಲವೊಂದು ಗುಡಿಗಳ ಮೂರ್ತಿಗಂತೂ ಕೋಟಿಗಟ್ಟಳೆ ರೂಪಾಯಿ ವೆಚ್ಚ ಮಾಡಿ, ರಂಗ ರಂಗಿನ ಪೂಜೆ ಉತ್ಸವಗಳನ್ನು ಮಾಡುತ್ತಾರೆ. ಬಲಗೈ ನೀಡಿದ ದಾನವು ಎಡಗೈ ಸಹ ಅರಿಯಬಾರದು, ಎಂಬ ಮಹಾ ನೀತಿ ವಾಕ್ಯವನ್ನು ಕುಲಗೆಡಿಸಿ, ಬಹಳಷ್ಟು ಜನ ಶೋಷಕರು, ಕಳ್ಳ ವ್ಯಾಪಾರಿಗಳು, ವಂಚಕರು ತಮ್ಮ ಕಪ್ಪು ಹಣವನ್ನು ಹುಂಡಿಗೆ ಹಾಕಿ, ಪಾಪವನ್ನು ಅಳಿಸಲೆತ್ನಿಸುತ್ತಾರೆ. ಆದರೆ ನಿಜವೆಂದರೆ ಪಾಪ ಕಾರ್ಯವನ್ನು ಯಾರೂ ತೊಡೆಯಲಾರರು. ಬಹಳವಾದರೆ ಕೆಲವು ತಾಂತ್ರಿಕ ಕರ್ಮಗಳಿಂದ ಪಾಪ ಕರ್ಮ ಫಲದ ತೀವ್ರತೆಯನ್ನು, ಫಲಭೋಗದ ಅವಧಿಯ ವಿಸ್ತಾರದಿಂದ, ಕಡಿಮೆ ಮಾಡಬಹುದಷ್ಟೇ. ಒಬ್ಬ ಭಕ್ತ ಕವಿ ಹೀಗೆ ಹಾಡಿದ್ದಾನೆ :

ನಾನಾ ರತ್ನವ ನೀಡುತ ಜಗವನು
ಅಂದಾಗಿಸುವಳು ಆ ನಮ್ಮಮ್ಮನು
ಅವಳಿಗೆ ಉಡುಪನು ಉಡಿಸುವ ಈ ಛಲ
ಬಿಡು, ಬಿಡು ಈ ಭ್ರಮೆ ಇರಬಹುದೆ ಫಲ ?

ಆದರೆ ಇಲ್ಲಿ ನೆನಪಿನಲ್ಲಿಡಬೇಕಾದ ಮಾತೊಂದಿದೆ. ನಮ್ಮ ಅಜ್ಞತೆಗಾಗಿ ಕಾರಣರೆಂದು ಬೇರೆಯಾರನ್ನೋ ಗುರುತಿಸುವ ಸ್ವಭಾವ ಸಾಕು. ಎಷ್ಟೋ ಸಾವಿರ ವರುಷದ ಅಂಧಕಾರವಿರಲೊಲ್ಲದೇಕೆ? ಅರಿವಿನ ಜ್ಯೋತಿಯನ್ನು ಈಗಲಾದರೂ ಹೊತ್ತಿಸಿದರಾಯಿತು. ಅಜ್ಞಾನಾಂಧಕಾರವು ತೊಲಗುತ್ತದೆ. ಆದುದರಿಂದ ಮಹಾಯೋಗಿ ವೇಮನರು ಹೀಗೆ ಸೂಚಿಸುತ್ತಾರೆ.





ಗುಡಿಯ ದೇವರೆಂದು ಗುರುತು ನಿಲಿಸಿದವರು,
ಕೀಳು ಹಾರುವೆಂದು ಗೊಣಗಲೇಕೆ ?
ಮೂಢ ಜನಕೆ ಮೊದಲು ಮಾರ್ಗ ತೋರಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಮಡಿ-ಮೈಲಿಗೆ ಎಂದು ಅತ್ತಿತ್ತ ಹಾರುವ ಪೂಜಾರಿ-ಪುರೋಹಿತರೇ ಗುಡಿಯಲ್ಲಿ ಶಿಲಾಮೂರ್ತಿಯನ್ನು ನಿಲ್ಲಿಸಲು ಕಾರಣರೆಂದೂ, ಶೋಷಕ ವೃತ್ತಿಗಿಳಿದ ಅವರನ್ನು ನಿಂದಿಸುತ್ತ ಗೊಣಗುವುದೇಕೆ ? ಯಾವ ಜನರು ತಮ್ಮ ಹೃದಯದಲ್ಲಿರುವ ಶಿವನನ್ನು ಅರಿತುಕೊಳ್ಳಲು ಧ್ಯಾನಾದಿಗಳಲ್ಲಿ ನಿರತರಾಗುವುದಿಲ್ಲವೋ, ಪರಿಣಾಮವಾಗಿ ಮೂಢರಾಗಿರುವರೋ, ಅಂಥ ಜನರಿಗೆ ಮಾರ್ಗದರ್ಶನ ಮಾಡಬೇಕು. ಸರಿಯಾದ ಹಾದಿ ತೋರಬೇಕು.

ಶಿಲೆಯ ದೇವತೆಗಳ ಸ್ಥಿರವಾಗಿ ರೂಪಿಸಿ,
ಮಣ್ಣು ಪಾಲಾದರು ಮನುಜರೆಲ್ಲ.
ಮಣ್ಣಿನಲ್ಲಿ ಕಲ್ಲು ; ಮನದೊಳಗೆ ತಿಳಿಯರು.
ವಿಶ್ವದಾಭಿರಾಮ ಕೇಳು ವೇಮ.

ಪುರೋಹಿತರ ಮತ್ತು ರಾಜರ ಶೋಷಕ ನೀತಿಗೆ ಬಲಿಯಾದ ಜನರು ಶಿಲೆಯ ದೇವತೆಗಳನ್ನು ಸ್ಥಿರವಾಗಿ ರೂಪಿಸಿ ನಿಲ್ಲಿಸಲು ನೆರವಾದರು. ಕೊನೆಗೆ ಜೀವನದಲ್ಲಿ ಪರಮಾರ್ಥ ಸಾಧಿಸದೆ, ಮರಣಿಸಿ ಮಣ್ಣು ಪಾಲಾದರು. ಮಣ್ಣಿನಲ್ಲಿಯೇ ಕಲ್ಲೂ ಬರುತ್ತದೆ. ಎರಡೂ ಪೃಥಿವೀ ತತ್ತ್ವದ ಅಂಶಗಳಷ್ಟೇ. ಹೀಗೆ, ಸತ್ತು ಮಣ್ಣು ಪಾಲಾದಂತೆ, ಶಿಲೆಯನ್ನು ಪೂಜಿಸಿ ಶಿಲೆಯ ಪಾಲಾದರು. ಮನಸ್ಸು ಸ್ಥೂಲವಾಯಿತು. ಸೂಕ್ಷ್ಮದತ್ತ, ಕಾರಣದತ್ತ, ಕಾರಣಾತೀತದತ್ತ ಹರಿಯಲೇ ಇಲ್ಲ. ಇದನ್ನೆಲ್ಲ ಅವರು ಮನದಲ್ಲಿ ತಿಳಿಯರಲ್ಲ !

ಇದಕ್ಕೆ ಪೋಷಕವಾಗಿ ಪುರಾಣ ಕತೆಗಳೂ ಸೃಷ್ಟಿಯಾದವು. 'ಪುರಾಣ ಪುಂಡರ ಗೋಷ್ಠಿ' ಎಂದು ಶರಣ ಅಲ್ಲಮ ಪ್ರಭು ಹೇಳಿದ್ದಾರೆ. ಈ ಪುರಾಣ ಕತೆಗಳಲ್ಲಿ ಹೃದಯಸ್ಥ ಮಂಗಳಮಯೀ ಶಕ್ತಿಯಾದ ಶಿವನನ್ನೇ ಗುಂಡು ಗಲ್ಲಾಗಿಸಿದ್ದಾರೆ.

ಗಿರಿಯು ಹಿರಿಯ ಮಾವ ; ಗಿರಿಗುವರಿ ವರಸತಿ ;
ಗಿರಿಯೆ ವೀರಬಿಲ್ಲು ; ಗಿರಿಯೆ ದೇಹ.
ಗಿರಿಯಂಥ ದೊರೆಯು ಗುಂಡುಗಲ್ಲಾದನೆ ?
ವಿಶ್ವದಾಭಿರಾಮ ಕೇಳು ವೇಮ.

ಅಚಲವೂ, ಸ್ಥಾಣುವೂ ಆದ ಗಿರಿಯೇ ಶಿವನ ರೂಪ. ಅರುಣಾಚಲ ಶಿವ. ಶಿವನ ಹೆಂಡತಿ ಪಾರ್ವತಿಯು ಪರ್ವತರಾಜನ ಮಗಳು. ಹೀಗಾಗಿ, ಗಿರಿಯೆ ದೇಹವಾದ ಶಿವನಿಗೆ ಗಿರಿಯೇ ಮಾವನಾದ. ಗಿರಿಗುವರಿ ಪಾವತಿಯೇ ಪತ್ನಿಯಾದಳು. ಮೇರು ಪರ್ವತವೇ ಶಿವನ ವೀರ ಬಿಲ್ಲು, ಆದ್ದರಿಂದ ಗಿರಿಯೇ ವೀರ ಬಿಲ್ಲಾಯಿತು. ಕೊನೆಗೆ ಪುರಾಣ ಕಲ್ಪನೆಯ ಪ್ರಕಾರ, ದೊರೆಯಾದ ಶಿವನು ಗುಂಡುಗಲ್ಲಾಗಿ ಪೂಜ್ಯ ವಸ್ತುವಾಗಿ ಬಿಟ್ಟನು.

ಒಣ ಪೂಜೆಗಿಂತ ನಿದಾನ ಬುದ್ಧಿ ಮುಖ್ಯ.
ಶುಷ್ಕ ಮಾತಿಗಿಂತ ಶುದ್ಧ ಮನಸು.
ಮಿಗಿಲು ಕುಲಕ್ಕಿಂತ ಮುಖ್ಯ ಗುಣವು ಕಣಾ.
ವಿಶ್ವದಾಭಿರಾಮ ಕೇಳು ವೇಮ.

ಬರಿ ಅಂಧ ಶ್ರದ್ಧೆಯಿಂದ ಒಣ ಪೂಜೆ ಮಾಡುವುದಕ್ಕಿಂತ, ಮೂಲ ಕಾರಣ ಶೋಧಿಸಿ ಮುಂದುವರಿಯುವ ಬುದ್ಧಿ ಮುಖ್ಯವಾಗಿದೆ. ದೇವರ ಬಗೆಗೆ, ದೇವತೆಗಳ ಮಹಿಮೆ ಬಗೆಗೆ ಶುಷ್ಕ ಮಾತಿಗಿಂತ ಮನಸ್ಸು ವಿಷಯ ದೂರವಾಗಿ ಶುದ್ಧಗೊಳ್ಳುವುದು ಮುಖ್ಯ. ಇನ್ನು ದೇವ ಪೂಜೆಯನ್ನು ಮಾಡಲು ಅಧಿಕಾರಿಯಾಗಲು ಪೂಜಕನ ಕುಲವು ಮುಖ್ಯವಲ್ಲ. ದೇವರ ಸೇವೆಗೆ ಪೂಜಕನ ಗುಣವೇ ಮುಖ್ಯವಾಗಿದೆ. ಅವನು ತಾಮಸಿಕನಾಗಿರಕೂಡದು. ರಾಜಸಿಕನೂ ಆಗಿರಕೂಡದು. ಸಾತ್ವಿಕ ಗುಣ ಹೊಂದಿದವನಿರಬೇಕು. ಜ್ಞಾನ ಸಂಗಿಯಾಗಿರಬೇಕು. ನಿದಾನ ಬುದ್ಧಿಯವನಿರಬೇಕು.

ಪೂಜೆ ಮಾಡಿ ಮಾಡಿ ಪೂಜಾರಿಯಾಗುವ.
ಪೂಜ್ಯ ವಸ್ತುವೆಂದು ಭೂಮಿಯಲ್ಲಿ
ಎಲ್ಲಿ ಪೂಜಿಸುವುದು ? ಎಲ್ಲ ದಿಶೆಯೊಳಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಪೂಜಕನು ಪೂಜೆ ಮಾಡಿ ಮಾಡಿ, ಪೂಜಾ ಕಾರಿನ್ ಎಂದರೆ ಪೂಜೆ ಮಾಡುವವನಾದ, ಪೂಜಾರಿಯಾದ. 'ಸರ್ವಂ ಶಿವಮಯಂ ಜಗತ್' ಈ ಜಗವೆಲ್ಲ ಶಿವನಿಂದ ತುಂಬಿದೆ. ಅಂದ ಮೇಲೆ ಪೂಜ್ಯ ವಸ್ತುವೆಂದು ಭೂಮಿಯಲ್ಲಿ ಎಲ್ಲಿ ಪೂಜಿಸುವುದು ? ಎಲ್ಲೆಲ್ಲೂ ತುಂಬಿದ ಶಿವನನ್ನು ಎಲ್ಲ ದಿಶೆಗಳಲ್ಲಿ ಪೂಜಿಸಬೇಕಲ್ಲವೇ ?

ದೇವ ಗುಡಿಗಳಲ್ಲಿ, ತೀರ್ಥ ಕ್ಷೇತ್ರಗಳಲಿ,
ಮೂಲವರಿಯದಿರಲು ಮುಕ್ತಿಯಿಲ್ಲ
ಆತ್ಮ ಮೂಲವರಿಯದೆ ಅವನೆಂತು ತಿಳಿವನು ?
ವಿಶ್ವದಾಭಿರಾಮ ಕೇಳು ವೇಮ.

ದೇವರಿರುವನೆಂದು ಪೂಜೆಸಲ್ಲಿಸುವ, ದೇವಗುಡಿಗಳಲ್ಲಾಗಲಿ, ತೀರ್ಥಕ್ಷೇತ್ರಗಳಲ್ಲಾಗಲಿ, ದೇವರು ಯಾರು ? ನಾವು ಪೂಜಿಸ ಬಯಸುವ, ದೇವತಾ ಮೂರ್ತಿಗೆ, ತೀರ್ಥೋದ್ಭವಕ್ಕೆ, ಕ್ಷೇತ್ರ ಮಹಿಮೆಗೆ ಹಾಗೂ ಅವುಗಳ ಹಿಂದಿರುವ ಮೂಲ ಶಕ್ತಿಗೂ ಸಂಬಂಧವೇನು ? ಹೀಗೆ ವಿವೇಚಿಸುತ್ತ ಮೂಲವನ್ನು ಅರಿಯದಿದ್ದರೆ ಐಹಿಕ ಬಂಧನದಿಂದ ಮುಕ್ತಿಯಾಗದು. ಯಾವುದು ಆತ್ಮ ? ಯಾವುದು ಅನಾತ್ಮ ? ಎಂದು ವಿವೇಕದಿಂದ ವಿಶ್ಲೇಷಿಸಿ ಆತ್ಮ ಮೂಲವನ್ನು ಅರಿಯದಿದ್ದರೆ, ಪೂಜಕನು ಪೂಜ್ಯ ತತ್ತ್ವವನ್ನು ಹೇಗೆ ತಿಳಿಯಬಲ್ಲನು ?

ಜೀವ ಲಿಂಗ ಪೂಜೆ ಜನರು ಮಾಡುತಿರಲು,
ಶಿಲೆಯ ರೂಪ ಕುರಿತು ಚಿಂತೆಯೇಕೆ ?
ಸಿಹಿ ಮಧು ಸೇವಿಸಲು, ಕಹಿಯು ರುಚಿಸುವುದೇ ?
ವಿಶ್ವದಾಭಿರಾಮ ಕೇಳು ವೇಮ.





'ಲೀಯತೇ ಯಸ್ಮಿನ್ ಗಮ್ಯ ತೇ ಯಸ್ಮಾತ್‌ತಲ್ಲಿಂಗಂ' ಅಂದರೆ ಯಾವುದರಲ್ಲಿ ಎಲ್ಲವೂ ಕೊನೆಗೆ ಲೀನವಾಗುವುದೋ ಮತ್ತು ಯಾವುದರಿಂದ ಎಲ್ಲವೂ ಆದಿಯಲ್ಲಿ ಬರುವುದೋ ಅದುವೇ ಲಿಂಗ. ಆತ್ಮಲಿಂಗವೇ ನಿಜವಾದ ಲಿಂಗ. ಏಕೆಂದರೆ ಎಲ್ಲವೂ ಆತ್ಮದಿಂದ ಬರುತ್ತದೆ. ಅಂತ್ಯದಲ್ಲಿ ಆತ್ಮದಲ್ಲಿ ಲಯಿಸುತ್ತದೆ. ಜೀವಾತ್ಮನ ಅಂದರೆ ಜೀವಲಿಂಗದ ಪೂಜೆಯನ್ನು ಜನರು ಮಾಡುತ್ತಿರುವಾಗ ಶಿಲೆಯ ರೂಪ ಅಂದರೆ ಶಿಲೆಯ ಲಿಂಗ ಇಲ್ಲವೆ ಹರಳು ಲಿಂಗದ ರೂಪ ಕುರಿತು ಚಿಂತೆಯೇಕೆ ? ಮನಸ್ಸು ಸೂಕ್ಷ್ಮ ತತ್ತ್ವ. ಅದನ್ನು ಸ್ಥೂಲವಾದ ಶಿಲೆಯ ಮೇಲೆ ಕೇಂದ್ರೀಕರಿಸಿ, ಸ್ಥೂಲೀಕರಿಸುವುದೇಕೆ? ಆತ್ಮ ಲಿಂಗವನ್ನು ಧ್ಯಾನಿಸಿ, ಆನಂದದ ಸಿಹಿ ಮಧುವನ್ನು ಸೇವಿಸುವ ದಾರಿ ಎದುರಿಗಿರುವಾಗ, ಸ್ಥೂಲ ಶಿಲೆಯ ಮೇಲೆ ಮನವನ್ನು ಕೇಂದ್ರೀಕರಿಸಿ, ಅದನ್ನು ಜಡವಾಗಿಸಿ ಆ ಕಹಿ ಫಲವನ್ನು ರುಚಿಸುವುದೇಕೆ ?

ಕಲ್ಲು ಬಸವನಿಗತಿ ರಂಗು ಪೂಜಾರ್ಚನೆ !
ರೂಢಿ ಬಸವ ಕಂಡು ಉಗುಳುತಿಹರು,
ಬಸವ ಭಕುತರೆಷ್ಟು ಪಾಪಿಯರಿತು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಈಶ್ವರನನ್ನು ಶಿಲೆ ಲಿಂಗವೆಂದು ಗುಡಿಯಲ್ಲಿ ಸ್ಥಾಪಿಸಿ, ಅವನೆದುರು ಶಿವಗಣದ ಪ್ರಮುಖನಾದ ನಂದಿಯನ್ನು ಶಿಲೆಯ ಪ್ರತಿಮೆಯಾಗಿ ರೂಪಿಸಿ, ಪೂಜಿಸುತ್ತಾರೆ. ಈ ಕಲ್ಲು ನಂದಿ ಇಲ್ಲವೆ ವೃಷಭ ಅಂದರೆ ಬಸವನಿಗೆ ರಂಗು ರಂಗಿನ ವಸ್ತ್ರಾಭರಣ ಹಾಕಿ ವೈಭವದ ಪೂಜಾರ್ಚನ ಮಾಡುತ್ತಾರೆ. ಅದೇ ತಮ್ಮ ಬೇಸಾಯಕ್ಕೆ ಉಪಯೋಗವಾಗುವ ರೂಢಿಯ ವೃಷಭ ಇಲ್ಲವೆ ಬಸವನನ್ನು ಕಂಡು, ಕೆಲ ಸಲ ಛೀ ಥೂ ಎಂದು ಪೂತ್ಕರಿಸುತ್ತಾರೆ. ತಿಳಿದು ನೋಡಿದರೆ, ಬಸವ ಭಕ್ತರು ಎಂಥ ಪಾಪಿಗಳು ನೋಡು.

ಆದರೂ ಭಕ್ತಿ ಮಾರ್ಗದಲ್ಲಿ ಬಹು ಜನರು ಪ್ರತಿಮಾ ಪೂಜೆಯನ್ನು ಅಳವಡಿಸಿದ್ದಾರೆ. ಇದು ವೇದ ವಾಙ್ಮಯದಲ್ಲಿ ಇಲ್ಲ. 'ನ ತಸ್ಯ ಪ್ರತಿಮಾ ಅಸ್ತಿ' ಎಂದು ಸ್ಪಷ್ಟವಾಗಿ ಘೋಷಿಸಲಾಗಿದೆ.

ಮನಸಾ ಕಲ್ಪಿತಾ ಮೂರ್ತಿಃ ನೃಣಾ ಚೇನ್ಮೋಕ್ಷ ಸಾಧನೀ
ಸ್ವಪ್ನ ಲಬ್ಧೇನ ರಾಜ್ಯೇನ ರಾಜಾ ನ ಮಾನವಸ್ತಥಾ

ಅಂದರೆ ಮಾನವ ಮನಸ್ಸಿನಿಂದ ಮೂರ್ತಿಯನ್ನು ಕಲ್ಪಿಸಿಕೊಂಡರೆ, ಅದೆಂತು ಮೋಕ್ಷ ಸಾಧನವಾಗಬಲ್ಲದು ? ಸ್ವಪ್ನದಲ್ಲಿ ರಾಜ್ಯ ಪಡೆದುಕೊಂಡವನು ರಾಜನಾಗಬಲ್ಲನೇ ? ಅವನು ಸಾಮಾನ್ಯ ಮಾನವನಷ್ಟೇ. ಮುಂದೆ ಪೌರಾಣಿಕ ಯುಗದಲ್ಲಿ ಮೂರ್ತಿಯ ಕಲ್ಪನೆಯಾಗಿದೆ. ಹಾಗಾಗಿ ವೇದ ವೇದಾಂಗಗಳನ್ನಷ್ಟೇ ಒಪ್ಪಿದ. 'ಆರ್ಯಸಮಾಜ'ದ ಪ್ರವರ್ತಕರಾದ ವಿದ್ವಾಂಸ ದಯಾನಂದ ಸರಸ್ವತಿಯವರು, ಮೂರ್ತಿ ಪೂಜೆಯನ್ನು ತಿರಸ್ಕರಿಸಿದ್ದಾರೆ. ಏಕೆಂದರೆ, ಅವರು ಪುರಾಣಗಳನ್ನು ಪ್ರಮಾಣವೆಂದು ಗ್ರಹಿಸಲಿಲ್ಲ. ಅಷ್ಟೇ ಏಕೆ ? ಹದಿನೆಂಟು ಪುರಾಣಗಳನ್ನು ಬರೆದ ಭಗವಾನ್ ವೇದ ವ್ಯಾಸರೂ ಸಹ ಅಮೂರ್ತವನ್ನು ಮೂರ್ತ ರೂಪಗೊಳಿಸಿದ ಬಗೆಗೆ ಕ್ಷಮೆ ಕೋರಿದ್ದಾರೆ.

"ರೂಪ ವರ್ಜಿತನಾದ ನಿನಗೆ, ನೀನು ಧ್ಯಾನ ಮಂತ್ರದಿಂದ ಮಾತ್ರ ಪಡೆಯಬೇಕಾದವನಿದ್ದರೂ, ನಾನು ರೂಪವನ್ನು ಆರೋಪಿಸಿದೆ".

"ನೀನು ಸರ್ವವ್ಯಾಪ್ತನಾಗಿದ್ದರೂ, ನಾನು ನಿನ್ನನ್ನು ಹಲ ಕೆಲವು ತೀರ್ಥ ಕ್ಷೇತ್ರಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದೆ.

"ಎಲೈ ಜಗದೀಶ ! ನನ್ನ ಈ ಮೂರು ಅಪರಾಧಗಳಿಗಾಗಿ ಕ್ಷಮಿಸು" ಆಧ್ಯಾತ್ಮಿಕ ಸಾಧನ ಮಾರ್ಗಗಳಲ್ಲಿ ಪ್ರತಿಮಾ ಪೂಜೆಯನ್ನು ಅಧಮಾಧಮ ಎಂದು ತಂತ್ರದಲ್ಲಿ ಹೇಳಲಾಗಿದೆ.

ಉತ್ತಮೋ ಬ್ರಹ್ಮ ಸದ್ಭಾವೋ, ಮಧ್ಯಮಾ ಧ್ಯಾನ ಧಾರಣಾ
ಜಪ ಸ್ತುತಿಯಧಮಾ ! ಮೂರ್ತಿ ಪೂಜಾಧಮಾಧಮಾ.

ಅಂದರೆ ಬ್ರಹ್ಮ ಸದ್ಭಾವದಲ್ಲಿ ಅಂದರೆ ಆತ್ಮಾರಾಮನಾಗಿ ಇರುವುದು ಉತ್ತಮ ಸಾಧನವು. ಅದಾಗದಿದ್ದರೆ, ಧ್ಯಾನವನ್ನೂ, ಧಾರಣವನ್ನೂ ಆಚರಿಸುತ್ತ ಕೊನೆ ತಲುಪುವ ಹಂತದಲ್ಲಿ ಇದ್ದರೂ ಅದು ಮಧ್ಯಮ ಸಾಧನವಾಗುತ್ತದೆ. ಅಲ್ಲಿಯ ವರೆಗೆ ಮಾನಸ ಸ್ತರವೂ ಏರದಿದ್ದರೆ, ಜಪವನ್ನು ಮಾಡುತ್ತ ಮನವನ್ನು ಬೇರೆ ವಿಷಯಗಳತ್ತ ಹೋಗದಂತಿರಿಸುವುದು ಮತ್ತು ಭಗವಂತನ ಮಹಿಮೆಯನ್ನು ಸ್ತುತಿಸುವಲ್ಲಿ ಮನವನ್ನು ತೊಡಗಿಸುವುದು ಸಹ್ಯವಾದರೂ ಅದು ಅಧಮ ಸಾಧನ. ಏಕೆಂದರೆ ಭಗವಂತನು ಸರ್ವಜ್ಞನು ನಿಯಾಮಕನು. ಅವನಿಗೆ ನಮ್ಮ ಬೇಡಿಕೆಗಳನ್ನು ನೆನಪಿಸುವ ಅಗತ್ಯವಿಲ್ಲ. ಇನ್ನು ತಸ್ಯ ಪ್ರತಿಮಾ ನಾಸ್ತಿ ಎಂದು ಹೇಳಿದ್ದರೂ, ಮೂರ್ತಿ ಪೂಜೆಗಿಳಿಯುವುದು ಅಧಮಾಧಮವಾಗಿದೆ. ಆದಷ್ಟು ಅದರಿಂದ ದೂರ ಉಳಿಯಬೇಕು.

ಆಧ್ಯಾತ್ಮಿಕ ಪ್ರಗತಿಯ ಹಂತದ ಮೇಲಿಂದ ಯುಗಗಳ ಕಲ್ಪನೆ ಮಾಡುವವರು. ಹೀಗೆ ಹೇಳುತ್ತಾರೆ. ಸಾಕಷ್ಟು ಜನರು ಬ್ರಹ್ಮ ಸದ್ಭಾವದಲ್ಲಿ ಇರುವ ಕಾಲಘಟ್ಟವೇ ಕೃತಯುಗ. ಬಹಳ ಜನರು ಧ್ಯಾನ ಧಾರಣ ಆಚರಿಸುವ ಮಟ್ಟ ತಲುಪಿರುವ ಕಾಲಮಾನವು ತ್ರೇತಾ ಯುಗ. ಕೇವಲ ಜಪಸ್ತುತಿಯ ಹಂತವನ್ನು ಮಾತ್ರ ಅರ್ಧಕ್ಕರ್ಧ ಜನ ತಲುಪಿರುವುದು ದ್ವಾಪಾರ ಯುಗ. ಇನ್ನು ಕೊನೆಯದಾಗಿ ಕೇವಲ ಕಾಲು ಭಾಗ ಮಾತ್ರ ಮೇಲಿನ ಮೂರು ಹಂತ ತಲುಪಿ, ಮುಕ್ಕಾಲು ಭಾಗ ಜನರು ಮೂರ್ತಿ ಪೂಜೆಯಂಥ ಅಧಮಾಧಮ ಹಂತದಲ್ಲಿ ಕೊಳೆಯುತ್ತಿರುವುದೇ ಕಲಿಯುಗ. ಇದನ್ನು ಪಾಪದ ಯುಗವೆಂದೂ ಕರೆಯುತ್ತಾರೆ.

ಬೆಟ್ಟ ಕಲ್ಲಿನಿಂದ ಬಯಕೆ ಕೋರಲೇಕೆ ?
ಕಟ್ಟಿದ ಗುಡಿಗಳಲಿ ಕರುಬಲೇಕೆ ?
ಬಿಡಲಾರದ ಶಿವನು ಪ್ರಾಣಿಗಳಲ್ಲಿಹನು.
ವಿಶ್ವದಾಭಿರಾಮ ಕೇಳು ವೇಮ.

ಬೆಟ್ಟದ ಕಲ್ಲು ತಂದು ಕಟೆದು ಆಕಾರ ಕೊಟ್ಟ ಮೂರ್ತಿಯಿಂದ ನಮ್ಮ ಮನಸ್ಸಿನ ಬಯಕೆ ತೀರಿಸಿಕೊಳ್ಳಲು ಕೋರಲೇಕೆ ? ಆ ಶಿಲಾಮೂರ್ತಿಗೆ ಗುಡಿಗಳನ್ನು ಕಟ್ಟಿ ಕಷ್ಟ ಪಡಲೇಕೆ ? ನಮ್ಮಿಂದ ಬೇರೆಯಾಗದ, ನಮ್ಮೊಳ ಹೊರಗೆ ತುಂಬಿಕೊಂಡಿರುವ ಮಂಗಳಕರ ಕಲ್ಯಾಣದಾಯಿ ಶಿವನು ಸಕಲ ಪ್ರಾಣಿಗಳ ಹೃದಯದಲ್ಲಿಯೇ ಇರುವನಲ್ಲವೇ ? ಅವನನ್ನು ಅರಿತರೆ ಸಾಕು ತಾನೇ ?

ಬಿಳಿಯ ಶಿಲೆಯ ತಂದು, ಬೇಸಿ ಗುಡಿಯ ಕಟ್ಟಿ,
ಕಾಂತ ಶಿಲೆಯ ಪೂಜೆ, ಗೆಯ್ಯುತಿಹರು.





ಶಿಲೆಯ ಪೂಜೆಯಿಂದ ಸಿಗುವುದೇನು ಮತ್ತೆ ?
ವಿಶ್ವದಾಭಿರಾಮ ಕೇಳು ವೇಮ.

ಒಳ್ಳೇ ಬಿಳಿಯ ಕಲ್ಲು ಸಿಗುವ ಜಾಗದಲ್ಲಿ ಬಿಳಿಯ ಕಲ್ಲಿನಿಂದ ಚೆನ್ನಾಗಿ ಅಂದವಾಗಿ ಗುಡಿಯನ್ನು ಕಟ್ಟುತ್ತಾರೆ. ಕಬ್ಬಿಣದ ಅಂಶವಿರುವ, ಪ್ರಕಾಶಿಸುವ ಕಲ್ಲಿನಿಂದ ಮೂರ್ತಿ ಕಟೆಯುತ್ತಾರೆ. ಅದರ ಪೂಜಾರ್ಚನೆಗಿಳಿಯುತ್ತಾರೆ. ತಮ್ಮ ಸೂಕ್ಷ್ಮ ಮನಸ್ಸನ್ನು ಜಡ ವಿಷಯ ವೃತ್ತಿಗಳಿಂದ ತುಂಬಿ ಜಡಗೊಳಿಸುತ್ತಾರಷ್ಟೇ. ಶಿಲೆಯ ಪೂಜೆಯಿಂದ ಹೆಚ್ಚೇನು ಸಿಕ್ಕಬಹುದು ?

ಈ ಕುರಿತು ಮಹಾಯೋಗಿ ವೇಮನರ ಸಮಕಾಲೀನರಾದ ಉತ್ತರ ಭಾರತದ ದೊಡ್ಡ ಸಂತರಾದ ಕಬೀರರು ಏನು ಹೇಳುತ್ತಾರೆ ? ನೋಡುವಾ :

"ಪವಿತ್ರ ತೀರ್ಥಗಳಲ್ಲಿ ಬರೀ ನೀರು ಇದೆ. ಅವು ನಿರುಪಯೋಗಿ ಎಂದು ನಾನು ಅರಿತಿರುವೆ. ಏಕೆಂದರೆ, ನಾನು ಅವುಗಳಲ್ಲಿ ಸ್ನಾನ ಮಾಡಿರುವೆ. ಎಲ್ಲ ಪ್ರತಿಮೆಗಳೂ ಜೀವಹೀನ. ಅವು ಮೂಕವಾಗಿವೆ. ನನಗಿದು ಗೊತ್ತಾಗಿದೆ. ಏಕೆಂದರೆ ನಾನು ಅವುಗಳೆದುರು ಕೂಗಿ ಕೋರಿದ್ದೇನೆ. ಪುರಾಣ ಮತ್ತು ಕುರಾನಗಳು ಬರೀ ಶಬ್ದಗಳು. ಮರೆಯ ಪರದೆಯನ್ನು ಸರಿಸಿ ನಾನು ನೋಡಿದ್ದೇನೆ"

"ರಾಜಾ ಪ್ರತ್ಯಕ್ಷ ದೇವತಾ" ಎಂದರೆ ರಾಜನೇ ಕಣ್ಣಿಗೆ ಕಾಣುವ ದೇವತೆ ಎಂದು ನಂಬಿ ರಾಜರ ಪ್ರತಿಮೆ ಮಾಡಿಸಿ ಪೂಜಿಸುವವರೂ ಇದ್ದಾರೆ. ಅವರನ್ನು ಕುರಿತು ವೇಮನರು ಹೀಗೆ ಹೇಳಿದ್ದಾರೆ.

ಶಿಲೆಯ ಪ್ರತಿಮೆ ತಂದು ಸಮವು ರಾಜಗೆಂದು,
ಪೂಜೆ ಗೆಯ್ವ ನರನು ಬುದ್ಧಿಗೇಡಿ.
ಭಾವದಲ್ಲಿ ನರರು ಭಾವಿಪುದ ಅರಿಯರು.
ವಿಶ್ವದಾಭಿರಾಮ ಕೇಳು ವೇಮ.

ರಾಜ ಭಕ್ತಿ ಹೆಚ್ಚಾಗಿದ್ದ ಕಾಲದಲ್ಲಿ ಆ ರಾಜರ ಮರಣಾ ನಂತರ ಅವರ ಪ್ರತಿಮೆಗಳನ್ನು ಮಾಡಿಸಿ ಆ ಪ್ರತಿಮೆಯೇ ರಾಜನಿಗೆ ಸಮ ಎಂದು ತಿಳಿದು ಪೂಜಿಸುತ್ತಾರೆ. ಹೀಗೆ ಮಾಡುವವರೆಲ್ಲ ಬುದ್ಧಿಗೇಡಿಗಳಷ್ಟೇ. ಜನರು ತಮಗಿರುವ ಗೌರವಾಭಿಮಾನಗಳನ್ನು ಶುದ್ಧ ಸತ್ವ, ಪ್ರೇಮ ಹಾಗೂ ಭಕ್ತಿಗಳ ಅಂದರೆ ಭಾವದಲ್ಲಿ ಭಾವಿಸುವುದನ್ನು ಜನರು ಅರಿಯರಲ್ಲ !

ಏನೇ ಇರಲಿ ; ಈ ಕಲಿ ಕಾಲದಲ್ಲಿ ಅಜ್ಞ ಜನರಿಗೆ ದೇವರ ನಿಜವಾದ ಸ್ವರೂಪವನ್ನು ಮತ್ತು ದೇವರನ್ನು ಸಾಕ್ಷಾತ್ಕರಿಸುವ ನೇರ ಹಾದಿಯನ್ನು ಅರುಹುವ ಶಾಸ್ತ್ರ, ಉಪನಿಷಾದಿಗಳನ್ನು ಜನರಿಂದ ದೂರವಿರಿಸಿ, ದೀರ್ಘ ಕಾಲ ಅವರನ್ನು ಅಂಧಕಾರದಲ್ಲಿರಿಸಿ, ಅಧಮಾಧಮ ಸಾಧನವನ್ನು ಅವರಿಗೆ ತಿಳಿಸಿ, ಅಲ್ಲಿಯೂ ಅವರನ್ನು ಬೇಕಾಬಿಟ್ಟಿಯಾಗಿ ಶೋಷಿಸಿರುವುದನ್ನು ಇತಿಹಾಸವು ತಿಳಿಸುತ್ತಿದೆ. ದಲಿತ ಮನವು ದೈನ್ಯತೆಯ ಚಾಳಿಗೆ ಬಲಿಯಾಗಿದ್ದು, ಅಜ್ಞಾನದ ಮೊತ್ತವನ್ನು ತೊಡೆದು ಸ್ವತಂತ್ರವಾಗಬೇಕಾಗಿದೆ. ಮನೋಶುದ್ಧಿ ಹೊಂದಿ, ಆತ್ಮ ತೇಜದಿಂದ, ಜನ ಮನವನ್ನು ಮುತ್ತಿದ ಅಂಧಕಾರವನ್ನು ಕಳೆಯಲು, ಮಹಾ ಯೋಗಿಗಳ ಕೋಲ್ಮಿಂಚಿನಂತಹ ಸೂಳ್ನುಡಿಗಳನ್ನು ಮನದಲ್ಲಿ ಗ್ರಹಿಸಬೇಕು.

# ೮. ತೀರ್ಥ ಯಾತ್ರೆ

ತೀರ+ಸ್ಥಾ+ದ = ತೀರ್ಥ:. ಇದು ತೀರ್ಥ ಶಬ್ದೋತ್ಪತ್ತಿಯಾಗಿದೆ. ತೀರ ಎಂದರೆ ದಡ. ಯಾವ ಅಭಿನ್ನ ರೇಖೆಯಿಂದ ಜಲಾಶಯದ ಜಲರಾಶಿಯು ಸ್ಥಲ (ನೆಲ) ಭಾಗವನ್ನು ತಲುಪುವುದೋ ಅದು ತೀರ್ಥ. ಜಲ ಹಾಗೂ ನೆಲಗಳ ಸಂಪರ್ಕ ರೇಖೆಯೇ ತೀರ (Beach) (ನೆಲ) ಈ ಇಳಿಜಾರಿನ ಪ್ರದೇಶದಲ್ಲಿ ಚಲಿಸುವ ಮಾನವನು, ಒಂದು ಹೆಜ್ಜೆ ಈಚೆಗಿಟ್ಟರೆ ನೆಲ ; ಆಚೆಗಿಟ್ಟರೆ ಜಲ. ಆ ಮಾನವನನ್ನು ತೀರಸ್ಥ ಎನ್ನುತ್ತಾರೆ.

ಜಲವನ್ನು ಲೌಕಿಕ ಕ್ಷೇತ್ರವೆಂದೂ ಮತ್ತು ನೆಲವನ್ನು ಆಧ್ಯಾತ್ಮಿಕ ಕ್ಷೇತ್ರವೆಂದೂ ಬಗೆದರೆ ಈ ತೀರವು ತೀರ್ಥದ ಮರ್ಯಾದೆಯನ್ನು ಸೂಚಿಸುತ್ತದೆ. ಅರ್ಥಾತ್ ಸಿದ್ಧ ಪುರುಷನೊಬ್ಬನು ಇತ್ತ ಹೊರಳಿದರೆ ಲೋಕ ಮುಖಿಯಾಗುತ್ತಾನೆ. ಅತ್ತ ಹೊರಳಿದರೆ ಅಧ್ಯಾತ್ಮಮುಖಿಯಾಗುತ್ತಾನೆ. ಈ ಆಧ್ಯಾತ್ಮಿಕ ಅಂತಸ್ತಿನಲ್ಲಿ ನಿಂತವನು ತೀರ್ಥನೆನಿಸುತ್ತಾನೆ. 'ತೀರಸ್ಥಂ ತೀರ್ಥಮಿತ್ಯಾಹು:' ಹೀಗೆ ಜಗತ್ತು ಮತ್ತು ಅಧ್ಯಾತ್ಮಿಕತೆಯ ಯೋಗ ಸೂತ್ರವನ್ನು ಅರಿತವರೇ ತೀರ್ಥ ಸ್ವರೂಪರು.

ಇದಂ ತೀರ್ಥಮಿದಂ ತೀರ್ಥಂ ಭ್ರಮಂತಿ ತಾಮಸಾಃ ಜನಾಃ
ಆತ್ಮ ತೀರ್ಥಂ ನ ಜಾನಾತಿ ಕಥಂ ಮೋಕ್ಷಂ ವರಾನನೇ ?

ಅಂದರೆ, ತಾಮಸಿಕ ಜನರು ಒಂದು ತಾಣದಿಂದ ಇನ್ನೊಂದು ತಾಣಕ್ಕೆ ಯಾತ್ರಾರ್ಥಿಗಳಾಗಿ ಅಂಡಲೆಯುತ್ತಾರೆ. ಆದರೆ ತಮ್ಮ ಹೃದಯದಲ್ಲಿಯೇ ಇರುವ ಆತ್ಮ ತೀರ್ಥವನ್ನು ಅರಿತುಕೊಳ್ಳದೆ, ಅವರೆಂತು ಮೋಕ್ಷವನ್ನು ಪಡೆಯಬಹುದು ?

ನಿಜವಾದ ತೀರ್ಥವೆಲ್ಲಿದೆ ? ಹೇಗಿದೆ ? ಮಾನವನ ಸಂಕಲ್ಪ-ವಿಕಲ್ಪಗಳು ಎಲ್ಲಿಂದ ಉದಿಸುವವೋ ಮತ್ತು ಯಾವ ಮಧುರ ರೇಖೆಯಲ್ಲಿ ಆಧ್ಯಾತ್ಮಿಕ ಆನಂದವನ್ನು ಸ್ಪರ್ಶಿಸುವವೋ ಅದುವೇ ನಿಜವಾದ ತೀರ್ಥವಾಗಿದೆ.

ದೇಶ ದೇಶಗಳನು ದಣಿವಿನಿಂದ ತಿರುಗೆ,
ಆತ್ಮದಲ್ಲಿ ಧ್ಯಾನ ಅಂಟಬಹುದೆ ?
ಕಾಸು ಬಯಸಿ ತಿರುಗೆ, ಕಾಣಲಾರ ಮೋಕ್ಷ.
ವಿಶ್ವದಾಭಿರಾಮ ಕೇಳು ವೇಮ.

ನದಿ ತೀರವ ಕುರಿತು, ನಡು ಕಾನನ ಕುರಿತು,
ಗುಡ್ಡ ಕಲ್ಲು ಕುರಿತು, ಗೊಡವೆ ಏಕೆ ?
ಮನಸಿನಲ್ಲಿ ಶಿವನು ಮಡಗಿಹುದನರಿಯನು !
ವಿಶ್ವದಾಭಿರಾಮ ಕೇಳು ವೇಮ.

ಶಿವನು ಮಾನವನ ಮನಸ್ಸಿನಲ್ಲಿಯೇ ಮಡಗಿದ್ದಾನೆ. ಮನದ ಕಣ್ಣು ತೆರೆದು ಅವನನ್ನು ಅರಿಯಬೇಕಷ್ಟೇ. ಅದನ್ನು ಬಿಟ್ಟು ನದಿ ತೀರದಲ್ಲಿ ಅಂದರೆ ತೀರ್ಥದಲ್ಲಿ, ನಡು ಕಾನನದಲ್ಲಿ ಅಂದರೆ





ಕ್ಷೇತ್ರದಲ್ಲಿ, ಗುಡ್ಡ ಕಲ್ಲುಗಳಲ್ಲಿ ಅಂದರೆ ಶಿಲಾ ಮೂರ್ತಿಗಳಲ್ಲಿ, ಅವನನ್ನು ಹುಡುಕುವ ವ್ಯರ್ಥ ಗೊಡವೆಯೇಕೆ ?

ಸಾಮಾನ್ಯ ಮಾನವರಲ್ಲಿ ತೀರ್ಥಗಳನ್ನು ಕುರಿತು ಅದಮ್ಯ ಆಕರ್ಷಣೆಯುಂಟು. ಸ್ತ್ರೀಯರಂತೂ, ತೀರ್ಥದ ಹೆಸರು ಕೇಳುತ್ತಲೇ ತಮ್ಮ ಒಡವೆ ವಸ್ತುಗಳನ್ನೆಲ್ಲ ಮಾರಲು, ಉದ್ಯುಕ್ತರಾಗುತ್ತಾರೆ. ಇನ್ನು ವಯಸ್ಕರು ತಮ್ಮ ಹೊಲಮನೆ ಮಾರಿಯಾದರೂ ತೀರ್ಥಯಾತ್ರೆಗೆ ಹೊರಡಲು ತಯ್ಯಾರಾಗುತ್ತಾರೆ. ಯಾರಲ್ಲಿ, ನಡೆಯುವ ಸಾಮರ್ಥ್ಯ ಹಿಂಗಿದೆಯೋ, ಅವರು ಮೇಣೆಯ ಮೇಲೆ ಕುಳಿತು ತೀರ್ಥ ಯಾತ್ರೆಗೆ ಹೊರಡುತ್ತಾರೆ.ಇನ್ನು ಕಣ್ಣು ಕಾಣದ ಗಾವಿಲರು ಪಂಡನ ಹೆಗಲ ಮೇಲೆ ಕುಳಿತು ಕೈ ಊರಿ ತೀರ್ಥ ಯಾತ್ರೆಗೆ ಸಿದ್ಧರಾಗುತ್ತಾರೆ. ಒಂದು ವೇಳೆ, ಪಂಡನು ಯಾವುದೋ ಮೂರ್ಖನ ದುಪ್ಪಟಿಯನ್ನು ತೋರಿ, ಇದೇ ನಾರಾಯಣ ಎಂದು ಹೇಳಿದರೆ, ಆ ಯಾತ್ರಿಯು ಅದೇ ದುಪ್ಪಟಿಯನ್ನು ನಾರಾಯಣ ಎಂದು ಭ್ರಮಿಸಿ, ಸಿರ ಮಣಿಸಿ ಮಣಿಸಿ ಪೂಜಿಸುತ್ತಾನೆ. ಎಂದಿನಿಂದ ಮಾನವನಲ್ಲಿ ಈಶ್ವರ ಭಾವನೆಯು ಒಂದು ಕ್ಷುದ್ರ ಭಗ್ನಾಂಶ ರೂಪದಲ್ಲಿ ಉದಯವಾಯಿತೋ, ಅಂದಿನಿಂದ ತೀರ್ಥ ಯಾತ್ರೆಯ ಅದಮ್ಯ ಬಯಕೆಯು ಮಾನವನ ಮನದಲ್ಲಿ ಮೂಡಿ ಬಂದಿದೆ.

ಕತ್ತಲೆ ಮುತ್ತಿದ ಮಾನಸಿಕತೆಯ ಮನುಷ್ಯನು, ತೀರ್ಥದಿಂದ ತೀರ್ಥಾಂತರಕ್ಕೆ ಓಡಾಡಿ, ದಣಿಯುತ್ತಾನೆ. ಮತ್ತು ತನ್ನ ಮೂಲ್ಯವಾದ ಸಮಯವನ್ನೂ, ಪರಿಶ್ರಮವನ್ನೂ ಮತ್ತು ಹಣವನ್ನೂ ಅಪವ್ಯಯ ಮಾಡಿಕೊಳ್ಳುತ್ತಾನೆ.

ಕಾಶಿ, ಮಧುರೆ, ಕಂಚಿ, ಗಯೆ ಪ್ರಯಾಗ ಸೇತು
ಅಲೆದಲೆದೂ, ತನ್ನ ಆತ್ಮ ಕಂಡು,
ವಾಸನೆಗಳಳಿಯದಿರೆ ವ್ಯರ್ಥ ವಿಧಗಳಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಯಾತ್ರೆ ಹೋಗಿರುವವ ಎಷ್ಟು ದಿನ ತಿರುಗಲು,
ಕೆಡುವನಷ್ಟೇ ಮುಕ್ತಿ ಕುದುರದವಗೆ.
ಮನಸು ನಿಲಿಸುವವನೆ ಮಹನೀಯ ಮೂರ್ತಿಯು
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಜೀವನದ ಅಧಿಕಾಂಶ ಕ್ಷೇತ್ರದಲ್ಲಿ ಪ್ರತಿಯೊಂದು ವಸ್ತುವನ್ನು ಅನಾಯಾಸವಾಗಿ ಪಡೆಯಬಯಸುತ್ತಾನೆ. ಆಧ್ಯಾತ್ಮಿಕ ಜಗತ್ತಿನಲ್ಲಿ ಉಪಯುಕ್ತ ಸಾಧನೆ ಮಾಡದೆ, ಜಡ ಜಗತ್ತಿನಲ್ಲಿ ತನ್ನ ಕರ್ತವ್ಯವನ್ನು ಯಥಾಯೋಗ್ಯತೆಯಿಂದ ನಿರ್ವಹಿಸದೆ, ಯಾವಾಗ ಪುಣ್ಯಾರ್ಜನೆ ಮಾಡಲು ಬಯಸುತ್ತಾನೋ, ಆಗ ಅವನು ತಥಾಕಥಿತ ತೀರ್ಥಗಳಿಗೆ ಯಾತ್ರೆ ಹೋಗುತ್ತಾನೆ. ಮತ್ತು ತಾನು ಮಾಡಿದ ಪಾಪದಿಂದ ಮುಕ್ತನಾಗಲು ಪ್ರಯತ್ನಿಸುತ್ತಾನೆ. ಕಳ್ಳ ಪೇಟೆಯಿಂದ ಗಳಿಸಿದ ಕಪ್ಪು ಹಣವನ್ನು ಹುಂಡಿಯಲ್ಲಿ ಹಾಕಿ, ತನ್ನ ಪಾಪ ಪರಿಹಾರವಾಗಲಿ ; ಎಂದು ಬೇಡಿಕೊಳ್ಳುತ್ತಾನೆ. ಧನಿಕನೊಬ್ಬನ ಹತ್ಯೆ ಮಾಡಿ ಅವನ ಧನವನ್ನು ಕೊಳ್ಳೆಹೊಡೆದು ಅದರಲ್ಲಿ ಅಲ್ಪ ಭಾಗವನ್ನು ಗುಡಿಯ ಹುಂಡಿಗೆ ಹಾಕಿ, ತಾನು ಪೋಲೀಸಿನವರಿಗೆ ಸಿಕ್ಕದಿರಲೆಂದು ಬೇಡಿಕೊಳ್ಳುತ್ತಾನೆ. ಆದರೆ,

ಪಾಪ ಕರ್ಮದ ಫಲವನ್ನು ಈ ಜನ್ಮದಲ್ಲಾಗಲಿ, ಮರು ಜನ್ಮದಲ್ಲಾಗಲಿ ಅನುಭವಿಸಲೇ ಬೇಕು. ಪುಣ್ಯ ಕರ್ಮವು , ಪಾಪ ಕರ್ಮದ ಲೆಕ್ಕವನ್ನು ಅಳಿಸದು. ಆಧ್ಯಾತ್ಮಿಕ ಸಾಧನೆ ಮಾಡದೆ ಯಾರೂ ಪುಣ್ಯ ಭಾಗಿಗಳಾಗರು. ಕರುವಿನ ಬಾಲ ಹಿಡಿದು ಯಾರೂ ವೈತರಣಿಯನ್ನು ದಾಟರು. ತೀರ್ಥದ ವ್ಯಾಪಾರದಲ್ಲಿ ತೊಡಗಿರುವ ವಿಪ್ರರು ಮಾನವನ ಈ ದುರ್ಬಲತೆಯನ್ನು ಚೆನ್ನಾಗಿ ಅರಿತಿರುತ್ತಾರೆ. ಮತ್ತು ಇದರಿಂದ ಅವರು ಯಾತ್ರಾರ್ಥಿಗಳನ್ನು ಚೆನ್ನಾಗಿ ಶೋಷಿಸುತ್ತಾರೆ. ಯಾತ್ರಾರ್ಥಿಗಳು ಈ ವ್ಯಾಪಾರಿಗಳ ತಪ್ಪು ಮಾರ್ಗದರ್ಶನಕ್ಕೆ ಗುರಿಯಾಗಿ, ಅವರ ಮೋಸ ಜಾಲದಲ್ಲಿ ಸಿಲುಕಿ, ಒಂದು ತೀರ್ಥದಿಂದ ಇನ್ನೊಂದು ತೀರ್ಥಕ್ಕೆ ಹೋಗುತ್ತಾರೆ. ಓಡಾಡುತ್ತ ಬಿಸಿಲು ಬೇಗೆಯಲ್ಲಿ ಬೇಯುತ್ತಾರೆ. ದೇವರನ್ನು ಕಾಣುವ ಅವನ ಹಸಿವೂ ಹಿಂಗುವುದಿಲ್ಲ. ಪಾಪ ಕರ್ಮಗಳ ಭಾರವೂ ಕಡಿಮೆಯಾಗುವುದಿಲ್ಲ.

ತೀರ್ಥಯಾತ್ರೆಯೆಂದು ತಿರುಗಲು ಹೋಗುವವ ;
ಪಾಮರಷ್ಟೆ ಹೊರತು ಭಕ್ತನಹನೆ ?
ತೀರ್ಥ ಯಾತ್ರೆಯಿಂದ ದಿವ್ಯನಾಗಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಕಾಶಿ ಯಾತ್ರೆ ಗೆಯ್ದು, ಗಾಸಿ ಪಡುವುದೇಕೆ ?
ಹೊಲಸು ಗುಣ ವಿಕಾರ ಹೊಳಪು ತೊರೆದು,
ಮೋಸ ಹೋಗದರಿವು ಮೂಲ ಕಂಡುಕೊಳ್ಳೊ,
ವಿಶ್ವದಾಭಿರಾಮ ಕೇಳು ವೇಮ.

ತನ್ನ ಆತ್ಮದಲ್ಲಿ ದೈವವು ಇರುವಾಗ,
ತೀರ್ಥ ಯಾತ್ರೆಗಿಳಿಯ ತಿರುಗುವ ನರ.
ಗಂಧ ಕಡ್ಡಿಗಳನು ಕತ್ತೆ ಹೊತ್ತ ಚೆಂದ.
ವಿಶ್ವದಾಭಿರಾಮ ಕೇಳು ವೇಮ.

ಸ್ಥೂಲ ಭೌತಿಕ ಲೋಕ, ಸೂಕ್ಷ್ಮ ಮನೋಲೋಕಗಳನ್ನು ದಾಟಿ, ಕಾರಣಾತೀತ ಆತ್ಮದಲ್ಲಿ ದೈವವು ಇದೆ. ಪರಮಾತ್ಮನ ಅಂಶವಿದೆ. ಹೀಗಿರುವಾಗ, ಇಂದ್ರಿಯಗಳನ್ನು ವಿಷಯ ಸಂಸರ್ಗದಿಂದ ದೂರವಿರಿಸಿ, ಮನವನ್ನು ಸಂಕಲ್ಪ ವಿಕಲ್ಪಗಳ ತರಂಗಗಳಿಲ್ಲದ ನಿಸ್ತರಂಗಸ್ಥಿತಿಯಲ್ಲಿರಿಸಿ, ದೈವವನ್ನು ಅರಿತು ಅನುಭವಿಸಬೇಕು. ಹೀಗೆ ಮಾಡದೆ, ವೈತರಿಣಿಯನ್ನು ದಾಟಲು ಕರುವಿನ ಬಾಲವನ್ನು ಹಿಡಿಯಲು ಪ್ರಯತ್ನಿಸುವವನಂತೆ ನರನು ತೀರ್ಥ ಯಾತ್ರೆಗಿಳಿದು ಭೂಮಿಯನ್ನು ಸುತ್ತುತ್ತಾನೆ. ಗಂಧದ ಕಡ್ಡಿಯ ಸುರಭಿಯನ್ನಾಗಲಿ, ಮೂಲ್ಯವನ್ನಾಗಲಿ ಅರಿಯದೆ ಹೊತ್ತು ಸಾಗುವ ಕತ್ತೆಯಂತೆ, ಆತ್ಮವನ್ನು ಅರಿಯದೆ ಸಾಗಿರುವವನ ಪಾಡು.

ಅವನಿ ತಿರುಗಲಿಲ್ಲ; ಆಗಸದೊಳು ಇಲ್ಲ,
ಅವನಿ ತೀರ್ಥಯಾತ್ರೆಯಲ್ಲು ಇಲ್ಲ,
ಒಡಲು ಶುದ್ಧಗೊಳಿಸಿ ಒಡೆಯನನ್ನು ಕಾಣು.
ವಿಶ್ವದಾಭಿರಾಮ ಕೇಳು ವೇಮ.





ಪ್ರತಿಯೊಬ್ಬ ಮಾನವನ ಅಂತಸ್ಥಲದಲ್ಲಿ ತೀರ್ಥಪತಿಯು ಶಾಶ್ವತವಾದ ಶಾಂತಿಯಲ್ಲಿ ಚಿರಜಾಗ್ರತನಾಗಿ, ಗಾಳಿಯಿಲ್ಲದಾಗಿನ ದೀಪ ಶಿಖೆಯಂತೆ, ಸರ್ವಕಾಲಿಕ ಸತ್ತೆಯ ರೂಪದಲ್ಲಿ ಇರುತ್ತಾನೆ. ಅವನೇ ಆತ್ಮ. ಅವನನ್ನು ಮರೆತು, ತಾಮಸ ಗುಣದಿಂದ ಆವೃತರಾದ ಜೀವರು, ಲೌಕಿಕ ಜಗತ್ತಿನಲ್ಲಿ ತೀರ್ಥವನ್ನು ಹುದುಕುತ್ತ ಅಂಡಲೆದರೆ, ಅವರೆಂತು ಮೋಕ್ಷ ಸಂಪಾದಿಸಬಲ್ಲರು ?

"ಆತ್ಮ ತೀರ್ಥಂ ನ ಜಾನಾತಿ, ಕಥಂ ಮೋಕ್ಷಂ ವರಾನನೇ ?" ಎಂದರೆ ಆತ್ಮ ತೀರ್ಥವನ್ನೇ ತಿಳಿಯರು. ಅಂದ ಮೇಲೆ, ಅವರೆಂತು ಮೋಕ್ಷ ಪಡೆಯಬಹುದು ? ಪ್ರಿಯ ಮುಖಿಯೇ ? ಎಂದು ಶಿವನು ಪಾರ್ವತಿಯನ್ನು ಕೇಳುತ್ತಾನೆ.

ದೇಹದೊಳಗೆ ಇಪ್ಪ ದೇಹಿ ದೇವರನ್ನು
ಕಂಡುಕೊಂಡ ಬುಧರು ತೀರ್ಥಯಾತ್ರೆ
ಗೆಯ್ಯರಯ್ಯ ಜಗದಿ ಆತ್ಮರೂಪ ತಿಳಿದು.
ವಿಶ್ವದಾಭಿರಾಮ ಕೇಳು ವೇಮ.

ಆತ್ಮವು ಸ್ವಯಂ ಜ್ಯೋತಿಯಾಗಿದೆ. ಅದು ಎಲ್ಲವನ್ನೂ ಬೆಳಗುತ್ತದೆ. ದಿವ್ ಅಂದರೆ ಬೆಳಗು. ಆತ್ಮನೇ ದೇವರಾಗಿದೆ. ಹೀಗೆ ದೇಹದೊಳಗೇ ಇರುವ ದೇಹಿಯಾದ ಆತ್ಮ ದೇವರನ್ನು ಬುಧರು ಕಂಡುಕೊಳ್ಳುತ್ತಾರೆ. ಆತ್ಮ ರೂಪವನ್ನು ತಿಳಿದ ಅವರು ಇತರತ್ರ ದೇವರನ್ನು ಹುಡುಕುವ ವ್ಯರ್ಥ ಪ್ರಯಾಸ ಕೈಕೊಳ್ಳರು. ಮೂಢರಂತೆ ದೇವರನ್ನು ಹುಡುಕಲು ಅತ್ತ ಇತ್ತ ತೀರ್ಥಯಾತ್ರೆಗೆಂದು ತಿರುಗಾಡರು. ಅವರೂ ವೇದವ್ಯಾಸರಂತೆ "ಎಲೈ ಜಗದೀಶ ! ನೀನು ಸರ್ವ ವ್ಯಾಪ್ತನಾಗಿದ್ದರೂ ನಾನು ನಿನ್ನನ್ನು ಹಲ ಕೆಲವು ತೀರ್ಥ ಕ್ಷೇತ್ರಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದೆ. ಈ ನನ್ನ ದೋಷಕ್ಕಾಗಿ ನನ್ನನ್ನು ದಯವಿಟ್ಟು ಕ್ಷಮಿಸು" ಎಂದು ಕ್ಷಮೆ ಯಾಚಿಸುತ್ತಾರೆ.

ಅದೇ ರೀತಿ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಬಹಳ ಎತ್ತರಕ್ಕೆ ಏರಿದ, ಮಹಾಯೋಗಿಗಳ ಸಮಕಾಲೀನರಾದ ಉತ್ತರ ಭಾರತದ ಸಂತರಾದ ಕಬೀರರು, "ಪವಿತ್ರವೆನ್ನುವ ತೀರ್ಥಗಳಲ್ಲಿ ಬರೀ ನೀರು ಇದೆ. ಅವು ನಿರುಪಯೋಗಿಯೆಂದು ನಾನು ಅರಿತಿರುವೆ. ಏಕೆಂದರೆ ನಾನು ಅವುಗಳಲ್ಲಿ ಸ್ನಾನ ಮಾಡಿರುವೆ. ಇನ್ನು ಎಲ್ಲ ಪ್ರತಿಮೆಗಳೂ ಜೀವ ಹೀನ. ಅವು ಮೂಕವಾಗಿವೆ. ನನಗಿದು ಗೊತ್ತಾಗಿದೆ. ಏಕೆಂದರೆ ನಾನು ಅವುಗಳೆದುರು ಕೂಗಿ ಕರೆದಿದ್ದೇನೆ" ಎಂದು ಹೇಳಿದುದನ್ನು ಈ ಮುನ್ನ ಪ್ರಸ್ತಾಪಿಸಿದ್ದೇವೆ.

ಆದ್ದರಿಂದ ಮಹಾಯೋಗಿ ವೇಮನರು ಹೇಳುತ್ತಾರೆ :

ಜಗದಲ್ಲಿಯು ಇಲ್ಲ ; ಜಲದಲ್ಲಿಯು ಇಲ್ಲ
ನಿಗಮ ವೇದ್ಯವಾದ ನಿತ್ಯ ಪದವಿ.
ಸಗುಣ-ನಿರ್ಗುಣದಲಿ, ಸಾಧಿಸಿ ಸಲೆ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ನಿಗಮ ಎಂದರೆ ವೇದಾಂತ. ನಿಗಮ ವೇದ್ಯವಾದ ಅಂದರೆ ವೇದಾಂತಕ್ಕೆ ಗೋಚರಿಸುವ, ನಿತ್ಯ ಪದವಿಯು ಜಗದಲ್ಲಿಯೂ ಇರದು, ಅಂದರೆ ಕ್ಷೇತ್ರದಲ್ಲಿಯೂ ಇರದು, ಜಲದಲ್ಲಿಯೂ

ಇರದು, ಅಂದರೆ ತೀರ್ಥಗಳಲ್ಲಿಯೂ ಇರದು. ಅದನ್ನು ಅಲ್ಲಿ ಇಲ್ಲಿ ಸುತ್ತಾಡಿ ಕಾಣಲಾರೆವು. ದೇವರು ಸಗುಣ ರೂಪದಲ್ಲಿ ವಿಶ್ವವಾಗಿದ್ದಾನೆ. ಅವನಿಗೆ ಸೂರ್ಯ ಚಂದ್ರರು ಎರಡು ಕಣ್ಣುಗಳು. ಅಗ್ನಿಯು ಮೂರನೆಯ ಕಣ್ಣು. ಬೀಸುವ ಗಾಳಿಯು ಅವನ ಪ್ರಾಣ. ಇಂಥ ರೂಪವನ್ನು ನೆನೆದು ಮನದಲ್ಲಿ ಧಾರಣ ಮಾಡಿ, ಧ್ಯಾನ ಮೂಲಕ ಅಲ್ಲಿಯೇ ದೃಷ್ಟಿ ನಿಲ್ಲಿಸಿ ಸಮಾಧಿ ಸ್ಥಿತಿ ತಲುಪಬೇಕು. ಅಲ್ಲಿ ಗುಣಾತೀತನಾದ, ಭಾವಾತೀತನಾದ, ರೂಹಿಲ್ಲದ, ಕೇಡಿಲ್ಲದ ನಿರ್ಗುಣನನ್ನು ಹೊಂದಿ ಆನಂದಿಸಬೇಕು.

ದೇವ ಭೂಮಿಯಲ್ಲಿ, ದೇವಾಲಯಗಳಲಿ,
ದೇವನೆಂದು ಮಣಿದು ತಿಳಿಯಲಿಲ್ಲ.
ತಿರುಗುತಿರುವ ಅವನೆ ದೇವಾದಿ ದೇವನು.
ವಿಶ್ವದಾಭಿರಾಮ ಕೇಳು ವೇಮ.

ಭೂಮಿ ಹೆಸರಿನಿಂದ ಪುಣ್ಯ ಸ್ಥಳವೆ ಆಯ್ತು.
ಮಿನುಗುವ ಶಿಲೆಯಿಂದ ಮೂರ್ತಿಯಾಯ್ತು.
ನೀರು ಹೆಸರಿನಿಂದ ನಿಖಿಲ ತೀರ್ಥವಾಯ್ತು.
ವಿಶ್ವದಾಭಿರಾಮ ಕೇಳು ವೇಮ.

ಅಲ್ಲಿ ಇಲ್ಲಿ ಮಹಾ ಪುರುಷರು ತಪಸ್ಸು ಮಾಡಿದ, ಇಲ್ಲವೆ ಮಹಾನಿರ್ಯಾಣ ಮಾಡಿದ ಸ್ಥಳಗಳಲ್ಲಿ ಒಂದು ಬಗೆಯ ಸೂಕ್ಷ್ಮ ತರಂಗಗಳಿರುತ್ತಿವೆಯೆಂಬುದು ಸಾಧಕರ ಸ್ವಾನುಭವ. ಇಂಥ ಹಲವು ಕ್ಷೇತ್ರಗಳು ಪುಣ್ಯ ಕ್ಷೇತ್ರಗಳೆನಿಸಬಹುದು. ಆದರೆ ಇಲ್ಲಿ ಹೋಗಿ ಪ್ರಶಾಂತವಾಗಿ ಕುಳಿತು ಧ್ಯಾನಿಸಬೇಕು. ಮನಸ್ಸನ್ನು ಉಚ್ಚ ಸ್ತರಕ್ಕೇರಿಸಿಕೊಳ್ಳಬೇಕು. ಅದೇ ಸ್ಥಿತಿಯನ್ನೇ ಅಲ್ಲಿಂದ ತಿರುಗಿ ಬಂದು ಪುನಃ ಅನುಭವಿಸಬೇಕು. ತೀರ್ಥ ಕ್ಷೇತ್ರಗಳೆಂದು ಗುರುತಿಸಲಾದ ತಾಣಗಳ ಸ್ಥಲ ಪುರಾಣಗಳಲ್ಲಿ ಈ ಮಹಾತ್ಮರ ಮಹಾ ಸಮಾಧಿಯ ವರ್ಣನೆ ಇರುತ್ತದೆ. ಆದರೆ ಈ ಸತ್ಯವನ್ನು ಅರಿಯುವ ಜನರೆಷ್ಟು ? ಅಲ್ಲಿರುವ ಸೂಕ್ಷ್ಮ ತರಂಗಗಳ ಪ್ರಭಾವದಿಂದ ತಮ್ಮ ಮಾನಸ ತರಂಗಗಳನ್ನು ಹೊಂದಿಸಿಕೊಳ್ಳುವವರೆಷ್ಟು ? ಈಗ ತೀರ್ಥ ಯಾತ್ರೆಗಳು ಜನಮಂದೆಯ ಗೋಷ್ಠಿಯಾಗಿರುತ್ತವೆ. ಆದ್ದರಿಂದ ಮಹಾಯೋಗಿಗಳು ಹೀಗೆ ಸೂಚಿಸುತ್ತಾರೆ.

ಪೊಡವಿ ತಿರುಗಿ ಪಡೆದ ಪುಣ್ಯ ಕರ್ಮವೆಲ್ಲ,
ಸಾಧು ಜನರ ನೋಡೆ, ಶೀಘ್ರ ಲಭ್ಯ.
ಬಿದ್ದ ನೀರಿಂಗಲು ಶುದ್ಧ ನದಿಯ ತಳದಿ.
ವಿಶ್ವದಾಭಿರಾಮ ಕೇಳು ವೇಮ.

ಪುಣ್ಯಾರ್ಜನೆಗಾಗಿ, ಆ ತೀರ್ಥ, ಈ ಕ್ಷೇತ್ರವೆಂದು ತಿರುಗಾಡಿ, ಪಡೆವಂಥ ಪುಣ್ಯ ಕರ್ಮವೆಲ್ಲವನ್ನೂ ಓರ್ವ ಪುಣ್ಯಾತ್ಮನಾದ ಸಾಧು ಪುರುಷನ ದರ್ಶನದಿಂದ ಶೀಘ್ರವೇ ಪಡೆಯಬಹುದಾಗಿದೆ. ನದಿಯ ಪಾತ್ರದಲ್ಲಿ ಸುರಿದ ನೀರು ತಳದಲ್ಲಿ ಇಂಗಲು ಶುದ್ಧಗೊಳ್ಳುವಂತೆ, ಸಾಧು ಪುರುಷನ ದರ್ಶನ ಮಾತ್ರದಿಂದ ಓರ್ವನು ಪುಣ್ಯವನ್ನು ಅರ್ಜಿಸಬಹುದು. ಆದ್ದರಿಂದ ಹೀಗೆ ಹೇಳಿದ್ದಾರೆ.





ಗುರು ಯಾತ್ರಾ, ದೇವ ಯಾತ್ರಾ, ತೀರ್ಥ ಯಾತ್ತೇತಿ ತಥಾ
ಅಸಾಂ ತ್ರಿವಿಧಯಾ ತ್ರಾಣಾಂ ಗುರು ಯಾತ್ರಾ ಪರಾಧಿಕಾ

ಅಂದರೆ ಗುರು ಯಾತ್ರೆ, ದೇವ ಯಾತ್ರೆ ಮತ್ತು ತೀರ್ಥಯಾತ್ರೆ ಎಂಬ ಮೂರು ತರದ ಯಾತ್ರೆಗಳಿವೆ. ಆ ಮೂರರಲ್ಲಿ ಗುರುಯಾತ್ರೆಯು ಫಲಕಾರಿಯಷ್ಟೇ.

ಅದನ್ನೇ ವೇಮನ ಯೋಗಿಗಳು ಪ್ರತಿಪಾದಿಸಿದ್ದಾರೆ. ಕಾಶಿ, ತಿರುಪತಿ ಯಾತ್ರೆಯೇ ಇರಲಿ, ಮಧುರೆ, ಮಕ್ಕಾ ಯಾತ್ರೆಯೇ ಇರಲಿ ಮಾನವನಲ್ಲಿ ಮಾರ್ಪಾಡು ತಾರವು. ಕಾಶಿ ಕಂಡ ಹಂದಿ ಕರಿಯಾಗದು. ಮನೋಶುದ್ಧಿ ಮಾಡಿಕೊಂಡು ಗುರುವನ್ನು ಸೇರುವುದೇ ನೈಜ ಯಾತ್ರೆಯಷ್ಟೇ.

ನಮ್ಮ ಈ ಮೇಲಿನ ವಿವೇಚನೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಯೋಗಿಗಳ ಸೂಳ್ನುಡಿಯನ್ನು ಅರ್ಥೈಸಿ ಅರಗಿಸಿಕೊಂಡು, ಅವರಿವರು ಆಡುವ ಬಣ್ಣದ ಮಾತುಗಳಿಗೆ ಬಲಿಯಾಗದೆ, ಕೈಯಲ್ಲಿನ ಕಾಸು, ಮೈಯಲ್ಲಿನ ಶಕ್ತಿಯನ್ನು ವ್ಯರ್ಥ ಹ್ರಾಸ ಮಾಡಿಕೊಂಡು ಶೋಷಣೆಗೊಳಗಾಗದೆ, ನಿಜವಾಗಿ ಮುಕ್ತಿಯ ಮಾರ್ಗವನ್ನು ತೋರುವ ಸದ್ಗುರುಗಳಲ್ಲಿ ಶರಣು ಕೋರಿ, ಪುಣ್ಯಭಾಗಿಗಳಾಗಿರಿ.

-------

# ೯. ಆಚಾರ ವಿಧಿ

ವಿಚಾರವು ಆಚಾರಕ್ಕೆ ಮೂಲವಾಗಿದೆ. ಹೇಗೆ ವಿಚಾರಿಸುವನೋ, ಅಂತೆಯೇ ಆಚರಿಸಬೇಕು. ಕಾಯಾ, ವಾಚಾ, ಮನಸಾ ಏಕವಾಗಿರಬೇಕು. ಅದುವೇ ತ್ರಿಕರಣ ಶುದ್ಧಿ. ಆಚಾರವೇ ಪರಮ. ಜಾತಿ ಮತ, ಕುಲ ಕೋಮುಗಳನ್ನು ಪರಿಗಣಿಸದ, ಸರ್ವ ಮಾನವರನ್ನು ಶಿವಗೋತ್ರದವರೆಂದು ಗ್ರಹಿಸುವ ಧರ್ಮವೇ ನಿಜವಾದ ಧರ್ಮ. ಹುಟ್ಟಿನಿಂದ ಜಾತಿಯ ಗಣನೆ ಮಾಡಬಹುದು. ಆಯಾ ಜನಗೋಷ್ಠಿಗಳ ಕಸುಬಿನಿಂದ ಅಂದರೆ ಕುಲಕಸುಬಿನಿಂದ ಆಯಾ ಜಾತಿಗಳನ್ನು ಗುರುತಿಸಬಹುದು. ಕುರಿಗಳನ್ನು ಪಾಲಿಸುವುದರಿಂದ ಕುರುಬ ಜಾತಿಗೆ ಸೇರಿದವನಾಗಿರಬಹುದು. ಕುಂಭಕಾರರ ಕುಲದಲ್ಲಿ ಜನಿಸಿದವನು ಕುಂಬಾರ ಜಾತಿಯವನಾಗಬಹುದು. ಬಟ್ಟೆ ತೊಳೆಯುವವರ ಕುಲಜನು ಮಡಿವಾಳ ಜಾತಿಯವನಾಗಬಹುದು. ಲೋಹಗಳನ್ನು ಕಾಸಿ ಬಡಿಯುವವನು ಕಮ್ಮಾರ ಜಾತಿಯವನು. ಕಟ್ಟಿಗೆಯ ಕೆಲಸ ಮಾಡುವವನು ಬಡಿಗೇರ ಜಾತಿಗೆ ಸೇರಿದವನು. ಅದೇ ರೀತಿ, ಮನೆ ಕಟ್ಟುವವರ ಕಸುಬಿನವರಲ್ಲಿ ಜನಿಸಿದವನು ಉಪ್ಪಾರ ಜಾತಿಯವನೆನಿಸುತ್ತಾನೆ. ಹೊಲದ ಉಳುಮೆ ಮಾಡುವ ಕುಲಜನು ಒಕ್ಕಲಿಗನು. ಗ್ರಾಮ ಲೆಕ್ಕ ಪತ್ರಗಳನ್ನಿಡುವವರ ಕುಲಜನು ಕುಲಕರಣಿ. ಇವರೆಲ್ಲರೂ ಸಮಾನರೇ. ಹುಟ್ಟಿನಿಂದ ಅವರಲ್ಲಿ ಭೇದವೆಣಿಸುವುದು ಮೂರ್ಖತನ. ಆದರೆ ಸಮಾಜ ವ್ಯವಸ್ಥೆಗಾಗಿ ಆಯಾ ವ್ಯಕ್ತಿಯ ಗುಣ ಮತ್ತು ಕರ್ಮಾನುಸಾರ ವರ್ಣ ವ್ಯವಸ್ಥೆ ಜಾರಿಯಲ್ಲಿ ಬಂದಿದೆ. ಜ್ಞಾನಸಂಗ ಮತ್ತು ಸುಖಸಂಗವಿರುವ ಸಾತ್ವಿಕರು ತಮ್ಮ ಸತ್ವ ಗುಣದಿಂದ ಮತ್ತು ಅದಕ್ಕನುಗುಣವಾದ ವಿದ್ಯಾ ಕ್ಷೇತ್ರದಲ್ಲಿ, ಧಾರ್ಮಿಕ ಕ್ಷೇತ್ರದಲ್ಲಿ ಮುಂದುವರಿದು ಬ್ರಾಹ್ಮಣರೆನಿಸುತ್ತಾರೆ. ವೈದ್ಯ ಶಾಸ್ತ್ರದಲ್ಲಿ, ನ್ಯಾಯ ಶಾಸ್ತ್ರದಲ್ಲಿ, ರಾಜ್ಯ ಶಾಸ್ತ್ರದಲ್ಲಿ ಪಾರಂಗತರಾಗುತ್ತಾರೆ. ಇವರ ಹುಟ್ಟಿನ ಜಾತಿ ಯಾವುದಾದರೂ ತಮ್ಮ ವ್ಯಾಸಂಗದಿಂದ, ಬುದ್ಧಿ ಕೌಶಲದಿಂದ, ಈ ವರ್ಣ ಸೇರಿ ಗೌರವ ಸಂಪಾದಿಸುತ್ತಾರೆ. ಇವರ ಸಂತತಿಯವರು ಇದೇ ವರ್ಣದವರಾಗಿರಲಾರರು. ಜನ್ಮದಿಂದ ಜಾತಿ ಮಾತ್ರ ಅಂಟುತ್ತದೆ. ಆದರೆ ವರ್ಣವು ಮಾತ್ರ ಅವರವರ ಗುಣ ಕರ್ಮದಿಂದ ಸಂಪಾದಿಸಲ್ಪಡುತ್ತದೆ. ಕರ್ಮ ಸಂಗವುಳ್ಳ ಲೋಭ ಸಂಗವುಳ್ಳ ರಾಜಸವಾದ ಯುದ್ಧ, ಆಡಳಿತಾಧಿಕಾರ, ಜನರಿಂದ ಕರ ಶುಲ್ಕಗಳನ್ನು ಸಂಗ್ರಹಿಸುವ ಕರ್ಮಗಳಲ್ಲಿ ತೊಡಗಿ ಅಲ್ಲಿಯೇ ಪರಿಣತನಾಗುತ್ತಾನೆ. ಸಮಾಜದ ಯಾವುದೇ ಜಾತಿ ಕುಲದ ವ್ಯಕ್ತಿಯು ತನ್ನ ಕ್ಷಾತ್ರ ತೇಜಸ್ಸಿನಿಂದ ಮನೋಭಿಲಾಷೆಯಿಂದ ಕ್ಷತ್ರಿಯನೆನಿಸಬಹುದು. ಕ್ಷತ್ರಿಯ ವರ್ಣಕ್ಕೇರಿದ ವ್ಯಕ್ತಿಯು ಆ ವರ್ಣದವರಿಗೆ ನಿರ್ದಿಷ್ಟ ಕರ್ಮಗಳನ್ನು ಆಚರಿಸತಕ್ಕದ್ದು. ರಜೋ ಗುಣದ ಲೋಭ ಸಂಗವೂ ಮತ್ತು ತಮೋ ಗುಣದ ಅಜ್ಞಾನ ಸಂಗವೂ ಸೇರಿದ ಮಿಶ್ರ ಗುಣವುಳ್ಳ ಮತ್ತು ಧನಾರ್ಜನೆ ಮತ್ತು ವ್ಯಾಪಾರಾದಿ ಕರ್ಮ ಮಾಡಬಯಸುವವರನ್ನು ವೈಶ್ಯ ವರ್ಣದವರೆಂದು ಶ್ರೇಣೀಕರಿಸಲಾಗಿದೆ. ಇನ್ನು ಬಹು ಜನರಿಗೆ ಪರಮಾರ್ಥದ ಗಂಧವೇ ಇರದು. ಪರಮ ಪ್ರಾಪ್ತಿಯ ಗಂಧವೇ ಇರದು. ಇಂಥ ಅಜ್ಞಾನಿ ಜಡಮತಿಗಳು ಹಾಗೂ ಅಂಥ ಪ್ರಯತ್ನಕ್ಕೆ ಮುಂದಾಗದ ಆಲಸಿಗಳಿಗೆ ಅವರ ಅಜ್ಞಾನ ಸಂಗ ಮತ್ತು ಆಲಸ್ಯ ಸಂಗಗಳ ತಮೋಗುಣದಿಂದಾಗಿ ಹಾಗೂ ಆ ಗುಣಕ್ಕೆ ಅನಗುಣವಾಗಿ ಮಾಡುವ ಪರಿಚಾರಕ, ಕಾವಲುಗಾರಿಕೆ, ಶ್ರಮಜೀವನದ ಕರ್ಮಗಳಿಗನುಸರಿಸಿ ಶೂದ್ರ ವರ್ಣದವರೆನಿಸುತ್ತಾರೆ. ವರ್ಣ ವಿಭಜನೆಯ ರಹಸ್ಯವನ್ನೇ ಅರಿಯದ ಪಟ್ಟಭದ್ರ ಹಿತಾಸಕ್ತರು





ವರ್ಣಗಳನ್ನೇ ಜಾತಿಯನ್ನಾಗಿಸಿದ್ದಾರೆ. ಬೇರೆ ಬೇರೆ ಕುಲಗಳ ವೃತ್ತಿ ಗೌರವವನ್ನು ಮರೆ ಮಾಡಿ, ವೃತ್ತಿ ವೃತ್ತಿಗಳಲ್ಲಿ ಮೇಲು ಕೀಳಿನ ಭಾವನೆಯನ್ನು ಉಂಟು ಮಾಡಿದರು. ಹೀಗಾಗಿ ಜಾತಿ ಜಾತಿಗಳಲ್ಲಿ ಮೇಲು ಕೀಳಿನ ಭಾವನೆಯು ಸುಳಿಯಿತು. ಮೇಲು ಜಾತಿಯವರು ಕೀಳು ಜಾತಿಯವರು ಎಂಬ ಪರಿಗಣನೆ ಬೆಳೆಯಿತು. ಗುಣ ಕರ್ಮಗಳಿಂದ ಗುರುತಿಸಬೇಕಾದ, ಆಧ್ಯಾತ್ಮಿಕ ಸ್ತರಗಳಿಗೆ ಸಂಕೇತವಾಗಬೇಕಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ವರ್ಣಗಳು ಮೇಲು ಕೀಳಿನ ಭಾವನೆಯನ್ನು ಬಿತ್ತುವ ಕ್ಷೇತ್ರಗಳಾದವು.

ಯಾವ ಕುಲವು ನಿನಗೆ ಯಾವ ಮತವು ಮತ್ತೆ ?
ಪೂರ್ಣಗೊಂಡ ಹೃದಯ ಪಕ್ವವರಿತು,
ಆದರಿಸುವ ಮನುಜ ಅಂತ್ಯವ ತಿಳಿಯುವನು.
ವಿಶ್ವದಾಭಿರಾಮ ಕೇಳು ವೇಮ.

ಜೀವಿಯು ತನ್ನ ಪೂರ್ವ ಸಂಸ್ಕಾರಾನುಸಾರ, ಆಯಾ ಯೋನಿಗಳಲ್ಲಿ ಜನಿಸುವುದುಂಟು. ಈ ಯೋನಿಗಳು ನಿಸರ್ಗ ನಿರ್ಮಿತ ಯೋನಿ ಪ್ರಕಾರಗಳು. ವನಸ್ಪತಿಗಳ ಯೋನಿಯಿರಬಹುದು, ಕ್ರಿಮಿಗಳ ಯೋನಿಯಾಗಿರಬಹುದು, ಪಶು ಪಕ್ಷಿಗಳ ಯೋನಿಯೇ ಆಗಿರಬಹುದು, ಮಾನವ ಯೋನಿಯೂ ಇರಬಹುದು. ಜನಿಸಿದ ಮೇಲೆ ತನ್ನ ಸಂಸ್ಕಾರಗಳ ಮೇರೆಗೆ ಆಯಾ ಕರ್ಮಗಳಲ್ಲಿ ನಿರತನಾಗುತ್ತಾನೆ. ಆಯಾ ಕರ್ಮದವರ ಕುಲದಲ್ಲಿ ಸೇರಿ ಅದರ ಅಭ್ಯುದಯಕ್ಕಾಗಿ ಪ್ರಯತ್ನಿಸುತ್ತಾನೆ. ಈ ಯೋನಿಜನಾದ ಜೀವನು ತನ್ನ ಗುಣಕ್ಕನುಸಾರವಾಗಿ ಬೇರೆ ಬೇರೆ ಕುಲ ಕಸಬುಗಳಲ್ಲಿ ಆಸ್ಥೆ ಹೊಂದುತ್ತಾನೆ. ಹೀಗೆ ಅವನ ಕರ್ಮವು ನಿರ್ಧಾರವಾಗುತ್ತದೆ. ಅವನ ಗುಣ ಮತ್ತು ಕರ್ಮಗಳಿಗೆ ಹೊಂದುವಂತೆ ಅವನ ವರ್ಣವು ನಿರ್ಧಾರವಾಗುತ್ತದೆ. ಈ ವರ್ಣಕ್ಕೆ ಸರಿಹೊಂದುವಂತೆ ಪುರುಷಾರ್ಥಗಳನ್ನು ಈಡೇರಿಸಲು ಅವನು ತಕ್ಕ ಮತವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಹೀಗೆ ಹಿಡಿದ ಮತವನ್ನು ಅನುಸರಿಸಿ, ಅವನ ಹೃದಯವು ಪರಿಚ್ಛಿನ್ನವಾಗದೆ ಪೂರ್ಣವಾಗುತ್ತದೆ. ಅದು ಪೂರ್ಣತ್ವದಲ್ಲಿ ಪಕ್ವವಾಗಿ, ಆ ಪರಮಪದವನ್ನೇ ಆದರಿಸುತ್ತಾನೆ. ಹೀಗೆ ತನ್ನ ಅಂತ್ಯವನ್ನು ಅರಿಯುತ್ತಾನೆ.

ಜಾತಿ ಮತಗಳಲಿ ಜನತೆಯೆಲ್ಲ ಬದ್ಧ,
ಭಾವ ಪರಮನಲ್ಲಿ ಬುರುಗು ಹಾಲು.
ಸತ್ತು ಸತ್ತು ಹುಟ್ಟುತಿಹರು ಜಡಮತಿಗಳು.
ವಿಶ್ವದಾಭಿರಾಮ ಕೇಳು ವೇಮ.

ಜಾತಿಯ ಅಭಿಮಾನದಲ್ಲಿ, ಮತೀಯ ಅಭಿಮಾನದಲ್ಲಿ, ಜನರ ಮನಸ್ಸು ಕಟ್ಟು ಬಿದ್ದು ಬದ್ಧವಾಗಿದೆ. ಈ ಬಂಧನವನ್ನು ಕಳಚಿ ಮನಸ್ಸು ಸೂಕ್ಷ್ಮವಾಗಬೇಕಿದೆ. ಪರಮನತ್ತ ಹರಡಬೇಕಿದೆ. ಶುದ್ಧ ಸತ್ವವನ್ನು ಉದ್ದೀಪಿಸಿ ಪ್ರೇಮ ಸೂರ್ಯನನ್ನು ಬೆಳಗಿಸುವ ಭಾವವು ಪರಮನಲ್ಲಿ ಭಕ್ತಿ ಕಿರಣವಾಗಿ ಸ್ಫುರಿಸಬೇಕು. ಆದರೆ, ಜಾತಿ ಮತಗಳ ಬದ್ಧತೆಯಿಂದಾಗಿ ಸಾಧಕನ ಮನೋತರಂಗಗಳು ಕೇವಲ ಹಾಲಿನ ಬುರುಗಿನಂತೆ ಮೇಲೇರಿ ಇಳಿಯುತ್ತವೆ. ಅಂತೂ ಪರಮನನ್ನು ತಲುಪುವುದೇ ಇಲ್ಲ. ಹೀಗಾಗಿ ಅಮರತ್ವ ಪಡೆಯದೆ ಸತ್ತು ಸುತ್ತು ಹುಟ್ಟುತ್ತಾರೆ.

ಜಾತಿ ನಾನರಿಯೆನು ; ಜಗವ ನಾನರಿಯೆನು.
ಜಪವ ನಿಷ್ಠೆಯರಿಯೆ ; ಸತ್ಯವಿದುವೆ.
ಇಷ್ಟು ಹುಟ್ಟಿತೆಲ್ಲಿ ? ನೀನದರ ಸಂಧಿಯರಿ.
ವಿಶ್ವದಾಭಿರಾಮ ಕೇಳು ವೇಮ.

ನಾನು ಜನಿಸಿದಾಗ ನನಗೆ ಜಾತಿ ಯಾವುದೆಂದು ತಿಳಿದಿರಲಿಲ್ಲ. ಈ ಜಗತ್ತಿನ ರೂಢಿ ಸಂಪ್ರದಾಯಗಳೂ ತಿಳಿದಿರಲಿಲ್ಲ ಅಷ್ಟೇಕೆ ? ಮುಂದೆ ಬೆಳೆದ ಮೇಲೂ ಸಹ ನನಗೆ ಜಪದ ನಿಷ್ಠೆಯೂ ತಿಳಿದಿರಲಿಲ್ಲ. ಇದು ನಿಜ. ಅಂದ ಮೇಲೆ, ಇವಾವವೂ ನನ್ನ ಜೊತೆಗೆ ಬಂದಿಲ್ಲ. ಅನ್ಯರು ನನ್ನಲ್ಲಿ ತುಂಬಿದ ಭಾವನೆಗಳಿವು. ಈ ಭಾವನೆಗಳೆಲ್ಲ ಜನರ ಸಂಗದಿಂದ ಮೂಡಿ ಬಂದಿವೆ. ಹೀಗಾಗಿ ಇವುಗಳ ಅಭಾವ ಸ್ಥಿತಿ, ಇವುಗಳ ಉಗಮ ಈ ಸಂಧಿಯನ್ನು ಅರಿಯಬೇಕು. ಈ ಸಂಧಿಯ ಅವಸ್ಥೆಯನ್ನೇ ಮುಂದೆ ಉಳಿಸಿಕೊಂಡರೆ, ಪರಮ ಪದವನ್ನು ಪಡೆಯಬಹುದು.

ಜಾತಿಯಲ್ಲಿ ಯಾವ ಜಾತಿ ಮುಖ್ಯ ನೋಡು.
ತಿಳಿದುಕೊಳದೆ ತಿರುಗುತಿದ್ದರೇನು ?
ತಿಳಿವು ಉಳ್ಳ ಮನುಜ ತಾನಾವ ಜಾತಿಯವ ?
ವಿಶ್ವದಾಭಿರಾಮ ಕೇಳು ವೇಮ.

ತಿಳಿವು ಹೊಂದಿದ ಮನುಷ್ಯನು ಜಾತಿ ಮತಗಳ ಅಂಟನ್ನು ದೂರ ದೂಡುತ್ತಾನೆ. ಜಾತಿ ಮತವ ತೊರೆದು ಯೋಗಿಯಾಗೆ ಮೇಲು, ಎನ್ನುತ್ತಾನೆ. ಅಂಥ ಆತ್ಮಜ್ಞಾನಿಗೆ ಜಾತಿ ಮತಗಳ ಭೇದವೇ ಇಲ್ಲ. ಅವನಾವ ಜಾತಿಯವನು ? ಜಾತಿಗಳಲ್ಲಿ ಯಾವ ಜಾತಿ ಮುಖ್ಯ ? ಎಂಬುದನ್ನು ತಿಳಿದರೆ ಬ್ರಹ್ಮ ಕುಲವೇ ಎಂದು ತಿಳಿದು ಬರುತ್ತದೆ. ಇದನ್ನು ತಿಳಿಯದೆ ತನ್ನ ಹುಟ್ಟಿನ ನೆಲೆಯಾದ ಬ್ರಹ್ಮವನ್ನು ತಿಳಿಯದೆ ತಿರುಗುತ್ತಿದ್ದರೇನು ?

ಯೋನಿಯಲ್ಲಿ ಹುಟ್ಟಿ ಉತ್ತಮ ಕುಲಜನಿರೆ,
ಬ್ರಹ್ಮಕುಲದ ಒಳಗೆ ಬದುಕಬೇಕು.
ಬ್ರಹ್ಮವರಿಯದಿರಲು ಬಿದ್ದು ಸತ್ತ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಎಲ್ಲರೂ ಹುಟ್ಟುವುದು ಸ್ತ್ರೀಯ ಯೋನಿಯಲ್ಲಿಯೇ. ಪಾಂಚ ಭೌತಿಕ ದೇಹಧಾರಿಗಳಾರೂ ಅಯೋನಿಜರಾಗರು. ಅದು ಪ್ರಕೃತಿಯ ನಿಯಮ. ಯೋನಿಜನಾಗಿ ಹುಟ್ಟಿದವನು ಉತ್ತಮ ಕುಲಜನಾಗಿದ್ದರೆ, ಅವನು ರಾಕ್ಷಸ ಕುಲದೊಳಗೆ ಬದುಕಬಾರದು. ಬ್ರಹ್ಮವೇತ್ತರ ಕುಲದಲ್ಲಿಯೇ ಬದುಕಬೇಕು. ಅವನು ಯೋಗಿಗಳ, ಸಾಧು ಸತ್ಪುರುಷರ, ಋಷಿ ಮುನಿಗಳ ಕುಲದ ಒಳಗೇ ಬದುಕಬೇಕು. ಅವರು ಉಪದೇಶಿಸಿದ ಮಾರ್ಗದಲ್ಲಿಯೇ ನಡೆಯಬೇಕು. ತನ್ನ ಹುಟ್ಟಿನ ನೆಲೆಯಾದ ಬ್ರಹ್ಮವನ್ನು ಅರಿಯಬೇಕು. ಬ್ರಹ್ಮವನ್ನು ಅರಿಯದಿದ್ದರೆ, ಹಾದಿಯಲ್ಲಿ ಎಡವಿ ಬಿದ್ದು ಸತ್ತ ರೀತಿಯಾಗುತ್ತದೆ.

ಜಾತಿ ಭೇದವೆಣಿಸಿ, ಜನ್ಮಗಳ ತಿಳಿವುದು.
ಮುಕ್ತಿಗಾಣದಿಹರು ಮೂರ್ಖ ಜನರು.





ಜಾತಿ ಎಣಿಕೆ ಏಕೆ ? ಜನ್ಮಗಳ ತಿಳಿವುದು.
ವಿಶ್ವದಾಭಿರಾಮ ಕೇಳು ವೇಮ.

ಪೂರ್ವ ಜನ್ಮದಲ್ಲಿ ತಾನು ಮಾಡಿದ ಕರ್ಮ ಸಂಸ್ಕಾರಗಳ ಫಲ ಭೋಗಿಸಲು ಪ್ರಸ್ತುತ ಜನ್ಮವಿದೆ. ಪೂರ್ವ ಜನ್ಮಗಳ ಸಂಸ್ಕಾರ ಭೋಗವು ಪ್ರಸ್ತುತ ಜಾತಿ ಭೇದಗಳನ್ನು ಅವಲಂಬಿಸಿಲ್ಲ. ಪುರುಷನ ರೇತಸ್ಸು ಹಾಗೂ ಸ್ತ್ರೀಯ ಶೋಣಿತದಿಂದ ಗರ್ಭ ಪಿಂಡವು ಉತ್ಪತ್ತಿಯಾಗುತ್ತದೆ. ಅದರಿಂದ ಭೌತಿಕ ಶರೀರ ನಿರ್ಧಾರವಾಗುತ್ತದೆ. ಅಂಗ ಸೌಷ್ಟವ, ರೋಗ ಬಾಧೆಗಳು ಈ ಶರೀರದಿಂದ ಉಂಟಾಗಬಹುದು. ಮೈಬಣ್ಣ, ಮುಖದ ಅಂದ ಚೆಂದಗಳೂ ಸಹ ಈ ಪಿಂಡವನ್ನು ಅನುಸರಿಸಬಹುದು. ಆದರೆ, ಪೂರ್ವ ಜನ್ಮದ ದೇಹ ತೊರೆದು ಹೋದ ಸೂಕ್ಷ್ಮ ದೇಹವು ಪ್ರತ್ಯೇಕವಾಗಿರುತ್ತದೆ. ಅದಕ್ಕೆ ಈ ತಾಯಿ ತಂದೆಗಳ ರೇತಸ್ಸು ಶೋಣಿತಗಳಿಂದಾದ ಪಿಂಡಕ್ಕೂ ಯಾವುದೇ ನೇರ ಸಂಬಂಧವಿರದು. ಒಬ್ಬ ಜೀವಾತ್ಮನ ಆಧ್ಯಾತ್ಮಿಕ ಸ್ತರವನ್ನು ನಿರ್ಧರಿಸುವುದು ಗರ್ಭ ಪಿಂಡದೊಂದಿಗೆ ಬಂದು ಸೇರಿಕೊಳ್ಳುವ ಜೀವಾತ್ಮನೇ ಹೊರತು ಗರ್ಭಪಿಂಡವಲ್ಲ. ಇದುವೇ ಜನ್ಮ ರಹಸ್ಯ. ಈ ಜನ್ಮ ರಹಸ್ಯವನ್ನು ತಿಳಿಯದೆ ಯೋನಿಜ ಪಿಂಡದಿಂದಾಗುವ ಶರೀರಕ್ಕೆ ಅಂಟಿಸುವ ಜಾತಿ ಜಾತಿಗಳಲ್ಲಿ ಭೇದ ಭಾವವೇಕೆ ? ಹೀಗೆ, ಅಧ್ಯಾತ್ಮಿಕ ಮಟ್ಟವನ್ನು ಗುರುತಿಸದೆ ಮೂರ್ಖ ಜನರು, ಸಜ್ಜನರನ್ನು, ಸಾಧು ಸಂತರನ್ನು, ಯೋಗಿಗಳನ್ನು ಹೀನ ಜಾತಿಯವರೆಂದು ಉಪೇಕ್ಷಿಸಿ, ತಾವೂ ಮುಕ್ತಿ ಪಡೆಯದಾಗಿದ್ದಾರೆ. ಆದ್ದರಿಂದ ಜಾತಿ ಎಣಿಕೆ ಏಕೆ ? ನಿಜವಾಗಿ ತಿಳಿಯಬೇಕಾಗಿರುವುದು ಜನ್ಮ ಕ್ರಮ.

ಜಾತಿ ಬೇರೆ ಇಲ್ಲ ; ಜನ್ಮ ಕ್ರಮ ಹಿಡಿದು,
ನೆಮ್ಮದಿಯಲಿ ಅಭವನ ನಿಲಿಸಿ ಇರಲು,
ಅಖಿಲ ಜನರ ಮಧ್ಯೆ ಅವನೆ ಘನನು ಅಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಮೇಲೆ ವಿವರಿಸಿದ ಜನ್ಮ ಕ್ರಮವನ್ನು ಹಿಡಿದು, ನೆಮ್ಮದಿಯಿಂದ ಬ್ರಹ್ಮ ಸಾಧನೆ ಮಾಡಿ, ಅಭವನನ್ನು (ಸೃಷ್ಟಿ ಪೂರ್ವದ ಬ್ರಾಹ್ಮೀ ಸ್ಥಿತಿ) ನಿಲ್ಲಿಸಿಕೊಂಡಾಗ, ಸರ್ವ ಜನರ ಮಧ್ಯೆ ಆ ಸಿದ್ಧ ಪುರುಷನೇ ಘನನಯ್ಯ !

ಉಚ್ಚೆಯೊಳುದಿಸಿದ ತನುವಿದು
ಕೊಚ್ಚಿ ತೊರೆದು ಕುಲವ, ಮತ್ತೆ ವಿಜ್ಞಾನದೋಳ್,
ಕುಚ್ಚಿತವ ತೊರೆದು, ಸತ್ತ್ವವ,
ಅಚ್ಚೊತ್ತಿ ನಿಲ್ಲಿಸುವವನೆ, ಅಧಿಕನು, ವೇಮಾ.

ಮೂತ್ರ ದ್ವಾರವಾದ ಯೋನಿಯಿಂದ ಈ ಸ್ಥೂಲ ತನುವು ಉದಿಸಿದೆ. ಇದಕ್ಕೆ ಜಗದ ಜನರು ಜಾತಿ ಕುಲಗಳನ್ನು ಅಂಟಿಸಿದ್ದಾರೆ. ಭೇದ ಬುದ್ಧಿಯನ್ನು ಬೆಳೆಸಿದ್ದಾರೆ. ಮೊದಲು ಈ ಜಾತಿ ಕುಲಗಳ ಭೇದ ಭಾವವನ್ನು ಕೊಚ್ಚಿ ತಗೆಯಬೇಕು. ಮುಂದೆ ಚೆನ್ನಾಗಿ ವಿವೇಚಿಸಿ ಮೇಲು ಕೀಳಿನ ಕ್ಷುದ್ರ ಭಾವನೆಯನ್ನು ತೊರೆದು, ಸತ್ತ್ವವನ್ನು ಅಂದರೆ ನಿಜವಾದ ಅರಿವನ್ನು ಸ್ಥಾಯಿಯಾಗಿ ನಿಲ್ಲಿಸುವವನೇ ಅಧಿಕನೆನಿಸುತ್ತಾನೆ. ಶ್ರೇಷ್ಠನೆನಿಸುತ್ತಾನೆ.

ಬಾಯಿ ಯೋನಿಯವನ ಬಣ್ಣಿಸುವುದು ದೋಷ.
ಹೃದಯ ಯೋನಿಯವನ ಎಣಿಪುದಂತೆ.
ಮುಕುಟ ಯೋನಿಯವನ ಮತ್ತೆ ಎಣಿಸೆ ಪಾಪ.
ವಿಶ್ವದಾಭಿರಾಮ ಕೇಳು ವೇಮ.

ಲೋಕಗಳ ಅಭಿವೃದ್ಧಿಗಾಗಿ ಬ್ರಹ್ಮನು ತನ್ನ ಮುಖದಿಂದ ಬ್ರಾಹ್ಮಣನನ್ನೂ, ಭುಜದಿಂದ ಕ್ಷತ್ರಿಯನನ್ನು ತೊಡೆಯಿಂದ ವೈಶ್ಯನನ್ನೂ, ಪಾದದಿಂದ ಶೂದ್ರನನ್ನೂ ನಿರ್ಮಿಸಿದನು (ಮನುಸ್ಮೃತಿ 1-31) ಎಂದು ಹೇಳಲಾಗಿದೆ. ಈ ಭಾವದ ಮಂತ್ರವನ್ನು ಋಗ್ವೇದದ ಪುರುಷ ಸೂಕ್ತದಲ್ಲಿಯೂ ಸೇರಿಸಲಾಗಿದೆ. ಆದ್ದರಿಂದಲೇ ವೇಮನರು, ಬಾಯಿ ಯೋನಿಯಿರುವ ಬ್ರಹ್ಮನನ್ನು ಬಣ್ಣಿಸುವುದು ದೋಷವೆನ್ನುತ್ತಾರೆ. ಅದೇ ರೀತಿ, ವಿಷ್ಣುವಿನ ಹೃದಯ ಕಮಲದಲ್ಲಿ ಬ್ರಹ್ಮನು ಹುಟ್ಟಿದನೆಂದೂ, ಶಿವನ ಮುಕುಟದಲ್ಲಿ ಗಂಗೆಯು ಹುಟ್ಟಿದಳೆಂದೂ ಪುರಾಣಗಳಲ್ಲಿ ಹೇಳುತ್ತಾರೆ. ಆದ್ದರಿಂದ ಹೃದಯ ಯೋನಿಯುಳ್ಳ ವಿಷ್ಣುವನ್ನಾಗಲಿ, ಮುಕುಟ ಯೋನಿಯುಳ್ಳ ಶಿವನನ್ನಾಗಲಿ ಎಣಿಕೆ ಮಾಡುವುದೇ ಪಾಪ ಎನ್ನುತ್ತಾರೆ. ವೇಮನ ಮಥಿತಾರ್ಥವಿಷ್ಟೇ. ಪುರಾಣ ಕಲ್ಪಿತ, ವೇದ ಕಲ್ಪಿತ ಕಥೆಗಳಿಂದ, ಜಾತಿ-ಕುಲಗಳ ಮೇಲು ಕೀಳು ಭಾವನೆಯನ್ನು ಹಬ್ಬಿಸುವುದೇ ಪಾಪ.

ಈ ಪ್ರಸಂಗದಲ್ಲಿ ಯಾವ ಜಾತಿಯವಳ ಯೋನಿಯಲ್ಲಿ ಯಾವ ಜಾತಿಯವನ ವೀರ್ಯವು ಸೇರುವುದೋ, ಅದರಿಂದ ಹುಟ್ಟುವ ಪಿಂಡಕ್ಕೆ ಯಾವ ಜಾತಿಯನ್ನು ಅಂಟಿಸಬೇಕು ? ಎಂಬುದನ್ನು ಬ್ರಹ್ಮನ ಸೃಷ್ಟಿಯಾದ ವಿರಾಟ್ ಪುರುಷನಿಂದ ನಿರ್ಮಿತವಾದ ಸ್ವಾಯಂಭುವ ಮನು ಎಂದು ಹೇಳಿಕೊಂಡ ಮನು ಸ್ಮೃತಿಯಲ್ಲಿ ಹೇಳಿದ್ದಾರೆ. ಇದು ನೂರೆಂಟು ಜಾತಿ, ಮೇಲು ಕೀಳು ಭಾವ, ಅವರಿಗೆ ವಿಧಿಸುವ ಕೀಳು ಕರ್ಮಗಳಿಗೆ ಅನ್ವಯವಾಗುತ್ತದೆ. (ಮನುಸ್ಮೃತಿಯ 10 ನೇ ಅಧ್ಯಾಯ ನೋಡಿರಿ) ಈಗ ಕೃಷ್ಣನ ಜಾತಿಯಾದ ಅಭೀರ (ಗೊಲ್ಲ) ಹಾಗೂ ವ್ಯಾಸನ ಜಾತಿಯಾದ ಅಂಬಿಗರ ಬಗ್ಗೆ ಯೋಚಿಸುವಾ : "ಬ್ರಾಹ್ಮಣನು ವೈಶ್ಯ ಕನ್ನೆಯನ್ನು ಸಂಪರ್ಕ ಮಾಡಿ, ಅವಳಲ್ಲಿ ಮಗನನ್ನು ಪಡೆದರೆ, ಆ ಮಗನಿಗೆ 'ಅಂಬಷ್ಠ'ನೆನ್ನುತ್ತಾರೆ. ಬ್ರಾಹ್ಮಣನಿಗೆ ಅಂಬಷ್ಠೆಯಲ್ಲಿ ಹುಟ್ಟಿದವನು ಅಭೀರ (ಗೊಲ್ಲ) (ಮನುಸ್ಮೃತಿ 10-15) ಎನಿಸುತ್ತಾನೆ. ಹೀಗೆ ಕೃಷ್ಣನು ಅನುಲೋಮ ವಿವಾಹದ ಪಿಂಡ ಎಂದಂತಾಯಿತು. ಇನ್ನು ವೇದಗಳನ್ನು ಸಂಕಲನ ಮಾಡಿದ ವೇದ ವ್ಯಾಸರು ಅಂಬಿಗ ಕುಲದ ಮತ್ಸ್ಯಗಂಧಿಯ ಯೋನಿಯಲ್ಲಿ ಪರಾಶರ ಮಹರ್ಷಿಯ ವೀರ್ಯದಿಂದ ಜನಿಸಿದ್ದಾರೆ. ಅಂಬಿಗ ಎಂದರೆ ಸೂತ. "ಕ್ಷತ್ರಿಯನಿಂದ ಬ್ರಾಹ್ಮಣಿಯಲ್ಲಿ ಹುಟ್ಟಿದವನು ಸೂತನು. (ಮ.ಸ್ಮೃ. 10-17) ಇದು ಪ್ರತಿ ಲೋಮ ವಿವಾಹವಾದುದರಿಂದ ಅಪಸದ ಅಂದರೆ ತಂದೆ ತಾಯಿಗಳಿಗೆ ಶ್ರಾದ್ಧಾದಿ ಮಾಡಲು ಅಧಿಕಾರವಿಲ್ಲದವರು. ಹಾಗಾಗಿ ಮನುಸ್ಮೃತಿಯ ಮೇರೆಗೆ, ಪ್ರತಿಲೋಮ ಜಾತಿಯವರು "ತಮ್ಮ ತಮ್ಮ ಜಾತಿಯ ಸ್ತ್ರೀಯರಲ್ಲಿ ಮಕ್ಕಳನ್ನು ಹುಟ್ಟಿಸುತ್ತಾರೆ. ಈ ಮಕ್ಕಳು ಆ ತಾಯಿಯ ಜಾತಿಯಲ್ಲೇ ಹುಟ್ಟುತ್ತವೆ. ಅದೇ ಪ್ರವರವನ್ನು ಹೊಂದುತ್ತಾರೆ. (ಮ.ಸ್ಮೃ. 10-28) ಹೀಗೆ ವೇದ ವ್ಯಾಸನು ಸೂತನಾಗಬೇಕಾಯಿತು. ಅವನು ವೇದ-ವೇದಾಂತಗಳ ಸಮರ್ಥ ವಕ್ತಾರ. ಗೀತೆಪುರಾಣಗಳ ಗ್ರಂಥಕರ್ತೃ. ಸಾಲದೆ ಮತ್ಸ್ಯ ಗಂಧಿಯ ಮಗನಾದ ಕಾರಣ, ಸೋದರ ಸಮನಾದ ಶಂತನುವಿನ ಪತ್ನಿಯರಾದ ಅಂಬೆ, ಅಂಬಾಲಿಕೆಯಯರಲ್ಲಿ ದೇಹ ಸಂಪರ್ಕ ಹೊಂದಿ, ಪಾಂಡು ಹಾಗೂ ಧೃತರಾಷ್ಟ್ರರನ್ನು ನಿಯೋಗ ಪುತ್ರರಾಗಿ ಪಡೆದನು. ಇದಕ್ಕೆ ಮೇಲು





ಕುಲದವರು ಏನೆನ್ನುತ್ತಾರೆ ?

ಇನ್ನು ಶೂದ್ರ ಸ್ತ್ರೀಯರಲ್ಲಿ ಬ್ರಾಹ್ಮಣನು ಹುಟ್ಟಿಸಿದ ಪಿಂಡಕ್ಕೆ ನಿಷಾದ ಎಂದಿದ್ದಾರೆ. (ಮ.ಸ್ಮೃ. 10-18) ನಿಷಾದ ಎಂದರೆ ಬೇಡ. ರಾಮಾಯಣದ ಕರ್ತೃ ವಾಲ್ಮೀಕಿಯೂ ಬೇಡ. ಇವನು ತಾನು ಬರೆದ ರಾಮಾಯಣದಲ್ಲಿ ತಪಸ್ಸು ಮಾಡುತ್ತಿದ್ದ ಕಾರಣ ಶೂದ್ರನೊಬ್ಬನನ್ನು ಕೊಲ್ಲಿಸಿದ್ದಾನೆ. ಇದು ಪಟ್ಟಭದ್ರರು ಸೇರಿಸಿದ ಪ್ರಕ್ಷಿಪ್ತ ಪ್ರಸಂಗವೇ ? ರಾಮನ ಗುರು ವಸಿಷ್ಠರು, ಸೂಳೆಯ ಮಗ. ಅವನ ಹೆಂಡತಿ ಅರುಂಧತಿ ಮಾದಿಗಳು. ಅವನು ಅದೆಂತು ಬ್ರಾಹ್ಮಣನೆನಿಸಿದನು?

ತನ್ನ ತಾಯಿ ಸೂಳೆ, ತನ್ನ ಸತಿ ಮಾದಿಗೆ,
ವರ ರಾಮನ ಗುರುವು ವಸಿಷ್ಠನರಿಯೆ,
ತಪದಿಂದ ದ್ವಿಜನು, ತರ್ಕಿಸೆ ಕುಲವೆಂತು ?
ವಿಶ್ವದಾಭಿರಾಮ ಕೇಳು ವೇಮ.

ಮಾತಂಗ ಮುನಿಯ ಸಂತತಿ
ಭೂತಲದಿ ಬ್ರಾಹ್ಮಣರಿಗೆ ಸರಿಸಮ ನಾನಾ
ಜಾತಿಗಳುದಿತವು, ಇವರೇ
ಖ್ಯಾತರು, ಈ ಧರಣಿ ಕೆಟ್ಟಿತಲ್ಲವೇ ? ವೇಮಾ.

ಮಾತಂಗ ಮಹರ್ಷಿಯ ಗೋತ್ರದವರು ಬ್ರಾಹ್ಮಣರು. ಹೀಗೆ ಅನೇಕ ಜಾತಿಗಳು ತಲೆ ಎತ್ತಿದವು. ಹೊಲತಿಯಾದ ಮಾತಂಗಿಯ ಯೋನಿಯಲ್ಲಿ ಜನಿಸಿದ ಮಾತಂಗ ಮುನಿಯ ಸಂತತಿಯವರೇ ಇಂದು ಈ ಭೂಮಿಯಲ್ಲಿ ಖ್ಯಾತರು. ಅವರು ಭೂಸುರರು ! ಅಂದ ಮೇಲೆ ಈ ಧರಣಿಯು ಕೆಟ್ಟು ಹೋಯಿತೆನ್ನೋಣವೇ ? ಇಲ್ಲ, ಇಲ್ಲ ಜಾತಿಯ ಮೇಲು ಕೀಳು ಭಾವನೆಯ ಪ್ರತಿಪಾದನೆಯಿಂದ ಜಗತ್ತು ಕೆಟ್ಟು ಹೋಗಿದೆಯಷ್ಟೇ.

ಜನುಮದಿಂದ ಯಾರು ಜಗದಿ ಹೊಲೆಯನಲ್ಲ.
ಮಾತು ಬದಲಿಸುವವ ಮತ್ತೆ ಹೊಲೆಯ !
ಹೊಲೆಯರೆಂದು ನರರ ಹೇಳುವವನೆ ಹೊಲೆಯ.
ವಿಶ್ವದಾಭಿರಾಮ ಕೇಳು ವೇಮ.

ಹೊಲೆಯನೆಂದು ಏಕೆ ಮಹಿಯಲ್ಲಿ ನಿಂದಿಪರೋ ?
ಮನಸು ನಿಲಿಸನೇನು ಮತ್ತೆ ಹೊಲೆಯ ?
ಮನಸು ನಿಲಿಸದವನು ಮತ್ತೆ ಕೀಳು ಹೊಲೆಯ.
ವಿಶ್ವದಾಭಿರಾಮ ಕೇಳು ವೇಮ.

ಜನ್ಮದಿಂದ ಯಾರೂ ಹೊಲೆಯರಲ್ಲ. ಅವರವರು ಮಾಡುವ ಕುಕರ್ಮಗಳಿಂದ, ಅವರು ಚಿಂತಿಸುವ ಕುವಿಚಾರಗಳಿಂದ ಅವರ ಶೀಲವು ಕೀಳಾಗುತ್ತದೆ. ಉದಾಹರಣೆಗೆ, ಯಾರು ಆಡಿದಂತೆ ನಡೆಯುವುದಿಲ್ಲವೋ, ಯಾರು ಮಾತು ಬದಲಿಸುತ್ತಾರೋ, ಅವರೇ ಹೊಲೆಯರು.

ಧರ್ಮ ಶಾಸ್ತ್ರಗಳಲ್ಲಿ ಸರ್ವರನ್ನು ಸಮಭಾವದಿಂದ ಕಾಣಬೇಕೆಂದು ಹೇಳಿದ್ದಾರೆ. ಆದರೆ, ಕೆಲವು ಸ್ಮೃತಿಕಾರರು ಜನ್ಮದಿಂದಲೇ ಭೇದ ಭಾವ ಕಲ್ಪಿಸುತ್ತಾರೆ. ಹೀಗೆ ಧರ್ಮ ಶಾಸ್ತ್ರಗಳ ಮಾತುಗಳನ್ನೇ ಅವರು ಬದಲಿಸುತ್ತಾರೆ. ಹಾಗಾಗಿ, ಅವರು ಹೊಲೆತನಕ್ಕೆ ಭಾಜನರು. ಹೀಗೆ, ಜನರನ್ನು ಅವರ ಜನ್ಮದಿಂದ ಹೊಲೆಯ ಎಂದು ಕರೆಯುವವರೇ ನಿಜವಾಗಿ ಹೊಲೆಯರಾಗಿದ್ದಾರೆ.

ಈ ಭೂಮಿಯ ಮೇಲೆ, ಉಚ್ಚ ವರ್ಣೀಯರೆಂದು ಜಂಭ ಪಡುವವರು ಯಾರನ್ನು ಹೊಲೆಯರೆಂದು ನಿಂದಿಸುವರೋ, ಅವರಲ್ಲಿ ಅನೇಕರು ಋಷಿ ಮುನಿಗಳಾಗಿದ್ದಾರೆ. ವಿಜ್ಞಾನಿಗಳಾಗಿದ್ದಾರೆ. ಕಾಯಿದೆ ಪಂಡಿತರಾಗಿದ್ದಾರೆ. ಮನಸ್ಸು ನಿಲ್ಲಿಸದೆ ಹೇಗೆ ಮುನಿಗಳಾದಾರು? ಅಂದ ಮೇಲೆ, ಹೊಲೆಯರೆನಿಸುವವರು ಮನಸ್ಸು ನಿಲಿಸಲಾರರೇನು ? ಯಾವನೇ ಇರಲಿ, ಮನಸ್ಸು ನಿಲ್ಲಿಸಲಾರದವನನ್ನು ಕೀಳು ಮನಷ್ಯನೆನ್ನಬಹುದು ; ಹೊಲೆಯನೆನ್ನಬಹುದು.

ಗೀತೆಯಲ್ಲಿ ಕೃಷ್ಣನು ಪಂಡಿತನಿಗಿರಬೇಕಾದ ಸಮದೃಷ್ಟಿಯನ್ನು ತಿಳಿಸುತ್ತ, "ವಿದ್ಯಾ ವಿನಯ ಸಂಪನ್ನನಾದ ಬ್ರಾಹ್ಮಣ, ಗೋವು, ಆನೆ, ನಾಯಿ, ಮತ್ತೆ ನಾಯಿಯ ಮಾಂಸ ತಿನ್ನುವವನು ಇವರೆಲ್ಲರಲ್ಲಿಯೂ ಜ್ಞಾನಿಗಳು ಸಮದರ್ಶಿಗಳಾಗಿರುವರು'' (ಭ.ಗೀ. 5-12) ಎಂದಿದ್ದಾನೆ. ಅಂದ ಮೇಲೆ ಬೇರೆ ಬೇರೆ ಯೋನಿಗಳಲ್ಲಿ ಜನ್ಮ ತಾಳುವುದರಲ್ಲಿ ಮೇಲು ಕೀಳು ಭಾವ ಹೊಂದುವವರು ಅಜ್ಞಾನಿಗಳೇ ಸರಿ. ಶ್ರೀ ಕೃಷ್ಣನು ಇನ್ನೂ ಮುಂದೆ, "ಪಾಪ ಯೋನಿಯಲ್ಲಿ ಹುಟ್ಟಿದವರೆಂದು (ಪುರೋಹಿತರು) ಕರೆದ ಸ್ತ್ರೀಯರು, ವೈಶ್ಯರು ಮತ್ತು ಶೂದ್ರರು ಸಹ, ನನ್ನನ್ನು ಆಶ್ರಯಿಸಿ ಪರಮಗತಿಯನ್ನು ಹೊಂದುತ್ತಾರೆ'' (ಭ.ಗೀ. 9-31).

ಅವರಿವರೆನ್ನುವುದೇಕೆ ? ನಿಜವಾದ ಜ್ಞಾನಿಗಳೆಲ್ಲ ಏಕ ಕಂಠದಿಂದ ಜಾತಿ-ಭೇದ, ಕುಲಭೇದಗಳ ಕುಕಲ್ಪನೆಗಳನ್ನು ಪೂತ್ಕರಿಸಿದ್ದಾರೆ. ಆದ್ದರಿಂದಲೇ ಮಹಾಯೋಗಿ ವೇಮನರು ಕುಲ ಜಾತಿಗಳ ಬಂಧನದಿಂದ ಹೊರಬೀಳಲು ಬೋಧಿಸಿದ್ದಾರೆ. ಸರ್ವರೂ ಒಂದಾಗಿ ಭೇದ ಭಾವ ತೊರೆದು ಬಾಳುವಂತೆ ಅವರು ಪ್ರತಿಪಾದಿಸಿದ್ದಾರೆ.

ವರ ಬ್ರಹ್ಮಾಂಡದಿ ಪರಿಕಿಸಿ ನೋಡಿದೊಡೆ,
ಒಟ್ಟು ಕುಲಗಳಿಗೆ ಒಂದೆ ಹುಟ್ಟು.
ಅಖಿಲರೊಟ್ಟು ಗೊಡೆ, ಅಣ್ಣ ತಮ್ಮರಿಹರು.
ವಿಶ್ವದಾಭಿರಾಮ ಕೇಳು ವೇಮ.

ಈ ಬ್ರಹ್ಮಾಂಡದಲ್ಲೆಲ್ಲ ಪರಿಕಿಸಿ ನೋಡಿದರೆ, ನಮಗೆ ಗೊತ್ತಾಗುವ ಸತ್ಯವೆಂದರೆ, ಜಾತಿ ಭೇದದವರು ಏನನ್ನೇ ಗಳಪಲಿ, ಎಲ್ಲ ಕುಲದವರ ಹುಟ್ಟು ಒಂದೇ ಬಗೆಯಲ್ಲಿದೆ. ಎಲ್ಲರೂ ಸ್ತ್ರೀ ಯೋನಿಯಲ್ಲಿ ಪುರುಷ ವೀರ್ಯದಿಂದ ಗರ್ಭ ಪಿಂಡವಾಗಿ ಹುಟ್ಟುತ್ತಾರೆ. ಯಾರೊಬ್ಬರೂ ಬಾಯಿ ಯೋನಿಯಿಂದ, ಬಾಹು ಯೋನಿಯಿಂದ, ತೊಡೆ ಯೋನಿಯಿಂದ ಇಲ್ಲವೆ ಪಾದ ಯೋನಿಯಿಂದ ಹುಟ್ಟುವುದಿಲ್ಲ. ಯಾರೊಬ್ಬರೂ ಕಪ್ಪೆ ಯೋನಿಯಿಂದ ಇಲ್ಲವೆ ಶಿಲೆಯ ಯೋನಿಯಿಂದ ಹುಟ್ಟುವುದಿಲ್ಲ. ಇವೆಲ್ಲ ಜನರಲ್ಲಿ ಅಂಧ ಶ್ರದ್ಧೆ ಹುಟ್ಟಿಸಿ ಅವರನ್ನು ಧಾರ್ಮಿಕ ಶೋಷಣೆಗೆ ಬಲಿಗೊಳಿಸುವ ಕುಕಲ್ಪನೆಗಳಷ್ಟೇ. ಎಲ್ಲರಿಗೂ ಒಂದೇ ಬಗೆಯ ಹುಟ್ಟು ಇರುವುದರಿಂದ ಎಲ್ಲರೂ ಅಣ್ಣ ತಮ್ಮಂದಿರು.





ಒಬ್ಬ ಬ್ರಾಹ್ಮಣನು ಶೂದ್ರನಾಗಬೇಕಾದರೆ, ಏಳು ತಲೆಮಾರು ಗತಿಸಬೇಕು. ಅಂದರೆ ಶೂದ್ರ ಸ್ತ್ರೀಯಲ್ಲಿ ಬ್ರಾಹ್ಮಣನಿಂದ ಹುಟ್ಟಿದವನು. ಪಾರಶವ ಬ್ರಾಹ್ಮಣನಾಗುತ್ತಾನೆ. ಈ ಪಾರಶವ ಬ್ರಾಹ್ಮಣನು ಮತ್ತೆ ಶೂದ್ರ ಸ್ತ್ರೀಯರಲ್ಲಿ ಮಗನನ್ನು ಪಡೆದರೆ, ಈ ಮಗನು ಮತ್ತೆ ಶೂದ್ರ ಸ್ತ್ರೀಯಲ್ಲಿ ಮಗನನ್ನು ಪಡೆದರೆ ಹೀಗೆ ಏಳು ತಲೆಗಳ ವರೆಗೆ ನಡೆದರೆ, ಆ ಏಳನೇ ತಲೆಯವನು ಪಾರಶವ ಎನಿಸದೆ ಶೂದ್ರನೆನಿಸುತ್ತಾನೆ. ಇನ್ನು ಶೂದ್ರ ಜಾತಿಯು ಬ್ರಾಹ್ಮಣ ಜಾತಿಯಾಗುವುದು ಹೇಗೆ ? ಎಂದು ನೋಡುವಾ : "ಶೂದ್ರ ಸ್ತ್ರೀಯಲ್ಲಿ ಬ್ರಾಹ್ಮಣನಿಂದ ಹುಟ್ಟಿದ ಪಾರಶವ ಜಾತಿಯ ಸ್ತ್ರೀಯು ಬ್ರಾಹ್ಮಣನಿಂದ ಮಗಳನ್ನು ಪಡೆದರೆ, ಆ ಮಗಳು ಮತ್ತು ಬ್ರಾಹ್ಮಣನಿಂದಲೇ ಪುತ್ರಿಯನ್ನು ಪಡೆದರೆ, ಹೀಗೆ ಏಳು ತಲೆಮಾರಿನ ತನಕ ಬ್ರಾಹ್ಮಣ ಸಂಪರ್ಕದಿಂದಲೇ ಇದ್ದರೆ, ಆ ಜಾತಿಯು ಉತ್ತಮವಾದ ಬ್ರಾಹ್ಮಣತ್ವವನ್ನು ಪಡೆಯುತ್ತದೆ'' (ಮ.ಸ್ಮೃ. 10-64).

'ಕ್ಷತ್ರಿಯ,ವೈಶ್ಯ, ಶೂದ್ರ ಈ ಮೂರು ಜಾತಿಗಳಲ್ಲಿ ಕ್ಷತ್ರಿಯ ಹಾಗೂ ವೈಶ್ಯ ಸ್ತ್ರೀಯ ಜತೆ ಬ್ರಾಹ್ಮಣನು ಶರೀರ ಸಂಪರ್ಕ ಮಾಡಿದರೆ, ಹುಟ್ಟುವ ಪುತ್ರನು ಸಂಸ್ಕಾರಕ್ಕೆ ಅರ್ಹನಾಗುತ್ತಾನೆ. ಆದರೆ ಕ್ಷತ್ರಿಯನಿಂದ ಬ್ರಾಹ್ಮಣೆಯಲ್ಲಿ, ವೈಶ್ಯನಿಂದ ಕ್ಷತ್ರಿಯಳಲ್ಲಿ ಜನಿಸಿದ ಪ್ರತಿಲೋಮ ಜಾತಿಯವರು ನಿಕೃಷ್ಟರು. (ಮ.ಸ್ಮೃ. 10-28).

ಹೀಗೆ ಬ್ರಾಹ್ಮಣನು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಕನ್ಯೆಯರೊಂದಿಗೆ ದೇಹ ಸಂಪರ್ಕ ಹೊಂದಿ ಸಂತಾನ ಪಡೆಯಬಹುದು. ಇವರಲ್ಲಿ ಬ್ರಾಹ್ಮಣ ಸ್ತ್ರೀಯ ಮಕ್ಕಳಂತೂ ಬ್ರಾಹ್ಮಣರೇ ಆಗುತ್ತಾರೆ. ಕ್ಷತ್ರಿಯ ಮತ್ತು ವೈಶ್ಯ ಸ್ತ್ರೀಯ ಮಕ್ಕಳೂ ಸಹ ಸಂಸ್ಕಾರದ ಆರ್ಹತೆ ಪಡೆಯುತ್ತಾರೆ. ಶೂದ್ರ ಸ್ತ್ರೀಯ ಮಕ್ಕಳು ಸಹ ಏಳು ತಲೆಮಾರಿನ ನಂತರ ಬ್ರಾಹ್ಮಣ ಜಾತಿಗೆ ಸೇರುತ್ತಾರೆ. ಹೀಗೆ ಬ್ರಾಹ್ಮಣ ಜಾತಿ ಬೆಳೆಯುತ್ತ ಹೋಗುತ್ತದೆ. ಇದನ್ನು ಆಧರಿಸಿಯೇ ಆದಿ ಶಂಕರಾಚಾರ್ಯರು ಸಹಸ್ರಾರು ಬೆಸ್ತರನ್ನು ಬ್ರಾಹ್ಮಣರಾಗಿ ಪರಿವರ್ತಿಸಿದ್ದಾರೆಂದು ತಿಳಿದು ಬರುತ್ತದೆ. ಇದು ಸ್ಮೃತಿಯ ವಿಚಾರಧಾರೆ. ಜಾತಿ ಬ್ರಾಹ್ಮಣರ ವಿಚಾರ ಧಾರೆ.

ವೈದಿಕ ಯುಗದಲ್ಲಿ ಸ್ತ್ರೀಯರಿಗೆ ಸಂಸ್ಕಾರದ ಅಧಿಕಾರವಿತ್ತು. ಅಧ್ಯಯನದ ಅವಕಾಶವಿತ್ತು. ಗಾರ್ಗಿ, ಮೈತ್ರೇಯಿಯರು ಉಪನಿಷತ್ಕಾಲದಲ್ಲಿ ಬ್ರಹ್ಮವಾದಿನಿಯರಾಗಿದ್ದರು. ಆಸ್ತಿಯ ಒಡತಿಯರೂ ಆಗಿರುತ್ತಿದ್ದರು. ಇತ್ತ ಶೂದ್ರರಿಗೆ ಯಜ್ಞೋಪವೀತ ಧಾರಣೆಯ ಅಧಿಕಾರವೂ ಇಲ್ಲ. ಅದರಿಂದಾಗಿ ವೇದ ಪಾಠಕ್ಕೆ ಅನರ್ಹರಾದರು. ಅವರಿಗೆ ತಪಸ್ಸಿನ ಅಧಿಕಾರವೂ ಇರಲಿಲ್ಲ. ಆಸ್ತಿಯ ಒಡೆತನದ ಮಾತಂತೂ ದೂರವೇ ಉಳಿಯಿತು. ಸ್ತ್ರೀಯರಿಗೆ ಮೂಗಿಗೆ ತುಪ್ಪ ಹಚ್ಚಿದಂತೆ ಕೆಲ ಒಳ್ಳೆಯ ಮಾತು ಹೇಳಿ ಅವರ ಧಾರ್ಮಿಕ ಅಧಿಕಾರವನ್ನೂ, ಆಸ್ತಿ ಹೊಂದುವ ಹಕ್ಕನ್ನೂ ಕಸಿದುಕೊಂಡು, ಅವರನ್ನೂ ಶೂದ್ರ ಸಮಾನ ಮಾಡಿದರು.

ತಾತ ಹೆತ್ತ ತಾಯಿ, ತನ್ನ ತಂದೆಯ ತಾಯಿ,
ತನ್ನ ಹೆತ್ತ ತಾಯಿ, ತಾಯಿ-ತಾಯಿ,
ತಾಯಿ ಶೂದ್ರಳಿರಲು ತಾನೆಂತು ಬ್ರಾಹ್ಮಣ ?
ವಿಶ್ವದಾಭಿರಾಮ ಕೇಳು ವೇಮ.

ದಾರ ಕೊರಳ ಸುತ್ತಿ ತನ್ನ ಶೂದ್ರತ್ವವು
ಬಿಟ್ಟಿತೆಂಬುದೆಲ್ಲ ಬುದ್ಧಿಗೇಡು.
ಹೊಳೆಯೆ ಬುದ್ಧಿಗದನೆ ಹೊಂದಿ ಸುಖಿಸಬಹುದು.
ವಿಶ್ವದಾಭಿರಾಮ ಕೇಳು ವೇಮ.

ತನ್ನ ತಾಯಿ, ತನ್ನ ತಾಯಿಯ ತಾಯಿ, ತನ್ನ ತಂದೆಯ ತಾಯಿ, ತನ್ನ ತಾತನನ್ನು ಹೆತ್ತ ತಾಯಿ ಹೀಗೆ ತಲೆತಲಾಂತರದಿಂದ ತಾಯಿ ಸಂತತಿಯೇ ಶೂದ್ರಳಾಗಿರುವಾಗ ತಾನು ಹೇಗೆ ಬ್ರಾಹ್ಮಣನಾಗುತ್ತಾನೆ? ಜನ್ಮದಿಂದ ಬ್ರಾಹ್ಮಣತ್ವ ಬರುವುದಾದರೆ ಗರ್ಭ ಪಿಂಡದಲ್ಲಿ ತಾಯಿಯ ಶೋಣಿತವೂ ಮಾಂಸಾದಿಗಳೂ ಇವೆಯಲ್ಲವೇ ?

ತಾನು ಪುರುಷನಾದುದರಿಂದ ಸಂಸ್ಕಾರದ ಅಧಿಕಾರ ಸಾಧಿಸಿ ಯಜ್ಞೋಪವೀತ (ಜನಿವಾರ) ಧರಿಸಿ ತನ್ನ 'ಶೂದ್ರತ್ವವು ಹೋಯಿತು' ಎಂದರೆ ಅದೆಲ್ಲ ಬುದ್ಧಿಗೇಡಿ ತನವಾಗದೇ ?"ಬ್ರಹ್ಮಂ ವಿಜಾನಾತಿ ಇತಿ ಬ್ರಾಹ್ಮಣಃ". ಅಂದರೆ ಬ್ರಹ್ಮವನ್ನು ಅರಿತವನೇ ಬ್ರಾಹ್ಮಣನಾಗುತ್ತಾನೆ. ಆದ್ದರಿಂದ ಕೊರಳ ದಾರದ ಗೊಡವೆಗೆ ಹೋಗದೆ, ಧ್ಯಾನ ಮಾಡಿ ಬ್ರಹ್ಮವನ್ನು ಅರಿ. ಅದು ಅಗ್ರ್ಯ ಬುದ್ಧಿಗೆ ಹೊಳೆಯಲು, ಅದನ್ನು ಹೊಂದಿ ಸುಖಿಸಬಹುದು.

ಶೂದ್ರರಲ್ಲಿ ಹುಟ್ಟಿ, ಶೂದ್ರರನು ನಿಂದಿಸಿ,
ದ್ವಿಜನು ಎಂಬ ಹೆಸರು ನಿಜವ ಮಾಡಿ,
ಮನಸು ನಿಲಿಸದಿರಲು ; ಮನದಿ ಅಧಿಕ ಶೂದ್ರ.
ವಿಶ್ವದಾಭಿರಾಮ ಕೇಳು ವೇಮ.

'ಜನ್ಮನಾ ಜಾಯತೇ ಶೂದ್ರಃ, ಸಂಸ್ಕಾರಾತ್ ದ್ವಿಜ ಉಚ್ಯತೇ
ವೇದ ಪಾಠಾತ್ ಭವತಿ ವಿಪ್ರಃ, ಬ್ರಹ್ಮಂ ವಿಜಾನಾತಿ ಇತಿ ಬ್ರಾಹ್ಮಣಃ.

ಅಂದರೆ, ಎಲ್ಲರೂ ಶೂದ್ರರಾಗಿಯೇ ಹುಟ್ಟುತ್ತಾರೆ. (ಶೋಚತಿ ಇತಿ ಶೂದ್ರಃ). ಇವರಿಗೆ ಐಹಿಕ ಬಂಧನದ ಶೋಕದಿಂದ ಪಾರುಗಾಣಿಸಲು, ಬ್ರಹ್ಮೋಪದೇಶ ನೀಡಿ, ಸಂಸ್ಕಾರ ಮಾಡುತ್ತಾರೆ. ಯಜ್ಞೋಪವೀತ ಕಟ್ಟುತ್ತಾರೆ. ಆಗ ಅದು ಅವನ ದ್ವಿತೀಯ ಜನ್ಮವಾದಂತೆ. ಅವನು ದ್ವಿಜನೆನಿಸುತ್ತಾನೆ. ಆದರೆ ಈ ಜನಿವಾರ ಧಾರಣೆಯಲ್ಲಿಯೇ ಒಣ ಹೆಮ್ಮೆ ತಾಳಿ, ಬ್ರಹ್ಮ ಸಾಧನೆಗಿಳಿಯದಿದ್ದರೆ, ಅದಕ್ಕಾಗಿ ಮನಸ್ಸನ್ನು ನಿಲ್ಲಿಸದಿದ್ದರೆ, ಅವನು ಮನದಲ್ಲಿ ಶೂದ್ರರಿಗಿಂತ ಹೆಚ್ಚಿನ ಶೂದ್ರನೆನಿಸುತ್ತಾನೆ.

ಋಷಿ ಕುಲದಲಿ ತಾವು ರೂಢಿಯಿಂದ ಜನಿಸಿ,
ಕುಲವ ಗೋತ್ರಗಳನು ಕಾಯ್ದು ವಂಶ.
ಬ್ರಹ್ಮ ಕುಲವಾಗದೆ ಬ್ರಾಹ್ಮಣೆಂತಾಗುವ ?
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ರೂಢಿಯಿಂದ ಋಷಿಯ ಕುಲದಲ್ಲಿ ಜನಿಸಬಹುದು. ಅಷ್ಟು ಮಾತ್ರಕ್ಕೆ ಆ ಋಷಿಯು ವಾಸವಾಗಿದ್ದ ಗೋತ್ರ (ಗುಡ್ಡ) ವನ್ನೂ ತನ್ನ ವಂಶಾವಳಿಯನ್ನೂ ಸ್ಮರಣೆಯಲ್ಲಿ





ಕಾಯ್ದುಕೊಂಡು, ಅದನ್ನೇ ಹೇಳುತ್ತ, ನಾನು ವಿಶ್ವಾಮಿತ್ರ ಗೋತ್ರದವನು, ನಾನು ಭಾರಧ್ವಾಜ ಗೋತ್ರದವನು ಎಂದು ಹೇಳುತ್ತ, ಒಣ ಹೆಮ್ಮೆ ಪಟ್ಟರೆ ಏನು ಬಂತು ? ತಾನು ಬ್ರಹ್ಮವಿದರ ಕುಲದಲ್ಲಿ ಸೇರಿ ಬ್ರಹ್ಮಕುಲವಾಗದೆ, ತಾನೆಂತು ಬ್ರಾಹ್ಮಣವಾಗುವನು ?

ಶೂದ್ರಯುವತಿ ಸುತಗಿದೆ ಶುದ್ಧಾಂತರಂಗ
ವೇದವಿದ್ಯೆ ಮೂಲವರಿಯಲಾಗ,
ಬೊಮ್ಮ ಪದವಿ ಹೊಂದಿ ಬ್ರಾಹ್ಮಣನಾಗನೇ ?
ವಿಶ್ವದಾಭಿರಾಮ ಕೇಳು ವೇಮ.

ಶೂದ್ರ ಯುವತಿಯ ಮಗನಾಗಿ ಹುಟ್ಟಿದವನಿಗೆ ಅಂತರಂಗ ಶುದ್ಧವಾಗಿದೆ. ಯಾವ ವಿಕ್ಷೇಪ ಮಲ ಇಲ್ಲ,ಆವರಣೀ ಮಲಗಳೂ ಅಲ್ಲಿ ಇಲ್ಲ. ಅವನು ವೈದಿಕ ಸಂಪ್ರದಾಯದ ಉಪನಯನದ ಗೊಡವೆ ಇಲ್ಲದೆ, ಉಪನಿಷತ್, ತಂತ್ರಾಗಮಗಳಿಂದ ವೇದ ವಿದ್ಯೆಯ ಮೂಲವನ್ನು ಸಾಧನಾ ಬಲದಿಂದ ಅರಿತು, ಬೊಮ್ಮ ಪದವಿಯನ್ನು ಹೊಂದಿ ಬ್ರಾಹ್ಮಣನಾಗನೇನು ?

ಹೀಗೆ ಮೋಕ್ಷದ ಹಾದಿಯಲ್ಲಿ ಮಹಾ ಜನತೆಗೆ ಕಾಲ್ತೊಡಕಾಗಿ ಪರಿಣಮಿಸಿದ್ದ ಕುಲ ಜಾತಿಯ ಒಡಕು ವೃತ್ತಿ, ಅಧಿಕಾರ-ಅನಧಿಕಾರಗಳ ಕೃತಕ ಅಡ್ಡಗೋಡೆ, ವಂಚಕ ಧೂರ್ತ ನಡೆ ನುಡಿಗಳು, ಮಹಾ ಪುರುಷರನೇಕರ ಜೀವನ ಸಂದರ್ಶನಗಳಿಂದ, ಮುದ್ರಿತ ಸಾಹಿತ್ಯದಿಂದ, ನಿವಾರಣೆಯಾಗಿವೆ. ಧಾರ್ಮಿಕ ಸುಧಾರಣಾ ಚಳವಳಿಗಳು ಈ ದಿಶೆಯಲ್ಲಿ ತುಂಬಾ ಮಹತ್ವದ ಪಾತ್ರ ವಹಿಸಿವೆ.

------

# ೧೦. ಸಮಾಜ ಸುಧಾರಣೆ

ಸರ್ವರ ಸಮಾನ ಗತಿಯುಳ್ಳದ್ದು ಸಮಾಜವೆನಿಸುತ್ತದೆ. ಸಮಾಜ ವ್ಯವಸ್ಥೆಯಲ್ಲಿ, ಕೌಟುಂಬಿಕ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಮತ್ತು ರಾಜಕೀಯ ವ್ಯವಸ್ಥೆಗಳು ಸಮಾವೇಶವಾಗುತ್ತವೆ. ಕೌಟುಂಬಿಕ ವ್ಯವಸ್ಥೆಯಲ್ಲಿ, ತಾಯಿ ತಂದೆ, ಬಂಧು-ಬಳಗ, ಗಂಡ ಹೆಂಡಿರು, ಮಕ್ಕಳು ಮರಿಗಳು, ಅವರ ಮಧ್ಯೆ ಪರಸ್ಪರ ಸಂಬಂಧ, ವಿರಸ, ಅವರವರ ಅಧಿಕಾರಗಳು ಸೇರುತ್ತವೆ.

ಸಮಾಜ ಜೀವಿಗಳಲ್ಲಿ ಸುಮಧುರ ಸಂಬಂಧವಿರಬೇಕು. ಪ್ರತಿಯೊಬ್ಬರೂ ಸಹೋದರ ಭಾವದಿಂದ ನಡೆದುಕೊಳ್ಳಬೇಕು. ಆಗ ವಸಧೈವ ಕುಟುಂಬಕಂ ಎನಿಸುತ್ತದೆ. ಎಲ್ಲರೂ ಸಹೋದರರೆನಿಸಲು ಸೂತ್ರವಾವುದು ? ಒಂದು ಬ್ರಹ್ಮಸೂತ್ರ. ಇನ್ನೊಂದು ಐಹಿಕ ಸೂತ್ರ.

ತಾಯಿಯೇ ಪಾರ್ವತಿಯು ; ತಂದೆಯೇ ಶಂಭುವು.
ಪ್ರಮಥ ಗಣವು ಅಖಿಲ ಬಂಧು ಬಳಗ.
ತಾನು ಹುಟ್ಟಿದ ಮನೆ ತನಗೆ ಕೈಲಾಸವು.
ವಿಶ್ವದಾಭಿರಾಮ ಕೇಳು ವೇಮ.

ಸರ್ವರಿಗೂ ಮಂಗಳವುಂಟು ಮಾಡುವ ಶಂಭುವೇ ಎಲ್ಲರ ತಂದೆ.ನಾನು ಎಲ್ಲಿಂದ ಬಂದೆ ? ಎಂದರೆ ದೊರೆಯುವ ಉತ್ತರ ಒಂದೆ. ಅದೇ ಶಂಭುವಿನಿಂದ ಎಂದು. ಇನ್ನು ಪ್ರಕೃತಿ ಮಾತೆಯಾದ ಪಾರ್ವತಿಯೇ ನಮ್ಮ ತಾಯಿ. ಏಕೆಂದರೆ, ಈ ಶರೀರದಲ್ಲಿರುವ ಚೈತನ್ಯವು ಶಂಭುವಿನದಾದರೆ, ಈ ಶರೀರದ ಅನಾತ್ಮ ಅಂಶವು ಪ್ರಕೃತಿಯದೇ ಸರಿ. ಆ ಪ್ರಕೃತಿ ಮಾತೆಯೇ ನಮ್ಮ ತಾಯಿ. ಇನ್ನು ಪ್ರಮಥ ಗಣ ಎಂದರೆ ಶಿವಗಣವೆಲ್ಲ ಸಕಲ ಜೀವರು. ಇವರು ನಮ್ಮ ಬಂಧು ಬಳಗ. ನಾನು ಹುಟ್ಟಿರುವ ಮನೆಯು ಅಂದರೆ ಈ ಘಟವು ನನಗೆ ಕೈಲಾಸವಿದ್ದಂತೆ. ಹೃದಯ ಶಿವನ ಶೃಂಗಾರಾಭಿನಯದ ನರ್ತನ ಮಂಟಪ.

ಸಮಾಜದಲ್ಲಿ ಸರಿಯಾಗಿ ಜೀವಿಸುವವರಿಗೆ ಶ್ರುತಿಗಳು ವಿಧಿಸುವ ಅಣತಿಯೆಂದರೆ, 'ಮಾತೃ ದೇವೋ ಭವ, ಪಿತೃ ದೇವೋ ಭವ, ಗುರುರ್ದೇವೋ ಭವ'. ಎಂದರೆ ಸಜ್ಜನರೆಲ್ಲರೂ ಈ ಭಾವದಿಂದ ಬಾಳಬೇಕಲ್ಲವೇ ?

ಮೊದಲಿಗಿಹ ಮಾತೃ ದೇವತೆ,
ತದ ನಂತರ ಜನಕನು ಇರುವ ; ಪರಿಕಿಸುತಿರಲ್
ಕುದುರಿದ ಸದಮಲ ಗುರುವೇ
ತುದಿ ದೈವವು ಪರರು ಬೇರೆ, ತೋರರು, ವೇಮಾ.

ಹೊತ್ತು, ಹೆತ್ತು, ಮೊಲೆಯೂಡಿಸಿದ ತಾಯಿಯೇ, ಮಗುವಿಗೆ ಮೊದಲು ಶಬ್ದ ಜ್ಞಾನ ನೀಡಿ, ಪ್ರಪಂಚದ ಸ್ಥೂಲ ಪರಿಚಯ ಮಾಡಿಕೊಡುತ್ತಾಳೆ. ಮಗುವಿನ ಬಾಳಿಗೆ ಬೆಳಕು ನೀಡುವ ಆಕೆ ದೇವತೆಯೇ ಸರಿ. ಆ ಮೇಲೆ ಪಾಲಕನಾಗಿ ಇರುವವನೇ ಜನಕನಾದ ತಂದೆ. ಇನ್ನು ಹೃದಯವರಳಿಸಿ, ಮಾರ್ಗದೇಶಿಕನಾಗಿ, ಬಾಳನ್ನು ಉದ್ದೀಪಿಸಲು ಬರುವವನೇ ಕೊನೆಯ ದೈವವಾದ ಗುರು.





ಇವರನ್ನು ಹೊರತುಪಡಿಸಿ, ಪರರು ಬೇರೇನನ್ನೂ ತೋರರು.

ತಾಯಿ ತಂದೆ ಎನಲು ತತ್ತ್ವವನು ತಿಳಿಯರು.
ಯೋನಿ ಲಿಂಗಗಳಲಿ ಉದ್ಭವಿಸುತ,
ವಿಷ್ಣುವರಿಯೆ ತಾಯಿ, ವಿಭವಿಪ ರುದ್ರ ತಂದೆ.
ವಿಶ್ವದಾಭಿರಾಮ ಕೇಳು ವೇಮ.

ಸ್ತ್ರೀ ಯೋನಿ ಪುರುಷ ಲಿಂಗಗಳ ಸಂಪರ್ಕದಿಂದ ಉದ್ಭವಿಸುವ ಜನರು, ತಾಯಿ ಮತ್ತು ತಂದೆ ಎಂದರೆ ತಾತ್ತ್ವಿಕ ನಿಲುಮೆಯನ್ನು ಅರಿಯರು. ಈ ಸೃಷ್ಟಿಯನ್ನು ಪೋಷಿಸುವ ವಿಷ್ಣುವೇ ತಾಯಿ. ರಜೋಗುಣದ ಪ್ರತಿನಿಧಿ. ಇನ್ನು ಸೃಷ್ಟಿಯನ್ನು ತಿದ್ದುವ, ಶಿಕ್ಷಿಸುವ, ಲಯಗೊಳಿಸುವ ತಂದೆಯೇ ಸತ್ತ್ವ ಗುಣದ ಪ್ರತಿನಿಧಿಯಾದ ರುದ್ರನು.

ತಾಯಿ ತಂದೆಗಳಲಿ, ದಾರಿದ್ರ್ಯಯುತರಲಿ,
ನಂಬಿಕೊಂಡ ಬಡವ ಜನರಲ್ಲಿಯು.
ಪ್ರಭುಗಳಲಿ, ಬಹಳ ಭಯ ಭಕ್ತಿ ಇರಿಸು.
ವಿಶ್ವದಾಭಿರಾಮ ಕೇಳು ವೇಮ.

ನಮಗೆ ಜನ್ಮ ಕೊಟ್ಟ, ತಾಯಿ ತಂದೆಯಲ್ಲಿ, ಧನವಿಹೀನರಲ್ಲಿ, ನಮ್ಮನ್ನೇ ತಮ್ಮ ಜೀವನಕ್ಕಾಗಿ ನಂಬಿಕೊಂಡ ಬಡ ಮನುಷ್ಯರಲ್ಲಿ, ಆಳುವ ಪ್ರಭುಗಳಲ್ಲಿ, ಭಯವನ್ನೂ ಮತ್ತು ಭಕ್ತಿಯನ್ನೂ ಹೊಂದಿರಬೇಕು. ಇದರಿಂದ ಸಮಾಜಿಕ ಜೀವನವೂ ಮತ್ತು ಕೌಟುಂಬಿಕ ಜೀವನವೂ ಯಶಸ್ವಿಯಾಗುತ್ತವೆ.

ತಾಯಿ ತಂದೆ ಮಡಿಯೆ, ತನಯ ತಾನು ಅಳುವ :
ಪತಿಯು ಮಡಿಯೆ ಮತ್ತೆ ಪತ್ನಿ ಶೋಕ.
ಕಾರ್ಯ ವಶದಿ ಅಷ್ಟೆ : ಕುದುರಲಿಲ್ಲ ಮೋಹ.
ವಿಶ್ವದಾಭಿರಾಮ ಕೇಳು ವೇಮ.

ಸಂಬಂಧಿಕರು ಸತ್ತಾಗ ದುಃಖಿಸುವುದು ಸಹಜ. ತಾಯಿ ಇಲ್ಲವೆ ತಂದೆ ಸತ್ತಾಗ, ಮಗನು ಅಗಲಿಕೆಯನ್ನು ನೆನೆದು ಮತ್ತು ಮಗನಾಗಿ ಅವರ ಉತ್ತರಕ್ರಿಯಾದಿ ಮಾಡುವ ಕರ್ಮಬದ್ಧನಾಗಿ ತನ್ನ ಶೋಕವನ್ನು ವ್ಯಕ್ತ ಪಡಿಸುತ್ತಾನೆ. ಮುಂದೆ ಕೆಲಸಮಯ ಕಳೆದ ಮೇಲೆ ಎಲ್ಲವನ್ನೂ ಮರೆಯುತ್ತಾನೆ. ಅದೇ ರೀತಿ, ತನ್ನ ಭರ್ತನಾದ ಪತಿಯು ಮಡಿದಾಗ ಆ ಅಗಲಿಕೆಯ ನೋವಿನಿಂದ ಪತ್ನಿಯು ಶೋಕಿಸುತ್ತಾಳೆ. ಇಂಥ ಅಳುವಿಕೆ, ಶೋಕಗಳೆಲ್ಲ ತಾವು ಮಾಡಬೇಕಾದ ಕಾರ್ಯ ಹೊಣೆಯಿಂದ ಮಾತ್ರವೇ. ಅವರಲ್ಲಿ ಅಗಲಿದವನ ಬಗೆಗೆ ಮೋಹವೇನೂ ಕುದುರಿರುವುದಿಲ್ಲ. ಹಲ ಕೆಲವರು ಮಾತ್ರ ಮೋಹವಶರಾಗಿ ದಿಙ್ಮೂಢರಾಗುವುದೂ ಉಂಟು.

ಹಡೆದ ತಾಯಿ ತಂದೆ ಹೊರೆಯುವುದನು ಬಿಡಲು,
ಹಡೆದು ಬೆಳೆಸಿದ ಋಣ ಹಿಂಗದಯ್ಯ.
ತಾಯಿ ತಂದೆ ನೋಯೆ, ತಪವು ಸಿದ್ಧಿಸುವುದೆ ?
ವಿಶ್ವದಾಭಿರಾಮ ಕೇಳು ವೇಮ.

ಮಧುರ ಪ್ರೇಮ ಪೂರ್ವಕ, ಕರುಳಿನ ಕುಡಿಯಾಗಿ ಹಡೆದು ಹೊರೆದ ತಾಯಿ-ತಂದೆಯಂದಿರು, ತಮ್ಮ ವಯೋವೃದ್ಧಿಯಿಂದಾಗಲಿ ಇಲ್ಲವೆ ಬೇರಾವ ಕಾರಣದಿಂದಾಗಲಿ ಪೊರೆಯುವುದನ್ನು ಬಿಟ್ಟರೆ, ಅವರ ಋಣ ತೀರದು. ಹಡೆದು ಬೆಳೆಸಿದ ಮಾತಾ ಪಿತೃಗಳ ಋಣವು ಹಿಂಗದು. ಈ ಭೌತಿಕ ದೇಹವಿರುವ ವರೆಗೂ ಅವರ ಋಣ ನಮ್ಮ ಮೇಲೆ ಇರುತ್ತದೆ. ನಾವು ಮನೆ ಮಾರು ತೊರೆದು, ತಂದೆ ತಾಯಿಗಳನ್ನು ನೋಯಿಸಿ, ತಪಸ್ಸಿಗೆ ಅಣಿಯಾದರೆ ಅಂಥ ತಪಸ್ಸು ಸಿದ್ಧಿಸುವುದೇ ? ಇಲ್ಲ, ಇಲ್ಲ.

ಪುರುಷನಿಗೆ ಸ್ತ್ರೀಯ ಸಂಬಂಧವು ಬಹುಮುಖವಾಗಿದೆ. ಅವಳು ತಾಯಿ ರೂಪದಿಂದ ವಾತ್ಸಲ್ಯದ ಮೂರ್ತಿಯಾಗಿದ್ದಾಳೆ. ತನ್ನ ಮಡದಿಯ ರೂಪದಲ್ಲಿ ಮೋಹಕ ಚೆಲುವೆಯಾಗಿದ್ದಾಳೆ. ತನ್ನ ಮಗನ ಸತಿಯಾಗಿ ತನ್ನ ಸೊಸೆಯ ರೂಪದಲ್ಲಿ ಮುದ್ದಾಗಿದ್ದಾಳೆ. ಸೊಸೆ, ಸೊಸೆ ಎನ್ನುತ್ತಿರುವಾಗ ಅವಳ ಹೊಟ್ಟೆಯಲ್ಲಿ ಮೊಮ್ಮಗಳಾಗಿ ಜನಿಸಿ ಅಕ್ಕರೆಯ ಗೊಂಬೆಯಾಗುತ್ತಾಳೆ. ಹೀಗೆ ಸ್ತ್ರೀ ಸಂಬಂಧದ ಮಾಯೆಯು ಮನವನ್ನು ಸಂಸಾರ ಬಂಧನದಲ್ಲಿ ಕಟ್ಟಿಹಾಕುತ್ತದೆ. ಮಹಿಯೊಳಗೆ ಈ ಮಾಯೆಯು ಬಿಡದ ಹೊರತು ಮುಕ್ತಿ ದೊರಕದು.

## ಲಗ್ನ ಸಂಬಂಧ :

ತನ್ನ ದೇಹ ಸುಖಕ್ಕಾಗಿ ಮಗಳನ್ನು ಕೊಟ್ಟು, ತನಗೆ ಬಾಳ ಸಂಗಾತಿಯಾಗಲು ಯೋಚಿಸಿದ ಮಾವನ, ತನ್ನ ಹಸಿವೆ ತಣಿಸಲು ಹೊಟ್ಟೆಗೆ ಅನ್ನ ನೀಡಿದ. ಮತ್ತು ಆವಶ್ಯಕ ಜೀವನಾವಶ್ಯಕತೆಗಳನ್ನು ಒದಗಿಸಿದ ಪೋಷಕನ, ಹೃದಯಕ್ಕೆ ಆಹ್ಲಾದ ನೀಡಿ, ಘನತೆಯನ್ನು ಮೆರೆಸದವನು ನಡತೆ ತಪ್ಪಿದವನು. ಅವನು ನೀಚಾಧಮನು. ಸಮಾಜದ ಸುಭದ್ರತೆಗೆ ಇಂಥ ,ಸಂಬಂಧಗಳು ತುಂಬಾ ಮುಖ್ಯ.

ಮಡದಿ ನೀಡಿದವನ, ಒಡಲು ತುಂಬಿದವನ,
ಒಡಲು ತಣಿಸಿ ಘನತೆ ಮೆರೆಸದವನು,
ನಡತೆ ತಪ್ಪಿದವನು, ನೀಚಾಧಮನವನು.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಹೆಂಡತಿಯ ತಂದೆಯನ್ನೂ ಹಾಗೂ ತನ್ನನ್ನು ಪೋಷಿಸಿದ ಪಾಲಕರನ್ನೂ ತಣಿಸಿ ಅವರ ಸದಿಚ್ಛೆ ಪಡೆಯಬೇಕು.

ವಿವಾಹ ನಿಶ್ಚಯ ಕಾಲಕ್ಕೆ ಕನ್ಯಾ ಶುಲ್ಕ ಇಲ್ಲವೆ ವರದಕ್ಷಿಣೆಯನ್ನು ಕೊಡುವ ಪದ್ಧತಿ ರೂಢಿಯಲ್ಲಿವೆ. ಧನಿಕರು ಹೆಚ್ಚು ಹೆಚ್ಚು ಶುಲ್ಕ ಇಲ್ಲವೆ ದಕ್ಷಿಣೆ ಪಡೆಯುವುದು ತಮ್ಮ ಘನತೆಗೆ ತಕ್ಕದ್ದೆಂದು ತಿಳಿಯುತ್ತಾರೆ. ಇದು ಸರಿಯಲ್ಲ. ಅದಕ್ಕಾಗಿ ವೇಮನರು ಈ ರೀತಿ ಹೇಳುತ್ತಾರೆ.

ಬಡವನಾಗಿರುವಗೆ ಪುತ್ರಿ ಇತ್ತರಾಗ,
ಧನವ ಕೇಳೆ ಹೊಲ್ಲ, ದುಷ್ಟನಿರಲಿ.
ಹೊಲಸು ತಿಪ್ಪೆಗಾಗಿ ಹೈನ ಪಶು ಕೊಂಡಂತೆ.
ವಿಶ್ವದಾಭಿರಾಮ ಕೇಳು ವೇಮ.





ಸಂಪತ್ತಿನ ವಿತರಣೆಯು ಸಮಾಜದಲ್ಲಿ ವಿಷಮವಾಗಿರುತ್ತದೆ. ಇದು ಸಮಪಾಲು, ಸಮ ಬಾಳು ತತ್ತ್ವವನ್ನಾಧರಿಸಿರಬೇಕು. ಈ ದಿಶೆಯಲ್ಲಿ ವಿವಾಹ ಸಂಬಂಧಗಳ ರೀತಿ ರಿವಾಜುಗಳ ನಿರ್ಧಾರವೂ ಒಂದು ಹೆಜ್ಜೆಯಾಗಿದೆ. ಒಬ್ಬ ಧನಿಕನು, ಅವನು ದುಷ್ಟನೇ ಆಗಿರಲಿ, ತನ್ನ ಮಗಳನ್ನು ಬಡವನಿಗೆ ಕೊಡಬೇಕು. ಹಾಗೆ ಕೊಟ್ಟಾಗ ಆ ಬಡವನಿಂದ ಕನ್ಯಾಶುಲ್ಕ ರೂಪದಲ್ಲಿ ಧನ ಕೇಳಬಾರದು. ಹೀಗೆ, ದುಷ್ಟ ಧನಿಕನು ಕನ್ಯಾ ಶುಲ್ಕ ರೂಪದಲ್ಲಿ ಧನ ಕೇಳಿದರೆ, ಹೇಗಾಗುವುದೆಂದರೆ, ಈಗಾಗಲೇ ತನ್ನಲ್ಲಿ ಕೊಪ್ಪರಿಗೆ ಧನ ತಿಪ್ಪೆಯಂತೆ ಕೂಡಿಬಿದ್ದಿದೆ. ಅದಕ್ಕೆ ಕನ್ಯಾ ಶುಲ್ಕದ ಹಣ ಸೇರುವುದೆಂದರೆ, ಹೈನ ಪಶುವಾದ ಬಡವನಿಂದ ತಿಪ್ಪೆಯ ಹೊಲಸನ್ನು ಹೆಚ್ಚಿಸಿದಂತೆ.

ಕನಕ ನೋಡಿ ಕೊಡಲು ಕಾಯ ಕೊಯ್ದ ಹಾಗೆ.
ಸರಿಕಗೀಯಲದುವೆ ಸರಸತನವು.
ಬಡವಗಿತ್ತ ಮದುವೆ ಬಹು ಹೊಂದಿಕೆಯಲ !
ವಿಶ್ವದಾಭಿರಾಮ ಕೇಳು ವೇಮ.

ಒಬ್ಬ ಧನಿಕನಾಗಿರುವನೆಂದು ತಿಳಿದು ಅವನಿಗೆ ಮಗಳನ್ನು ಧಾರೆಯೆರೆದರೆ, ಅವನು ತನ್ನ ಧನ ಮದದಲ್ಲಿ ಬೀಗಿ ಮನೆಗೆ ಬಂದ ಸ್ತ್ರೀಗೆ ಹೆಚ್ಚು ಹಿಂಸೆಯನ್ನೇ ನೀಡುತ್ತಾನೆ. ಹೀಗಾಗಿ, ಕನ್ಯಾ ಪಿತೃವಿಗೆ ತನ್ನ ಮಗಳಿಗಾಗುವ ಹಿಂಸೆ ನೋಡಿ, ತನಗೇ ಹಿಂಸೆಯಾದಂತೆ ಅನಿಸುತ್ತದೆ. ಅರ್ಥಾತ್ ತನ್ನ ಕಾಯವನ್ನೇ ಕೊಯ್ದು ಕೊಟ್ಟಂತೆ ಅನಿಸುತ್ತದೆ. ಅದೇ ತನ್ನ ಸರಿಕನಿಗೆ ಕೊಟ್ಟರೆ ಇಂಥ ಧನಮದದ ಕ್ರಿಯೆಯ ಪ್ರಶ್ನೆಯೇ ಏಳದು. ಅಲ್ಲಿ ಮಧುರ ಬಾಂಧವ್ಯ ಬೆಳೆಯುತ್ತದೆ. ಪರಸ್ಪರ ಬೀಗರ ಭಾವನೆಗಳು ಏಕ ರಸವಾಗಿ ಹರಿಯುತ್ತವೆ. ಸರಸತೆಯು ಕುದುರುತ್ತದೆ. ಇನ್ನು ಮಗಳನ್ನು ಬಡವನಾದ ವರನಿಗೆ ಕೊಟ್ಟರಂತೂ ಪ್ರೀತ್ಯಾದರಗಳ ಬುಗ್ಗೆ ಚಿಮ್ಮುತ್ತದೆ. ಪರಸ್ಪರ ಹೊಂದಾಣಿಕೆ ಇರುತ್ತದೆ. ಆದರ್ಶಪ್ರಾಯವಾದ, 'ಬಾಳು, ಬಾಳಗೊಡು' ನ್ಯಾಯವು ಸ್ಥಾಪಿತವಾಗುತ್ತದೆ.

ಕನಕವಿರುವವನನು ಕಂಡು ಹಿಡಿದು, ಕೊಟ್ಟ
ಮನವು ಹಾಲು ಉಕ್ಕಿ ಮರುಳುವಂತೆ,
ಒಳಗೆ ಆರಿ ; ಕನಕ ಮರಳಿ ಹಿಂಗದೇನು ?
ವಿಶ್ವದಾಭಿರಾಮ ಕೇಳು ವೇಮ.

ಹಾಲು ಕಾಯಲಿಟ್ಟಾಗ ಉಕ್ಕುತ್ತದೆ. ಬುರುಗು ಪಾತ್ರೆಯ ಪಾತ್ರತೆಯನ್ನು ಮೀರಿ ಹೊರಚೆಲ್ಲುತ್ತದೆ. ಆದರೆ ಇದೆಲ್ಲ ಕ್ಷಣಿಕ. ಆ ನಂತರ ಉಕ್ಕೇರಿದುದು ಇಳಿದು ಕೆಳಗೆ ಸರಿಯುತ್ತದೆ. ಧನ ಮದವೂ ಇದೇ ರೀತಿ. ಧನವು ಹೆಚ್ಚಿದಾಗ ಮದವು ವಿಪರೀತವಾಗುತ್ತದೆ. ಆದರೆ ಧನವು ಚಂಚಲೆ. ಅದು ಬರುತ್ತದೆ, ಹೋಗುತ್ತದೆ. ಹೀಗೆ ಒಳಹೊಕ್ಕು ನೋಡಿದರೆ, ಕೂಡಿಬಿದ್ದ ಧನವು ಹಿಂಗದೇನು ? ಎಂದೆನಿಸುತ್ತದೆ. ಆದ್ದರಿಂದ ಕನಕ ನೋಡಿ ಕನ್ನೆ ಕೊಡಬೇಕಿಲ್ಲ. ವಿದ್ಯಾ ಸಂಪನ್ನತೆ, ಬುದ್ಧಿ ಸಂಪನ್ನತೆ ನೋಡಿ ಕನ್ನೆ ಈಯಬೇಕು.

ಕಂಡು ಸಂಪದ ಬಲ, ಕನಕವನಾಶಿಸುತ,
ಕನ್ನೆಯೀಯೆ, ಪೂರ್ವ ಗತಿಗಳೆಂತೊ ?
ಬಡವನನುವು ಮೀರಿ ಬಾಲೆಯೀಯುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಬಡವನೊಬ್ಬನು ವರನ ಸಂಪತ್ತಿನ ಬಲವನ್ನು ಕಂಡು, ತನಗೆ ಬರುವ ಕನ್ಯಾಶುಲ್ಕ ಇತ್ಯಾದಿಗಳನ್ನು ಆಶಿಸುತ್ತ ಕನ್ನೆಯನ್ನು ಧಾರೆ ಎರೆಯುತ್ತಾನೆ. ಆದರೆ, ಆ ವರನ ಪೂರ್ವ ಕರ್ಮಗಳಾವವೋ ಏನೋ ? ಅದರ ಫಲದ ಗತಿಯು ಏನೇನಿದೆಯೋ ? ಯಾರು ಬಲ್ಲರು ? ಬಡವನು ತನ್ನ ಇತಿಮಿತಿಗಳನ್ನು ಮೀರಿ ತನ್ನ ಬಾಲೆಯನ್ನು ವಿವಾಹ ಮಾಡಿ ಕೊಡುವನು. ಇದು ಸರಿಯಲ್ಲ.

ತನಗೆ ಬಂಧುವೆನುತ, ತಾನೆ ಕರೆದು ತಂದು,
ಸಂಪದಿಹುದ ಕಂಡು, ಸಲೆಯಾಶಿಸಿ,
ದಕ್ಷಿಣೆಯಿತ್ತು, ತಾನು ತರುಣಿ ಕೊಡುವ ನೋಡು.
ವಿಶ್ವದಾಭಿರಾಮ ಕೇಳು ವೇಮ.

ತನಗೆ ಪರಿಚಿತನೆಂದೂ, ಬಂಧು-ಬಾಂಧವನೆಂದೂ ತಾನೇ ಒಬ್ಬ ಧನಿಕನನ್ನು ಕರೆದು ತರುತ್ತಾನೆ. ಅವನ ಸಂಪತ್ತನ್ನು ಕಂಡು, ಅದಕ್ಕಾಗಿ ಆಸೆ ಪಡುತ್ತಾನೆ. ಮುಂದೆ ತನ್ನ ವ್ಯವಹಾರದಲ್ಲಿ ಅನುಕೂಲವಾದೀತೆಂದು ಬಯಸಿ, ವರದಕ್ಷಿಣೆಯನ್ನು ಕೊಟ್ಟು ತರುಣಿಯನ್ನು ಧಾರೆಯೆರೆದು ಕೊಡುತ್ತಾನೆ.

ಕೊಡುವ ಕೊಳುವ ಲಗ್ನ ಹಿತ ಸಂಬಂಧಗಳು,
ಕಡಿಮೆಗೊಳದೆ ಕಮಲದಂತೆ ಹಬ್ಬಿ,
ಕುಡಿಯು ಮೊಗ್ಗೆಯಾಗಿ, ಕಡು ರಮ್ಯವಾಗಿಹವು !
ವಿಶ್ವದಾಭಿರಾಮ ಕೇಳು ವೇಮ.

ವರದಕ್ಷಿಣೆ ಕೊಡುವ, ಇಲ್ಲವೆ ಕನ್ಯಾ ಶುಲ್ಕ ತೆಗೆದುಕೊಳ್ಳುವ ಇಲ್ಲವೆ ಇವೆರಡೂ ಇಲ್ಲದ ಲಗ್ನ ಹಿತ ಸಂಬಂಧಗಳು, ಕಡಿಮೆಯಾಗದೆ, ನೀರಿನಲ್ಲಿ ಹಬ್ಬುವ ಮತ್ತು ಹೂಬಿಡುವ ಕಮಲದಂತೆ ವರ್ಧಿಸುತ್ತವೆ. ಕುಡಿಯೊಡೆದು ಮೊಗ್ಗೆಯಾಗಿ, ಪುಷ್ಪಿಸಿ, ಕಡು ರಮ್ಯವಾಗಿ ಕಾಣುವ ಕಮಲದಂತೆ ಲಗ್ನ ಹಿತ ಸಂಬಂಧಗಳು ಕುದುರಿ, ಮರವಾಗಿ ಬೆಳೆಯುತ್ತವೆ.

## ಲಗ್ನ ಮುಹೂರ್ತ :

ಲಗ್ನ ಮಾಡುವವರು ಲಗ್ನ ಮುಹೂರ್ತ ನಿಶ್ಚಯಿಸಲು ಪಂಚಾಂಗಕ್ಕೆ ಮೊರೆಹೋಗುತ್ತಾರೆ. ಪುರೋಹಿತರಿಗೆ ಶರಣಾಗುತ್ತಾರೆ. ಅವರೂ ತಕ್ಕ ದಕ್ಷಿಣೆ ಪಡೆದು ಅನುಕೂಲ ಕಾಲ ತಿಳಿಸುತ್ತಾರೆ. ಆದರೆ ಇದರಲ್ಲಿ ವಾಸ್ತವ ಸತ್ಯ ಎಷ್ಟು ? ಎಂಬುದಾರಿಗೂ ತಿಳಿಯದು.

ಒಳ್ಳೆ ಶಕುನಗಳನು ಎಣಿಸಿ ಲಗ್ನ ಗೆಯ್ಯೆ,
ಅವರೊಳೊಬ್ಬರಿಲ್ಲ ಅವನಿಯಲ್ಲಿ.
ಜನರ ಕರ್ಮಗಳನು ಶಕುನ ನಿಲ್ಲಿಸುವವೆ ?
ವಿಶ್ವದಾಭಿರಾಮ ಕೇಳು ವೇಮ.

ಒಳಿತು ಕೆಡುಕುಗಳನ್ನು ಕೆಲವರು ಪಂಚಾಂಗದ ಎಣಿಕೆಯಿಂದ ಗುರುತಿಸುತ್ತಾರೆ. ಕೆಲವರು ಶಕುನಪಕ್ಷಿ ಅಂದರೆ ಹಾಲುವಕ್ಕಿಯ ಸೂಚನೆಯಿಂದ ಗುರುತಿಸುತ್ತಾರೆ. ಯಾವ ರೀತಿಯ





ಶಕುನದಿಂದಾಗಲಿ ಶುಭ ಲಗ್ನವೆಂದು ಮುಹೂರ್ತ ನಿಶ್ಚಯಿಸಿ ಲಗ್ನ ಮಾಡುತ್ತಾರೆ. ಆದರೆ, ವಾಸ್ತವವೆಂದರೆ ಶುಭಲಗ್ನದಲ್ಲಿ ಲಗ್ನವಾಗಿ ಆಚಂದ್ರಾರ್ಕ ಬಾಳುವೆವೆಂಬ ಭರವಸೆ ಹೊಂದಿದವರಲ್ಲಿ ಇಂದು ಅವನಿಯಲ್ಲಿ ಒಬ್ಬರೂ ಜೀವಂತವಾಗಿಲ್ಲ. ಜನರು ಕರ್ಮಾಧೀನರು. ಪೂರ್ವ ಕರ್ಮಾನುಸಾರ ಸಂಸ್ಕಾರ ಫಲ ಭೋಗಿಸಲು ಜನ್ಮ ತಾಳುತ್ತಾರೆ. ಹಾಗೆಯೇ ಆಯುಸ್ಸೂ ಪೂರ್ವ ನಿರ್ಧಾರಿತವಾಗಿರುತ್ತದೆ. ಅದರಿಂದಾಗಿಯೇ ಹಸ್ತ ಸಾಮುದ್ರಿಕ ಶಾಸ್ತ್ರದಲ್ಲಾಗಲಿ, ಜ್ಯೋತಿಷ್ಯ ಶಾಸ್ತ್ರದಲ್ಲಾಗಲಿ, ವ್ಯಕ್ತಿಯ ಆಯುಸ್ಸನ್ನೂ, ಫಲಾಫಲಗಳನ್ನೂ ಹೇಳುತ್ತಾರೆ. ಶಕುನಗಳನ್ನು ನೋಡುವವರು ಶಕುನಗಳು ತಮ್ಮ ಪೂರ್ವ ಕರ್ಮಫಲವನ್ನು ನಿಲ್ಲಿಸುವವೆಂದು ತಿಳಿಯುತ್ತಾರೇನು?

ಸತಿಯು ಜಪತಪಗಳ ಶುರುವು ಮಾಡಿದೊಡನೆ,
ಪುರುಷರೇಕೆ ಮತ್ತೆ ಪೊಡವಿಯಲ್ಲಿ.,
ಪಾಪವೆಂದು ತಿಳಿದು, ಪಿಡಿದು ಶಿಕ್ಷಿಸುವರೋ ?
ವಿಶ್ವದಾಭಿರಾಮ ಕೇಳು ವೇಮ.

ಸ್ತ್ರೀ ಸಹ ಮಾನವ ಜಾತಿಯ ಮುಖ್ಯ ಅಂಗ. ಅವಳೂ ಸಹಧರ್ಮಾಚರಣೆಗಳ ಅಧಿಕಾರಿಯು. ಅವಳಿಗೆ ಜಾತ ಕರ್ಮ, ನಾಮಕರಣ, ನಿಷ್ಕ್ರಮಣ ಮತ್ತು ಅನ್ನ ಪ್ರಾಶನ ಸಂಸ್ಕಾರಗಳನ್ನು ನಿಷೇಧಿಸಿಲ್ಲವಾದರೂ, ವೈದಿಕ ಧರ್ಮ ಶಾಸ್ತ್ರಗಳ ಮೇರೆಗೆ, ಅವುಗಳನ್ನು ಅಮಂತ್ರಕವಾಗಿ ಆಚರಿಸಬೇಕು. ಆಗ ವೇದ ಮಂತ್ರಗಳನ್ನು ಪಠಿಸಕೂಡದು. ಅವಳಿಗೆ ವೇದ ಮಂತ್ರ ಸಹಿತ ಪ್ರಥಮ ಸಂಸ್ಕಾರವೆಂದರೆ ವಿವಾಹ ಮಾತ್ರ. ಮುಂದೆ ಜವಳ, ಉಪನಯನಾದಿ ಸಂಸ್ಕಾರಗಳು ಅವಳಿಗಿಲ್ಲ. ಅವಳ ಧರ್ಮವೆಂದರೆ ಪತಿಸೇವೆ ಮಾತ್ರ. ಯಜ್ಞ ಯಾಗಗಳಲ್ಲಿ ಯಜಮಾನಿಯಾಗಿ ಪತಿಯ ಅರ್ಧಾಂಗಿಯಾಗಿ ಭಾಗವಹಿಸಬಹುದೇ ಹೊರತು ಋತ್ವಿಜಳಾಗಿ ಎಂದೂ ಅಲ್ಲ. ವೇದ ಮಂತ್ರ ಪಠಣ ಅವಳಿಗೆ ನಿಷಿದ್ಧ. ಈ ವೈದಿಕ ಧರ್ಮ ಪ್ರತಿಪಾದನೆಯ ಹಿನ್ನೆಲೆಯಲ್ಲಿ ವೇಮನಯೋಗಿಗಳ ವಿಚಾರಗಳನ್ನು ಅರಿಯಬೇಕು.

ಸ್ತ್ರೀಯರು ತಮ್ಮ ಮನೋಶುದ್ಧಿಗಾಗಿ, ಮೋಕ್ಷ ಸಾಧನೆಯ ಪ್ರಥಮ ಹಂತವೆಂದು ಮಂತ್ರಧ್ಯಾನ, ಜಪತಪಾದಿಗಳನ್ನು ಶುರು ಮಾಡಿದೊಡನೆ ಈ ಭೂಮಿಯಲ್ಲಿ ಪುರುಷರೇಕೆ ಆ ಕ್ರಿಯೆಗಳನ್ನು ಪಾಪವೆಂದು ತಿಳಿಯುವರೋ ಕಾಣೆವು. ಅದೇಕೆ ಅವರನ್ನು ಶಿಕ್ಷೆಗೆ ಗುರಿಪಡಿಸುವರೋ ತಿಳಿಯದು.

ಪುಣ್ಯವೆಲ್ಲ ಕೂಡಿ, ಪುರುಷನಾಗಿ ಜನಿಸಿ,
ಪಾಪವೆಲ್ಲ ಕೂಡಿ, ಬಂದಳು ಸತಿ.
ಕಷ್ಟದ ಸತಿಯೆಂದು ಕಾಣುತಿಹರು ಇಲ್ಲಿ.
ವಿಶ್ವದಾಭಿರಾಮ ಕೇಳು ವೇಮ.

ಭಗದ್ಗೀತೆಯಲ್ಲಿ ಶ್ರೀ ಕೃಷ್ಣ ವೈದಿಕರ ಕಲ್ಪನೆಯನ್ನು ಹೀಗೆ ಚಿತ್ರಿಸಿದ್ದಾನೆ : "ಎಲೈ ಅರ್ಜುನ ! ಪಾಪ ಯೋನಿಯಲ್ಲಿ ಹುಟ್ಟಿದವರೆಂದು (ವೈದಿಕರು) ಕರೆದ ಸ್ತ್ರೀಯರೂ, ವೈಶ್ಯರೂ ಮತ್ತು ಶೂದ್ರರೂ ಸಹ, ನನ್ನನ್ನು (ಅಂದರೆ ಪುರುಷೋತ್ತಮ ತತ್ತ್ವವನ್ನು) ಆಶ್ರಯಿಸಿ, ಪರಮ ಗತಿಯನ್ನು ಹೊಂದುತ್ತಾರೆ. (ಭ.ಗೀ. 9-32) . ಹೀಗಿರುವಾಗ ಪುಣ್ಯ ಯೋನಿಜರೂ, ಭಕ್ತರೂ

ಆದ ಬ್ರಾಹ್ಮಣರು ಮತ್ತು ರಾಜರ್ಷಿಗಳು ಪರಮ ಗತಿಯನ್ನು ಹೊಂದುವರೆಂದು ಹೇಳಬೇಕಾದುದು ಏನಿದೆ ? ಆದ್ದರಿಂದ ಅನಿತ್ಯವೂ, ಅಸುಖವೂ ಆದ ಈ ಲೋಕವನ್ನು ಪಡೆದಿರುವ ನೀನು ನನ್ನನ್ನು ಭಜಿಸು. (ಗೀತಾ. 9-33).

ಈಗ ವೇಮನ ಯೋಗಿಗಳ ವಿಚಾರವನ್ನು ಗಮನಿಸುವಾ :

ಪುಣ್ಯವೆಲ್ಲ ಕೂಡಿ ಪುರುಷನಾಗಿ ಜನಿಸಿದ್ದಾನೆ. ಮತ್ತು ಪಾಪವೆಲ್ಲ ಕೂಡಿ ಸತಿಯಾಗಿ ಬಂದಿದ್ದಾಳೆ ಎಂದು ವೈದಿಕರ ಗ್ರಹಿಕೆಯಿದೆ. ಅದೇನೇ ಇರಲಿ ; ಸತಿಯು ಕಷ್ಟ ಪಡಬೇಕಾಗಿದೆಯೆಂದೂ ಅದು ಅವಳ ಪಾಪದ ನಿಮಿತ್ತವಾಗಿರಬಹುದೆಂದೂ, ತಿಳಿದು ಅವಳನ್ನು ಪಾಪವಿಮುಕ್ತಳನ್ನಾಗಿ ಮಾಡಲು, ಅವಳಿಗೆ ಧರ್ಮೋಪದೇಶ ಮಾಡಿ, ಅವಳ ಉದ್ಧಾರಕ್ಕಾಗಿ ಪ್ರಯತ್ನಿಸಿ ಅವಳ ಪರಿಹಾರವನ್ನು ಕಾಣುವವರು ಯಾರೂ ಇಲ್ಲ.

ಸತಿಯರು ಸಹ ಜಪವ ಚೊಕ್ಕ ಮಾಡುತಿರಲು,
ಪುರುಷರೇಕೆ ? ಇನ್ನು ಪೊಡವಿಯಲ್ಲಿ
ಪಾಪವೆಣಿಸೆ ಹೊಲ್ಲ, ವ್ಯರ್ಥ ಶಿಕ್ಷಿಸುವುದು.
ವಿಶ್ವದಾಭಿರಾಮ ಕೇಳು ವೇಮ.

ಈ ಪದ್ಯದ ಅರ್ಥವನ್ನು ವಿವರಿಸುವ ಮೊದಲು ಆ ಕಾಲದ ವೈದಿಕರ ಗ್ರಹಿಕೆಗಳನ್ನು ಗಮನಿಸಬೇಕು. ಶೂದ್ರನಿಗೆ ಶೂದ್ರಳೇ ಹೆಂಡತಿಯಾಗಬೇಕು. ಕ್ಷತ್ರಿಯನಿಗೆ ಕ್ಷತ್ರಿಯ ಜಾತಿಯವಳು, ವೈಶ್ಯ ಜಾತಿಯವಳು ಹಾಗೂ ಶೂದ್ರ ಜಾತಿಯವಳು ಹೆಂಡತಿಯಾಗಬಹುದು. (ಮ.ಸ್ಮೃತಿ. 3-13). ದೇವ ಪ್ರೀತ್ಯರ್ಥವಾದ ಪೂಜಾದಿಗಳು, ಶ್ರಾದ್ಧಾದಿಗಳು, ಅತಿಥಿ ಪೂಜನಾದಿಗಳು ಇತ್ಯಾದಿ ಧರ್ಮಕರ್ಮಗಳನ್ನು ಶೂದ್ರ ಸ್ತ್ರೀಯ ಜೊತೆಗೆ ಸೇರಿ ಮಾಡಿದರೆ ಅವು ನಿಷ್ಫಲವಾಗುತ್ತವೆ. ಅವನಿಗೆ ಸ್ವರ್ಗವೂ ಸಿಗುವುದಿಲ್ಲ. (ಮ.ಸ್ಮೃ. 3-19).

ಈಗ ಮೇಲಿನ ಪದ್ಯದ ಟೀಕಾರ್ಥದತ್ತ ಗಮನಿಸುವಾ.

ಪುರುಷರಂತೆ ಸತಿಯರು ಸಹ ಚೊಕ್ಕ ರೀತಿಯಲ್ಲಿ, ಶ್ರದ್ಧೆ ಭಕ್ತಿಗಳಿಂದ ಮಂತ್ರ ಜಪ ಮಾಡುತ್ತಿದ್ದರೆ, ಅವರ ಮನೋಶುದ್ಧಿಯಾಗುತ್ತದೆ. ಯಾರಿಗೂ ಕೇಡಾಗುವುದಿಲ್ಲ. ಆದರೂ ಪೊಡವಿಯಲ್ಲಿ ಪುರುಷರೇಕೆ ಈ ಪುಣ್ಯ ಕ್ರಿಯೆಯನ್ನು ಪಾಪವೆಂದು ಎಣಿಸುವುದು ? ಹೊಲ್ಲ ಸರಿಯಲ್ಲ. ಇನ್ನು ಜಪವ್ರತಿ ಸತಿಯರನ್ನು ಶಿಕ್ಷಿಸುವುದಂತೂ ವ್ಯರ್ಥ.

ಸತಿ ಗೆಯ್ಯುವ ಕೆಡುಕು ಪತಿಗವಶ್ಯ ಒಪ್ಪುದು.
ಪತಿ ಗೆಯ್ಯುವ ಒಳಿತು ಸತಿಗರ್ಧವು.
ಪತಿ ಗೆಯ್ಯುವ ಕೆಡುಕು ಸತಿಗೇಕೆ ಬಾರದು ?
ವಿಶ್ವದಾಭಿರಾಮ ಕೇಳು ವೇಮ.

"ಹೆಂಡತಿಯು ಸೆರೆ ಕುಡಿಯುವವಳಾದರೆ ದುರಾಚಾರಿಯಾದರೆ, ಪತಿಗೆ ಪ್ರತಿಕೂಲಾಚರಣೆ ಉಳ್ಳವಳಾದರೆ, ಹಣ ಹಾಳು ಮಾಡುವವಳಾದರೆ, ಅವಳನ್ನು ತೊರೆದು ಮತ್ತೊಬ್ಬಳನ್ನು ಮದುವೆಯಾಗಬಹುದು" (ಮ.ಸ್ಮೃ. 9-80).





"ಪತಿಯ ನಡತೆಯು ಚೆನ್ನಾಗಿರದ್ದರೂ, ಕಾಮಾತುರನಾಗಿ ಅವನು ಅನ್ಯ ಹೆಂಗಸರಲ್ಲಿ ಮನಸ್ಸಿಟ್ಟರೂ, ದುಷ್ಟ ಗುಣವುಳ್ಳವನಾಗಿದ್ದರೂ, ಸಹ ಸಾಧ್ವಿಯಾದ ಹೆಂಡತಿಯು ತನ್ನ ಪತಿಯನ್ನು ದೇವರೆಂದು ಸೇವೆ ಮಾಡಬೇಕು" (ಮ.ಸ್ಮೃತಿ. 5-158).

"ಸ್ತ್ರೀಗೆ ಬೇರಾವ ಯಜ್ಞವಿಲ್ಲ, ವ್ರತವೂ ಇಲ್ಲ. ಉಪವಾಸವೂ ಇಲ್ಲ. ಪತಿಯ ಶೂಶ್ರೂಷೆ ಮಾಡುವುದರಿಂದಲೇ ಅವಳಿಗೆ ಸ್ವರ್ಗ ಲೋಕದಲ್ಲಿ ಮಹಿಮೆ ಉಂಟಾಗುತ್ತದೆ." (ಮ.ಸ್ಮೃ. 5-155).

ಸ್ತ್ರೀಯರ ಮತ್ತು ಪುರುಷರ ಗುಣಶೀಲಗಳ ಇಂಥ ಗ್ರಹಿಕೆಯು ವೈದಿಕ ಸಮಾಜದಲ್ಲಿ ಇದೆ. ಈ ಹಿನ್ನೆಲೆಯಲ್ಲಿ ವೇಮನ ಯೋಗಿಗಳ ಪದ್ಯದ ಭಾವಾರ್ಥವನ್ನು ಅರಿಯಬೇಕು.

ಸತಿ ಕೆಡುಕು ಗೆಯ್ದರೆ ಅದರ ಫಲ ಪತಿಗೆ ಅವಶ್ಯ ಬರುತ್ತದೆ. ಇನ್ನು ಪತಿ ಒಳಿತು ಗೆಯ್ದರೆ, ಅವನ ಅರ್ಧಾಂಗಿಯಾದ ಸತಿಗೆ ಅವಶ್ಯ ಬರುತ್ತದೆ. ಆದ್ದರಿಂದ ಅವಳು ತಾನೇ ಪ್ರತ್ಯೇಕ ಪುಣ್ಯ ಕಾರ್ಯಗಳನ್ನು ಮಾಡಬೇಕಿಲ್ಲ. ಮಂತ್ರ ಪಠಿಸಬೇಕಾಗಿಲ್ಲ. ಈಗ ಪ್ರಶ್ನೆಯೆಂದರೆ ಪತಿ ಕೇಡಿಯಾದರೆ, ಕೀಳು ಕೆಲಸ ಮಾಡಿದರೆ, ಪಾಪಿಯಾದರೆ, ಅದರ ಫಲವು ಸತಿಗೇಕೆ ಬಾರದು?

ಆಧ್ಯಾತ್ಮಿಕ ಉನ್ನತಿಯಲ್ಲಿ ಇವರಿಬ್ಬರೂ ಸ್ವತಂತ್ರರು. ಆದರೆ ಲೋಕನಿಂದೆ, ಅಪವಾದಗಳಲ್ಲಿ ಪರಸ್ಪರ ಕೀರ್ತಿ ಅಪಕೀರ್ತಿಗಳ ಭಾಜನರು.

## ಸಾಮಾಜಿಕ ಭದ್ರತೆ :

ಸ್ತ್ರೀಯರು ದೇಹ ಬಲದಲ್ಲಿ ಪುರುಷರಿಗಿಂತ ಕಡಿಮೆ. ಮಾನಸಿಕವಾಗಿ ಅವರಿಗೆ ಸ್ವಲ್ಪ ಲಜ್ಜೆ ಹೆಚ್ಚು. ಚಂಚಲತೆ ಅಧಿಕ. ಸಮಾಜದಲ್ಲಿ ವ್ಯವಹರಿಸುವಾಗ ಅವರಿಗೆ ರಕ್ಷಣೆ ಬೇಕು. ಇದನ್ನು ಎಲ್ಲರೂ ಒಪ್ಪಿದ್ದಾರೆ.

ಕಾಯುವಂಥ ಗಂಡ ಕಾಂತನೆನಿಸುತಿಪ್ಪ.
ಕಾಯಲಾರದಾತ ಸಾವ ರೀತಿ.
ಕಾಯದೆ ಬಿಟ್ಟವಳ ಕಷ್ಟ ಕೇಳಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಪತಿಯು ತನ್ನ ಸತಿಯನ್ನು ಅವಳ ದುರ್ಬಲತೆಯಿಂದ ಕೇಡಿಗೆ ಬಲಿಯಾಗದಂತೆ ಕಾಯುವವನೇ ಕಾಂತನೆನಿಸುತ್ತಾನೆ. ಅಂದರೆ ಒಡೆಯನೆನಿಸುತ್ತಾನೆ. ಯಾವನು ಅವಳ ಶೀಲವನ್ನು, ಮರ್ಯಾದೆಯನ್ನು ಕಾಯುವಲ್ಲಿ ಅಸಮರ್ಥನಾಗುವನೋ, ಚ್ಯುತನಾಗುವನೋ ಅವನು ಇದ್ದರೂ ಸತ್ತಂತೆ. ಮರ್ಯಾದೆಗೇಡಿಯಾಗುತ್ತಾನೆ. ಇತ್ತ ತನ್ನ ಹೆಚ್ಚಿನ ಪ್ರಸಂಗಗಳಲ್ಲಿ ತನ್ನನ್ನು ಯಾರೊಬ್ಬರೂ ಕಾಯದೆ ಬಿಟ್ಟರೆ ಅವಳಿಗೆ ಅಪಾರ ಕಷ್ಟವಾಗುತ್ತದೆ. ಅದು ಎಷ್ಟೆಂದು ತಿಳಿಯಬಹುದೇ ?

"ಹಗಲಿರುಳೂ ಪುರುಷರು ಹೆಣ್ಣು ಮಕ್ಕಳನ್ನು ಅಧೀನದಲ್ಲಿ ಇಟ್ಟುಕೊಳ್ಳಬೇಕು. ಸುಖಭೋಗಾದಿ ವಿಷಯಭಿಲಾಷೆಗಳಲ್ಲಿ ಪ್ರವರ್ತಿಸುವ ಸ್ತ್ರೀಯರನ್ನು ತಮ್ಮ ಅಂಕೆಯಲ್ಲಿ ಇರಿಸಿಕೊಳ್ಳಬೇಕು. (ಮ.ಸ್ಮೃ. 9-2).

College of Business Administration V. S. Vidyanagar Unkal Cross HUBLI-31

ಅಲ್ಪ ವಯಸಿನಲ್ಲಿ ಅಮ್ಮ ಅಪ್ಪನ ರಕ್ಷೆ ;
ಪಕ್ವ ವಯಸಿನಲ್ಲಿ ಪತಿಯ ರಕ್ಷೆ.
ಮುಪ್ಪು ಕಾಲಧಲ್ಲಿ ಮಕ್ಕಳು ಮರಿ ರಕ್ಷೆ.
ಅಂಗನೆಗಿಲ್ಲ ಸ್ವೇಚ್ಛೆ ಅಯ್ಯೊ ! ವೇಮ.

ಸ್ತ್ರೀಯ ಬಾಲಕಿಯಾಗಿರುವಾಗ ಅವಳ ಪಾಲಕರಾದ ತಾಯಿ ತಂದೆಯಂದಿರು ರಕ್ಷಿಸುತ್ತಾರೆ. ಅವಳು ಪಕ್ವ ವಯಸ್ಸು ತಲುಪಿ ತರುಣಿಯಾದಾಗ, ಅವಳ ಪತಿಯು ಅವಳ ರಕ್ಷಣೆಯ ಹೊಣೆ ಹೊರುತ್ತಾನೆ. ಇನ್ನು, ಅವಳು ಮುಪ್ಪಿನ ಅವಸ್ಥೆ ತಲುಪಲು, ಅವಳ ಮಕ್ಕಳು ಅವಳನ್ನು ರಕ್ಷಿಸುತ್ತಾರೆ. ಹೀಗಾಗಿ ಸ್ವಇಚ್ಛೆಯಂತೆ ವರ್ತಿಸುವ ಪ್ರಸಂಗವೇ ಇಲ್ಲವಲ್ಲ ! ಅಯ್ಯೋ ಏನಿದು ?

ಮನುವು ಧರ್ಮ ಸ್ಮೃತಿಯಲ್ಲಿ ಇವೇ ಕಾರಣಗಳನ್ನು ನೀಡಿ "ನ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ" ಅಂದರೆ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅರ್ಹಳೇ ಅಲ್ಲ" ಎಂದು ಘೋಷಿಸಿದ್ದಾನೆ.

ವೇಮನರು ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂದು ನಿರ್ಣಯಿಸದೆ, ಅಂಗನೆಯು ಮನಬಂದಂತೆ (ಸ್ವೇಚ್ಛೆ) ವರ್ತಿಸಲಾರಳು, ಎಂದಿದ್ದಾರೆ.

ಸತಿಯ ದೋಷ ತಿಳಿಯೆ ಸಕಲ ಯಜ್ಞಂಗಳು,
ತಾಯಿ ದೋಷ ತಿಳಿಯೆ, ತಿಥಿಯಾದಿಯು,
ಅಲ್ಲ ಪಥವು ; ಕರ್ಮ ಕಾಂಡ ಕಲ್ಪಿತವಲ್ತೆ?
ವಿಶ್ವದಾಭಿರಾಮ ಕೇಳು ವೇಮ.

"ಸ್ತ್ರೀಯರು ಸಾಮಾನ್ಯವಾಗಿ ಚಪಲ ಚಿತ್ತವುಳ್ಳವರು. ವ್ಯಭಿಚಾರ ಮನಸ್ಕರು ಎಂಬುದರ ಬಗ್ಗೆ ವೇದಗಳಲ್ಲಿಯೇ ಅನೇಕ ಪ್ರಮಾಣಗಳಿವೆ. (ಮ.ಸ್ಮೃತಿ. 9-19).

"ಯಾವ ನನ್ನ ತಾಯಿಯು ಪರಪುರುಷನಲ್ಲಿ ಅಭಿಲಾಷೆ ಹೊಂದಿ, ಪಾತಿವ್ರತ್ಯವನ್ನು ತೊರೆದು, ಪರಪುರುಷನೆಡೆಗೆ ಹೋಗುತ್ತಾಳೋ, ಅವಳು ಹೊಂದಿದ ಆ ರೇತಸ್ಸನ್ನು ನನ್ನ ತಂದೆಯು ಶುದ್ಧಗೊಳಿಸಲಿ" (ಮ.ಸ್ಮೃ. 9-20) ಇದು ವೇದದಲ್ಲಿ ಹೇಳಿದ ಸ್ತ್ರೀ ವ್ಯಭಿಚಾರದ ಮಾತಾಗಿದೆ.

ಈಗ ಪದ್ಯದ ಟೀಕಾರ್ಥದತ್ತ ಹೊರಳುವಾ :

ಸತಿಯು ಪತಿವ್ರತೆಯಾಗಿ ಸಹಧರ್ಮಿಣಿಯಾಗದ್ದರೆ, ಅವಳು ಯಜಮಾನನೊಂದಿಗೆ ಯಜಮಾನಿಯಾಗಿ ಯಜ್ಞ ಕರ್ಮದಲ್ಲಿ ಭಾಗವಿಸಬಹುದು. ಇಲ್ಲವಾದರೆ ಅವಳಿಗೆ ಆ ಅಧಿಕಾರವು ಇರದು. ತಾಯಿಯು ದೋಷಪೂರ್ಣಳಾಗಿದ್ದರೆ ಅವರ ಶ್ರಾದ್ಧ ತಿಥಿಗಳಲ್ಲಿ ಉದಕ ದಾನಗಳು ನಿಷಿದ್ಧವಾಗಿವೆ. ಹೀಗೆ ತಾಯಿಯು ದೋಷ ಪೂರ್ಣಳಾಗಿದ್ದರೆ, ಅದನ್ನು ತಿಥಿಗಳ ಕಾಲಕ್ಕೆ ತಿಳಿಯಬಹುದಾಗಿದೆ, ಎಂದು ವೈದಿಕ ಧರ್ಮ ಶಾಸ್ತ್ರಗಳಲ್ಲಿ ಹೇಳಲಾಗಿದೆ. ಆದರೆ ಈ ಪಥವು ಸರಿಯಾದುದಲ್ಲ. ಇದು ಕರ್ಮ ಕಾಂಡೀಯದ ಕಲ್ಪಿತ ಪರಿಗಣನೆಯಷ್ಟೇ

## ಪುತ್ರಪ್ರಾಪ್ತಿ :

ಸೃಷ್ಟಿಯಲ್ಲಿ ಜೀವಿಗಳು ಉದಿಸುತ್ತಾರೆ.ಅದೇ ರೀತಿ, ಮಾನವ ಜೀವಿಯ ಸಂತಾನವೂ ಮುಂದುವರಿಯುತ್ತದೆ. ಈ ಮುಂದುವರಿಕೆಯು ವಿಧಿ ನಿಯಮ. ಹೀಗಾಗಿ ಸಂತಾನ ಪ್ರಾಪ್ತಿಯು





ಆಯಾ ವ್ಯಕ್ತಿಯ ಭಾಗ್ಯವನ್ನೇ ಅವಲಂಬಿಸಿರುತ್ತದೆ.

ಪೊಡವಿಯಲ್ಲಿ ನರರು ಪುತ್ರರನ್ನು ಕೋರಿ,
ಅಳುತಲಿಹರು ಬಹಳ ಆಸೆಯಿಂದ ;
ಕುವರ ಹುಟ್ಟಿ, ಕೊನೆಗೆ ಕುಲವನುದ್ಧರಿಪನೆ ?
ವಿಶ್ವದಾಭಿರಾಮ ಕೇಳು ವೇಮ.

"ಅಪುತ್ರಸ್ಯ ಗತಿರ್ನಾಸ್ತಿ". ಅಂದರೆ ಪುತ್ರಹೀನನಿಗೆ ಸ್ವರ್ಗಾದಿ ಗತಿಗಳಿಲ್ಲ, ಎಂಬ ವೈದಿಕರ ನಂಬಗೆಯಿದೆ. ಸುತನು ತನ್ನ ತಂದೆಯನ್ನು "ಪುತ್" ಎಂಬ ನರಕದಿಂದ ಉದ್ಧರಿಸುತ್ತಾನೆ. ಆದ್ದರಿಂದ ಮಗನಿಗೆ ಪುತ್ರ ಎಂದು ಸ್ವಯಂಭು ಬ್ರಹ್ಮನೇ ಕರೆದಿದ್ದಾನೆ. (ಮ.ಸ್ಮೃ. 9-138). ಹೀಗೆ ಪ್ರತಿಪಾಸಿದಿಸಿದ ಆಪಾತ ಮನೋಹರವಾದ ವೇದವಾಕ್ಯಗಳನ್ನು ನಂಬಿ,

ಪೊಡವಿಯಲ್ಲಿ ನರರು, ತಥಾಕಥಿತ 'ಪುತ್' ನರಕದಿಂದ ಪಾರಾಗಬೇಕೆಂಬ ಆಸೆಯಿಂದ ಪುತ್ರರನ್ನು ಕೋರಿ, ಅವರಿಗಾಗಿ ಅಳುತ್ತಿದ್ದಾರೆ. ಆದರೆ ವಾಸ್ತವ ಸತ್ಯವನ್ನು ಕಂಡ ಅನುಭವಿಗಳು, ಕುವರನು ಹುಟ್ಟಿ ಅವನೇನು ಕುಲವನ್ನು ಉದ್ಧಾರ ಮಾಡುತ್ತಾರೆಯೇ ? ಜನಕನನ್ನು ಪುನ್ನಾಮ ನರಕದಿಂದ ಪಾರುಗಾಣಿಸುತ್ತಾನೆಯೇ ? ಎಂದು ಕೇಳುತ್ತಾರೆ. ಅವರು ಹೇಳುವ ಮಾತು ಹೀಗೆ :

ಸತಿಯ ಕೂಡಲೆಂದು, ಸುತರ ಪಡೆಯಲೆಂದು,
ವ್ಯಥೆಯ ಪಡುವುದೆಂಥ ವಿಕೃತ ಮತಿಯು ?
ನೆಲದೊಳಿರುವ ಕಲ್ಲು ನೆತ್ತಿಗೆತ್ತಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ವೈರಾಗ್ಯ ಉದಿಸಿದಾಗ ತನ್ನ ಭಾರ್ಯೆಯೇ ತನಗೆ ಭಾರದ ಸಂಕೋಲೆ ಎನಿಸುತ್ತಾಳೆ. ಚಿಕ್ಕ ಮಕ್ಕಳೇ ತನ್ನ ದೇಹಕ್ಕೆ ಚುಚ್ಚುವ ಮೊಳೆಯೆನಿಸುತ್ತಾರೆ. ಮನೆಯೇ ತನಗೆ ಸೆರೆಮನೆ ಎನಿಸುತ್ತದೆ. ಆದರೆ ಆ ಜ್ಞಾನ ಉದಿಸುವ ಪೂರ್ವದಲ್ಲಿ, ತ್ರೈಗುಣ್ಯದ ಪಾಶದಲ್ಲಿ ಸಿಲುಕಿದ ಮನುಷ್ಯನು, ಸತಿಯನ್ನು ಕೂಡಲೆಂದೂ, ಸುತರನ್ನು ಪಡೆಯಲೆಂದೂ, ಬಹಳ ವ್ಯಥೆ ಪಡುತ್ತಾನೆ. ಹಲವು ಕಾಣದ ಶಕ್ತಿಗಳಿಗೆ ಶರಣಾಗಿ ಹರಕೆ ಹೊತ್ತು ಹಲುಬುತ್ತಾನೆ. ಹೀಗೆ, ಜಡತೆಯ ಭಾವವು ತನ್ನ ಮನದಲ್ಲಿರುವಾಗ, ಅವನು ಸತಿ ಸುತರನ್ನು ಕೋರಿ ಪಡೆಯುವುದು ನೆಲದ ಮೇಲಿರುವ ಕಲ್ಲನ್ನು ತಲೆಯ ಮೇಲೆ ಹೊತ್ತು ನಿಂತಂತೆ ಆಗುತ್ತದೆ. ವಿವೇಚಿಸಿ ನೋಡಿದರೆ,

ಸಹನೆಯಿರದ ಸತಿಯ ಸೇರಲು ಫಲವೇನು ?
ಬುದ್ಧಿ ಇರದ ಸುತರು ಪುಟ್ಟಲೇನು ?
ಸದ್ಗುಣಗಳು ಇರದೆ ಸಲೆ ಓದುವುದೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಸಹನೆಯೇ ಇಲ್ಲದ ಕೋಪಿಷ್ಠೆ ಹೆಣ್ಣನ್ನು ಸತಿಯಾಗಿ ಸೇರಿಸಿಕೊಂಡರೆ ಏನು ಫಲ ? ಅದೇ ರೀತಿ, ತನ್ನ ಬಾಳಿನಲ್ಲಿ ಸಂತಸ ತರುವನೆಂದು ತಿಳಿದರೂ ಬುದ್ಧಿಗೇಡಿ ಸುತರು ಹುಟ್ಟಿದರೇನು ಗತಿ? ಇದೆಲ್ಲ ಹೇಗಾಗುವುದೆಂದರೆ, ಸದ್ಗುಣಗಳನ್ನು ಅಳವಡಿಸಿಕೊಳ್ಳದೆ ಬರೀ ಓದು ಓದಿ ಮೂರ್ಖ ಪಂಡಿತನಾದಂತೆ .

V. dyanagar Unkal Cross HUBLI-31

ಕಂದನಿಲ್ಲವೆಂದು ಗುಡಿಗೆ ಹೋಗಿ ಮಣಿಯೆ,
ಬಂಜೆ ಹೆಣ್ಣಿಗೇನು ಬಹನೆ ಕಂದ ?
ಧರ್ಮಹೀನನೊಡನೆ ಧನವು ಇರದ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಶರೀರ ದೋಷದಿಂದ ಬಂಜೆಯಾದ ಹೆಣ್ಣುಮಗಳು ತನಗೆ ಕಂದನು ಹುಟ್ಟಲಿಲ್ಲವಲ್ಲ; ಎಂದು ಕೊರಗಿ ಮೂರ್ತಿಯೆದುರು ಹರಕೆ ಹೊರಲು ಗುಡಿಗೆ ಹೋಗಿ ಮಣಿದರೆ, ಅವಳಿಗೇನು ಕಂದನು ಹುಟ್ಟುವನೇ ? ತನ್ನ ಪೂರ್ವ ಕರ್ಮ ಸಂಸ್ಕಾರದಿಂದ ಅವಳು ಬಂಜೆಯಾಗುವ ಶರೀರ ಸಂರಚನೆ ಪಡೆದಿದ್ದಾಳಷ್ಟೇ. ಪೂರ್ವ ಜನ್ಮದಲ್ಲಿ ಧರ್ಮ ಮಾಡದವನು, ಆ ಕರ್ಮ ಫಲರೂಪದಲ್ಲಿ ಈ ಜನ್ಮದಲ್ಲಿಯೂ ಧನವಿಲ್ಲದವನಾಗಿರುತ್ತಾನೆ. ಕಂದನಿಲ್ಲದಿರುವುದೂ ಅದೇ ರೀತಿ.

ತಂದೆಗಿದ್ದು ಧನವು ತನಯರಿಲ್ಲದಿರಲು,
ಪುತ್ರನಾಸೆಯಿಂದ ಹೊರಳುತಿಹನು.
ಪುತ್ರ ಪ್ರಾಪ್ತಿಯಾಗೆ, ಭೂಮಿ ಮೇಲೆ, ಪುಣ್ಯ.
ಪುರುಷರೆನುವರೆಂಬ ಬುದ್ಧಿ ವೇಮ.

ವೈದಿಕ ಧರ್ಮ ಶಾಸ್ತ್ರಗಳು ಜನರಲ್ಲಿ ಕೆಲ ನಂಬುಗೆಗಳನ್ನು ಹುಟ್ಟಿಸಿವೆ. ಅವುಗಳೆಂದರೆ, "ಪುತ್ರನಿಂದ ಪುರುಷನು ಸ್ವರ್ಗಾದಿ ಲೋಕಗಳನ್ನುಜಯಿಸುತ್ತಾನೆ. (ಪುತ್ರನ ಪುತ್ರ) ಪೌತ್ರನಿಂದ ಮೋಕ್ಷ ಪಡೆಯುತ್ತಾನೆ. ಮೊಮ್ಮಗನ ಮಗನಿಂದ ದಿವ್ಯಧಾಮವನ್ನು ಹೊಂದುತ್ತಾನೆ. (ಮ.ಸ್ಮೃ. 9-137) ಎಂಥ ಮೋಹಕ ಮಾತು ! ಮೋಕ್ಷ ಯಾರಿಗೆ ಬೇಡ ? ಕೇವಲ ಮೊಮ್ಮಗನನ್ನು ಹಡೆದರೆ ಸಾಕು. ಮರಿ ಮೊಮ್ಮಗನನ್ನು ಪಡೆದರಂತೂ ಇನ್ನೂ ಹೆಚ್ಚಿನ ದಿವ್ಯ ಧಾಮ ಪ್ರಾಪ್ತಿ. ಆರ್ಯರ ಎಂಥ ಮೋಹಕ ಕಲ್ಪನೆ !

ತನ್ನ ಪೂರ್ವ ಕರ್ಮ ಫಲವಾಗಿ ತಂದೆಯು ಧನ ಹೊಂದಿರಬಹುದು. ಅವರಿಗೆ ಅಷ್ಟರಿಂದ ಸಮಾಧಾನವಿಲ್ಲ. ತನಗೆ ಪುತ್ರನಿಲ್ಲವಲ್ಲ ? ಎಂಬ ಚಿಂತೆ. ಪುತ್ರ ಪ್ರಾಪ್ತಿಯ ಆಸೆಯಿಂದ ಅವನು ಬಳಲುತ್ತಾನೆ. ಏಕೆಂದರೆ ಪುತ್ರ ಪ್ರಾಪ್ತಿಯಾದರೆ ತನಗೆ ಭೂಮಿಯಲ್ಲಿ ಪುಣ್ಯ ಪುರುಷನೆನ್ನುತ್ತಾರೆಂಬ ಬುದ್ಧಿ ಅವನಿಗಿದೆ.

ಪುಣ್ಯ ಸುಖವ ಪುತ್ರರಿಂದ ಪಡೆಯಬಹುದೆ ?
ಮನುಜ ಕರ್ಮ ಮತದಿ ಬಿದ್ದನಯ್ಯ.
ಆನೆ ಬೀಳಲಾಗ ಎತ್ತಬಹುದೆ ಸೊಳ್ಳೆ ?
ವಿಶ್ವದಾಭಿರಾಮ ಕೇಳು ವೇಮ.

'ಪುತ್' ಎಂಬ ಹೆಸರಿನ ನರಕದಲ್ಲಿ ಕೊಳೆಯದಂತೆ ರಕ್ಷಿಸುವನಾದ್ದರಿಂದ ಪುತ್ರನೆನಿಸುತ್ತಾನೆ ಎಂದು ವೈದಿಕ ಧರ್ಮ ಶಾಸ್ತ್ರದಲ್ಲಿ ಹೇಳಲಾಗಿದೆ. ಇದು ಕರ್ಮಕಾಂಡಿಗಳ ಗ್ರಹಿಕೆ. ಆದರೆ ಇದು ನಿಜವೇ ?

ಮನುಷ್ಯನು ಪುಣ್ಯದಾಯಿ ಸುಖವನ್ನು ಪುತ್ರರಿಂದ ಪಡೆಯಬಹುದೇ ? ಇಲ್ಲ ಇಲ್ಲ. ಆದರೆ ಮನುಷ್ಯನು ಕರ್ಮಕಾಂಡಿಗಳ ಮತದಲ್ಲಿ ಸಿಕ್ಕು ಬಿದ್ದು ಹೀಗೆ ಯೋಚಿಸುತ್ತಾನಷ್ಟೇ. ಆನೆ





ಬೀಳಲಾಗ ಸೊಳ್ಳೆ ಅದನ್ನು ಎತ್ತಬಹುದೇ ? ತನ್ನ ಪೂರ್ವ ಸಂಸ್ಕಾರಗಳ ಹೊರೆಯು ಬಹಳವಿರುವಾಗ ತನ್ನ ದುರ್ಭಾಗ್ಯ ಕೆಲವು ಸೌಕರ್ಯಗಳಿಂದ ತನ್ನನ್ನು ವಂಚಿತನನ್ನಾಗಿ ಮಾಡುತ್ತದೆ. ಆದರೆ ಚಿಕ್ಕ ಘಟನೆಯಿಂದು ಈ ದುರ್ಭಾಗ್ಯದ ಭಾರವನ್ನು ಇಳಿಸಬಹುದೇ ?

ತಾಯಿ ತಂದೆಯುರಲಿ ದಯೆದೋರದ ಪುತ್ರ.
ಹುಟ್ಟಲೇನು ? ಮತ್ತೆ ಸತ್ತರೇನು ?
ಹುತ್ತದಲಿ ಗೆದ್ದಲು ಹುಟ್ಟವೆ ? ಸಾಯವೇ ?
ವಿಶ್ವದಾಭಿರಾ ಕೇಳು ವೇಮ.

ಮಗುವನ್ನುತಾಯಿ ಹೊತ್ತು, ಹೆತ್ತು ಪಾಲಿಸುತ್ತಾಳೆ. ತಂದೆಯು ಪೋಷಿಸಿ ವಿದ್ಯಾ ಬುದ್ಧಿ ಪಡೆಯಲು ಅನುಕೂಲ ಮಾಡಿಕೊಡುತ್ತಾನೆ. ಮಗು, ಬೆಳೆದು, ಪ್ರೌಢನಾದ ಮೇಲೆ ತಂದೆ ತಾಯಿ ಮುದುಕರಾಗಿ, ಪರಾವಲಂಬಿಗಳಾಗುತ್ತಾರೆ. ಆಗ ಅವರ ಋಣವನ್ನು ಸ್ಮರಿಸಿ, ಅವರಿಗೆ ದಯೆ ದೋರಿ ನೆರವು ನೀಡಬೇಕು. ಹಾಗೆ ಮಾಡದ ಮಗನು ಇದ್ದರೆಷ್ಟು ? ಸತ್ತರೆಷ್ಟು ? ಅವನ ಬಾಳು ಕೇಡಿಯಾದ ಗೆದ್ದಲು ಹುಳದ ಬಾಳಿನಂತೆ. ಇರುವೆ ಕೂಡಿಟ್ಟ ಮಣ್ಣಿನಲ್ಲಿ ಮನೆ ಮಾಡಿ ಸಣ್ಣ ಇರುವೆಗಳನ್ನೇ ಕೊಲ್ಲುತ್ತವೆ. ಮುಂದೆ ಹಾವು ಬಂದು ಅಲ್ಲಿ ಸೇರಿಕೊಂಡಾಗ ಗೆದ್ದಲು ಸತ್ತು ಹೋಗುತ್ತದೆ.

ಹಂದಿ ಈಯುತಿಹುದು ಹದಿನೈದು ಕುನ್ನಿ.
ಆನೆ ಈಯ್ತು ಮರಿಯ ತಾನು ಒಂದೆ.
ಉತ್ತಮ ಪುರುಷನಿರಲು ಓರ್ವ ಸಾಲನೇನು ?
ವಿಶ್ವದಾಭಿರಾಮ ಕೇಳು ವೇಮ.

"ಒಬ್ಬನೇ ಮಗನಿದ್ದರೆ, ಅದು ಮಕ್ಕಳೇ ಇಲ್ಲದಂತೆ" ಎಂಬ ನ್ಯಾಯದಿಂದ ಕೆಲವು ಧರ್ಮ ಶಾಸ್ತ್ರ ಕೋವಿದರು, ಎರಡನೇ ಮಗನನ್ನು ಹುಟ್ಟಿಸಲೂಹುದು ಎಂದು ಹೇಳುತ್ತಾರೆ. (ಮ.ಸ್ಮೃ. 9-61). ಹೀಗೆ ಹೆಚ್ಚು ಹೆಚ್ಚು ಮಕ್ಕಳನ್ನು ಹೆರುವುದನ್ನು ಧರ್ಮ ಶಾಸ್ತ್ರಗಳು ಪ್ರೋತ್ಸಾಹಿಸಿ, ಜನರಲ್ಲಿ ಮಕ್ಕಳ ಸಂಪತ್ತನ್ನೇ ಹೆಚ್ಚಿಸಲು ಆಕಾಂಕ್ಷೆಯನ್ನು ಮೂಡಿಸಿವೆ. ಇದು ಕುಟುಂಬ ನಿಯಂತ್ರಣ ಯೋಜನೆಗೂ ಮಾರಕವಾಗಿದೆ. ಆದ್ದರಿಂದ ವೇಮನ ಯೋಗಿಗಳು ಓರ್ವ ಮಗನಾದರೆ ಸಾಕು ಎಂದು ತಿಳಿಸಿದ್ದಾರೆ.

ಹಂದಿಯಂಥ ಹೊಲಸು ಪ್ರಾಣಿಯು ಹದಿನೈದು ಮರಿಗಳ ವರೆಗೆ ಈಯುತ್ತದೆ. ಅದೇ ಆನೆಯಂಥ ದೊಡ್ಡ ಗಂಭೀರ ಪ್ರಾಣಿಯು ಒಂದೇ ಒಂದು ಮರಿಯನ್ನು ಈಯುತ್ತದೆ. ಅಂದ ಮೇಲೆ, ಪುತ್ರನು, ಉತ್ತಮ ಪುರುಷನಾಗಿದ್ದರೆ, ಓರ್ವನು ಸಾಕಾಗುವುದಿಲ್ಲವೇ ? ಒಬ್ಬನೇ ಮಗನಿದ್ದರೆ, ಮಕ್ಕಳೇ ಇಲ್ಲದಂತೆ ಎಂಬ ಮೂಢ ಭಾವನೆಯೇಕೆ ?

## ಕುಪುತ್ರ ಸಂತಾನ :

ಮೇಲು ಕೀಳು ಭಾವನೆಯನ್ನು, ಹುಟ್ಟಿದ ಜಾತಿಯಿಂದ, ಗುರುತಿಸುವ ದುಷ್ಟ ಪದ್ಧತಿಯನ್ನು ಸಂಚಾರೀ ಆರ್ಯರು ಪ್ರತಿಪಾದಿಸಿದ್ದಾರೆ. ಗುಣ ಕರ್ಮಾನುಸಾರ, ಸಮಾಜದಲ್ಲಿ ವರ್ಣ ವಿಭಜನೆಯಾಗಬೇಕಿತ್ತು. ದುರ್ದೈವದಿಂದ ದೇವರು ಅವರವರ ಗುಣಗಳ ಪರಿಗಣನೆಯಿಂದ

ಅವರವರ ತಕ್ಕ ಕರ್ಮ ಒದಗಿಸುವಂತೆ ವರ್ಣ ವ್ಯವಸ್ಥೆಯನ್ನು ನಿರೂಪಿಸಿದ್ದರೂ ಸಹ, ಸ್ವಾರ್ಥಿಗಳು ವರ್ಣಕ್ಕೂ ಹುಟ್ಟಿಗೂ ಗಂಟು ಹಾಕಿ, ಆಯಾ ವರ್ಣ ಇಲ್ಲವೆ ಜಾತಿಯಲ್ಲಿ ಹುಟ್ಟಿದವನು ಶ್ರೇಷ್ಠ ಇಲ್ಲವೆ ಕನಿಷ್ಠ ಎಂಬ ಮೇಲು-ಕೀಳು ಭಾವನೆಯನ್ನು ಬಿತ್ತಿದರು. ಹೀಗಾಗಿ, ಅವರ ಮೇರೆಗೆ, ಬ್ರಾಹ್ಮಣ ಹೊಟ್ಟೆಯಲ್ಲಿ ಬ್ರಾಹ್ಮಣನು ಹುಟ್ಟುತ್ತಾನೆ. ಅವನಿಗೆ ಅಧ್ಯಯನ, ಅಧ್ಯಾಪಕನ ಅಧಿಕಾರವಿದೆ. ಆಸ್ತಿಯ ಒಡೆತನದ ಅಧಿಕಾರವಿದೆ. ಅವನು ಮಾತ್ರ ಉಳಿದ ಜಾತಿಯವರಿಗೆ ವೇದಗಳನ್ನು ಕಲಿಸಬೇಕು. ಉಳಿದವರು ಕಲಿಸಬಾರದು. ಇನ್ನು ಸಮಾಜದ ಮುಕ್ಕಾಲು ಪಾಲು ಜನರನ್ನೂ ತಾವು ಸೋಲಿಸಿದ 'ದಾಸ'ಜನರನ್ನೂ ಧರ್ಮ ಕಾರ್ಯಗಳಿಂದ, ಯಜ್ಞ ಯಾಗಗಳಿಂದ ವೇದಾಧ್ಯಯನದಿಂದ ದೂರವಿರಿಸಿದರು. ಇದು ಬಹುಕಾಲದಿಂದ ಹೀಗೇ ನಡೆದು ಬಂದಿದೆ. "ಮುಸಲ್ಮಾನರು ಸಿಂಧ ಮತ್ತು ಪಂಜಾಬ ದೇಶದ ಕೆಲ ಭಾಗವನ್ನು ವಶಪಡಿಸಿಕೊಂಡಾದ ಮೇಲೆ, ನೂರು ವರ್ಷಗಳ ತರುವಾಯ ಶಂಕರಾಚಾರ್ಯರು ಉದಯಿಸಿದರು. ಅವರ ಇಡೀ ವೇದಾಂತದ ಸಾರವೆಂದರೆ ಶೂದ್ರರು ವೇದಾಧ್ಯಯನವನ್ನು ಮಾಡಕೂಡದು, ಎಂದು. ವೇದ ವಾಕ್ಯಗಳನ್ನು ಕೇಳುವ ಶೂದ್ರರ ಕಿವಿಗಳಲ್ಲಿ ಅರಗನ್ನೂ ಸೀಸನ್ನೂ ತುಂಬಬೇಕು. ಉಚ್ಚರಿಸುವ ನಾಲಗೆಯನ್ನು ಕತ್ತರಿಸಬೇಕು. ವೇದ ಮಂತ್ರ ಧಾರಣ ಮಾಡುವವರನ್ನು ಕೊಲ್ಲಬೇಕು. ಇದು ಅವರ ವೇದಾಂತ ! (ಭಗವಾನ ಬುದ್ಧ-ಕೋಸಂಬೀಕೃತ ಪುಟ 14) ಹೀಗೆ ಮುಕ್ಕಾಲು ಪಾಲು ಜನರನ್ನು ಧರ್ಮದ ಅರಿವಿನಿಂದ ವಂಚಿಸಿದ ಆರ್ಯ ಪುರೋಹಿತರು, ವರ್ಣವನ್ನು ಜಾತಿಗೆ ಗಂಟು ಹಾಕಿ, ಆಯಾ ಜಾತಿಯ ಸತಿ ಪತಿಯರಿಂದ ಅವರ ವರ್ಣದ ಅಂದರೆ ಗುಣ ಕರ್ಮಕ್ಕೆ ಸೂಕ್ತರಾದ ಪುತ್ರರೇ ಹುಟ್ಟುವರೆಂದು ಗ್ರಹಿಸಿದರು. ಅವರ ಧರ್ಮ ಶಾಸ್ತ್ರಾನುಸಾರ ವಾಲ್ಮೀಕಿ, ವ್ಯಾಸ, ಕೃಷ್ಣ, ವಸಿಷ್ಠ, ಮಾತಂಗ ಮುನಿ ಮುಂತಾದವರು, ಬ್ರಾಹ್ಮಣರೂ ಅಲ್ಲ, ಕ್ಷತ್ರಿಯರೂ ಅಲ್ಲ. ಅವರು ಜನ್ಮದಿಂದ ಶೂದ್ರರು. ವರ್ಣದಿಂದ ಬ್ರಾಹ್ಮಣರಷ್ಟೇ. ಇದರಿಂದ ತಿಳಿದು ಬರುವುದೇನೆಂದರೆ, ಪುತ್ರನು ತಂದೆಯ ವರ್ಣದವನಾಗಬೇಕಿಲ್ಲ. ಬ್ರಾಹ್ಮಣನ ಮಗನು ಬ್ರಾಹ್ಮಣನಲ್ಲ. 'ಜನ್ಮನಾ ಜಾಯತೇ ಶೂದ್ರಃ' ಎಲ್ಲರೂ ಜನ್ಮದಿಂದ ಶೂದ್ರರೇ... ಮುಂದೆ ಅವರು ಹೊಂದಿದ ಗುಣಗಳಿಂದ ಅವರವರ ವರ್ಣಕ್ಕೆ ಸೇರುತ್ತಾರೆ. ಒಳ್ಳೆಯವನ ಮಗನು ಒಳ್ಳೆಯ ಗುಣದವನೇ ಆಗಬೇಕಿಲ್ಲ. ಮಗನು ತಾಯಿ ತಂದೆಯಿಂದ ತನ್ನ ದೇಹ ಸೌಂದರ್ಯವನ್ನು ಬಣ್ಣ, ಕೇಶ ಇತ್ಯಾದಿ ಪಡೆಯಬಹುದಷ್ಟೇ. ಅನುವಂಶಕ ರೋಗ ಅಂಟುವುದು ಸಹ ತನ್ನ ಪೂರ್ವ ಸಂಸ್ಕಾರದಿಂದ. ಆ ದೋಷಯುಕ್ತ ಶರೀರ ಹೊಂದಿದ ತಾಯಿ ತಂದೆಯರಲ್ಲಿ ಜನಿಸುವುದರಿಂದ ಘಟಿಸುತ್ತದೆ. ಅವನ ಗುಣಗಳು ಅವನ ಮಾನಸ ಶರೀರಕ್ಕೆ ಸಂಬಂಧಿಸಿರುತ್ತವೆಯೇ ಹೊರತು ಭೌತಿಕ ದೇಹಕ್ಕಲ್ಲ. ಈ ಸತ್ಯವನ್ನು ವೈದಿಕ ಧರ್ಮ ಶಾಸ್ತ್ರಕಾರರು ಮುಚ್ಚಿಟ್ಟಿದ್ದಾರೆ.

ಆದ್ದರಿಂದಲೇ ಮಹಾಯೋಗಿ ವೇಮನರು ಹೀಗೆ ಹಾಡಿದ್ದಾರೆ.

ಓರ್ವ ತಾಯಿಯುದರ, ವಸುಧೆಯಲಿ ಹತ್ತು ಜನ
ಪುತ್ರ ಸಂತತಿಯು ಪುಟ್ಟೆ ಬಳಿಕ,
ಓರ್ವಗೀವ ಬುದ್ಧಿ, ಓರ್ವಗೀಯ ಹರನು.
ವಿಶ್ವದಾಭಿರಾಮ ಕೇಳು ವೇಮ.

ಅದೇ ತಾಯಿ-ತಂದೆಯಿಂದಿರ ಹೊಟ್ಟೆಯಲ್ಲಿ ಹುಟ್ಟಿದ ಸೋದರರು ಅದೇ





ವರ್ಣದವರಾಗಿರಬೇಕಿಲ್ಲ. ಈ ಭೂಮಿಯಲ್ಲಿ ಒಬ್ಬ ತಾಯಿಯ ಉದರದಲ್ಲಿ ಹತ್ತು ಜನ ಹುಟ್ಟುತ್ತಾರೆ. ಆದರೆ ವಿಧಿ ಕರ್ತನಾದ ಹರನು ಬೇರೆ ಬೇರೆಯವರ ಪೂರ್ವ ಸಂಸ್ಕಾರಾನುಸಾರ, ಒಬ್ಬೊಬ್ಬರಿಗೆ ಒಳಿತು ಕೆಡುಕುಗಳನ್ನು ವಿವೇಚಿಸುವ ಬುದ್ಧಿಯನ್ನು ಕೊಟ್ಟಿರುತ್ತಾನೆ. ಇನ್ನೊಬ್ಬನಿಗೆ ಕೊಟ್ಟಿರುವುದಿಲ್ಲ. ಅಂದರೆ ಒಬ್ಬನು ಸಾತ್ವಿಕ ಗುಣವಂತನಾಗಿರುತ್ತಾನೆ. ಇನ್ನೊಬ್ಬನು ಹಾಗಿರುವುದಿಲ್ಲ.

ಆ॥ ಉತ್ತಮರ ಉದರದಿ ಉಡಾಫೆ ಜನಿಸಿದೊಡೆ,
ಅವನು ಕೆಡಿಸುತಿಹನು ಅಖಿಲ ವಂಶ.
ಕಬ್ಬು ತೆನೆಯು ಹುಟ್ಟೆ ಕೆಡಿಸದೆ ಸಿಹಿಯೆಲ್ಲ ?
ವಿಶ್ವದಾಭಿರಾಮ ಕೇಳು ವೇಮ.

ಓರ್ವ ಮನುಷ್ಯನು ಉತ್ತಮನಾಗಿರಬಹುದು. ಸುಶೀಲನಾಗಿರಬಹುದು. ದಕ್ಷನಾಗಿರಬಹುದು. ಆದರೆ ಅವನ ಮಗನು ತಿಂದು-ತಿರುಗುವ ಉಢಾಳನಾಗಿರಬಹುದು. ಅಂಥ ಉಡಾಫೆ ಮಗನು ತನ್ನ ಕೇಡಿ ಕಾರ್ಯದಿಂದ ತನ್ನ ವಂಶದವರಿಗೇ ಕೆಟ್ಟ ಹೆಸರು ತರಬಹುದು. ಹೀಗೆ ಅವನು ವಂಶವನ್ನೆಲ್ಲ ಕೇಡಿಸುತ್ತಾನೆ. ಕಬ್ಬಿನಲ್ಲಿ ಮಧುರ ಸಿಹಿ ರಸವು ತುಂಬಿರುತ್ತದೆ. ಅದೇ ಕಬ್ಬು, ತೆನೆ ಬಿಟ್ಟ ಮೇಲೆ ಅದರ ಸಿಹಿ ಸ್ವಾದವು ಕೆಟ್ಟು ಹೋಗುತ್ತದಲ್ಲವೇ ?

ಯುಗ ಪುರುಷ ಮಹಾತ್ಮ ಗಾಂಧೀಜಿ ಮತ್ತು ಕಸ್ತೂರಿ ಬಾ ಎಂಥ ಉತ್ತಮ ಸ್ವಭಾವದವರು ! ಆದರೆ ಅವರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಒಂದೊಂದು ವಿಧ. ಒಬ್ಬನಂತೂ ಕುಡುಕ, ಉಡಾಫೆ. ಇದು ಎಲ್ಲರಿಗೂ ತಿಳಿದೇ ಇದೆ.

ಆ॥ ತನ್ನ ಮೌಢ್ಯ ಗುರುತು ತೋರಿ ಹೇಳಲೇನು ?
ತಿಳಿಯಬಹುದೆ ಆತ್ಮ ? ತಿಳಿವೆ ಇರದೆ.
ನೀಚ ಮಗನು ತಂದೆ ನುಡಿಯನಾಲಿಸುವನೆ ?
ವಿಶ್ವದಾಭಿರಾ ಕೇಳು ವೇಮ.

ಒಬ್ಬನು ಮೂಢನಾಗಿರಲೊಲ್ಲನೇಕೆ ? ಆದರೆ ಅವನ ತಂದೆಯು ಧರ್ಮನಿಷ್ಠನಾಗಿರಬಹುದು. ಇಂಥ ಉತ್ತಮ ಪರಿಸರದಲ್ಲಿ ಜನ್ಮ ತಾಳಿದ್ದರೂ ಸಹ, ತನಗೆ ತಿಳಿವು ಇರದೆ ಆತ್ಮ ಜ್ಞಾನವಾಗಬಹುದೇ ? ಮಗನು ತನ್ನ ಗುಣದಿಂದ ತಾಮಸಿಯಾಗಿದ್ದರೆ, ನೀಚಾಧಮನಾಗಿದ್ದರೆ, ತಂದೆಯ ಉಪದೇಶ ಪರ ನುಡಿಗ ಕಿವಿಗೊಡುವನೇ ?

ಕಂದ ಅಡವಿಯೊಳಗೊಂದು ಒಣ ಗಿಡ
ಗಡನೆ ಉರಿ ಜನಿಸಿ, ವೃಕ್ಷ ರಾಶಿಯೆಲ್ಲ ಕೆಡುಗುಂ.
ಕಡು ಹೆಸರಾಂತಿಹ ವಂಶವ,
ಕೆಡಿಸುವನೋರ್ವನೆ ಚಂಡಾಲ ಪುಟ್ಟೆ ವೇಮಾ.

ಚಂಡಾಲ ಎಂದರೆ, ಶೂದ್ರನಿಂದ ಬ್ರಾಹ್ಮಣ ಸ್ತ್ರೀಯಲ್ಲಿ ಪ್ರತಿಲೋಮ ವಿವಾಹದಿಂದ ಹುಟ್ಟಿದವನು ಎಂಬ ಅರ್ಥವಿದೆ. ಆದರೆ ಈ ಪದ್ಯದಲ್ಲಿ ರೂಢಾರ್ಥವಾದ 'ನಡತೆಗೆಟ್ಟವ' ಎಂದು ಬಳಸಲಾಗಿದೆ.

ಒಂದು ಅಡವಿಯಲ್ಲಿ ಒಣಗಿದ ಗಿಡವೊಂದಿದ್ದರೆ, ಆಗ ಆಕಸ್ಮಿಕ ಕಾರಣದಿಂದ ಅದಕ್ಕೆ

ಬೆಂಕಿ ಹತ್ತಿದರೆ, ಆ ಅಡವಿಯ ವೃಕ್ಷರಾಶಿಯಲ್ಲಿ,ಉರಿದು ನಾಶವಾಗುತ್ತದೆ. ಅದೇ ರೀತಿ, ಒಳ್ಳೆ ಹೆಸರು ಪಡೆದು ವಂಶದ ಕೀರ್ತಿಯನ್ನು ಓರ್ವ ನಡತೆಗೆಟ್ಟವನು ಹುಟ್ಟಿ ಕೆಡಿಸುತ್ತಾನೆ.

## ಪುತ್ರ ಭೇದ :

ತನ್ನ ಧರ್ಮ ಪತ್ನಿಯಿಂದ ತಾನು ಹಡೆದ ಪುತ್ರನು ಔರಸ ಪುತ್ರನೆನಿಸುತ್ತಾನೆ. ಆದರೆ ಕಾಮತೃಷೆ ತೀರಿಸಲು ವೇಶ್ಯಾ ಸಂಗ ಮಾಡಿ ಅವಳಿಂದ ಪುತ್ರನನ್ನು ಪಡದರೆ ಅವನು ವೇಶ್ಯಾ ಪುತ್ರನೆನಿಸುತ್ತಾನೆ. ಇನ್ನು ಬೇರೆಯವರು ಪುತ್ರನನ್ನು ತನ್ನ ಆಸ್ತಿಯ ಒಡೆತನಕ್ಕೆ, ಸ್ವಂತ ರಕ್ಷಣೆಗೆ ದತ್ತು ತೆಗೆದುಕೊಂಡರೆ ಅವನು ದತ್ತು ಪುತ್ರನೆನಿಸುತ್ತಾನೆ.

ಔರಸ ಮಗ ನಿನಗೆ ವಾರಸುದಾನಿಹ ;
ವೇಶ್ಯೆಯಲ್ಲಿ ಜನಿಸೆ ವ್ಯರ್ಥ ಮಗನು.
ನೀನು ಸಾಯಲಾಗ, ನೀರನು ಬಿಡಲಾರ.
ವಿಶ್ವದಾಭಿರಾಮ ಕೇಳು ವೇಮ.

"ಪರಿಶುದ್ಧಳಾದ, ಸಂಸ್ಕಾರಾದಿಗಳನ್ನು ಹೊಂದಿದ, ತನ್ನ ಜಾತಿಯವಳಾದ ಹೆಂಡತಿಯಲ್ಲಿ ಹುಟ್ಟಿದ ಮಗನನ್ನು 'ಔರಸ ಪುತ್ರ' ಎನ್ನುವರು. ಹನ್ನೆರಡು ರೀತಿಯಿಂದ ಹುಟ್ಟುವ ಮಕ್ಕಳಲ್ಲಿ ಔರಸ ಪುತ್ರನೇ ಶ್ರೇಷ್ಠನು" (ಮ.ಸ್ಮೃ. 9-166).

"ಔರಸ, ಕ್ಷೇತ್ರಜ, ದತ್ತು, ಕ್ಷತ್ರಿಮ, ಗೂಢೋತ್ಪನ್ನ ಹಾಗೂ ಅಪವಿದ್ಧ ಎಂಬ ಆರು ವಿಧದ ಪುತ್ರರು ಆಸ್ತಿಯಲ್ಲಿ ಹಕ್ಕು ಪಡೆಯುವ ಹಕ್ಕದಾರಿಕೆಯುಳ್ಳವರು" (ಮ.ಸ್ಮೃ. 9-159).

"ಮೃತನಾದವನ ಅಥವಾ ನಪುಂಸಕನ ಅಥವಾ ರೋಗಿಷ್ಠನಾದವನ ಹೆಂಡತಿಯಲ್ಲಿ ಗುರು ಹಿರಿಯರ ಸಮ್ಮತಿಯಂತೆ ನಿಯೋಗ ಮಾಡಿದಾಗ ಹುಟ್ಟಿದ ಮಗನಿಗೆ 'ಕ್ಷೇತ್ರಜ' ಪುತ್ರನೆನ್ನುವರು" (ಮ.ಸ್ಮೃ. 9-167). ವ್ಯಾಸ ಮಹರ್ಷಿಗೆ ಪಾಂಡು ಮತ್ತು ಧೃತರಾಷ್ಟ್ರರು ನಿಯೋಗ ಪುತ್ರರು. ಈಗ ವೇಮನರ ಪದ್ಯದ ಟೀಕಾರ್ಥದತ್ತ ಹೊರಳುವಾ :

ಎಲೈ ಪುರುಷ ಶ್ರೇಷ್ಠನೇ ! ನಿನಗೆ ಔರಸ ಪುತ್ರನು ಆಸ್ತಿಯ ಉತ್ತರಾಧಿಕಾರಿಯಾಗುತ್ತಾನೆ. (ಉಳಿದ ಆವರು ಅಲ್ಪ ಸ್ವಲ್ಪ ಆಸ್ತಿಯ ಪಾಲನ್ನು ಪಡೆಯಬಹುದು. ಬೇರೆ ಆರು ವಿಧದ ಪುತ್ರರು ಕೇವಲ ನೀನು ಸತ್ತ ಮೇಲೆ ನಿನಗೆ ಜಲದಾನ ಮತ್ತು ಪಿಂಡದಾನ ಮಾಡುತ್ತಾರಷ್ಟೇ (ಶ್ರಾದ್ಧ ಕರ್ಮ ಮಾಡುತ್ತಾರೆ). ಆದರೆ ನೀನು ವೇಶ್ಯೆ ಕ್ಷೇತ್ರದಲ್ಲಿ ಬೀಜ ಬಿತ್ತಿದರೆ ಜನಿಸುವ ವೇಶ್ಯಾಪುತ್ರನಿಗೆ ನೀರು ಬಿಡುವ ಅಧಿಕಾರ ಸಹ ಇರುವದಿಲ್ಲ. ಆದ್ದರಿಂದ ವೇಶ್ಯೆಯ ಸಂಗವು ಧರ್ಮ ನಿಷಿದ್ಧವಾಗಿದೆ.

ಸೇರಿ ಉಣ್ಣಬಹುದು ; ಸ್ವಂತ ಪುತ್ರನಿರಲು,
ದತ್ತಕ ಮಗನೆಂಜಲು ಎತ್ತುತಿಹರೆ ?
ಆದರವನ ಬಗೆಗೆ ಕಾಣರು ಈ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಮಕ್ಕಳಿಲ್ಲದವನಿಗೆ ಪ್ರೀತಿ ಪೂರ್ವಕವಾಗಿ ಬಾಲಕನನ್ನು ಅವನ ಮಾತಾ ಪಿತೃಗಳು,





ಉದಕಪೂರ್ವಕವಾಗಿ ಕೊಟ್ಟರೆ, ಪುತ್ರನನ್ನು ಪಡೆದುಕೊಂಡವನಿಗೆ ಆ ಮಗನು 'ದತ್ತಿಮ' (ದತ್ತು) ಪುತ್ರನೆನಿಸುತ್ತಾನೆ.

ಸ್ವಂತ ಮಗನಿದ್ದರೆ ಅವನೊಂದಿಗೆ ಸೇರಿ ಊಟ ಮಾಡಬಹುದು. ಆಸ್ತಿಯ ಉಸ್ತುವಾರಿಯನ್ನು ಅವನಿಗೆ ಒಪ್ಪಿಸಬಹುದು. ಮುಂದೆ ಅವನನ್ನೇ ಉತ್ತರಾಧಿಕಾರಿಯನ್ನಾಗಿ ಮಾಡುತ್ತಾರೆ. ಆದರೆ ದತ್ತಕ ಮಗನು ಹಾಗಲ್ಲ. ಅವನಿಗೆ ತಮ್ಮ ಸಂಪತ್ತಿನ ಕೆಲ ಅಂಶವನ್ನು ಮಾತ್ರ ಕೊಡಬಹುದು. ಕೂಡಿ ಉಣ್ಣುವ ಮಮತೆ ಅಲ್ಲಿ ಇರದು. ಔರಸ ಪುತ್ರನ ಎಂಜಲೆಲೆಯನ್ನು ಎತ್ತಿ ತೆಗೆಯುವಂತೆ ದತ್ತು ಪುತ್ರನ ಬಗೆಗೆ ನಡೆದುಕೊಳ್ಳರು. ಔರಸ ಪುತ್ರನನ್ನು ಕಾಣುವಂತೆ ಅವನನ್ನು ಕಾಣರು.

ಪಂಚಮ ವೇದವೆನೆ ಭಾರತವೆ ಎನ್ನುತ
ಸ್ತುತಿಪರೇಕೆ ಜನ, ಮತಿಯ ತೊರೆದು ?
ಹಿಂಸೆಯರಿತು ನೋಡೆ, ಹೇಗೆ ಇಷ್ಟವಿಹುದು ?
ವಿಶ್ವದಾಭಿರಾಮ ಕೇಳು ವೇಮ.

ಹಾದರದ ಕಥೆಯಿದು, ಸೋದರರ ವಧೆಯಿದು
ಪಠಿಕಿಸಲುಂಟೆ ಪುಣ್ಯ, ಭಾರತವನು
ಪಾಪ ಹರಣವಯ್ಯ ಬಸವ ಪುರಾಣವೆ.
ವಿಶ್ವದಾಭಿರಾಮ ಕೇಳು ವೇಮ.

ವೇದಗಳು ನಾಲ್ಕು. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದ. ಇನ್ನು ಕೆಲವು ಬ್ರಾಹ್ಮಣರು ಮಹಾಭಾರತ ಕಾವ್ಯವನ್ನೂ ಪಂಚಮ ವೇದವೆಂದು, ಬುದ್ಧಿಗೇಡಿಗಳಾಗಿ ಸ್ತುತಿಸುತ್ತಾರೆ. ಏಕೋ ? ಅದರಲ್ಲಿ ಹಿಂಸೆಯೇ ತುಂಬಿದೆ. ಈ ಸ್ತುತಿ ಪಾಠಕರಿಗೆ ಹಿಂಸೆ ಇಷ್ಟವೇ? ಮಹಾಭಾರತದಲ್ಲಿ ಹಾದರದ ಕಥೆಯೇ ಇದೆ. ನಿಯೋಗ ಪುತ್ರರ ಚರಿತ್ರೆಯಿದೆ. ಕ್ಷೇತ್ರಜ ಪುತ್ರರ ಚರಿತ್ರೆಯಿದೆ. ಒಬ್ಬಳಿಗೆ ಐವರು ಗಂಡರಿರುವ ಕಥೆಯಿದೆ. ಮದುವೆಗೆ ಮುನ್ನ ಪುತ್ರ ಜನನದ ಸಂಗತಿಯಿದೆ. ಕ್ಷೇತ್ರ ಕುಂತಿ-ಮಾದ್ರಿಯರದಾದರೂ ಬೀಜ ಯಮಧರ್ಮ, ವಾಯುದೇವ, ಇಂದ್ರ, ಅಶ್ವಿನೀಕುಮಾರರದಾಗಿದೆ. ಪರಾಶರನ ಪ್ರೇಯಸಿಯಾದ ಮತ್ಸ್ಯಗಂಧಿಯು, ಸತ್ಯವತಿಯಾಗಿ ಶಂತನು ಮಹಾರಾಜನ ಪತ್ನಿಯಾಗುತ್ತಾಳೆ. ಹೀಗೆ ಹೆಜ್ಜೆ ಹೆಜ್ಜೆಗೂ ಹಾದರದ ಕಥೆಗಳೇ ತುಂಬಿವೆ. ಬೇರೆ ಏನಿದೆ ಎಂದರೆ, ಸೂದರ-ಸೋದರರ ಮಧ್ಯೆ ಕಾಳಗಗಳಿವೆ. ಕ್ರೂರ ಹಿಂಸೆ ಇದೆ. ಇಂಥ ಭಾರತವನ್ನು ಒರೆಗೆ ಹಚ್ಚಿ ನೋಡಿದರೆ, ಅದರ ಪಾಠದಿಂದ ಪುಣ್ಯವೇನಾದರೂ ಉಂಟೇ ? ಹಾಗೆ, ತುಲನಾತ್ಮಕವಾಗಿ ನೋಡಿದರೆ, (ಪಾಲ್ಕುರುಕಿ ಸೋಮನಾಥರು ತೆಲುಗಿನಲ್ಲಿ ಬರೆದ) 'ಬಸವ ಪುರಾಣ'ವೇ ಪಾಪಹರಣ ಮಾಡಬಹುದು.

ಅದೇ ರೀತಿ, ಆರ್ಯರ ಧರ್ಮ ಶಾಸ್ತ್ರಗಳಲ್ಲಿ ಸ್ವಾಯಂಭುವ ಮನುವು ಬ್ರಹ್ಮನಿಂದ ಕೇಳಿದನೆಂದು, ಹೇಳಿದ ಹನ್ನೆರಡು ವಿಧದ ಪುತ್ರರಲ್ಲಿ ಔರಸ, ದತ್ತಕ, ಕೃತ್ರಿಮ, ಕ್ರೀತ ಪುತ್ರರನ್ನು ಬಿಟ್ಟರೆ ಉಳಿದವರೆಲ್ಲ ನಿಜವಾಗಿ ವ್ಯಭಿಚಾರ ಸಂತತಿಯೇ ಸರಿ. ಇಂಥ ಶೀಲಗೇಡಿ ಕ್ರಿಯೆಗಳಿಗೆ ಧಾರ್ಮಿಕ ಮನ್ನಣೆ ಕೊಡುವುದು ಲೇಸಲ್ಲ.

## ಸಮರಸವೇ ಜೀವನ :

'ಸರಸ ಜನನ, ವಿರಸ ಮರಣ, ಸಮರಸವೇ ಜೀವನ' ಎಂದು ವರಕವಿ ಬೇಂದ್ರೆ ಹಾಡಿದ್ದಾರೆ. ರಸ ಎಂದರೆ ಸಂತಸ. ಆನಂದ ತರಂಗ. ಸತಿ ಪತಿಯರ ಆನಂದ ತರಂಗಗಳು ಸಹಕಾರಿಯಾದರೆ ಅದುವೇ ಸುಖ ದಾಂಪತ್ಯದ ಜನನ. ಒಬ್ಬರ ಸಂತೋಷವು ಇನ್ನೊಬ್ಬರಿಗೆ ದುಃಖ ತರುವ ವಿರಸವಾದರೆ ಅದುವೇ ಸುಖ ದಾಂಪತ್ಯದ ಮರಣ. ಇನ್ನು ಒಬ್ಬರ ಆನಂದ ತರಂಗಗಳು, ಇನ್ನೊಬ್ಬರ ಆನಂದ ತರಂಗಗಳೊಂದಿಗೆ ಸಮರಸವಾದರೆ ಅದುವೇ ಸುಖ ದಾಂಪತ್ಯ ಜೀವನದ ನೆಲೆಗಟ್ಟು. ಇಂಥ ಸಮರಸವೇ ನಿಜವಾದ ಸುಖೀ ಜೀವನ.

ಗುಣವತಿಯಿರೆ ಯುವತಿ, ಗೃಹವು ಚೊಕ್ಕಟಯ್ಯ.
ಬೀಳು ಮನೆಯ ದೀಪ ಬೆಳಗಿದಂತೆ.
ದೇವಿಯಿಪ್ಪ ಮನೆಯು ದೇವಾಲಯವಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಹೆಣ್ಣು ರೂಪವತಿಯಾಗಿರಬೇಕು; ಗುಣವತಿಯಾಗಿರಬೇಕು; ಗಂಡು ವಿದ್ಯಾವಂತನಾಗಿರಬೇಕು. ಕಾರ್ಯೋತ್ಸಾಹಿಯಾಗಿರಬೇಕು ಎಂದು ಬಲ್ಲವರು ಹೇಳುತ್ತಾರೆ. ಅದೇ ರೀತಿ, ಯುವತಿಯು ಗುಣವತಿಯಾಗಿದ್ದರೆ, ಗೃಹವು ಚೊಕ್ಕಟವಾಗಿರುತ್ತದೆ. ಹೊಂದಾಣಿಕೆಯಿಂದ ಅಂದ ಚೆಂದವಾಗಿರುತ್ತದೆ. ಹಾಳು ಮನೆಯಲ್ಲಿ ದೀಪ ಉರಿದು ಮಂಗಳ ಮಾಡಿದಂತೆ ಗುಣವಂತ ಯುವತಿಯ ಉಪಸ್ಥಿತಿಯು ಮನೆಯನ್ನು ಬೆಳಗುತ್ತದೆ. ದೇವಾಲಯದಲ್ಲಿ ಜಾಗ್ರತ ದೇವಿ ಇದ್ದರೆ ಹೇಗೆ ಮಂಗಳಕರವಾಗುವುದೋ ಹಾಗೆ ಗುಣವತಿ ಯುವತಿಯ ಇರವು.

ಗುಣವಂತೆ ತಾನಿರೆ, ಗೃಹಕಿಪ್ಪುದು ಕಾಂತಿ ;
ತಿಮಿರ ತಾಣ ದೀಪ ತೊಳಗಿದಂತೆ.
ದುರ್ಗುಣೆ ಇರಲಾಗ ದೀಪ ನಂದಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ಗೃಹಿಣಿಯು ತಾನು ಸದ್ಗುಣಗಳನ್ನು ಹೊಂದಿದ್ದರೆ, ಅವಳಿರುವ ಗೃಹಕ್ಕೆ ಕಾಂತಿ ಇರುತ್ತದೆ. ಕತ್ತಲು ಮುಸುಕಿದ ಜಾಗದಲ್ಲಿ ದೀಪವು ತೊಳಗಿ ಬೆಳಗಿದರೆ ಎಲ್ಲವೂ ಬೆಳ್ಳಂ ಬೆಳಕಾಗುವಂತೆ, ಅವಳ ಇರವು. ಅದೇ, ಅವಳು ಸದ್ಗುಣೆಯಾಗದೆ ದುರ್ಗುಣೆಯಾಗಿದ್ದರೆ, ಮನೆಯಲ್ಲಿಯ ಶಾಂತಿ ಸಮಾಧಾನಗಳ ದೀಪವು ನಂದಿದಂತಾಗುತ್ತದೆ.

ಈ ವಿಷಯದಲ್ಲಿ ಮನುಸ್ಮೃತಿಯ ಅಭಿಮತವೂ ಇದೇ ಆಗಿದೆ :

"ಎಲ್ಲಿ ಸ್ತ್ರೀಯರಿಗೆ ಗೌರವ ಸನ್ಮಾನಗಳು ದೊರೆಯುತ್ತವೆಯೋ, ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ. ಯಾವ ಮನೆಯಲ್ಲಿ ಸ್ತ್ರೀಯರು ಗೌರವಿಸಲ್ಪಡುವುದಿಲ್ಲವೋ, ಅಲ್ಲಿ ಮಾಡುವ ಎಲ್ಲ ಯಜ್ಞ-ಪೂಜೆಗಳು ನಿಷ್ಫಲವಾಗುತ್ತವೆ. (ಮ.ಸ್ಮ್ರ. 3-56).

ಇಲ್ಲಿ ಅಂತರವಿಷ್ಟೇ. ಮಹಾಯೋಗಿಗಳು ಹೃದಯದಲ್ಲಿ ದೇವರಿದ್ದಾನೆ ಎಂದು ಕಂಡು ಅನುಭವಿಸಿದರು. ಸ್ಮೃತಿ ಕಾರ ಮನುವು ದೇವತೆ ಹೊರಗೆಲ್ಲೋ ಇದೆ, ಎಂದು ಪ್ರತಿಪಾದಿಸುವವ.





ತರುಣಿ ಪುಣ್ಯವತಿ ; ವರ ನರನ ಕರ ಪಿಡಿಯೆ,
ತಿರುಗಿ ಪಾಪಿ, ಪತಿಯು ತುಚ್ಛನಿರಲು ;
ಪುರುಷನ ನಡೆವಳಿಯೆ ನಾರಿಯೊಳಗಿಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

ಹಿಂದೆ ಪುಣ್ಯ ಕರ್ಮಗಳನ್ನು ಮಾಡಿದ್ದರೆ, ಮುಂದೆ ಸುಖಭಾಜನಳಾಗುತ್ತಾಳೆ. ಅಂಥ ತರುಣಿಯು, ಶ್ರೇಷ್ಠ ವರನ ಕೈ ಹಿಡಿದು ವಿವಾಹವಾದರೆ, ಪುಣ್ಯವತಿಯಾಗಿ ಸುಖ-ಸಂತೋಷವನ್ನು ಅನುಭವಿಸುತ್ತಾಳೆ. ಆದರೆ ತನ್ನ ಪತಿಯು ತುಚ್ಛನಾಗಿದ್ದರೆ, ಹೀನನಾಗಿದ್ದರೆ,ಅವಳು ಪಾಪ ಭಾಜನಳಾಗುತ್ತಾಳೆ. ದುಃಖವನ್ನನುಭವಿಸುತ್ತಾಳೆ. ಏಕೆಂದರೆ, ಪುರುಷನ ನಡೆನುಡಿಗಳು ಅವನ ಪತ್ನಿಯ ಮೇಲೆ ತುಂಬಾ ಪ್ರಭಾವ ಬೀರುತ್ತವೆ. ಅವನು ಪರಸ್ತ್ರೀಯರತ್ತ ಮನಸ್ಸು ಹೊರಳಿಸಿದರೆ, ಇವಳು, ಅತೃಪ್ತಳಾಗಿ, ಪರಪುರುಷರತ್ತ ವಾಲಬಹುದು.

ನಾಥನ ಪಡೆದಂಥ ನಾರಿಯಾತನನ್ನು,
ದೇವನೆಂದು ನಂಬಿ ಸೇವೆ ಗೆಯ್ಯೆ,
ತಕ್ಕದಷ್ಟೆ ; ಪರಗೆ ತಾನು ಅಂಟಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಸಂರಕ್ಷಕನಾದ ಪತಿಯನ್ನು ಪಡೆದಂಥ ನಾರಿಯು ಆ ನಾಥನನ್ನು ದೇವರೆಂದು ಸೇವೆ ಗೆಯ್ಯಬೇಕು. ಹಾಗೆ ಮಾಡುವುದು ತಕ್ಕ ಕರ್ತವ್ಯ. ಹಾಗೆ ಮಾಡದೆ ಬೇರೊಬ್ಬ ಪುರುಷನಿಗೆ ತಾನು ಅಂಟಬಹುದೇ ? ಅದು ಪಾತಿವ್ರತ್ಯಕ್ಕೆ ಭಂಗ ತರುತ್ತದೆ. ಕುಟುಂಬದ ನೆಮ್ಮದಿ ಹಾಳಾಗುತ್ತದೆ.

ಮನು ಧರ್ಮ ಸೂತ್ರದಲ್ಲಿಯೂ ಇದೇ ಬಗೆಯ ಹಿತವಚನವಿದೆ :

"ಪತಿಯನ್ನು ಬಿಟ್ಟು ಸ್ತ್ರೀಗೆ ಇನ್ನಾವ ಬೇರೆ ಯಜ್ಞವೇ ಇಲ್ಲ. ಪತಿ ಸೇವೆಯನ್ನು ಬಿಟ್ಟು ಇನ್ನಾವ ವ್ರತವೂ ಇಲ್ಲ. ಉಪವಾಸವೂ ಇಲ್ಲ ಪತಿವ್ರತಾಭಾವದಿಂದ ಪತಿಸೇವೆ ಮಾಡುವದರಿಂದಲೇ ಸ್ತ್ರೀಯು ಸ್ವರ್ಗ ಲೋಕದಲ್ಲಿ ಗೌರವ ಪಡೆಯುತ್ತಾಳೆ. (ಮ.ಸ್ಮ್ರ. 5-155).

ಅಂತರವಿಷ್ಟೇ . ಮನು ಸ್ಮೃತಿಯಲ್ಲಿಸ್ವರ್ಗ ಕಲ್ಪನೆಯನ್ನು ತರಲಾಗಿದೆ. ಮಹಾಯೋಗಿಗಳಲ್ಲಿ ಇಂಥ ಮೂಢ ಶ್ರದ್ಧೆಗಳಿಗೆ ಇಂಬಿಲ್ಲ. ಏಕೆಂದರೆ ಸ್ವರ್ಗ ನರಕಗಳೆಂಬ ಬೇರೆ ಲೋಕಗಳಿಲ್ಲ. 'ನ ಸ್ವರ್ಗೋ, ನ ರಸಾತಲಃ' ಸುಖ ದುಃಖವನ್ನು ಅನುಭವಿಸಲು ಮಸ್ತಿಷ್ಕ ಬೇಕು. ನರ-ವ್ಯವಸ್ಥೆ ಬೇಕು. ಮರಣಾ ನಂತರ ಈ ಸ್ಥೂಲ ಶರೀರವು ಕಳಚಿ, ಲಿಂಗ ಶರೀರವಷ್ಟೇ ಉಳಿದಿರುತ್ತದೆ. ಲಿಂಗ ಶರೀರದಲ್ಲಿ ಮನಸ್ಸಿನ ಸಂಸ್ಕಾರಗಳಿರುತ್ತವೆ ಆದರೆ ಅನುಭವಿಸುವ ಸ್ಥೂಲ ಕರಣಗಳಿರುವುದಿಲ್ಲ. ಅದಕ್ಕಾಗಿಯೇ ಮರುಜನ್ಮದ ಅಗತ್ಯವಿದೆ.

ಒಂದಾದ ದಂಪತಿ ಚೆಂದದ ಸಂಸಾರ,
ನಂದನನ ನಡೆ ನುಡಿ ನಂದಿನಿಯೊಳು
ಸತಿಗಿತ್ತ ರಕ್ಷಣೆಯೆ ಸ್ವಂತಕ್ಕೆ ರಕ್ಷಣೆಯು.
ವಿಶ್ವದಾಭಿರಾಮ ಕೇಳು ವೇಮ.

ಸತಿ ಪತಿಯರು ಸಂಸಾರದ ಸುಖ ದುಃಖಗಳಲ್ಲಿ ಒಂದಾಗಿರಬೇಕು. ಒಬ್ಬರ ಸುಖವು

ಇನ್ನೊಬ್ಬರ ಸುಖಕ್ಕೆ ಪೂರಕವಾಗಿ ಕುಟುಂಬದ ಸುಖವು ಇಮ್ಮಡಿಯಾಗಬೇಕು. ದುಃಖವನ್ನು ಹಂಚಿಕೊಂಡು ಕಡಿಮೆ ಮಾಡಿಕೊಳ್ಳಬೇಕು. ಹಾಗಾದರೆ ಒಂದಾದ ದಂಪತಿಯ ಸಂಸಾರವು ಚೆಂದವಾಗಿರುತ್ತದೆ. ಸಂತೋಷ ಪಡಿಸುವ ನಂದನನಾದ ಪತಿಯ ನಡೆ ನುಡಿಗಳು, ಸಂತಸ-ದಾಯಿಯಾದ ನಂದಿನಿಯಲ್ಲೂ-ಪ್ರತಿಬಿಂಬಿಸುತ್ತವೆ. 'ಪಾಲಯತಿ ಇತಿ ಪತಿಃ' ಹೀಗೆ ಪತಿಯು ಸತಿಗೆ ಅವಳ ಕಷ್ಟದ ಸಮಯಕ್ಕೆ ರಕ್ಷಣೆ ಇತ್ತರೆ, ಆ ರಕ್ಷಣೆಯು ತನ್ನ ಸ್ವಂತ ರಕ್ಷಣೆಯಾದಂತೆ. ಏಕೆಂದರೆ, ಸತಿಗೆ ವಿಪತ್ತು ಒದಗಿದರೆ, ಅವಳ ಮರ್ಯಾದೆಗೆ ಭಂಗ ಬಂದರೆ, ಅವಳು ತನ್ನ ಅರ್ಧಾಂಗಿಯೆನಿಸುವುದರಿಂದ ಆ ವಿಪತ್ತು ಮತ್ತು ಮರ್ಯಾದೆಯ ಭಂಗ ತನಗೂ ಆಗುತ್ತದಲ್ಲವೇ?

ಮನವಾರೆ ಮುದಿಸುವ ಮಡದಿ ತನ್ನವಳಿರೆ,
ಮನೆಗಾದರೂ ಒಡೆಯನೆನಿಸಬಹುದು.
ಇನಿತಾದರು ಇರದ ಬದುಕು ಅಧಮ ಜಗದಿ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಮಡದಿಯು ತನ್ನನ್ನು ಮನಃ ಪೂರ್ವಕವಾಗಿ ಪ್ರೀತಿಸುತ್ತಿದ್ದರೆ, ಆ ಪ್ರೀತಿಯಲ್ಲಾವ ತೋರಿಕೆಯ ಹಾವ ಭಾವಗಳಿಲ್ಲದಿದ್ದರೆ, ಆ ಗಂಡನು ತನ್ನ ಮನೆಗಾದರೂ ನಾಥ ಇಲ್ಲವೆ ಒಡೆಯನೆನ್ನಿಸಬಹುದು. ಇಷ್ಟಾದರೂ ನಿಷ್ಕಲ್ಮಶ ಪ್ರೀತಿಯೂ ಇಲ್ಲವಾದರೆ, ಅಂಥ ದಾಂಪತ್ಯ ಜೀವನವು ಅಧಮವಾಗುತ್ತದೆ.

ಭುಕ್ತಿ ಮುಕ್ತಿಯುಂಟು, ಭಾಗ್ಯ ಮತ್ತೆ ಉಂಟು.
ಚಿತ್ತವರಿತ ಮಡದಿ ಜೊತೆಯೊಳಿರಲು.
ಚಿತ್ತವರಿಯದ ಸತಿ, ಹತ್ತಿರಿರಲು ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಪತಿಯ ಮನಸ್ಸಿನ ಓಘವನ್ನು, ಬೇಕು-ಬೇಡಗಳನ್ನು ಅರಿತು, ಅವುಗಳಿಗೆ ತಕ್ಕಂತೆ ಬಾಳುವ ಸತಿಯು ಜೊತೆಗೆ ಇದ್ದರೆ, ಭುಕ್ತಿ ಅಂದರೆ ಐಹಿಕ ಸುಖವೂ ಉಂಟು ; ಮುಕ್ತಿ ಅಂದರೆ ಸಾಂಸಾರಿಕ ತಾಪತ್ರಯಗಳಿಂದ ಬಿಡುಗಡೆಯೂ ಉಂಟು. ಮತ್ತು ಸುಖ ಸಂತೋಷಗಳನ್ನು ಪಡೆಯುವ ಭಾಗ್ಯವೂ ತನ್ನದಾಗುತ್ತದೆ.

ಸಂಸಾರ ಸುಖಕ್ಕೆ ಆಧಾರವಾದ ಪರಸ್ಪರ ಪ್ರೀತ್ಯಾದರಗಳು ತಾಯಿಯಲ್ಲಿ ವಾತ್ಸಲ್ಯವಾಗಿ, ಹೆಂಡತಿಯಲ್ಲಿ ಪ್ರೇಮವಾಗಿ ವ್ಯಕ್ತವಾಗುತ್ತವೆ. ಸ್ತ್ರೀ-ಪುರುಷರ ಸಂಬಂಧಗಳು ಬೇರೆ ಬೇರೆಯಾದರೂ ಅವರನ್ನು ಜೋಡಿಸುವ ಸೂತ್ರ ಒಂದೇ. ಅದೇ ಪ್ರೀತಿ.

ಕಂದ ॥
ಹೆಂಡತಿಯೆನೆ ಆತ್ಮ ಕಣಾ.
ಹೆಂಡತಿಯೆನೆ ತಾಯಿ ಕಣಾ ! ಅರಿತೊಡೆ ಮನದೋಳ್
ಹೆಂಡತಿ ತಾಯಿಯೆನಲಾರು ?
ಕಂಡರಿಯಬೇಕಿದನೆ ನೀ, ತಪ್ಪದೆ, ವೇಮಾ.

'ಆಪ್ತಿ ಇತಿ ಆತ್ಮಾ'. ಅಂದರೆ ತನ್ನಲ್ಲಿ ಸೇರಿಸಿಕೊಳ್ಳುವುದರಿಂದ ಆತ್ಮ ಎನ್ನುತ್ತಾರೆ. ಹೆಂಡತಿಯು ಸ್ತ್ರೀ ರೂಪದಲ್ಲಿ ತನಗೆ ಜನ್ಮ ಕೊಡುತ್ತಾಳೆ. ಪತ್ನಿಯ ರೂಪದಲ್ಲಿ ಆನಂದ ನೀಡಿ





ತನ್ನನ್ನು ಮೈಮರೆಸುತ್ತಾಳೆ. ಹೀಗೆ ಹೆಂಡತಿಯು ಆತ್ಮರೂಪಿಯಾಗಿದ್ದಾಳೆ. ಹೆಂಡತಿಯು ತನ್ನ ಪೋಷಣೆಯನ್ನು ಮಾಡುತ್ತಾಳೆ. ತನ್ನ ಅಭಿವೃದ್ಧಿಯನ್ನು ಬಯಸುತ್ತಾಳೆ. ಈ ದೃಷ್ಟಿಯಿಂದ ಹೆಂಡತಿಯು ತಾಯಿ ಸ್ವರೂಪಳಾಗಿದ್ದಾಳೆ. ಮನದಲ್ಲಿ ವಿವೇಚಿಸಿ, ಇದರ ಅಂತರಾರ್ಥವನ್ನು ಅರಿಯಬೇಕು. ಹೆಂಡತಿಯು ತಾಯಿಯೆಂದು ಯಾರಾದರೂ ಹೇಳಿದರೆ, ಅವಳಾರು ? ಅವಳ ಮಾತೃರೂಪಿ ಕರ್ತವ್ಯಗಳೇನು ? ಅವಳ ವಾತ್ಸಲ್ಯದ ಇಂಗಿತವೇನು ? ಹೇಗೆ ತಾಯಿಯು ಮಗುವಿನ ಸುಖದಲ್ಲಿಯೇ ತನ್ನ ಸುಖವನ್ನು ಕಾಣುವಳೋ, ಹಾಗೆ ಹೆಂಡತಿಯೂ ತನ್ನ ಸುಖವನ್ನು ತನ್ನ, ಹಿತವನ್ನು ಪತಿಯ ಸುಖದಲ್ಲಿ, ಪತಿಯ ಹಿತದಲ್ಲಿ ಕಾಣುವಳೋ ಹೇಗೆ ?। ಇದನ್ನೆಲ್ಲ ತಪ್ಪದೆ ಕಂಡರಿಯಬೇಕು. ಹಾಗೆ ಮಾಡಿದರೆ ಜೀವನವು ಸರಸವಾಗುತ್ತದೆ.

ಕಂದ ॥
ಪತಿಯೊಪ್ಪಿರೆ, ಸತಿಯೊಪ್ಪಲು,
ಸತಿಪತಿಯೊಂದಾಗಿ ಪರಮ ಪಾವನ ಹೊಂದಲ್,
ಸತಿಪತಿ ನ್ಯಾಯವೆ ಮೋಕ್ಷವು.
ಬದುಕೇ ಪರಮಾತ್ಮನು ತಾನಾಯಿತು, ವೇಮಾ.

ಕುಟುಂಬದ ಯಾವುದೇ ವಿಷಯವಿರಲಿ, ಪತಿಯು ಒಪ್ಪಿಗೆ ಇತ್ತಾಗ ಸತಿಯು ಬೇರೆ ವಿಚಾರ ಮಾಡದೆ ತಾನೂ ಒಪ್ಪುತ್ತಿದ್ದರೆ, ಆಗ ಸತಿಪತಿಗಳು ಏಕಮುಖವಾಗಿ ನಡೆಯುತ್ತಾರೆ. ಹೀಗಾಗಿ ಅವರು ಸಂಸಾರದ ಕೆಸರಿಗೆ ತಟ್ಟದಂತೆ ಪಾವನವಾಗಿ ಉಳಿಯುತ್ತಾರೆ. ಪ್ರೇಮಾನಂದಗಳೇ ಅವರ ನಿತ್ಯ ಅನುಭವಗಳಾಗುತ್ತವೆ. ಈ ಸತಿ ಪತಿ ನ್ಯಾಯವೇ ಪ್ರಕೃತಿ ಪುರುಷರ ಐಕ್ಯದಂತಿರುತ್ತದೆ. ಪುರುಷನ (ಅರಿವಿನ) ಇಚ್ಛೆಗೆ ಪ್ರಕೃತಿಯು ಅಧೀನಳಾಗಿ ಇದ್ದರೆ, ಅದುವೇ ನಿರ್ಗುಣ ಬ್ರಹ್ಮ ಸ್ಥಿತಿಯಾಗುತ್ತದೆ. ಮೋಕ್ಷವಾಗುತ್ತದೆ. ಇನ್ನು ಬದುಕು ಪರಮಾತ್ಮನೆನಿಸುತ್ತದೆ. ಆನಂದಮಯವಾಗುತ್ತದೆ. ತತ್ವಗಳನ್ನು ಸರಳ ಕತೆಗಳ ಮೂಲಕ ತಿಳಿಸುವ ಪುರಾಣಗಳಲ್ಲಿಯೂ ಸ್ತ್ರೀಗೆ ತಕ್ಕ ಸ್ಥಾನವಿದೆ.

ಸ್ತ್ರೀ ನೆತ್ತಿಯಲ್ಲಿ ರುದ್ರಗೆ,
ಸ್ತ್ರೀ ಬಾಯೊಳು ಬೊಮ್ಮಗೆಂದು ಜನ ನುಡಿಯುತಿರಲ್,
ಸ್ತ್ರೀ ಎದುರು ಎದೆಯಲಿ ಹರಿಗೆ.
ಸ್ತ್ರೀ ಜೊತೆ ಹಗೆ ಗುರುವು, ನೀವೆ, ದೇವರು ವೇಮಾ.

ರುದ್ರನ ಪತ್ನಿಯಾದ ಗಂಗೆಯು ಅವನ ಜಡೆಯಲ್ಲಿ ವಾಸವಾಗಿದ್ದಾಳೆ. ಬ್ರಹ್ಮನ ಪತ್ನಿಯಾದ ಸರಸ್ವತಿಯು ಅವನ ಬಾಯಿಯಲ್ಲಿ ನೆಲೆಸಿದ್ದಾಳೆ ಎಂದು ಜನರು ನುಡಿಯುತ್ತಿದ್ದಾರೆ. ಇನ್ನು ಹರಿಯ ಮಡದಿಯಾದ ಲಕ್ಷ್ಮಿಯು ಅವನ ಎದೆಯಲ್ಲಿ ವಾಸಿಸಿದ್ದಾಳೆ. ಹೀಗೆ ಒಬ್ಬನು ಮಡದಿಯನ್ನು ಹೊತ್ತು ನಿಂತ, ಒಬ್ಬನು ಮಡದಿಯ ರುಚಿಯನ್ನು ನಾಲಗೆಯಿಂದ ಸವಿದ, ಮೂರನೆಯವನು ಮಡದಿಯನ್ನು ಉರದಲ್ಲಿ ಅಪ್ಪಿ ಬದುಕಿದ. ಸತಿಗಾಗಿ ಏನೇನೋ ಕಷ್ಟಪಡುತ್ತಿರುವರು. ಆದರೆ, ಗುರುವೇ ನೀನೊಬ್ಬನು ಮಾತ್ರ ಸತಿಯ ಹಗೆಯಾಗಿ ನಿಂತೆ.ಆದ್ದರಿಂದ ನೀನೇ ದೇವರು.

ಮಡದಿಯನ್ನು ಹೊಗಳಿ ಉಬ್ಬಿಸಬೇಕು, ಶಿವನಂತೆ. ಬಾಯಿಯಿಂದ ಮುದ್ದಿಸಬೇಕು ಬ್ರಹ್ಮನಂತೆ. ಅಪ್ಪಿ ಸುಖಿಸಬೇಕು ಹರಿಯಂತೆ. ಹೀಗೆ ಭೋಗಿಸಿದ ನಂತರ ತ್ರೈಗುಣ್ಯಗಳನ್ನು ದಾಟಿ

ವೈರಾಗ್ಯದಿಂದ ಮೇಲೇರಬೇಕು.

ಸತಿಯು ಸುತರ ಕೂಡಿ ಸಾನಂದದಿಂದಿರೆ,
ಮೇಲು ಸುತನು ಹುಟ್ಟಿ ಮುದ್ದಿಸುವುದು.
ಬಿಡುವು ನೋಡಿ, ಮೀರಿ, ಬಿಡಲಾರರಿಳೆಯಲಿ.
ವಿಶ್ವದಾಭಿರಾಮ ಕೇಳು ವೇಮ.

ಹೆಂಡಿರು ಮಕ್ಕಳೊಂದಿಗೆ ಕೂಡಿ ಆನಂದದಿಂದ ಬಾಳು ಸಾಗಿಸಿದಾಗ, ಮೇಲ್ಮೆಯ ಮಗನು ಹುಟ್ಟಿ ಆನಂದ ವರ್ಧಿಸುವನು. ಅವನನ್ನು ಅಕ್ಕರೆಯಿಂದ ಮುದ್ದಿಡುತ್ತಾನೆ. ಆದರೆ ಮುಂದೆ ಸಕಾಲದಲ್ಲಿ ಈ ಮೋಹದ ಬಂಧನವನ್ನು ಮೀರಿ ಇವರ ಸಂಗವನ್ನು ಬಿಡಬೇಕು. ಆದರೆ ಇಳೆಯಲ್ಲಿ ನರರು ಬಿಡಲಾರದೆ ಮೇಲಕ್ಕೆ ಏರದವರಾಗಿದ್ದಾರೆ.

ಸತಿಯ, ಸುತರ, ಧನವ, ಸಲೆಯರಿತು ಮೀರದೆ,
ಮತ್ತೆ ಕರ್ಮಗಳಲಿ ಮೋಸ ಹೋಗಿ,
ಕಾಲ ಬಂದೊಡಾಗ ಕಡೆಗೆ ತೀರ ತಲುಪ್ರ..
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಈಷಣ ತ್ರಯಗಳಿಂದ ಜಡಕ್ಕೆ ಅಂಟುತ್ತಾನೆ. ದಾರೇಷಣ, ಪುತ್ರೇಷಣ ಮತ್ತು ವಿತ್ತೇಷಣಗಳೇ ಈ ಈಷಣ ತ್ರಯಗಳು. ಇವುಗಳನ್ನು ಪಡೆಯುವುದು ಪುರುಷಾರ್ಥವೇನೋ ಸರಿ. ಆದರೆ ಇವುಗಳನ್ನು ಮೀರಿದ ಇನ್ನೊಂದು ಈಷಣವಿದೆ. ಅದುವೇ ಬೃಹದೇಷಣ. ಈಷಣತ್ರಯಗಳನ್ನು ಚೆನ್ನಾಗಿ ಅರಿತು ಅವುಗಳನ್ನು ಮೀರಿ ಹೋಗಬೇಕು. ಬೃಹದೇಷಣದಿಂದ ಬ್ರಹ್ಮನನ್ನು ಹೊಂದಬೇಕು, ಆದರೆ ಬಹಳ ಜನರು ಈಷಣ ತ್ರಯಗಳ ಆಕರ್ಷಣೆಯಿಂದ ಮೋಸ ಹೋಗಿ, ಯಜ್ಞ, ವ್ರತಾದಿ ಕರ್ಮಗಳ ಜಾಲದಲ್ಲಿ ಸಿಲುಕುತ್ತಾರೆ. ಹೀಗಾಗಿ, ಯಾವಾಗ ಮೋಕ್ಷ ಪಡೆಯುವ ಕಾಲ ಸನ್ನಿಹಿತವಾಗುವುದೋ, ಆಗ ಭವ ಸಾಗರವನ್ನು ದಾಟಿ, ತೀರವನ್ನು ತಲುಪದಾಗುತ್ತಾರೆ. ತೀರ್ಥರಾಗುವುದಿಲ್ಲ.

ಆದ್ದರಿಂದಲೇ ಮಹಾಯೋಗಿ ವೇಮನ ಸ್ಪಷ್ಟವಾಗಿ ಎಚ್ಚರಿಸುತ್ತಾರೆ,

ಪತ್ನಿ, ಪುತ್ರ, ಧನವ, ಪಡೆದು ತೊರೆಯದವನು,
ಮೋಹ ರಾಶಿಯೊಳಗೆ ಮುಳುಗುತಿಹನು.
ಮೋಕ್ಷ ಸೌಖ್ಯವೆಂತು ಮಹಿಯ ಜನತೆಗುಂಟು ?
ವಿಶ್ವದಾಭಿರಾಮ ಕೇಳು ವೇಮ.

ದಾರೇಷಣ, ಪುತ್ರೇಷಣ ಮತ್ತು ವಿತ್ತೇಷಣಗಳು ಭವಸಾಗರದಲ್ಲಿ ಈಜುವವರಿಗೆ ಸಹಜವೇ ಸರಿ. ಮಾನವನು ಈ ಈಷಣ ತ್ರಯಗಳನ್ನು ದಾಟಿ, ಭವ ಹರನನ್ನು ಸೇರಬೇಕಾಗಿದೆ. ಇಲ್ಲವಾದರೆ ಅವನು ಭವದಲ್ಲಿ ವಿಷಯಗಳ ಮೋಹ ರಾಶಿಯಲ್ಲಿ ಮುಳುಗಿ ಹೋಗುತ್ತಾನೆ. ಅವನು ತನ್ನ ಪರಮ ಗುರಿಯಾದ ಬೃಹದೇಷಣವನ್ನು ವೃದ್ಧಿಪಡಿಸಿಕೊಳ್ಳಬೇಕು. ಬ್ರಹ್ಮನನ್ನು ಹೊಂದಬೇಕು. ಆಗ ಈ ಭವಸಾಗರ ದಾಟಿ ಮೋಕ್ಷ ಪಡೆಯುತ್ತಾನೆ. ಇಲ್ಲವಾದರೆ, ಮೋಹ ರಾಶಿಯಲ್ಲಿ ಮುಳುಗುತ್ತಾನೆ. ಹಾಗಾದರೆ ಈ ಭೂಮಿಯ ಜನರಿಗೆ ಮೋಕ್ಷ ಸೌಖ್ಯವು ಹೇಗೆ ಲಭಿಸೀತು ?



# ೧೧. ಧನ ಸಂಚಯ

ಗೃಹಸ್ಥನಾದವನಿಗೆ ಧನ ಸಂಚಯವು ಬೇಕೇ ಬೇಕು. ಜನರ ದೃಷ್ಟಿಯಲ್ಲಿ ದುಡ್ಡಿದ್ದವನೇ ದೊಡ್ಡಪ್ಪ. ದುಡ್ಡಿಲ್ಲದವನು ದಡ್ಡ ; ನಿಕೃಷ್ಟ. 'ಸರ್ವೇ ಗುಣಾಃ ಕಾಂಚನಂ ಆಶ್ರಯಂತಿ'. ಅಂದರೆ ಎಲ್ಲ ಗುಣಗಳೂ ಕಾಂಚನವನ್ನು ಆಶ್ರಯಿಸಿರುತ್ತವೆ.

ಆ ॥ ಹಾಯಾಗಿರಲು ಇಹದಿ, ಹೇಮಕಾರಕ ವಿದ್ಯೆ.
ಪರದಲ್ಲಿ ಸುಖಿಸಲು ಬ್ರಹ್ಮವಿದ್ಯೆ.
ಅನ್ಯ ವಿದ್ಯೆಯೆಲ್ಲ ಅಂತೆ ನಿಷ್ಫಲವದು.
ವಿಶ್ವದಾಭಿರಾಮ ಕೇಳು ವೇಮ.

ಈ ಪ್ರಪಂಚದಲ್ಲಿ ಸಫಲ ಬಾಳು ನಡೆಸಲು ಸ್ವರ್ಣ ಮಾಡುವ ವಿದ್ಯೆಬೇಕು. ಇನ್ನು ಪರದಲ್ಲಿ ಸುಖಿಸಲು ಅಂದರೆ ಆನಂದ ಪಡೆಯಲು ಬ್ರಹ್ಮವಿದ್ಯೆಯು ಬೇಕು. ಇವುಗಳನ್ನು ಉಳಿದು ಉಳಿದ ವಿದ್ಯೆಗಳೆಲ್ಲವೂ ನಿಷ್ಫಲವಾದವುಗಳು.

ಆ ॥ ಇಹದ ಒಳಗೆ ಸುಖವು ಇಂಪಾಗಿ ಇರದನಕ,
ಪರದ ಒಳಗೆ ಸುಖವ ಪಡೆವುದೆಂತು ?
ಧನವು ಇರದೆ ಸುಖವು ತನಗೆ ದೊರೆವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

'ಅನುಕೂಲ ವೇದನೀಯಂ ಸುಖಂ'. ಅಂದರೆ ತನ್ನ ಸಂಸ್ಕಾರಗಳಿಗೆ ಅನುಕೂಲ ತರಂಗಗಳನ್ನು ಹುಟ್ಟಿಸುವುದೇ ಸುಖವು. 'ಸುಖಂ ಅನಂತಂ ಆನಂದಂ'. ಅಂದರೆ ಅನಂತ ಸುಖವೇ ಆನಂದವು. 'ಆನಂದಂ ಬ್ರಹ್ಮ ಇತ್ಯಾಹುಃ'. ಅಂದರೆ ಆನಂದವೇ ಬ್ರಹ್ಮವಾಗಿದೆ.

ಆದ್ದರಿಂದ ಇಹದೊಳಗೆ ಸುಖವು ಇಂಪಾಗಿ ಇರದಿದ್ದರೆ, ಪರದಲ್ಲಿ ಅನಂತ ಸುಖವನ್ನು ಪಡೆಯುವುದು ಹೇಗೆ ? ಇಹದಲ್ಲಿ ಸುಖ ಪಡೆಯಬೇಕಾದರೆ, ಧನವು ಬೇಕೇ ಬೇಕಷ್ಟೇ ? ಧನವು ಇಲ್ಲದಿದ್ದರೆ ತನಗೆ ಸುಖವು ಹೇಗೆ ದೊರೆಯಬಲ್ಲದು ?

ಆ ॥ ಧನವು ಇರದೆ ಗುಣವು ತಕ್ಕದೆನಿಸದಲ್ಲ ?
ಧನವು ಇರದೆ, ಕೀರ್ತಿ ತೊಲಗಿ ಹೋಯ್ತು.
ಧನವು ಇರದೆ ಶುಚಿಯು ಹುಟ್ಟಿ ಬರದು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಒಳ್ಳೆಯ ಗುಣವಂತನಾಗಿದ್ದರೂ ಅವನಲ್ಲಿ ಧನವಿಲ್ಲದಿದ್ದರೆ, ಜನರು ಕುಂದು ಕಲ್ಪಿಸುತ್ತಾರೆ. ಆದ್ದರಿಂದ ಧನವು ಇಲ್ಲದಿದ್ದರೆ ಗುಣವು ತಕ್ಕದೆನಿಸುವುದಿಲ್ಲ. ಒಬ್ಬ ಕೀರ್ತಿ ಬರುವಂಥ ಕಾರ್ಯ ಮಾಡಿದ್ದರೂ ಆ ಕೀರ್ತಿಶಾಲಿಯು ಧನ ಹೀನನಾಗಿದ್ದರೆ, ಜನರು ಅವನಿಗೆ ಅದೃಷ್ಟ ದೋಷಗಳನ್ನು ಲೇಪಿಸಿ ಅವನ ಕೀರ್ತಿಯನ್ನು ಕೆಡಿಸುತ್ತಾರೆ. ಧನವಿಹೀನನೊಬ್ಬನು ಒಳ್ಳೇ ಶುಚಿರ್ಭೂತನಾಗಿದ್ದರೆ, ಜನರು ಅವನ ಶುಚಿತ್ವವನ್ನು ತೋರಿಕೆಯ ಡಾಂಭಿಕತೆ ಎನ್ನುತ್ತಾರೆ.

ಅವನು ನಿರ್ಮಲ ಮನಸ್ಸಿನವನಲ್ಲ, ಎಂದು ಹೇಳುತ್ತಾರೆ. ಹೀಗಾಗಿ, ಧನವಿಲ್ಲದೆ ಶುಚಿತ್ವವು ಹುಟ್ಟಲಾರದು. ಹೀಗೆ ಒಳ್ಳೆಯ ಗುಣ, ಒಳ್ಳೆಯ ಕೀರ್ತಿ ಮತ್ತು ಶುಚಿರ್ಭೂತತ್ವಗಳಲ್ಲಿ ಜನ ಮನ್ನಣೆ ಪಡೆಯಬೇಕಾದರೆ ಅವನು ಧನವಂತನಾಗಲೇ ಬೇಕು.

ಕಂ ||
ಧನವೇ ಮೂಲವು ಜಗಕ್ಕೆ
ಧನವೇ ಮೂಲವು ಸಕಲ ಧರಮಕ್ಕೆ ನೋಡಾ.
ಗುಣವೇ ಮೂಲವು ಸಿರಿಗದು.
ಮನವೇ ಮೂಲವು ಮುಕ್ತಿಯ ಮಹಿಮೆಗೆ ವೇಮಾ.

ಈ ಜಗತ್ತಿನ ವ್ಯವಹಾರಕ್ಕೆ ಅಂದರೆ ಕೊಡುಕೊಳ್ಳುವಿಕೆಗೆ ಧನವೇ ಮೂಲವಾಗಿದೆ. ಧನ ಪಡೆಯದೆ ಏನನ್ನೂ ಕೊಡುವುದಿಲ್ಲ. ಧನ ನೀಡದೆ ಏನನ್ನೂ ಕೊಳ್ಳುವಂತಿಲ್ಲ. ವ್ಯವಹಾರ ವೃಕ್ಷಕ್ಕೆ ಧನವೇ ಬೇರಾಗಿದೆ. ಅಂದರೆ ಮೂಲವಾಗಿದೆ. ಅದೇ ರೀತಿ, ಸಕಲ ಧರ್ಮ ಕರ್ಮಗಳನ್ನು ಆಚರಿಸಲು ಧನವೇ ಮೂಲವಾಗಿದೆ. ಇನ್ನು ಸಿರಿ ಸಂಪತ್ತು ಗಳಿಸಲು, ಸಿರಿಸಂಪತ್ತಿನ ಸರಿಯಾದ ಬಳಕೆ ಮಾಡಲು ಗುಣವು ಮೂಲವಾಗಿದೆ. ಕೊನೆಗೆ ಎಲ್ಲ ಬಂಧನಗಳಿಂದ ಮುಕ್ತವಾಗಲು ಮನವೇ ಮೂಲವಾಗಿದೆ. 'ಮನ ಏವ ಕಾರಣಂ ಬಂಧ ಮೋಕ್ಷಯೋಃ' ಅಂದರೆ ಬಂಧ ಇಲ್ಲವೆ ಮೋಕ್ಷಗಳಿಗೆ ಮನವೇ ಕಾರಣವಾಗಿದೆ. ವಿಷಯ ಸಂಗಿಯಾದರೆ ಬಂಧನ. ವಿಷಯ ದೂರವಾದರೆ ಮುಕ್ತ.

## ಧನ ವಿಹೀನತೆ :

ಆ ||
ದ್ರವ್ಯ ಹೀನನಾಗೆ ಬಂಧು ವೈರಿಯಹರು.
ದ್ರವ್ಯ ಹೀನನಾಗೆ ಪರವು ಸಿಗದು.
ದ್ರವ್ಯ ಹೀನನಾಗೆ ಪತ್ತು ತಪ್ಪದೇನು ?
ವಿಶ್ವದಾಭಿರಾಮ ಕೇಳು ವೇಮ.

ವ್ಯಕ್ತಿಯ ಸಿರಿ ಸಂಪತ್ತನ್ನು ನೋಡಿ ಅವನ ಸಂಬಂಧ ಹೊಂದಿದ. ಬಂಧುಗಳು, ಅವನು ದ್ರವ್ಯಹೀನನಾದೊಡನೆಯೇ ಅವನ ವೈರಿಗಳಾಗುತ್ತಾರೆ. ಅವನ ಹಿತಕ್ಕೆ ವಿರೋಧವಾಗಿ ನಡೆದುಕೊಳ್ಳುತ್ತಾರೆ. ದ್ರವ್ಯಹೀನನಾದವನು, ದಾನ ಧರ್ಮ ಮಾಡನು. ಪರೋಪಕಾರ ಮಾಡನು. ಪುಣ್ಯ ಕರ್ಮ ಮಾಡಿ ಮನೋಶುದ್ಧಿ ಪಡೆಯನು. ಮನವನ್ನು ಶಾಂತಗೊಳಿಸನು. ಹೀಗಾಗಿ ಅವನು ಧ್ಯಾನ ಸಮಾಧಿಯತ್ತ ಸಾಗನು. ಅನನಿಗೆ ಪರವು ಸಿಕ್ಕದು. ಪತ್ತು ಎಂದರೆ ಸಾಲ ಪಡೆಯುವ ಅರ್ಹತೆ. ತೆಗೆದುಕೊಂಡದ್ದನ್ನು ಮರಳಿಸುವ ವಿಶ್ವಾಸಾರ್ಹತೆ. ದ್ರವ್ಯಹೀನನಾಗೆ, ಅವನ ಪತ್ತು ತಪ್ಪಿ ಹೋಗುತ್ತದೆ.

ಆ ||
ಧನವಿರದಿರೆ, ಸುತರು ತಪ್ಪನೆಣಿಸುತಿಹರು,
ಧನವಿರದಿರೆ ಪತ್ನಿ ತಟ್ಟಗೊಡಳು.
ಧನವಿರೆ ಯಾರಿಗೂ ತಾಳಿಕೆ ಬರುಬಹುದು.
ವಿಶ್ವದಾಭಿರಾಮ ಕೇಳು ವೇಮ.





ಧನವಿರುವಾಗ ಮನೆತನದ ಹೊಣೆಯನ್ನು ನಿರ್ವಹಿಸುತ್ತ ಎಲ್ಲರನ್ನೂ ಅಂಕಿತದಲ್ಲಿ ಇರಿಸಿಕೊಳ್ಳಬಹುದು. ಧನವು ಇಲ್ಲದಾಗಲು, ಮಕ್ಕಳು ಸಹ ತಂದೆಯ ವ್ಯವಹಾರ ಕುಶಲತೆಯನ್ನು ಪ್ರಶ್ನಿಸುತ್ತಾರೆ. ನಡೆವಳಿಯಲ್ಲಿ ದೋಷಗಳನ್ನು ಎಣಿಸಿ, ಎತ್ತಿ ತೋರಿಸುತ್ತಾರೆ. ಧನವಿರುವಾಗ ತನ್ನ ಬೇಕು ಬೇಡಗಳಿಗೆಪತಿಯನ್ನು ಆಶ್ರಯಿಸಿ, ಪ್ರೀತಿಸಿ, ಅಕ್ಕರೆತೋರುತ್ತಿದ್ದ ನಲ್ಲೆಯುಧನವಿಲ್ಲದಾಗಲು ಪ್ರೀತಿ ತೋರಿಸುವುದಿರಲಿ, ಎಷ್ಟೋ ಸಲ ಸಲುಗೆಯಿಂದ ಮೈ ಮುಟ್ಟಲು ಹೋದರೂ, ಕೊಸರಿಕೊಳ್ಳುತ್ತಾಳೆ. ಅಸಡ್ಡೆ ತೋರುತ್ತಾಳೆ. ಅದೇ ತನ್ನಲ್ಲಿ ಧನವಿದ್ದರೆ, ಅದನ್ನು ಕಾಪಾಡಿಕೊಂಡರೆ, ಅವನಿಗೆ ಎಲ್ಲ ಪ್ರಸಂಗದಲ್ಲಿಯೂ ತಾಳಿ ಬಾಳುವ ತಾಳಿಕೆ ಬರುವುದು.

## ವಿತರಣ :

ಸಮಾಜ ಸ್ವಾಸ್ಥ್ಯಕ್ಕೆ, ವಿತ್ತವಿರುವಲ್ಲಿ ವಿತರಣ ಗುಣವಿರುವುದೂ ಅಗತ್ಯ. ವಿತರಣವು ಪಾತ್ರಾಪಾತ್ರತೆಯನ್ನು ನೋಡಿ ನಡೆಯಬೇಕು. ಮಧ್ಯ ಏಸಿಯಾದಿಂದ ಬಂದ ಸಂಚಾರಿ ಆರ್ಯರು ಈ ದೇಶದ ಆದಿವಾಸಿಗಳನ್ನು ಶೂದ್ರರೆಂದು ಕರೆದರು. ಸೋತ ಶೂದ್ರ ಜನಾಂಗಕ್ಕೆ ಧರ್ಮದಲ್ಲಿ ಅಧಿಕಾರವಿಲ್ಲದಾಯಿತು. ಸಾಲದೆ ಅವರಿಗೆ ಆಸ್ತಿ ಪಡೆಯುವ ಅಧಿಕಾರವೂ ಇಲ್ಲವಾಯಿತು. ಹೀಗಾಗಿ, ಸಮಾಜದಲ್ಲಿ ಆಸ್ತಿ ಹೀನರಾದ ಬಡವರ ಸಂಖ್ಯೆ ಬೆಳೆಯಿತು. ಲಗ್ನ ಸಂಬಂಧದಿಂದಲಾದರೂ ಈ ಧನದ ಹಂಚಿಕೆ ಕೊಂಚ ಸರಿಯಾಗಬಹುದಿತ್ತು. ಆದರೆ ಅಲ್ಲಿ ಸಹ ಆಸ್ತಿ ಉಳ್ಳವರಿಗೇ, ಧನವಂತರಿಗೇ ಕನ್ಯೆ ಕೊಡುವುದು ಸುರಕ್ಷಿತ ಎಂಬ ಕಲ್ಪನೆ ಜನರಲ್ಲಿತ್ತು. ಇದನ್ನು ಕುರಿತು ವೇಮನರು ಧನದ ವಿತರಣ ಕುರಿತು ಹೀಗೆ ಹಾಡಿದ್ದಾರೆ.

ಆ ||
ಧನವಿರುವಾತಂಗೆ ಕನ್ಯೆ ನೀಡುತಿಹುದು,
ಬಾವಿ ನೀರು ನದಿಗೆ ಬಿಟ್ಟ ರೀತಿ.
ನಿಂಬೆಗೆ ಜಲ ರಾಶಿ ನೀರು ಹಣಿಸಿದಂತೆ.
ಬಡವಗಿತ್ತ ಮದುವೆ ಪ್ರಬಲ ವೇಮ.

ಬಾವಿಗೆ ನೀರು ಬರುವುದು ಚಿಕ್ಕ ಸೆಲೆಗಳಿಂದ ಮಾತ್ರ. ಆ ನೀರನ್ನು ಎತ್ತಿ ನದಿಗೆ ಬಿಟ್ಟರೆ, ಬಿಟ್ಟ ನೀರು ಬಾವಿಯಲ್ಲಿ ಇಲ್ಲವಾಗುತ್ತದೆ. ನದಿಯಲ್ಲಿಯೂ ನಿಲ್ಲದೆ ಹರಿದು ಹೋಗುತ್ತದೆ. ಅದೇ ರೀತಿ, ಧನಿಕನಿಗೆ ಕನ್ಯೆ ನೀಡಿದರೆ, ಅವಳಿಗೆ ತವರಿನವರು ಕೊಟ್ಟ ವಸ್ತು ಒಡವೆಗಳು ಅಲ್ಲಿಂದ ಹೋಗುತ್ತವೆ. ಇತ್ತ ಧನಿಕನ ವೆಚ್ಚದಲ್ಲಿ ಅವುಗಳೂ ಸೇರಿ ಇಲ್ಲವಾಗುತ್ತವೆ. ಇದು ಹೇಗಾಗುವುದೆಂದರೆ, ನಿಂಬೆ ಗಿಡಕ್ಕೆ ಹೆಚ್ಚು ನೀರು ಬೇಕಾಗಿಲ್ಲ. ಆದರೂ ಅದಕ್ಕೆ ರಾಶಿ ರಾಶಿ ಜಲ ಸುರಿದರೆ ಅದು ವ್ಯರ್ಥವಾಗುತ್ತದೆ. ಆದ್ದರಿಂದ ಕನ್ಯೆಯನ್ನು ಧನವಂತನಿಗೆ ನೀಡುವ ಬದಲು ಗುಣವಂತನಾದ ಬಡವನಿಗೆ ನೀಡುವುದೇ ಲೇಸು. ಆಗ ಆ ಲಗ್ನ ಸಂಬಂಧವು ಹೆಚ್ಚು ಪ್ರಬಲವಾಗುತ್ತದೆ.

ಆ ||
ಧನವ, ಘನತೆ ನೋಡಿ ಧನಕ್ಕಾಗಿ ಆಶಿಸಿ,
ಕನ್ಯೆಯೀಯೆ, ಪುಣ್ಯ ಗತಿಗಳಿರವು.
ಬಡವನೆಂದೆನ್ನದೆ ಪುತ್ರಿಯನ್ನು ಕೊಡಲು,
ಹೇಳಲೇನು ? ಪರಮ ಹರುನು ವೇಮ.

ಧನಿಕನಿಂದ ಏನಾದರೂ ಅನುಕೂಲ ಪಡೆಯಬೇಕೆಂದು ಆಸೆಬಟ್ಟು, ಧನವನ್ನೂ ಘನತೆಯನ್ನೂ ನೋಡಿ, ಕನ್ಯಾ ಶುಲ್ಕ ಪಡೆಯುವ ಹೇತುವಿನಿಂದ ಕನ್ನೆಯನ್ನು ನೀಡಿದರೆ, ಅಲ್ಲಿ ಪುಣ್ಯ ಗತಿಗಳೂ ಇರಲಾರವು. ಹಾಗೆ ಮಾಡುವುದೇ ಮುಂದೆ ಸುಖದಾಯಿಯಾಗದು. ಆದರೆ ಗುಣವಂತನಾದ ಬಡವನಿಗೆ ಪುತ್ರಿಯನ್ನು ನೀಡಿದರೆ, ಆ ಪುಣ್ಯವೆಷ್ಟೆಂದು ಹೇಳಲಿ ! ಅವನೇ ಹರನಿದ್ದಂತೆ. ಅವನು ಸಂಪತ್ತಿನ ಸಮಪಾಲಿನ ವಿತರಣಕ್ಕೆ ದಾರಿ ಮಾಡುತ್ತಾನೆ.

ಆ ॥ ಕನಕ ಹೊಂದಿದವಗೆ ಕನ್ನಿಕೆ ಈವಾಗ,
ಹರುಷಿಸುವರು ಮೂಢ ಹುಚ್ಚ ಜನರು.
ಪೂಜೆ ಫಲವು ಅಷ್ಟೆ, ಪ್ರಯತ್ನಿಸೀಯುವರೆ ?
ವಿಶ್ವದಾಭಿರಾಮ ಕೇಳು ವೇಮ.

ಕನಕ ಹೊಂದಿದವನಿಗೆ ಕನ್ನಿಕೆಯನ್ನು ಈಯುವಾಗ, 'ನಮ್ಮ ಭಾಗ್ಯ,. ಎಂಥ ಒಳ್ಳೆಯ ಸಂಬಂಧವು ಕುದುರಿತು, ಎಂದು ಮೂಢರಾದ, ಹುಚ್ಚರಾದ ಜನರು ಹರ್ಷಿಸುತ್ತಾರೆ. ಅಳಿಯನ ಸಂಪತ್ತು, ಅವನು ಪೂರ್ವದಲ್ಲಿ ಮಾಡಿದ ಸೇವೆಯ ಫಲ. ಅವನಲ್ಲಿ ಆ ಸಂಪತ್ತು ಉಳಿಯುವದೂ ಸಹ ಆ ಸೇವೆಯ ಫಲದಿಂದಲೇ. ಕನ್ಯೆ ಕೊಡುವವರೇನು ಅವನ ಸಂಪತ್ತನ್ನು ತಮ್ಮ ಪ್ರಯತ್ನದಿಂದ ಕೊಡಬಲ್ಲರೇ ?

ಆ ॥ ತನಗೆ ಬಂಧುವೆಂದು ಧನಿಕನ ಕರೆತಂದು,
ಧನದ ಮಹಿಮೆ ತೋರಿ, ದಾಹವರಿತು,
ತನಯಳ ಸಿಂಗರಿಸಿ ದಕ್ಷಿಣೆಯೊಡನೀವ.
ವಿಶ್ವದಾಭಿರಾಮ ಕೇಳು ವೇಮ.

ಆ ॥ ಕನಕವಿಪ್ಪ ಕಾಲ ಕಠಿಣ ಭಾವ ತಾಳಿ,
ತಿಳಿಯಲಾರರು ಜನ ತಿಳಿವುಗೆಟ್ಟು,
ಕನಕ ಜೊನ್ನಿನಂತೆ ಕಾಣದಿರುವರಲ್ಲ !
ವಿಶ್ವದಾಭಿರಾಮ ಕೇಳು ವೇಮ.

ತನ್ನ ಬಂಧು ಬಳಗದವನೆಂದು ಕನ್ಯಾ ಪಿತನು, ಧನಿಕನೊಬ್ಬನನ್ನು ಕರೆದು ತರುತ್ತಾನೆ. ತಾನೂ ಧನಿಕನೆಂದೂ ತನ್ನ ಧನದ ಮಹಿಮೆ ತೋರುತ್ತಾನೆ. ಭಾವೀ ಅಳಿಯನ ಧನದಾಹವನ್ನು ಅರಿತುಕೊಂಡು ವರದಕ್ಷಿಣೆಯೊಂದಿಗೆ ತನ್ನ ಮಗಳನ್ನು ಸಿಂಗರಿಸಿ ಕೊಡುತ್ತಾನೆ. ಧನದ ರಾಶಿಗೆ ಧನದ ಕಾಣಿಕೆ ಸಲ್ಲಿಸಿದ ಹೆಮ್ಮೆಯಿಂದ ಮೈಮರೆಯುತ್ತಾನೆ.

ಆದರೆ ಕನಕವು ಸ್ಥಿರವಲ್ಲ ಲಕ್ಷ್ಮಿಯು ಚಂಚಲೆ ತಾನೇ ? ಆ ಜನರು ಇದನ್ನು ತಿಳಿಯದೆ, ಕನಕವಿರುವ ಕಾಲ ಉದಾರ ಬುದ್ಧಿ ಹೊಂದದೆ, ಕಠಿಣ ಭಾವ ತಾಳುತ್ತಾರೆ. ತಿಳಿವುಗೇಡಿಗಳಾಗಿ ವರ್ತಿಸುತ್ತಾರೆ. ಎಷ್ಟೇ ಆಗಲಿ, ಕನಕವು ಬೆಳದಿಂಗಳಂತೆ. ಇರುವಾಗ ಸುಖದಾಯಕನಾಗಿದ್ದರೂ, ಬಹುಕಾಲ ಉಳಿಯದು. ಇದನ್ನು ಅರಿಯರಲ್ಲ ! ಧನಕ್ಕಿಂತ ಗುಣವೇ ಮುಖ್ಯ ಎಂದು ಮನಗಾಣಬೇಕು.





ಧನವಂತರಿಗೆ ಕನ್ನೆಯನ್ನು ಕೊಡಕೂಡದೆಂಬ ಅಭಿಮತವೇನೂ ಇಲ್ಲ. ಗುಣವಂತನಾಗಿರಬೇಕಷ್ಟೇ.

ಆ ॥ ಹೊನ್ನು ಉಳ್ಳ ನರನ ಹುಡುಕಿ ನೀಡಿದೊಡನೆ,
ಬಾಳು, ಹಾಲು ಉಕ್ಕಿ ಕುದಿಯುವಂತೆ.
ಒಳಗೆ ತೊಳಗಿ ಹೊನ್ನು ಒಟ್ಟು ಕುಂದದಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಸದ್ಗುಣಿಯಾದ, ಹೊನ್ನು ಇರುವ ನರನನ್ನು ಹುಡುಕಿ, ಕನ್ನೆಯನ್ನು ನೀಡಿದರೆ, ಆಗ ತೊಂದರೆ ಇಲ್ಲ. ಆಗ ಬಾಳಿನಲ್ಲಿ ಸುಖ ಸಂತೋಷಗಳು ಹೆಚ್ಚಿ, ಹಾಲು ಉಕ್ಕಿ ಕುದಿಯುವಂತೆ, ಉತ್ಕರ್ಷವಾಗುತ್ತದೆ. ಅಂದರೆ ಬಂಗಾರವು ಒಳಗೇ ಪ್ರಕಾಶಿಸಿ ಹರ್ಷ ನೀಡುತ್ತದೆ. ಮತ್ತು ಒಟ್ಟು ಕುಂದುವುದಿಲ್ಲ.

ಗೀತ ॥ ಧನವು ಇಲ್ಲವೆನಲು ದಾವಾನಲವಯ್ಯ.
ಕೆಡುವ, ಮಿಥ್ಯವಾಡಲೇಕೆ ? ಮನವು ಕಾಣದಿತ್ತ
ಸೊತ್ತು, ಬಡತನದಲಿ ಸೇರಿಯುಂಟು.
ನೀರು ಕಾಲುವೆಯಲಿ ಏರಿ ಇಳಿದ ರೀತಿ.

ಧನವನ್ನು ಭೋಗಿಸುತ್ತ ಬಂದವನಿಗೆ, ಧನವು ಇಲ್ಲವಾಗಲು, ಸಿಡಿಮಿಡಿಗೊಳ್ಳುತ್ತಾನೆ. ದಾವಾನಲ ಅಂದರೆ ಕಾಡು-ಕಿಚ್ಚಿನಂತೆ ಸುತ್ತಲೂ ಹಬ್ಬಿ ಎಲ್ಲವನ್ನೂ ಸುಡುವಂತೆ, ಧನವಿಲ್ಲದವನು ತಾನು ಕೆಡುವನಲ್ಲದೆ ತನಗೆ ಸಂಬಂಧಿಸಿದವರನ್ನೂ ಕೆಡಿಸುತ್ತಾನೆ. ನಿಜ ಹೇಳುವುದಾದರೆ, ತಾನು ತನ್ನ ಮನಕ್ಕೇ ತಿಳಿಯದಂತೆ ಹೆರವರಿಗೆ ಸೊತ್ತು ನೀಡಿ ಸಹಾಯ ಮಾಡಿದ್ದರೆ, ಆ ಸೊತ್ತು ಇವನಿಗೆ ಬಡತನ ಬಂದಾಗ ಬಂದು ಸೇರುತ್ತದೆ. ಇರುವಾಗ ಔದಾರ್ಯದಿಂದ ಹೆರವರಿಗೆ ನೀಡಿದ ತನ್ನ ಸೊತ್ತು ತನಗೇ ಬಡತನ ಕಾಲದಲ್ಲಿ ಬರುತ್ತದೆ. ಕಾಲುವೆಯಲ್ಲಿ ಹರಿಯುವ ನೀರು ಏರಿ ಬಂದಾಗ ತನ್ನ ಮೇಲ್ಪಾತಳಿಯನ್ನು ಎತ್ತರಿಸಿಕೊಂಡು, ಬಳಿಕ ಸಮಪಾತಳಿ ಬಂದಾಗ ಆಳ ಕಡಿಮೆಯಾಗುವಂತೆ ಧನದ ಗತಿಯೂ ಇದೆ.

ಆ ॥ ದೆಸೆಯು ತಿರುಗಲವನೆ ತಮಗೆ ಬಂಧುವೆನಿಪ ;
ದೆಸೆಗೆಡಲು ರಕ್ತದಿ ಅವನೆ ಕೀಳು.
ದೆಸೆ ತಿಳಿದೊಡೆ ಧನ ದೆಸೆಯೊಂದೆ ಕಾಣ ಭೋ !
ವಿಶ್ವದಾಭಿರಾಮ ಕೇಳು ವೇಮ.

ಬಡತನ ಇರುವಾಗ ಬಳಿ ಸಾರದವರು ಅವನ ಅದೃಷ್ಟ ದೆಸೆಯು ಅಂದರೆ ಭಾಗ್ಯ ಸಂಪದವು ತಿರುಗಿ ಬರಲು, ಅವನು ತಮ್ಮ ಬಂಧು ಎಂದು ಸುತ್ತ ಮುತ್ತ ಸುಳಿದಾಡುತ್ತಾರೆ. ಅದೇ ಅವನ ದೆಸೆಯು ಕೆಟ್ಟರೆ, ಅವನು ಭಾಗ್ಯಹೀನನಾದರೆ, ಅವನ ಕುಲವೇ ಕೀಳು ಕುಲ, ಅವನೊಂದಿಗೆ ರಕ್ತ ಸಂಬಂಧ ನಿಷಿದ್ಧ ಎನ್ನುತ್ತಾರೆ. ಹೆಸೆಯೆಂದರೆ, ಸಂತಾನ ಭಾಗ್ಯ, ಪತ್ನಿ ಭಾಗ್ಯ ಇತ್ಯಾದಿಗಿಂತಲೂ ಧನದ ದೆಸೆಯೊಂದೇ ನಿಜವಾದ ದೆಸೆಯಾಗಿದೆ. ಇದನ್ನು ಸರಿಯಾಗಿ ತಿಳಿಯಿರಯ್ಯ !

## ಪಾತ್ರಾ ಪಾತ್ರತೆ :

ಆ ॥
ಸಲ್ಲದವನ ಕೈಗೆ ಕಾಸುವೀಸು ಕೊಟ್ಟು,
ಅಲ್ಲಿ ನೋಡದಿಹುದು, ಹುಚ್ಚುತನವು.
ಕೋಳಿ ಹಿಡಿದ ಬೆಕ್ಕು ಕೂಗಲೋಗೊಡುವದೆ ?
ವಿಶ್ವದಾಭಿರಾಮ ಕೇಳು ವೇಮ.

ಧನದ ಸಂಚಯವು ಧರ್ಮಯುತವಾಗಿರಬೇಕು. ಧನದ ವಿತರಣೆಯು ನ್ಯಾಯಯುತವಾಗಿರಬೇಕು. ಪಾತ್ರಾಪಾತ್ರತೆಯನ್ನು ಪರಿಗಣಿಸಬೇಕು.

ಮಾನವನು ಗುಣಹೀನನೋ, ಜಾಜು ಖೋರನೋ, ವಿಷಯ ಲಂಪಟನೋ, ಅಂಥವನ ಕೈಯಲ್ಲಿ ಹಣವನ್ನಿತ್ತು, ಹಣದ ಬಳಕೆ ಹೇಗಾಗುತ್ತಿದೆಯೆಂದು ನೋಡದಿರುವುದು ಹುಚ್ಚುತನವಾಗುತ್ತದೆ. ಅವನು ಮನಬಂದಂತೆ ವೆಚ್ಚ ಮಾಡಿ, ಹಣವನ್ನು ವ್ಯರ್ಥ ಪೋಲು ಮಾಡುತ್ತಾನೆ. ಒಂದು ಬೆಕ್ಕು ಬಾಯಲ್ಲಿ ಕೋಳಿಯನ್ನು ಹಿಡಿದಿದ್ದರೆ, ಅದು ಆ ಕೋಳಿಯನ್ನು ಹೇಗೆ ಕಬಳಿಸಬೇಕೆನ್ನುವತ್ತ ಮನಸ್ಸನ್ನು ಕೇಂದ್ರೀಕರಿಸುತ್ತದೆ. ಅದನ್ನು ಎಚ್ಚರಿಸಲು ಯಾರಾದರೂ ಕರೆದರೂ ಅದು ಲಕ್ಷ್ಯಗೊಡದು.

ಆ ॥
ಅನ್ನ ಜೀರ್ಣಿಸದಗೆ ಅನ್ನ ನೀಡಲಾಗ,
ಬೀಸಿ ಒಗೆವನದರ ಫಲವು ಏನು ?
ಧನಿಕಗಿತ್ತ ದಾನ ಅಂತೆ ಇಹುದು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಯಾರಿಗೆ ಹಸಿವು ಆಗಿದೆಯೋ ಅವರಿಗೆ ಅನ್ನ ನೀಡಿದರೆ, ಅದು ಪ್ರಯೋಜನಕಾರಿಯಾಗುತ್ತದೆ. ಹಸಿವು, ಅನ್ನ ಪಡೆಯುವುದಕ್ಕೆ ಪಾತ್ರತೆ. ಹಸಿವಿದ್ದರೆ ಮಾತ್ರ ಉಂಡ ಅನ್ನ ಜೀರ್ಣಿಸುತ್ತದೆ. ಹಸಿವು ಇರದೆ, ಅನ್ನ ಉಂಡರೆ, ಅಜೀರ್ಣವಾಗುತ್ತದೆ. ವಾಂತಿಯಾಗುತ್ತದೆ. ಅವನು ತನಗೆ ನೀಡಿದ ಅನ್ನವನ್ನು ಬೀಸಿ ಆಚೆಗೆಸೆಯುತ್ತಾನೆ. ಅದರಿಂದಾವ ಫಲವೂ ಇರದು. ಅದೇ ರೀತಿ ಧನದಾಹವಿರದ, ಅಗತ್ಯವಿರದ ಧನಿಕನಿಗೆ ದಾನ ನೀಡಿದರೆ, ಅದು ಅಪಾತ್ರದಲ್ಲಿ ದಾನವಾಗುತ್ತದೆ. ಅವನು ಆ ದಾನವನ್ನು ಸ್ವೇಚ್ಛಾಚಾರಿ ಕಾರ್ಯಗಳಲ್ಲಿ ಬಳಸುತ್ತಾನೆ.

ಆ ॥
ಅರ್ಥವಂತನ ಸಿರಿ, ಆಸಿಪರರ್ಥಿಗಳು,
ಅರ್ಥಿಗೀಯದ ಸಿರಿ ವ್ಯರ್ಥ ಕಣಾ !
ವ್ಯರ್ಥವಾದ ಸಿರಿಯು ವ್ಯರ್ಥರಿಗೆ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಧನವಂತನಾಗಿದ್ದರೆ, ಅವನ ಧನವನ್ನು ಅಡಚಣೆಯಲ್ಲಿ ಇದ್ದವರು ಬೇಡುತ್ತಾರೆ. ಅವರು ತಮ್ಮ ಅನಿವಾರ್ಯ ಅಗತ್ಯವನ್ನು ತುಂಬಿಕೊಳ್ಳಲು ಹಣ ಬಳಸುತ್ತಾರೆ. ಇವರೇ ಅರ್ಥಿಗಳು. ಇಂಥ ಅರ್ಥಿಗಳಿಗೆ ನೀಡದ ಅರ್ಥವು ವ್ಯರ್ಥವಾಗತ್ತದೆ. ಅದಾವ ಪ್ರಯೋಜನಕ್ಕೂ ಬಾರದು.





ಕಂದ ॥
ನೆರೆ ಬಡವರ ರಕ್ಷಿಸುವವ
ಸರಸನು ; ನೆರೆ ದಾತ ; ಹೊರತು ಸಂಪನ್ನರ ತಾ
ಭರಿಸುವವನು ದಾತನೇನು ?
ಧರೆ ಮೆಚ್ಚುವುದಾತನನ್ನು, ಅರಿಯೈ ವೇಮಾ.

ಕಡು ಬಡವರನ್ನು ಸಕಾಲದಲ್ಲಿ ಧನ ಸಹಾಯ ನೀಡಿ ರಕ್ಷಿಸುವವನೇ ಸರಸ ಜೀವಿಯು. ಅವನೇ ಅಧಿಕ ದಾತನು. ಏಕೆಂದರೆ ಅವನು ತನ್ನ ಸಮೀಪದವರ ಕಷ್ಟವನ್ನು ಹಂಚಿಕೊಂಡು, ಸುಖವನ್ನು ವರ್ಧಿಸುತ್ತಾನೆ. ಆದರೆ ಧನವುಳ್ಳ ಸಂಪನ್ನರನ್ನೇ ಪೋಷಿಸಲು ಮುಂದಾಗುವವನು ದಾತನಾಗುವುದೆಂತು ? ಪಾತ್ರಾಪಾತ್ರತೆ ನೋಡಬೇಡವೇ ? ಹೀಗೆ ಧನ ಸಂಪನ್ನರನ್ನೇ ಪೋಷಿಸುವವನನ್ನು ಧರೆಯ ಜನರು ಮೆಚ್ಚರು.

ಆ ॥
ಪ್ರಭುವಿಗೀವ ರೀತಿ ಬಡವರಿಗೀಯರು !
ವನಿತೆಗೀವ ರೀತಿ ವಟುವಿಗಿಲ್ಲ.
ಸುರೆಗೆ ಈವ ರೀತಿ, ಸುಮತಿಗೀಯರಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಜನರು ರಾಜದಂಡಕ್ಕೆ ಹೆದರಿ ತಮ್ಮ ಹಣವನ್ನು ಆಳುವ ದೊರೆಗಳಿಗೆ ಈಯುತ್ತಾರೆ. ಆದರೆ ಯಾವ ಬಡವರಿಗೆ ಉಪಜೀವನ ಸಾಗಿಸಲು ಹಣದ ತೀರ ಅವಶ್ಯಕತೆ ಇದೆಯೇ ಅವರಿಗೆ ಕೊಡರು. ಸ್ತ್ರೀಯ ಅಂದ ಚೆಂದ ನೋಡಿ, ಅವಳನ್ನು ವಶಪಡಿಸಿಕೊಳ್ಳಲು ಬೇಕಾದಷ್ಟು ದುಡ್ಡು ಕೊಡುತ್ತಾರೆ. ವಿದ್ಯಾಭ್ಯಾಸ ಮಾಡುವ ವಟುವಿಗೆ ಕೊಡುವುದಿಲ್ಲ. ಅದೇ ರೀತಿ, ತಮ್ಮ ದುಶ್ಚಟಗಳನ್ನು ತಣಿಸಲು ಸುರಾಪಾನದ ವ್ಯಸನಿಗಳಾಗಿ ಸುರೆಗೆ ಹಣ ವ್ಯಯಿಸುತ್ತಾರೆ. ಆದರೆ ಒಳ್ಳೇ ಬುದ್ಧಿಯ ಸದಾಚಾರಿಯಾದ ಸುಮತಿಗೆ ಹಣ ನೀಡುವುದಿಲ್ಲ. ಹೀಗೆ ಅಪಾತ್ರದಲ್ಲಿ ಹಣ ಸೋರಿ ಹೋಗುತ್ತದೆ. ವ್ಯರ್ಥವಾಗಹುತ್ತದೆ.

## ಧನ ಮದ :

ಧನಮದ, ಕುಲಮದ, ರಾಜ್ಯಮದ ಎಂಬಿತ್ಯಾದಿ ಅಷ್ಟ ಮದಗಳಲ್ಲಿ ಧನ ಮದವೇ ತುಂಬಾ ಕೆಡುಕಾದುದು. ಇಡೀ ಸಮಾಜದ ಸ್ವಾಸ್ಥ್ಯವನ್ನೇ ಅದು ಕೆಡಿಸುತ್ತದೆ. ಧನಾಕಾಂಕ್ಷೆಯಿಂದ ಪ್ರೇರಿತನಾಗಿ ಮಾನವನು ಏನೆಲ್ಲ ಹೀನ ಕಾರ್ಯಗಳಲ್ಲಿ ತೊಡುಗುತ್ತಾನೆ. ಒಮ್ಮೆ ಕೈಗೆ ಧನ ಸಿಕ್ಕಿತೆಂದರೆ ಅವನ ಸ್ವಭಾವವೇ ಏರುಪೇರು ಆಗುತ್ತದೆ.

ಆ ॥
ಕಂಡು ಕಾಣಲಾರ ; ತುಟಿ ಕದಲಿಸಲಾರ ;
ಕೇಳಿ ಕೇಳದಂತಿಹ, ವಿಸ್ಮಯವಲ !
ಸಂಪದವಿರುವವನ ಸನ್ನಿಪಾತಕವದು !
ವಿಶ್ವದಾಭಿರಾಮ ಕೇಳು ವೇಮ.

ಸನ್ನಿಪಾತ ರೋಗವೆಂದರೆ ಮತಿಭ್ರಮೆಯಿಂದ ಬರುವ ಹುಚ್ಚು. ರೋಗ ಬಂದಾಗ ರೋಗಿಗೆ ಸರಿಯಾಗಿ ಕಣ್ಣು ಕಾಣಿಸದು. ಸರಿಯಾಗಿ ಮಾತನಾಡಲಾರನು. ಸರಿಯಾಗಿ ಕೇಳಲಾರನು.

ಕೂಡ. ಅದೇ ರೀತಿ, ಸಂಪದ ಹೆಚ್ಚಾಗಿರುವವನು, ತನ್ನೆದುರಿಗೆ ಅನುಭವಿಸುವ ಬಡವರ ಬವಣೆಯನ್ನು ಕಂಡರೂ ಕಾಣದಂತಿರುತ್ತಾನೆ. ತಾನಗಾದ ಅಭಿಪ್ರಾಯವನ್ನು ವ್ಯಕ್ತಪಡಿಸದೆ, ತುಟಿಯನ್ನು ಕದಲಿಸಲಾರನು. ಸಹಾಯ ಕೋರಿ ಅರಚುವ ದೀನ ಜನರ ಕೂಗನ್ನು ಕೇಳಿಯೂ ಕೇಳದಂತಿರುವನು. ಇದು ಸಂಪತ್ತಿನ ಮದವೇರಿದ ಮಾನವನ ಸನ್ನಿಪಾತಕ ರೋಗವಾಗಿದೆ.

ಆ ॥ ಕನಕವಿಪ್ಪ ಕಾಲ ಕಠಿಣ ಭಾವ ತಾಳಿ,
ತಿಳಿಯಲಾರರು ಜಖ ತಿಳಿವುಗೆಟ್ಟು,
ಕನಕ ಜೊನ್ನಿನಂತೆ, ಕಾಣದಿರುವರಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಧನವಿರುವ ಕಾಲದಲ್ಲಿ ಜನರು ಉದಾರ ಬುದ್ಧಿ ಹೊಂದಿರಬೇಕಾದುದು ನ್ಯಾಯ. ಆದರೆ ತಿಳಿವುಗೇಡಿ ಜನರು ಉದಾರರಾಗದೆ ಕಠಿಣ ಭಾವ ತಾಳುತ್ತಾರೆ. ಬಡವರಿಗಾಗಿ, ದೀನ ದಲಿತರಿಗಾಗಿ, ಅವರ ಮನ ಕರಗದು. ಅವರು ತಿಳಿವುಗೇಡಿಗಳಾಗಿ ಧರ್ಮವನ್ನು ತಿಳಿಯರು. ಧನ-ಕನಕಗಳೇನೂ ಸ್ಥಿರವಲ್ಲ. ಬೆಳಗ್ಗಿ ಅಡಗುವ ಬೆಳದಿಂಗಳಂತೆ ಕ್ಷಣಿಕವಷ್ಟೆ. ಧನ-ಕನಕಗಳು ಇದೇ ರೀತಿಯೆಂದು ತಿಳಿಯರಲ್ಲ !

ಆ ॥ ಧನದ ಮದವು ತುಂಬಿ ದೈವವನು ಕಾಣರು.
ಕುಟಿಲ ಭಾವವುಳ್ಳ ಕ್ರೂರ ಜನರು.
ಮದವು ಮೀರಿದಾಗ, ಮನ್ನಣೆಯು ಉಳಿಯದು.
ವಿಶ್ವಭಿರಾಮ ಕೇಳು ವೇಮ.

ಮದ ಎಂದರೆ ಬುದ್ಧಿ ಭ್ರಮಣೆ. ದೈವ ಎಂದರೆ ವಿಧಿ. ತನ್ನ ಪೂರ್ವ ಕರ್ಮಫಲಾನುಸಾರ ಘಟನಾವಳಿಗಳನ್ನು ಜೋಡಿಸುವ ಅದೃಷ್ಟ ಶಕ್ತಿ. ಇದು ಅಪರಿಹಾರ್ಯ. ಧನದ ಮದವೇರಿದವರು ದೈವವನ್ನು ಕಾಣುವದಿಲ್ಲ. ಅವರು ವಕ್ರವಾದ ಭಾವವುಳ್ಳವರಾಗಿದ್ದು ದೀನ ದಲಿತರನ್ನು ಪೀಡಿಸುವ ಕ್ರೂರಿಗಳಾಗಿರುತ್ತಾರೆ. ಹೀಗೆ ಯಾವನೊಬ್ಬನ ಧನಮದವು ತೀರ ಹೆಚ್ಚಿ, ಮಿತಿ ಮೀರಿದಾಗ, ಅವರ ಸ್ಥಾನಮಾನಕ್ಕೆ ಇರುವ ಮರ್ಯಾದೆಯೂ ಉಳಿಯುವುದಿಲ್ಲ.

ಕಂ. ಶ್ರೀಮಂತರಾಗಿರುವವರು
ಸಾಮಾನ್ಯ ಜನರೊಡನೆ ಸಖ್ಯತೆ ನೋಳ್ಪರ್.
ಪಾಮರ ಗುಣವಾಗದೇನು ?
ತಾ ಮೇಲೆಂದತಿ ತಿಳಿವುದು ? ತಪ್ಪದು, ವೇಮಾ.

ಯಾರಿಗೆ ಧನ ಸಂಪತ್ತಿನೊಂದಿಗೆ ವಿದ್ಯಾ ಸಂಪತ್ತು, ಗುಣ ಸಂಪತ್ತುಗಳಿರುವವೋ ಅಂಥ ಶ್ರೀಮಂತ ಸಾಮಾನ್ಯ ಜನರೊಂದಿಗೆ ಸುಖವಾಗಿರಲು ಬಯಸುತ್ತಾನೆ. ಪ್ರೀತ್ಯಾದರಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಆದರೆ ಸಾಮಾನ್ಯರು ಕೀಳು ; ಮೇಲು ; ಎಂದು ತಿಳಿಯುವುದು ಪಾಮಮರ ಗುಣವಾಗದೇನು ? ಅದು ತಪ್ಪು ; ತಪ್ಪು.

ಶೂದ್ರನಿಗೆ ಆಸ್ತಿ ಹೊಂದುವ ಹಕ್ಕಿಲ್ಲ. ಧರ್ಮ ಸಂಸ್ಕಾರಕ್ಕೆ ಹಕ್ಕಿಲ್ಲ ಎಂದು ಪ್ರತಿಪಾದಿಸುವ ವೈದಿಕ ಪೌರಾಣಿಕ ಧರ್ಮ ಸೂತ್ರಗಳು ಬರೀ ಮೇಲು ಕೀಳಿನ ಭಾವದಿಂದ ರಚಿಸಲ್ಪಟ್ಟಿವೆ. ಉದಾಃ





"ಕೆಲಸ ಮಾಡುವ ಶೂದ್ರನಿಗೆ ಉಳಿದ ಅನ್ನವನ್ನೂ, ಹಳೆಯ ಬಟ್ಟೆಗಳನ್ನೂ, ಕೇರಿ ಹಸನು ಮಾಡಿದ ನಂತರ ಉಳಿದ ಧಾನ್ಯವನ್ನು ಕೊಡಬೇಕು ? (ಮ.ಸ್ಮೃ. 10-125).

'ಧನಾರ್ಜನೆ ಮಾಡುವ ಶಕ್ತಿ ಸಾಮರ್ಥ್ಯಗಳಿದ್ದರೂ ಶೂದ್ರನು ಧನವನ್ನು ಗಳಿಸಬಾರದು. ಹಣ ಸಂಪಾದನೆ ಮಾಡಿದರೆ. ಶೂದ್ರನು ಬ್ರಾಹ್ಮಣರನ್ನು ಕಡೆಗಣಿಸುತ್ತಾರೆ." (ಮ.ಸ್ಮೃ. 10-129).

ಪಟ್ಟಭದ್ರ ಹಿತಾಸಕ್ತಿಗಳು ಸ್ವಾರ್ಥ ಸಾಧನೆಗೆ ಇಂಥ ಏನೇನನ್ನೋ ಬರೆದುಕೊಂಡು, ಸೋತ ಆದಿವಾಸಿ ಜನರನ್ನು ಶೂದ್ರರೆಂದು ಕರೆದು, ಅವರಿಗೆ ಶ್ರುತಿ ಸ್ಮೃತಿಗಳ ಅರಿವಾಗದಂತಿರಿಸಿ, ಸಾವಿರಾರು ವರ್ಷಗಳಿಂದ ಸಾಮಾನ್ಯ ಜನರನ್ನು ಶೋಷಿಸುತ್ತ ಬಂದಿದ್ದಾರೆ.

## ಧನಕ್ಕೆ ಅವಸ್ತಾವ ಮಹತ್ವ :

ಆ ॥ ದುಡ್ಡು ಉಳ್ಳ ನರನ ಗಿಡ್ಡ ಹುಣ್ಣು ಕೂಡ,
ಪೊಡವಿಯೊಳಗೆ ದೊಡ್ಡ ಸುದ್ದಿಯಹುದು.
ಬಡವನ ಮನೆ ಮದುವೆ ಕೇಳರಾರು ನೋಡು.
ವಿಶ್ವದಾಭಿರಾಮ ಕೇಳು ವೇಮ.

ದುಡ್ಡಿಗೆ ಅವಾಸ್ತವ ಮಹತ್ವ ಕೊಡುವ ಜನರು, ದುಡ್ಡಿದ್ದವನ ಆಗು-ಹೋಗುಗಳಿಗೂ ಅವಾಸ್ತವ ಮಹತ್ವ ಕೊಡುತ್ತಾರೆ. ದುಡ್ಡು ಉಳ್ಳವನಿಗೆ ಚಿಕ್ಕ ಹುಣ್ಣಾದರೂ ಜನರಲ್ಲಿ ಅದು ದೊಡ್ಡ ಸುದ್ದಿಯೇ ಆಗುತ್ತದೆ. ಅದೇ ಬಡವನ ಮನೆಯಲ್ಲಿ ಮದುವೆ ಸಮಾರಂಭ ನಡೆದರೂ ಅದು ವಾರ್ತೆ ಎನಿಸದು. ಅದನ್ನು ಕುರಿತು ಯಾರೂ ಹೇಳರು, ಯಾರೂ ಕೇಳರು.

ಬಡವನೊಬ್ಬನು ಒಳ್ಳೆಯ ಪ್ರಯೋಜನಕರ ವಿಚಾರವನ್ನು ತಿಳಿಸಿದರೂ ಯಾರೂ ಆ ವಿಚಾರಕ್ಕೆ ಮಾನ್ಯತೆಯನ್ನೇ ಕೊಡುವುದಿಲ್ಲ.

ಆ ॥ ಎಣ್ಣೆ ಇರುವ ದೀಪ, ಎಸಗಿ ಬೆಳಗುತಿಹುದು.
ವಿತ್ತ ಉಳ್ಳವನ ವಿಚಾರ ಮಾನ್ಯ.
ಹೊನ್ನು ಇಲ್ಲದವನ ಹೊಂಚು ತೀರಿ ಹೋಯ್ತು.
ವಿಶ್ವದಾಭಿರಾಮ ಕೇಳು ವೇಮ.

ದೀಪದಲ್ಲಿ ಎಣ್ಣೆ ಇದ್ದರೇನೇ ಆ ದೀಪವು ತೊಳಗಿ ಬೆಳಗುತ್ತದೆ. ಅದೇ ರೀತಿ, ಹಣ ಉಳ್ಳವನ ವಿಚಾರಗಳಿಗೆ ಜನರು ಮಾನ್ಯತೆ ನೀಡುತ್ತಾರೆ, ಅವನ ಮಾತಿಗೆ. ಅಂತೆಯೇ ನಡೆಯುತ್ತಾರೆ. ಇದು ಲೋಕ ರೂಢಿ. ಹಣವಿಲ್ಲದವನು ತನ್ನ ಕಾರ್ಯ ಸಾಧನೆಗಾಗಿ ಏನೇನೋ ಹೊಂಚು ಹಾಕಿದರೂ ಆ ಹೊಂಚು ಫಲಕಾರಿಯಾಗದೆ ತೀರಿ ಹೋಗುತ್ತದಷ್ಟೇ.

ಆ ॥ ಚಂಚಲ ಮತಿಯಧಿಕ ಕಾಂಚನ ಪಡೆದೊಡನೆ,
ದೊಡ್ಡ ಜನಕಸಡ್ಡೆ ಮಾಳ್ಪ ಸತತ ;
ಕೀಳು ಜಾತಿ ನಾಯಿ, ಮೇಲು ಕುಲವರಿಯದು ?
ವಿಶ್ವದಾಭಿರಾಮ ಕೇಳು ವೇಮ.

ಲಕ್ಷ್ಮಿಯು ಮೊದಲೇ ಚಂಚಲೆ. ಅಂದ ಮೇಲೆ ಯಾರ ಬುದ್ಧಿಯು ಮುನ್ನವೇ ಚಂಚಲವಾಗಿದೆಯೋ ಅವನಿಗೆ ಅಧಿಕ ಕಾಂಚನ ಸೇರಿದಾಗ, ಮಂಗನಿಗೆ ಸೆರೆ ಕುಡಿಸಿದಂತಾಗುತ್ತದೆ. ಅಂಥವನು ಮತ್ತನಾಗಿ ದೊಡ್ಡ ಜನರಿಗೆ ಸತತ ಅಸಡ್ಡೆ ತೋರುವನು. ನಾಯಿಯು ಸ್ವಭಾವತಃ ಕೀಳು ಜಾತಿಯ ಪ್ರಾಣಿ. ಅದಕ್ಕೆ ಮೇಲು ಕುಲದ ನಾಯಿಗಳಂತೆ ನಂಬಿಗಸ್ಥ ಗುಣ, ಸಾಹಸದಿಂದ ಬೇಟೆಯಾಡುವ ಗುಣಗಳ ಅರಿವೇ ಇರುವುದಿಲ್ಲ. ಅಂತೆಯೇ ಅಧಿಕ ಕಾಂಚನ ಪಡೆದವನು ದೊಡ್ಡವರೊಂದಿಗೆ ಶ್ರದ್ಧೆಯಿಂದ ನಡೆದುಕೊಳ್ಳದೆ ಅಸಡ್ಡೆ ತೋರುವನು.

ಆ ॥ ಕೆಡುಕು ಬುದ್ಧಿ ಇರಲಿ, ಕಳ್ಳತನವೆ ಇರಲಿ,
ಸಟೆಯೆ ಇರಲಿ ಸಾಹಸಗಳೆ ಇರಲಿ.
ಸಂಪದಧಿಕವಿರೆ ಸಾಧಿಪ ಸಲೆಯೊಪ್ಪು
ವಿಶ್ವದಾಭಿರಾಮ ಕೇಳು ವೇಮ.

ಧನವು ಸದ್ಗುಣಿಗಳಲ್ಲಿಯೇ ಇರಬೇಕೆಂದಿಲ್ಲ. ತಮ್ಮ ತಮ್ಮ ಪೂರ್ವ ಕರ್ಮ ಫಲಾನುಸಾರ ಅದು ಅವರವರಿಗೆ ಸೇರುತ್ತದೆ. ಧನವು ಸುಖದ ಮೂಲವೂ ಅಲ್ಲ. ಅದು ಎಷ್ಟೋ ಸಲ ದುಃಖಕ್ಕೆ ಕಾರಣವಾಗಲೂಬಹುದು. ಚಿಂತೆಯ ಮೂಲವೂ ಆಗಬಹುದು. ಹೀಗಾಗಿ, ಕೆಡುಕು ಬುದ್ಧಿಯವನೇ ಇರಲಿ, ಕಳ್ಳತನಕ್ಕಿಳಿದವನೇ ಇರಲಿ, ಸುಳ್ಳು ನುಡಿಯುವವನೇ ಇರಲಿ, ಇಲ್ಲವೆ ಸಾಹಸ ಕಾರ್ಯಗಳಲ್ಲಿ ತೊಡಗುವವನೇ ಇರಲಿ, ಏನಾದರಾಗಲಿ, ಅವನಿಗೆ ಅಧಿಕ ಸಂಪದವಿದ್ದರೆ, ಅವನು ಅದರ ಬಲದಿಂದ ತನ್ನ ಇಷ್ಟಾನಿಷ್ಟಗಳನ್ನು ಒಳ್ಳೇ ಒಪ್ಪಾಗಿ ಸಾಧಿಸುತ್ತಾನೆ.

ಆ ॥ ದೋಷಕಾರಿಯಿರಲಿ, ದೂಷಿಸುವವನಿರಲಿ,
ಹಗೆಯೆ ಇರಲಿ, ವೇದ ಬಾಹ್ಯನಿರಲಿ,
ಧನಿಕರೆಲ್ಲರನ್ನು ತನಗಿಂಪು ಎನ್ನುವ.
ವಿಶ್ವದಾಭಿರಾಮ ಕೇಳು ವೇಮ.

'ಸರ್ವೇ ಗುಣಾಃ ಕಾಂಚನಮಾಶ್ರಯೇತ್' ಗುಣಗಳೆಲ್ಲವೂ ಕಾಂಚನವನ್ನೇ ಆಶ್ರಯಿಸಿರುತ್ತವೆ ಎನ್ನುತ್ತಾರೆ. ಒಬ್ಬನು ಕೊಲೆ-ಸುಲಿಗೆ ಮಾಡಿರಲಿ, ಮೋಸ ವಂಚನೆಗಳಿರಲಿ, ಅವನೆಷ್ಟೇ ದೋಷಕಾರಿಯಾಗಿರಲಿ, ಬೇಕಾದರೆ ಅವನು ಪರರನ್ನು ವಿನಾಕಾರಣ ದೂಷಿಸುವವನಿರಲಿ, ತನ್ನ ವೈರಿಯೇ ಆಗಿರಲಿ, ತಿಳಿವಳಿಕೆ ಇಲ್ಲದವನೇ (ವೇದ ಬಾಹ್ಯ) ಇರಲಿ, ಅವನಲ್ಲಿ ಧನವಿದ್ದು, ವಿಪುಲ ಧನಿಕನಾಗಿದ್ದರೆ, ತನಗೆ ಇಂಪಾದವನು, ಮಧುರ ಬಾಂಧವ್ಯದವನು, ಎಂದು ತಿಳಿಯುತ್ತಾನೆ.ಆದರೆ ಧನವು ಅಪಾತ್ರನಲ್ಲಿ ಸೇರಿದೆ ಎಂದು ತಿಳಿಯುವುದಿಲ್ಲ.

## ಧನಾಕಾಂಕ್ಷೆ :

ಆ ॥ ಕಾಂಚನಾದಿ ಮೇಲೆ ಕಾಂಕ್ಷೆ ಮೋಹವೆಂದು,
ಬಿಡರು ಮತ್ತೆ ಅಂಥ ಬುಧರು ಕೂಡ.
ಕಾಂಕ್ಷೆ ಇಲ್ಲದವರು ಕಾಣ ಬಾರರಲ್ಲ !
ವಿಶ್ವದಾಭಿರಾಮ ಕೇಳು ವೇಮ.





ಬಹು ಜನರಿಗೆ ಕಾಂಚನದ ಮೇಲೆ ತೀವ್ರ ಅಪೇಕ್ಷೆ ಅಂದರೆ ಆಕಾಂಕ್ಷೆ ಇರುತ್ತದೆ. ಅದನ್ನು ಅವರು ಮೋಹಿಸುತ್ತಾರೆ. ಈ ಕಾಂಕ್ಷೆ ಮೋಹಗಳು ಮನವನ್ನು ಸದ್ವಿಚಾರದಿಂದ ಮರೆ ಮಾಡುತ್ತಿವೆಯೆಂದು ತಿಳಿದಿದ್ದರೂ ಸಹ, ತಥಾಕಥಿತ ಬುಧರು ಕೂಡ ಅವುಗಳನ್ನು ಬಿಟ್ಟುಕೊಡರು. ಕಾಂಚನದ ಆಕಾಂಕ್ಷೆ ಇಲ್ಲದವರು ಎಲ್ಲೂ ಕಾಣಬರುವುದಿಲ್ಲವಲ್ಲ !

ನೀತಿ ಬೋಧೆಗೆಂದು ರಚಿಸಲಾದ ಪುರಾಣೇತಿಹಾಸಗಳ ಕಥೆಗಳನ್ನೇ ನೋಡಿರಿ :

ಆ ॥ ಹಾಲ ಸಾಗರದೊಳು ಹಾಯಾಗಿರುವ ಹರಿ,
ಗೊಲ್ಲ ಕರೆದ ಹಾಲು ಕೋರುತಿಹನು.
ಎಲ್ಲರು ಪರಧನಕೆ ಕರವನೊಡ್ಡುತಿಹರು.
ವಿಶ್ವದಾಭಿರಾಮ ಕೇಳು ವೇಮ.

ಪುರಾಣಗಳಲ್ಲಿ ಬಣ್ಣಿಸಲಾದ ಸಪ್ತ ಸಾಗರಗಳಲ್ಲಿ ಹಾಲುಸಾಗರವೂ ಒಂದು. ಇದು ವಿಷ್ಣುವಿನ ವಾಸಕ್ಷೇತ್ರ. ಹರಿಯು ಹಾಲು ಸಾಗರದಲ್ಲಿ ಹಾಯಾಗಿ ಪವಡಿಸಿದ್ದರೂ ಸಹ, ಅವನು ಗೊಲ್ಲನು ಕರೆದ ಹಸುವಿನ ಹಾಲು ಕುಡಿಯಲು ಕೋರುತ್ತಾನೆ. ಜೀವಿಗಳ ಸ್ವಭಾವವು ಬಲು ವಿಚಿತ್ರ. ಸಿರಿವಂತನಾಗಿದ್ದರೂ ಸಹ ಪರ ಧನವು ಸಿಗುವುದೆಂದರೆ ಸಾಕು, ಪಡೆಯಲು ಕೈ ಚಾಚುತ್ತಾರೆ. ಧನಾಕಾಂಕ್ಷೆಯ ಮೋಹವು ಅದಮ್ಯವಾಗಿದೆ.

ರಾಮಾಯಣದಲ್ಲಿಯೂ ಕಾಂಚನಾಕಾಂಕ್ಷೆಯಿಂದ ವಿವೇಕ ಕಳೆದುಕೊಳ್ಳುವ ಪ್ರಸಂಗದ ಪ್ರಸ್ತಾಪವಿದೆ.

ಆ ॥ ಹೊನ್ನು ಜಿಂಕೆ ಜಗದಿ ಇಹುದಿಲ್ಲವರಿಯದೆ,
ದಾರೆ ನುಡಿಯೆ, ನಡೆದ ದಾಶರಥಿಯು.
ದೇವನಾದರೇನು ? ಧನದ ಮೋಹವಿರದೆ ?
ವಿಶ್ವದಾಭಿರಾಮ ಕೇಳು ವೇಮ.

ರಾವಣನು ಸೀತೆಯನ್ನು ಅಪಹರಿಸುವ ಹಂಚಿಕೆಯಲ್ಲಿ, ತನ್ನ ಮಾವ ಮಾರೀಚ ಮಹರ್ಷಿಯನ್ನು ಬಂಗಾರ ಬಣ್ಣದ ಜಿಂಕೆಯಾಗಿ, ಸೀತಾ ರಾಮ ಲಕ್ಷ್ಮಣರ ಕುಟೀರದ ಬಳಿ ಸುಳಿದಾಡಿ ಅವರ ಲಕ್ಷ್ಯ ಸೆಳೆದು ರಾಮನನ್ನು ದೂರಕ್ಕೆ ಕರೆದೊಯ್ಯುವಂತೆ, ಮತ್ತು 'ಲಕ್ಷ್ಮಣಾ ! ಲಕ್ಷ್ಮಣಾ !" ಎಂದು ರಾಮನ ಆರ್ತ ಧ್ವನಿಯಂತೆ ಕೂಗುವಂತೆ ಒಪ್ಪಿಸಿದ್ದನು. ಆ ಸಂಚಿಗೆ ಬಲಿಯಾದ ಸೀತೆಯು ಕಾಂಚನ ಮೃಗವನ್ನು ಕಂಡು ಹಠ ತೊಟ್ಟು ರಾಮನನ್ನು ಅದರ ಬೆನ್ನಟ್ಟುವಂತೆ ಕಳಿಸಿದಳು.

ಈ ಜಗತ್ತಿನಲ್ಲಿ ಹೊನ್ನು ಜಿಂಕೆಯು ಇರುವುದೋ ಇಲ್ಲವೋ ? ಎಂದು ವಿವೇಚಿಸಿ ಅರಿಯುವ ಬುದ್ಧಿ ಉಳಿಯದೆ ತನ್ನ ಸತಿಯ ಮಾತನ್ನೇ ಅನುಸರಿಸಿ, ದಶರಥ ಕುಮಾರನಾದ ಶ್ರೀರಾಮನು ಅದನ್ನು ಬೆನ್ನಟ್ಟಿ ಅಡವಿಯಲ್ಲಿ ನುಗ್ಗಿದನು. ಭೂಸುರನಾದರೇನು ? ಅವತಾರಿ ಪುರುಷನಾದರೇನು ? ಧನದ ಮೋಹವು ಇದ್ದೇ ಇರಬೇಕಲ್ಲವೇ ?

------

# ೧೨. ಸಾಮಾಜಿಕ ಶೋಷಣೆ

ಜೀವಿಯು ತನ್ನ ಪೂರ್ವ ಸಂಸ್ಕಾರಾನುಸಾರ ಆಯಾ ಯೋನಿಗಳಲ್ಲಿ ಜನಿಸುವುದುಂಟು. ಕ್ರಿಮಿ ಕೀಟ ಯೋನಿ, ಮೀನ, ಮೊಸಳೆಗಳ ಯೋನಿ, ಪಕ್ಷಿಗಳ ಯೋನಿ, ಪಶುಗಳ ಯೋನಿ, ಮೃಗಗಳ ಯೋನಿ, ಮನುಷ್ಯ ಯೋನಿ. ಈ ಯೋನಿಗಳಲ್ಲಿ ಜಾತಿಗಳೂ ಉಂಟು, ಝುರಿ, ಹಾವು, ಮೀನ, ಮೊಸಳೆ, ಪರಿವಾಳ, ಹದ್ದು, ಗೊರವಂಕ, ಗಿಳಿ, ನವಿಲು ಇತ್ಯಾದಿ. ಪಶುಗಳಲ್ಲಿ ಹಸು, ಮಹಿಂಷ, ಕುರಿ, ಆಡು ಮುಂತಾದವು. ಮೃಗಗಳಲ್ಲಿ ಸಿಂಹ, ಹುಲಿ, ಚಿರತೆ, ಕರಡಿ ಇತ್ಯಾದಿ. ಇನ್ನು ಮನುಷ್ಯರಲ್ಲಿ ಜಾತಿ ಭಿನ್ನತೆಯಿಲ್ಲ. ಎಲ್ಲರಿಗೆ ಕಾಲು, ಕೈ, ಮೂಗು, ಕಣ್ಣು, ಕಿವಿ, ಕೂದಲು ಇವೆ. ಹುಟ್ಟಿನಿಂದ ಬೇರಾವ ಭೇದವೂ ಇಲ್ಲ. ಗಂಡು ಮತ್ತು ಹೆಣ್ಣು ಎಂಬ ಎರಡು ಜಾತಿಗಳಿವೆ.

ಆ ||
ಜಾತಿ ಬೇರೆ ಇಲ್ಲ, ಜನ್ಮ ಕ್ರಮವ ಹಿಡಿದು,
ನೆಮ್ಮದಿಯಲಿ ಅಭವನ ನಿಲಿಸಿ ಇರಲು.
ಅಖಿಲ ಜನರ ಮಧ್ಯೆ ಅವನೆ ಘನನು ಅಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಪೂರ್ವ ಕರ್ಮ ಸಂಸ್ಕಾರದಿಂದ ಮನುಷ್ಯ ಯೋನಿಯಲ್ಲಿ ಜನಿಸಿ ಬಂದುದರಿಂದ ಮಾನವ ಜಾತಿಯೊಂದಿದೆ. ಇದನ್ನು ಹೊರತು ಬೇರೆ ಜಾತಿ ಇಲ್ಲ. ತನ್ನ ಜನ್ಮದಲ್ಲಿ ಮಾಡಿದ ಸಾಧನೆಯನ್ನು ಹಿಡಿದು, ಮುಟ್ಟಿದ ಮಾನಸಿಕ ಮಟ್ಟದ ಮೇಲೆ ಸಾಧನೆಯನ್ನು ಮುಂದುವರಿಸಿ, ಮನವನ್ನು ಶಾಂತಗೊಳಿಸಿ, ನೆಮ್ಮದಿಯಲ್ಲಿ, ಅಭವನನ್ನು ಲಕ್ಷ್ಯದಲ್ಲಿ ನಿಲ್ಲಿಸಿ ಇದ್ದರೆ, ತೀರಿತು. ಅಂಥವನೇ ಎಲ್ಲ ಜನರ ನಡುವೆ ಘನನೆನಿಸುವನಯ್ಯ.

ಆ ||
ಜಾತಿ ಭೇದವೇಕೆ ? ಜನ್ಮಗಳ ತಿಳಿಯದೆ,
ಮುಕ್ತಿಗಾಣದಿಹರು ಮೂರ್ಖ ಜನರು.
ಜಾತಿಯೆಣಿಕೆ ಏಕೆ ? ಜನ್ಮಗಳ ತಿಳಿವುದು
ವಿಶ್ವದಾಭಿರಾಮ ಕೇಳುವೇಮ.

ಕ್ರಿಮಿ ಕೀಟ ಯೋನಿಯಿಂದ, ಪಶು ಯೋನಿ, ಪಶು ಯೋನಿಯಿಂದ ಮನುಷ್ಯ ಯೋನಿ ಎಣಿಸುವುದೇಕೆ ? ಮಾನವರಿಗೆಲ್ಲ ತಾಯಿಯೊಬ್ಬಳೇ. ಅವಳೇ ಪಾರ್ವತಿ, ಪ್ರಕೃತಿ ಮಾತೆ. ತಂದೆಯು ಒಬ್ಬನೇ. ಅವನು ವರಶಂಭು. ಬೀಜಪ್ರದನಾದ ಪುರುಷ. ಹೀಗೆ ಜಗದ ಜನರನ್ನು ಸಹೋದರರೆಂದು ಭಾವಿಸಿದರೆ ತೀರಿತು. ವ್ಯರ್ಥ ಜಾತಿ ಎಣಿಕೆ ಏಕೆ ಬೇಕು ? ಜನ್ಮಗಳ ಪ್ರಕ್ರಿಯೆಯನ್ನು ತಿಳಿಯಬೇಕಷ್ಟೇ. ಹೀಗೆ ಜಾತಿ ಭೇದ ಹುಟ್ಟಿಸಿ, ದ್ವೇಷಾಸೂಯೆಯಿಂದ ಇಹದ ಬಂಧನದಿಂದ ಮೂರ್ಖ ಜನರು ಮುಕ್ತಿ ಕಾಣದಿರುವರು.

ಜಾತಿ ನಾನರಿಯೆನು, ಜಗವ ನಾನರಿಯೆನು.
ಜಪವ ನಿಷ್ಠೆಯರಿಯೆ, ಸತ್ಯವಿದುವೆ.
ಇಷ್ಟು ಹುಟ್ಟಿತೆಲ್ಲಿ ? ನೀನದರ ಸಂಧಿಯರಿ.
ವಿಶ್ವದಾಭಿರಾಮ ಕೇಳು ವೇಮ.





ತಾಯಿ ಯೋನಿಯಿಂದ ಹುಟ್ಟಿದಾಗ ನಾನು ಜಾತಿಯನ್ನು ಅರಿಯೆನು. ಇನ್ನು ಜಾತಿ ಭೇದವನ್ನು ಅರಿಯುವ ಪ್ರಶ್ನೆಯಂತೂ ಇಲ್ಲ. ಜಗತ್ತಿನ ಜನರು ಇದನ್ನು ಕಲ್ಪಿಸಿರಬಹುದು. ಹುಟ್ಟಿದಾಗ ನಾನು ಜಗವನ್ನೂ ಅರಿಯೆನು. ಸಂಸ್ಕಾರ ಪಡೆಯುವ ಮಂತ್ರ ಜಪ ಪಠಿಸುವುದನ್ನೂ, ಆ ಜಪದಲ್ಲಿ ನಿಷ್ಠೆಯನ್ನೂ ನಾನರಿಯೆನು. ಇದು ಸತ್ಯ. ಆದರೆ ಇಷ್ಟೆಲ್ಲ ಎಲ್ಲಿ ಹುಟ್ಟಿದವು ? ಇವುಗಳ ಅಭಾವ ಮತ್ತು ಇವುಗಳ ಹುಟ್ಟು. ಇವುಗಳ ಸಂಧಿಯನ್ನು ಅರಿತುಕೋ. ಇವು ಬ್ರಹ್ಮ ಕಲ್ಪಿತವಲ್ಲ. ಜಗತ್ತಿನ ಜನರ ಕಲ್ಪನೆಗಳಷ್ಟೇ.

ಜಾತಿಗಳಲಿ ಮೇಲು ಜಾತಿ ಯಾವುದಿಹುದು ?
ಅರಿವು ಇರದೆ ತಿರುಗೆ, ಏನು ಫಲವು ?
ಅರಿವು ಇರುವ ಅವನು ಅಧಿಕ ಕುಲಜನಹನು.
ವಿಶ್ವದಾಭಿರಾಮ ಕೇಳು ವೇಮ.

ಭೌತಿಕ ಶರೀರದ ಹುಟ್ಟನ್ನು ಅನುಲಕ್ಷಿಸಿದರೆ, ಇರುವ ಜಾತಿಯೊಂದೇ. ಅದೇ ಮಾನವ ಜಾತಿ. ಆತ್ಮದ ದೃಷ್ಟಿಯಿಂದ ನೋಡಿದರೆ, ಆತ್ಮಕ್ಕೆ ಹುಟ್ಟು ಇಲ್ಲ. ಅದು ಅಜ. ಆದ್ದರಿಂದ ಅದಕ್ಕಾವ ಜಾತಿ ಇಲ್ಲ. ಆತ್ಮವಿದರಿಗೂ ಜಾತಿ ಇಲ್ಲ. ಇನ್ನು ಮೇಲು ಜಾತಿ ಯಾವುದು ? ಮಾನಸ ಮಟ್ಟವು ಕೆಳಸ್ತರದಲ್ಲಿ ಇರಬಹುದು. ಮೇಲಿನ ಸ್ತರದಲ್ಲಿ ಇರಬಹುದು. ಮೇಲಿನ ಸ್ತರದ ಮಾನಸ ಮಟ್ಟವೇ ಮೇಲು ಜಾತಿಯು. ಈ ಅರಿವು ಇರಬೇಕು. ಅದಿಲ್ಲದೆ ತಿರುಗಿದರೆ ಫಲವೇನು ? ಯಾರಿಗೆ ಹುಟ್ಟು ಇಲ್ಲದ, ಜಾತಿ ಇಲ್ಲದ, ಆತ್ಮದ ಅರಿವು ಇದೆಯೋ, ಅವನು ಅಧಿಕ ಕುಲಜನೆನಿಸುತ್ತಾನೆ.

ಯೋನಿಯಲ್ಲಿ ಹುಟ್ಟಿ, ಉತ್ತಮ ಕುಲಜನಿರೆ,
ಬ್ರಹ್ಮಕುಲದ ಒಳಗೆ ಬದುಕಬೇಕು.
ಬ್ರಹ್ಮವರಿಯದಿರಲು ಬಿದ್ದು ಸತ್ತ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಮಾನವ ಯೋನಿಯಲ್ಲಿ ಹುಟ್ಟಿದ ಮೇಲೆ, ಉತ್ತಮರ ಕುಲದಲ್ಲಿ ಮರು ಹುಟ್ಟು ಪಡೆದು ಅಂದರೆ ಗುರುವಿನಿಂದ ದೀಕ್ಷೆ ಪಡೆದು, ಉತ್ತಮ ಕುಲಜನಾಗಿರಬೇಕು. ಬ್ರಹ್ಮ ಕುಲದ ಒಳಗೆ ಅಂದರೆ ಬ್ರಹ್ಮನನ್ನು ಅರಿಯುವ ಹೇತುವನ್ನು ಹೊಂದಿದ ಜನರೊಂದಿಗೆ ಬದುಕಬೇಕು. ಮಾನವನಾಗಿ ಹುಟ್ಟಿದ ಮೇಲೆ, ಉತ್ತಮ ಕುಲಜನಾಗಿ ಬಾಳಿ ಬೆಳದು ಬ್ರಹ್ಮವನ್ನು ಅರಿಯದಿದ್ದರೆ, ತಾನು ಏರಿದ ಮಾನಸಿಕ ಮಟ್ಟದಿಂದ ಕೆಳಕ್ಕೆ ಬಿದ್ದು ಸತ್ತಂತೆಯೇ ಸರಿ.

ಸಮಾಜವು ಚತುರ್ವರ್ಣೀಯವಿದೆ. ಬ್ರಹ್ಮ, ನೃಪತಿ, ವೈಶ್ಯ ಮತ್ತು ಶೂದ್ರರು ಈ ವರ್ಣ ಪದ್ಧತಿಯ ಅಂಗವಾಗಿದ್ದಾರೆ. ಶಾಸ್ತ್ರೀಯವಾಗಿ, ಅವರವರ ಗುಣ ಮತ್ತು ಕರ್ಮಗಳಿಗನುಸರಿಸಿ, ಆಯಾ ವರ್ಣಗಳ ನಿರ್ಧಾರವಾಗುತ್ತದೆ. ಅನುಭಾವಿಗಳು ಹೇಳುವಂತೆ, ಯಾವೊಬ್ಬ ವ್ಯಕ್ತಿಯನ್ನು ಸಿದ್ಧ ಪುರುಷನು ನೋಡಿದಾಗ, ಅವನ ಗುಣದ ಪ್ರತೀಕವಾಗಿ ಅವನ ವರ್ಣವು ಕಾಣಬರುತ್ತದೆ. ಒಬ್ಬ ವ್ಯಕ್ತಿಯ ಸುತ್ತಲೂ ಅವನ ಪ್ರಭಾವಳಿಯು ಹೊಳೆಯುತ್ತಿದೆ. ಈ ಪ್ರಭಾವಳಿಯ ವರ್ಣವು ಬಿಳಿಯದಾಗಿದ್ದರೆ, ಅವನು ಸಾತ್ವಿಕನು. ಅಂದರೆ ಬ್ರಹ್ಮ ಕುಲದವನು, ಪ್ರಭಾವಳಿಯ ವರ್ಣವು ಕೆಂಪು ಕಿರಣಗಳಿಂದ ಯುಕ್ತವಾಗಿದ್ದರೆ ಅವನು ರಾಜಸಿಕ ಗುಣದವನು. ಅಂದರೆ ಕ್ಷತ್ರ ಕುಲಜನು. ಪ್ರಭಾವಳಿಯು ಹಳದಿ ಕಿರಣಗಳಿದ ಕೂಡಿದ್ದರೆ, ಅವನು ವೈಶ್ಯ ಕುಲದವನು. ಮತ್ತು ಪ್ರಭಾವಳಿಯು ಕಪ್ಪು ಕಿರಣಗಳಿಂದ ಯುಕ್ತವಾಗಿದ್ದರೆ ಅವನು ಶೂದ್ರ ಕುಲದವನು.

ಬ್ರಹ್ಮವೇತ್ತರೆಂದು ಬಿಮ್ಮದಿಂದಿಪ್ಪರು.
ಬ್ರಹ್ಮವೇನೊ ? ಅದರ ಭಾವವೇನೊ ?
ಬಿಳಿಪೊ ಕೆಂಪೊ ? ಕಪ್ಪೊ ? ತಿಳಿದಿದ್ದರೆ ಹೇಳು.
ವಿಶ್ವದಾಭಿರಾಮ ಕೇಳು.

ಕೆಲವರು ತಮಗೆ ಬ್ರಹ್ಮ ತಿಳಿದಿದೆಯೆಂದು ಬಿಮ್ಮನೆ ಕುಳಿತಿರುವರು. ಆದರೆ ಬ್ರಹ್ಮವು ಗುಣಾತೀತ ಅವಸ್ಥೆಯು. ಅದು ಭಾವಾತೀತ ಸ್ಥಿತಿ. ಅದನ್ನು ತಿಳಿದವನು ಗರ್ವದಿಂದ ಆತ್ಮ ಸಂಭಾವಿತನಾಗಿ ಇರಬಹುದೇ ? ಆ ಸ್ಥಿತಿಯನ್ನು ಭಾವಿಸಲು ಶಕ್ಯವೇ ? ಅದು ಬಿಳಿಪಾಗಿದೆಯೋ? ಕೆಂಪಾಗಿದೆಯೋ ? ಕಪ್ಪಾಗಿದೆಯೋ ? ಅಂದರೆ ವರ್ಣ ಭೇದದ ಅಂಟು ಅಲ್ಲಿ ಇದೆಯೇ ? ಬ್ರಹ್ಮ ತಿಳಿದಿದ್ದರೆ, ಹೇಳು.

ಬ್ರಹ್ಮ, ನೃಪತಿ, ವೈಶ್ಯ ಪತಿಗಳು ಶೂದ್ರರು.
ಬ್ರಹ್ಮ, ವಿಷ್ಣು, ಹರರು, ಪಶುಗಳೆನಲು,
ಬ್ರಹ್ಮ ತಿಳಿಯದಿರಲು ಬಹಳ ರೂಪವಿಂತು.
ವಿಶ್ವದಾಭಿರಾಮ ಕೇಳು ವೇಮ.

ಗುಣಾನುಗತವಾಗಿ ಮಾನವರಲ್ಲಿ ನಾಲ್ಕು ವರ್ಣಗಳನ್ನು ಗುರುತಿಸಬಹುದು. ಬಿಳಿಯ ವರ್ಣದ ಬ್ರಹ್ಮ ಕುಲ, ಕೆಂಪು ವರ್ಣವು ಕ್ಷತ್ರಿಯ ಕುಲ, ಹಳದಿ ವರ್ಣವು ವೈಶ್ಯ ಕುಲ ಮತ್ತು ಕಪ್ಪು ವರ್ಣವು ಶೂದ್ರ ಕುಲ. ಗುಣಾನುಗತವಾಗಿ ಏಕದೇವನನ್ನು ತ್ರಿಮೂರ್ತಿಗಳಾಗಿ ಕಲ್ಪಿಸಿಕೊಳ್ಳಬಹುದು. ಸೃಷ್ಟಿಯ ತಮದ ಪ್ರತಿನಿಧಿಯಾಗಿ ಬ್ರಹ್ಮನೆಂದೂ, ಪರಿಪಾಲಕನೆಂದು ವಿಷ್ಣುವೆಂದೂ, ಲಯಕರ್ತನಾಗಿ ಹರನೆಂದೂ ಪರಿಭಾವಿಸಬಹುದು. ಪರಬ್ರಹ್ಮವು ಗುಣಾತೀತವಿದೆ. ಅದನ್ನು ತಿಳಿಯುವ ವರೆಗೆ ಈ ಗುಣಗತ ಭೇದಗಳಾದ ಬಹಳ ರೂಪಗಳಿರಬಹುದು.

ಬ್ರಹ್ಮ, ವಿಷ್ಣು, ಶಿವರ ಭಾಗಗಳನು ನಿಲಿಸಿ,
ಪರಮ ಯೋಗಿಯಿರಲು ಬ್ರಹ್ಮನಾದ
ಬ್ರಹ್ಮವಾದವನನು ಭಾವಿಸಲು ಶಕ್ಯವೆ ?
ವಿಶ್ವದಾಭಿರಾಮ ಕೇಳು ವೇಮ.

ತಮಸ್ಸು, ರಜಸ್ಸು ಮತ್ತು ಸತ್ವಗಳ ಪ್ರಭಾವವನ್ನು ನಿಲ್ಲಿಸಿ, ಅಜ್ಞಾನ, ಲೋಭ ಮತ್ತು ಜ್ಞಾನ ಸಂಗಗಳನ್ನು ನಿಲ್ಲಿಸಿ ಅಂದರೆ ಬ್ರಹ್ಮ, ವಿಷ್ಣು, ಶಿವರನ್ನು ನಿಲ್ಲಿಸಿ, ಪರಮ ಯೋಗಿಯು ಗುಣಾತೀತನಾಗುತ್ತಾನೆ. ಅಂದರೆ ಪರಬ್ರಹ್ಮವೇ ಆಗುತ್ತಾನೆ. ಪರಬ್ರಹ್ಮನು ಭಾವಾತೀತನು. ಪರಬ್ರಹ್ಮವಾದವನನ್ನುಭಾವಿಸಲು ಶಕ್ಯವೇ ?

ಇದನ್ನೇ ಕಾವ್ಯಮಯವಾಗಿ ಹೀಗೂ ಹೇಳಬಹುದು :

ಬ್ರಹ್ಮಕೊಂದು, ವಿಷ್ಣು ಭಾಗದಲ್ಲಿ ಬೆರೆಸಿ,
ವಿಷ್ಣು ಕೊಂದು ಶಿವನಲಿ ಒಪ್ಪ ಬೆರೆಸಿ,
ಶಿವನ ಕೊಂದು ಬಳಿಕ ಶಿವಯೋಗಿಯಾದನು.
ವಿಶ್ವದಾಭಿರಾಮಮ ಕೇಳು ವೇಮ.





ಬ್ರಹ್ಮನನ್ನು ಕೊಂದು ವಿಷ್ಣುವಿನಲ್ಲಿ ಬೆರೆಸಿ ಅಂದರೆ ತಮೋಗುಣವನ್ನು ಮೀರಿ ರಜಸ್ಸಿನಲ್ಲಿ ಉಳಿದು, ವಿಷ್ಣುವನ್ನು ಕೊಂದು ಶಿವನಲ್ಲಿ ಬೆರೆಸಿ ಅಂದರೆ ರಜೋ ಗುಣವನ್ನುಮೀರಿ ಸತ್ವದಲ್ಲಿ ಉಳಿದು, ಮುಂದೆ ಶಿವನನ್ನು ಕೊಂದು ಶಿವಯೋಗಿಯಾಗಬೇಕು. ಅಂದರೆ ಸತ್ವ ಗುಣವನ್ನೂ ಮೀರಿ, ಗುಣಾತೀತನಾಗಬೇಕು. ಮಂಗಳಮಯ ಶಿವನಲ್ಲಿ ಒಂದಾಗಬೇಕು. ಅರ್ಥಾತ್ ಶಿವ ಯೋಗಿಯಾಗಬೇಕು.

ಚಾತುರ್ವರ್ಣ್ಯವನ್ನು ಕುರಿತು ಋಗ್ವೇದದ ಪುರುಷಸೂಕ್ತದಲ್ಲಿ ಹೀಗೆ ಹೇಳಲಾಗಿದೆ.

ಬ್ರಾಹ್ಮಣೋ ಸ್ಯ ಮುಖಮಾಸೀದ್ ಬಾಹೂ ರಾಜನ್ಯಃ ಕೃತಃ
ಊರೂ ತದಸ್ಯ ಯದ್ ವೈಶ್ಯಃ ಪದ್‌ಭ್ಯಾಃ ಶೂದ್ರೋ ಅಯಾಯತ.

(ಋಗ್ವೇದ 10/90/12)

ಅಂದರೆ, ಬ್ರಾಹ್ಮಣನು ವಿರಾಟ ಪುರುಷನ ಮುಖವಾಗಿದ್ದನು. (ವಿರಾಟ್ ಪುರುಷ) ಅವನ ಬಾಹುಗಳು ರಾಜನ್ಯರಾಗಿದ್ದರು. ಅವನ ತೊಡೆಗಳು ವೈಶ್ಯ ಮತ್ತು ಅವನ ಪಾದಗಳಿಂದ ಶೂದ್ರನಾದನು.

ಸಮಾಜದ ವಿರಾಟ ಪುರುಷನ ಮುಖವಾಗಿ ಬ್ರಾಹ್ಮಣ ವರ್ಣವು ವರ್ತಿಸಬೇಕಿತ್ತು. ರಾಜನ್ಯರು ಅವನ ತೋಳುಗಳಾಗಿ ಸಮಾಜ ರಕ್ಷಣೆ ಮಾಡಬೇಕಿತ್ತು. ವೈಶ್ಯರು ಒಂದೆಡೆಯಿಂದ ಇನ್ನೊಂದು ಎಡೆಗೆ ಸರಕು ಸರಂಜಾಮು ಸಾಗಿಸಿ ಸಮಾಜ ಬಂಧುಗಳನ್ನು ಪೋಷಿಸುವವರಾದರು. ಈ ಮೂರು ವರ್ಣದವರನ್ನು ಹೊತ್ತುಕೊಂಡಿರುವ ಪಾದಗಳ ಸೇವೆಯು ಅಗತ್ಯವಾಗಿತ್ತು. ಅನಿವಾರ್ಯವಾಗಿತ್ತು. ವಿಪ್ರೋಚಿತ ಸೇವೆ, ಕ್ಷತ್ರೋಚಿತ ಸೇವೆ, ವೈಶ್ಯೋಚಿತ ಸೇವೆ ಮತ್ತು ಶೂದ್ರೋಚಿತ ಸೇವೆಗಳನ್ನು ಸಲ್ಲಿಸಲೇಬೇಕಿತ್ತು. ಹೆಚ್ಚಾಗಿ ಕ್ಷತ್ರೋಚಿತ ಸೇವೆ ಸಲ್ಲಿಸುವ ಅರ್ಹತೆಯುಳ್ಳವನು ಕ್ಷತ್ರಿಯನೆನಿಸಿದನು. ಹೆಚ್ಚಾಗಿ ವಿಪ್ರೋಚಿತ ಸೇವೆ ಸಲ್ಲಿಸುವ ಅರ್ಹತೆಯುಳ್ಳವನು ವಿಪ್ರ ಇಲ್ಲವೆ ಬ್ರಾಹ್ಮಣನೆನಿಸಿದನು. ವೈಶ್ಯೋಚಿತ ಸೇವೆ ಸಲ್ಲಿಸುವ ಅರ್ಹತೆಯುಳ್ಳವನು ವೈಶ್ಯನೆನಿಸಿದರೆ, ಶೂದ್ರೋಚಿತ ಸೇವೆ ಸಲ್ಲಿಸುವವನು ಶೂದ್ರನೆನಿಸಿದನು. ಈ ಬ್ರಹ್ಮ, ಕ್ಷತ್ರ, ವೈಶ್ಯ ಮತ್ತು ಶೂದ್ರ ವರ್ಣಗಳು ಹುಟ್ಟಿನಿಂದ ಬರುವುದಿಲ್ಲ. ಆದರೆ ಅವರವರು ಮಾಡುವ ಕರ್ಮ ಕುಶಲತೆಯಿಂದ ಬರುತ್ತವೆ. ಇವರಲ್ಲಿ ಮೇಲು ಕೀಳು ಭೇದವಿಲ್ಲ. 'ಜನ್ಮನಾ ಜಾಯತೇ ಶೂದ್ರಃ' ಜನ್ಮದಿಂದ ಎಲ್ಲರೂ ಶೂದ್ರರೇ. ಅವರಲ್ಲಿ ಬ್ರಹ್ಮವನ್ನು ತಿಳಿದವರು ಬ್ರಾಹ್ಮಣನೆನ್ನಿಸುತ್ತಾರೆ. 'ಬ್ರಹ್ಮಂ ವಿಜಾನಾತಿ ಇತಿ ಬ್ರಾಹ್ಮಣಃ'. ಬ್ರಹ್ಮವಿದರಿಗೆ ಜಾತಿ ಭೇದವಾಗಲಿ, ವರ್ಣ ಭೇದವಾಗಲಿ ಇರದು.

ಜನ್ಮದಿಂದ ಯಾರೂ ಬ್ರಾಹ್ಮಣನಾಗುವುದಿಲ್ಲ. ಅಬ್ರಾಹ್ಮಣನೂ ಆಗುವುದಿಲ್ಲ. ಕರ್ಮದಿಂದಲೇ ಬ್ರಾಹ್ಮಣನಾಗುತ್ತಾನೆ. ಮತ್ತು ಕರ್ಮದಿಂದಲೇ ಅಬ್ರಾಹ್ಮಣನಾಗುತ್ತಾನೆ. ಓದಿ ವಿಪ್ರನಾಗುತ್ತಾನೆ. ಕಾದಿ ಕ್ಷತ್ರಿಯನಾಗುತ್ತಾನೆ. ಲೋಹವನ್ನು ಕಾಸಿ ಕಮ್ಮಾರನಾಗುತ್ತಾನೆ. ಬಟ್ಟೆಗಳನ್ನು ಬೀಸಿ ತೊಳೆದು ಮಡಿವಾಳನಾಗುತ್ತಾನೆ. ಹಾಸನಿಕ್ಕೆ ನೇಕಾರನಾಗುತ್ತಾನೆ. ಯಜ್ಞ ಮಾಡಿ ಯಾಜಕನಾಗುತ್ತಾನೆ.

ಅಖಿಲ ಜಾತಿಗಳಿಗೆ ಆಧಾರವಾದಂಥ
ಮಹಿಮೆ ಸನಕರಾದಿ ಮಾನ್ಯ ಋಷಿಗಳು,

ಎನಿತೊ ಜನ್ಮಗಳಲಿ ಎಲ್ಲಿಯೂ ಕಾಣರು.
ವಿಶ್ವದಾಭಿರಾಮ ಕೇಳು ವೇಮ.

ಸನಕ, ಸನಂದ, ಮೊದಲಾದ ಮಾನ್ಯ ಋಷಿಗಳು ಎಲ್ಲ ಜಾತಿಗಳಿಗೆ ಆಧಾರವಾದ ಮೂಲ ಪುರುಷರು. ಅವರು ಸಾವಿರ ತಲೆಮಾರುಗಳು ಉರುಳಿದರೂ, ಎಲ್ಲಿಯೂ ಕಾಣಬರರು. ಬ್ರಹ್ಮಕುಲದಲ್ಲಿ ಸೇರಿ ಸರ್ವಾತ್ಮರಾಗಬೇಕಾದ ಎಲ್ಲರಿಗೂ ಈ ಮಹಿಮಾನ್ವಿತರ ಧ್ರುವ ಸ್ಮರಣೆ ಇದ್ದೇ ಇದೆ.

ಋಷಿ ಕಲದಲಿ ತಾವು ರೂಢಿಯಿಂದ ಜನಿಸಿ,
ಕುಲವ, ಗೋತ್ರಗಳನು ಕಾಯ್ದು ವಂಶ,
ಬ್ರಹ್ಮ ಕುಲವಾಗದೆ ಬ್ರಾಹ್ಮಣೆಂತಾಗುವ ?
ವಿಶ್ವದಾಭಿರಾಮ ಕೇಳು ವೇಮ.

ಸಂಚಾರೀ ಆರ್ಯ ಜನಾಂಗದವರು ಅಲ್ಲಲ್ಲಿ ಬೆಟ್ಟ (ಗೋತ್ರ) ಗಳ ಮೇಲೆ ಗೋಷ್ಠಿ ನಡೆಸುತ್ತಿದ್ದರು. ಮುಂದೆ ಆ ಗೋತ್ರದ ಸುತ್ತು ಮುತ್ತ ಕಾಯಂ ವಾಸವಾದರು. ಅವರಲ್ಲಿಯ ಋಷಿಗಳು ಗೋತ್ರಪಿತರೆನಿಸಿ, ಮಾರ್ಗದರ್ಶನ ನೀಡುತ್ತಿದ್ದರು. ಈ ಗೋತ್ರ ಪಿತನ ಕುಲವನ್ನೂ, ವಂಶವನ್ನೂ ನೆನಪಿಟ್ಟುಕೊಂಡು, ತಾವು ರೂಢಿಯಿಂದ ಋಷಿ ಕುಲದಲ್ಲಿ ಹುಟ್ಟಿದವರು ಎಂದು ಭಾವಿಸಿದ ಅಷ್ಟು ಮಾತ್ರಕ್ಕೆ ಅವರು ಬ್ರಾಹ್ಮಣರಾಗರು. ಬ್ರಾಹ್ಮಣನಾಗಬೇಕಾದರೆ, ಯೋಗ ಸಾಧನೆಯಿಂದಾಗಲಿ, ಜ್ಞಾನ ಸಾಧನೆಯಿಂದಾಗಲಿ, ಬ್ರಹ್ಮವನ್ನು ಅರಿಯಬೇಕು. ಬ್ರಹ್ಮವಿದನಾಗಬೇಕು. ಹೀಗೆ ಬ್ರಹ್ಮಕುಲಜನಾಗದೆ ಅವನು ಬ್ರಹ್ಮಣನೆಂತಾಗುವನು ?

ಬೊಮ್ಮಣಂಗೆ ನಮಿಸಲವನು ಹರಕೆ ಈವ.
ಆತ್ಮ ಶುದ್ಧಿ ಹೊಂದಿ, ಆತನಿರಲು,
ಎಲ್ಲ ಸಫಲ ; ಅಲ್ಲದಿರಲು ಕಂಠಶೋಷ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಯೋಗ ಸಾಧನದಿಂದ, ಜ್ಞಾನ ಸಾಧನದಿಂದ ಆತ್ಮ ಶುದ್ಧಿ ಹೊಂದಿ ಬ್ರಾಹ್ಮಣನಾಗಿ ಇದ್ದರೆ, ಅವನಿಗೆ ನಮಸ್ಕರಿಸಿ, ಆಶೀರ್ವಾದ ಕೋರಿದಾಗ ಅವನು ಹರ್ಷಿಸಿ, ಹರಕೆ ಈಯುತ್ತಾನೆ. ಮತ್ತು ಅದು ಸಫಲವಾಗುತ್ತದೆ. ಆದರೆ ಅವನು ಆತ್ಮ ಶುದ್ಧಿಯನ್ನು ಹೊಂದಿರದಿದ್ದರೆ, ಹೇಳಿಕೆ ಕೇಳಿಕೆಗಳೆಲ್ಲ ಬರೀ ಕಂಠಶೋಷವಾಗುತ್ತವಷ್ಟೇ.

ಆದರೆ ಜಾತಿ ಬ್ರಾಹ್ಮಣರು ಜಾತಿ ಭೇದದ ಬೀಜವನ್ನು ಬಿತ್ತಿದರು. ಇದರ ಹಿಂದೆ ಅವರ ಸ್ವಾರ್ಥವಿತ್ತು. ತಮಗೆ ಅನುಕೂಲಕರ ಶಾಸ್ತ್ರಗಳನ್ನು ರಚಿಸುವಾಗ ಅವರು ಇತರರನ್ನು ತಮಗಿಂತ ಕೀಳೆಂದು ಭಾವಿಸಿದರು. ಶೂದ್ರರನ್ನಂತೂ ತೀರ ಕೀಳಾಗಿ ಪರಿಗಣಿಸಿದರಲ್ಲದೆ, ಅವರು ಸಂಸ್ಕಾರಕ್ಕೂ ವರ್ಜ್ಯರು ಮತ್ತು ಸ್ವಂತ ಆಸ್ತಿಯನ್ನು ಪಡೆಯುವದಕ್ಕೆ ವರ್ಜ್ಯರು ಎಂದು ಗ್ರಹಿಸಿದರು.

"ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ಜಾತಿಯವರಿಗೆ ದ್ವಿಜಾತರು ಎನ್ನುತ್ತಾರೆ. (ಏಕೆಂದರೆ ಇವರು ಜನ್ಮದಿಂದ ಮತ್ತು ಸಂಸ್ಕಾರದಿಂದ ಹೀಗೆ ಎರಡು ಜಾತಿಗಳನ್ನು ಪಡೆಯುತ್ತಾರೆ)





ನಾಲ್ಕನೆಯವರಾದ ಶೂದ್ರರು ಏಕಜಾತಿಗಳು (ಇವರಿಗೆ ಉಪನಯನಾದಿ ಸಂಸ್ಕಾರವಿಲ್ಲ) ಪಂಚಮ ಜಾತಿಯೆಂಬುದು ಇಲ್ಲವೇ ಇಲ್ಲ. (ಮ.ಸ್ಮೃ. 10-4).

ದಾರ ಕೊರಳ ಸುತ್ತಿ ತನ್ನ ಶೂದ್ರತ್ವವು,
ಬಿಟ್ಟಿತೆಂಬುದೆಲ್ಲ ಬುದ್ಧಿಗೇಡು.
ಹೊಳೆಯೆ ಬುದ್ಧಿಗದನೆ ಹೊಂದಿ ಸುಖಿಸಬಹುದು.
ವಿಶ್ವದಾಭಿರಾಮ ಕೇಳು.

"ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾತ್ ದ್ವಿಜ ಉಚ್ಯತೇ". ಅಂದರೆ ಜನ್ಮದಿಂದ ಎಲ್ಲರೂ ಶೂದ್ರರೇ. ಉಪನಯನ ಸಂಸ್ಕಾರ ಹೊಂದಿ ದ್ವಿಜನೆನಿಸುತ್ತಾನೆ. ಈ ಸಂಸ್ಕಾರ ಹೊಂದುವ ಅಧಿಕಾರವನ್ನು ಬ್ರಾಹ್ಮಣರು ರಚಿಸಿದ ಸ್ಮೃತಿ ಶಾಸ್ತ್ರಗಳಲ್ಲಿ ಶೂದ್ರರಿಗೆ ನಿರಾಕರಿಸಿದ್ದಾರೆ.

ದ್ವಿಜನೆನಿಸಿಕೊಳ್ಳುವವನು ಮಾಡುವುದಾದರೂ ಏನು ? ಗುರುಗಳ ಬಳಿ ಕುಳಿತು, ಗಾಯತ್ರೀ ಮಂತ್ರ ಜಪವನ್ನು ಹೇಳಿಸಿಕೊಳ್ಳುತ್ತಾನೆ. ಕೊನೆಗೆ ಯಜ್ಞೋಪವೀತ ಅಂದರೆ ಜನಿವಾರನ್ನು ಕೊರಳಿಗೆ ಸುತ್ತಿಕೊಳ್ಳುತ್ತಾನೆ. ಹೀಗೆ ದಾರವನ್ನು ಕೊರಳಿಗೆ ಸುತ್ತಿಕೊಂಡು ತನ್ನ ಶೂದ್ರತ್ವವು ಹೋಯಿತು. ತಾನಿನ್ನು ದ್ವಿಜನಾದೆ ; ಎಂದು ಬೀಗುವುದು ಬುದ್ಧಿಗೇಡಷ್ಟೇ. ಹೊಳೆಯೆ ಬುದ್ಧಿಗೆ, ಆ ಬ್ರಹ್ಮವನ್ನು ಅರಿತು ಸುಖಿಸಬಹುದು. ಅದಕ್ಕಾವ ದಾರ ಸುತ್ತುವಿಕೆ ಬೇಕಿಲ್ಲ.

ಹಲವು ಹೀನ ಕಾರ್ಯ ಮಾಡಿ, ಬ್ರಾಹ್ಮಣೆಂದು,
ಗಳಪಿದೊಡನೆ ಗೌರವಿಸಬಪ್ಪುದೆ ?
ಕುಲವು ಲೆಕ್ಕಕುಂಟೆ ? ಗುಣದ ಗಣನೆ ಲೇಸು.
ವಿಶ್ವದಾಭಿರಾಮ ಕೇಳು ವೇಮ.

ತಾನು ಬ್ರಾಹ್ಣಣ ಜಾತಿಯವನೆಂದು ಬಡಾಯಿ ಕೊಚ್ಚುತ್ತ ಹಲವಾರು ಹೀನತರ ಕಾರ್ಯಗಳನ್ನು ಮಾಡಿದರೆ ಅವನನ್ನು ಗೌರವಿಸಬಹುದೇ ? ಹೀನ ಕಾರ್ಯ, ಹೀನ ಕಾರ್ಯವೇ. ಅದು ದಂಡನಾರ್ಹ. ಯಾವ ಕುಲದವನು ಮಾಡಿದನೆಂಬುದು ಲೆಕ್ಕಕ್ಕೆ ಬಾರದು. ಕುಲದ ಗಣನೆ ಸರಿಯಲ್ಲ. ಗುಣದ ಗಣನೆಯೇ ಲೇಸು.

ಬ್ರಾಹ್ಮಣ ಸ್ಮೃತಿಕಾರರು ಜಾತಿ ಭೇದವನ್ನು, ಅಪರಾಧ ಗೆಯ್ಯುವಲ್ಲಿ, ಅಪರಾಧಕ್ಕಾಗಿ ದಂಡ ವಿಧಿಸುವಲ್ಲಿ ಸಹ, ಅನುಸರಿಸುತ್ತಿದ್ದರು.

"ಪತಿ ಅಥವಾ ಪಿತ ಮೊದಲಾದವರಿಂದ ರಕ್ಷಿಸಲ್ಪಡುವ ದ್ವಿಜಾತೀಯ ಹೆಣ್ಣನ್ನು ಶೂದ್ರನು ಸಂಸರ್ಗ ಮಾಡಿದರೆ, ಅವನ ಸರ್ವಸ್ವವನ್ನೂ ಕಸಿದುಕೊಂಡು, ಅಂಗಚ್ಛೇದನ ಮಾಡಬೇಕು. ಅರಕ್ಷಿತಳಾದ ಸ್ತ್ರೀಯನ್ನು ಸಂಸರ್ಗ ಮಾಡಿದರೆ, ಸರ್ವಸ್ವವನ್ನೂ ಕಿತ್ತುಕೊಂಡರೆ ಅವನ ಅಂಗಚ್ಛೇದನ ಮಾಡಬೇಕು. (ಅಂಗ ಹೀನತೆಯ ದಂಡ ವಿಧಿಸಬೇಕು) (ಮ.ಸ್ಮೃ. 8-374).

"ಕ್ಷತ್ರಿಯನು ಬ್ರಾಹ್ಮಣ ಸ್ತ್ರೀಯನ್ನು ಕೆಡಿಸಿದರೆ, ಅವನಿಗೆ ಒಂದು ಸಾವಿರ ಹಣ ದಂಡ ವಿಧಿಸಬೇಕು. ಮತ್ತು ಅವನ ತಲೆಗೆ ಮೂತ್ರ ಹಚ್ಚಿ ಬೋಳಿಸಬೇಕು. ವೈಶ್ಯನು ಬ್ರಾಹ್ಮಣ ಸ್ತ್ರೀಯನ್ನು ಕೆಡಿಸಿದರೆ, ಅವನ ಸರ್ವಸ್ವವನ್ನೂ ಕಿತ್ತುಕೊಂಡು ಒಂದು ವರ್ಷದ ಸೆರೆಮನೆ ವಾಸ ವಿಧಿಸಬೇಕು. (ಮ.ಸ್ಮೃ. 8-376).

"ಇಂಥ ಅಪರಾಧ ಮಾಡಿದ ಬ್ರಾಹ್ಮಣನಿಗೆ ತಲೆ ಬೋಳಿಸಿ ಅವಮಾನಿಸುವುದೇ ಸಾಕು. ಅದು ಮರಣ ದಡನೆಗೆ ಸಮನಾದ ಶಿಕ್ಷೆಯು. ಉಳಿದವರಿಗೆ,ಮಾತ್ರ ಮರಣ ದಂಡನೆಯ ಶಿಕ್ಷೆಯನ್ನು ವಿಧಿಸಬೇಕು". (ಮ.ಸ್ಮೃ. 8-379).

ಎಲ್ಲ ವಿಧದ ಅಪರಾಧವನ್ನೂ, ಪಾಪವನ್ನೂ ಮಾಡಿದಾಗ್ಯೂ ಸಹ ಬ್ರಾಹ್ಮಣನನ್ನು ಕೊಲ್ಲಬಾರದು. ಅವನ ಸರ್ವಸ್ವವನ್ನು ಅಪಹರಿಸಿ, ಅವನನ್ನು ದೇಶಬಿಟ್ಟು ಹೊರಗೆ ಹಾಕಬೇಕು. (ಮ.ಸ್ಮೃ. 8-380).

ಬಿಂದು ರಕ್ತದಿಂದ ಬೆರೆತ ದೇಹಕಿಪ್ಪ,
ಚೆಂದವರಿಯ ; ದ್ವಿಜ ಶಬ್ದ ಬಿಡದೆ,
ಸಂದಲೇನವಗೆ ? ತಪ್ಪವು ಮೃತ್ಯು ನರಕ.
ವಿಶ್ವದಾಭಿರಾಮ ಕೇಳು ವೇಮ.

ಪಾಪಿಯಾದ ಬ್ರಾಹ್ಮಣನಿಗೂ ಮೃತ್ಯು ಮತ್ತು ನರಕಗಳು ತಪ್ಪವು. ಅವನು ದ್ವಿಜ ಶಬ್ದಕ್ಕೆ ಅಂಟಿ ಕುಳಿತಿದ್ದರೇನು ? ಅವನ ದೇಹವೂ ಎಲ್ಲರ ದೇಹದಂತೆ ಬಿಂದು ರಕ್ತದಿಂದ ಆಗಿರುವ ರೀತಿಯನ್ನು ಅರಿಯನೇ ?

ಕನ್ನೆ ಜೊತೆಗೆ ವರನು ಕಾಮಿಸಿ ಕೂಡಿದೊಡೆ,
ಒಂದು ವೇಳೆ ಪಿಂಡ ಉದ್ಭವಿಸುತ,
ಅಲ್ಲಿ ಕುಲಜನಾರು ? ಅರಿಯೆ ಹೀನನಾರು ?
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟಿನಿಂದ ಅಂದರೆ ಜಾತಿಯಿಂದ ಒಬ್ಬನು ಮೇಲು ಕುಲದವನು ; ಇನ್ನೊಬ್ಬನು ಕೀಳು ಕುಲದವನು ; ಹೀನನು ಎಂದು ಹೇಗೆ ಹೇಳಬಹುದು ? ಏಕೆಂದರೆ, ಎಲ್ಲರೂ ಹುಟ್ಟುವುದು ಒಂದೇ ಬಗೆಯಿಂದ. ಅದೆಂದರೆ, ಕಾಮದಿಂದ ಉದ್ರೇಕಿತನಾದ ವರನು ಕನ್ನೆಯೊಬ್ಬಳನ್ನು ಕೂಡಿ ಸಂಭೋಗಿಸಿದಾಗ ವರನ ವೀರ್ಯವು ಸ್ತ್ರೀಯ ಶೋಣಿತದೊಡನೆ ಸೇರಿ ಪಿಂಡವು ಉದ್ಭವಿಸುತ್ತದೆ. ಈ ಪಿಂಡವನ್ನು ಹೊತ್ತು, ಪೋಷಿಸಿ, ಸ್ತ್ರೀ ಹೆರುತ್ತಾಳೆ.

ಆಭಿಜಾತ್ಯನೆಂದು ಆಯುಷ್ಯದ ತನಕ,
ತಿರುಗುತಿಪ್ಪ ಭ್ರಮಿಸಿ ತಾನರಿಯದೆ,
ಮುಸುರೆ ಭಾಂಡೆಯನ್ನು ಮುತ್ತುವ ನೊಣದಂತೆ.
ವಿಶ್ವದಾಭಿರಾಮ ಕೇಳು ವೇಮ.

ತಾನು ಎಲ್ಲರಿಗಿಂತ ಶ್ರೇಷ್ಠ ಜಾತಿಯವನೆಂದು ಹೇಳಿಕೊಳ್ಳುತ್ತ ಆಯುಷ್ಯವಿರುವ ವರೆಗೂ ಭ್ರಮಿಸಿ ತಿರುಗುತ್ತಾನೆ. ಎಲ್ಲಿ ತನಗೆ ಧನ ಪ್ರಾಪ್ತಿಯೋ, ಅಧಿಕಾರ ಪ್ರಾಪ್ತಿಯೋ, ಗೌರವ ಪ್ರಾಪ್ತಿಯೋ ಅಲ್ಲಿ ತಾನು ಬ್ರಾಹ್ಮಣ, ಇತರರಿಗಿಂಥ ಹೆಚ್ಚಿನವ. ನನಗೆ ಮೊದಲ ಪಾಲು ಸಲ್ಲಬೇಕು ಎಂದು ಹಪಾಪಿಸುತ್ತಾನೆ. ಮುಸುರೆ ಭಾಂಡೆಯಲ್ಲಿ ಇರುವ ಅನ್ನದ ಅಗುಳು ತಿನ್ನಲು ನೊಣಗಳು ಮುತ್ತುವಂತೆ, ಇವನ ವರ್ತನೆ. ಈ ಭಾವನೆ ಬರಲು ಸ್ಮೃತಿಕಾರನ ಸೂಕ್ತಿಯನ್ನು ಗಮನಿಸಿರಿ,





"ಜನ್ಮದಿಂದ ಶ್ರೇಷ್ಠನಾಗಿರುವುದರಿಂದ, ವಿಶಿಷ್ಟವಾದ ಯೋಗ್ಯತೆಯನ್ನು ಹೊಂದಿರುವುದರಿಂದ, ಶ್ರೇಷ್ಠವಾದ ಧರ್ಮ ನಿಯಮಗಳನ್ನು ಆಚರಿಸುವುದರಿಂದ, ವಿಶೇಷವಾದ ಸಂಸ್ಕಾರ ಪಡೆದಿರುವುದರಿಂದ ಬ್ರಾಹ್ಮಣನು ಉಳಿದ ಜಾತಿಯವರಿಗೆಲ್ಲ ಪ್ರಭುವಾಗಿರುತ್ತಾನೆ. (ಮ.ಸ್ಮೃ. 10-3).

ಮಧುರೆಯ ಅರಸನಾದ ಅವಂತಿ ಪುತ್ರನು, ಭಗವಾನ್ ಕಾತ್ಯಾಯನನಲ್ಲಿ ಹೋಗಿ ಬ್ರಾಹ್ಮಣರ ಶ್ರೇಷ್ಠತೆಯನ್ನು ಕುರಿತು ಪ್ರಶ್ನಿಸಿದನು.

ರಾಜ :- ಭೋ ಕಾತ್ಯಾಯನಾ ! ಬ್ರಾಹ್ಮಣ ವರ್ಣವೇ ಶ್ರೇಷ್ಠವಿದೆ. ಇತರ ವರ್ಣಗಳು ಹೀನ ಇವೆ;; ಬ್ರಾಹ್ಮಣ ವರ್ಣವು ಶುಕ್ಲವಿದೆ (ಶುಭ್ರ). ಇದರ ವರ್ಣಗಳು ಕೃಷ್ಣ (ಕಪ್ಪು ದೋಷಪೂರಿತ) ಇವೆ. ಬ್ರಾಹ್ಮಣರಿಗೇನೇ ಮುಕ್ತಿ ದೊರೆಯುತ್ತದೆ. ಇತರರಿಗೆ ದೊರೆಯುವುದಿಲ್ಲ. ಬ್ರಾಹ್ಮಣರು ಬ್ರಹ್ಮ ದೇವನ ಮುಖದಿಂದ ಹುಟ್ಟಿದವರು. ಬ್ರಹ್ಮ ದೇವನ ಔರಸ ಪುತ್ರರಾಗಿದ್ದಾರೆ. ಹೀಗೆ ಬ್ರಾಹ್ಮಣರು ಪ್ರತಿಪಾದಿಸುತ್ತಾರೆ. ಆ ಬಗ್ಗೆ ತಾವು ಹೇಳುವುದೇನು?

ಕಾತ್ಯಾಯನ :- ಹೇ ಮಹಾರಾಜ ! ಇದು ಬರೀ ಘೋಷವಾಗಿದೆ. ಒಬ್ಬ ಕ್ಷತ್ರಿಯ ಧನ ಧಾನ್ಯಗಳಿಂದ ಸಮೃದ್ಧನೆಂದು ತಿಳಿ. ಆಗ ನಾಲ್ಕು ವರ್ಣಗಳ ಮನುಷ್ಯರು ಅವನ ಸೇವೆಯನ್ನು ಮಾಡುವರೋ ಇಲ್ಲವೋ ?

ರಾಜಾ :- ಭೋ ಕಾತ್ಯಾಯನ ! ನಾಲ್ಕೂ ವರ್ಣಗಳ ಜನರು ಅವನ ಸೇವೆಯನ್ನು ಮಾಡುವರು.

ಕಾತ್ಯಾಯನ :- ಹಾಗಿದ್ದರೆ ನಾಲ್ಕೂ ವರ್ಣಗಳ ಮನುಷ್ಯರು ಸಮಾನರು ಎಂದು ಗೊತ್ತು ಮಾಡಿದಂತಾಗಲಿಲ್ಲವೇ ?

ರಾಜಾ :- ಈ ದೃಷ್ಟಿಯಿಂದ ನಾಲ್ಕೂ ವರ್ಣಗಳು ಸಮಾನ ಎಂದು ಖಂಡಿತವಾಗಿ ನಿರ್ಣಯಿಸಬಹುದು. ಅದರಲ್ಲಿ ನನಗೆ ಯಾವ ಭೇದವೂ ಕಾಣಿಸದು.

ಕಾತ್ಯಾಯನ :- ಅದಕ್ಕಾಗಿಯೇ ನಾನು ಹೇಳುತ್ತೇನೆ, ಬ್ರಾಹ್ಮಣರೆ ಶ್ರೇಷ್ಠ ವರ್ಣ ಎಂದು ಹೇಳುವುದು, ಬರೀ ಘೋಷ ಎಂದು. ಬ್ರಾಹ್ಮಣ , ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಈ ನಾಲ್ಕು ವರ್ಣಗಳ ಮನುಷ್ಯರು ಪ್ರಾಣ ಘಾತಾದಿ (ಕೊಲೆ) ಪಾಪಗಳನ್ನು ಮಾಡಿದರೆ, ಅವರು ಎಲ್ಲರೂ ದುರ್ಗತಿಯನ್ನೈದುವರು ಎಂದು ಮಹಾರಾಜನಿಗೆ ಅನಿಸುವದಿಲ್ಲವೇ?

ರಾಜಾ :- ನಾಲ್ಕೂ ವರ್ಣಗಳಲ್ಲಿ ಯಾವನೇ ಮನುಷ್ಯನು ಪಾಪ ಕರ್ಮಗಳನ್ನು ಮಾಡಲಿ, ಅವನು ದುರ್ಗತಿಯನ್ನೈದುವನು.

ಕಾತ್ಯಾಯನ :- ಸರಿ ಮಹಾರಾಜ ! ಹೀಗೆ ಇದ್ದರೆ ನಾಲ್ಕೂ ವರ್ಣಗಳು ಸಮಾನ ಎಂದು ಗೊತ್ತುಪಡಿಸಬಹುದಲ್ಲವೇ ? ಈ ಬಗ್ಗೆ ನಿಮಗೆ ಏನೆನ್ನಿಸುವುದು ?

ರಾಜಾ :- ಈ ದೃಷ್ಟಿಯಿಂದ ನಾಲ್ಕೂ ವರ್ಣಗಳು ಸಮಾನ. ನನಗೆ ಅವುಗಳಲ್ಲಿ ಭೇದ ತೋರುವುದಿಲ್ಲ.

ಕಾತ್ಯಾಯನ :- ನಾಲ್ಕೂ ವರ್ಣಗಳಲ್ಲಿ ಯಾವುದೇ ಮನುಷ್ಯನು ಪ್ರಾಣ ಘಾತಾದಿ ಪಾಪಗಳಿಂದ ವಿರತನಾದರೆ ಅವನು ಸ್ವರ್ಗಕ್ಕೆ ಹೋಗುವುದಿಲ್ಲವೇ ?

ರಾಜಾ :- ಅವನು ಸ್ವರ್ಗಕ್ಕೆ ಹೋಗುವನೆಂದು ನಾನು ತಿಳಿಯುತ್ತೇನೆ.

ಕಾತ್ಯಾಯನ :- ಅದಕ್ಕಾಗಿಯೇ ನಾನು ಹೇಳುವುದು, ಬ್ರಾಹ್ಮಣ ವರ್ಣವೇ ಶ್ರೇಷ್ಠ ಎನ್ನುವುದು ಬರೀ ಘೋಷ ಎಂದು. ಮಹಾರಾಜ, ಹೀಗೆ ತಿಳಿಯಿರಿ. ನಿಮ್ಮ ರಾಜ್ಯದಲ್ಲಿ ನಾಲ್ಕು ವರ್ಣಗಳಲ್ಲಿ ಯಾವುದೇ ಮನುಷ್ಯನು ಕನ್ನ ಸುಲಿಗೆ, ಪರದಾರಾಗಮನ ಮುಂತಾದ ಅಪರಾಧಗಳನ್ನು ಮಾಡಿದ್ದಾನೆ ಮತ್ತು ರಾಜಪುರುಷರು ಅವನನ್ನು ಹಿಡಿದು ತಂದು ನಿಮ್ಮ ಎದುರು ನಿಲ್ಲಿಸಿದ್ದಾರೆ. ಆಗ ನೀವು (ಅವನ ಜಾತಿಯನ್ನು ನೋಡದೆ) ಅವನಿಗೆ ಶಿಕ್ಷೆಯನ್ನು ಕೊಡವಿರೋ ? ಇಲ್ಲವೋ ?

ರಾಜಾ :- ಅವನು ವಧಾರ್ಹನಿದ್ದರೆ, ಅವನ ವಧವನ್ನು ಮಾಡುವೆನು. ದಂಡನೀಯನಾಗಿದ್ದರೆ, ದಂಡವನ್ನು ವಿಧಿಸುವೆನು. ದೇಶಾಂತರ ಹೋಗಲು ಯೋಗ್ಯನಾಗಿದ್ದರೆ, ದೇಶಾಂತರದ ಶಿಕ್ಷೆಯನ್ನು ವಿಧಿಸುವೆನು. ಏಕೆಂದರೆ, ಕ್ಷತ್ರಿಯ, ಬ್ರಾಹ್ಮಣ ಎಂದು ಮುಂಚಿತನಾಗಿದ್ದ ಸಂಜ್ಞೆಗಳು ನಷ್ಟವಾದವು. ಮತ್ತು ಈಗ ಅವನು ಅಪರಾಧಿ ಎಂದು ಗೊತ್ತಾಗಿದೆ.

ಕಾತ್ಯಾಯನ :- ಹಾಗಾದರೆ ಈ ನಾಲ್ಕೂ ವರ್ಣಗಳು ಸಮಾನವಲ್ಲವೇ ?

ರಾಜಾ :- ಈ ದೃಷ್ಟಿಯಿಂದ ನೋಡಿದರೆ ನಾಲ್ಕೂ ವರ್ಣಗಳು ಸಮಾನವೆನಿಸುತ್ತವೆ.

ಕಾತ್ಯಾಯನ :- ಈಗ ತಿಳಿಯಿರಿ, ಈ ನಾಲ್ಕೂ ವರ್ಣಗಳಿಂದ ಯಾವನೊಬ್ಬ ಮನುಷ್ಯನು ಒಂದು ವೇಳೆ, ಪರಿವ್ರಾಜಕನಾಗಿ ಸದಾಚಾರವನ್ನು ಪಾಲಿಸುತ್ತಿದ್ದರೆ ನೀವು ಅವನೊಡನೆ ಹೇಗೆ ನಡೆದುಕೊಳ್ಳುವಿರಿ ?

ರಾಜಾ :- ನಾವು ಅವನನ್ನು ವಂದಿಸುವೆವು. ಅವನಿಗೆ ಯೋಗ್ಯ ಮಾನವನ್ನು ಕೊಡುವೆವು. ಮತ್ತು ಅವನಿಗೆ ಅನ್ನ, ಬಟ್ಟೆ ಮೊದಲಾದ ಅಗತ್ಯದ ಪದಾರ್ಥಗಳನ್ನು ಕೊಡುವೆವು. ಏಕೆಂದರೆ, ಅವನ ಕ್ಷತ್ರಿಯ, ಬ್ರಾಹ್ಮಣ, ವೈಶ್ಯ, ಶೂದ್ರ ಮೊದಲಾದ ಸಂಜ್ಞೆಗಳು ನಷ್ಟವಾಗಿ ಅವನು ಸಂನ್ಯಾಸಿ ಎಂಬ ಸಂಜ್ಞೆಯಿಂದ ಗುರುತಿಸಲ್ಪಡುತ್ತಾನೆ.

ಕಾತ್ಯಾಯನ :- ಅಂದರೆ ಈ ನಾಲ್ಕೂ ವರ್ಣಗಳು ಸಮಾನ ಎಂದು ಗೊತ್ತಾಯಿತಲ್ಲವೇ ?

ರಾಜಾ :- ಈ ನಾಲ್ಕೂ ವರ್ಣಗಳು ಖಂಡಿತವಾಗಿಯೂ ಸಮಾನ.

ಕಾತ್ಯಾಯನ :- ಅದಕ್ಕಾಗಿಯೇ ನಾನು ಹೇಳುವುದು ಬ್ರಾಹ್ಮಣ ವರ್ಣವೇ ಶ್ರೇಷ್ಠವೆಂದು ಹೇಳುವುದು ಬರೆ ಕೂಗು ಎಂದು.

ಜಾತಿಯೊಳಗೆ ಮೇಲು ಕೀಳು ಎಲ್ಲಿ ?
ನಿಜವರಿಯದೆ ತಿರುಗಲೇನು ಫಲವು ?
ಇದನರಿತ ಮನುಜನ ಕುಲವೆ ಮಿಗಿಲು ಕಣಾ
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟಿನಿಂದ ಮಾನವ ಜಾತಿಯೊಂದೇ ಜಾತಿ. ಉಳಿದ ಸಂಜ್ಞೆಗಳು ಮಾನವ ಕಲ್ಪಿತ. ಅವುಗಳಲ್ಲಿ ಯಾವುದು ಮೇಲು ಜಾತಿ ? ಯಾವುದು ಕೀಳು ಜಾತಿ ? ತನ್ನ ಗುಣಗಳಿಂದ ಒಬ್ಬನು





ಮೇಲಾಗಬಹುದು. ಒಬ್ಬನು ಕೀಳಾಗಬಹುದು. ಈ ನಿಜವನ್ನು ಅರಿಯದೆ ತಿರುಗಿದರೆ ಏನು ಫಲ? ಈ ಸತ್ಯವನ್ನು ಅರಿತುಕೊಂಡ ಮನುಷ್ಯನ ಕುಲವೇ ಮಿಗಿಲಾದುದು.

ಅವನಿ ಶೂದ್ರರೆಂದು ಅರಿಯರು ಮೊದಲಿಗೇ
ಮನಸು ಸತಿಯ ಮೇಲೆ ಮರುಳು ಆಗಿ,
ಕಡೆಗೆ ಪೂಜಿಪ ದ್ವಿಜರು ಕೋಟ್ಯಾನುಕೋಟಿ..
ವಿಶ್ವದಾಭಿರಾಮ ಕೇಳು ವೇಮ.

ಪ್ರತಿಯೊಬ್ಬರೂ 'ಜನ್ಮನಾ ಜಾಯತೇ ಶೂದ್ರಃ' ಅಂದರೆ ಜನ್ಮದಿಂದ ಶೂದ್ರರೇ. ಇದನ್ನು ಮೊದಲು ಅರಿಯರು. ನಂತರ ಸಂಸ್ಕಾರ ಹೊಂದಿ ಕೊರಳು ದಾರ ಧರಿಸಿ ದ್ವಿಜರೆನಿಸಬಹುದು. ಆದರೆ ಮನಸ್ಸು ಬ್ರಹ್ಮೋಪಾಸನೆಯತ್ತ ಹೊರಳದೆ ಹೆಂಡತಿಯತ್ತ ಹೊರಳಿ ಮರುಳಾಗುತ್ತಾರೆ. ಕೊನೆಗೆ ಸ್ತ್ರೀಯರಲ್ಲಿ ಅನುರಕ್ತರಾದ ದ್ವಿಜರು ದಾಂಭಿಕವಾಗಿ ದೇವ ಪೂಜೆಗಿಳಿಯುತ್ತಾರೆ. ಇಂಥವರು ಕೋಟಿಗಟ್ಟಳೆ ಇರುತ್ತಾರಷ್ಟೇ.

ಸೆರೆ ಗಡಿಗೆಗೆ ಬೂದಿ ಸಲೆ ಬಳಿದೊಡೆ ಏನು ?
ಅಲ್ಲಿ ಒಳಗೆ ಕಂಪು ಅಡಗದಂತೆ,
ಕೊರಳು ದಾರ ಬಿಗಿಯೆ, ಮೆರೆವ ದ್ವಿಜನಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಸೆರೆ ತುಂಬಿದ ಗಡಿಗೆಗೆ ಬೂದಿ ಬಳಿದು ಪೂಜಿಸುತ್ತಾರೆ. ಎಷ್ಟೇ ಚೆನ್ನಾಗಿ ಬೂದಿಯನ್ನು ಬಳಿದರೂ ಅದರ ಒಳಗಿನ ಕಂಪು ಅಡಗಬಹುದೇ ? ಇಲ್ಲ, ಇಲ್ಲ. ಅದೇ ರೀತಿ, ತನ್ನ ಕೊರಳಿಗೆ ದಾರ ಸುತ್ತಿಕೊಂಡು ನಾನು ದ್ವಿಜನಾದೆ ; ಎಂದು ಬೀಗುವುದು ಎಷ್ಟು ಸರಿ ? ಅವರು ಆಧ್ಯಾತ್ಮಿಕ ಜಗತ್ತಿನಲ್ಲಿ ಮರು ಜನ್ಮ ಪಡೆಯಬಹುದೇ ?

ದ್ವಿಜ ನರರು ಕೆಟ್ಟು ದಿಕ್ಕುಗಾಣದು ಭೂಮಿ
ಮನುಜರೆಲ್ಲ ಕೆಟ್ಟರೆನುವುದೇಕೆ ?
ಕಾಲ ಗತಿಗಳು ಬದಲು, ಕಲಿಯ ಧರ್ಮವು ಬದಲು.
ವಿಶ್ವದಾಭಿರಾಮ ಕೇಳು ವೇಮ.

ದ್ವಿಜರೆಂದು ಬೀಗುವವರು ತನಗೆ ಹೆಚ್ಚಿನ ಅಧಿಕಾರವಿದೆ. ಶೂದ್ರರು ತಮ್ಮ ಪರಿಚರ್ಯೆ ಮಾಡಬೇಕು. ಅವನು ಆಸ್ತಿ ಹೊಂದಕೂಡದು. ಹಣ ಸಂಪಾದಿಸಕೂಡದು. ಅವನು ದ್ವಿಜರು ಉಂಡು ಮಿಕ್ಕುಳಿದ ಅನ್ನವನ್ನೇ ಉಣ್ಣಬೇಕು. ಮರದಿಂದ ಕೇರಿ ಉಳಿದ ಕಸಮಿಶ್ರಿತ ಧಾನ್ಯವನ್ನೇ ತಮ್ಮ ಶ್ರಮದ ಫಲವಾಗಿ ಪಡೆಯಬೇಕು. ಎಂಬಿತ್ಯಾದಿ ಶೋಷಣೆಯ ನಿಯಮಗಳನ್ನು ಹೇರಿದರು. ಹೀಗಾಗಿ, ಭೂಮಿಯ ಜನತೆ ದಿಕ್ಕುಗಾಣದಾಯಿತು. ಆದರೆ ತಾವು ಮಾನವ ಧರ್ಮವನ್ನು ಮರೆತು ಕೆಟ್ಟು, ಎಲ್ಲ ಮಾನವರೇ ಕೆಟ್ಟರು ; ಎಂದು ಬೊಬ್ಬೆ ಇಡುತ್ತಾರೆ. ಶೋಷಿತ ದಲಿತ ಜನರು ಸಹಿಸುವುದಕ್ಕೂ ಒಂದು ಮಿತಿ ಇದೆ. ಶೋಷಣೆಯು ಮಿತಿ ಮೀರಿದಾಗ, ಕ್ರಾಂತಿ ಸಹಜ. ಹೀಗಾಗಿ ಕಾಲಗತಿಗಳು ಬದಲಾಗುತ್ತವೆ. ಕಲಿಯ ಧರ್ಮವೂ ಬದಲಾಗುತ್ತದೆ. ದಲಿತರಾದ ಡಾ ॥ ಅಂಬೇಡಕರ ಹಿರಿತನದಲ್ಲಿ ರಚಿತವಾದ ಸಮಿತಿ ರಾಜ್ಯ ಘಟನೆಯನ್ನು ಬರೆದಿಲ್ಲವೆ ?

ಋಗ್ಯಜುಸ್ಸನರಿತು, ಯೋಗ್ಯತೆಯರಿಯದಾಗ
ವಿಪ್ರನಾದರೆಂತು ವಿಹಿತವಹುದು ?
ಗಂಡನಿರಲು ಅನ್ಯಗೊಲಿವ ಪತಿಯಂತೆ.
ವಿಶ್ವದಾಭಿರಾಮ ಕೇಳು ವೇಮ.

'ವೇದ ಪಾಠಾತ್ ಭವೇತ್ ವಿಪ್ರಃ' ಅಂದರೆ ವೇದಗಳ ಅಧ್ಯಯನ ಮಾಡುವುದರಿಂದ ವಿಪ್ರನೆನಿಸುತ್ತಾನೆ. ಆದರೆ ಋಗ್ವೇದವನ್ನೂ, ಯಜುರ್ವೇದವನ್ನೂ ಪಾಠ ಮಾಡಿರಬಹುದು. ಆದರೆ ಅದರ ಮಥಿತಾರ್ಥ ತಿಳಿದುಕೊಂಡು ಅಂತೆ ಆಚರಿಸುವ ಯೋಗ್ಯತೆ ಇಲ್ಲದಿದ್ದರೆ, ವಿಪ್ರನೆಂದು ಕರೆದುಕೊಂಡರೆ ಹೇಗೆ ವಿಹಿತವಾದೀತು ? ವೇದದ ಗುಪ್ತ, ವಿದ್ಯೆಯು ತನ್ನ ಮನವನ್ನಾಳುವ ಪತಿಯಿದ್ದಂತೆ. ಅದನ್ನು ಅರಿಯದೆ, ಇತರ ಆಕರ್ಷಣೆಗೆ ಬಲಿಯಾದರೆ, ದುಃಶ್ಚರಿತ್ರನಾದರೆ, ಗಂಡನಿದ್ದೂ ಸಹ ಬೇರೆ ಪುರುಷನಿಗೆ ಒಲಿಯುವ ಪಾಡಾಗುತ್ತದೆ.

ಓದಿದಾತಗಿಂತ ಒಗೆವ ಅಗಸ ಮೇಲು.
ಮನೆಯ ದೇವಿಗಿಂತ ಮಹಿಷ ಮೇಲು.
ಬ್ರಾಹ್ಮಣಾರ್ಯಗಿಂತ ಬಡವ ಹೊಲೆಯ ಮೇಲು.
ವಿಶ್ವದಾಭಿರಾಮ ಕೇಳು ವೇಮ.

ಪದ್ಯದಲ್ಲಿ ಕಠಿಣ ಶಬ್ದ ಪ್ರಯೋಗ ಮಾಡಿದಂತೆ ಕಾಣುವುದಲ್ಲವೇ ? ಆದರೆ ಹಾಗೇನಿಲ್ಲ. ಈ ಕೆಳಗಿನ ಅರ್ಥ ವಿವರಣೆ ನೋಡಿರಿ.

ಯೋಗ್ಯತೆ ಇಲ್ಲದೆ ಇರುವವನು ಗಿಳಿಪಾಠದಂತೆ ವೇದಾಧ್ಯಯನ ಮಾಡಿರಬಹುದು. ಆದರೆ ಆ ಓದಿನಿಂದ ತಾನೂ ತಿಳಿದು ವರ್ತಿಸಲಾರ. ಇತರರಿಗೆ ಅಧ್ಯಾಪನ ಮಾಡಿಸಿ ಅವರ ಉದ್ಧಾರವನ್ನೂ ಮಾಡಲಾರ. ಆದರೆ ಮನೆಯ ಅಗಸನು ಮಲಿನ ಬಟ್ಟೆಗಳನ್ನು ತೊಳೆದು ಶುಚಿಗೊಳಿಸುತ್ತಾನೆ. ಹಾಗಾಗಿ, ಅವನು ಓದಿದಾತಗಿಂತ ಮೇಲಲ್ಲವೇ ? ಮನೆಯ ದೇವಿಯು ಒಂದು ಚಿತ್ರಪಟವಾಗಿರಬಹುದು. ಇಲ್ಲವೆ ಪ್ರತೀಕವಾಗಿರಬಹುದು. ಬೇಕಾದರೆ ಚಿಕ್ಕ ಪ್ರತಿಮೆಯೂ ಆಗಿರಬಹುದು. ಇವುಗಳನ್ನು ಪೂಜಿಸಿ, ನೈವೇದ್ಯ ಅರ್ಪಿಸಿ, ಬೇಡಿಕೊಂಡರೂ ಆ ಸ್ಥೂಲ ವಸ್ತುಗಳು ಏನನ್ನೂ ಕೊಡಲಾರವು. ಅದೇ ಮನೆಯಲ್ಲಿ ಮಹಿಷ ( ಎಮ್ಮೆ ) ಹೊಂದಿದಿದ್ದರೆ. ಅದಕ್ಕೆ ಸ್ವಲ್ಪ ಮೇವು, ತೌಡು ಹಾಕಿದರೆ ಅದು ಭಾಂಡೆ ತುಂಬ ಹಾಲು ಕರೆಯುವುದು ಮತ್ತು ನೇಗಿಲು ಎಳೆಯಲು ಕೋಣಗರುವನ್ನೂ ಈಯಬಹುದು. ಅದು ಮನೆಯ ದೇವಿಗಿಂತ ಮೇಲಲ್ಲವೇ ? ಇನ್ನು ಕೊನೆಯದಾಗಿ, ಮಡಿ ಮಡಿ ಎಂದು ಹೊಲಸಿನಿಂದ ಮೈಲಿಗೆಯಿಂದ ದೂರ ದೂರ ಹಾರುವ ಡಾಂಭಿಕ ಬ್ರಾಹ್ಮಣನಿಗಿಂತ, ಕೇರಿಯ ಹೊಲಸು, ಬೀದಿಯ ಹೊಲಸು ಗುಡಿಸಿ ನಿರ್ಮಲ ಮಾಡುವ ಬಡವ ಹೊಲೆಯನೇ ಮೇಲಲ್ಲವೇ ? ಸ್ವಲ್ಪ ವಿಚಾರಿಸಿ ನೋಡಿರಿ.

ಜಾತಿ ಜಾತಿಗಳಲ್ಲಿ, ವರ್ಣ ವರ್ಣಗಳ ಮಧ್ಯೆ ಮೇಲು ಕೀಳು ಭಾವನೆಯನ್ನು ಬ್ರಾಹ್ಮಣರು ಹೇಗೆ ಕಲ್ಪಿಸಿದರೋ ತಿಳಿಯವು. ಏಕೆಂದರೆ ಅವರ ಗೋತ್ರಪಿತರು, ಅವರೇ ರಚಿಸಿದ ಸ್ಮೃತಿಗಳ ನಿಯಮಾನುಸಾರ, ಮಾದಿಗ, ಚಾಂಡಾಲ, ನಿಷಾದ ಇತ್ಯಾದೀ ಸಂಕರ ಜಾತಿಯವರೆನಿಸುವ ಪುರುಷರೇ ದೊಡ್ಡ ಋಷಿಮುನಿಗಳೆನಿಸಿದ್ದಾರೆ. ವಶಿಷ್ಠ ಋಷಿ ಮಾದಿಗ, ಮಾತಂಗ ಮುನಿ ಚಾಂಡಾಲ,





ವ್ಯಾಸ ಮಹರ್ಷಿ ನಿಷಾದ. ವಾಲ್ಮೀಕಿ ಋಷಿ ಹೇಳಿ ಕೇಳಿ ಬೇಡ.

"ಶೂದ್ರನಿಂದ ವೈಶ್ಯ ಸ್ತ್ರೀಯಲ್ಲಿ ಹುಟ್ಟಿದ ಮಗನು 'ಅಯೋಗವ' ಎನ್ನಿಸುವನು. ಕ್ಷತ್ರಿಯಳಲ್ಲಿ ಹುಟ್ಟಿದವನಿಗೆ ಕ್ಷತ್ತೃ ಎನ್ನುವರು. ಬ್ರಾಹ್ಮಣಿಯಲ್ಲಿ ಹುಟ್ಟಿದವನು 'ಚಂಡಾಲ'ನೆನ್ನಿಸುವನು. ಇವನು ಅತ್ಯಂತ ಅಧಮನು. ಇವರೆಲ್ಲ ವರ್ಣ ಸಂಕರದಿಂದ ಹುಟ್ಟಿದವರು". (ಮ.ಸ್ಮೃ. 10-12).

ಮಾತಂಗ ಮುನಿ ಮರಿ ಮಕ್ಕು,
ಭೂತಲದಿ ಬ್ರಾಹ್ಮಣರಾಗಿ ಮೆರೆವ, ನಾನಾ
ಜಾತಿಲಿ ಜನಿಸಿದ ವಿಪ್ರರ,
ಖ್ಯಾತಿಯ ಈ ಧರೆ ಕೆಟ್ಟಿದೆಯಲ್ಲವೇ ? ವೇಮಾ ?

ಮಾತಂಗನು ವಾರಾಣಸಿ ನಗರದ ಹೊರಗೆ ಚಾಂಡಾಲ ಕುಲದಲ್ಲಿ ಜನಿಸಿದನು. ಇವನ ಪ್ರಸಾದದಿಂದ ಜನಿಸಿದವನೇ ಮಾಂಡವ್ಯ ಋಷಿ. ಮಾಂಡವ್ಯನಿಗೆ ತನ್ನ ತಂದೆಯ ಬಗೆಗೆ ತಿಳಿದಿರಲಿಲ್ಲ. ಒಮ್ಮೆ ಮಾತಂಗ ಋಷಿಯು ಭಿಕ್ಷೆಗೆಂದು ಮಾಂಡವ್ಯನ ಮನೆ ಬಾಗಿಲಿಗೆ ಬಂದನು. ಆಗ ಮಾಂಡವ್ಯನು

"ಚಿಂದಿಗಳನ್ನು ಸುತ್ತಿಕೊಂಡು ಪಿಶಾಚಿಯಂತೆ ನಿಂತಿರುವ ನೀನು ಯಾರು ?" ಎಂದು ಕೇಳಿದನು.

ಮಾತಂಗ : ನಿನ್ನ ಮನೆಯಲ್ಲಿ ಅನ್ನಪಾನ ಬೇಕಾದಷ್ಟಿದೆ. ಆದ್ದರಿಂದ ನನಗೆ ಏನಾದರೂ, ಮುಸುರೆಯಾದರೂ ಸಿಕ್ಕೀತೆಂದು ಇಲ್ಲಿಗೆ ಬಂದಿರುವೆ.

ಮಾಂಡವ್ಯ : ಆದರೆ ಈ ಅನ್ನ ಬ್ರಾಹ್ಮಣರಿಗಾಗಿ ಇದೆ. ನಿನ್ನಂತಹ ಹಲಕಟನಿಗಾಗಿ ಅಲ್ಲ.

ಇಬ್ಬರ ಸಂವಾದವೂ ದೀರ್ಘವಾಗಿ ಬೆಳೆದು ಮಾಂಡವ್ಯನು, ತನ್ನ ಮೂವರು ದ್ವಾರಪಾಲಕರಿಂದ ಮಾತಂಗನನ್ನು ದೂಡಿಸಿಬಿಟ್ಟನು.

ಕೂಡಲೇ ಮಾಂಡವ್ಯನ ನಾಲಗೆ ತೊದಲಿಸಿತು. ಕಣ್ಣು ಬೆಳ್ಳಗಾದವು, ನಿಶ್ಚೇಷ್ಟನಾಗಿ ಬಿದ್ದುಬಿಟ್ಟನು. ಅವನ ಜೊತೆಗಿದ್ದ ಬ್ರಾಹ್ಮಣರ ಅವಸ್ಥೆಯೂ ಹೀಗೇ ಆಯಿತು. ಮುಖವನ್ನು ಕೆಡಿಸಿಕೊಂಡು ಅವರು ಉರುಳಾಡತೊಡಗಿದರು. ಇದನ್ನು ನೋಡಿ ಮಾಂಡವ್ಯನ ತಾಯಿ ದೃಷ್ಟಮಂಗಲಿಕೆಯು ಗಾಬರಿಗೊಂಡಳು. ಒಬ್ಬ ದರಿದ್ರ ತಪಸ್ವಿಯ ಪ್ರಭಾವದಿಂದ ತನ್ನ ಮಗನಿಗೂ ಮತ್ತು ಉಳಿದ ಬ್ರಾಹ್ಮಣರಿಗೂ ಈ ಸ್ಥಿತಿ ಒದಗಿತೆಂದು ತಿಳಿದು ಆ ತಪಸ್ವಿಯ ಶೋಧಕ್ಕೆ ಹೊರಟಳು. ಮಾತಂಗ ಋಷಿಯು ಒಂದು ಮರದಡಿ ಕುಳಿತು ಭಿಕ್ಷಾಟನೆಯಲ್ಲಿ ದೊರೆತ ಗಂಜಿಯನ್ನು ತಿನ್ನುತ್ತಿದ್ದ. ದೃಷ್ಟಮಂಗಲಿಕೆಯು ಅವನನ್ನು ಗುರುತಿಸಿ, ತನ್ನ ಮಗನನ್ನು ಕ್ಷಮಿಸಬೇಕೆಂದು ಬೇಡಿಕೊಂಡಳು. ಅವನು ಆ ಎಂಜಲು ಗಂಜಿಯಲ್ಲಿ ಕೆಲವಷ್ಟು ಆಕೆಗೆ ಕೊಟ್ಟು, "ಈ ಗಂಜಿಯನ್ನು ನಿನ್ನ ಹುಡುಗನ ಮತ್ತು ಬ್ರಾಹ್ಮಣರ ಬಾಯಿಯಲ್ಲಿ ಹಾಕು. ಎಂದರೆ ಅವರು ಸುಧಾರಿಸುವರು" ಎಂದನು. ದೃಷ್ಟಮಂಗಲೆ ಹಾಗೆ ಮಾಡಿದ್ದರಿಂದ ಅವರೆಲ್ಲರೂ ಮೊದಲಿನಂತಾದರು. ಆದರೆ, ಚಾಂಡಾಲನ ಎಂಜಲಿನಿಂದ ಬ್ರಾಹ್ಮಣರಿಗೆ ಗುಣವಾಯಿತೆಂಬ ಸುದ್ದಿ ವಾರಾಣಸಿಯಲ್ಲಿ ಹರಡಿತು.

ಆಗ ಜನರಿಗೆ ಹೆದರಿ ಆ ಬ್ರಾಹ್ಮಣರು ಮೇಧ್ಯ ರಾಷ್ಟ್ರಕ್ಕೆ ತೆರಳಿದರಾದರೂ ಮಾಂಡವ್ಯನು ಮಾತ್ರ ಅಲ್ಲಿಯೇ ಉಳಿದನು.

ಕೆಲ ಕಾಲದ ನಂತರ, ಪರ್ಯಟನ ಮಾಡುತ್ತ ಮಾತಂಗ ಋಷಿಯು ಮೇಧ್ಯ ದೇಶಕ್ಕೆ ಬಂದನು. ಈ ಸುದ್ದಿಯು ಅಲ್ಲಿಯ ಬ್ರಾಹ್ಮಣರಿಗೆ ಗೊತ್ತಾಯಿತು. ಹೊಸದಾಗಿ ಬಂದ ಈ ತಿರುಕನು ಮಾಯಾವಿಯಾಗಿದ್ದಾನೆ. ಇಡಿಯ ರಾಷ್ಟ್ರವನ್ನೇ ಅವನು ನಾಶಪಡಿಸಬಹುದು, ಎಂದು ಅಲ್ಲಿಯ ರಾಜನಿಗೆ ತಿಳಿಸಿದರು. ರಾಜನು ಸೈನಿಕರನ್ನು ಮಾತಂಗನ ಶೋಧಕ್ಕೆ ಕಳಿಸಿದನು. ಅಂದು ಗೋಡೆಯ ಬಳಿ ಭಿಕ್ಷಾನ್ನ ತಿನ್ನುತ್ತಿದ್ದಾಗ ಮಾತಂಗನು ಅವರ ಕಣ್ಣಿಗೆ ಬಿದ್ದನು. ಸೈನಿಕರು ಅವನನ್ನು ಕೊಂದರು. ಇದರ ಪರಿಣಾಮವಾಗಿ, ಆ ರಾಷ್ಟ್ರವು ಮಣ್ಣುಗೂಡಿತು.

ಚಾಂಡಾಲ ಪುತ್ರನಾದ ಮಾತಂಗ ಮುನಿಯ ಮಕ್ಕಳು, ಮರಿ ಮಕ್ಕಳಾದ ಬ್ರಾಹ್ಮಣರು ಈ ಭೂಮಿಯ ಮೇಲೆ ನಾನಾ ಜಾತಿಗಳಲ್ಲಿ ಜನಿಸಿದರು. ಈ ವಿಪ್ರರ ಖ್ಯಾತಿಯು ಹೀಗಿದೆ. ಹೀಗಾಗಿ, ಈ ಧರೆಯು ಕೆಟ್ಟಿದೆ ಎನ್ನೋಣವೇ ?

ಕೌಂಡಿನ್ಯನು ಮುಂಡೆ ಮಗನು.
ಮಾಂಡವ್ಯನು ಕಪ್ಪೆ ಮಗನು ಮಹಿಯಲಿ ಜನನಂ
ಚಂಡಾಲ ಮಾತಂಗ ಮುನಿಯ
ಪಿಂಡವೆ ಆಗಿಹುದಲ್ಲವೆ ? ಪೃಥ್ವಿಲಿ ವೇಮಾ.

1) ಕೌಂಡಿನ್ಯನು ವಿಧವೆಯ ಯೋನಿಯಲ್ಲಿ ಜನಿಸಿದನು. ಅವನು ವೇದ-ವೇದಾಂಗಗಳನ್ನೇ ಬಲ್ಲ ಪಂಡಿತನಾಗಿದ್ದನು. ಗೌತಮನ ಜನನವಾದಾಗ ಅವನ ಭವಿಷ್ಯ ನುಡಿಯಲು ಬಂದ ಎಂಟು ಜನ ಜ್ಯೋತಿಷಿಗಳಲ್ಲಿ ಕೌಂಡಿನ್ಯನು ಇದ್ದನು. ಉಳಿದ ಏಳು ಜನರು ಗೌತಮನು ಗೃಹಸ್ಥಾಶ್ರಮದಲ್ಲಿಯೇ ಉಳಿದರೆ ಚಕ್ರವರ್ತಿಯಾಗುತ್ತಾನೆ. ಸಂನ್ಯಾಸಿಯಾದರೆ ಸಮ್ಯಕ್ ಸಂಬುದ್ಧನಾಗುವನು ಎಂದು ಹೇಳಿದರು. ಕೌಂಡಿನ್ಯನು 'ಇಲ್ಲ, ಇಲ್ಲ ಅವನು ಸಮ್ಯಕ್ ಬುದ್ಧನೇ ಆಗುತ್ತಾನೆ ಎಂದು ಹೇಳಿದನು. ಗೌತಮ ಪರಿವ್ರಾಜಕನಾಗಿ ಬುದ್ಧ ಪದವಿಗೇರಿದ ಮೇಲೆ ಕೌಂಡಿನ್ಯನು ಜೀವಂತವಿದ್ದನು. ಅವನು ಅವನಿಂದ ದೀಕ್ಷೆ ಪಡೆದು ಬೌದ್ಧ ಧರ್ಮದ ವೃದ್ಧಿಗೆ ನಾಂದಿ ಹಾಡಿದನು.

2) ಮಂಡೂಕ ಎಂದರೆ ಕಪ್ಪೆ. ಮಾಂಡವ್ಯ ಎಂದರೆ ಕಪ್ಪೆ ಮಗನು. ಬೌದ್ಧ ಕಥೆಯ ಮೇರೆಗೆ ಚಂಡಾಲ ಮಾತಂಗ ಮುನಿಯು ವಾರಾಣಸಿಯ ಶ್ರೇಷ್ಠಿಯ ಪುತ್ರಿ ದೃಷ್ಟಮಂಗಲಿಕೆಯನ್ನು ಅವಳ ತಂದೆಯಿಂದ ಆಗ್ರಹಪೂರ್ವಕ ಪಡೆದು, ಅವಳನ್ನು ತನ್ನ ಚಾಂಡಾಲ ಗ್ರಾಮಕ್ಕೆ ಕರೆತಂದನು. ಅವಳು ಹೆಂಡತಿಯಂತೆ ಅವನೊಡನೆ ಬಾಳಲು ಸಿದ್ಧಳಿದ್ದಳು. ಆದರೆ ಅವನು ಅವಳನ್ನು ಹಾಗೆ ನಡೆಯಿಸಿಕೊಳ್ಳದೆ, ಅರಣ್ಯಕ್ಕೆ ಹೋಗಿ ಘೋರ ತಪಶ್ಚರ್ಯೆ ಆಚರಿಸಿದನು. ಏಳು ದಿನಗಳ ನಂತರ ಮಾತಂಗನು ಮರಳಿ ಬಂದು, ದೃಷ್ಟಮಂಗಲಿಕೆಗೆ ಹೀಗೆ ಹೇಳಿದನು. "ನನ್ನ ಪತಿ ಮಾತಂಗನಲ್ಲ, ಮಹಾ ಬ್ರಹ್ಮ. ಅವನು ಹುಣ್ಣಿಮೆಯ ದಿನ ಚಂದ್ರಮಂಡಲದಿಂದ ಇಳಿದು ಬರುವನು. ಹೀಗೆ ನೀನು ಸಾರಿ ಹೇಳು" ಎಂದು. ಅವಳು ಅದರಂತೆಯೇ ಮಾಡಿದಳು. ಹುಣ್ಣಿಮೆಯ ರಾತ್ರಿ ಚಾಂಡಾಲ ಗ್ರಾಮದಲ್ಲಿ ಅವಳ ಮನೆಯೆದುರು ದೊಡ್ಡ ಜನಜಂಗುಳಿ ಕೂಡಿತು. ಆಗ ಮಾತಂಗ ಋಷಿಯು ಚಂದ್ರಮಂಡಲದಿಂದ





ಕೆಳಗಿಳಿದನು. ತನ್ನ ಗುಡಿಸಲೊಳಗೆ ಹೋಗಿ, ದುಷ್ಟಮಂಗಲಿಕೆಯ ನಾಭಿಯನ್ನು ಹೆಬ್ಬೆರಳಿನಿಂದ ಮುಟ್ಟಿದನು.

ಅಲ್ಲಿ ನೆರೆದ ಬ್ರಹ್ಮ ಭಕ್ತರೆಲ್ಲರೂ ಈ ಅದ್ಭುತ ಚಮತ್ಕಾರವನ್ನು ನೋಡಿ ದೃಷ್ಟಮಂಗಲಿಕೆಯನ್ನು ಎತ್ತಿಕೊಂಡು ಹೋಗಿ ವಾರಾಣಸಿ ನಗರದ ಮಧ್ಯ ಭಾಗದಲ್ಲಿ ಒಂದು ಮಂಡಪವನ್ನು ನಿರ್ಮಿಸಿ ಅಲ್ಲಿ ಅವಳ ಪೂಜೆಯನ್ನು ಮಾಡಹತ್ತಿದರು. ಜನರು ಅವಳಿಗೆ ಹರಕೆಗಳನ್ನು ಬೇಡಿಕೊಳ್ಳತೊಡಗಿದರು. ಒಂಭತ್ತು ತಿಂಗಳ ತರುವಾಯ ಅದೇ ಮಂಡಪದಲ್ಲಿ ಅವಳು ಗಂಡು ಮಗುವನ್ನು ಹೆತ್ತಳು. ಮಂಡಪದಲ್ಲಿ ಹುಟ್ಟಿದ ಜನರು ಕೂಸಿಗೆ ಮಾಂಡವ್ಯ ಎಂದು ಹೆಸರಿಟ್ಟರು.

ಚಿಕ್ಕಂದಿನಿಂದಲೂ ಮಾಂಡವ್ಯನಿಗೆ ಕಲಿಸಲು ದೊಡ್ಡ ದೊಡ್ಡ ವೈದಿಕ ಪಂಡಿತರು ಸ್ವಂತ ಇಚ್ಛೆಯಿಂದ ಮುಂದೆ ಬಂದರು. ಅವನು ಮೂರೂ ವೇದಗಳಲ್ಲಿ ಪಾರಂಗತನಾದ. ಬ್ರಾಹ್ಮಣರಿಗೆ ಬೇಕಾದಷ್ಟು ನೆರವು ನೀಡುತ್ತಿದ್ದನು. ಏನೇ ಇರಲಿ, ಮಾಂಡವ್ಯನು ಮಾತಂಗ ಮುನಿಯ ವರಪ್ರಸಾದದಿಂದ ಪ್ರಸೂತನಾದ ಪಿಂಡವೆಂಬುದು ನಿಜ ತಾನೇ ?

ಅಂತೂ, ಇಳೆಯ ಬ್ರಾಹ್ಮಣರಾದವರಿಗೆ ಪರಮ ಪೂಜ್ಯರಾದ ಕೌಂಡಿನ್ಯ ಋಷಿಯ ಜನ್ಮವು ಮುಂಡೆಯ ಯೋನಿಯಲ್ಲಿ ಆಯಿತು. ತ್ರಿವೇದಿಯಾದ ಮಹಾ ಮಹಿಮನಾದ ಮಾಂಡವ್ಯ ಋಷಿಯ ಜನ್ಮವು ಕಪ್ಪೆಯ ಉದರದಿಂದ ಆಯಿತಲ್ಲದೆ ಚಂಡಾಲ ಮಾತಂಗ ಮುನಿಯ ವರಪ್ರಸಾದದಿಂದ ಆಗಿದೆ. ಅಂದಮೇಲೆ ಬ್ರಾಹ್ಮಣರು ಜಾತಿಯ ಭೇದವನ್ನು ಎಣಿಸುತ್ತಿರುವುದು ಸೋಜಿಗವಲ್ಲವೇ ?

ಇನ್ನು ವಶಿಷ್ಠ ಋಷಿಯ ಜನ್ಮ ವಂಶಗಳತ್ತ ಗಮನ ಹರಿಸೋಣ. ವಶಿಷ್ಠರು ಬ್ರಹ್ಮರ್ಷಿಗಳು. ವಿಶ್ವಾಮಿತ್ರನನ್ನು ತಿದ್ದಿ ತೀಡಿ, ಬ್ರಹ್ಮರ್ಷಿ ಪದಕ್ಕೇರಿಸಿದವರೇ ಅವರು. ಅವರು ರಾಮನ ಗುರುವು.

ತನ್ನ ತಾಯಿ ವೇಶ್ಯೆ, ಮಡದಿ ಮಾದಿಗ ಕನ್ಯೆ.
ಇರುವ ವಶಿಷ್ಠಮುನಿ ಗುರು ಶ್ರೀಪತಿಗೆ,
ಅರಿತೊಡೆ ತಪದಿಂದ ದ್ವಿಜ ಜಾತಿಯೆಲ್ಲಿ ?
ವಿಶ್ವದಾಭಿರಾಮ ಕೇಳು ವೇಮ.

ಮಾದಿಗನೆನಬೇಡ ವರ ಗುಣ ಉಳ್ಳವನ.
ಮಾದಿಗಳು ವಶಿಷ್ಠ ಮುನಿಯ ಪತ್ನಿ.
ಮಾದಿಗ ಗುಣ ಹೊಂದಿ ವರ ದ್ವಿಜನಾದನು.
ವಿಶ್ವದಾಭಿರಾಮ ಕೇಳು ವೇಮ.

ಊರ್ವಶಿಯು ವೇಶ್ಯೆ ತಾನೇ. ಮಿತ್ರಾವರುಣರ ವೀರ್ಯದಿಂದ ಊರ್ವಶಿಯ ಯೋನಿಯಲ್ಲಿ ಜನಿಸಿದ ಸುಪುತ್ರನೇ ವಶಿಷ್ಠ. ವಶಿಷ್ಠರು ಅರುಂಧತಿಯ ಪತಿಯೆಂದು ವ್ಯಾಸರೇ ಹೇಳಿದ್ದಾರೆ. ವಶಿಷ್ಠರು ಈಕ್ಷ್ವಾಕು ಕುಲ ಗುರು. ಅಂದರೆ ಶ್ರೀ ರಾಮನಿಗೆ ಕುಲಗುರು ತಾನೇ ? ಅರುಂಧತಿಯೂ ಮಾದಿಗ ಕನ್ಯೆ. ಹೀಗಿದ್ದರೂ ವಶಿಷ್ಠರು ಮಹಾಮುನಿಗಳು. ವೇದ ಪಾರಂಗತರು. ರಾಜ ವಂಶಕ್ಕೆ ಕುಲ ಪುರೋಹಿತರು. ಅಂದ ಮೇಲೆ, ಶೂದ್ರನು, ಉಪನಯನ ಸಂಸ್ಕಾರ ಮೂಲಕ

ದ್ವಿಜ ಎನ್ನುವುದೇನು ? ಜನ್ಮದಿಂದ ಎಲ್ಲರೂ ಶೂದ್ರರೇ. ತಪಸ್ಸಿನಿಂದ ಎರಡನೇ ಜನ್ಮ ಪಡೆದು ದ್ವಿಜನಾಗಬಹುದು.

ಪತ್ನಿ ಅರುಂಧತಿಯು ಮಾದಿಗಳೆಂದೂ, ತಾಯಿ ಊರ್ವಶಿಯು ವೇಶ್ಯೆಯೆಂದೂ ತಿಳಿದು ವಶಿಷ್ಠರನ್ನು ಹೀಯಾಳಿಸಬೇಡ. ಅವರಲ್ಲಿ ಶ್ರೇಷ್ಠ ಗುಣಗಳು ಮನೆ ಮಾಡಿವೆ. ಅವರು ಆಶೆ ಕೋಪಗಳನ್ನು ಜಯಿಸಿದ್ದರು. ಅವರು ಪಂಚೇಂದ್ರಿಯಗಳನ್ನು ಗೆದ್ದವರಾದ್ದರಿಂದಲೇ ಅವರಿಗೆ ವಶಿಷ್ಠನೆಂಬ ಹೆಸರು ಬಂದಿತ್ತು. ಮಾದಿಗನಾಗಿ ಹುಟ್ಟಿದ ವಶಿಷ್ಠರು ಶ್ರೇಷ್ಠ ಗುಣಗಳನ್ನು ಹೊಂದಿ ವರ ದ್ವಿಜರಾದರು.

ಈಗ ಸತ್ಯಕಾಮ ಜಾಬಾಲ ಮಹಳರ್ಷಿಯ ಕುರಿತು ತಿಳಿಯುವಾ :

ಸತ್ಯಕಾಮನಿಗೆ ತನ್ನ ತಂದೆ ತಿಳಿದಿರಲಿಲ್ಲ. ಅವನ ತಾಯಿ ಜಾಬಾಲಿ, ಬೇರೆ ಬೇರೆಯವರ ಮನೆಯಲ್ಲಿ ಪರಿಚಾರಿಕೆಯಾಗಿ ಕೆಲಸ ಮಾಡುವ ವೃತ್ತಿಯಲ್ಲಿದ್ದಳು. ಅವನಿಗೆ ವೇದವಿದ್ಯೆ ಅಧ್ಯಯನ ಮಾಡುವ ಮನಸ್ಸಾಯಿತು. ಆಗ ಗುರುಗಳು ಅಂದಿನ ಸಂಪ್ರದಾಯಾನುಸಾರ ಅವನ ಕುಲ ಗೋತ್ರಗಳನ್ನು ವಿಚಾರಿಸಿದರು.

ಯಾವ ಕುಲವು ನಿನಗೆ ? ಯಾವ ಮತವು ಮತ್ತೆ ?
ಪೂರ್ಣಗೊಂಡ ಹೃದಯ ಪಕ್ವವರಿತು,
ಆದರಿಸುವ ಮನುಜ ಅಂತ್ಯವ ತಿಳಿಯುವನು.
ವಿಶ್ವದಾಭಿರಾಮ ಕೇಳು ವೇಮ.

ಸತ್ಯಕಾಮನು ತನ್ನ ತಾಯಿಯಾದ ಜಬಾಲೆಗೆ ಕೇಳಿದನು : "ಅಮ್ಮಾ ! ನಾನು ಬ್ರಹ್ಮವನ್ನು ಪಡೆದುಕೊಳ್ಳಬಯಸುವೆ. ನನ್ನ ಗೋತ್ರ ಯಾವುದು ? ಹೇಳು". ಅದಕ್ಕೆ ತಾಯಿ ಹೇಳಿದಳು. 'ಮಗಾ ! ನನಗೂ ಅದು ಗೊತ್ತಿಲ್ಲ. ತಾರುಣ್ಯದಲ್ಲಿ ನಾನು ಅನೇಕರ ಜೊತೆ ಇದ್ದೆ. ಆಗ ನೀನು ಹುಟ್ಟಿದೆ. ಹೀಗಾಗಿ ನಿನ್ನ ಗೋತ್ರವನ್ನು ನಾನು ಅರಿಯೆ. ನನ್ನ ಹೆಸರು ಜಬಾಲಾ. ನಿನ್ನ ಹೆಸರು ಸತ್ಯಕಾಮ. ಆದುದರಿಂದ ನಿನು ಸತ್ಯಕಾಮ ಜಾಬಾಲನಿರುವೆ ಎಂದು ಹೇಳು" ಎಂದಳು.

ಸತ್ಯಕಾಮ ಗುರುಗಳಾದ ಹಾರಿದ್ರುಮತ ಗೌತಮರಲ್ಲಿಗೆ ಬಂದು,

"ತಮ್ಮ ಸನ್ನಿಧಿಯಲ್ಲಿ ಬ್ರಹ್ಮಜ್ಞಾನವನ್ನು ಕಲಿಯಲು ಬಂದಿರುವೆ" ಎಂದನು.

"ನಿನ್ನ ಗೋತ್ರ ಯಾವುದು ?" ಎಂದು ಕೇಳಿದ ಗೌತಮ.

"ನನಗೆ ಗೊತ್ತಿಲ್ಲ. ತಾಯಿಯನ್ನು ಕೇಳಿದೆ. ತಾರುಣ್ಯದಲ್ಲಿ ಅನೇಕ ಪುರುಷರ ಜೊತೆ ನನ್ನ ಸಂಬಂಧ ಬಂದುದರಿಂದ ನನಗೆ ಗೋತ್ರ ಗೊತ್ತಿಲ್ಲ" ಎಂದು ಆಕೆಯೂ ಹೇಳಿದಳು. ಆದ್ದರಿಂದ ನೀನು ಸತ್ಯಕಾಮ ಜಾಬಾಲನು ಎಂದು ಹೇಳು ಎಂದಿದ್ದಾಳೆ" ಎಂದನು ಸತ್ಯಕಾಮ.

"ನೀನು ಸತ್ಯದಿಂದ ಚ್ಯುತನಾಗಲಿಲ್ಲ. ಅಬ್ರಾಹ್ಮಣನಿಗೆ ಇದು ಶಕ್ಯವಿಲ್ಲ. ಆದ್ದರಿಂದ ಸಮಿತ್ತನ್ನು ಕೂಡಿಸಿಕೊಂಡು ಬಾ. ನಿನ್ನ ಉಪನಯನವನ್ನು ನಡೆಸುವೆ" ಎಂದು ಗೌತಮ ಋಷಿಯು ಹೇಳಿ ಬಳಿಕ ಅವನ ಉಪನಯನವನ್ನು ನಡೆಸಿದನು. (ಛಾಂ.ಉ. 80-8). ಉಪನಿಷತ್ತುಗಳು ಜಾತಿಗಿಂತ ಸತ್ಯಕ್ಕೆ ಹೆಚ್ಚು ಮಾನವನ್ನು ಕೊಡುತ್ತಿದ್ದರೆಂಬುದು ಸತ್ಯಕಾಮನ ಕತೆಯಿಂದ ಸಿದ್ಧವಾಗುವುದು.





ಆ ॥ ಸತ್ಯ ಒಪ್ಪವಿರಲು, ಜ್ಞಾನ ಒಪ್ಪ ಉಂಟು.
ಜ್ಞಾನ ಒಪ್ಪವಿರಲು ಸತ್ಯವುಂಟು.
ಜ್ಞಾನ ಸತ್ಯಗಳನು ಸಮನಿರಿಸೆ ದ್ವಿಜನು.
ವಿಶ್ವದಾಭಿರಾಮ ಕೇಳು ವೇಮ.

ಈಗ ಪರಾಶರನ ಮತ್ತು ವ್ಯಾಸ ಮಹರ್ಷಿಗಳ ಜನ್ಮದತ್ತ ಗಮನ ಹರಿಸೋಣ.

ಕಂ. ಕಡು ದೊಡ್ಡ ಪರಾಶರ ತಾ
ಕಡು ಹೊಲೆಯರವಳ ಒಡಲಲ್ಲಿ ಜನಿಸಿದ ತೆರಂ.
ನಡೆ ದೊಡ್ಡ ವ್ಯಾಸಂಬಿಗ-
ಳೊಡಲಲಿ ಜನಿಸಿದ ಪರಿಯೊಳಗಿಪ್ಪುದು ವೇಮಾ.

ಪರಾಶರರು ವಶಿಷ್ಠ ಮಹರ್ಷಿಯ ಮೊಮ್ಮಗನು. ಅವರು ವಸಿಷ್ಠರನ್ನು 'ತಾತ' ಎನ್ನುತ್ತಿದ್ದರು. ತಾತ ಎಂದರೆ ಸಂಸ್ಕೃತದಲ್ಲಿ ತಂದೆ ಎಂದು ಅರ್ಥ. ಅದನ್ನು ಕೇಳಿ ಅವರ ತಾಯಿ ಅಳುತ್ತಿದ್ದಳು. 'ಮಗೂ ! ಅವರು ನಿನ್ನ ತಾತನಲ್ಲ. ನಿನ್ನ ತಾತನ ತಾತ. ನಿನ್ನ ತಾತ (ತಂದೆ) ನನ್ನು ಓರ್ವ ಘಾತಕನು ನುಂಗಿ ಹಾಕಿದ್ದಾನೆ' ಎಂದಳು. ಆಗ ಪರಾಶರರು "ಅವನಾರು ? ಅವನನ್ನು ಈಗಲೇ ಕೊಲ್ಲುತ್ತೇನೆ" ಎಂದನು.

ಪರಾಶರರು ತಮ್ಮ ತಂದೆಯನ್ನು ಕೊಂದ ರಾಕ್ಷಸರ ನಾಶಕ್ಕಾಗಿ ಯಾಗ ಮಾಡಲಾರಂಭಿಸಿದರು. ಅನೇಕ ರಾಕ್ಷಸರು ಆಹುತಿಯಾದರು. ಆಗ ಪುಲಸ್ತ್ಯ, ಪುಲಹ, ಕ್ರತು ಮೊದಲಾದ ಋಷಿಗಳು ಆಗಮಿಸಿ, 'ವಶಿಷ್ಠರ ಮೊಮ್ಮಗನೂ, ವೇದ ಪಾರಂಗತನೂ, ಧರ್ಮ ಸೂಕ್ಷ್ಮ ತಿಳಿದವನೂ ಆದ ನೀನು ನಿರಪರಾಧಿಗಳನ್ನು ಕೊಲ್ಲುವುದು ಸೂಕ್ತವಲ್ಲ" ಎಂದು ಹೇಳಿದರು. ನಿನ್ನ ತಂದೆ ಶಕ್ತಿ ಮಹರ್ಷಿ ನಿಜ. ಕಲ್ಮಾಶಪಾದರು ನಿನ್ನ ತಂದೆಯನ್ನು ಕೊಂದದ್ದೂ ಸಹ ನಿಜ. ಆದರೆ, ನಿನ್ನ ತಂದೆ ನೀಡಿದ "ನರರನ್ನು ತಿಂದು ಬದುಕು" ಎಂಬ ಶಾಪದಿಂದಾಗಿಯೇ ಇನ್ನಾದರೂ ರಾಕ್ಷಸ ಮಾರಣ ಯಾಗವನ್ನು ನಿಲ್ಲಿಸು. ಎಂದು ಪರಾಶರರನ್ನು ಕೇಳಿಕೊಂಡರು. ಪರಾಶರರೂ ಹೋಮಾಗ್ನಿಯನ್ನು ಹಿಮವತ್ ಪರ್ವತದ ಉತ್ತರ ಭಾಗದಲ್ಲಿ ವಿಸರ್ಜಿಸಿದರು.

ನಂತರ, ಪರಾಶರರು ದೀರ್ಘ ತಪಶ್ಚರ್ಯೆ ಆಚರಿಸಲು, ಪರ್ವತಕ್ಕೆ ಹೋದರು. ಆದರೆ ದೀರ್ಘ ಕಾಲ ಅಲ್ಲಿ ಉಳಿಯಲಾರದೆ ಮತ್ತೆ ಪ್ರಪಂಚಕ್ಕೆ ಬಂದು, ವಿಲಾಸಲೋಲುಪತೆಯಲ್ಲಿ ತೊಡಗಿದರು. ಏನೇ ಇರಲಿ, ಪರಾಶರರು ಬಹು ದೊಡ್ಡ ಋಷಿಗಳು. ನೀಚ ಹೊಲತಿಯರ ಒಡಲಲ್ಲಿ ಜನಿಸಿದ್ದರೂ, ಮಾದಿಗರೇ ಆದ ವಶಿಷ್ಠರ ಮೊಮ್ಮಗನಾಗಿದ್ದರೂ, ವೇದ ವೇದಾಂಗಗಳಲ್ಲಿ ಪಾರಂಗತರಾಗಿದ್ದರು. ಪರಾಶರ ಸ್ಮೃತಿಯ ಕರ್ತೃವಾದರು. ಮಹರ್ಷಿ ವ್ಯಾಸರ ಪಿತನಾದರು. ಇನ್ನು ವ್ಯಾಸರು ಅಂಬಿಗ ಕನ್ನೆ ಮತ್ಸ್ಯಗಂಧಿಯ ಮಗನು. ವೇದಗಳ ಸಂಕಲನಕಾರರರಾದರು. ವೇದಗಳ ಮೇಲೆ ಭಾಷ್ಯ ಬರೆದರು. ಪಂಚಮ ವೇದ ಎನಿಸುವ ಮಹಾಭಾರತವನ್ನು ರಚಿಸಿದರು. ಪುರಾಣಗಳ ಕರ್ತೃವೆನಿಸಿದರು. ಅವರು ಪ್ರಸಿದ್ಧ ಆಚಾರ್ಯತ್ರಯರ ಮಹಾ ಗುರುಗಳು. ಅಂದ ಮೇಲೆ ಹುಟ್ಟಿನಿಂದ ಜಾತಿ ಭೇದ ಮಾಡುವುದು ಎಂಥ ಮೂರ್ಖತನವೆನಿಸುವುದಲ್ಲವೇ ?

ಇನ್ನು ರಾಮಾಯಣದ ಕರ್ತೃ ವಾಲ್ಮೀಕಿ ಮಹರ್ಷಿಯ ವಿಚಾರ ಮಾಡುವಾ :

ಆ ||
ರಾಮ ನಾಮ ಪಠಣ ಗೈದು ವಾಲ್ಮೀಕಿ,
ಜಗದಿ ಬೇಡ, ಬ್ರಾಹ್ಮಣ ತಾನಾದ..
ಕುಲವು ಘನವು ಅಲ್ಲ ; ಗುಣವೆ ಘನವೆನ್ನಿರೊ.
ವಿಶ್ವದಾಭಿರಾಮ ಕೇಳು ವೇಮ.

ಕಂ.
ಅಜ್ಞಾನವೆ ಶೂದ್ರತ್ವವು ;
ಸುಜ್ಞಾನವೆ ಬ್ರಹ್ಮವೆನುವ ಶ್ರುತಿಗಳ ಕೇಳಾ.
ಅಜ್ಞಾನ ಹಿಂಗಿ ವಾಲ್ಮೀಕಿ,
ಸುಜ್ಞಾನವೆಂಬ ಬ್ರಹ್ಮವ ಹೊಂದಿದ ವೇಮಾ.

ವಾಲ್ಮೀಕಿ ಒಬ್ಬ ಬೇಡ. ಅಂದರೆ ಪೌರಾಣಿಕ ಕಾಲದ ಧರ್ಮಸ್ಮೃತಿಗಳ ಮೇರೆಗೆ ಕೀಳು ಜಾತಿಯ ಶೂದ್ರ. ಅವನು ಬೇಟೆಯಾಡುತ್ತ, ದಾರಿಹೋಕರನ್ನು ಸುಲಿಗೆ ಮಾಡುತ್ತ ಜೀವನ ಮಾಡುತ್ತಿದ್ದ. ಒಮ್ಮೆ ಮಹರ್ಷಿ ನಾರದರು ಅವನ ಕೈಗೆ ಸಿಕ್ಕರು. ಬುದ್ಧಿವಂತರಾದ ಅವರು ಅವನನ್ನು ವಿಚಾರಿಸಿ, ಕೊಲೆ ಸುಲಿಗೆಯಂಥ ಪಾಪಕರ್ಮಗಳಿಗೆ ತನ್ನ ಕುಟುಂಬದ ಜೀವನ ನಿರ್ವಹಣೆಯೇ ಕಾರಣವೆಂಬ ನಿಜ ಸಂಗತಿಯನ್ನು ತಿಳಿದು, ಪಾಪ ಕರ್ಮ ಫಲ ಭೋಗಿಸಲು ತಾನಲ್ಲದೆ ಬಂಧು ಬಳಗದವರ್ಯಾರೂ ಮುಂದೆ ಬರುವುದಿಲ್ಲ ಎಂದು ಮನದಟ್ಟು ಮಾಡಿ, ಅವನಿಗೆ ತಪಶ್ಚರ್ಯೆಯತ್ತ ಸೆಳೆದರು. ಮತ್ತು 'ರಾಮ' ಮಂತ್ರವನ್ನೇ ದೀಕ್ಷಾ ಮಂತ್ರವಾಗಿ ಉಪದೇಶಿಸಿದರು. ಬೇಡನು ನಿಷ್ಠೆಯಿಂದ ತಪಶ್ಚರ್ಯೆ ಮಾಡಿ, ರಾಮ ಮಂತ್ರ ಪಠಣದಿಂದ ಉಚ್ಚ ಸ್ಥಿತಿಗೇರಿದ. ಬ್ರಹ್ಮವಿದನಾದ. ಬ್ರಾಹ್ಮಣನಾದ. ತಪೋನಿರತನಾದ. ಆ ಬೇಡ ತಪಸ್ವಿಯ ಸುತ್ತು ಹುತ್ತ ಬೆಳೆಯಿತು. ತಾಪಸಿಯು ಹುತ್ತದಲ್ಲಿ ಅಡಗಿದನು. ಹುತ್ತ ಎಂದರೆ ವಲ್ಮೀಕ. ಹೀಗೆ ಅವನು ವಾಲ್ಮೀಕಿಯೆಂಬ ಹೆಸರು ಹೊಂದಿದನು. ಬೇಡ ಕುಲ ಸಂಜಾತನಾದರೂ ತನ್ನ ಹಿಂಸೆ, ಕಾರ್ಯಗಳನ್ನು ತೊರೆದು, ತಪೋನಿಷ್ಠನಾಗಿ, ಸುದ್ಗುಣ ಹೊಂದಿದ. ಕುಲಕ್ಕಿಂತ ಗುಣವೇ ಘನವೆಂದು ಲೋಕಕ್ಕೆ ತಿಳಿಸಿದ.

ಒಳಿತು ಕೆಡುಕು, ಪುಣ್ಯ ಪಾಪ, ಧರ್ಮ ಅಧರ್ಮಗಳನ್ನು ವಿವೇಚಿಸಿ ಅರಿಯುವ ಜ್ಞಾನವಿಲ್ಲದ (ಅಜ್ಞಾನದಿಂದ) ಮಾನವನು ಪ್ರಪಂಚಕ್ಕೆ ಬದ್ಧನಾಗುತ್ತಾನೆ. 'ಶೋಚತಿ-ಇತಿ ಶೂದ್ರಃ' ಅಂದರೆ ಶೋಕಿಸುವವ ಶೂದ್ರನಾಗುತ್ತಾನೆ. ಅಜ್ಞಾನಾಂಧಕಾರವನ್ನು ವಿವೇಕವೆಂಬ ಜ್ಞಾನ ಜ್ಯೋತಿ ಹೊತ್ತಿಸಿ ಕಳೆಯಬಹುದು. ಆ ಸುಜ್ಞಾನದಿಂದ ಬ್ರಹ್ಮಜ್ಞಾನವಾಗುತ್ತದೆ. ಬ್ರಹ್ಮವಿದನಾಗುತ್ತಾನೆ. ಬ್ರಾಹ್ಮಣನಾಗುತ್ತಾನೆ. ಶ್ರುತಿಗಳು ಇದನ್ನು ಉದ್ಘೋಷಿಸುತ್ತಿವೆ. ಈ ಶ್ರುತಿಗಳಿಗೆ ನಿದರ್ಶನವವಾಗಿ, ವಾಲ್ಮೀಕಿ ಋಷಿಯು ಅಜ್ಞಾನ ಹಿಂಗಿ ಸುಜ್ಞಾನ ಹೊಂದಿ ಬ್ರಹ್ಮವೇ ಆದನು.

ಅಮರ ಮಹಾಕಾವ್ಯವೆನಿಸಿದ ರಾಮಾಯಣದ ಕರ್ತೃ. ಇದು ಸಕಲ ಶ್ರುತಿ ಪುರಾಣಗಳ ಸಾರ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪುರುಷ ಚತುರಾರ್ಥಗಳಿಗೆ ಕೈದೀಪ.

ಆ ||
ಜಾತಿ ಭೇದಗಳನು, ನೀತಿ ಭೇದಗಳನು,
ಚರ್ಮ ಭೇದಗಳನು, ಕರ್ಮಗಳನು,
ಚಿತ್ತ ಶುದ್ಧಿಗಾಗಿ ಸೃಷ್ಟಿಸಿಹುದೆ ದೈವ ?
ವಿಶ್ವದಾಭಿರಾಮ ಕೇಳು ವೇಮ.





ಬ್ರಾಹ್ಮಣರು ಬರೆದ ಸ್ಮೃತಿ ಶಾಸ್ತ್ರಗಳಲ್ಲಿ ಜಾತಿ ಭೇದವು, ವರ್ಣ ಭೇದವು ತುಂಬಿದೆ. ಧರ್ಮ ಸಾಧನೆಗಾಗಲಿ, ಸಾಮಾಜಿಕ ಬದುಕಿಗಾಗಲಿ, ಕೌಟುಂಬಿಕ ಬದುಕಿಗಾಗಲಿ ಮಾನವನು ಅನುಸರಿಸಬೇಕಾದ ನೀತಿಗಳು, ಜಾತಿ ಭೇದದಿಂದ ಬೇರೆ ಬೇರೆಯಾಗಿವೆ. ಆಯಾ ಮಾನವನು ಒಂದೇ ಕರ್ಮವನ್ನು ಮಾಡಿದರೂ ಅವನು ಪಡೆಯುವ ಫಲವು ಅವನ ಜಾತಿಗೆ ಅನುಗುಣವಾಗಿರುತ್ತದೆ. ಹೀಗೆ ನೀತಿ ಭೇದಗಳಿವೆ. ಆರ್ಯರು ಬಿಳಿಯರು, ದ್ರಾವಿಡರು ಶೂದ್ರರು. ಕಪ್ಪು ಎಂಬುವ ಚರ್ಮ ಭೇದಗಳನ್ನು, ಮತ್ತು ಯಾವ ಜಾತಿಯವರು ಯಾವ ಕರ್ಮ ಮಾಡಬೇಕು ? ಯಾವ ಕರ್ಮ ಯಾವ ಜಾತಿಯವರಿಗೆ ಮಾತ್ರ ನಿಷಿದ್ಧ, ಎನ್ನುವ ಕರ್ಮ ಭೇದಗಳನ್ನು ಬ್ರಹ್ಮನೇ ವಿಧಿಸಿದನೆಂದು ಬ್ರಾಹ್ಮಣರು ಬರೆದಿದ್ದಾರೆ. ಅಂದರೆ ಈ ಭೇದ ಬುದ್ಧಿಯಿಂದ ಜನರ ಚಿತ್ತ ಶುದ್ಧಿಯಾಗುವುದೇ ? ತ್ರಿಗುಣಗಳ ಜಾಲದಲ್ಲಿ ಈ ಭೇದ ಬುದ್ಧಿ ಬೆಳೆಯುತ್ತದೆ. ಮುಕ್ತ ಪುರುಷನಾಗಲು ನಿಸ್ತ್ರೈಗುಣ್ಯನಾಗಬೇಕು.

ಆ ||
ದಾಸನೆನೆ ಲೇಸು ಸಾವಿರ ಸಲವ್ರೋರ್ವನ,
ಜಂಗಮನೆನೆ ಲೇಸು ಲಿಂಗವಿರಲು.
ಬ್ರಾಹ್ಮಣನೆನಬೇಡ ದಶ ಸಹಸ್ರಕೊಬ್ಬನ.
ವಿಶ್ವದಾಭಿರಾಮ ಕೇಳು ವೇಮ.

ಶೂದ್ರರಿಗೆ ಬ್ರಾಹ್ಮಣರು ದಾಸರೆನ್ನುತ್ತಾರೆ. ಸಂಚಾರಿ ಆರ್ಯರು ತಾವು ಗೆದ್ದ ನಾಡಿನ ಆದಿವಾಸಿಗಳನ್ನು ದಾಸರಾಗಿಸುತ್ತಿದ್ದರು. ತಮ್ಮ ಪರಿಚರ್ಯೆಗೆ ಅವರನ್ನು ಬಳಸುತ್ತಿದ್ದರು. ಅವರಲ್ಲಿ ಕೆಲವರು ಪದ ಹಾಡಿ, ಜಪ ಮಾಡಿ, ಸಾಧು ವೃತ್ತಿಗಿಳಿದರೂ ಅವರನ್ನು ಭಾಗವತ ದಾಸರೆನ್ನುತ್ತಿದ್ದರು. ಹೀಗೆ ಯಾವೊಬ್ಬನನ್ನು ಸಾವಿರ ಸಲ ದಾಸ ಎನ್ನಬಹುದು. ಅದರಿಂದ ಧರ್ಮಕ್ಕೆ ಹಾನಿಯಿಲ್ಲ. ಇನ್ನು ಬ್ರಾಹ್ಮಣರ ಮೇಲು ಕೀಳಿನ ಭಾವನೆಯನ್ನು ತೊರೆದು, ಲಿಂಗಧಾರಿಯಾಗಿ ಪರಿವ್ರಾಜಕನಾಗಿ ಧರ್ಮ ಬೋಧಿಸಿದರೆ ಜಂಗಮನೆನ್ನಬಹುದು. ಅದರಿಂದ ಧರ್ಮಕ್ಕೆ ಹಾನಿಯಿಲ್ಲ. ಆದರೆ ಯಾರನ್ನೇ ಆಗಲಿ, ಬ್ರಾಹ್ಮಣ ಎಂದು ಒಪ್ಪಿಬಿಟ್ಟರೆ, ಅವನು ಸ್ಮೃತಿ ಶಾಸ್ತ್ರಗಳ ಆಧಾರದಿಂದ ಸರ್ವ ಜನರ ಪ್ರಭುವಾಗಿ, ಅಧಿಕಾರ, ಆಸ್ತಿಗಳ ಅಧಿಕಾರಿಯಾಗಿ, ತಾನು ಶ್ರೇಷ್ಠನೆಂಬ ಗರ್ವಿಷ್ಠನಾಗಿ ಮೆರೆಯುವ ಸಬಂಭವವಿದೆ. ಜಾತಿ, ಕುಲ, ವರ್ಣ, ಆಶ್ರಮಗಳ ಬಂಧನದಿಂದ ದೂರವಾದ ತ್ರಿಗುಣಾತೀತ ಪುರುಷನನ್ನು ಮಾತ್ರ ಬ್ರಾಹ್ಮಣನೆನ್ನಬೇಕು. ಇಂಥವರು ದಶ ಸಹಸ್ರಕ್ಕೊಬ್ಬರಿರುವುದೂ ವಿರಳ. ಆದ್ದರಿಂದ ಬ್ರಾಹ್ಮಣನೆನಬೇಡ, ದಶ ಸಹಸ್ರಕೊಬ್ಬನ.

**ಕಾಪು :**

ಆ ||
ಪರರಿಗಾಗಿ ಭೂಮಿ ಉತ್ತಿ ಬಿತ್ತಿ ಬೆಳೆದು,
ಅವನಿಪತಿಗೆ ವಶ್ಯ ಆಗಿ ಇಹನು.
ಹಾಲಿನಂಥ ಕುಲಜನಹನು 'ಕಾಪು' ಅರಿಯೆ.
ವಿಶ್ವದಾಭಿರಾಮ ಕೇಳು ವೇಮ.

ಆ ||
ಬೆವರು ಸುರಿಯುವಂತೆ, ಬಹಳ ತಪ್ಪಬಟ್ಟು,
ದುಡಿಮೆ ಗೆಯ್ದು ಕೂಳು ತಿನ್ನಬೇಕು.

ತಾಯಿ ತಂದೆ ಗಳಿಕೆ ತಾನು ತಿನಲು ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

'ಕಾಪು' ವೇಮನರ ಕಾಲಕ್ಕೆ ಪ್ರತ್ಯೇಕ ಜಾತಿಯೆಂದೇನೂ ಪರಿಗಣಿತವಾಗಿರಲಿಲ್ಲ. ಕಾಪು ಕುಲ ಎಂದರೆ ಕೃಷಿಕ ಕುಲ, ರೈತ ಕುಲ, ಒಕ್ಕಲಿಗರ ಕುಲ. ಈ ಕಾಪು ಕುಲದವರು ಪರರ ಹೊಟ್ಟೆಗೆ ಅನ್ನ ಒದಗಿಸಲೆಂದು ಭೂಮಿಯನ್ನು ಸಾಗುವಳಿ ಮಾಡಿ ಉತ್ತಿ ಬಿತ್ತಿ ಬೆಳೆಯನ್ನು ಉತ್ಪಾದಿಸುತ್ತಾರೆ. ಈ ಕೃಷಿ ಕೆಲಸವನ್ನು ಮಾಡಿ ಅವನಿ ಪತಿಗೆ ವಶ್ಯರಾಗಿ ಇರುತ್ತಾರೆ. ಹೇಗೆ ಹಾಲು ಸರ್ವರ ಆರೋಗ್ಯಕ್ಕೆ ಪೋಷಕವಾಗಿರುವುದೋ, ಆ ರೀತಿ ಕಾಪು ಕುಲಜನು ಸರ್ವರ ಸ್ವಾಸ್ಥ್ಯಕ್ಕೆ ಪೋಷಕನಾಗಿರುವನು.

ಒಬ್ಬನು ದುರಭಿಮಾನದಿಂದ ತನ್ನ ಮಾನ-ಮರ್ಯಾದೆಯ ಮಿತಿ ದಾಟಿ ನಡೆದರೆ, ಬೇರೆಯವರನ್ನು ನಿಂದಿಸಿ ಬೈಗುಳದ ಮಾತನಾಡಿದರೆ, ಅನ್ಯರೊಡನೆ ಜಗಳವಾಡಿದರೆ ಕಾಪು ಜನರು ಖಡ್ಗದಂತೆ ಆ ದುಷ್ಟ ನಡೆವಳಿಯನ್ನು ಕತ್ತರಿಸಿ ಬಿಡುತ್ತಾರೆ. ಯಾರಾದರೂ ತನ್ನ ಮನೆಯ ಮಾನವನ್ನು ಮರೆತು ತನಗೆ ಇನ್ನೂ ಭುಲೋಕ, ಭುವರ್ಲೋಕ, ಸ್ವರ್ಗಲೋಕಗಳಿವೆ, ಎಂದು ಗರ್ವಪಟ್ಟರೆ, ಕಾಪು ತನ್ನ ಮಾತಿನ ಖಡ್ಗದಿಂದ ಆಯೆಲ್ಲ ಜಲ್ಪಗಳನ್ನು ಖಂಡಿಸುತ್ತಾನೆ.

ಒಬ್ಬನು ತನ್ನ ಹೊಟ್ಟೆಯ ಹಸಿವೆಯನ್ನು ಹಿಂಗಿಸಿಕೊಳ್ಳಲು, ಪರಪುಟ್ಟನಾಗಬಾರದು. ಬೆವರು ಸುರಿಯುವಂತೆ ಬಹಳ ಕಷ್ಟಪಟ್ಟು ದುಡಿಮೆ ಮಾಡಿ, ಕೂಳು ತಿನ್ನಬೇಕು. ಆಗ ಮಾತ್ರ ತಿಂದ ಅನ್ನ ಚೆನ್ನಾಗಿ ಜೀರ್ಣವಾಗುತ್ತದೆ. (ಇದು ಮಧುಮೇಹ ರೋಗದ ಪರಿಹಾರವೂ ಕೂಡ). ತಂದೆ ತಾಯಿ ಗಳಿಸಿ ಇಟ್ಟಿರುವರೆಂದು ತಾನು ಆಲಸಿಯಾಗಿ ಕುಳಿತು ತಿನ್ನುವುದು ಸರಿಯಲ್ಲ.

ಆರ್ಯ ಎಂದರೆ ಸಂಚಾರಿ, ಈ ಸಂಚಾರಿ. ಆರ್ಯರ ಭೂಮಿ ಆರ್ಯನ್ನ ವ್ರಜ. ಇದುವೇ ಇಂದಿನ 'ಇರಾನ ವೇಜ'. ಈ ಇರಾನಿಯರು ಇಂದಿಗೂ ನಮ್ಮ ದೇಶದಲ್ಲಿ ಸಂಚಾರಿಗಳಾಗಿಯೇ ಇದ್ದಾರೆ. ಈ ಆರ್ಯರಿಗೆ ಒಂದೆಡೆ ಒಕ್ಕಲಿದ್ದು, ಒಕ್ಕಲುತನ ಮಾಡುವ ರೂಢಿ ಮೊದಲು ಇರಲಿಲ್ಲ. ತಾವು ಸಿಂಧೂ ನದಿಯ ನಾಡಾದ ಸಪ್ತಸಿಂಧು (ಸಿಂಧ, ಪಂಜಾಬ) ದೇಶಕ್ಕೆ ಆಗಮಿಸಿ ಇಲ್ಲಿಯ ಪುರವಾಸಿ ಒಕ್ಕಲಿಗರನ್ನು ಜಯಿಸಿದರು. ಈ ಆದಿವಾಸಿಗಳು ದಾನಶೀಲರಾದ ದಾಸ ಎನಿಸಿದವರಾಗಿದ್ದರು. ಅವರನ್ನು ಶೂದ್ರರೆಂದು ಆರ್ಯರು ಕರೆದರು. ಅವರು ಪರಾಜಿತರಾದುದರಿಂದ ಅನಾರ್ಯರಾಗಿ ಧರ್ಮ ಸಾಧನೆಯ ಅಧಿಕಾರವನ್ನು ಮತ್ತು ಆಸ್ತಿ ಒಡೆತನದ ಹಕ್ಕನ್ನು ಕಳೆದುಕೊಳ್ಳಬೇಕಾಯಿತು. ಆರ್ಯರ ಮೇಲು ವರ್ಗದ ಬ್ರಾಹ್ಮಣರಿಗೆ ಮತ್ತು ಕ್ಷತ್ರಿಯರಿಗೆ ಕೃಷಿಯಂಥ ಪರಿಶ್ರಮದ ಉದ್ಯೋಗ ಹಿಡಿಸಲಿಲ್ಲ. ಶೂದ್ರರಿಂದ (ದಾಸರಿಂದ) ಅದನ್ನು ಬಿಡಿಸಬೇಕಿತ್ತು. ಹೀಗಾಗಿ, ವೈಶ್ಯರೆಂದು ಕರೆಯುವ ಮೂರನೆಯ ವರ್ಣದವರಿಗೆ ದನಕರು ಸಂಪತ್ತನ್ನೂ ಕೃಷಿ ಕರ್ಮವನ್ನೂ ವ್ಯಾಪಾರದೊಂದಿಗೆ ಒಪ್ಪಿಸಿದರು. ಮೇಲಾಗಿ, ಕೃಷಿಯಂಥ ಹಾಲಿನಂಥ ವ್ಯವಸಾಯಕ್ಕೆ ಕೆಟ್ಟ ಹೆಸರು ಕೊಡಲೂ ಹಿಂದು ಮುಂದೆ ನೋಡಲಿಲ್ಲ.

"ವೈಶ್ಯನ ವೃತ್ತಿ ಧರ್ಮವಾದ ಕೃಷಿಯನ್ನವಲಂಬಿಸಿ, ಬದುಕುವ ಬ್ರಾಹ್ಮಣ ಹಾಗೂ ಕ್ಷತ್ರಿಯ, ಹಿಂಸಾಮಯವಾದ ಹಾಗೂ ಪರಾವಲಂಬನೆಯನ್ನು ಮಾಡಬೇಕಾದ, ಕೃಷಿಯನ್ನು ಯತ್ನಪಟ್ಟು, ಬಿಟ್ಟು, ಬಿಡಬೇಕು. (ಮ.ಸ್ಮೃ. 10-83).





"ಕೃಷಿಯು ಒಳ್ಳೆಯ ವೃತ್ತಿಯೆಂದು ಕೆಲವರು ಹೇಳುತ್ತಾರೆ. ಆದರೆ ಇದು ಸಜ್ಜನರಿಂದ ತಿರಸ್ಕೃತವಾದ ವೃತ್ತಿಯಾಗಿದೆ. ಏಕೆಂದರೆ ನೇಗಿಲಿನಿಂದ ಉಳುವಾಗ ಅದರ ಫಾಲಕ್ಕೆ ಸಿಕ್ಕು ಭೂಮಿಯಲ್ಲಿಯ ಅನೇಕ ಜೀವಜಂತುಗಳು ಸಾಯುತ್ತವೆ. (ಮ.ಸ್ಮೃ. 10-84). ಹೀಗೆ ಬ್ರಾಹ್ಮಣರು ಇತರ ವರ್ಣದವರಿಗೆ ಕರ್ತವ್ಯ ಕರ್ಮಗಳನ್ನು ನಿರ್ದೇಶಿಸುವಾಗ, ಅವರಿಗೆ ಆ ಜನರೇನೂ ಒಪ್ಪಿಗೆ ನೀಡಿರಲಿಲ್ಲ. ಹೀಗಾಗಿ ಬ್ರಾಹ್ಮಣ ಲಿಖಿತ, ಆದರೆ, ಆತನ ಜನರ ಸಮ್ಮತಿ ಪಡೆಯದ ಧರ್ಮ ಸೂತ್ರಗಳೆಂದು ಕರೆಯಲಾಗುವ ಸ್ಮೃತಿ ನಿಯಮಗಳನ್ನು ಇತರರು ಪಾಲಿಸಬೇಕಾಗಿಲ್ಲ.

ಎಲ್ಲವನ್ನೂ ಬ್ರಾಹ್ಮಣರೇ ಮಾಡಿ ಕೆಡಿಸಿದರು. ಶೋಷಣೆಗೆ ವಿವಿಧ ಮಾರ್ಗಗಳನ್ನು ಹುಡುಕಿಕೊಂಡರು, ಎಂದು ದಲಿತರು, ಶೋಷಿತರು, ದೂರುತ್ತ ಕೂಡ್ರುವುದರಿಂದ ಪರಿಸ್ಥಿತಿಯು ಸುಧಾರಣೆಯಾಗದು. ಯುಗ ಯುಗಗಳಲ್ಲಿ ಜಾತಿ ಭೇದ ಮಾಡದ, ವರ್ಣ ಭೇದ ಮಾಡದ ಜ್ಞಾನಿಗಳು ಇದ್ದೇ ಇರುತ್ತಾರೆ. ಅವರು ಸರ್ವ ಜನರಿಗೆ ಬೋಧಿಸುವ ನೀತಿ ಭೋದೆಯನ್ನೂ, ಧರ್ಮಬೋಧೆಯನ್ನೂ ಕೇಳಿ ಅಭ್ಯಸಿಸಿ ಮುಕ್ತರಾಗಬೇಕು.

ಉಂಟು ಉಂಟು ಜ್ಞಾನಿ ಯುಗಯುಗಾದಿ ಕಳೆಯೆ,
ಪ್ರಾಣ ಹಾನಿಯಿಲ್ಲ ಪ್ರಳಯವಿರಲು.
ಪ್ರಳಯವಿರಲು ಮತ್ತೆ ಪರಮಾತ್ಮನ ಸೇರುವ.
ವಿಶ್ವದಾಭಿರಾಮ ಕೇಳು ವೇಮ.

ಆಯಾ ಕಾಲಕ್ಕೆ ಜನತೆಗೆ ಸೂಕ್ತ ಬೋಧೆ ನೀಡುವ ಜ್ಞಾನಿಗಳು ಹುಟ್ಟಿಯೇ ಇರುತ್ತಾರೆ. ಪ್ರಳಯ ಕಾಲದಲ್ಲಿ ಸಹ ಸ್ಥೂಲ ದೇಹ, ಸ್ಥೂಲ ಪ್ರಪಂಚವು ಸೂಕ್ಷ್ಮದಲ್ಲಿ ಲಯಗೊಳ್ಳುವವೇ ಹೊರತು, ಪ್ರಾಣ ಶಕ್ತಿಯು ನಾಶವಾಗುವುದಿಲ್ಲ. ಪ್ರಳಯವಿದ್ದರೆ, ಅತಿ ಹೆಚ್ಚೆಂದರೆ, ಎಲ್ಲವೂ ಪರಮಾತ್ಮನನ್ನೇ ಸೇರುತ್ತದೆ.

ಗುಡಿಯ ದೇವರೆಂದು ಗುರುತು ನಿಲಿಸಿದವರು,
ಹಿಡಿಯ ಹಾರುವೆಂದು ಗೊಣಗಲೇಕೆ ?
ಮೂಢ ಜನಕೆ ಮೊದಲು ಮಾರ್ಗ ತೋರಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಮೇಲೆ ಹೇಳಿದಂತೆ ದಲಿತರ ಸ್ಥಿತಿಗೆ ಬ್ರಾಹ್ಮಣರೇ ಕಾರಣಕರ್ತರೆಂದು ಅವರನ್ನು ಜರಿಯುತ್ತ ಆಲಸಿಗಳಾಗಿ ಕುಳಿತುಕೊಳ್ಳುವುದು ತರವಲ್ಲ. ಕಲ್ಲಿನ ಗುಡಿಯಲ್ಲಿ ಕಲ್ಲಿನ ಮೂರ್ತಿಯನ್ನು ನಿಲ್ಲಿಸಿದವನು, ಹಿಡಿ ಕಾಸಿಗಾಗಿ ಹಪಾಪಿಸುವ ಬ್ರಾಹ್ಮಣನೆಂದು ಗೊಣಗುತ್ತ ಕೂಡ್ರುವುದು ಬೇಡ. ಮೂರ್ಖರ ದೇವರು ಕಲ್ಲು ಕಟ್ಟಿಗೆ, ಲೋಹಗಳಲ್ಲಿ ಇದ್ದಾನೆ. ಪಂಡಿತನ ದೇವರು ಅವನ ಹೃದಯದಲ್ಲಿ ಇದ್ದಾನೆ, ಎಂಬ ಅಮೃತವಾಣಿಯನ್ನು ಅರಿತು ಮನಗಂಡು, ಮುಂದೆ ತನಗೆ ಸೂಕ್ತ ಗುರುವನ್ನು ಸಂಧಿಸಿ ಮಾರ್ಗ ಅರಸಬೇಕು.

------

# ೧೫. ದುಶ್ಚರಿತಗಳು

ಮಾನವನ ಕರಣಗಳು ಮೂರು. ಕಾಯ, ವಾಕ್ ಮತ್ತು ಮನಸ್. ಮಾನವನು ಒಳ್ಳೆಯದನ್ನೇ ಮಾಡಲಿ, ಕೆಡುಕಾದುದನ್ನೇ ಮಾಡಲಿ, ಕಾಯಾ, ವಾಚಾ ಇಲ್ಲವೆ ಮನಸಾ ಮಾಡುತ್ತಾನೆ. ಹೀಗಾಗಿ ಅವನ ಚರಿತೆ ಇಲ್ಲವೆ ನಡೆವಳಿಯು ಸರಿಯಾಗಿರಬೇಕಾದರೆ ಅವನು ತ್ರಿಕರಣ ಶುದ್ಧಿಯನ್ನು ಕಾಪಾಡಿಕೊಂಡು ಬಾಳಬೇಕು.

ಮಾನವನು ತನ್ನ ಶರೀರದಿಂದ ಅಂದರೆ ಕಾಯಾ ಮಾಡುವ ಅಧರ್ಮಾಚರಣೆಗಳೆಂದರೆ, ಪ್ರಾಣಿ ಹಿಂಸೆ, ಕ್ಕೊಲೆ-ಸುಲಿಗೆ, ಕಾದಾಟ ಬಡಿದಾಟಗಳಲ್ಲಿ ತೊಡಗುತ್ತಾನೆ. ಕಳವು ಮಾಡುತ್ತಾನೆ. ವ್ಯಭಿಚಾರ ಮಾಡುತ್ತಾನೆ. ಜೂಜಾಟಗಳಲ್ಲಿ ಆಸಕ್ತನಾಗುತ್ತಾನೆ. ಮದ್ಯಾಸಕ್ತನಾಗುತ್ತಾನೆ.

## ಪ್ರಾಣಿ ಹಿಂಸೆ :

ಆ ||

ಹಿಂಸೆ ಗೆಯ್ಯದಿಹುದೆ ಮುಖ್ಯ ಧರ್ಮವಯ್ಯ.
ಪ್ರಾಣಿ ಕೊಂದು ತಿನ್ನುವವರಿಗಿಂತ,
ಸತ್ತ ಪಶುವ ತಿಂಬ ಚಂಡಾಲನೇ ಮೇಲು
ವಿಶ್ವದಾಭಿರಾಮ ಕೇಳು ವೇಮ.

ಆ ||

ಹಕ್ಕಿ ಜಾತಿ ಹಿಡಿದು ಹೆಚ್ಚು ಹಿಂಸೆ ಗೆಯ್ದು,
ಹೊಟ್ಟೆ ತುಂಬ ಕಾಳು ಹಾಕಿ ತುರುಕಿ,
ಅಟ್ಟು ತಿನ್ನುವವನು ಅವನಿ ಚಂಡಾಲನು.
ವಿಶ್ವದಾಭಿರಾಮ ಕೇಳು ವೇಮ.

ಆ ||

ಪಕ್ಷಿ ಕುಲವ ಹಿಡಿದು ಮಿಗಿಲು ಹಿಂಸೆ ಗೆಯ್ದು,
ಗೂಡು ಮಾಡಿ ಅಲ್ಲಿ ಕೂಡಿ ಹಾಕಿ,
ಇರಿಸುವವಗೆ ವಂಚಿಸಿರ್ದ ದೋಷ ಬರದೆ ?
ವಿಶ್ವದಾಭಿರಾಮ ಕೇಳು ವೇಮ.

ಆ ||

ಜಿಹ್ವೆ ರುಚಿಯ ಕೋರಿ ಜೀವಿಸಿರುವ ತನಕ,
ಸತಿಯ, ಪತಿಯ, ಕೋರಿ, ಸುತರ, ಧನವ,
ಅಗ್ನಿ ಹೋತ್ರಿ ನೋಡು ಅವನೆಲ್ಲ ಕೋರುವ.
ವಿಶ್ವದಾಭಿರಾಮ ಕೇಳು ವೇಮ.

ಮನುಷ್ಯನು ನಾಲಗೆಯ ರುಚಿಯನ್ನು ಕೋರಿ ಜೀವಿಸಿರುವ ವರೆಗೆ ಅವನಿಗೆ ಅನ್ನ ಮದದಿಂದ ಇನ್ನು ಮದಗಳೆಲ್ಲ ಅಂಟುತ್ತವೆ. ಅವನು ಯಜ್ಞದಂಥ ಕಾಮ್ಯ ಕರ್ಮಗಳನ್ನು





ಕೈಕೊಳ್ಳುವ ಹೇತುವೇನೆಂಬುದು ಗೊತ್ತೆ ? ಅವನು ಸತಿಯನ್ನು, ಕೋರುತ್ತಾನೆ, ಸುತನನ್ನು ಕೋರುತ್ತಾನೆ. ಧನವನ್ನು ಕೋರುತ್ತಾನೆ. ದಾರೇಷಣ, ಪುತ್ರೇಷಣ ಮತ್ತು ವಿತ್ತೇಷಣಗಳೆಂಬ ಈಷಣತ್ರಯಗಳಲ್ಲಿ ಸಿಕ್ಕು ಬೀಳುತ್ತಾನೆ. ಬ್ರಹದೇಷಣವನ್ನು ಮಾತ್ರ ಮರೆಯುತ್ತಾನೆ. ಅಗ್ನಿಹೋತ್ರಿಯು ಅಂದರೆ ಯಜ್ಞಕ್ಕಾಗಿ ಅಗ್ನಿಯನ್ನು ಕಾಯುವವನು. ಇವುಗಳನ್ನೆಲ್ಲ ಕೋರುತ್ತಾನೆ. ಅವನಿಗೆ ಮದವೇರಿಸುವ ಸೋಮಪಾನವೂ ಇಷ್ಟ. ಅದಕ್ಕಿಂತ ಹೆಚ್ಚಾಗಿ ಯಜ್ಞ ಶೇಷವಾದ ಮಾಂಸಕ್ಕೆ ಬ್ರಾಹ್ಮಣರು ಮಾತ್ರ ಅಧಿಕಾರಿಗಳು ; ಬೇರೆಯವರೇನಾದರೂ ಅದನ್ನು ತಿಂದರೆ, ಮನುಷ್ಯರನ್ನೇ ತಿಂದಷ್ಟು ಪಾಪ ಅವರಿಗೆ ಅಂಟುತ್ತದೆ, ಎಂದರು ವೈದಿಕರು.

ಆ ||

ಪಂಚಮ ವೇದವೆನೆ, ಭಾರತವೆ ಎನ್ನುತ,
ಸ್ತುತಿಪರೇಕೆ ಜನ ಮತಿಯ ತೊರೆದು ?
ಹಿಂಸೆಯರಿತು ನೋಡೆ, ಇಷ್ಟವೆಂತಪ್ಪುದು ?
ವಿಶ್ವದಾಭಿರಾಮ ಕೇಳು ವೇಮ.

ಮಹಾಭಾರತದಲ್ಲಿ ಸೋದರರ ಕಗ್ಗೊಲೆಯ ದೀರ್ಘ ಬಣ್ಣನೆಯೇ ಇದೆ. ಇಂಥ ಹಿಂಸೆಯನ್ನು ಪ್ರೋತ್ಸಾಹಿಸುವ, ಪ್ರೇರಿಸುವ, ಗೌರವಿಸುವ, ಇತಿ ಕಥೆಯನ್ನು ಐದನೆಯ ವೇದವೆಂದು ಬುದ್ಧಿಗೇಡಿ ಜನರು ಬಣ್ಣಿಸುವರೇಕೋ ? ತಿಳಿದು ನೋಡಿದರೆ, ಹಿಂಸೆಯೇನು ಯಾರಿಗಾದರೂ ಇಷ್ಟವೆನ್ನಿಸುವುದೇ ?

## ಕೊಲೆ ಸುಲಿಗೆ :

ಬಹಳ ಜನರ ಇರಿದು, ಬಡವರನ್ನು ವಧಿಸಿ,
ಸುಲಿದು ಕೊಳ್ಳೆ ಹೊಡೆದು, ಹೊಟ್ಟೆ ಹೊರೆದು,
ಎತ್ತ ಕಡೆಗೆ ಹೋದರೇನು ? ಯಮನು ಬೆನ್ನು ಬಿಡನು.
ವಿಶ್ವದಾಭಿರಾಮ ಕೇಳು ವೇಮ.

ಕೆಲವು ಜನರು ಧರ್ಮವನ್ನೇ ಅರಿಯರು. ತಮ್ಮ ದುಷ್ಟ ಕರ್ಮಗಳಿಂದ ಬರುವ ಪಾಪವನ್ನು ಅರಿಯುವುದಿಲ್ಲ. ಸಂಪತ್ತು ಅಪಹರಿಸಲು ಜನರನ್ನು ಇರಿದು ಕೊಲ್ಲುತ್ತಾರೆ. ಬಡಜನರ ವಧೆಯನ್ನು ಮಾಡುತ್ತಾರೆ. ಹಾದಿಹೋಕರನ್ನು ಸುಲಿದು ಕೊಳ್ಳೆ ಹೊಡೆಯುತ್ತಾರೆ. ಎಲ್ಲವನ್ನೂ ತಮ್ಮ ಮತ್ತು ತಮ್ಮ ಬಂಧುಗಳ ಹೊಟ್ಟೆ ಹೊರೆಯಲೆಂದು ಮಾಡುತ್ತಾರೆ. ಕಡೆಗೆ ಅಪರಾಧದಿಂದ ತಪ್ಪಿಸಿಕೊಳ್ಳಲು ತಲೆ ಮರೆಸಿ ತಿರುಗುತ್ತಾರೆ. ಆದರೆ ಎತ್ತ ಹೋದರೇನು ? ರಾಜದಂಡವು ಯಮನಂತೆ ಬೆನ್ನಬಿಡದೆ ಬೆನ್ನು ಹತ್ತುತ್ತದೆ.

## ಜಗಳ-ಕಾದಾಟ :

ಆ ||

ಪೂರ್ಣವಾಗಿ ತನ್ನ ಭುಜಬಲವನೆ ಕಾಣುತ,
ಭುವಿಯಲಿ ದುಷ್ಟ ಜೊತೆ, ಬೇಡ ಜಗಳ
ಹಾಳು ಗಡಿಗೆಗೆಸೆಯೆ, ಸೀಳುವುದೆ ಆ ಶಿಲೆ ?
ವಿಶ್ವದಾಭಿರಾಮ ಕೇಳು ವೇಮಾ.

ಶೂರನಾದ ಮನುಷ್ಯನು ತನ್ನ ಸಾಮರ್ಥ್ಯವನ್ನು ತಾನು ತಿಳಿದುಕೊಂಡು, ಈ ಭೂಮಿಯ ಮೇಲಿನ ದುಷ್ಟ ಜನರೊಂದಿಗೆ ಜಗಳ-ಕಾದಾಟಗಳಿಗೆ ಹೋಗಬಾರದು. ಏನ್ನೇ ಆಗಲಿ ; ಆ ದುಷ್ಟರು ಹಾಳು ಗಡಿಗೆಯಂತೆ. ಅವರಿಗೆ ಕಲ್ಲೆಸೆದರೆ, ಆ ಕಲ್ಲಿಗೇನೂ ಆಗದು. ಆ ಹಾಳು ಗಡಿಗೆಯೇ ಚೂರಾಗುತ್ತದೆ. ಆದರೆ ಅದರಿಂದ ಪ್ರಯೋಜನವೇನು ? ಹಾಳು ಗಡಿಗೆ ಎರಡು ಚೂರಾದರೇನು? ನಾಲ್ಕಾದರೇನು ?

ಯುದ್ಧ ಕಾದಾಟಗಳಲ್ಲಿ ತನ್ನ ಬಲದ ಅರಿವು ಮುಖ್ಯ. ತನ್ನ ಸ್ವಂತ ಬಲದ ಸರಿಯಾದ ಸಮೀಕ್ಷೆ ನಡೆಸಿ, ಪರಬಲದೊಂದಿಗೆ ಕಾದಾಟ ಪ್ರಾರಂಭಿಸಬೇಕು.

ಆ ॥ ಎದುರಾಳಿಯ ಬಲವು ಎಷ್ಟು ಎಂದೆಣಿಸಿದೆ,
ಎದುರಾಗುವ ಛಲದಿ ಎದುರಾಗಲು,
ಕರಡಿ ಉರಿಯ ಸುತ್ತಿ ಕುಣಿದು ಸುಟ್ಟ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಎದುರಾಳಿಯೊಂದಿಗೆ ಕಾದಾಟಕ್ಕಿಳಿಯುವ ಮುನ್ನ ತಮ್ಮ ಬಲದ ಅರಿವು ಅತಿ ಅವಶ್ಯ. ತಮ್ಮ ಬಲದ ವಿಶೇಷ ವಿಮರ್ಶೆ ಮಾಡದೆ ಎದುರಾಗುವ ಛಲದಿಂದ ಎದುರಾದರೆ ಸುಮ್ಮನೇ ಅಪಾಯವನ್ನು ಆಮಂತ್ರಿಸಿದಂತೆ ಆಗುತ್ತದೆ. ಕರಡಿಯೊಂದು ಉರಿಯ ನೆರವಿನಲ್ಲಿ ಕುಳಿತ ಜನರನ್ನು ಕಂಡು ಹಾರಿ ಹಿಡಿಯ ಹೋದರೆ, ಅದರ ರೋಮಗಳು ಝಳಕ್ಕೆ ಸುಟ್ಟು, ಗಾಯವಾಗುತ್ತದೆ. ಬರಿ ಹಾರಾಟವಷ್ಟೇ ಅಲ್ಲದೆ ಬೇಟೆಯೇನೂ ಸಿಕ್ಕದು.

## ಕಳವು :

ಮನುಷ್ಯನು ಅಲ್ಪತೃಪ್ತನಲ್ಲ. ತನಗೆ ಸಿಕ್ಕಿದಷ್ಟೂ ಮತ್ತಷ್ಟು ಬೇಕೆಂದು ಹಪಾಪಿಸುತ್ತಾನೆ.

ಆ ॥ ಇಲಿಯ ಹಿಡಿಯೆ ಬೆಕ್ಕು, ಇಷ್ಟ ಪೂರ್ತಿಯಹುದೆ ?
ಕೋಳಿ ಹಿಡಿಯೆ ಮತ್ತೆ ಕೋರುತಿಹುದು
ಮಮತೆ ತೊರೆಯದನಕ ಮುಕ್ತಿ ಕುದುರದಲ್ಲ ?
ವಿಶ್ವದಾಭಿರಾಮ ಕೇಳು ವೇಮ.

ಹಸಿವೆಯಾದಾಗ ಬೆಕ್ಕು ಇಲಿಯೊಂದನ್ನು ಹಿಡಿಯುತ್ತದೆ. ಅದು ಬೆಕ್ಕಿನ ಹಸಿವನ್ನು ಹಿಂಗಿಸಬಹುದು. ಆದರೆ ಬೆಕ್ಕಿಗೆ ಇನ್ನಷ್ಟು ಬೇಕೆಂಬ ಆಸೆ ಹುಟ್ಟುತ್ತದೆ. ಅದು ಇಲಿಯನ್ನು ಕೊಂದು ಅಲ್ಲಿಯೇ ಇರಿಸಿ ಕೋಳಿಯನ್ನು ಕಂಡು, ಹಿಡಿಯಲು ಧಾವಿಸುತ್ತದೆ. ತನಗೆ ಇನ್ನಷ್ಟು ಬೇಕು, ಮತ್ತಷ್ಟು ಬೇಕು, ಎಂಬ ಮಮತೆ ತೊರೆಯುವ ತನಕ ತನಗೆ ಮುಕ್ತಿಯಾಗದು.

ಆ ॥ ಕಳ್ಳ ಯಾತ್ರೆ ಗೆಯ್ದು ಗಂಟು ಬಿಚ್ಚಿ ನೋಳ್ಪ ;
ಕೈಯ ಮುಗಿಯೆ ಮನದಿ ಕಾಲ ಸಿಗದು.
ಸೊಣಗ ಮನೆಯ ಹೊಕ್ಕು ಮಡಿಕೆ ಹುಡುಕುವಂತೆ.
ವಿಶ್ವದಾಭಿರಾಮ ಕೇಳು ವೇಮ.

ಕಳ್ಳನೊಬ್ಬನು ತೀರ್ಥ ಯಾತ್ರೆ ಕೈಕೊಳ್ಳುತ್ತಾನೆ. ಅವನ ದುಶ್ಚರಿತ್ರೆ ಅವನನ್ನು ಅಲ್ಲಿಯೂ





ಬಿಡದು. ಒಡೆಯರು ತಮ್ಮ ಗಂಟುಗಡದಿ ಒಂದೆಡೆ ಇರಿಸಿ ಹೋಗಿದ್ದರೆ, ಇವನು ಆ ಗಂಟುಗಡದಿಯ ಕಡೆಗೆ ಹೋಗಿ ಏನಾದರೂ ಸಿಕ್ಕೀತೆಂದು ಗಂಟು ಬಿಚ್ಚುತ್ತಾನೆ. ಇಂಥ ಕಳ್ಳನಿಗೆ ದೇವಮೂರ್ತಿಯ ಕಡೆಗೆ ಕೈ ಮುಗಿಯಲು ಕಾಲವೂ ಸಿಗದು. ನಾಯಿ ಮನೆಯನ್ನು ಒಳಹೊಕ್ಕರೆ, ಅದು ಗಡಿಗೆ ಮಡಿಕೆಗಳಲ್ಲಿ ಏನಾದರೂ ತಿನ್ನಲು ಸಿಕ್ಕಬಹುದೆಂದು ಅಲ್ಲಿ ಹುಡುಕುತ್ತಿದೆ. ಅಂತೆಯೇ ಗುಡಿಗೆ ಹೋದ ಕಳ್ಳನ ರೀತಿ.

## ವ್ಯಭಿಚಾರ :

ಆ ॥ ಪರಸತಿ ಗಮನವು ಪ್ರತ್ಯಕ್ಷ ನರಕವು ;
ಅರಿಯೆ ನಿಂದೆಗೆಲ್ಲ ಆಲಯವ್ವೆ.
ಪುರುಷ ಕೇಳೆ ಕೊಲುವ ; ಭೂಪತಿ ಕಾಡುವನು.
ವಿಶ್ವದಾಭಿರಾಮ ಕೇಳು ವೇಮ.

ಸಮಾಜ ಸಂಬಂಧಗಳು ಸುಮಧುರವಾಗಿರಬೇಕಾದರೆ, ತನ್ನ ಪತ್ನಿಯನ್ನಲ್ಲದೆ ಪರಸ್ತ್ರೀಯರನ್ನು ಸೇರಿದರೆ, ಪ್ರತ್ಯಕ್ಷ ನರಕದ ಅನುಭವವೇ ಆಗುತ್ತದೆ. ಅದರಿಂದ ನೀತಿಗೇಡಿ, ಕಾಮುಕ ಎಂಬ ನಿಂದೆಗಳಿಗೆ ಆಲಯವನ್ನೇ ಒದಗಿಸಿದಂತಾಗುತ್ತದೆ. ಕೊನೆಗೆ ಆ ಸ್ತ್ರೀಯ ಗಂಡನಿಗೆ ಗೊತ್ತಾದರಂತೂ ತೀರಿತು. ಸ್ವಾಭಿಮಾನದಿಂದ ಅವನು ಕೊಂದೇ ಬಿಡುವನು. ರಾಜನಿಗೆ ತಿಳಿದರೂ ಸಾಕು, ಅವನೂ ಕಾಡಿಸಲು ಪ್ರಾರಂಭಿಸುತ್ತಾನೆ.

ಪುರುಷರು ತಮ್ಮ ಕಾಮ ಕೇಳಿಯನ್ನು ಪತ್ನಿಗೆ ಮಾರ್ಯಾದೆಗೊಳಿಸಿದರೆ ಗೃಹಸ್ಥ ಧರ್ಮವಾಗುತ್ತದೆ. ಆದರೆ ಅನೇಕರು ಸತ್ಪಥದಿಂದ ಜಾರಿ, ಪರಸ್ತ್ರೀಗಮನ ಮಾಡುವ ಉದಾಹರಣೆಗಳು ಸಾಕಷ್ಟು ಉಂಟು. ಇಂಥಹ ಸಡಿಲುಗಚ್ಚೆಯವರು ಸಾಮಾಜಿಕ ಸ್ವಾಸ್ಥ್ಯವನ್ನೂ, ಕೌಟುಂಬಿಕ ಶಾಂತಿಯನ್ನೂ, ಹಾಗೂ ವೈಯಕ್ತಿಕ ಶ್ರೇಯಸ್ಸನ್ನೂ ನೆನೆದು, ಈ ಹಾದಿಯಿಂದ ದೂರವಾಗದಿದ್ದರೆ ಕೇಡು.

ಆ ॥ ಸತಿಯು ರಂಭೆಯಿರಲು, ಸುಶೀಲವತಿಯಿರಲು,
ಜಾರ ಪುರುಷನೆಂತು ಜಾಡು ಬಿಡುವ ?
ಹೊಲಗೇರಿಯ ನಾಯಿ ತಿರುಗುತಿರುವ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ತಾನು ರಕ್ಷಿಸಬೇಕಾದ ಸತಿಯು ರಂಭೆಯಂತೆ ಸುರಸುಂದರಿಯೂ ಮಂಡೋದರಿಯಂತೆ ಸುಶೀಲವಂತೆಯೂ, ಆಗಿದ್ದರೇನು ? ಸ್ವಭಾವತಃ, ಜಾರನಾದ ಪುರುಷನು ತನ್ನ ಜಾಡನ್ನು ಅಂದರೆ ಚಾಳಿಯನ್ನು ಹೇಗೆ ಬಿಡುವನು ? ಹೊಲಗೇರಿಯ ನಾಯಿಯು ಮಾಂಸದ ರುಚಿಗಾಗಿ ಅತ್ತಿಂದಿತ್ತ ತಿರುಗಾಡುತ್ತಿರುವ ರೀತಿಯಲ್ಲಿ ಜಾರಪುರುಷನು ಪರಸ್ತ್ರೀಯ ಬೆನ್ನು ಹತ್ತಿ ತಿರುಗುತ್ತಾನೆ.

ಕಂ. ಒಡ್ಡಿದ ಸತಿಯೊನಪರಿಯನೆ ?
ಮೌಢ್ಯದಿ ಬಿದ್ದನವ ಹೊರತು, ಜಾರನೆನಿಸನೇ ?
ಅಡ್ಡಾ ತಿಡ್ಡ ಅಲೆಯುತಿರೆ,
ಕೊಡ್ಡವರಿಯಬಲ್ಲದೆ ಹಾಲ ಸವಿಯ ? ವೇಮಾ.

ತಾನು ಮದುವೆ ಮಾಡಿಕೊಂಡ ಸತಿಯು ತನ್ನ (ಪತಿಯ) ಎಡೆಗೆ ತನ್ನನ್ನು ಒಡ್ಡಿಕೊಂಡಿರಲು ಅವಳ ಮಧುರ ಸಂಬಂಧಗಳನ್ನು ಪತಿಯು ಅರಿಯನೇನು ? ಇಲ್ಲ. ಅವನು ಯಾವಳೋ ಪರಸ್ತ್ರೀಯ ಮೋಹದಲ್ಲಿ ಸಿಲುಕಿ ಮೂಢನಾಗಿರುತ್ತಾನೆ. ಹೀಗೆ ಮೌಢ್ಯದಲ್ಲಿ ಅವನು ಪರಸ್ತ್ರೀಯನ್ನು ಮೋಹಿಸಿ ಅಡ್ಡಾತಿಡ್ಡ ಅಲೆದಾಡುತ್ತಿದ್ದರೆ, ಜಾರನೆನಿಸದೆ ಇರುವನೇ ? ಮಧುರ ಪ್ರೀತಿಯು ಇಂಗಿ ಹೋದ ಕೊಡ್ಡದಂತಾಗಿದ್ದ ಜಾರ ಪುರುಷನಿಗೆ, ಮಧುರ ಹಾಲಿನಂಥ ಪತ್ನೀ ಪ್ರೇಮದ ಸವಿಯು ತಿಳಿಯುವುದೆಂತು ?

ಆ || ಅಂಗ ಭಾವವೆಲ್ಲ ಅರಿತು ನೋಡಲಾಗ,
ಅಖಿಲ ಹೇಯಗಳಿಗೆ ಆಲಯವದು.
ಅನ್ಯ ಲಲನೆ ಸಂಗ ಅದು ಪ್ರತ್ಯಕ್ಷ ನರಕವು.
ವಿಶ್ವದಾಭಿರಾಮ ಕೇಳು ವೇಮ.

ತುಂಬಿದ ಎದೆಯನ್ನೂ, ತೂಗುವ ಮೊಲೆಗಳನ್ನೂ, ಉಬ್ಬಿದ ನಿತಂಬವನ್ನೂ, ಹೊಲಸಿನ ಮೂತ್ರ ದ್ವಾರವನ್ನೂ ಹೊಂದಿರುವ, ಅಂಗದ ಹಾವ ಭಾವಗಳನ್ನು ರತಿ ಕ್ರೀಡೆಯ ಪ್ರಸಂಗದಲ್ಲಿ ಅರಿತು ನೋಡಿದಾಗ, ಈ ಅಂಗವೇ ಎಲ್ಲ ಹೇಯಗಳಿಗೆ ಆಲಯವೆನಿಸುವುದು. ಹೀಗಿರುವಾಗ ಕೇವಲ ಕಾಮಕ್ರೀಡೆಗಾಗಿ ಮಾಡುವ ಅನ್ಯ ಲಲನೆಯ ಸಂಗವು ಪ್ರತ್ಯಕ್ಷ ನರಕವೆನಿಸದಿರದು.

ಆ || ಅಧಮ ಪಾಪಿ ನರನು ಅನ್ಯರ ಸತಿ ಕೋರಲು,
ಜಿಹ್ವೆ ರುಚಿಗೆ ಮೀನು ಸಿಲಕಿದಂತೆ.
ಜೇನು ರುಚಿಗೆ ಬಿದ್ದು ಸಾಯದೇನು ನೊಣವು ?
ವಿಶ್ವದಾಭಿರಾಮ ಕೇಳು ವೇಮ.

ತನ್ನ ಸತಿಯನ್ನು ಬಿಟ್ಟು ಅನ್ಯರ ಸತಿಯ ಜೊತೆ ಸಂಭೋಗ ಕೋರಿದರೆ, ಏನಾಗುತ್ತದೆ? ಮೀನು ಹಿಡಿಯುವವನು ಗಾಳಕ್ಕೆ ಹುಳುವನ್ನು ಕಟ್ಟಿ ಬಿಟ್ಟಾಗ ಅದನ್ನು ನುಂಗಲು ಮೀನು ಧಾವಿಸಿ ದಾಳದಲ್ಲಿ ಸಿಲುಕಿದಂತಾಗುತ್ತದೆ. ದಾಳ ಬೀಸುವವನು ಅದನ್ನೆತ್ತಿ ತನ್ನ ಬುಟ್ಟಿಗೆ ಸೇರಿಸುತ್ತಾನೆ. ನೊಣವು ಜೇನು ಹನಿ ಬಿದ್ದಾಗ ಅದನ್ನು ಸವಿಯಲು ಹೋಗಿ ಅದರ ಜಿಗುಟನಲ್ಲಿ ಸಿಕ್ಕು ಸಾಯುವಂತೆ ಅನ್ಯರ ಸತಿಯ ಭೋಗ ಕೋರುವವನ ಗತಿಯೂ ಆಗುತ್ತದೆ.

ಆ || ಮನೆಯ ಮಡದಿ ಬಿಟ್ಟು, ಜಾರ ಕಾಂತೆಯೊಡನೆ,
ಬೆನ್ನು ಹತ್ತಿ ತಿರುಗುತಿಪ್ಪ ಹುಚ್ಚ.
ತೆನೆಯ ಪೈರು ಬಿಟ್ಟು ಕರಿಕೆ ಕೀಳುವಂತೆ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಮನೆಯಲ್ಲಿ ಇರುವ ಗೃಹಿಣಿಯಾದ ಮಡದಿಯು ಬೀಜ ಊರಲು ತಕ್ಕ ಕ್ಷೇತ್ರವಾಗಿದ್ದಾಳೆ. ಅವಳಿಂದ ಪಡೆದ ಮಗನು ಔರಸ ಪುತ್ರನೆನಿಸಿ, ಉತ್ತರಾಧಿಕಾರಿಯಾಗಬಹುದು. ಇಂಥವಳನ್ನು ಬಿಟ್ಟು ಶೀಲಗೆಟ್ಟ ಪರಸ್ತ್ರೀಯಲ್ಲಿ ಕ್ರೀಡಿಸುವವನು, ಅವಳ ಬೆನ್ನು ಹತ್ತಿ ತಿರುಗುವವನು ಹುಚ್ಚನಷ್ಟೇ. ತೆನೆಯ ಪೈರನ್ನು ಕೊಯ್ಲು ಮಾಡುವುದನ್ನು ಬಿಟ್ಟು, ಕರಿಕೆಯನ್ನು ಕಿತ್ತಂತೆ ಅವನ ಕೆಲಸವಾಗುತ್ತದೆ.





ವ್ಯಭಿಚಾರಕ್ಕಿಳಿದ ಪುರುಷನು ಜಾರನೆನಿಸಿದರೆ, ತನ್ನ ಪತಿವ್ರತಾ ಧರ್ಮದ ಮಾರ್ಗದಿಂದ ಜಾರಿ, ವ್ಯಭಿಚಾರಕ್ಕಿಳಿದವಳನ್ನು ಜಾರೆ ಎನ್ನುತ್ತಾರೆ. ದುಡಿದು ಪೋಷಿಸಲಾಗದ ಪತಿಯ ಹೊಣೆಗೇಡಿತನದಿಂದಾಗಲಿ, ಇಲ್ಲವೆ ತನ್ನ ಸ್ವಂತ ಅಂಕೆಗೆ ಮೀರಿದ ಹೊಸ್ತಿಲು ದಾಟಿದ ಒತ್ತಡದಿಂದಾಗಲಿ, ಇಲ್ಲವೆ ಸ್ವಂತ ಮಾನಸ ಚಪಲದಿಂದ ಹೊಸ್ತಿಲು ದಾಟಿದ, ವಿವಾಹಿತ ಹೆಣ್ಣಿನ ಹಲವು ಮುಖಗಳನ್ನು ಗಮನಿಸುವುದು ಲೇಸು.

ಆ || ಹಿತ್ತಲ ಗಿಡ ನೆಟ್ಟು, ಪರಿಕಿಸುತ ಇದ್ದೊಡೆ,
ಬೇಲಿ ದಾಟಿ ಬಳ್ಳಿ, ಬಯಲ ಹೊಕ್ಕ,
ಅಂತೆ ಆಗುತಿಹುದು ; ಅಂಗನೆಯರ ಗುಣವು.
ವಿಶ್ವದಾಭಿರಾಮ ಕೇಳು ವೇಮ.

ತಮ್ಮ ಹಿತ್ತಲ ಬೇಲಿ ಹಾಕಿ, ಅದರೊಳಗೆ ಬಳ್ಳಿಯ ಬೀಜವನ್ನು ನೆಟ್ಟು ಅದರ ಬೆಳವಣಿಗೆಯನ್ನು ನೋಡುತ್ತಿರಬೇಕು. ಅದು ಬೆಳೆದು ಕುಡಿಯೊಡೆಯುತ್ತ ಹಬ್ಬತೊಡಗುತ್ತದೆ. ಬೇಲಿಯನ್ನು ಸುತ್ತಿ ಬೆಳೆಯುತ್ತದೆ. ಕೊನೆಗೆ ಬೇಲಿಯನ್ನು ದಾಟುತ್ತದೆ. ಬಯಲನ್ನು ಸೇರುತ್ತದೆ. ಅದೇ ರೀತಿ, ಅಂಗನೆಯ ಗುಣವು ಸಮಾಜ ಹಾಕಿದ ಮರ್ಯಾದೆಯ ಬೇಲಿಯನ್ನು ದಾಟಿ, ಪರ ಪುರುಷರೊಡನೆ ಸ್ವಚ್ಛಂದವಾಡುವ ಬಯಲಿಗೆ ಬರುತ್ತದೆ.

ಆ || ಚೊಕ್ಕವಾಗಿರುವನ ಅಕ್ಕರೆಯಿಂದ ನೋಡೆ,
ತಕ್ಕನಲ್ಲವೆನಿಪ ತನ್ನ ಗಂಡ.
ಜಾರೆ ಬುದ್ಧಿಯಷ್ಟೆ, ಒರೆಯ ಬುದ್ಧಿಯಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಜಾರೆ ಬುದ್ಧಿಯ ಸ್ತ್ರೀಯು ಸುಂದರನಾದ, ದಷ್ಟ ಪುಷ್ಟ ದೇಹದ, ಸಾಕಷ್ಟು ಧನಿಕನಾದ ಪರಪುರುಷನನ್ನು ಆಸೆಬಟ್ಟು ಅಕ್ಕರೆಯಿಂದ ನೋಡಿದರೆ, ತನ್ನ ಗಂಡನೇ ತನಗೆ ತಕ್ಕವನಲ್ಲವೆಂಬ ಭಾವನೆ ಕುದುರುತ್ತದೆ. ಈ ರೀತಿಯಾಗುವುದು, ಜಾರೆ ಬುದ್ಧಿಯಿಂದ ನೋಡಿದಾಗ ಮಾತ್ರ. "ಪಾಲಯತಿ ಇತಿ ಪತಿಃ" ಎಂದು ಇಲ್ಲವೆ ಭರ್ತನಾದುದರಿಂದ ಅಂದರೆ ಪೋಷಿಸುವನಾದ್ದರಿಂದ ಗಂಡ ಎಂಬ ಒರೆಯ ಬುದ್ಧಿಯಿಂದ ವಿವೇಚಿಸಿದಾಗ ಹಾಗೆನ್ನಿಸದು.

ಆ || ಮದನನಂಥ ಪತಿಯು ಮುದದ ಬಾಳಿರಲೇನು ?
ನೀತಿ ಗೇಡಿ ಜಾರೆ-ಗುಣ ತೊರೆವಳೆ ?
ಹಾಲು ಕುಡಿವ ನಾಯಿ ಹೇಸಿಗೆಯ ತೊರೆವುದೆ ?
ವಿಶ್ವದಾಭಿರಾಮ ಕೇಳು ವೇಮ.

ಒಬ್ಬಳಿಗೆ ಕಾಮನಂಥ ಅತಿ ಸುಂದರ ಪತಿಯು ಇರಬಹುದು. ಮೇಲಾಗಿ, ಪ್ರೇಮ ಉಕ್ಕುವ ಮುದವಾದ ಬಾಳುವೆಯೂ ಇರಬಹುದು. ಆದರೇನು ? ನೀತಿಗೆಟ್ಟ, ಜಾರೆಯು ತನ್ನ ಗುಣವನ್ನು ಬಿಡುವಳೇ ? ನಾಯಿಗೆ ಹಾಲು ಬಿಸ್ಕೀಟು ತಿನ್ನಿಸಿದರೇನು ? ಅದು ತನ್ನ ಕೀಳು ರುಚಿಯ ಹೇಸಿಗೆಯನ್ನು ಆಶಿಸಿ ಸುತ್ತಾಡುವುದನ್ನು ಬಿಡುವುದೇ ಇಲ್ಲ.

ಕಂ. ನಭವಾದರು ಹೊಂದಬಹುದು,
ಇಭವನು ನಿಗ್ರಹಿಸಬಹುದು, ಸುಲಭದಿ ಕಾಣಾ.
ವ್ಯಭಿಚಾರಿಯ ಮನ ನಿಲಿಸಲು,
ಪ್ರಭುವಿಗು ಅಸಾಧ್ಯವಾಗಿಹ ಚಾಳಿಯು, ವೇಮಾ.

ಏನಾದರೂ ಪ್ರಯತ್ನ ಮಾಡಿ, ನಭವನ್ನಾದರೂ ಅಂದರೆ ಆಕಾಶವನ್ನಾದರೂ ಹೊಂದಬಹುದು. ಅಂತೆಯೇ ಅಂಕುಶಾದಿ ಪ್ರಯೋಗ ಮಾಡಿ ಇಭ (ಆನೆ) ವನ್ನಾದರೂ ನಿಗ್ರಹಿಸಬಹುದು. ಇದು ತುಲನಾತ್ಮಕವಾಗಿ ಸುಲಭವೆನ್ನಿಸಬಹುದು, ನೋಡು. ಆದರೆ ವ್ಯಭಿಚಾರಿಯ ಮನವನ್ನು ನಿಲ್ಲಿಸುವುದು, ಪ್ರಭುವಿಗೂ ಅಸಾಧ್ಯವಾದ ಚಾಳಿಯೆನ್ನಿಸಿದೆ.

ಆ ॥ ಎಷ್ಟು ಗೆಯ್ದೊಡೇನು ? ಘುಟ್ಟುಗುಣವಳಿಯದು.
ನೀಟ ಮಾಡಬಹುದೆ ನಾಯಿ ಬಾಲ ?
ಕೆಟ್ಟ ನಾರಿ ಪತಿಗೆ ಮಾರುವ ಬುಟ್ಟಿ ಗತಿ.
ವಿಶ್ವದಾಭಿರಾಮ ಕೇಳು ವೇಮ.

ಎಷ್ಟು ಮಾಡಿದರೇನು ? ಕೆಟ್ಟ ನಾರಿಯ ಹುಟ್ಟು ಗುಣವು ಅಳಿಯದು. ನಾಯಿಯ ಬಾಲವು ನೈಸರ್ಗಿಕವಾಗಿ ಡೊಂಕಾಗಿರುತ್ತದೆ. ಅದನ್ನು ಯಾರಾದರೂ ನೀಟ ಮಾಡುವುದು ಸಾಧ್ಯವೇ ? ಅದೇ ರೀತಿ, ಸ್ವಭಾವತಹ ಕೆಟ್ಟು ಹೋಗಿರುವ ನಾರಿಗೆ ಯಾವ ಗತಿ ಬಂದೀತು ? ತಲೆ ಮೇಲೆ ಏನಾದರೂ ಬಳಕೆ ವಸ್ತುವನ್ನಿಟ್ಟುಕೊಂಡು ಬುಟ್ಟಿ ಹೊತ್ತು ಅತ್ತ ಹೋಗಿ ಮನೆಯಿಂದ ದೂರವಾಗಿರಬೇಕಾದುದು ತಾನೇ ? ಹಾಗಾಗಿ, ಕೆಟ್ಟ ನಾರಿಗೆ ಮನೆಯಲ್ಲಿ ಸ್ವೇಚ್ಛಾಚ್ಛಾರಕ್ಕಿಳಿಯಲು ಅನುವಾಗುವುದು.

ಆ ॥ ಮದ್ದು ಹಾಕಿ ಪತಿಗೆ, ಮರೆಸಿ, ವಿಟನ ಬೆರೆವ,
ಸುಂದರಾಂಗಿ ಕೆಟ್ಟ ಸುದತಿ ನೋಡು
ಹಂದಿಗೆ ಕೆಸರು ಮೆಚ್ಚು, ಪನ್ನೀರ ಮೆಚ್ಚದು.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಗಂಡನಿಗೆ ಕುಡಿಯುವ ಹಾಲಿನಲ್ಲಿ ಮದ್ದು ಬೆರೆಸಿ, ಅವನನ್ನು ಎಚ್ಚರದಪ್ಪಿಸಿ, ಅವನ ಮರೆಯಲ್ಲಿ ವಿಟನೊಡನೆ ಬೆರೆಯುವ ಸುಂದರಾಂಗಿಯಾದ, ಚೆಲುವೆಯೂ ಆದ, ಹೊಳೆಯುವ ದಂತ ಪಂಕ್ತಿಯವಳನ್ನು ನೋಡು. ಅವಳ ಇರವಿನಿಂದ ಏನೆನ್ನಿಸುವುದು ? ಹಂದಿಗೆ ರಾಡಿ-ಕೆಸರೇ ಅಚ್ಚು ಮೆಚ್ಚು. ಅದಕ್ಕೆ ಪನ್ನೀರು ಅಂದರೆ ಪಕಳೆಗಳಿರುವ ಸುಗಂಧ ಪಾನೀಯವು ಮೆಚ್ಚುಗೆಯಾಗದು.

ಆ ॥ ವಿಟನು ಬಳಸಿಕೊಂಡು, ಬಿಟ್ಟು ಹೋದ ಬಳಿಕ,
ಬಡ ಗಂಡನ ಕಂಡು ಪ್ರೇಮಿಸುವಳು.
ತಿಪ್ಪೆಯೊಳಗೆ ಕೆರಹ ತಿನ್ನುವಂತೆ ಸೊಣಗ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬಳು ಪತಿಯಿಂದ ಕದ್ದು ಮುಚ್ಚಿ ವಿಟನೊಬ್ಬನೊಡನೆ ರತಿ ಕ್ರೀಡೆ ನಡೆಸುತ್ತಾಳೆ.





ಅವನು ಭೋಗಿಸಿ ಬಿಟ್ಟು ಹೋದ ಮೇಲೆ, ತಾನು ಹಿಪ್ಪೆಯಾಗಿದ್ದರೂ, ಪಾಪ ಬಡವ ಗಂಡನನ್ನು ಪ್ರೇಮಿಸಿ ಮುದ್ದಾಡಲು ಮುಂದಾಗುವಳು. ಇದು ಹೇಗೆನಿಸುವುದೆಂದರೆ, ಹರಿದ ಕೆರಹನ್ನು ತಿಪ್ಪೆಗೆ ಎಸೆದ ಮೇಲೆ, ನಾಯಿಯು ಅದನ್ನೇ ತಿನ್ನಲು ಮುಂದಾದಂತೆ ಆಗುತ್ತದೆ.

## ಮದ್ಯಪಾನ :

ಮದ್ಯಪಾನವು ಇದ್ದುಳ್ಳವರನ್ನು ಅವರ ಐಷಾರಾಮೀ ಜೀವನದ ಹಾಲಿನ ಉಕ್ಕಿನಂತೆ ಬುರುಗು ರೂಪದಲ್ಲಿ ಅವರ ಮನವನ್ನು ಕೆಡಿಸಿದರೆ, ಬಡವರ ಇಲ್ಲದವರ ಚಿಂತೆಯನ್ನು ತಾತ್ಕಾಲಿಕ ಮರೆಸುವ ಮದ್ದಿನಂತೆ ತೇಲಿ, ಅವರ ಬಾಳನ್ನು ಹಾಳು ಮಾಡುತ್ತದೆ. ಮದ್ಯಪಾನ ಮಾಡಿದವನು ಯಾವುದನ್ನೂ ಬಚ್ಚಿಟ್ಟುಕೊಳ್ಳನು. ತಾನು ಸಾಮಾನ್ಯ ಪರಿಸ್ಥಿತಿಯಲ್ಲಿ ನುಂಗಿಕೊಂಡ, ಅಡಗಿಸಿಕೊಂಡ, ವೇದನೆಗಳು ಸಹ ಮದ್ಯದ ಅಮಲೇರಿದಾಗ ಪ್ರಕಟಗೊಳ್ಳುತ್ತವೆ. ಮದ್ಯ ವ್ಯಸನಿಗಳು ತಮ್ಮ ವಿವೇಕ ಬುದ್ಧಿಯನ್ನು ನೀಗಿಕೊಳ್ಳುತ್ತಾರೆ. ಅವರು ಹೆಂಡಕ್ಕಾಗಿ ಹಪಾಪಿಸುವರೇ ಹೊರತು ಹಾಲಿಗಾಗಿ ಅಲ್ಲ. ಸೆರೆ-ಸೇಂದಿ ಕುಡಿದು ಮತ್ತರಾಗಿ, ದೊಡ್ಡ ಜನರ ಮಧ್ಯೆ ಮಾನ-ಮರ್ಯಾದೆ ಕಳೆದುಕೊಂಡು ತಿರುಗುತ್ತಾರೆ. ಕಳ್ಳು ಕುಡಿಯುವುದರೊಂದಿಗೆ ಸುಳ್ಳು ಹೇಳುವ ಚಟವೂ ಅಂಟುತ್ತದೆ.

ಆ ॥ ಮದ್ಯ ಕುಡಿದು ಮತ್ತೆ ದೊಡ್ಡ ಜನರ ಮಧ್ಯೆ,
ಬಟ್ಟೆ ಕಳಚಿ ತಿರುಗುವಂಥ ದುಷ್ಟ-
ಹೋದ ಮೇಲೆ ಎಲ್ಲ ಹರಕು ವಸ್ತ್ರ ಹೊದೆವ.
ವಿಶ್ವದಾಭಿರಾಮ ಕೇಳು ವೇಮ.

ಧನದ ಮದದಿಂದ ಇನ್ನು ಮದಗಳೆಲ್ಲ ಸೇರುತ್ತವೆ. ಮದ್ಯ ವ್ಯಸನಿಯಾದವನು, ಜಾರಕಾಂತೆಯ ಸಂಗ ವ್ಯಸನಿಯೂ ಆಗುತ್ತಾನೆ. ಕಾಮದ ಕಾವು ತಲೆಗೇರುತ್ತದೆ. ಅವನು ಮದ್ಯ ಕುಡಿಯುತ್ತಾನೆ. ಮನದಲ್ಲಿ ಅಡಗಿಸಿಕೊಂಡಿದ್ದ ಕೀಳು ಭಾವನೆಗಳು ಉಕ್ಕೇರುತ್ತವೆ. ಸಣ್ಣ ಜನ ದೊಡ್ಡ ಜನ, ಎನ್ನುವ ವಿವೇಕವೇ ಹಿಂಗುತ್ತದೆ. ಹಾಗಾಗಿ, ಉದ್ರಿಕ್ತನಾಗಿ ಬಟ್ಟೆ ಕಳಚಿ ತಿರುಗುತ್ತಾನೆ. ಮರ್ಯಾದೆ ಮೀರುತ್ತಾನೆ. ಹೀಗೆ ಧನ ಇರುವ ವರೆಗೆ ಮೆರೆದಾಡಿ, ಉರಿದಾಡಿ, ಕೊನೆಗೆ ಎಲ್ಲ ಸಂಪತ್ತು ಕರಗಿದ ಮೇಲೆ, ಕೈಯಲ್ಲಿ ಕಾಸಿಲ್ಲದೆ, ಹರಕು ವಸ್ತ್ರ ತೊಟ್ಟು ಕಾಸಿಗಾಗಿ ಕೈಯೊಡ್ಡುತ್ತಾನೆ.

ಹೆಂಡಕೀಯುವಂತೆ ಹಾಲಿಗೀಯರಯ್ಯ.
ಹುಂಜಕೀಯುವಂತೆ ಗುರುವಿಗಿಲ್ಲ.
ರಂಡೆಗೀಯುವಂತೆ ಪುಣ್ಯಕೀಯರಯ್ಯ.
ವಿಶ್ವದಾಭಿರಾಮ ಕೇಳು ವೇಮ.

ಜನರ ದುಶ್ಚರಿತೆಯು ಅವರ ನಡೆವಳಿಯಲ್ಲಿ ಕಂಡು ಬರುತ್ತದೆ. ಅವರು ಒಳಿತು-ಕೆಡಕುಗಳಲ್ಲಿ ಕೇಡನ್ನೇ ಆಯ್ದುಕೊಳ್ಳುತ್ತಾರೆ. ಕೂಡಲೇ ಸುಖ ನೀಡುವಂಥದು ದೀರ್ಘ ಕಾಲದಲ್ಲಿ ವಿಷಕರವಾಗಿರುತ್ತದೆ. ಇದನ್ನು ದುಶ್ಚರಿತರು ತಿಳಿಯುವುದಿಲ್ಲ. ಅವರು ತಾತ್ಕಾಲಿಕ ಮದವೇರಿಸಿ ಚಿಂತೆಗಳನ್ನು ಮರೆ ಮಾಡುವ ಹೆಂಡಕ್ಕೆ ಹಣ ಸುರಿಯುವರಲ್ಲದೆ ಹಾಲಿಗಾಗಿ ಹಣ ಕೊಡರು. ಹುಂಜಗಳ ಕಾದಾಟ, ಕಚ್ಚಾಟದ ಮೋಜು ನೋಡಲು ಧನವೀಯುವುರಲ್ಲದೆ, ಗುರುವಿನ

ಸನ್ನಿಧಿಯಲ್ಲಿ ಮನೋಶಾಂತಿ ಪಡೆಯಲು ಧನ ವಿನಿಯೋಗಿಸರು. ಗಂಡ ಸತ್ತ ರಂಡೆಯ ಭೋಗಕ್ಕಾಗಿ ಹಣ ಸೂರೆ ಮಾಡುವಂತೆ ಪುಣ್ಯ ಕಾರ್ಯಗಳಿಗಾಗಿ ಹಣ ವಿನಿಯೋಗಿಸರು.

ಮತ್ತು ಏರಿದ ವೇಳೆ ಮತ್ತೆ ಬಳಿಗಿರಬೇಡ.
ಅನುವು ತಪ್ಪಿ ಮಾತು ಆಡಬೇಡ.
ಸಮಯವರಿತಿರುವವ ಸರಸನೆನಿಪನಲ್ತೆ ?
ವಿಶ್ವದಾಭಿರಾಮ ಕೇಳು ವೇಮ.

ಮದ್ಯ ಪಾನಿಯಾದರೂ, ತನ್ನ ಅಂಕೆಯಲ್ಲಿಯೇ ಮನವಿರಿಸಿಕೊಂಡವನಿಗೆ ಸೂಕ್ತ ಸಲಹೆ ನೀಡಬಹುದು. ನೀನು ಕುಡಿಯಬೇಡ, ಅದು ಸಾಧ್ಯವಾಗದಿದ್ದರೆ ಮತ್ತು ಏರಿದ ವೇಳೆ ಜನರ ಬಳಿಯಾದರೂ ಇರಬೇಡ. ಮತ್ತು ಏರಿದ ವೇಳೆ, ಮಾತು ಹಿಡಿತದಲ್ಲಿರಲಿ. ಅನುವು ತಪ್ಪಿ ಮಾತನ್ನಾಡಬೇಡ. ಯಾವ ಸಮಯದಲ್ಲಿ ಹೇಗೆ ವರ್ತಿಸಬೇಕೆಂದು ತಿಳಿದವನು ಜನರೊಂದಿಗೆ ಹೊಂದಿಕೊಳ್ಳುವ ಸರಸನೆನಿಸುವನಲ್ಲವೇ ?

ಕಳ್ಳು ಕುಡಿಯುವವನು ಕಳ್ಳ, ಕುಡುಕನಲ್ಲ
ಸುಳ್ಳು ಹೇಳುವವನೆ ಕಳ್ಳ ಕುಡುಕ.
ನಿಜವ ನುಡಿಯದವನೆ ನೀಚ ಚಂಡಾಲನು.
ವಿಶ್ವದಾಭಿರಾಮ ಕೇಳು ವೇಮ.

ಸೇಂದಿ ಕುಡುತವು ಕೆಟ್ಟ ಚಟವಾದರೂ ಸೇಂದಿ ಕುಡಿಯುವವನು ಕಳ್ಳನೂ ಅಲ್ಲ. ಕುಡುಕನೂ ಅಲ್ಲ. ಆದರೆ ಇರುವುದನ್ನು ಇಲ್ಲವೆಂದು, ಇಲ್ಲದುದನ್ನು ಇರುವುದೆಂದು, ಸುಳ್ಳು ಹೇಳಿ ಮೋಸವಂಚನೆ ಮಾಡುವವನೇ ಹೆಚ್ಚಿನ ಕಳ್ಳ ಕುಡುಕನಾಗಿದ್ದಾನೆ. ಯಾರು ನಿಜವನ್ನು ನುಡಿಯುವುದಿಲ್ಲವೋ, ಅವನೇ ನೀಚ ಚಂಡಾಲನು. ಶೂದ್ರ ಪುರುಷನು ಬ್ರಾಹ್ಮಣ ಸ್ತ್ರೀಯಲ್ಲಿ ಹುಟ್ಟಿಸಿದ ಮಗುವು ನೀಚ ಚಂಡಾಲನಲ್ಲ. ಅವನು ಮಾತಂಗ ಮಹರ್ಷಿಯೂ ಆಗಿರಬಹುದು. ಆದರೆ ಸಮಾಜದಲ್ಲಿ ಜಾತಿ ಭೇದವನ್ನು, ಮೇಲು ಕೀಳು ಭಾವನೆಯನ್ನು ಬ್ರಹ್ಮನೇ ಕಲ್ಪಿಸಿದನೆಂದು ಸುಳ್ಳು ಹೇಳುವವನು ನೀಚ ಚಂಡಾಲನು.

ಮದ್ಯಪಾನವನ್ನು ಬ್ರಾಹ್ಮಣರ ಧರ್ಮ ಶಾಸ್ತ್ರಗಳು ನೋಡುವ ದೃಷ್ಟಿಯನ್ನು ಇಲ್ಲಿ ತಿಳಿಯುವುದು ಸೂಕ್ತ. "ಸರಾಯಿ ಮಲಕ್ಕೆ ಸಮಾನವಾದುದು. ಆದ ಕಾರಣ, ಆ ಪಾಪಮಯವಾದ ಮಲ ಸದೃಶವಾದ ಹೆಂಡವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಕುಡಿಯಬಾರದು". (ಮ.ಸ್ಮೃ. 11-93).

"ಬೆಲ್ಲದಿಂದ ಮಾಡಿದ ಗೌಡೀ, ಹಿಟ್ಟಿನಿಂದ ಮಾಡಿದ ಪೈಷ್ಟೀ, ಮಧೂಕದ ಹೂವಿನಿಂದ ಮಾಡಿದ ಮಾಧ್ವೀ ಎಂಬ ಮೂರು ಬಗೆಯ ಸುರೆಗಳಿವೆ. ಈ ಎಲ್ಲ ಬಗೆಯ ಹೆಂಡಗಳೂ ತ್ಯಾಜ್ಯವಾದುದರಿಂದ ದ್ವಿಜಾತಿಯವರು ಇವುಗಳನ್ನು ಕುಡಿಯಬಾರದು. (ಮ.ಸ್ಮೃ. 11-95).

ಬ್ರಾಹ್ಮಣನ ದೇಹದಲ್ಲಿರುವ ಆ ಪವಿತ್ರಾತ್ಮನಿಗೆ ಒಂದು ಸಲ ಮಾತ್ರವೇ ಮದ್ಯದ





ಹಸಿ ತಗುಲಿದರೆ, ಸಾಕು, ಅವನ ಬ್ರಾಹ್ಮಣ್ಯವು ನಾಶವಾಗುತ್ತದೆ. ಅವನು ಶೂದ್ರನಾಗುತ್ತಾನೆ. (ಮ.ಸ್ಮೃ. 11-97).

ಮನುವಿನಂಥ ಸ್ಮೃತಿ ರಚನಕಾರರು, ಜಾತಿ ಭೇದದ ಭೂತ ಬಡಿದವರಾಗಿದ್ದರು. ಅವರು ಯಜ್ಞ ಮಾಡಿಸಿ, ಯಜ್ಞ ಮಾಡುವಾಗ ಮದ ತರಿಸುವ ಸೋಮಪಾನ ಮಾಡಿ, ನೂರಾರು, ಸಾವಿರಾರು ಪಶು ಬಲಿ ನೀಡಿ, ಯಜ್ಞ ದೇವತೆಗೆ ಹವಿಸ್ಸೆಂದು ಅರ್ಪಿಸಿದ ಯಜ್ಞ ಶೇಷರೂಪ ಮಾಂಸವನ್ನು ತುಪ್ಪದಲ್ಲಿ ಹುರಿದು ಯಥೇಚ್ಛ ಭಕ್ಷಿಸಿ ಸಂತೃಪ್ತರಾಗುತ್ತಿದ್ದರು. ಈ ಯಜ್ಞಶೇಷವನ್ನು ಭಕ್ಷಿಸುವ ಅಧಿಕಾರವನ್ನು ಬ್ರಾಹ್ಮಣರಿಗಾಗಿಯೇ ಇರಿಸಿಕೊಂಡಿದ್ದರು. ಇತರರು ಮಾಂಸ ತಿನ್ನುವದನ್ನು ಮತ್ತು ಮದ್ಯ ಸೇವಿಸುವುದನ್ನು ನಿಷಿದ್ಧಗೊಳಿಸಿದ್ದರು. ದ್ವಿಜರಿಗೆ ಕೆಲವು ನಿಬಂಧನೆಗಳಿದ್ದರೂ, ಶೂದ್ರರಿಗಾವ ನಿಬಂಧನೆಗಳೂ ಇರಲಿಲ್ಲ. ಇದರಿಂದ ಸಮಾಜದ ಬಹುಪಾಲು ಶೂದ್ರರು ಇಂಥ ಅಮೇಧ್ಯ ಆಹಾರ ಪಾನೀಯಗಳಿಗೆ ಹೆಚ್ಚಾಗಿ ಬಲಿಯಾಗಿ ಇಂದಿಗೂ ಕೊರಗುತ್ತಿರುವರು. ಬಹು ಜನರು ಇಂಥ ಜಾತಿ ಭೇದದ ಧರ್ಮದಿಂದ ದೂರ ಸರಿಯುತ್ತಿದ್ದಾರೆ. ಹೊರ ಹೋಗುವವರನ್ನು ಹೋಗದಂತಿರಿಸಲು ಇಂದಿಗೂ ಸ್ವಾರ್ಥಿ ಬ್ರಾಹ್ಮಣರು ಕೂಗಾಟ ಎಬ್ಬಿಸುತ್ತಿದ್ದಾರೆಯೇ ಹೊರತು, ರಾಷ್ಟ್ರದ ಘಟನಾವಳಿಯನ್ನು ತಿದ್ದುವ ಬದಲು ತಮ್ಮ ಅಭಿಮಾನದ ಧರ್ಮ ಶಾಸನಗಳನ್ನು ತಿದ್ದುವತ್ತ ಅವರ ಲಕ್ಷ್ಯವೇ ಇಲ್ಲ.

## ಜೂಜಾಟ :

ಜೂಜಾಟವು ತುಂಬಾ ಕೆಟ್ಟ ವ್ಯಸನ. ಹಿಂದೆ ರಾಜರು ಲೆತ್ತದಾಟವಾಡಿ, ತಮ್ಮ ಮನಸ್ಸಿನ ಉದ್ರೇಕದಂತೆ ಪಣ ಒಡ್ಡುತ್ತಿದ್ದರು. ಜೂಜಾಟಕ್ಕೆ ಆಹ್ವಾನ ಬಂದರೆ ರಾಜರು ಒಪ್ಪಲೇಬೇಕೆಂಬ ಅಲಿಖಿತ ಕಟ್ಟಳೆಯೊಂದಿತ್ತು. ಇತ್ತೀಚೆಗೆ ಇಸ್ಪೀಟ ಆಟದಲ್ಲಿ ಇದು ಸಾರ್ವತ್ರಿಕವಾಗಿ ಬೆಳೆದಿದೆ. ರಾತ್ರಿ ಇಡೀ ಇಸ್ಪೀಟಾಡುತ್ತಾರೆ. ಕೆಲವರು ಲಾಟರಿ ಮೂಲಕ ಜೂಜಾಟಕ್ಕಿಳಿಯುತ್ತಾರೆ. ತೀರ ಧನಿಕರು ಕುದುರೆ ಜೂಜಿನಲ್ಲಿ ತಮ್ಮ ಅದೃಷ್ಟವನ್ನು ಪರೀಕ್ಷಿಸುತ್ತಾರೆ. ಹಳ್ಳಿಗಾಡಿನಲ್ಲಿ ಕೋಳಿ ಕಾಳಗದಲ್ಲಿ, ಟಗರುಗಳ ಕಾಳಗದಲ್ಲಿ, ಕೆಲವರು ಗೂಳಿಯ ಕಾಳಗದಲ್ಲಿ ಪಣ ಹಚ್ಚಿ ಜೂಜಾಟಕ್ಕಿಳಿಯುತ್ತಾರೆ. ಯಾರು ಯಾವುದೇ ಕ್ರೀಡೆಗಿಳಿಯಲಿ, ಅವರ ಪಣ ಹಚ್ಚುವ ಜೂಜಾಟದ ಪ್ರವೃತ್ತಿ ಒಂದೇ ರೀತಿಯದು.

ಆ॥ ಅನನುಕೂಲ ತಾಣ ಅಲ್ಲದ ಜೂಜಾಟ,
ಆಡಿ, ಕೂಡಿ, ಸೋತು ಅಡವಿ ಹೊಕ್ಕ,
ಘನನ ಜಾಡು ನೋಡಿ, ಬಿಡದೆ ಇರಲು ಮೌಢ್ಯ.
ವಿಶ್ವದಾಭಿರಾಮ ಕೇಳು ವೇಮ.

ಮಹಾಭಾರತ ಕಥೆಯಲ್ಲಿ ಸೋದರರ ಮಧ್ಯೆ ವಿರಸಕ್ಕೆ, ಹೇವ ಪಂಥಗಳಿಗೆ ಲೆತ್ತ ಜೂಜಾಟವೇ ಕಾರಣವಾಯಿತು. ಒಳ್ಳೆಯ ಸುಚರಿತನೆಂದು ಖ್ಯಾತನಾದ ಧರ್ಮರಾಜನು ಶಕುನಿ-ದುರ್ಯೋಧನರ ಷಡ್ಯಂತ್ರಕ್ಕೆ ಬಲಿಯಾಗಿ ತನಗೆ ಅನುಕೂಲವಲ್ಲದ ಜಾಗದಲ್ಲಿ, ಅಲ್ಲದ ಜೂಜಾಟಕ್ಕಿಳಿದು, ಕೂಡಿ, ಆಡಿ, ಸೋತನು. ಕೊನೆಗೆ ತಾನೇ ಪಣ ಒಡ್ಡಿದಂತೆ, ಹನ್ನೆರಡು ವರುಷ ವನವಾಸ ಮತ್ತು ಕೊನೆಯ ಮತ್ತೊಂದು ವರುಷ ಅಜ್ಞಾತವಾಸ ಅನುಭವಿಸಬೇಕಾಯಿತು.

ಪಡಬಾರದ ಕಷ್ಟ ಸೋಸಿದ. ವಿರಾಟರಾಯನಲ್ಲಿ ಕಂಕ ಭಟ್ಟನಾಗಿ ಸೇವೆ ಸಲ್ಲಿಸಬೇಕಾಯಿತು. ಹೀಗೆ ಚಕ್ರವರ್ತಿಯಾಗಬೇಕಾದ ಘನವಂತನು ತಾನೇ ಜೂಜಾಡಿ ಬರಮಾಡಿಕೊಂಡ, ನಿಕೃಷ್ಟ ಬಾಳಿನ ಜಾಡನ್ನು ನೋಡಿ, ಅದಕ್ಕೆ ಕಾರಣವಾದ ಜೂಜಾಟವನ್ನು ಬಿಡದೆ ಇರುವುದು ಮೌಢ್ಯವಷ್ಟೇ.

## ವಾಚಿಕ ದುಶ್ಚರಿತ್ರೆ :

ನಾವು ಇದುವರೆಗೆ ಶಾರೀರಿಕ ದುಶ್ಚರಿತ್ರೆಗಳನ್ನು ಕುರಿತು ವಿವೇಚಿಸಿದ್ದೇವೆ. ಈಗ ವಾಚಿಕ ದುಶ್ಚರಿತೆಯನ್ನು ಕುರಿತು ವಿವೇಚಿಸೋಣ.

ಒಬ್ಬನು ಸುಳ್ಳು ನುಡಿಯುತ್ತಾನೆ. ಸಭೆಯಲ್ಲಿ, ಪರಿಷತ್ತಿನಲ್ಲಿ, ಆಪ್ತ ಜನರೊಡನೆ ಸುಳ್ಳು ಸಾಕ್ಷಿ ಹೇಳುತ್ತಾನೆ. ನಡೆಯದ್ದನ್ನು ನಡೆದಿದೆ ಎನ್ನುತ್ತಾನೆ. ನೋಡದ್ದನ್ನು ನೋಡಿದೆ ಎನ್ನುತ್ತಾನೆ. ಕೆಲವೊಮ್ಮೆ ಎರಡನೆಯವರಿಗೆ ಕೇಡು ಬಗೆಯಲು ಚಾಡಿ ಹೇಳುತ್ತಾನೆ. ಸಮಾಧಾನ ಕೆಡಿಸುವ ಕ್ಷುಲ್ಲಕ ಮಾತನಾಡುತ್ತಾನೆ. ಬಡಾಯಿ ಕೊಚ್ಚುತ್ತಾನೆ. ಡಾಂಭಿಕ ಮಾತಿಗಿಳಿಯುತ್ತಾನೆ.

ಋತವನ್ನತವರಿಯಲು ಯಾರಿಗೇನು ಅಳವೆ ?
ಸ್ಥಿತಿಯ, ಗತಿಯ ತಿಳಿಯೆ ಸ್ಫುಟವಾಯ್ತು.
ಕೇಳಿದಷ್ಟರಿಂದ ಹೇಳ ಹೋಗೆ ಸಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಯಾವುದು ಋತ ? ಯಾವುದು ಅನೃತ ? ಇದನ್ನು ತಿಳಿಯುವುದು ಯಾರಿಗೇನಾದರೂ ಸಾಧ್ಯವೇ ? ಜನತೆಯಲ್ಲಿ ಮೇಲು ಕೀಳು ಭಾವನೆಯನ್ನೂ, ಜಾತಿ ಭೇದವನ್ನೂ, ಬ್ರಹ್ಮನೇ ಸೃಷ್ಟಿಸಿದನೆಂದೂ ಮತ್ತು ಈ ಮೇಲು ಕೀಳು ಭಾವನೆಯನ್ನು ಸ್ಥಾಯಿಗೊಳಿಸುವಂಥ ಧರ್ಮ ಸೂತ್ರಗಳನ್ನು ಅವನೇ ಕೆಲವು ಬ್ರಾಹ್ಮಣರ ಕಿವಿಯಲ್ಲಿ ಶ್ರುತಪಡಿಸಿರುವನೆಂದೂ ಹೇಳಿದರೆ ಅದನ್ನು ಋತವೆನ್ನಬಹುದೆ ? ಇಲ್ಲವೆ ಜಾತಿ ಭೇದ ಕಲ್ಪಿಸಿ, ಮೇಲು ಕೀಳಿನ ಭಾವನೆಯನ್ನು ಬಿತ್ತಿದ ಪಟ್ಟಭದ್ರ ಹಿತಾಸಕ್ತರು ರಚಿಸಿದ ಅನೃತಗಳ ಮಾಲೆಯನ್ನಬೇಕೇ ? ಇದರ ಸ್ಥಿತಿಯನ್ನೂ ಗತಿಯನ್ನೂ ತಿಳಿದರೆ ಋತವಾವುದು ? ಅನೃತವಾವುದು ? ಎಂಬುದು ಸ್ಫುಟವಾಗುತ್ತದೆ. ಯಾವುದನ್ನಾದರೂ ಯಾರಿಂದಲೋ ಕೇಳಿ, ಅಷ್ಟು ಮಾತ್ರಕ್ಕೆ ಅದು ನಿಜವೆಂದು ನಂಬಿ ಇತರರಿಗೆ ಹೇಳಲು ಹೋಗುವುದು ಸಲ್ಲ.

ನಿಜವ ಸುಳ್ಳನೆರಡು ನೀಲಕಂಠನರಿವ.
ನೀರಿನಾಳವರಿತು ನಿಜವ ಕಾಣು.
ತನಯ ಜನ್ಮ ತಾಯಿ ತಾನೆ ಅರಿಯುತಿಹಳು.
ವಿಶ್ವದಾಭಿರಾಮ ಕೇಳು ವೇಮ.

ನಿಜವಾವುದು ? ಸುಳ್ಳು ಯಾವುದು ? ಇದನ್ನು ನೀಲಕಂಠನೇ ಅರಿಯುತ್ತಾನೆ. ಜನರು ಬೇರಾರಿಗೂ ತಾನು ಹೇಳುವುದರ ಸತ್ಯಾಸತ್ಯತೆಗಳು ತಿಳಿಯುವುದಿಲ್ಲವೆಂದು ಭಾವಿಸುತ್ತಾರೆ. ಆದರೆ ತನ್ನೊಳಗಿನ ಹೃದಯಸ್ಥ ಶಿವನಿಗೆ ಸರ್ವವಿದಿತವಿರುತ್ತದೆ. ನೀರಿನ ಮಡವನ್ನು ಮೇಲೆ





ಮೇಲೆ ನೋಡಿದರೆ ಎಲ್ಲವೂ ಸಮಪಾತಳಿಯಾಗಿ ಕಾಡುತ್ತದೆ. ಆದರೆ ಅದರಲ್ಲಿ ಇಳಿಯಬಹುದೇ? ಎಂಬುದನ್ನು ಅದರ ಆಳವರಿತು ನಿರ್ಣಯಿಸಬೇಕು. ಒಬ್ಬ ಸ್ತ್ರೀಗೆ ಮಗನು ಹುಟ್ಟುತ್ತಾನೆ. ಆ ಪಿಂಡಕ್ಕೆ ಬೀಜಪ್ರದನಾದ ತಂದೆ ಅವಳ ಗಂಡನೋ, ಮಿಂಡನೋ ಅಥವಾ ಬೇರಿನ್ನಾರು ? ಎಂಬುದನ್ನು ಆ ಮಗುವಿನ ತಾಯಿ ಮಾತ್ರ ಬಲ್ಲಳು. ಈಗೀಗ ವಿಜ್ಞಾನ ಆವಿಷ್ಕಾರವಾಗಿ ಡಿ.ಎನ್.ಏ. ಪರೀಕ್ಷೆ ಮುಖಾಂತರ ಆ ಮಗುವಿನ ತಂದೆ ಯಾರು ? ಎಂದು ನಿರ್ಧರಿಸಬಹುದು.

ಆ॥ ಮಾತು ಎಲ್ಲ ಸುಳ್ಳು ; ಮನಸು ಎಲ್ಲ ಕಳ್ಳ,
ಇಂಥ ಪ್ರಾಣಿಗಿನ್ನು ಏಕೆ ಬದುಕು ?
ಮಾತು ಸತ್ಯವಿರಲು, ಮತ್ತು ಶತಾಯುಷಿಯು.
ವಿಶ್ವದಾಭಿರಾಮ ಕೇಳು ವೇಮ.

ಕರಣ ಶುದ್ಧಿ ಇಲ್ಲದವನ ಮನದ ಆಲೋಚನೆಗಳೇ ಒಂದು ರೀತಿ. ಆದರೆ ಅವನು ತನ್ನ ಮಾತುಗಳ ಮೂಲಕ ಅಭಿವ್ಯಕ್ತಗೊಳಿಸುವ ಸಂಗತಿಯೇ ಬೇರೊಂದು ರೀತಿ. ಮನಸ್ಸಿನಲ್ಲಿ ಕಳ್ಳನಾಗಿರುತ್ತಾನೆ. ಅಂದರೆ ಯಾರದೋ ವಸ್ತುವನ್ನು ಎತ್ತಿ ಹಾಕಬೇಕೆಂದು ಮಾಡಿರುತ್ತಾನೆ. ಆದರೆ ಅವರೊಂದಿಗಿನ ಮಾತಿನಲ್ಲಿ ಅದನ್ನು ತೋರಿಸಿಕೊಳ್ಳದೆ, ಸುಳ್ಳು ಹೇಳಿ, ಸ್ನೇಹ ಬಯಸುತ್ತಾನೆ. ಈ ಬಗೆಯ ಇಮ್ಮನದ ಜೀವಿಗೆ ಶಾಂತಿ ಸಮಾಧಾನಗಳು ಸಿಗವು. ಅವನಿಗೆ ಅಂಥ ಬದುಕಾದರೂ ಏಕೆ ಬೇಕು ? ಮಾತು ಸತ್ಯವಿದ್ದರೆ ಮನಸ್ಸೂ ಸತ್ಯ ಪೂರ್ಣವಿರುತ್ತದೆ. ಅಂಥವನು ಶತಾಯುಷಿಯಾಗಿ ಬದುಕಲಿ, ಬದುಕುತ್ತಾನೆ.

ಆ॥ ಸುಳ್ಳು ಸತ್ಯ ಗೆಯ್ದು ಶುಷ್ಕ ಭಾವ ಹೊಂದಿ,
ಬಯ್ದು ಬೊಗಳುತಿಹಗೆ ಭಕ್ತಿಯಿಲ್ಲ.
ಮಾಟ ಮಾಯದವನು ಮಹಿಮಾತ್ಮ ಸಮನೇ ?
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ಮಂತ್ರ ವಿದ್ಯೆಯಲ್ಲಿ ಪರಿಣತರಾಗಿ, ತಂತ್ರ ಸಾಧನದಿಂದಲೋ ಇಲ್ಲವೆ ಅಥರ್ವಣ ವೇದಾಧ್ಯಯನದಿಂದಲೋ ತಕ್ಕ ಮಟ್ಟಿನ ಮನವನ್ನು ಕೇಂದ್ರಿಕರಿಸುವ ಸಿದ್ಧಿ ಹೊಂದಿರುತ್ತಾರೆ. ಇಂಥವರು ಮಾಟ ಮದ್ದಿನ ಪ್ರಯೋಗಗಳಿಂದ ಜನರ ಮನ ಸೆಳೆಯುತ್ತಾರೆ. ಅವರಲ್ಲಿ ಭೀತಿ-ಮಾನ್ಯತೆಯನ್ನು ಹುಟ್ಟಿಸುತ್ತಾರೆ. ಇಲ್ಲದ್ದನ್ನು ಇದ್ದಂತೆ ಮಾಡಿ ತೋರಿಸುತ್ತಾರೆ. ಅಂದರೆ ಸುಳ್ಳನ್ನು ಸತ್ಯವೆಂದು ತೋರಿಸುತ್ತಾರೆ. ಅವರು ಏನೇ ಮಂತ್ರ ಪಠಿಸಲಿ, ಅವರ ಭಾವವು ಶುಷ್ಕವಾಗಿರುತ್ತದೆ. ಅಲ್ಲಿ ಭಕ್ತಿಯ ಸ್ರೋತವಿರದು. ಜ್ಞಾನದ ಕಿರಣವಿರದು. ಅವರು ಅನಿಷ್ಟ ಶಕ್ತಿಗಳನ್ನುದ್ದೇಶಿಸಿ ಬೈಗುಳದ ಪದಗಳನ್ನು ಬಳಸುತ್ತಾರೆ. ಆದರೆ ಅವರಲ್ಲಿ ಭಕ್ತಿಯ ಲವಲೇಶವೂ ಇರದು.

ಆ॥ ಕಂಡ ಸುದ್ದಿ ಕೊಂಚ, ಕೇಳಿದ ಸುದ್ದಿ ಕೊಂಚ,
ವಿಚಿತ್ರ ಸುದ್ದಿ ಎಷ್ಟೋ ಕೇಳಿ ಹೇಳ್ವ.
ತಾನು ಕಂಡೆನೆನುವ ಡಾಂಭಿಕನು ಸಂತತ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನನ್ನು ನ್ಯಾಯಾಲಯದಲ್ಲಿ ಸಾಕ್ಷಿಯೆಂದು ನಿಲ್ಲಿಸಿದಾಗ, ಅವನು ಏನೇನನ್ನೊ ಸತ್ಯವೆಂದು ಪ್ರಮಾಣ ಮಾಡಿ ಹೇಳುತ್ತಾನೆ. ಅವನ ಹೇಳಿಕೆಯಲ್ಲಿ ಸ್ವಲ್ಪು, ಕಂಡ ಭಾಗವೂ ಇರಬಹುದು. ಸ್ವಲ್ಪು ಬೇರೆಯವರಿಂದ ಕೇಳಿದ ಸುದ್ದಿಯೂ ಇರಬಹುದು. ಇದಲ್ಲದೆ ಬೇರೆ ಎಷ್ಟೋ ಸುದ್ದಿಗಳನ್ನು ಸೇರಿಸಿ ಹೇಳುತ್ತಾನೆ. ಅವೆಲ್ಲವನ್ನೂ ತಾನು ಕಂಡಿರುವೆನೆಂದೇ ಹೇಳುತ್ತಾನೆ. ಎಷ್ಟಾದರೂ ಅವನು ಡಾಂಭಿಕನಲ್ಲವೇ ? ಒಣ ಜಂಭದ ಕೋಳಿ !

ಬಾಯಿ ಬಡಿಯಲೊಬ್ಬ ಭಂಡ ಪಂಡಿತೆಂದು,
ಸಾಧು ಪಂಡಿತ ತಾ ಶಾಂತನಿಹನು.
ಬೊಗಳಲೇನು ನಾಯಿ ? ಬೆದರದಲ್ಲ ಕುದುರೆ ?
ವಿಶ್ವದಾಭಿರಾಮ ಕೇಳು ವೇಮ.

ಒಬ್ಬ ಲಜ್ಜೆಗೇಡಿಯು ತನ್ನ ಇತಿಮಿತಿಗಳನ್ನು ಅರಿಯದೆ, ತಾನು ಪಂಡಿತನೆಂದು ಬಡಾಯಿ ಕೊಚ್ಚಲು ಸಾಧು ಸ್ವಭಾವದ ನಿಜವಾದ ಪಂಡಿತನು ತಲೆ ಕೆಡಿಸಿಕೊಳ್ಳದೆ ಶಾಂತನಾಗಿಯೇ ಇರುತ್ತಾನೆ. ಹಾದಿಯಲ್ಲಿ ಹೋಗುವ ಕುದುರೆ ಸವಾರನನ್ನು ಕಂಡು, ನಾಯಿಗಳು ಎಷ್ಟೇ ಬೊಗಳಿದರೂ ಕುದುರೆಯು ಅದನ್ನು ಲೆಕ್ಕಿಸದೆ, ನಾಯಿಯ ಬೊಗಳುವಿಕೆಯಿಂದ ಬೆದರದೆ, ತನ್ನ ಪಾಡಿಗೆ ತಾನು ಮುಂದೆ ಹೋಗುತ್ತದೆ.

ಢೋಂಗಿ ಮಾತನಾಡೆ ದೊರಕಬಹುದೆ ಮೋಕ್ಷ ?
ಆಗು ಹೋಗದಂಥ ಕೂಗು ಹೊಲ್ಲ.
ಸದ್ಗುರುವಿನ ಚಿಹ್ನೆಯಲ್ಲ, ದುರ್ಗುಣಿಯದು.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮ ಸಾಧನೆ ಮಾಡದೆ, ಬ್ರಹ್ಮವಿದನಾಗದೆ, ಬರೀ ಆಡಂಬರದ ಮಾತನಾಡಿದರೆ ಮೋಕ್ಷವು ದೊರಕಬಹುದೆ ? ಸಲ್ಲದು, ಸಲ್ಲದು. ಆಗು ಹೋಗದಂಥ ವ್ಯರ್ಥ ಕೂಗು ಹೊಲ್ಲವಷ್ಟೇ. ಹಾಗೆ ವ್ಯರ್ಥ ಪ್ರಲಾಪಿಸುವುದು ಸದ್ಗುರುವಿನ ಚಿಹ್ನೆಯಂತೂ ಅಲ್ಲ. ಕೇವಲ ದುರ್ಗಣಿಯಾದ ಮನುಷ್ಯನು ಢೋಂಗಿ ಮಾತುಗಳಲ್ಲಿ ಕಾಲಕಳೆಯುತ್ತಾನೆ.

## ಮಾನಸಿಕ ದುಶ್ಚರಿತಗಳು :

ಶಾರೀರಿಕ ಮತ್ತು ವಾಚಿಕ ದುಶ್ಚರಿತೆಗಳನ್ನು ವಿವೇಚಿಸಿದೆವು. ಇನ್ನು ತ್ರಿಕರಣಗಳಲ್ಲಿ ಮೂರನೆಯದಾದ ಮಾನಸಿಕ ದುಶ್ಚರಿತೆಗಳನ್ನು ಕುರಿತು, ವಿವೇಚಿಸೋಣ.

ಮಾನಸಿಕ ಅಧರ್ಮಾಚರಣೆಗಳು ಯಾವುವು ? ಎಂದರೆ, ಒಬ್ಬ ಮನುಷ್ಯನು ಇನ್ನೊಬ್ಬನ ಸಂಪತ್ತಿಯ ಸಾಧನಗಳು ತನ್ನವಾಗಬೇಕೆಂದು ಬಯಸುತ್ತಾನೆ. ಇಲ್ಲವೆ ದ್ವೇಷ ಬುದ್ಧಿಯವನಾಗುತ್ತಾನೆ. ಈ ಪ್ರಾಣಿಗಳು ಕೊಲ್ಲಲ್ಪಡಲಿ, ನಾಶ ಹೊಂದಲಿ ಎಂಬ ವಿಚಾರವನ್ನು ತಂದುಕೊಳ್ಳುವನು. ದಾನವಿಲ್ಲ, ಧರ್ಮವಿಲ್ಲ, ಸುಕೃತ ದುಷ್ಕೃತ ಕರ್ಮಗಳ ಫಲವಿಲ್ಲ. ಈ ಲೋಕವಿಲ್ಲ, ಪರಲೋಕವಿಲ್ಲ ಎಂಬೀತರದ ನಾಸ್ತಿಕ ವಿಚಾರಗಳನ್ನು ಮಾಡುತ್ತಾನೆ. ಈ ರೀತಿಯಾಗಿ ಮನಸ್ಸಿನಲ್ಲಿ ಅಧರ್ಮಾಚರಣೆಯನ್ನು ಆಚರಿಸುತ್ತಾನೆ.





ಧನವ ನೋಡುವವನು ಧನವ ಮೆಚ್ಚುತಿಹನು.
ಧನದ ಮೇಲೆ ಮೋಹ ತಳೆಯುವವನು,
ಧನವ ನೀಡುವವನ ದೊರೆಯೆಂದು ನೋಳ್ಪನು.
ವಿಶ್ವದಾಭಿರಾಮ ಕೇಳು ವೇಮ.

ಪರರ ಧನವನ್ನು ನೋಡಿ, ಆ ಧನ ಸಂಪತ್ತನ್ನು ಮೆಚ್ಚುತ್ತಾನೆ. ಧನದ ಮೋಹ ಬೆಳೆಯುತ್ತಿದೆ. ಮನದ ಎದುರು ಧನಾರ್ಜನೆಯ ಮುಸುಕು ಎಳೆದಂತಾಗುತ್ತದೆ. ಇನ್ನು ತನಗೆ ಸ್ವಲ್ಪು ಧನ ನೀಡಿದರೆ ಸಾಕು, ಅವನನ್ನು ತಮ್ಮ ದೊರೆ ಅಂದರೆ ಒಡೆಯನೆಂದೇ ಭಾವಿಸುವನು.

ಪರರ ಮೋಸಗೊಳಿಸಿ ಪರಧನವನಾಶಿಸಿ,
ಹೊಟ್ಟೆ ಹೊರೆಯುತಿಹುದು ಹೊಲ್ಲ ನೋಡು.
ಋಣ ಮಾಡೆ ಮನುಜ ವೃದ್ಧಿ ಹೊಂದಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಪರರ ಧನವನ್ನು ಕಂಡು ಅದು ತನ್ನದಾಗಬೇಕೆಂದು ಆಶಿಸುತ್ತಾನೆ. ಅದಕ್ಕಾಗಿ ಪರರನ್ನು ಮೋಸಗೊಳಿಸುತ್ತಾನೆ. ಹೀಗೆ ಪರಧನ ಪಡೆಯಲು ಮೋಸ ವಂಚನೆಗಿಳಿದು ಹೊಟ್ಟೆ ಹೊರೆಯುವುದು ಸರಿಯಲ್ಲ ನೋಡು. ಇನ್ನು ಸಾಲ ಮಾಡಿ ಹೊಟ್ಟೆ ಹೊರೆದರೂ ಅಂಥ ಮನುಷ್ಯನ ವೃದ್ಧಿಯಾಗುವುದಿಲ್ಲ.

ಕನಕ ಕಂಡು, ಮತ್ತೆ ಕಾಂತೆಯನ್ನು ಕಂಡು,
ಹದುಳ ಹುಟ್ಟದಿಹುದೆ ? ಆರು ಏನು ?
ಮಿರುಗು ಕಣ್ಣ ಹೆಣ್ಣು ತೊರೆವ ಅಣ್ಣರಾರು ?
ವಿಶ್ವದಾಭಿರಾಮ ಕೇಳು ವೇಮ.

ಬೇರೆಯವರ ಬಳಿ ಇರುವ ಕನಕವನ್ನು ಕಂಡು, ಆಸೆ ಹುಟ್ಟುತ್ತದೆ. ಮತ್ತು ಸುಂದರ ಯುವತಿಯನ್ನು ಕಂಡು ಪ್ರೀತಿ ಹುಟ್ಟುತ್ತಿದೆ. ಇದು ತೀರ ಸಹಜ. ಯಾರಾದರೂ ಹೀಗೇ ಅನಿಸುತ್ತದೆ. ಮಿಂಚುವ ಕಣ್ಣು ಉಳ್ಳ ಹೆಣ್ಣನ್ನು ಬೇಡವೆಂದು ತೊರೆಯುವ ಅಣ್ಣರಾರುಂಟು ?

ಹೊಂಚು ಹಾಕಿ ಹಾವು ಹೆಡೆಯ ಮುಚ್ಚುತಿಹುದು.
ಕೆಡಿಸಲೆಳಸುವವನು ಗೆಳೆತನ ಗೆಯ್ವ.
ಕೊಲುವ ಇಚ್ಛೆಯ ದೊರೆ ಸಲುಗೆ ನೀಡುತಿಪ್ಪ.
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನನ್ನು ಕಚ್ಚಬೇಕೆಂದು ಹೊಂಚು ಹಾಕಿದ ಹಾವು ಹೆಡೆಯನ್ನು ಮುಚ್ಚಿಕೊಂಡು ತೆಪ್ಪಗೆ ಕುಳಿತಿರುತ್ತದೆ. ಅದೇ ರೀತಿ, ಒಬ್ಬನನ್ನು ಕೆಡಿಸಲೆಳಸುವ ವಂಚಕನು ಗೆಳೆತನದ ಸೋಗು ಹಾಕಿ ಬಳಿ ಸೇರುತ್ತಾನೆ. ರಾಜನೂ ಸಹ ತಾನು ಕೊಲ್ಲಬೇಕೆಂದು ಇಚ್ಛಿಸಿದ ವಿಶ್ವಾಸ ಘಾತಕಿಗೆ ಹೆಚ್ಚು ಸಲುಗೆ ನೀಡಿ, ಹತ್ತಿರ ಬರಮಾಡುತ್ತಾನೆ.

ಯಾರ ಬಾಯಿ ತುತ್ತು, ಯಾರೊ ಭಕ್ಷಿಸುತಿಹರು.
ಅವರ ಬಾಯಿ ಮೃತ್ಯು ವಿಧಿಗೆ ಈಡು.
ಮೀನು ದೊಡ್ಡದಿರಲು ಮೀನು ಮರಿ ತಿನುವುದು.
ಮನುಜ ಮೀನು ಪಿಂಡ ತಿನುವ ವೇಮಾ.

ಯಾವನೋ ಒಬ್ಬನು ತನ್ನ ಪರಿಶ್ರಮದಿಂದ ಧನಾರ್ಜನೆಮಾಡಿ ಬಾಯಿ ತುತ್ತು ತೆಗೆದುಕೊಳ್ಳುವನು, ಆದರೆ ಅದನ್ನು ಇನ್ನಾವನೋ ಹಾರಿ ಹೊಡೆದು ತಾನು ಭಕ್ಷಿಸುತ್ತಾನೆ. ಇಂಥ ಪರರ ಶೋಷಕರ ಬಾಯಿಗೆ ವಿಧಿಯು ವಿಧಿಸುವ ಮೃತ್ಯುವೇ ಸರಿಯಾದ ಪಾಠವಾಗುತ್ತದೆ. ದೊಡ್ಡ ಮೀನು ಸಣ್ಣ ಮೀನುಗಳನ್ನು ನುಂಗಿ ಬಿಡುವುದು. ಅದೇ ಅದರ ಆಹಾರ. ಮನುಷ್ಯನು ಮೀನಿಗಿಂತ ದೊಡ್ಡ ಜೀವಿ. ಹೀಗಾಗಿ ಅವನು ಮೀನಿನ ಮಾಂಸವನ್ನೇ ತಿಂದು ಹೊಟ್ಟೆ ತುಂಬಿಕೊಳ್ಳುತ್ತಾನೆ.

ಗೀತ : ಭ್ರಾಂತಿ ಚೇತನ ಮರ್ತ್ಯರು ಭಕ್ತಿ ಬಿಡಲು,
ಭಯವು ಆಗಿ, ಹುಟ್ಟು ಸಾವುಗಳು ಪ್ರಾಪ್ತವಿಹವು.
ಇಂಥ ನರರಿಗೆ ಕಷ್ಟಗಳು, ಎಂತಳಿವವು ?
ಗುರುವಿನ ಸನ್ನಿಧಿ ಕಳೆವುದು ಕೊರತೆ ವೇಮ.

ಮರ್ತ್ಯ ಲೋಕದಲ್ಲಿ ವಾಸಿಸುವ ಜನರು, ತಮ್ಮ ಉದ್ಧಾರಕ್ಕಾಗಿ ಆತ್ಮ ಚೇತನವನ್ನು ವಿಕಾಸಗೊಳಿಸಿಕೊಳ್ಳಬೇಕು. ಆದರೆ ಅವರು ಮರ್ತ್ಯಲೋಕದ ಸೆಳೆತಕ್ಕೆ ಸಿಕ್ಕು ಪರಮಾತ್ಮನಲ್ಲಿ ಭಕ್ತಿಯನ್ನು ಬಿಡುತ್ತಾರೆ. ಲೌಕಿಕ ವಿಷಯಗಳಲ್ಲಿ ಆಸಕ್ತಿ ತಳೆಯುತ್ತಾರೆ. ಹೀಗಾಗಿ, ಮನವು ಒಮ್ಮನವಾಗದೆ ಇಮ್ಮನವಾಗುತ್ತದೆ. ದ್ವಂದ್ವವು ಹುಟ್ಟುತ್ತದೆ. ಇದರಿಂದ ಭಯವು ಆಗಿ, ಹುಟ್ಟು ಸಾವುಗಳು ಅನಿವಾರ್ಯವಾಗುತ್ತವೆ. ಇಂಥ ಜನರಿಗೆ ಕಷ್ಟಗಳು ಅಳಿಯವು. ಕಷ್ಟಗಳ ಸರಮಾಲೆಯೇ ಎದುರಾಗುತ್ತದೆ. ಅವರಿಗೆ ಸಾಂತ್ವನದ ಕೊರತೆಯಿದೆ. ಆ ಕೊರತೆಯನ್ನು ಗುರುವಿನ ಸನ್ನಿಧಿಯು ಮಾತ್ರ ಕಳೆಯಬಲ್ಲದು.

ಆ ॥ ಸಾಕು ಇನ್ನು ಮೇಲೆ, ಚಾರ್ವಾಕ ಮತ ರೀತಿ.
ಶಕ್ತಿ ದೈವವೆಂದು ಚೊಕ್ಕ ನಂಬು.
ಸರಣಿ, ಮೀರಿ ಕೆಡುಗು ಚೆಂಡಾಲ ಸೇವೆಯು.
ವಿಶ್ವದಾಭಿರಾಮ ಕೇಳು ವೇಮ.

ಇಲ್ಲಿ ಚಾರ್ವಾಕ ಮತದ ರೀತಿ ಇನ್ನು ಸಾಕು, ಎಂಬ ಸ್ಪಷ್ಟ ಆದೇಶವಿದೆ. ಹಾಗಾದರೆ, ಚಾರ್ವಾಕ ಮತವೆಂದರೇನು ? ಅದರ ರೀತಿ ನೀತಿಗಳೇನು ? ವೈದಿಕರ ಶುಷ್ಕ ವ್ರತ ನೇಮದ ಧರ್ಮವನ್ನು ಅವು ವಿರೋಧಿಸಿದವೆನ್ನೋ ನಿಜ. ಆದರೆ ಅವುಗಳೆಂದೂ ನೀತಿಯ ಗೆರೆಯನ್ನು ಮೀರಲಿಲ್ಲ ಆದರೆ ಚಾರ್ವಾಕನ ಜಡ ದರ್ಶನವು ಶುಷ್ಕ ವ್ರತ ನೇಮಗಳ ಧರ್ಮೋಪಚಾರಣೆಯನ್ನು ವಿರೋಧಿಸುವುದರೊಂದಿಗೆ ನೀತಿಯನ್ನಾಗಲಿ, ಮಾನವೀಯ ಮೂಲ್ಯ ಬೋಧೆಯನ್ನಾಗಲಿ ಸ್ವೀಕರಿಸಲಿಲ್ಲ.

"ನೀವು ಜೀವಿಸಿರುವ ವರೆಗೆ ಸುಖವಾಗಿ ಜೀವಿಸಿರಿ. ಸಾಲ ಮಾಡಿದರೂ ಚಿಂತೆಯಿಲ್ಲ





ತುಪ್ಪ ತಿನ್ನಿರಿ ಮರಣಾ ನಂತರ ಏನೊಂದೂ ಇಲ್ಲ. ಸುಟ್ಟು ಭಸ್ಮವಾದ ದೇಹವು ಅದೆಂತು ತಿರುಗಿ ಬರುವುದು?"

"ಮೂರು ವೇದಗಳ ಕರ್ತರು, ಭಂಡರು, ಧೂರ್ತರು ಮತ್ತು ನಿಶಾಚರರು".

"ಜೀವ-ಮನ ಇಲ್ಲವೆ ಜೀವ ಚೇತನವು ಕ್ಷಿತಿ, ಜಲ, ತೇಜ, ಮರುತ್ ಎಂಬೀ ನಾಲ್ಕು ಭೂತಗಳ ಮಿಶ್ರಣದ ಫಲವಾಗಿ ಉದ್ಭೂತವಾದ ಐದನೆಯ ತತ್ತ್ವವಾಗಿದೆಯಷ್ಟೇ".

ಪ್ರತ್ಯಕ್ಷವೊಂದು ಪ್ರಮಾಣ. ಅನುಮಾನಾದಿಗಳು ಅಂಗೀಕಾರವಲ್ಲ. ಏಕೆಂದರೆ ಅಲ್ಲಿ ಪ್ರಮಾಣದ ಅಭಾವವಿದೆ. ಚಾರ್ವಾಕರು ಇಂಥ ಗ್ರಹಿಕೆಗಳ ಮೂಲಕ ಪಾಪ ಪುಣ್ಯಗಳನ್ನು ನಂಬಲಿಲ್ಲ.

ವೇಮನ ಯೋಗಿಗಳು ಘೋಷಿಸುತ್ತಾರೆ. ಇನ್ನು ಚಾರ್ವಾಕ ಮತದ ರೀತಿ ಸಾಕು ಸಾಕು. ಪರಾಶಕ್ತಿಯೊಂದಿದೆ. ಅದರಿಂದ ಎಲ್ಲವೂ ನಡೆಯುತ್ತಿದೆ. ಅದನ್ನು ಚೊಕ್ಕ ನಂಬು, ಕ್ರೌರ್ಯದಿಂದ ಕೂಡಿದ ಚಂಡಾಲ ಸೇವೆಯು ರೀತಿ ತಪ್ಪಿದ ಕೇಡು ಉಂಟು ಮಾಡುತ್ತದೆ.

-------

# ೧೪. ಸುಚರಿತೆಗಳು

ಈ ಮೊದಲು ವಿವರಿಸಿದಂತೆ ಮಾನವನ ಕರಣಗಳು ಮೂರು. ಮನವನು ಕಾಯ್ಾ, ವಾಚಾ ಮತ್ತು ಮನಸಾ ಒಳ್ಳೆಯ ಇಲ್ಲವೆ ಕೆಟ್ಟ ಚರಿತೆಯನ್ನು ಅಂದರೆ ನಡತೆಯನ್ನು ಹೊಂದಬಹುದು. ಇದುವರೆಗೆ ದುಶ್ಚರಿತೆಯನ್ನು ಕುರಿತು ವಿವೇಚಿಸಿದೆವು. ಈಗ ಸುಚರಿತೆಗಳ ಬಗೆಗೆ ಆಲೋಚಿಸುವಾ :

## ಶಾರೀರಿಕ ಸುಚರಿತೆ :

ಶಾರೀರಿಕ ಸುಚರಿತೆ ಇಲ್ಲವೆ ನಡತೆಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು. ಒಂದನೆಯದಾಗಿ ಅಹಿಂಸೆ, ಎರಡನೆಯದಾಗಿ ಅಸ್ತೇಯ ಅಂದರೆ ಕಳವು ಮಾಡದಿರುವಿಕೆ. ಮೂರನೆಯದೆಂದರೆ ಅವ್ಯಭಿಚಾರ ಇಲ್ಲವೆ ಸುಶೀಲತೆ.

## ಅಹಿಂಸೆ :

ಆ ||
ಹಿಂಸೆ ಗೆಯ್ಯದಿಹುದೆ ಮುಖ್ಯ ಧರ್ಮವಯ್ಯ.
ಪ್ರಾಣಿ ಕೊಂದು ತಿನುವ ಪುರುಷಗಿಂತ,
ಸತ್ತ ಪಶುವ ತಿನುವ ಚಂಡಾಲನೆ ಮೇಲು.
ವಿಶ್ವದಾಭಿರಾಮ ಕೇಳು ವೇಮ.

ಹಿಂಸೆ ಮಾಡದಿರುವುದೇ ಮುಖ್ಯ ಧರ್ಮವಾಗಿದೆ. ಇದುವೇ ಶಾರೀರಿಕ ಸುಚರಿತೆ. ತನ್ನ ಹೊಟ್ಟೆಯ ಹಸಿವು ತಣಿಸಲು ಪ್ರಾಣಿಗಳನ್ನು ಕೊಂದು ತಿನ್ನುವ ಪುರುಷನಿಗಿಂತಲೂ ಸತ್ತ ಪ್ರಾಣಿಯ ಮಾಂಸವನ್ನು ತಿನ್ನುವ ಚಂಡಾಲನೇ ಮೇಲಲ್ಲವೇ ? ಅವನು ಪ್ರಾಣಿ ಹಿಂಸೆಯನ್ನಾದರೂ ಮಾಡುವುದಿಲ್ಲ.

ಆ ||
ಹಿಂಸೆ ಗೆಯ್ಯದಿಹುದೆ ಹಿರಿಯ ಪುಣ್ಯಧರ್ಮ
ಅನದೆ, ಹಿಂಸೆ ಗೆಯ್ವರವನಿ ಸುರರು.
ಸತ್ತ ಪಶುವ ತಿನುವ ಚಂಡಾಲನೆ ಮೇಲು.
ವಿಶ್ವದಾಭಿರಾಮ ಕೇಳು ವೇಮ.

ಯಜ್ಞಯಾಗಾದಿಗಳಲ್ಲಿ ಪ್ರಾಣಿ ಬಲಿ ಕೊಡುತ್ತಾರೆ. ನೂರಾರು ಅಜ (ಆಡು)ಗಳನ್ನೂ, ಅಶ್ವಗಳನ್ನೂ, ಹೋರಿಗಳನ್ನೂ ಹಿಂಸೆ ಮಾಡಿ, ಅವನಿ ಸುರರು ಯಜ್ಞ ದೇವತೆಗಳಿಗೆ ಬಲಿ ಕೊಡುತ್ತಾರೆ. ಹಿಂಸೆ ಮಾಡದಿರುವುದೇ ಶ್ರೇಷ್ಠ ಪುಣ್ಯ ಧರ್ಮವೆಂದು ಅನ್ನದೆ ಇಂಥ ಪಶುಗಳ ಹಿಂಸೆಗೆ ತೊಡಗುತ್ತಾರೆ. ಇವರಿಗಿಂತ ಸತ್ತ ಪಶುವನ್ನು ತಿನ್ನುವ ಚಂಡಾಲನೇ ಮೇಲು.

ಆ ||
ನೊಸಲು ಭಕ್ತನಹುದು ; ನಾಲನೆ ತೋಳನದು.
ಚಿತ್ತ ಭೂತದಂತೆ ಚಲಿಸುವವನು,
ನೋಡಿದೆ ಶಿವನೆನೆ ನಾಚುಗೆ ಎನಿಸದೇ ?
ವಿಶ್ವದಾಭಿರಾಮ ಕೇಳು ವೇಮ.





ಹಣೆಗೆ ವಿಭೂತಿ ಬಳಿದುಕೊಂಡು ಶಿವಭಕ್ತನಂತೆ ನಟಿಸುತ್ತಾನೆ. ಆದರೆ ನಾಲಗೆಯಾದರೋ ತೋಳನದು. ಆಡು, ಕುರಿಗಳ ಮಾಂಸದ ರುಚಿಗಾಗಿ ಹಂಬಲಿಸುತ್ತದೆ. ಇನ್ನು ಚಿತ್ತವು ಭೂತದಂತೆ. ಅತೃಪ್ತ ಆತ್ಮವು ಇತ್ತ ಚಲಿಸುತ್ತದೆ. ಇಂಥ ತಾಂತ್ರಿಕನು ಶಿವನನ್ನು ನೋಡಿದೆ, ಶಿವನು ನನಗೆ ಒಲಿದಿದ್ದಾನೆ, ಎಂದು ಹೇಳುತ್ತಾನೆ. ಹೀಗೆ ಹೇಳಲು ಅವನಿಗೆ ನಾಚುಗೆ ಎನ್ನಿಸಬೇಡವೇ ?

## ಅಸ್ತೇಯ :

ಪರರ ಆಸ್ತಿಗೆ ಆಸೆ ಪಡದೆ, ಅದನ್ನು ದೋಚದಿರುವುದು ಅಸ್ತೇಯವೆನ್ನಿಸುತ್ತದೆ. ಇದು ಶಾರೀರಿಕ ಸುಚರಿತೆಯಾಗಿದೆ.

ಆ ||
ಪರರ ಆಸ್ತಿಯಲ್ಲಿ ಆಸೆ ಇಲ್ಲದಂಥ,
ಪುರುಷನವನಿಯಲ್ಲಿ ಪುಣ್ಯ ಮೂರ್ತಿ.
ಪರರ ಆಸ್ತಿಯಾಸೆ ಪಾಪ ಚಿಂತೆಯಹುದು.
ವಿಶ್ವದಾಭಿರಾಮ ಕೇಳು ವೇಮ.

ಬೇರೆಯವರ ಆಸ್ತಿಯನ್ನು ಕಂಡು ಕುರುಬಿ, ಅದನ್ನು ತನ್ನದಾಗಿಸಿಕೊಳ್ಳಬೇಕೆಂಬ ಆಸೆಯು ಕೂಡದು. ಇಂಥ ಆಸೆಯಿಲ್ಲದ ಪುರುಷನೇ ಅವನಿಯಲ್ಲಿ ಪುಣ್ಯ ಮೂರ್ತಿಯೆನಿಸುತ್ತಾನೆ. ಏಕೆಂದರೆ ಪರರ ಆಸ್ತಿಯಾಸೆಯು ಪಾಪ ಚಿಂತೆಯಾಗಿದೆ.

ಆ ||
ಖಗಗಳಿರವು ಚೆಂದ ; ಕಾಣಲಂದವಹುದು.
ಕಂಡು ಅರಿತೊಡನೆ ಗುರುತಾಗದೆ ?
ದೇವ ಕೊಡದ ಸೊಗಸು ತಾನು ಬಯಸಲೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಹಕ್ಕಿಗಳು ಆಕಾಶದಲ್ಲಿ ಸುಖ-ಸಂತೋಷದಿಂದ ಹಾರಾಡುತ್ತವೆ. ಅವುಗಳ ಹಾರಾಟದ ಅಂದ ಚೆಂದಗಳನ್ನು ಕಂಡರೆ, ದೇವ ಕೊಡದ ಸೊಗಸನ್ನು ತಾನೇಕೆ ಬಯಸಬೇಕು ? ಎಂಬ ಸತ್ಯ ಗೊತ್ತಾಗುವುದಿಲ್ಲವೆ ? ಇಲ್ಲದ ವಸ್ತುವಿಗಾಗಿ ಒಣ ಚಿಂತೆ ಮಾಡುವುದು ತರವಲ್ಲ ತಾನೇ ?

## ಅವ್ಯಭಿಚಾರ :

ಆ ||
ಪರನಾರಿಯ ಸಂಗ ಕೋರಿ ಹಾರೈಸಲು,
ಬರಿದೆ ಕೋಟಿ ಪೂಜೆ ಸರಿಯುತಿಹುದು.
ಉರಿಯ ತಾಪದಿಂದ ಬೆಣ್ಣೆ ರೂಪುಗೆಡದೆ ?
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಜಪ ತಪಗಳಲ್ಲಿ ತೊಡಗಿ ಮನಸ್ಸಿನ ಏಕಾಗ್ರತೆಯನ್ನು ಸಾಧಿಸಿರಬಹುದು. ಕೋಟಿಗಟ್ಟಳೆ ಪೂಜೆ ಪುನಸ್ಕಾರ ಗೆಯ್ದಿರಬಹುದು. ಆದರೆ ಪರನಾರಿಯ ಸಂಗವನ್ನು ಕೋರಿ ಹಾರೈಸಿದರೆ ತೀರಿತು. ಮನಸ್ಸು ಮೋಹಗೊಳ್ಳುತ್ತದೆ. ಏಕಾಗ್ರತೆಯು ಹಾಳಾಗುತ್ತದೆ.

ಪೂಜಾದಿಗಳಿಂದ ಗಳಿಸಿದ ಪುಣ್ಯಫಲವು ಸರಿದು ಹೋಗುತ್ತದೆ. ಬೆಣ್ಣೆಯನ್ನು ಉರಿಯ ಬಳಿ ಇರಿಸಿದರೆ ಅದರ ತಾಪದಿಂದ ಕರಗುವಂತೆ, ಪರನಾರಿಯ ಸಂಗದ ಬಯಕೆಯಿಂದ ಮನದ ಏಕಾಗ್ರತೆಯು ಹಾಳಾಗುತ್ತದೆ.

ಆ ||
ನಾರಿ ಪಾಪ ಜಾತಿ, ನಿಖಿಲ ವಸ್ತುಗಿಂತ
ಆಶೆಯಿಂದ ಯತಿಯು ಮೋಸಗೊಳನೆ ?
ನೋಡಿ ಬಿಡುವ ಅವರು, ನೋಡು ಶುದ್ಧಾತ್ಮರು.
ವಿಶ್ವದಾಭಿರಾಮ ಕೇಳು ವೇಮ.

ಎಲ್ಲ ವಸ್ತುಗಳಿಗಿಂತಲೂ ನಾರಿ ಪಾಪ ಜಾತಿಯವಳು. ಅವಳು ತನ್ನ ಗಾಡಿ ಮೋಡಿಯಿಂದ ಹಾವ ಭಾವಗಳಿಂದ ಪುರುಷನ ಮನವನ್ನು ಸೆಳೆಯುತ್ತಾಳೆ. ಯತಿಯು ಸಂಗ ಸುಖದ ಆಸೆಯಿಂದ ಬೇಗನೇ ಮೋಸಗೊಳ್ಳುತ್ತಾನೆ. ಈಗ ಸಂಗ ಸುಖವು ತಾತ್ಕಾಲಿಕವಾದದ್ದು, ಇಂಥ ವ್ಯಭಿಚಾರಕ್ಕಿಳಿದರೆ ತನ್ನ ಸದಾಚಾರವು ನಾಶವಾಗುತ್ತದೆ, ಎಂದು ಅದನ್ನು ನೋಡಿ, ಅರಿತು ಬಿಡುವವನೇ ಶುದ್ಧಾತ್ಮನು.

ಆ ||
ಹೊನ್ನು ನೋಡಿದೊಡನೆ, ಹೆಣ್ಣು ನೋಡಿದೊಡನೆ
ಚಿತ್ತದಲಿ ಚಿಂತೆ ಹತ್ತದಿರಲು,
ಅವನೆ ಪರಮ ಯೋಗಿ, ಅವನಿಯೊಳು ಬಣ್ಣಿಸೆ.
ವಿಶ್ವದಾಭಿರಾಮ ಕೇಳು ವೇಮ.

ವಿತ್ತೇಷಣ ಮತ್ತು ದಾರೇಷಣಗಳು ಮಾನವನ ಸಹಜ ಈಷಣಗಳೇ. ಹೊನ್ನು ನೋಡಿದಾಗ, ಹೆಣ್ಣು ನೋಡಿದಾಗ, ಯಾರ ಚಿತ್ತದಲ್ಲಿ ಚಿಂತೆ ಹತ್ತುವುದಿಲ್ಲವೋ, ಅವನು ಜಿತೇಂದ್ರಿಯನಾಗಿರುತ್ತಾನೆ. ವಿಷಯ ಪ್ರಪಂಚದ ಸೆಳೆತದಿಂದ ಸೆಳೆಯಲ್ಪಡದ ಸ್ಥಿತಿ ತಲುಪಿರುತ್ತಾನೆ. ಅಂಥವನೇ ಪರಮಯೋಗಿ. ಈ ಭೂಮಿಯಲ್ಲಿ ಯಾವನನ್ನಾದರು ಪರಮಯೋಗಿಯೆಂದು ಮನ್ನಿಸಬೇಕಾದವನು ಅಂಥವನೇ ಸರಿ.

## ವಾಚಕ ಸುಚರಿತೆ :

ತ್ರಿಕರಣಗಳ ಚರಿತೆಗಳಲ್ಲಿ ಕಾಯಾ ಘಟಿಸುವ ನಡತೆಗಳನ್ನು ವಿವರಿಸಿದೆವು. ಈಗ ವಾಚಾ ಘಟಿಸುವ ಸುಚರಿತೆಗಳನ್ನು ಕುರಿತು ವಿವೇಚಿಸುವಾ.

ಸುಳ್ಳು ಹೇಳುವುದನ್ನು ಪೂರ್ತಿಯಾಗಿ ಬಿಟ್ಟು ನಿಜವನ್ನೇ ನುಡಿಯುತ್ತಾನೆ. ಜನರಲ್ಲಿ ಒಕ್ಕಟ್ಟು ಮೂಡುವಂತೆ ಪ್ರೇರಿಸುತ್ತಾನೆ. ಮಧುರ ಮಾತನಾಡಿ ಕಿವಿಗೆ ಇಂಪು ನೀಡಿ ಹೃದಯಕ್ಕೆ ತಂಪು ನೀಡುತ್ತಾನೆ. ಸಮಯಕ್ಕೆ ತಕ್ಕ ಸೂಕ್ತ ಮಾತುಗಳನ್ನೇ ಆಡುತ್ತಾನೆ.

ಆ ||
ಸತ್ಯ ಒಪ್ಪವಿರಲು, ಜ್ಞಾನ ಒಪ್ಪವುಂಟು,
ಜ್ಞಾನ ಒಪ್ಪವಿರಲು, ಸತ್ಯವುಂಟು.
ಜ್ಞಾನ ಸತ್ಯಗಳನು ಸಮನಿರಿಸೆ ದ್ವಿಜನು.
ವಿಶ್ವದಾಭಿರಾಮ ಕೇಳು ವೇಮ.





ನಾವು ಶೋಧಿಸುವ ಸತ್ಯವು ಒಪ್ಪವಾಗಿ ಇದ್ದರೆ, ಅದನ್ನು ಅರಿಯುವ ಜ್ಞಾನವೂ ಒಪ್ಪವುಂಟು. ಜ್ಞಾನವು ಒಪ್ಪವಾಗಿದ್ದರೆ, ಅಲ್ಲಿ ಸತ್ಯವಿದ್ದೇ ಇರುತ್ತದೆ. ಜ್ಞಾನವನ್ನೂ, ಸತ್ಯವನ್ನೂ ಸಮನಾಗಿ ಇರಿಸಿದರೆ ಅವನು ಪರಲೋಕದಲ್ಲಿ ಜನಿಸಿದ ದ್ವಿಜನೆನಿಸುತ್ತಾನೆ.

ಸತ್ಯವನ್ನು ಬಿಡದೆ, ಸಾಹಸವನು ತೋರಿ,
ಬಂಟ ಪಂಥ ಧರಿಸು ಭಕ್ತಿಯಿಂದ.
ಕರ್ಮ ಜೀವಿ ತಾನು ಕಾಣಲಾರನಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಸತ್ಯದ ಪರಮಪದ ತಲುಪಲು, ಸತ್ಯವೇ ಮಾರ್ಗವಾಗಿದೆ. ಆದ್ದರಿಂದ ಸತ್ಯವನ್ನು ಬಿಡದೆ, ಬರುವ ಪ್ರಸಂಗಗಳನ್ನು ಎದುರಿಸಿ ಸಾಹಸವನ್ನು ತೋರಬೇಕು. ಪೂರ್ವ ಸಂಸ್ಕಾರಗಳ ಫಲವಾಗಿ ನಿಮ್ಮ ವೃತ್ತಿಗಳೇಳಬಹುದು. ಅವುಗಳೊಂದಿಗೆ ಕಾದುವ ಬಂಟನಾಗು. ಪರಮಾತ್ಮನಲ್ಲಿ ಭಕ್ತಿ ತಾಳಿ, ಸ್ಥೈರ್ಯ ತಂದುಕೋ ಹೀಗೆ ಯೋಗ ಮಾರ್ಗದಿಂದ, ಜ್ಞಾನ ಮಾರ್ಗದಿಂದ ಮುಂದಾಗು. ಏಕೆಂದರೆ ಕರ್ಮ ಜೀವಿಯು ಕರ್ಮದಿಂದ ಪ್ರತಿಕರ್ಮಫಲವನ್ನು ಪಡೆಯುತ್ತಾನೆ. ಹಾಗಾಗಿ ಕರ್ಮ ಚಕ್ರದಿಂದ ಪಾರುಗಾಣನು.

ಆ ||
ನಿಜವನಾಡುವವನು ನಿರ್ಮಲನಾಗಿಹನು.
ನಿಜವನಾಡುವವನು ನೀತಿ ಪರನು.
ನಿಜವನಾಡದವನು ನೀಚ ಚಂಡಾಲನು.
ವಿಶ್ವದಾಭಿರಾಮ ಕೇಳು ವೇಮ.

ನಿಜವನ್ನು ನುಡಿಯುವವನಲ್ಲಿ ಯಾವುದೇ ಬಗೆಯ ಆವರಣೇ ಇಲ್ಲವೆ ವಿಕ್ಷೇಪ ಮಲಗಳು ಇರುವುದಿಲ್ಲ. ಅವನು ನಿರ್ಮಲನಾಗಿರುತ್ತಾನೆ. ನಿಜವನ್ನು ನುಡಿಯುವವನು, ಸನ್ಮಾರ್ಗಕ್ಕೆ ಕರೆದೊಯ್ಯುವ ನೀತಿಪರನು. ಆದರೆ ಯಾರು ನಿಜವನ್ನು ಆಡುವುದಿಲ್ಲವೋ, ಯಾರು ಬ್ರಹ್ಮದ ಹೆಸರಿನಲ್ಲಿ ಜನರಲ್ಲಿ ಜಾತಿ ಭೇದವನ್ನು ಬಿತ್ತುವರೋ, ಯಾರು ಜನರಲ್ಲಿ ಮೇಲು ಕೀಳು ಭಾವನೆಯನ್ನು ಪ್ರೇರಿಸುವರೋ, ಅವರು ನೀಚ ಚಂಡಾಲರು.

ಕಂ.
ನಿಜವನೆ ನುಡಿಯುವ ಜನರಿಗೆ,
ವಿಜಯವಿಹುದೆಂದಿಗು, ಅವರ ವಿಭವವ ನೋಡಲ್.
ಕುಜನಾಳಿ ಸಹಿಸೆ ಶಕ್ಯವೆ ?
ಸುಜನರು ಮನದೆಣಿಸೆ ತರವೆ ? ಸರಳವು ವೇಮಾ.

ನಿಜವನ್ನೇ ನುಡಿಯುವ ಜನರಿಗೆ ಎಂದಿಗೂ ವಿಜಯವಿಹುದು. "ಸತ್ಯಮೇವ ಜಯತೇ, ನಾನೃತಂ". ಸತ್ಯವೇ ಜಯಿಸುತ್ತಿದೆ, ಅನೃತವಲ್ಲ. ನಿಜವಾಡುವವರ ಘನತೆಯನ್ನು ನೋಡಿ, ಕುಜನ ಜನ-ಸಮೂಹ ಸಹಿಸಲು ಶಕ್ಯವೇ ? ಅವರಿಗೆ ಕಸಿವಿಸಿಯಾಗುತ್ತದೆ. ಇದನ್ನೆಲ್ಲ ಸುಜನರು ಮನದಲ್ಲಿ ಎಣಿಸಿ ಪ್ರಕ್ರಿಯಿಸುವುದು ಸರಿಯಾದೀತೇ ? ಎಲ್ಲವೂ ಸ್ಪಷ್ಟವಿದೆ, ಸರಳವಿದೆ.

## ಒಕ್ಕಟ್ಟು :

ಐದು ಬೆರಳ ಶಕ್ತಿಯಿಂದ ಕೈಯ ಕಾರ್ಯ.
ಒಂದು ಕಳೆಯೆ ಹೊಂದಿಕೆ ಹಿಂಗುವುದು.
ನಂಬಿದವರೊಳೊಬ್ಬ ತೊರೆಯೆ ಕೇಡು ಕಣಾ !
ವಿಶ್ವದಾಭಿರಾಮ ಕೇಳು ವೇಮ.

ಕಾರ್ಯ ಸಾಧನೆಗೆ ಒಕ್ಕಟ್ಟು ಅತಿ ಮುಖ್ಯ. ಕೈಯ ಕಾರ್ಯವು ಸುಗಮವಾಗಿ, ಸರಳವಾಗಿ ನೆರವೇರಬೇಕಾದರೆ, ಐದೂ ಬೆರಳುಗಳ ಶಕ್ತಿಯು ಅನಿವಾರ್ಯ. ಅದರಲ್ಲಿ ಒಂದು ಬೆರಳು ಊನವಾದರೆ, ಕಾರ್ಯವಿಧಾನದಲ್ಲಿ ಹೊಂದಿಕೆ ಕುದುರದು. ಅದೇ ರೀತಿ, ನಾವು ಒಟ್ಟಾಗಿ ಕಾರ್ಯ ಮಾಡುವಾಗ ಒಬ್ಬನು ನಂಬಿಕೆ ದ್ರೋಹಿಯಾದರೆ ಕೇಡಿಗೆ ಔತಣ ನೀಡಿದಂತೆ. ಕಿತ್ತೂರಿನ ಮಲ್ಲಪ್ಪ ಶೆಟ್ಟಿ, ಮೈಸೂರಿನ ಮೀರಸಾಧಕ, ರಾಜಸ್ತಾನದ ಜಯಚಂದ ಮುಂತಾದ ವಿಶ್ವಾಸ ದ್ರೋಹಿಗಳ ಕತೆಗಳು ಇತಿಹಾಸದ ಪುಟ ಪುಟಗಳಲ್ಲಿ ದೊರೆಯುತ್ತವೆ.

ಆ॥ ಸಕ್ತಿ ಇರುವ ಕಾರ್ಯ ಚೊಕ್ಕ ನೆರವೇರುವುದು.
ಭಕ್ತಿ ಇರುವ ಪೂಜೆ ಫಲವೀವುದು.
ಯುಕ್ತಿ ಇರುವ ಮಾತು ಒಪ್ಪವಿಹುದು ಜಗದಿ.
ವಿಶ್ವದಾಭಿರಾಮ ಕೇಳು ವೇಮ.

ನಮ್ಮ ಕಾರ್ಯದಲ್ಲಿ ನಾವು ಆಸಕ್ತಿ ಹೊಂದಿರಬೇಕು. ಸಾಧಕ ಬಾಧಕಗಳನ್ನು ಸರಿಯಾಗಿ ವಿವೇಚಿಸಬೇಕು. ಆಗ ಮಾತ್ರ ನಾವು ಕೈಕೊಂಡ ಕಾರ್ಯವು ಚೊಕ್ಕವಾಗಿ ನೆರವೇರಿವುದು. ಸೇವಾಭಾವನೆ ಇರಬೇಕು. ಆಗ ಪೂಜೆಯು ಫಲ ನೀಡುತ್ತದೆ. ಮನೋಶುದ್ಧಿ ಪ್ರಾಪ್ತವಾಗುತ್ತದೆ. ಯುಕ್ತಿ ಇರುವಾಗ ನಮ್ಮ ಮಾತು ಜಗತ್ತಿನಲ್ಲಿ ಒಪ್ಪದೆನಿಸುತ್ತದೆ. ಸ್ವೀಕಾರಾರ್ಹವೆನಿಸುತ್ತದೆ.

## ಮಧುರ ಮಾತು :

ಆ॥ ಮಾತು ಮುನ್ನವರಿತು ಮತ್ತೋರ್ವನ ನುಡಿಗೆ
ಪ್ರತಿ ನುಡಿಯೆ ಅಮಿತ ಸಂತಸಕರ.
ಮನವರಿಯದೆ ಒಳಗೊಳಗೆ ತಳಮಳಿಸಲೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಒಬ್ಬರೊಡನೆ ಮಾತನಾಡವಾಗ ಅವರ ನುಡಿಯನ್ನು ಕೇಳಿ, ಅದರ ಇಂಗಿತವನ್ನು ಚೆನ್ನಾಗಿ ಅರಿತುಕೊಂಡು, ಸಾಧಕ ಬಾಧಕ ವಿವೇಚಿಸಿ ಪ್ರತಿ ಮಾತನಾಡಿದರೆ, ತುಂಬಾ ಸಂತಸವಾಗುತ್ತದೆ. ಆದರೆ ಬೇರೆಯವರು ಆಡಿದ ಮಾತಿನ ಇಂಗಿತವನ್ನೇ ಅರಿಯದೆ, ಅವರ ಮನಸ್ಸಿನ ಅನಿಸಿಕೆಗಳನ್ನು ಅರ್ಥ ಮಾಡಿಕೊಳ್ಳದೆ, ಅವರೇನೋ ಹೇಳಿದರೆಂದು ಒಳಗೊಳಗೆ ತಳಮಳಿಸುವುದೇಕೆ ?

ಆ॥ ಅಂದವರಿತ ಮಾತು, ಒಂದು ವಾಕ್ಯ ಸಾಕು.
ಹೆಚ್ಚು ಏಕೆ ವ್ಯರ್ಥ ಹಿಂದು ಮುಂದು,





ದಿಕ್ಕು ತಿಳಿದ ಮಣಿಹ ತಾನೊಂದೆ ಸಾಲದೆ ?
ವಿಶ್ವದಾಭಿರಾಮ ಕೇಳು ವೇಮ.

ಸೊಗಸಾದ, ರೀತಿ ಬದ್ಧವಾದ ಮಾತು ಒಂದು ವಾಕ್ಯವಾದರೂ ಸಾಕು. 'ತತ್ ತ್ವಮ್ ಅಸಿ' 'ಅದೇ ನೀನಿದ್ದೀ' ಎಂಬ ಉಪದೇಶ ಮಾತ್ರದಿಂದ ಏನೆಲ್ಲ ಸಾಧಿಸಬಹುದು. ಹೆಚ್ಚು ಮಾತುಗಳೇಕೆ ಬೇಕು ? ಹಿಂದು ಮುಂದು ಗೋಳು ಹುಯ್ಯುವುದೇಕೆ ? ನಮ್ಮ ಲಕ್ಷ್ಯ ವಸ್ತುವಿನ ದಿಕ್ಕು ತಿಳಿದು ಶರಣಾಗತಿ ಪಡೆದರೆ ಸಾಕು. ಅಷ್ಟರಿಂದ ಲಕ್ಷ್ಯ ತಲುಪಬಹುದು. ಅದಷ್ಟೇ ಸಾಲದೇ ?

ಗೀತ ಉಚಿತವಾಡುತ ಇರುವಾತ ಅರ್ಹನಿರಲು,
ಗೌರವಾದಿಯ ಪದವಿಯ ಕಾಣುತಿರುವ.
ಸರ್ವ ಜನರಲಿ ಪೂಜ್ಯನಿಹ ಸಂತಸದಲಿ.
ಬಹಳ ಕೀರ್ತಿಯನು, ಮಹಿಯಲಿ, ಪಡೆವ ವೇಮ.

ಒಬ್ಬ ಅರ್ಹ ವ್ಯಕ್ತಿಯು ಉಚಿತವಾದದ್ದನ್ನುಆಡುತ್ತ ಸಂದರ್ಭಕ್ಕೆ ಸೂಕ್ತವಾಗಿ ನುಡಿಯುತ್ತ ಇದ್ದರೆ, ಅವನು ಗೌರವ, ಮಾನ ಸಮ್ಮಾನಗಳ ಪದವಿಯನ್ನು ಕಾಣುವನು. ಸರ್ವ ಜನರೂ ಅವನನ್ನು ಸಂತಸದಿಂದ ಪೂಜಿಸುತ್ತಾರೆ, ಸೇವಿಸುತ್ತಾರೆ. ಅಂಥ ಉಚಿತ ಮಾತಿನವನು ತನ್ನ ಹಿಂದೆ ಅಮೋಘ ಕೀರ್ತಿಯನ್ನೇ ಉಳಿಸುತ್ತಾನೆ.

ಆ॥ ಕೋಗಿಲೆ ವನದಲ್ಲಿ 'ಕುಹೂ' ಹಾಡುವಂತೆ,
ನುಡಿತ ಜನರ ಭಾಷ, ನಡೆಯು ನುಡಿಯು.
ಕಾಗೆ ಕೂಗಿನಂತೆ ಕಲುಷಾತ್ಮನ ವಚನ.
ವಿಶ್ವದಾಭಿರಾಮ ಕೇಳು ವೇಮ.

ಕೋಗಿಲೆಯ 'ಕು ಹೂ' ಇಂಚರವು ವನದ ನಿಸರ್ಗ ಸೌಂದರ್ಯದಲ್ಲಿ ಕಿವಿಗೆ ಇಂಪಾಗಿರುತ್ತದೆ. ಮನಸ್ಸಿಗೆ ಮುದವಾಗಿರುತ್ತದೆ. ಅದೇ ರೀತಿ, ಬಾಳಿನಲ್ಲಿ ನುರಿತ ಜ್ಞಾನವೃದ್ಧರ ಭಾವಾಭಿವ್ಯಕ್ತಿಗಳೂ, ನಡೆವಳಿಗಳೂ, ನುಡಿಮುತ್ತುಗಳೂ ಇರುತ್ತವೆ. ಅವರ ಮನಸ್ಸು ನಿಷ್ಕಲ್ಮಷವಾಗಿರುತ್ತದೆ. ಹಾಗಾಗಿ, ಅವರ ಮಾತು ಮಧುರವಾಗಿರುತ್ತದೆ. ಅದೇ ಕಾಗೆಯು ಕ್ರಾವ್ ಕ್ರಾವ್ ಎಂದು ಕೂಗಿದಾಗ, ಆ ಧ್ವನಿಯು ಕರ್ಕಶವೆನಿಸುತ್ತದೆ. ಕಲುಷಾತ್ಮನ ವಚನವು ಕಾಗೆಯ ಕೂಗಿನಂತೆ ಕರ್ಕಶವೆನಿಸುತ್ತದೆ.

## ಮಾನಸಿಕ ಸುಚರಿತೆ :

ತ್ರಿಕರಣ ಪೂರ್ವಕ ಮಾಡುವ ಕ್ರಿಯೆಗಳಲ್ಲಿ ಪರಿಶುದ್ಧನಾಗಿರಬೇಕು. ಮಲಿನವಾದದ್ದನ್ನು ತೊರೆದು ನಿರ್ಮಲನಾಗಿರಬೇಕು. ಈ ಮುನ್ನ ಕಾಯಾ ಮತ್ತು ವಾಚಾ ಕರಣಗಳಿಂದ ಗೆಯ್ಯುವ ಶುದ್ಧ ಕ್ರಿಯೆಗಳನ್ನು ಕುರಿತು ಯೋಚಿಸಿದೆವು. ಈಗ ಮನಸಾ ಗೆಯ್ಯುವ ಶುದ್ಧ ಕ್ರಿಯೆಗಳನ್ನು ಗಮನಿಸೋಣ.

ಮಾನವನು ಪರದ್ರವ್ಯಕ್ಕಾಗಿ ಲೋಭ ತಾಳುವುದಿಲ್ಲ. ಪರ ಸಂಪತ್ತಿಯ ಸಾಧನಗಳು

ತನ್ನವಾಗಬೇಕೆಂದು ಮನಸ್ಸಿನಲ್ಲಿ ವಿಚಾರ ಮಾಡುವುದಿಲ್ಲ.

ಅವನ ಚಿತ್ತವು ದ್ವೇಷದಿಂದ ಮುಕ್ತವಾಗಿರುವುದು. ಸಕಲ ಪ್ರಾಣಿಗಳು ನಿರ್ವೈರ, ದುಃಖರಹಿತ ಮತ್ತು ಸುಖಿಗಳಾಗಲಿ, ಎಂದು ಅವನು ಶುದ್ಧ ಸಂಕಲ್ಪ ಹೊಂದಿರುತ್ತಾನೆ.

ದಾನ ಧರ್ಮಗಳಿವೆ. ಸುಕೃತ ದುಷ್ಕೃತ ಕರ್ಮ ಫಲಗಳಿವೆ. ಮುಂತಾದ ಮಾತುಗಳಲ್ಲಿ ಅವನ ನಂಬಿಗೆ ಇದೆ.

ಆ॥ ಪರರಿಗುಪಕರಿಸಲು ಪರರ ಸೊತ್ತು ಪರಗೆ,
ಮರಳಿ ನೀಡಲಾಗ ಪರಮ ಪ್ರಾಪ್ತಿ,
ಪರಮಕಿಂತ ಪಾವನವೇನು ಆ ಸೊತ್ತು ?
ವಿಶ್ವದಾಭಿರಾಮ ಕೇಳು ವೇಮ.

ಒಬ್ಬನು ಸೊತ್ತು ಶೇಖರವಾದಾಗ ಅದು ಆತನೊಬ್ಬನ ಉಪಭೋಗಕ್ಕಾಗಿ ಎಂದು ತಿಳಿಯಬಾರದು. ಆಸ್ತಿಗೆ ನಿಜವಾಗಿ ಪರಮಾತ್ಮನೇ ಒಡೆಯ. ವ್ಯಕ್ತಿಯ ಒಡೆತನವು ವಿಶ್ವಸ್ಥ ಮಂಡಳಿಯ ನಾತೆಯಿಂದಷ್ಟೇ. ತನ್ನಲ್ಲಿ ಶೇಖರಿಸಿದ ಹಣವನ್ನು ಪರರು ಕಷ್ಟದಲ್ಲಿದ್ದಾಗ ಅವರ ಉಪಯೋಗಕ್ಕೆ ನೀಡಿದರೆ, ಆಗ ಪರರ ಸೊತ್ತನ್ನು ಪರರಿಗೆ ಮರಳಿ ನೀಡಿದಂತಾಗುತ್ತದೆ. ಅದರಿಂದ ಪರಮ ಪ್ರಾಪ್ತಿಯುಂಟು. ಆ ಸೊತ್ತು ತನ್ನ ಉಪಭೋಗಕ್ಕೆ ಸೀಮಿತವಾದರೆ, ಆ ಸೊತ್ತು ಮಾತ್ರ ತಮಗಾಗುತ್ತದೆ. ಆದರೆ ಅದನ್ನು ಪರರ ಉಪಕಾರಕ್ಕಾಗಿ ಮರಳಿ ನೀಡಿದರೆ, ಅವನಿಗೆ ಪರಮ ಪದವಿ ಪ್ರಾಪ್ತವಾಗುತ್ತದೆ. ಅಂದ ಮೇಲೆ, ಸೊತ್ತು ಪರಮ ಪದವಿ ಪ್ರಾಪ್ತಿಯೆದುರು ತೀರ ಗೌಣವಾಗುತ್ತದೆ.

ಕಂ. ಪರ ನಾರೀ ದೂರನಿಹನು.
ಪರ ಧನಗಳಿಗಾಸೆ ಪಡದೆ, ಪರಹಿತ ರತನ್ನೆ.
ಪರರಳುಕಲು ತಾನಳುಕದೆ,
ಪರರೆನ್ನದೆ ಬದುಕುವವ ಪ್ರಾಜ್ಞನು, ವೇಮಾ.

ಪರ ಸ್ತ್ರೀಯ ಸಂಗದ ವಿಚಾರವನ್ನೂ ಮಾಡದೆ, ಪರನಾರಿಯಿಂದ ದೂರನಿರುತ್ತಾನೆ. ಪರರ ಧನಕ್ಕೆ ಆಸೆ ಪಡುವುದಿಲ್ಲ. ಪರರ ಹಿತ ಗೆಯ್ಯುವಲ್ಲಿ ತೊಡಗುತ್ತಾನೆ. ಆದರೆ ಪರರು ಯಾವುದೋ ಚಿಂತೆಯಿಂದ ಅಳುಕಿದರೆ ತಾನೇನೂ ಅಳುಕುವುದಿಲ್ಲ. ತಾನು ಪರರು ಎಂದು ಭೇದಭಾವ ಮಾಡದೆ, 'ಸರ್ವೇ ಜನಾಃ ಸುಖಿನೋ ಭವಂತು'. ಅಂದರೆ ಸರ್ವರೂ ಸುಖಿಗಳಾಗಲಿ ಎಂದು ಹಾರೈಸುತ್ತ ಬದುಕುವವನು ಪ್ರಾಜ್ಞನು. ಅಂದರೆ ಸರಿಯಾಗಿ ತಿಳಿದವನು.

ಆ॥ ಚಿತ್ತ ಶುದ್ಧಿ ಹೊಂದಿ, ಗೆಯ್ದ ಪುಣ್ಯ ಕಾರ್ಯ,
ಕೊಂಚವಾದರೇನು ? ಕ್ಷುಲ್ಲಕಲ್ಲ.
ಆಲದ ಮರವೆಷ್ಟು ? ಅದರ ಬೀಜವೆಷ್ಟು ?
ವಿಶ್ವದಾಭಿರಾಮ ಕೇಳು ವೇಮ.

ಚಿತ್ತವು ವಿಷಯಸಂಗಿಯಾಗಿ ಮಲಿನವಾಗಿರುವುದು. ಆವರಣೀ ಮತ್ತು ವಿಕ್ಷೇಪ





ಮಲಗಳನ್ನು ಕಳಚಿ, ಚಿತ್ತವನ್ನು ಸ್ವಾರ್ಥ ಹೇತುಗಳಿಂದ ಶುದ್ಧ ಮಾಡಬೇಕು. ಹೀಗೆ ಚಿತ್ತ ಶುದ್ಧಿ ಹೊಂದಿ, ಇನಿತಾದರೂ ಪುಣ್ಯ ಕಾರ್ಯ ಮಾಡಿದರೆ, ಅದು ಪ್ರಮಾಣದಲ್ಲಿ ಚಿಕ್ಕದಾದರೂ, ಪರಿಣಾಮದಲ್ಲಿ ಬೃಹತ್ತಾಗಿದೆ. ಆಲದ ಮರದ ಬೀಜವು ಬಹು ಚಿಕ್ಕದು. ಆದರೆ ಅದರಿಂದ ಹುಟ್ಟುವ ಮರದ ಗಾತ್ರವು ಬೃಹತ್ತಾದುದು.

ಆ॥ ಪರರ ಕೆಡಿಸಲೆಂದು ಮನದಿ ಎಣಿಸುವವರು,
ತಮಗೆ ಬರುವ ಕೇಡು ತಾವರಿಯದೆ,
ತಮ್ಮನೆ ಕೆಡಿಸುವುದು ದೈವವೊಂದಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಸರ್ವರಿಗೂ ಲೇಸನೇ ಬಯಸಬೇಕು. ಪರರಿಗೆ ಕೇಡು ಬಗೆಯಕೂಡದು. ಆದರೆ ಕೆಲವರು ದೋಷ ಬುದ್ಧಿಯಿಂದ ಪರರನ್ನು ಕೆಡಿಸಲು ಎಣಿಸುತ್ತಾರೆ. ಅವರಿಗೆ ತಮಗೇ ಕೇಡು ಉಂಟಾಗುವುದೆಂಬುದು ತಿಳಿಯದು. ತನ್ನ ಮನದೊಳಗಿನ ಕಿಚ್ಚು ತನ್ನ ಸುಟ್ಟಲ್ಲದೆ ನೆರೆಯವರನ್ನು ಸುಡದು. ತಾನು ಪರರನ್ನು ಕೆಡಿಸುವ ಪಾಪ ಕಾರ್ಯಕ್ಕಿಳಿದರೆ ದೈವವು ತಮ್ಮನ್ನು ಕೆಡಿಸುವುದಲ್ಲವೇ?

ಆ॥ ಪರರಿಗುಪಕರಿಸಲು ಪಾಪಕ್ಷಯವಹುದು
ಪರರಿಗುಪಕರಿಸಲು ನೆರವು ಆಯ್ತು.
ಪರಿಗುಪಕರಿಸಲು ಪರಲೋಕ ಸಾಧನ.
ಪರರಿಗುಪಕರಿಸಲು ಬಲವು ವೇಮ.

ಪರರಿಗೆ ಉಪಕಾರ ಮಾಡಿದರೆ ತಾನು ಮಾಡಿದ ಪಾಪವು ಕ್ಷಯವಾಗುತ್ತದೆ. ಪರರಿಗೆ ಉಪಕಾರ ಮಾಡಿದರೆ ತನಗೂ ತನ್ನ ವಿಪತ್ತಿನ ಕಾಲದಲ್ಲಿ ನೆರವು ಒದಗಿ ಬರುತ್ತದೆ. ಪರರಿಗೆ ಅವರ ಕಷ್ಟಕಾಲದಲ್ಲಿ ಉಪಕಾರ ಮಾಡಿದರೆ ತನಗೆ ಮನೋವೈಶಾಲ್ಯವುಂಟಾಗಿ, ಇಹವನ್ನು ದಾಟಿ, ಪರಲೋಕದ ವಿಚಾರಕಿರಣಗಳು ಮನದಲ್ಲಿ ಮೂಡುವುತ್ತದೆ. ಒಟ್ಟಾರೆ ಪರರಿಗೆ ಉಪಕಾರ ಮಾಡಿದರೆ ತಾನು ಒಬ್ಬಂಟಿಯಲ್ಲ. ತನ್ನ ಜೊತೆಗೆ ಅನೇಕರಿದ್ದಾರೆ. ತನ್ನ ಬಲವು ವೃದ್ಧಿಯಾಗಿದೆ, ಎಂಬ ಭಾವವು ಮೂಡುತ್ತದೆ.

ಆ॥ ಉಣ್ಣುವ ಬಾನದೊಳು ಇನಿತು ದೈವಕಿಡಲು,
ಪುಣ್ಯ ಲೋಕಕವನು ಹೋಗುತಿಪ್ಪ.
ಅನ್ನದಾನಹಿಂತ ಮಿನ್ನ ದಾನವಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ತಾನು ಇದ್ದುಳ್ಳವನಾಗಿರುವಾಗ, ತಾನು ಉಣ್ಣುವ ಬಾನದಲ್ಲಿ ಹಸಿದು ಬಂದ ದೈವದವರಿಗೆಂದು ಕೊಂಚ ತೆಗೆದಿರಿಸಬೇಕು. ಇದನ್ನು ಅತಿಥಿ ಯಜ್ಞವೆಂದು ಕರೆಯಬಹುದು. ಈ ರೀತಿ ಮಾಡಿದರೆ ಅವನಿಗೆ ಮುಂದಿನ ಜನ್ಮದಲ್ಲಿ ಸುಖಕರ ಅನುಭವ ಕ್ಷೇತ್ರಗಳು ಅಂದರೆ ಪುಣ್ಯಲೋಕಗಳು ಲಭಿಸುತ್ತವೆ. ಒಟ್ಟಾರೆ, ಅನೇಕ ವಿಧದ ದಾನಗಳಿದ್ದರೂ ಅನ್ನದಾನಕ್ಕಿಂತ ಮಿನ್ನ ದಾನವು ಇನ್ನೊಂದಿಲ್ಲ.

ಕಂ. ನೀಡುತ್ತಿರುವವರ ಸಂಪದ,
ಈಡಾಗದೆ, ಎಂದಾದರೂ ಕುಂಠಿತವಹುದೇ ?
ನೋಡೊರತೆ ಜಲ, ಹೊಡೆದಂತೆ
ಕೂಡಿ ಸೇರುತಿಹುದು, ತೀರದ ವಿಧವದು ವೇಮಾ.

ಸುತ್ಪಾತ್ರದಲ್ಲಿ ದಾನ ನೀಡುತ್ತಿರುವವರ ಸಂಪದವು ಈಡಾಗುತ್ತದೆ. ಅಂದರೆ ಹುಲುಸಾಗುತ್ತ ಹೋಗುತ್ತದೆಯೇ ಹೊರತು ಅದೆಂದೂ ಕ್ಷೀಣಿಸುವುದಿಲ್ಲ. ಕುಂಠಿತವಾಗುವುದಿಲ್ಲ. ಇದಕ್ಕೆ ನೀರಿನ ಒರತೆಯ ದೃಷ್ಟಾಂತ ಕೊಡಬಹುದು. ಒರತೆಯಲ್ಲಿ ಸ್ವಲ್ಪ ಜಲ ಸಂಚಯವಿರುತ್ತದೆ. ಆ ನೀರನ್ನು ಬಳಸಿದಂತೆಲ್ಲ ಅದು ವರ್ಧಿಸುತ್ತ ಹೋಗುತ್ತದೆ. ಒರತೆಯನ್ನು ಸ್ವಚ್ಛ ಮಾಡಲು ಕೈಯಿಂದ ನೀರನ್ನು ಹೊಡೆದು ಹೊರ ಹಾಕಿದರೂ ಸಹ ಸುತ್ತಲಿನ ಝರಿಗಳಿಂದ ನೀರು ಸೆಲೆಯ ಮುಖಾಂತರ ಅಲ್ಲಿ ಹರಿದು ಬರುತ್ತದೆ.

ಆ ॥ ತನ್ನ ಸೊತ್ತ ನೋಡಿ, ದಾನವೀಯದಿರಲು,
ಅವನಿಯೊಳಲ್ಲ ಹಿರಿಯ ; ಆವನಿರಲಿ.
ಅದರಿ ಬೆದರದಿದ್ದು, ಅನ್ಯನಿಗೆ ಸೊತ್ತನು
ದಾನವೀಯುವವನು ದಾತ ವೇಮ.

ತನ್ನಲ್ಲಿ ಶೇಖರಿಸಿದ ಸೊತ್ತನ್ನು ನೋಡಿಯೂ ಅದು ತನ್ನಲ್ಲಿ ದೈವವು ಇರಿಸಿದೆ. ಅದು ದೈವಕ್ಕೆ ಮುಟ್ಟಬೇಕು ; ಎಂದು ದಾನ ನೀಡದ ಯಾವನೇ ಇರಲಿ, ಅಂಥವನು ಈ ಭೂಮಿಯಲ್ಲಿ ಹಿರಿಯನಲ್ಲ. ಮನೆಯ ಹಿರಿಯನು ತನ್ನ ಕುಟುಂಬದವರಿಗಾಗಿ, ಪಾಲನೆ ಪೋಷಣೆಗೆಂದು ತನ್ನ ಸೊತ್ತನ್ನು ವೆಚ್ಚ ಮಾಡಬೇಕಷ್ಟೇ, ಹಾಗೆ ಮಾಡದಿದ್ದರೆ ಅವನು ಹಿರಿಯನು ಹೇಗೆ ಆಗುತ್ತಾನೆ ? ಆದ್ದರಿಂದ, ಸೊತ್ತು ಕ್ಷೀಣಿಸುವುದೆಂದು ಅದರಿ ಬೆದರದಿದ್ದು ಅನ್ಯರಿಗೆ ತಾನು ಕೊಡಬೇಕಾದ ಸೊತ್ತನ್ನು ನೀಡುವವನೇ ದಾತನೆನಿಸುತ್ತಾನೆ.

ಆ ॥ ಅರಿ ತನ್ನಾಸ್ತಿಯೆನದೆ, ಅಡ್ಡ ಮಾತಾಡದೆ,
ಬಯ್ಯದೆ ಮನದೊಳಗೆ ಪರಿತಪಿಸದೆ,
ತನ್ನದಲ್ಲವೆಂದು ತಾ ಕೊಡುವುದನು ಕೊಡು.
ವಿಶ್ವದಾಭಿರಾಮ ಕೇಳು ವೇಮ.

ಜಗತ್ತಿನ ಸಮಸ್ತ ಸೊತ್ತು ಆ ಪರಮಾತ್ಮನದೇ, ಸಂಪತ್ತು ಹೊಂದಿದ ಮಾನವನು ವಿಶ್ವಸ್ಥನಂತೆ ಸೊತ್ತನ್ನು ಹೊಂದಿರುತ್ತಾನೆ. ಅಂದ ಮೇಲೆ, ತನ್ನ ಉಪಯೋಗಕ್ಕೆ ಮೀರಿ ಇರುವ ಸೊತ್ತನ್ನು ತನ್ನ ಆಸ್ತಿಯೆನ್ನದೆ, ಅಡ್ಡ ಮಾತನಾಡದೆ, ಬೇಡುವವರನ್ನು ಬಯ್ಯದೆ, ತನ್ನದು ಕ್ಷೀಣಿಸುವದಲ್ಲ ಎಂದು ಮನದಲ್ಲಿ ಪರಿತಪಿಸದೆ, ಇದು ದೈವದ ಪಾಲು, ತನ್ನದಲ್ಲ ಎಂದು ತಾನು ಕೊಡುವುದನ್ನು ಕೊಡಬೇಕು.

ಆ ॥ ದಾನ ಒಪ್ಪ ಗೆಯ್ಯೆ, ದಡವ ಸೇರಬಹುದು.
ಮನವ ನಂಬಿ ಇರಲು, ಮಾಯೆ ಮುಳುಗು.





ಜ್ಞಾನ ಕಳೆಯ ನಂಬಿ, ಜಡಿಯೊ ವೈರಿಗಳನು.
ವಿಶ್ವದಾಭಿರಾಮ ಕೇಳು ವೇಮ.

ಸತ್ಪಾತ್ರದಲ್ಲಿ ದಾನ ಮಾಡಬೇಕು. ದೈವದ ಪಾಲನ್ನು ದೈವಕ್ಕೆ ಅರ್ಪಿಸುವೆನೆಂಬ ಭಾವದಿಂದ ದಾನ ಮಾಡಬೇಕು. ಆಗ ದಾನವು ಒಪ್ಪವಾಗುತ್ತದೆ. ಹಾಗೆ, ದಾನ ಮಾಡಿದರೆ, ಮನಸ್ಸು ಪರಿಶುದ್ಧವಾಗಿ ಪ್ರಾಪಂಚಿಕ ಮೋಹಾದಿಗಳು ದೂರವಾಗಿ, ಭವಸಾಗರದ ದಡವನ್ನು ಸೇರಬಹುದು. ಹಾಗೆ ಮಾಡದೆ ಮನದ ಸ್ವಾರ್ಥದ ವಿಷಯ ಭೋಗಾದಿಗಳನ್ನು ನಂಬಿ ಇದ್ದರೆ, ಮಾಯೆಯಲ್ಲಿ ಮುಳುಗಬೇಕಾಗುತ್ತದೆ. ಇಲ್ಲದಲ್ಲಿ ಸುಖವಿದೆಯೆಂದು ತಿಳಿದು ವಂಚಿತನಾಗಬೇಕಾಗುತ್ತದೆ. ಆದ್ದರಿಂದ ಆತ್ಮ ವಿಕಾಸದ ಮಾರ್ಗದ ಜ್ಞಾನ ಕಳೆಯನ್ನು ನಂಬಿ, ಅದಕ್ಕೆ ವಿರೋಧವಾಗಿರುವ ಸ್ವಾರ್ಥಪರತೆ, ಪರರಲ್ಲಿ ಅನುಕಂಪವಿಲ್ಲದಿರುವಿಕೆಗಳೆಂಬ ವೈರಿಗಳನ್ನು ಜಡಿಯಬೇಕು.

ಆ ॥ ಕೇಳದರ್ಥವೀವ ತಾನೆ ಬ್ರಹ್ಮಜ್ಞಾನಿ.
ಕೇಳಲರ್ಥವೀವ ತಾನೆ ತ್ಯಾಗಿ.
ಕೇಳಲೀಯದಾತ ಇನ್ನು ಮಹಾ ಲೋಭಿ.
ವಿಶ್ವದಾಭಿರಾಮ ಕೇಳು ವೇಮ.

ಎಲ್ಲರೂ ಪರಮ ಪಿತನ ಸಂತಾನವೇ. ಸರ್ವ ಭೂತಾಂತರಾತ್ಮನಾದ ಬ್ರಹ್ಮನ ಆಸ್ತಿಯೇ ಎಲ್ಲವೂ. ಆದ್ದರಿಂದ ತನ್ನ ಉಪಭೋಗಕ್ಕೆ ಮಿಕ್ಕಿ ಉಳಿದುದನ್ನು, ಕೇಳದೆ ಸತ್ಪಾತ್ರರಿಗೆ ಕೊಡುವವನೇ ಬ್ರಹ್ಮಜ್ಞಾನಿ. ಇನ್ನು, ತನ್ನ ಅಗತ್ಯವನ್ನು ವಿವರಿಸಿ, ತನಗೆ ಸಹಾಯ ನೀಡಿರೆಂದು ಕೇಳುವವರಿಗೆ ಅರ್ಥ ನೀಡುವವನು, ತನ್ನ ಪಾಲಿನಲ್ಲಿ ಹಂಚಿಕೊಡುತ್ತಿದ್ದೆನೆಂಬ ಭಾವ ಹೊಂದಿರುವುದರಿಂದ ಅವನು ಮಹಾ ತ್ಯಾಗಿ. ಇನ್ನು ಕೆಲವರು ಕೇಳಿದರೂ ತನ್ನಲ್ಲಿದ್ದ ಅಧಿಕ ಸಂಪತ್ತನ್ನು ಕೈ ಬಿಚ್ಚಿ ಕೊಡುವುದಿಲ್ಲ. ಇಂಥವನು ಮಹಾ ಲೋಭಿ.

------

# ೧೫. ಗುರು

## ಪೂರ್ವ ಸಿದ್ಧತೆ :

ಈ ಮುನ್ನ ನಾವು ವೇಮನರು ಹಲವು ಗುರುಗಳನ್ನು ಕುರಿತು ಪ್ರಸ್ತಾಪಿಸಿದ್ದೇವೆ. ವೇಮನರು ಇನ್ನೂ ಬಾಲಕರಾಗಿದ್ದಾಗ, ಅವರು ಇವ್ವಟೂರಿ ಸೋಮಶೇಖರ ಗುರುಗಳಲ್ಲಿ ಪ್ರಾರಂಭಿಕ ಪಾಠವನ್ನೂ, ಯೋಗಾಭ್ಯಾಸವನ್ನೂ ಮಾಡಿದರು.

ಕಂ.

ಭವದೂರನು ಶರಭಾಂಕನು
ಶಿವಶೀಲನು ಸಹಸ್ರಕೋಟಿ ಸಿದ್ಧೇಶ್ವರನ್ವೈ.
ಶಿವ ಭೃತ್ಯನು, ವಟಮೂಲನು,
ಶಿವಮಯ ಚಿನ್ಮಯನು ಸೋಮಶೇಖರ ಗುರುವೈ.

ಎಂದು ಇವ್ವಟೂರಿ ,ಸೋಮಶೇಖರ ಗುರುಗಳನ್ನೂ ಸ್ತುತಿಸಿದ್ದಾರೆ ವೇಮನ. ತಮ್ಮ ಗುರುಗಳ ಬಗೆಗೆ ಅಪಾರ ಶ್ರದ್ಧೆ ಭಕ್ತಿಗಳನ್ನು ಹೊಂದಿದ ವೇಮನ, ಅವರಿಂದ ಪೂರ್ಣ ಸಾಧನವನ್ನು ಕಲಿಯಲು ವಯಸ್ಸು ಅಡ್ಡವಾಗಿತ್ತು. ಸೋಮಶೇಖರ ಗುರುಗಳ ಛತ್ರದಲ್ಲಿಯೇ ಉಳಿದ ವಿದ್ಯಾರ್ಥಿಗಳೊಂದಿಗೆ, ವಾಸಿಸಿ, ಚೊಕ್ಕ ಭಕ್ತಿಯಿಂದ ಗುರುವಿನ ಸೇವೆ ಮಾಡಿದರು. ಆಗ ಮನಸ್ಸು ಅರಳಿತು. ಎಲ್ಲ ಗೌಪ್ಯಗಳನ್ನೂ, ಮರ್ಮಗಳನ್ನೂ ಎಸೆದು, ಪ್ರಪಂಚದ ಭಿಡೆ ಮುರುವತ್ತುಗಳಲ್ಲಿ ಸಿಲುಕದಂತಾದರು.

ಇದರಿಂದಾಗಿ, ಅವರು ಚಿಕ್ಕ ವಯಸ್ಸಿನಲ್ಲಿಯೇ ಸ್ವತಂತ್ರ ವಿಚಾರಶೀಲರಾಗಿದ್ದರು. ಜಾತಿ ಭೇದಗಳನ್ನು ಲೆಕ್ಕಿಸದವರಾಗಿದ್ದರು. ಡಾಂಭಿಕ ವ್ರತಾಚಾರಗಳನ್ನು ಅಸಡ್ಡೆಯಿಂದ ಕಾಣುತ್ತಿದ್ದರು. ಆಡಂಬರದ ಯಜ್ಞ ಯಾಗಗಳನ್ನು ವಿರೋಧಿಸುತ್ತಿದ್ದರು. ಪಶು ಬಲಿದಾನಗಳನ್ನು ಕಟುವಾಗಿ ಖಂಡಿಸುತ್ತಿದ್ದರು. ಬಹುಶಃ ಅವರ ಪೂರ್ವ ಜನ್ಮದ ಸಂಸ್ಕಾರಗಳು ಸ್ಫುಟಗೊಂಡು ಫಲಿಸಿರಬಹುದು.

## ವೈರಾಗ್ಯ :

ಮುಂದೆ ಅವರು ಕಿಶೋರಾವಸ್ಥೆಯನ್ನು ದಾಟಿ, ತಾರುಣ್ಯಾವಸ್ಥೆಗೆ ಕಾಲಿಟ್ಟಾಗ, ಸಂಗೀತ ವಿಶಾರದರಾಗಿದ್ದ ಅವರಿಗೆ ನೃತ್ಯ ಕಲಾವಿದೆಯ ಸಂಪರ್ಕವು ಆನುಷಂಗಿಕವಾಗಿ ಲಭಿಸಿತು. ಆ ನೃತ್ಯಕಲಾವಿದೆಯು ಕುಲದಿಂದ ದೇವದಾಸಿಯಾಗಿದ್ದಳು. ವೇಮನರ ಕ್ರಾಂತಿಕಾರಿ ಸುಧಾಕರ ಮನಸ್ಸು ಅವಳನ್ನು ವಿವಾಹ ಮಾಡಿಕೊಂಡು ಅವಳ ಕುಲಕ್ಕೆ ಅಂಟಿದ ದೋಷವನ್ನು ಕಳೆಯಬೇಕೆಂದು ಬಗೆಯಿತು. ಹೀಗಾಗಿ, ಅವಳನ್ನು ಪತ್ನಿಯಂತೆಯೇ ಭಾವಿಸಿದರು. ಅವಳು ಸಹ ಅವರಲ್ಲಿ ನಿಷ್ಠೆ , ಭಕ್ತಿ ಹೊಂದಿದ್ದಳು. ಇಂಥ ವಿವಾಹಕ್ಕೆ ಸಮಾಜ ಸಿದ್ಧವಿರಲಿಲ್ಲ. ವೇಮನರ ಸಂಗಡಿಗ ಅಭಿರಾಮಯ್ಯ, ದೇವದಾಸಿ ವಿಶ್ವದಾಳಲ್ಲಿ ಹೋಗಿ ವೇಮನರನ್ನು ಸಮಾಜ ಸೇವೆಗೆ ಬಿಟ್ಟುಕೊಡಲು ಬೇಡಿಕೊಂಡರು. ಆಗ ದೇವದಾಸಿ, ಒಂದು ನಾಟಕವಾಡಿದಳು. ಅದೆಂದರೆ ತಾನು ಕುಲೀನಳಲ್ಲವೆಂದು ಸಮಾಜ ಬಗೆದಿದೆ. ಆದ್ದರಿಂದ ತಾನು ಕುಲೀನಳೆನಿಸದೆ ವಿವಾಹ





ಸಾಧ್ಯವಾಗದು. ಇದಾಕ್ಕಗಿ ತಾವು ತಮ್ಮ ಅತ್ತಿಗೆಯ ಕುಂಡಲವನ್ನೂ, ರತ್ನಖಚಿತ ಮೂಗುತಿಯನ್ನೂ ತಂದು ತೊಡಿಸಿದರೆ ಸಾಧ್ವಿಯಾದ ಅವಳ ಆಭರಣ ಧಾರಣದಿಂದ ತಾನು ಕುಲೀನಳಾಗಬಹುದು. ವೇಮನರು ಕೂಡಲೇ ಇದಕ್ಕೊಪ್ಪಿ ಆಭರಣಗಳನ್ನು ತಂದರು. ಆದರೆ ಅವುಗಳ ಹಸ್ತಾಂತರಕ್ಕೆ ಮುನ್ನ, ಅತ್ತಿಗೆ ಸೂಚಿಸಿದ ಕರಾರನ್ನು ಮುಂದಿಟ್ಟರು. ಆ ಕರಾರುಗಳೇನು? ಅವಳು ಬೆತ್ತಲೆಯಾಗಿ ಏಳು ಹೆಜ್ಜೆ ನಡೆದು ಬಂದು, ವೇಮನರ ಕೈಯಲ್ಲಿಯ ಮೂಗುತಿಯನ್ನು ತನ್ನ ತೊಡೆಗಳ ಮಧ್ಯೆ ತಲೆ ಸೇರಿಸಿ ಕಚ್ಚಿ ಪಡೆಯಬೇಕು. ಯಾವ ಮಾನವಂತೆ ಕುಲೀನ ಸ್ತ್ರೀಯೂ ಪುರುಷನೆದುರು ಆ ರೀತಿ ನಗ್ನಳಾಗಿ ತನ್ನ ಗುಪ್ತಾಂಗಗಳನ್ನು ತೋರಲಾರಳು. ಎಂದೇ ಅತ್ತಿಗೆ ಆ ರೀತಿ ಸೂಚಿಸಿದ್ದಳು. ಆದರೆ, ವೇಮನರು ವಿಶ್ವದಾಳಿಗೆ ಕರಾರನ್ನು ಹೇಳಿದೊಡನೆ, ಅವಳು ನಸುನಕ್ಕು 'ಆಗಲಿ ಅದರಲ್ಲೇನು ? ಎಷ್ಟಾದರೂ ನಾನು ದೇವದಾಸಿಯಲ್ಲವೇ ? ನನಗೇತರ ನಾಚುಗೆ ?' ಎಂದು ಬೆತ್ತಲೆಯಾಗಿ ಬಂದು ಬಾಗಿ ಆಭರಣ ಪಡೆದಳು. ಈ ಅಸಹ್ಯ ವರ್ತನೆಯನ್ನು ಕಂಡು ವೇಮನರು ಹೇಸಿಕೊಂಡು, ತಮ್ಮ ಶಲ್ಯವನ್ನು ಅವಳ ನಗ್ನ ದೇಹದ ಮೇಲೆ ಒಗೆದು ಅಲ್ಲಿಂದ ತಿರುಗಿ ಅತ್ತ ಸುಳಿಯದ ಹಾದಿಗೆ ತೆರಳಿದರು. ಇತ್ತ ವಿಶ್ವದಾ ತನ್ನ ನಾಟಕ ಪೂರ್ಣವಾಯಿತೆಂದು ಬಗೆದು, ತಾನಿನ್ನು ಬೇರೆ ಪುರುಷರ ಸಂಗ ಮಾಡೆನೆಂದು ಪ್ರತಿಜ್ಞೆ ಮಾಡಿದಳು. ಇದುವರೆಗಿನ ಪ್ರಣಯ ಪ್ರಸಂಗಗಳಲ್ಲಿ ವೇಮನರು ತಂದು ಸುರಿದ ಧನ-ಕನಕ ಆಭರಣಗಳ ಮೂಟೆಯನ್ನು ಅವರಿಗೆ ಹಿಂತಿರುಗಿಸಲು ಸಿದ್ಧವಾಗಿ ಹೊರಟಳು. ಆದರೆ ಅವಳ ತಾಯಿ ಅದಕ್ಕೆ ಇಂಬುಗೊಡಲಿಲ್ಲ. ಆದರೂ ಅವಳು ತನ್ನ ತಾಯಿಯ ಮನೆಯನ್ನು ತೊರೆದು ಅಭಿರಾಮಯ್ಯನ ನೆರವಿನಿಂದ ಕಟ್ಟಿಸಿಕೊಂಡ, ಗ್ರಾಮದಾಚೆಯ ಕುಟೀರಕ್ಕೆ ಪಯಣಿಸಿದಳು.

ಈ ಘಟನೆಗಳನ್ನು ಸ್ಮರಿಸಿ ವೇಮನರು ರಚಿಸಿದ ಕೆಲವು ಪದ್ಯಗಳು ಹೀಗಿವೆ :

ಕಂಡು ಹೇಳಿ ಸೊಗಸು ಕುಚ ಕುಂಭಗಳೆಲ್ಲ
ನುಡಿಯ ಬಾರದ ತಾಣ ನೋಡಿ ಒಳಗೆ,
ಮುಪ್ಪುರಿಗೊಳ್ಳುವುದು ಮುನಿಗೆ ಕೂಡ ಮೋಹ.
ವಿಶ್ವದಾಭಿರಾಮ ಕೇಳು ವೇಮ.

ಮತದ ದಾರಿ ಮರೆತು, ಮಧುರ ಅಧರ ಕಂಡು,
ಮಧುರ ರೂಪ ನೋಡಿ ಮನಸು ಮರೆತು,
ಉರವ ನೋಡಿ ಸರ್ವ ಯೋಗವನೆ ಮರೆವರು !
ವಿಶ್ವದಾಭಿರಾಮ ಕೇಳು ವೇಮ.

ಅಬಬ ! ಲಲನೆ ಕಣ್ಣು, ಅತಿ ವಿಚಿತ್ರ ಮೊಲೆಗಳು !
ಚಿಂತೆ ಕವಿಯದವನೆ ಅಂತೆ ತೊಡೆದು,
ಸರಸ ಪಡುವ ಅವನೆ ಸರ್ವದಾ ಯೋಗಿಯು.
ವಿಶ್ವದಾಭಿರಾಮ ಕೇಳು ವೇಮ.

ಕಾಮಿಯಾದ ನರನು ಘನನು ಆಗನೇಸು ?
ಕಾಮಿಯಲ್ತೆ ಕೃಷ್ಣ ಸ್ವಾಮಿ ಮುನ್ನ ?
ಕಾಮಿಯಿರದ ಜನರು ಗಣಪರಾಗರೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಪ್ರೇಯಸಿಯ ಸಂಗ ವಿದೂರರಾದ ವೇಮನರಿಗೆ ಇನ್ನೊಂದು ವಿಪತ್ತು ಕಾದಿತ್ತು. ಅವರನ್ನು ಚಿಕ್ಕಂದಿನಿಂದ ಸಾಕಿ ಸಲುಹಿದ ಅತ್ತಿಗೆ ಮಲ್ಲಮ್ಮ ಮತ್ತು ಭಾವ ಅಳ್ಳಯ ವೇಮಾರೆಡ್ಡಿ ಪ್ರಭುಗಳು ಧನದ ಕೊರತೆಯಿಂದ ಬಳಲುತ್ತಿದ್ದರು. ರಾಜ್ಯದ ಭಂಡಾರದಿಂದ ವಿಜಯ ನಗರದ ರಾಯರಿಗೆ ಕಪ್ಪ ಕೊಡಲು ಶೇಖರಿಸಿದ ನಗನಾಣ್ಯಗಳನ್ನು ವೇಮನರು ತನ್ನ ಪ್ರೇಯಸಿಯ ಕನಕಾಭಿಷೇಕ ಇತ್ಯಾದಿ ವಿಲಾಸ ವಿಭ್ರಮಗಳಿಗೆ ವ್ಯಯಿಸಿದ್ದರು. ಆದರೆ, ಕಪ್ಪ ವಸೂಲಿಗೆ ಬಂದ ವಿಜಯನಗರ ರಾಯರ ನಾಯಕನು, ಸಕಾಲಕ್ಕೆ ಕಪ್ಪ ಕಟ್ಟದ ತಪ್ಪಿಗಾಗಿ ಅಳ್ಳಯ ವೇಮಾರೆಡ್ಡಿಯನ್ನು ಬಂಧಿಸಿ ಕರೆದೊಯ್ದನು. ಇದನ್ನು ತಿಳಿದ ವೇಮನರಿಗೆ ದಿಕ್ಕೇ ತೋಚಲಿಲ್ಲ. ತನಗೆ ಈ ಮೊದಲು ಪರಿಚಿತವಿದ್ದ ರಸವಿದ್ಯೆಯ ಪ್ರಯೋಗದಿಂದ ಸ್ವರ್ಣ ಘಟ್ಟಿ ತಯ್ಯಾರಿಸುವ ಯೋಜನೆಯನ್ನು ಹಮ್ಮಿಕೊಂಡನು.

ಹಾಯಾಗಿರೆ ಇಹದಿ ಹೇಮಕಾರಕ ವಿದ್ಯೆ.
ಪರದಲ್ಲಿ ಸುಖಿಸಲು ಬ್ರಹ್ಮ ವಿದ್ಯೆ.
ಅನ್ಯ ವಿದ್ಯೆ ಎಲ್ಲ ಅಂತೆ ನಿಷ್ಫಲವದು.
ವಿಶ್ವದಾಭಿರಾಮ ಕೇಳು ವೇಮ.

ಈ ಮುನ್ನ ಯೋಗ ಸಾಧನೆಗಿಳಿದಿದ್ದ ವೇಮನರಿಗೆ ಸಾಕಷ್ಟು ಮನಸ್ಸಿನ ಏಕಾಗ್ರತೆಯು ಸಿದ್ಧಿಸಿತ್ತು. ರಾಜಮಹೇಂದ್ರವರಂಗೆ ಆಗಿಗ ಬರುತ್ತಿದ್ದ ರಸಸಿದ್ಧರಾದ ಬಾಬಾಗಳಿಗೆ ಸ್ವರ್ಣಕಾರ ಅಭಿರಾಮಯ್ಯನ ಪರಿಚಯವು ಸಾಕಷ್ಟಾಗಿತ್ತು. ಅವನ ಜೊತೆಗಿರುತ್ತಿದ್ದ ತರುಣ ವೇಮನರ ಮಾನಸ ಮಟ್ಟವನ್ನು ಅವರು ಸರಿಯಾಗಿ ಊಹಿಸಿ "ನಾವು ನಿಮ್ಮ ಧಾತುಗಳನ್ನು ಸ್ವರ್ಣವಾಗಿ ಪರಿವರ್ತಿಸಬಲ್ಲೆವೆಂದು ಅದನ್ನು ಕಾರ್ಯ ರೂಪಕ್ಕಿಳಿಸಲು ತಮ್ಮಂಥ ಮಾನಸಿಕ ಏಕಾಗ್ರತೆಯ ಪುರುಷರು ಬೇಕು. ತಾವು ದಯವಿಟ್ಟು ಇದನ್ನು ಒಪ್ಪಿಕೊಳ್ಳಿರಿ" ಎಂದು ದುಂಬಾಲು ಬಿದ್ದಿದ್ದರು. ಮೇಲಾಗಿ ಕಾಯಕಲ್ಪದ ಹಲವಾರು ವಿಧಿಗಳನ್ನು ಕುರಿತು ಪ್ರಸ್ತಾಪಿಸಿದರು. ವೇಮನರು ಮೊದಲು ಅತ್ತ ಒಲವು ತೋರದಿದ್ದರೂ ಸಂಗಡಿಗ ಅಭಿರಾಮಯ್ಯನ ಒತ್ತಾಸೆಯಿಂದ ಒಪ್ಪಿದ್ದರು. ಹೀಗೆ ಅವರು ರಸ ಸಿದ್ಧರ ಸಹವಾಸದಲ್ಲಿ ಹಲವಾರು ಮಂತ್ರ ಪಠಣಗಳನ್ನೂ, ಮದ್ದು ತಯ್ಯಾರಿಕೆಯನ್ನೂ ಅಧ್ಯಯನ ಮಾಡಿದ್ದರು.

ಭಾವ ಅಳ್ಳಯ ವೇಮಾರೆಡ್ಡಿಯನ್ನು ಬಂಧಮುಕ್ತ ಮಾಡುವ ಉದ್ದೇಶದಿಂದ ಈಗ ಅವರು ಅಭಿರಾಮಯ್ಯನ ನೆರವಿನಿಂದ ಸ್ವರ್ಣ ತಯಾರಿಕೆಗೆ ಸಿದ್ಧರಾಗಿ ಯಶಸ್ವಿಯಾದರು.

ಪರೀಕ್ಷಾ ಪ್ರಸಂಗಗಳು ಒಂಟಿಯಾಗಿ ಬರುತ್ತವೆಯೇ ? ತಾಯಿಯಂತೆ ತಮ್ಮನ್ನು ಸಾಕಿ ಸಲುಹಿದ ಅತ್ತಿಗೆಯ ಮಗಳು ಅದೇ ಕಾಲಕ್ಕೆ ಹಾಸುಗೆ ಹಿಡಿದಳು. ಜ್ವರವು ವಿಷಮಿಸಿತು. ದೈಹಿಕವಾಗಿ ವಿಷಮ ಜ್ವರ ಬಾಧೆ, ಮಾನಸಿಕವಾಗಿ ತಾನು ಬಿಟ್ಟಿರಲಾರದ ಕಕ್ಕನ ವಿರಹದಿಂದ





ಹಣ್ಣು ಹಣ್ಣಾದ ಮಗು, ಕೃಷ್ಣಾ ಕೊನೆಗೂ ಕಣ್ಣು ಮುಚ್ಚಿದಳು. ಹೀಗೆ ಮನಸ್ಸಿಗೆ ಒಂದಾದ ಮೇಲೊಂದರಂತೆ ವಿಪ್ಲವಗಳು ತಾಕಿ, ವೇಮನರು, ಕೃಷ್ಣಾಳ ಅಂತ್ಯಕ್ರಿಯೆಯ ನಂತರ ಮರಳಿ ಮನೆಯನ್ನೇ ಸೇರಲಿಲ್ಲ. ವೈರಾಗ್ಯ ಮೂರ್ತಿಯಾಗಿ ಕಾಡು ಮೇಡುಗಳಲ್ಲಿ ವಾಸಿಸಿದರು. ದೀರ್ಘ ಚಿಂತನೆಯಲ್ಲಿ ತೊಡಗಿದರು.

ಹೊನ್ನು ಗೆಯ್ವ ವಿದ್ಯೆ ಹೊಳೆದ ಮನುಜರೆಲ್ಲ,
ವ್ಯಥೆ ಪಡುವರಂಥ ವಿದ್ಯೆಯಿಂದ,
ತತ್ತ್ವ ತಿಳಿದ ಬಳಿಕ ತನಗೆ ಚಿಂತೆಯಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಜೀವನದ ಕಟು ಅನುಭವಗಳಿಂದ ವೈರಾಗ್ಯ ತಾಳಿದ ವೇಮನರು ತಮಗೆ ತತ್ತ್ವದ ಅನ್ವೇಷಣೆಯ ದಾರಿ ತಿಳಿದೊಡನೆ ಹೊನ್ನು ಗೆಯ್ವ ರಸಸಿದ್ಧಿಗೆ ಶರಣು ಹೊಡೆದನು.

ವೇಮನರು ವೈರಾಗ್ಯದ ಪ್ರಸಂಗಗಳನ್ನು ಈ ಮೊದಲು ಪ್ರಸ್ತಾಪಿಸಿದ್ದೇವೆ. ಆದರೂ ಸದ್ಗುರುವಿನ ಶೋಧದಲ್ಲಿರುವ ವೇಮನರಲ್ಲಿ ವೈರಾಗ್ಯ ಉದಯಿಸಿರುವುದನ್ನು ಪಾಠಕರ ಸ್ಮರಣೆಗೆ ತರಲು ಇಲ್ಲಿ ಸಂಕ್ಷೇಪವಾಗಿ ಪುನರುಕ್ತಿ ಮಾಡಿದರೆ ಲೇಸಾದೀತೆಂದು ಭಾವಿಸಿ ಅಂಥ ಪ್ರಯತ್ನಕ್ಕಿಳಿದಿದ್ದೇವಷ್ಟೇ.

ಈ ವಿರಕ್ತ ಪುರುಷರಿಗೆ ಅನೇಕರು ಗುರುಗಳಾಗಬಯಸಿದರು. ಕೆಲವರು ವೇಮನರಿಗೆ ಅಧ್ಯಯನ ಸಾಲದೆಂದರು. ಕೆಲವರು ಹೆಚ್ಚಾಗಿ ಶಾಸ್ತ್ರಪಾಠ ಮಾಡಿಸಲು ಮುಂದಾದರು. ಆದರೆ ವೇಮನರಿಗೆ ಅತ್ತ ಒಲವು ಇರಲಿಲ್ಲ. ಅವರಿಗೆ ಯೋಗ ಮಾರ್ಗ ಹಿಡಿಸಿತ್ತು. ಪೂರ್ವ ಜನ್ಮ ಸಂಸ್ಕಾರವಿತ್ತು. ಹಾಗಾಗಿ ಮುಕ್ತಿ ದಾರಿಯ ದೇಶಿಕನಿಗಾಗಿ ಕಾಯುತ್ತಿದ್ದರು.

ಕಾಗುಣಿತ ಬೋಧಿಪ ಗುರುವು ಅಲ್ಲವಲ್ಲ.
ಶಾಸ್ತ್ರಪಾಠ ಓದಿಸುವವನಲ್ಲ.
ಮುಕ್ತಿ ದಾರಿ ತೋರ್ಪ ಮೂಲ ಗುರುವು ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಅನೇಕರು ಗುರುಗಳೆಂದು ಕರೆದುಕೊಳ್ಳುವವರು ಅವರಿಗೆ ಹಲವಾರು ವ್ರತ ನೇಮಗಳ ಕರ್ಮ ಆಚರಿಸಲು ಹೇಳಿದರು. ಅವರಿಗಿಂತ ಮೇಲಿನವರು ಮಂತ್ರ ಪಠಣ ಮಾಡಹಚ್ಚಿ ಮಂತ್ರೋಪದೇಶ ಮಾಡಿದರು. ಆದರೆ ಉತ್ತಮರಾದ ಕೆಲವರು ಯೋಗ ಪ್ರಕ್ರಿಯೆಯ ಮೂಲ ತತ್ತ್ವಗಳನ್ನು ತಿಳಿಸಿ ನೆರವಾದರು.

ಆ || ಕಳ್ಳಗುರು ಕಟ್ಟುವ, ಕರ್ಮಗಳನೆಲ್ಲ.
ಮಧ್ಯಮನು ಕಟ್ಟುವ ಮಂತ್ರಚಯವ.
ಉತ್ತಮನು ಕಟ್ಟುವ ಯೋಗಸಾಮ್ರಾಜ್ಯವ.
ವಿಶ್ವದಾಭಿರಾಮ ಕೇಳು ವೇಮ.

ವಿರಕ್ತರಾಗಿ ಅಲೆಯುವ ವೇಮನರನ್ನು ಸಂಧಿಸಿದ ಅನೇಕ ಸೋಗಿನ ಗುರುಗಳು ಅವರನ್ನು ತಮ್ಮ ಪ್ರಭಾವಕ್ಕೆ ಸಿಲುಕಿಸಲು ಯತ್ನಿಸಿದರು. ಅವರ ಪರಿಚಯಸ್ಥರಿಂದ ಹಣ

ಕಿತ್ತಲೂ ಹವಣಿಸಿದರು. ಅದಕ್ಕಾಗಿ ವೇಮನರು ತಮ್ಮ ಪರಿಚಯಸ್ಥರಿಗೆ ಸ್ಪಷ್ಟವಾಗಿ ಎಚ್ಚರಿಸಿದರು.

ಆ॥ ಅರಿಯೆ, ದೋಚುವವನು, ಗುರುವು ತಾನು ಎಂದು,
ತಿರುಗುವವನು ತನ್ನ ತಿಳಿಯಲಾರ.
ಮಾತು ಬೊಗಳೆ ಅಷ್ಟೆ ; ಮೂಳ ದಾಸನ ಮಗ.
ವಿಶ್ವದಾಭಿರಾಮ ಕೇಳು ವೇಮ.

ಜನರಿಂದ ಹಣ ದೋಚುವವನು, ತಾನು ಗುರು ಎಂದು ಹೇಳುತ್ತ ತಿರುಗುತ್ತಾನಷ್ಟೇ. ನಿಜವೆಂದರೆ ಅವನು ತನ್ನನ್ನೇ ತಾನು ತಿಳಿಯದ ಅಜ್ಞಾನಿ. ಅವನು ದೊಡ್ಡ ಭಾಷಣ ಮಾಡಬಹುದು, ಇಂಪಾಗಿ ಹಾಡಬಹುದು ಅಷ್ಟೇ.

ನಾವು 'ಲಕ್ಷ್ಯ' ತಲುಪಲು, ನಮಗೆ ತತ್ವದ ಸರಿಯಾದ ತಿಳಿವು ಬೇಕು. ಆತ್ಮ ಆವುದು ? ಅನಾತ್ಮ ಆವುದು ? ತಿಳಿದಿರಬೇಕು. ಯಾವನಿಗೆ ಸಮ್ಯಕ್ ಜ್ಞಾನವಿಲ್ಲವೋ, ಅವನು ಅನಾತ್ಮದಿಂದ ಆತ್ಮನನ್ನು ವಿಂಗಡಿಸಿ ಹೇಗೆ ತಿಳಿಯಬಲ್ಲನು ? ಅದು ಅವನ ಕೈಯಿಂದ ಆಗದ ಕೆಲಸ. ಯಾವನಲ್ಲಿ ಒಳ್ಳೆಯ ಗುಣಗಳಿಲ್ಲವೋ, ಅಂಥ ಗುಣಹೀನನನ್ನು ಗುರುವೆಂದು ಎಣಿಸಬೇಡ; ಎಚ್ಚರವಿರಲಿ.

ಆ॥ ಮಿಥ್ಯೆ ತಿಳಿವಿನಿಂದ ಮೋಕ್ಷ ದೊರಕಬಹುದೆ ?
ಕೈಲಾಗದ ಕೆಲಸ ಗೆಯ್ಯ ಬೇಡ.
ಗುರುವು ಎನ್ನಬೇಡ, ಗುಣಹೀನನಾಗಿರೆ.
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ಕುಲ ಗುರುಗಳ ಸೋಗು ಹಾಕಿ, ತಾವು ಮಠಮಾನ್ಯ ಮಾಡಿಕೊಂಡು ತಾವೇ ಮುಕ್ತಿ ಕಾಣದೆ, ಜನರನ್ನು ತಪ್ಪು ದಾರಿಗೆಳೆಯಬಯಸುತ್ತಾರೆ.

ಆ॥ ಶಿಷ್ಯ ವರ್ಗಕೆಲ್ಲ ಶಿವ ಪೂಜೆ ತಿಳಿಸದೆ,
ಸಲ್ಲದ ಮತವೆಲ್ಲ ಸೇರಿಸುತಿಹ.
ಗುರುವಿನ ತಿಳಿವರಿಯೆ ಕುರುಡಾಕಳ ಕರುವಲ !
ವಿಶ್ವದಾಭಿರಾಮ ಕೇಳು ವೇಮ.

ಶಿವ ಎಂದರೆ ಕಲ್ಯಾಣ, ಮಂಗಳ. ಕಲ್ಯಾಣಮೂರ್ತಿಯನ್ನು, ಮಂಗಳಮಯನನ್ನು ಧ್ಯಾನಿಸಿ, ಸೇವಿಸಿ ಹೇಗೆ ಮುಕ್ತಿಗಾಣಬೇಕೆಂಬುದನ್ನು ಕೆಲವು ಗುರುಗಳು ಶಿಷ್ಯ ವರ್ಗಕ್ಕೆ ತಿಳಿಸುವುದಿಲ್ಲ. ಅವರು, ಪ್ರತಿಯಾಗಿ ಯಾವುದೋ ಸಲ್ಲದ ಮತವನ್ನು, ಅದರ ವ್ರತನೇಮಗಳನ್ನು, ಕರ್ಮಾಚರಣೆಗಳನ್ನು ಬೋಧಿಸಿ, ಈಗಾಗಲೇ ಜಗತ್ತಿನಲ್ಲಿ ತುಂಬಿರುವ ಸಂಪ್ರದಾಯಗಳಿಗೆ ಇನ್ನೊಂದನ್ನು ಸೇರಿಸುತ್ತಾರಷ್ಟೇ. ಹೀಗೆ ಮತಗಳ ಸಂಖ್ಯೆ ಬೆಳೆಯುತ್ತ ಸಾಗುತ್ತದೆ. ಇಂಥ ಪರಮ ತತ್ವವನ್ನು ತಾವೂ ಅರಿಯದೆ, ಕರ್ಮಗಳ ಜಾಲದಲ್ಲಿ ಇತರರನ್ನು ಸಿಲುಕಿಸುವವರನ್ನು ಗುರುಗಳೆಂದು ಕರೆಯಬೇಡ. ಅವರು ಕುರುಡು ಆಕಳಿದ್ದಂತೆ. ಅವರ ಶಿಷ್ಯರು ಕುರುಡು ಕರು ಇದ್ದಂತೆ. ಕರು ಎಲ್ಲಿದೆಯೆಂದು ಆಕಳಿಗೆ ತಿಳಿಯದು. ಆಕಳ ಕೆಚ್ಚಲು ಎಲ್ಲಿದೆಯೆಂದು ಹಸಿದ ಕರುವಿಗೆ ಗೊತ್ತಿಲ್ಲ.





## ಬೆಟ್ಟ-ಗುಹೆವಾಸ :

ವೇಮನರಿಗೆ ತೀವ್ರ ವೈರಾಗ್ಯ ಕುದುರಿದೊಡನೆ, ಹಲವು ಸಾಧು ಸನ್ಯಾಸಿಗಳ ರೀತಿ, ತಾವು ಮನೆ ಮಾರು ತೊರೆದರು. ಜನರಿಂದ ದೂರ ದೂರ ಅಡವಿ ಅರಣ್ಯಗಳತ್ತ ಗವಿ ಗುಹೆಗಳತ್ತ ವಿವಿಕ್ತ ಪ್ರದೇಶ ಹುಡುಕಿಕೊಂಡು ಹೋದರು. ಆತ್ಮ ಸಾಕ್ಷಾತ್ಕಾರ ಪಡೆಯಲು ಘೋರ ತಪಸ್ಸು ಮಾಡಬೇಕು. ದೇಹ ದಂಡಿಸಬೇಕು, ಎಂಬ ಸಾಮಾನ್ಯ ಭಾವನೆ ಅವರಲ್ಲಿಯೂ ಇತ್ತು.

ಆ॥ ಊರು ಕಾಡು, ತಿರುಗಿ, ಇರುವುದನು ಕಾಣದೆ,
ಹೋರಿ, ಗುರು ಕಾಣದೆ, ಹೊಂದಿ ಕೊಳದೆ,
ಗೊಂದಲವನು ಕಾಣು, ಗಡಬಡಿಸಲೇಕೆ ?
ವಿಶ್ವದಾಭಿರಾಮ ಕೇಳು ವೇಮ.

ತಮ್ಮೊಳಗೇ ಇರುವ ಆತ್ಮವನ್ನು ಕಾಣದೆ, ತಮ್ಮ ನಿಜವಾದ ಇರವನ್ನು ತಾವು ಅರಿಯದೆ, ವೇಮನರು ಊರು, ಊರು ಅಲೆದರು. ಕಾಡು ಮೇಡುಗಳಲ್ಲಿ ಗಡ್ಡೆ ಗೆಣಸು, ಹಣ್ಣು ಹಂಪಲ ಸೇವಿಸುತ್ತ ವಾಸಿಸಿದರು. ತಮ್ಮ ಮನದ ಎಳೆತ ಸೆಳೆತಗಳೊಂದಿಗೆ ಹೋರಾಡಿದರು. ಆದರೂ ಅವರಿಗೆ ಸೂಕ್ತ ಗುರು ಕಾಣಲಿಲ್ಲ. ಇತ್ತ ಇಹದ ಸುಖವನ್ನೂ ತೊರೆದರು. ಅತ್ತ ಪರದ ಮಾರ್ಗ ತೋರುವವನೂ ಕಾಣಲಿಲ್ಲ. ಹೀಗಾಗಿ, ಮನದಲ್ಲಿ ಗೊಂದಲವೆದ್ದಿತು. ಆಗ ಈ ಗೊಂದಲದ ಮೂಲವನ್ನು ಕಂಡು ಹಿಡಿ ; ಗಡಬಡಿಸುವುದೇಕೆ ? ಎಂದು ಮನಸ್ಸಿಗೆ ಹೇಳಿಕೊಂಡರು.

ಆ॥ ಇಹದಲಿ ಎನಿತೆನಿತೊ ಇರುಸು ಮುರುಸು ಇರಲು,
ಪರಮ ಸಾಧನಕ್ಕೆ ಪಥವು ಅಲ್ಲ.
ಗುರುವ ಯುಕ್ತಿ ಮೀರಿ ಪರಿಕಿಸಿ ಕಾಣಿರೋ.
ವಿಶ್ವದಾಭಿರಾಮ ಕೇಳು ವೇಮ.

ನಮ್ಮ ಇಹದ ಬಾಳು, ಪ್ರಾಪಂಚಿಕ ವಿಷಯ ಸಂಗದಿಂದ, ಎಳೆತ ಸೆಳೆತಕ್ಕೆ ಸಿಕ್ಕು ಎಷ್ಟೆಷ್ಟೋ ಇರುಸು ಮುರುಸಾಗಿದೆ. ಇದರಲ್ಲಿ ಸಿಲುಕಿ ಪರಮಾತ್ಮನನ್ನು ಕಾಣಬೇಕೆಂದರೆ, ಪರಮ ಸಾಧನಕ್ಕೆ ಅದು ಸರಿಯಾದ ಪಥವೂ ಅಲ್ಲ. ಆದ್ದರಿಂದ ಮಾರ್ಗ ತಿಳಿದ ಗುರಿಗಂಡ ಗುರುವನ್ನು ಕಾಣಬೇಕು. ನಮ್ಮ ಬುದ್ಧಿ ತರ್ಕಗಳನ್ನು ಬದಿಗಿರಿಸಿ, ಮೀರಿ, ಆ ದೇಶಿಕ ಗುರುವನ್ನು ಪರಿಕಿಸಿ ಕಾಣಬೇಕು. ವೇಮನರು ಈ ನಿರ್ಣಯಕ್ಕೆ ತಲುಪಿದರು.

ಗೀತ ಗುಹೆಗಳ ಹದಿ ಸಾವಿರ ಹೊಗಲು ಗುಣವಳಿಯದು.
ನಿಯತ ಗುರು ಭಕ್ತಿಯು ಬೇಕು ; ನಿಖಿಲ ಕಲಿತು,
ಮಹಿಯಲಿ ಪರತತ್ತ್ವ ಭಾವವು ಮಧುರವಿಹುದು.
ಅದನು ಸಾಧಿಸುವುದಕೆ ನೀ ಹೆಣಗು, ಅರಿತು ವೇಮ.

ನಮ್ಮ ಅಜ್ಞಾನ ಆಲಸ್ಯ ಸಂಗಗಳನ್ನುಂಟು ಮಾಡುವ ತಮೋ ಗುಣವಾಗಲಿ, ಕರ್ಮಮತ್ತು ಲೋಭ ಸಂಗಗಳನ್ನುಂಟು ಮಾಡುವ ರಜೋಗುಣವಾಗಲಿ ಇನ್ನಷ್ಟು

ತಿಳಿದುಕೊಳ್ಳೋಣ ; ಇನ್ನಷ್ಟು ಸುಖಿಪಡೋಣ ; ಎಂಬ ಸತ್ತ್ವಗುಣವಾಗಲಿ, ಹತ್ತಾರು ಸಾವಿರ ಗುಹೆಗಳನ್ನು ಅಲೆದರೂ, ಅಳಿಯವು. ಅದಕ್ಕೆ ಒಂದೇ ಉಪಾಯ. ಸದ್ಗುರುವನ್ನು ದರ್ಶಿಸು. ಅವನ ಸೇವೆ ಮಾಡು. ಗುರುಭಕ್ತಿಯನ್ನು ಬೆಳೆಸಿಕೋ. ಅವರ ಸತ್ಸಂಗದಲ್ಲಿ ಎಲ್ಲವನ್ನೂ ಕಲಿ. ನಿಜವಾಗಿಯೂ ಮಹಿಯಲ್ಲಿ ಪರತತ್ತ್ವ ಭಾವವು ಮಧುರವಾಗಿದೆ. ಅಂದರೆ ಅದನ್ನು ಹೊಂದಲು ನಾವೆಷ್ಟು ಹಂಬಲಿಸುವೆವೋ, ಆ ಗುರುವು ಸಹ ನಮಗದನ್ನು ತೋರಲು ಅಷ್ಟೇ ಉತ್ಸುಕನಾಗಿರುತ್ತಾನೆ. ಗುರುವನ್ನು ಸಂಧಿಸಿ, ಪರತತ್ತ್ವವನ್ನು ಹೊಂದಲು, ಸಾಧಿಸಲು ನೀನು ಅರಿತು ಹೆಣಗಬೇಕಷ್ಟೇ ಎಂದು ವೇಮನರು ಕಂಡುಕೊಂಡರು.

ಗೀತ
ದೇಹ ಆತ್ಮಗಳನು ಬೇರೆಂದು ತಿಳಿಯದಿರಲು
ಮೋಹದಲಿ ಸಿಲುಕಿ ನಿದ್ರೆಯೊಳು ಮುಳುಗದಿಹನೆ ?
ಸಾಹಸದಿಂದ ಗುರು ಭಕ್ತಿ ಸಲಿಸೆ, ಲೇಸು.
ಬಿಡಿಸಿ ಮಾತುಗಳ ತಿಳಿವುದು ಬೇಗ ವೇಮ.

ಭೌತಿಕ ದೇಹವು ಸ್ಥೂಲ ಪಂಚಭೂತಗಳಿಂದಾಗಿದೆ. ಸೂಕ್ಷ್ಮ ಇಲ್ಲವೆ ಲಿಂಗ ದೇಹವು ಚಿತ್ತ, ಅಹಂ, ಬುದ್ಧಿ ಮತ್ತು ಮನಸ್ಸುಗಳೆಂಬ ನಾಲ್ಕು ಅಂತಃಕರಣಗಳಿಂದಾಗಿದೆ. ಇದರೊಂದಿಗೆ ಪಂಚ ಜ್ಞಾನೇಂದ್ರಿಯಗಳಿವೆ. ಪಂಚ ಕರ್ಮೇಂದ್ರಿಯಗಳಿವೆ. ಮತ್ತು ಪಂಚ ತನ್ಮಾತ್ರೆಗಳಿವೆ. ಹೀಗೆ ಇಪತ್ತು ನಾಲ್ಕು ಅನಾತ್ಮ ತತ್ತ್ವಗಳಿವೆ. ಇವುಗಳಿಂದ ಬೇರಾದ, ಕಾರಣಾತೀತವಾದ ಆತ್ಮ ತತ್ತ್ವವು ಇಪ್ಪತ್ತೈದನೆಯದಾಗಿದೆ. ಹೀಗೆ, ದೇಹ ಮತ್ತು ಆತ್ಮಗಳೆರಡು ಬೇರೆ ಬೇರೆ ಎಂದು ತಿಳಿದುಕೊಳ್ಳದೆ, ದೇಹವೇ ಆತ್ಮವೆಂಬ ಮೋಹದಲ್ಲಿ ಸಿಲುಕಿ, ಅರಿವಿನ ಮರವೆಯ ನಿದ್ರೆಯಲ್ಲಿ ಮುಳುಗದೆ ಇರುವವನೇ ಮಾನವನು ? ಆದ್ದರಿಂದ ಈ ಅರಿವಿನ ಮರವೆಯೆಂಬ ನಿದ್ರೆಯಿಂದ ಕೊಡವಿ ಎದ್ದು, ಸಾಹಸದಿಂದ ಗುರುವಿನ ಸೇವೆ ಮಾಡುವ ಮೂಲಕ ಗುರುಭಕ್ತಿ ಸಲ್ಲಿಸುವುದು ಲೇಸು. ಈ ಮಾತುಗಳನ್ನು ಬೇಗ ಸ್ಪಷ್ಟಪಡಿಸಿಕೊಂಡು ತಿಳಿಯಬೇಕು.

"ಮುಕ್ತ್ಯಾಕಾಂಕ್ಷ್ಯಾ ಸದ್ಗುರು ಪ್ರಾಪ್ತಿಃ". ಮುಕ್ತಿ ಪಡೆಯಬೇಕೆಂಬ ಆಕಾಂಕ್ಷೆಯು ತೀವ್ರಗೊಂಡೊಡನೆ ಸದ್ಗುರು ಪ್ರಾಪ್ತವಾಗುತ್ತಾನೆ. ಆ ಚಿಂತೆ ಬೇಡ. ಆದ್ದರಿಂದ ಗುರುವು ಪ್ರಾಪ್ತವಾಗುವ ವರೆಗೆ ಸಾಧನವನ್ನು ಮಾಡಕೂಡದೆಂದು ಕಾಲವನ್ನು ವ್ಯರ್ಥ ಕಳೆಯಬಾರದು. ಮುಕ್ತಿಯ ಆಕಾಂಕ್ಷೆಯನ್ನು ತೀವ್ರಗೊಳಿಸಿಕೊಳ್ಳಬೇಕು. ಮನೋಶುದ್ಧಿ ಪಡೆಯಬೇಕು.

ಆ ||
ಗುರುವು ದೊರೆಯಲಾಗ ಗುರುತನರಿವೆನೆಂದು,
ಕಾಲವೆಲ್ಲ ವ್ಯರ್ಥ ಕಳೆಯುತಿಹುದು,
ಗುರುವು ದೊರೆವ ವೇಳೆ, ಗತಿಸುತಿಹುದು ದೇಹ.
ವಿಶ್ವದಾಭಿರಾಮ ಕೇಳು ವೇಮ.

ಆತ್ಮವು ಹೇಗಿದೆ ? ಅದನ್ನು ಗುರುತಿಸುವ ಬಗೆಯೆಂತು ? ಏನೇ ಇರಲಿ, ಗುರುವು ದೊರೆತ ಮೇಲೆ ಆ ಗುರುತನ್ನು ಅರಿಯೋಣ, ಎಂದು ವ್ಯರ್ಥ ಕಾಲ ತಳ್ಳಿದರೆ, ಕೊನೆಗೆ ಮನೋಶುದ್ಧಿಯ ಸಾಧನವೂ ಇಲ್ಲದೆ, ಮುಕ್ತಿಯ ತೀವ್ರ ಆಕಾಂಕ್ಷೆಯೂ ಉದಿಸದೆ, ಸದ್ಗುರುವು ಪ್ರಾಪ್ತವಾಗನು. ಇತರ ನಿಷಿದ್ಧ ಗುರುಗಳು ಹಾದಿ ತಪ್ಪಿಸಬಹುದು. ಕೊನೆಗೆ ಸದ್ಗುರುವು





ಪ್ರಾಪ್ತನಾಗುವ ವೇಳೆಗೆ ಆಯುಷ್ಯದ ಅವಧಿ ಮುಗಿದು ದೇಹವೇ ಗತಿಸಿ ಹೋಗುತ್ತದೆ.

## ಸದ್ಗುರು ಪ್ರಾಪ್ತಿ :

ನಾವು ಈ ಮೊದಲೇ ತಿಳಿಸಿದಂತೆ ಮುಕ್ತಿಯ ತೀವ್ರ ಆಕಾಂಕ್ಷೆಯಾದೊಡನೆ ಸಾಧಕನಿಗೆ ಸದ್ಗುರುವು ಪ್ರಾಪ್ತವಾಗುತ್ತಾನೆ. ಇದನ್ನು ಪಾರಮಾರ್ಥಿಕ ಭಾಷೆಯಲ್ಲಿ 'ಅಧಿಕಾರ' ಎನ್ನುತ್ತಾರೆ. ಒಬ್ಬನು ಮುಕ್ತಿ ಇಲ್ಲವೆ ಮೋಕ್ಷಕ್ಕೆ ಅಧಿಕಾರಿಯಾಗಬೇಕಾದರೆ, ಜ್ಞಾನ ಮಾರ್ಗಿಗಳು ಸಾಂಪ್ರದಾಯಿಕವಾಗಿ ಸಾಧನ ಚತುಷ್ಟಯಗಳನ್ನು ಪ್ರತಿಪಾದಿಸುತ್ತಾರೆ. ವಿವೇಕ, ವೈರಾಗ್ಯ, ಷಟ್ಕಸಂಪತ್ತಿ (ಅಂದರೆ ಶಮೆ, ದಮೆ, ಉಪರತಿ, ತಿತಿಕ್ಷೆ, ಶ್ರದ್ಧೆ ಮತ್ತು ಸಮಾಧಾನ) ಮತ್ತು ಮುಮುಕ್ಷುತ್ತ್ವ. ಈ ಸಾಧನ ಚತುಷ್ಟಯಗಳು ಯೋಗ ಮಾರ್ಗದಲ್ಲಿಯೂ ಅನ್ವಯಿಸುತ್ತವೆ. ಮುಮುಕ್ಷುತ್ವವೇ ಮುಕ್ತಿಯ ತೀವ್ರ ಆಕಾಂಕ್ಷೆಯಾಗಿದೆ. ಸಾಧಕನು ಒಂದು ಹೆಜ್ಜೆಯಿಟ್ಟರೆ, ಪರಮಾತ್ಮನು ಎರಡು ಹೆಜ್ಜೆ ಇವನತ್ತ ಇಡುತ್ತಾನೆ, ಎಂದು ಹೇಳಬಹುದು. ವೇದಾಂತ ವೇದ್ಯನೆಂದರೆ ಬ್ರಹ್ಮನೆ. ಇದುವೇ ಜ್ಞಾನಕಾಂಡದಲ್ಲಿ ಹುದುಗಿರುವ ಗುಪ್ತ ವಿದ್ಯೆ.

ಆ ||
ಶೋಧದಿಂದ ದೊರೆವ ವೇದಾಂತ ವೇದ್ಯನ,
ಶೋಧಿಸುವವನ ತಾನೆ ಶೋಧಿಸುತಿಹ.
ಶೋಧಿಸಲರಿತಂಥ ಸುಮತಿ ಸೇರುತಿಹನು.
ವಿಶ್ವದಾಭಿರಾಮ ಕೇಳು ವೇಮ.

ವೇದದ ಸಂಹಿತೆ ಮತ್ತು ಬ್ರಾಹ್ಮಣ ಭಾಗಗಳು ಕರ್ಮಕಾಂಡಗಳಾಗಿವೆ. ಇನ್ನು ಆರಣ್ಯಕ, ಉಪನಿಷತ್ತುಗಳು, ಜ್ಞಾನಕಾಂಡಗಳಾಗಿವೆ. ಅದರಲ್ಲಿಯೂ ಉಪನಿಷತ್ತು ವೇದಾಂತವಾಗಿದೆ. ವೇದಾಂತದಲ್ಲಿ ಬ್ರಹ್ಮವಿದ್ಯೆಯನ್ನು ಕುರಿತು ಶ್ರುತಪಡಿಸಿದ್ದಾರೆ. ಆದ್ದರಿಂದ ವೇದಾಂತ ವೇದ್ಯ ಎಂದರೆ ಬ್ರಹ್ಮವೇ. ಬ್ರಹ್ಮವನ್ನು ಶೋಧಿಸಿ, ಮನೋಶುದ್ಧಿಯಿಂದ ಪಡೆಯಬೇಕು. ಸಾಧಕನು ಬ್ರಹ್ಮವನ್ನು ಶೋಧಿಸತೊಡಗಿದರೆ, ಬ್ರಾಹ್ಮೀ ಸ್ಪಂದನಗಳು ಸಾಧಕನನ್ನು ಶೋಧಿಸುತ್ತ ಬರುತ್ತವೆ. ಹೀಗೆ ಸುಮಧುರ ಮಿಲನವಾಗುತ್ತದೆ. ಅಂತೂ ಶೋಧಿಸಲರಿತಂಥ ಸುಮತಿಯು ಪರಮ ತತ್ತ್ವವನ್ನು ಸೇರುತ್ತಾನೆ. ಗುರುವು ಬ್ರಹ್ಮನೇ. 'ಗುರುರ್ಬ್ರಹ್ಮಾ ಗುರುರ್ವಿಷ್ಣು ಗುರುರೇವ ಪರಬ್ರಹ್ಮ. ತಸ್ಮೈಶ್ರೀ ಗುರುವೇ ನಮಃ" ಆದ್ದರಿಂದ ಅಜ್ಞಾನಾಂಧಕಾರ ನಿವಾರಕನಾದ ಗುರುವು ಸಾಧಕನನ್ನು ಶೋಧಿಸುತ್ತಿರುತ್ತಾನೆ. ಹೀಗೆ ಉತ್ತಮ ಅಧಿಕಾರಿ ಶಿಷ್ಯನಾದ ವೇಮನರನ್ನು ಮೋಕ್ಷ ತೋರುವ ಗುರುವೊಬ್ಬನು ಶೋಧಿಸುತ್ತಿದ್ದನು. ಇತ್ತ ತೀವ್ರ ಮುಕ್ತಿಯ ಆಕಾಂಕ್ಷೆ ಹೊಂದಿದ ಸಚ್ಛಿಷ್ಯರಾದ ವೇಮನರು ಮಾರ್ಗದರ್ಶಕನಾದ ಸದ್ಗುರುವಿನ ಶೋಧದಲ್ಲಿದ್ದರು. ವೇಮನರು ಅನೇಕ ಶ್ರೇಣಿಯ ಗುರುಗಳನ್ನು ಭೆಟ್ಟಿಯಾಗಿದ್ದರು. ಕೆಲವರು ಕೇವಲ ಮತ ಪ್ರಚಾರಕ ಕುಲ ಗುರುಗಳಾಗಿದ್ದರು. ಕೆಲವರು ಕರ್ಮ ವ್ರತಗಳನ್ನು ಕಟ್ಟುವ ಅಧಮ ಗುರುಗಳಾಗಿದ್ದರು. ಕೆಲವರಂತೂ ಹಣ ದೋಚುವ ಕಳ್ಳ ಗುರುಗಳಾಗಿದ್ದರು. ಕೊನೆಗೆ ಅವರಿಗೆ ಧ್ಯಾನ ಸ್ಥಿತಿಯಲ್ಲಿರುವಾಗ ಸದ್ಗುರುವೊಬ್ಬ ಕಾಣಿಸಿಕೊಂಡನು. ಅವನ ಭೌತಿಕ ಅಸ್ತಿತ್ವದ ಶೋಧಕ್ಕಾಗಿ ಅವರು ಕಾತರರಾಗಿದ್ದರು.

ಕುರಿ ಹತ್ತು ಸಾವಿರ ಕೂಡಿರುವ ಸ್ಥಳದಿ,
ಅದರ ಮರಿ ತಾಯಿಯ ಅರಿಯುತಿಹುದು.
ಪರಮಯೋಗಿಯರಿತು ಭಕ್ತ ತಾನೆ ಬರುವ.
ವಿಶ್ವದಾಭಿರಾಮ ಕೇಳು ವೇಮ.

ಕುರಿಗಳು, ರೂಪ ಆಕಾರಗಳಲ್ಲಿ ಒಂದೇ ರೀತಿ ತೋರಿಬರುತ್ತವೆ. ಅಂಥ ಹತ್ತಾರು ಸಾವಿರ ಕುರಿಗಳ ಹಿಂಡಿನಲ್ಲಿ ಯಾವುದೊಂದು ಕುರಿಯನ್ನು ಗುರುತಿಸುವುದು ತುಂಬಾ ಕಠಿಣ. ಆದರೆ ಯಾವೊಂದು ಕುರಿಯ ಮರಿಯು ತನ್ನ ಕರುಳಿನ ಸಂಬಂಧದಿಂದ, ತನ್ನ ತಾಯಿಯನ್ನು ಅರಿಯಬಲ್ಲದು. ಅದೇ ರೀತಿ, ಭಕ್ತನೊಬ್ಬನು ತನ್ನ ಹೃದಯದ ಸೆಳೆತದಿಂದ ಹಲವಾರು ಬೈರಾಗಿಗಳ ಸಮೂಹದಲ್ಲಿ ಪರಮ ಯೋಗಿಯನ್ನು ಕಂಡುಕೊಳ್ಳುವನು.

ಇಷ್ಟರಲ್ಲಿ ವೇಮನರ ಮೊದಲಿನ ಸಂಗಾತಿಯಾದ ಅಭಿರಾಮಯ್ಯನವರು ಕೊಂಡವೀಡು ಬೆಟ್ಟದ ಗವಿಯಲ್ಲಿ ಕೆಲದಿನಗಳಿಂದ ಓರ್ವ ತೇಜಃ ಪುಂಜನಾದ ನಗ್ನ ಬೈರಾಗಿಯೋರ್ವನು ಬಂದು ವಾಸವಾಗಿರುವನೆಂದು ಕೇಳಿ, ಅವರನ್ನು ಸಂಪರ್ಕಿಸಿದ್ದರು. ಅವರ ಕೈಂಕರ್ಯವನ್ನೂ ಕೈಕೊಂಡಿದ್ದರು. ಆ ಬೈರಾಗಿಯನ್ನು ಭಯಭಕ್ತಿಯಿಂದ ಕಾಣುತ್ತಿದ್ದರು. ಒಂದು ದಿನ ಆ ಬೈರಾಗಿ ಅಭಿರಾಮಯ್ಯನವರನ್ನು ಕುರಿತು,

"ಅಭಿರಾಮಯ್ಯ ! ಕೆಲ ದಿನಗಳಿಂದ ನನಗೆ ಈ ಭಾಗದ ಯುವಕನೋರ್ವನ ಚಿತ್ರ ಮನದೆದುರು ಬರುತ್ತಿದೆ. ಬಹುಶಃ ಅವನು ಮೋಕ್ಷಕ್ಕೆ ಉತ್ತಮ ಅಧಿಕಾರಿಯೇ ಆಗಿರಬಹುದು" ಎಂದು ಸಹಜವಾಗಿ ನುಡಿದರು.

"ಅಹುದು ಬಾಬಾ ! ಈ ಊರಿನ ಯುವಕರೊಬ್ಬರು ಕಡು ವೈರಾಗ್ಯ ತಾಳಿ, ನಾಡಿನಲ್ಲಿ ಸಂಚರಿಸುತ್ತಿದ್ದಾರೆ" ಎಂದರು ಅಭಿರಾಮಯ್ಯ.

"ಈಗ ಅವನೆಲ್ಲಿ ?" ಕೇಳಿದರು ಬೈರಾಗಿ.

"ಇಲ್ಲೆಲ್ಲಿಯೋ ಸಮೀಪದ ಕಾಡು ಮೇಡುಗಳಲ್ಲಿರಬಹುದು" ಉತ್ತರಿಸಿದರು ಅಭಿರಾಮಯ್ಯ.

"ಬರಲಿ ಬಿಡು. ಅಲ್ಲಿಯ ವರೆಗೆ ನಾನು ಇಲ್ಲಿಯೇ ಉಳಿಯಬಹುದು" ಎಂದನು ಬೈರಾಗಿ.

ಬೈರಾಗಿ ವೇಮನರನ್ನು ಕುರಿತು ವಿಚಾರಿಸಿದಂದಿನಿಂದ ಇತ್ತ ವೇಮನರ ಮನದಲ್ಲಿ ಈ ಮುನ್ನವೇ ಮೂಡಿದ ಗುರುಮೂರ್ತಿಯ ಚಿತ್ರವು ಹೆಚ್ಚು ಹೆಚ್ಚು ಸ್ಫುಟವಾಯಿತು. ಈ ಬೈರಾಗಿ ಬಾಬಾ ಯಾರಿರಬಹುದು ? ಎಂದು ವೇಮನ ಧ್ಯಾನ ಸಮಯಕ್ಕೆ ಚಿಂತನೆ ಮಾಡಿದರು. ಮುಂದೆ ಒಂದೆರಡು ದಿನಗಳಲ್ಲಿ ಅಭಿರಾಮಯ್ಯನವರು ವೇಮನರನ್ನು ಅರಸುತ್ತ ಅವರಿರುವ ಕಾಡಿಗೆ ಬಂದು ತಾವು ಭೆಟ್ಟಿಯಾದ ಅಪೂರ್ವ ತೇಜಸ್ವೀ ಪುರುಷನನ್ನು ಕುರಿತು ವಿವರಿಸಿದರು. ಅವರ ನೀಳ ಗಡ್ಡ, ಬೆಳೆದ ಕೇಶರಾಶಿ, ಹೊಳೆಯುವ ಕಣ್ಣುಗಳ ಯಥಾವತ್ ಚಿತ್ರ ನೀಡಿದರು.

"ಹೌದು ಅಭಿರಾಮಯ್ಯ ! ನಾನು ಕಳೆದ ಕೆಲವಾರು ದಿನಗಳಿಂದ ದಿನಾಲು ಧ್ಯಾನ





ಕಾಲಕ್ಕೆ ಮನೋಪಟಲದೆದುರು ಕಾಣುವ ಪ್ರಭಾವಿ ಮೂರ್ತಿ ಇವರೇ ಇರಬೇಕು" ಎಂದರು ವೇಮನ.

"ಇರಬಹುದು ಅವರು ಬಹುಶಃ ನಿಮಗಾಗಿ ಕಾಯುತ್ತಿರುವಂತಿದೆ. ಒಂದೆಡೆಗೆ ಎರಡು ಮೂರು ದಿನಕ್ಕಿಂತ ಹೆಚ್ಚು ಕಾಲ ನಿಲ್ಲದ ಈ ಮಹಾತ್ಮರು, ಕಳೆದೊಂದು ವಾರದಿಂದ ಕೊಂಡವೀಡುವಿನ ಗವಿಯಲ್ಲಿಯೇ ಉಳಿದಿದ್ದಾರೆ" ಎಂದು ತಿಳಿಸಿದರು ಅಭಿರಾಮಯ್ಯ.

"ಇನ್ನೆಷ್ಟು ಕಾಲ ಇರಬಹುದು ?" ಕೇಳಿದರು ವೇಮನ.

"ಯಾರೋ ಒಬ್ಬ ಉತ್ತಮ ಅಧಿಕಾರಿಗೆ ಉಪದೇಶ ನೀಡಲು ಕಾದಿರುವೆವೆಂದು ತಿಳಿಸಿದರು" ಎಂದರು ಅಭಿರಾಮಯ್ಯ.

"ಹೀಗೋ, ಹಾಗಾದರೆ, ಈಗಲೇ ಅವರಲ್ಲಿಗೆ ಹೋಗೋಣ" ಎಂದು ನುಡಿದು ತಮ್ಮ ಕೈಕೋಲು ಮತ್ತು ಉಡುವ ಧೋತರ ಮತ್ತು ಹೊರುವ ದುಪ್ಪಟಿಯೊಂದಿಗೆ ಹೊರಟೇ ಬಿಟ್ಟರು ವೇಮನರು.

ಹುಟ್ಟೂರು ಕೊಂಡವೀಡು ತೊರೆದು ಎಷ್ಟೋ ವರ್ಷಗಳಾಗಿದ್ದವು. ಬೆಳೆದ ಊರು ರಾಜಮಹೇಂದ್ರವಂ ಬಿಟ್ಟು ಸಹ ಕೆಲ ವರ್ಷಗಳು ಸಂದಿದ್ದವು. ಮುಖದ ಮೇಲೆ ಗಡ್ಡ ಮೀಸೆಗಳು ಬೆಳೆದಿದ್ದವು. ಉಡಲೊಂದು ಪಂಜೆಯಿತ್ತು. ಹೊದೆಯಲೊಂದು ಪಂಜೆ ಇತ್ತು. ಹೀಗಾಗಿ, ಪೂರ್ವ ಪರಿಚಿತರಾರೂ ತಟ್ಟನೆ ವೇಮನರನ್ನು ಗುರುತಿಸದಂತಾಗಿತ್ತು. ವೇಮನರು ಆ ರಾತ್ರಿ ಕೊಂಡವೀಡು ತಲುಪಿದರೂ ಅಭಿರಾಮಯ್ಯನವರೊಂದಿಗೆ ನೇರವಾಗಿ ಆ ಬೆಟ್ಟದ ಅಡಿಯಲ್ಲಿರುವ ತಟಾಕವೊಂದರ ಬಳಿ ತನ್ನ ಪೂರ್ವಾಶ್ರಮದ ಹಿರಿಯರು ಕಟ್ಟಿಸಿದ ಧರ್ಮಶಾಲೆಯೊಂದನ್ನು ಸೇರಿದರು. ಅಭಿರಾಮಯ್ಯ ಅವರಿಗಾಗಿ ಕೆಲ ಹಣ್ಣು ಹಂಪಲು ತಂದಿದ್ದರು. ಅದನ್ನು ಸೇವಿಸಿ ಅಲ್ಲಿಯೇ ಪವಡಿಸಿದರು. ನಸುಕಿನಲ್ಲಿ ಅಭಿರಾಮಯ್ಯನವರು ಎದ್ದು ಊರಲ್ಲಿ ಬಂಧುಗಳೊಬ್ಬರ ಬಳಿ ಹೋಗಿ ಬರುವೆನೆಂದು ಹೇಳಿ ಹೋದರು. ನಸುಕು ಹರಿಯಿತು. ಮೂಡಲ ಮನೆಯ ರವಿಯು ಗಗನದಲ್ಲೆಲ್ಲ ಮುತ್ತಿನ ನೀರಿನ ಎರಕವನ್ನು ಹೊಯ್ದನು. ಹೊಂಬಣ್ಣದ ಓಕುಳಿಯಾಡಿದಂತಿತ್ತು. ದೂರದಲ್ಲಿ ಕೋಳಿಯೊಂದು ಕೂಗಿ ಬೆಳಗನ್ನು ಕರೆಯಿತು. ಹಕ್ಕಿಗಳು ಚಿಲಿಪಿಲಿ ಗುಟ್ಟಿದವು. ನಂತರ ಉಷೆಯು ಸರಿದಾಗ ಹಕ್ಕಿಗಳು ಹಿಂಡು ಹಿಂಡಾಗಿ ಹಾರತೊಡಗಿದವು. ಗಿಡಗಂಟೆಗಳ ಕೊರಳದನಿ ಗಗನಕ್ಕೇರಿತು. ವೇಮನ ಬೆಳಗಿನ ಜಾವದ ಬ್ರಾಹ್ಮೀ ಮುಹೂರ್ತದಲ್ಲಿ ನಿತ್ಯದಂತೆ ಧ್ಯಾನಮಗ್ನರಾಗಿದ್ದರು. ತಾವು ಸಂಧಿಸಬೇಕಿದ್ದ ಗುರು ಮನದ ಬಾಗಿಲಲ್ಲಿ ಮುಗುಳ್ನಗುತ್ತಿರುವಂತೆ ಭಾಸವಾಯಿತು. ಅವರನ್ನು ಕಾಣುವ ಹಂಬಲ ಇನ್ನಷ್ಟು ಪ್ರಬಲಿಸಿತು. ಕೂಡಲೇ ಎದ್ದು ಬಳಿಯಲ್ಲಿಯ ತಟಾಕದಲ್ಲಿ ಮಿಂದು ಶುಚಿರ್ಭೂತರಾದರು. ಮಾನಸಿಕ ಶೌಚ ಮೊದಲೇ ಪ್ರಾಪ್ತವಾಗಿತ್ತು. ಸ್ನಾನಾನಂತರ, ಅವರು ಅಭಿರಾಮಯ್ಯನವರ ಬರವಿಗಾಗಿ ಕಾಯಲಾರದಷ್ಟು ತೀವ್ರ ಕುತೂಹಲ ಹೊಂದಿದ್ದರು. ಕೂಡಲೇ ಮೋಕ್ಷ ಗುರುವಿನ ಮಹಾದರ್ಶನಕ್ಕಾಗಿ ಹೊರಟೇ ಬಿಟ್ಟರು. ಪೂರ್ವ ಪರಿಚಿತ ಸ್ಥಳವೇ ಆದ್ದರಿಂದ, ಹಿಂದಿನ ರಾತ್ರಿ ಅಭಿರಾಮಯ್ಯನವರು ಸೂಚಿಸಿದ ಗುರುತಿನಿಂದ ಬೈರಾಗಿ ಸದ್ಗುರುವು ವಾಸಿಸಿದ ಗವಿಯನ್ನು ಹುಡುಕುವುದು ಕಷ್ಟವಾಗಿರಲಿಲ್ಲ.

ವೇಮನರು ಗವಿಯ ಬಾಗಿಲಿಗೆ ಬಂದು ಅಡ್ಡವಿರಿಸಿದ ತಡಿಕೆಯನ್ನು ಸರಿಸಿದರು. ಎದುರಿಗೆ ಕಳೆದೊಂದ ವಾರದಿಂದ ಮನಸಿನಲ್ಲಿ ದರ್ಶನವೀಯುತ್ತಿದ್ದ ಆ ತೇಜಃಪುಂಜ ಮೂರ್ತಿಯ ದಿಗಂಬರ ದೇಹ ! ಕಣ್ಣು ಪಿಳುಕಿಸದೆ ನೋಡಿದರು. ನೋಡು ನೋಡುತ್ತ ತಮ್ಮ ಮನಸ್ಸು ನಿಸ್ತರಂಗವಾಗತೊಡಗಿರುವುದನ್ನು ಅನುಭವಿಸಿದರು. ಸೂಜಿಗಲ್ಲಿನಂತೆ ಆಕರ್ಷಸಿದರು ಬೈರಾಗಿ. ಅದೇ ಆಗ ಧ್ಯಾನ ಸಮಾಧಿಯಿಂದ ಎದ್ದು ಬಂದಿದ್ದರಿಂದ ತುಂಬಾ ಪ್ರಸನ್ನವದನರಾಗಿದ್ದರು. ಗವಿಯಲ್ಲಿ ಗಂಭೀರ ಮೌನ ಆವರಿಸಿತ್ತು.

" ಬಾ ಮಗು. ನಿನ್ನ ಬರವನ್ನು ನಿರೀಕ್ಷಿಸುತ್ತಿದ್ದೆ" ಎಂದರು ಬೈರಾಗಿ.

"ನಿನ್ನೆ ನನ್ನ ಸಂಗಡಿಗ ಅಭಿರಾಮಯ್ಯನವರು ನಿಮ್ಮ ಬಗೆಗೆ ತಿಳಿಸಿದರು" ಎಂದರು ವೇಮನ.

"ನಿನ್ನ ಶುಭ ನಾಮ.....?"

"ವೇಮನ" ಉತ್ತರಿಸಿದರು ವೇಮನ.

"ನೀನು ಇದು ವರೆಗೆ ಮಾಡಿದ ಸಾಧನವೇನು ?" ಕೇಳಿದರು ಬೈರಾಗಿ.

"ನಾನು ಮೊದಲು ರಸ ಸಿದ್ಧರ ಸಹವಾಸದಲ್ಲಿದ್ದೆ. ಅವರಿಂದ ಮಂತ್ರವಿದ್ಯೆಯನ್ನು ಕಲೀತಿದ್ದೇನೆ. ಸ್ವರ್ಣ ತಯ್ಯಾರಿಕೆಯೂ ಸಿದ್ಧಿಸಿದೆ. ಕೆಲವೊಂದು ಕಾಯಕಲ್ಪ, ಮದ್ದು ತಯ್ಯಾರಿಕೆಯಲ್ಲಿ ಸಿದ್ಧಿ ಪಡೆದಿರುವೆ" ಎಂದು ಪ್ರಾರಂಭಿಸಿದರು ವೇಮನ.

"ಮಗೂ ! ಅದೆಲ್ಲ ಐಹಿಕ ವ್ಯಾಪಾರಗಳಲ್ಲಿ ಪ್ರಯೋಜನಕಾರಿ. ಬ್ರಹ್ಮ ವಿದ್ಯೆಯ ಸಾಧಕನಿಗೆ ಅದು ಸ್ವಲ್ಪ ಆತಂಕಕಾರಿ. ಅದನ್ನು ಬಿಡಲಾರೆಯಾ ?" ಎಂದರು ಬೈರಾಗಿ.

"ತಮ್ಮ ಇಚ್ಛೆಯಂತೆಯೇ ಆಗಲಿ" ಎಂದರು ವೇಮನ.

"ಯೋಗ ಸಾಧನದಲ್ಲಿ ಏನೇನು ಸಾಧಿಸಿರುವೆ ?" ಕೇಳಿದರು ಬೈರಾಗಿ.

"ಇವ್ವಟೂರಿ ಸೋಮಶೇಖರ ಗುರುಗಳ ಛತ್ರದಲ್ಲಿ ಅಧ್ಯಯನ ಮಾಡುವ ಕಾಲದಲ್ಲಿ ಕೆಲವು ಪ್ರಾರಂಭಿಕ ಅಭ್ಯಾಸಗಳನ್ನು ಮಾಡಿದ್ದೆ. ಮುಂದೆ ರಸಸಿದ್ಧರ ಸಂಗದಲ್ಲಿ ಇರುವಾಗ ಮನೋಶಕ್ತಿ ಉದ್ದೀಪನದ ಕೆಲವು ಕ್ರಿಯೆಗಳನ್ನು ಅಭ್ಯಸಿಸಿದ್ದೆ. ಅನಂತರ ಸೂಕ್ತ ಮಾರ್ಗದರ್ಶನವಿಲ್ಲದೆ ಹೆಚ್ಚಿನ ಪ್ರಗತಿ ಸಾಧಿಸಲಾಗಲಿಲ್ಲ" ಎಂದು ಉತ್ತರಿಸಿದರು ವೇಮನ.

"ಆದದ್ದೆಲ್ಲ ಒಳ್ಳೆಯದೆ. ಈಗ ಕೆಲವು ಯೋಗ ಸೂತ್ರಗಳನ್ನು ತಿಳಿಸುವೆ. ಅವುಗಳನ್ನು ನಿಷ್ಠೆಯಿಂದ ಆಚರಿಸು. ಒಳ್ಳೆಯದಾಗುತ್ತದೆ. ಇಲ್ಲಿ ನಿನಗೊಳ್ಳೇ ಪೂರ್ವ ಜನ್ಮದ ಸಂಸ್ಕಾರವಿದೆಯೆಂದು ನನಗೆ ಗೋಚರಿಸುತ್ತದೆ. ಹಾಗಾಗಿ ಮುಂದಿನ ಮಾರ್ಗವು ಸುಭಗವಾಗುತ್ತದೆ. ಎಲ್ಲವೂ ನಿನಗೇ ಅಂತಃಶಕ್ತಿಯಿಂದ ಹೊಳೆಯುತ್ತಿದೆ. ಸಕಾಲಕ್ಕೆ ಅಂತರ್ಯದಲ್ಲಿ ಗುರುಶಕ್ತಿಯೂ ನೆರವಿಗೆ ಬರುತ್ತದೆ" ಎಂದು ಧ್ಯಾನಮಗ್ನರಾಗಿ ಒಳಗಣ್ಣಿನಿಂದ ಏನೋ ತಿಳಿದಂತೆ ಉಸುರಿದರು, ಮಹಾಗುರು.

"ಎಲ್ಲವೂ ತಮ್ಮ ಕೃಪೆ......." ಎಂದು ನುಡಿದರು ವೇಮನ.





"ಹಾ ಇಲ್ಲಿ ಇನ್ನೊಂದು ಮಾತು. ನಿನ್ನ ಮನಸ್ಸು ಉನ್ಮನೀ ಅವಸ್ಥೆಗೇರುವ ಹಂತದಲ್ಲಿದೆ. ಆ ಗತಿಯೂ ತೀವ್ರವಾಗಬಹುದು. ಕಾರಣ, ನೀನು ಆಗೀಗ ಉನ್ಮತ್ತಾವಸ್ಥೆಯನ್ನು ತಲುಪಬಹುದು. ಕೆಲವೊಮ್ಮೆ ಬಾಲವತ್ ಆಗಲೂಬಹುದು. ಆ ಕಾಲಕ್ಕೆ ಸ್ವಲ್ಪ ಎಚ್ಚರ ಅಗತ್ಯ. ಅಂಥ ಅವಸ್ಥೆಗಳು ಪುನರುಕ್ತಿಯಾಗುವ ಕಾಲಕ್ಕೆ ಬಳಿಗೆ ಪರಿಚಿತರಿದ್ದರೆ ಒಳ್ಳೆಯದು" ಎಂದೂ ಮುಂದಿನ ಮನಸ್ಥಿತಿಯ ಪೂರ್ವ ಸೂಚನೆ ನೀಡಿದರು.

ಇಷ್ಟು ಕುಶಲ ಸಂಭಾಷಣೆಯಾದ ಬಳಿಕ, ಗುರುಗಳು ತಮ್ಮ ಕಂಬಳಿಯ ಮೇಲೆ ಕುಳಿತರು. ವೇಮನರಿಗೂ ಎದುರು ಹಾಸಿದ ಕಂಬಳಿಯ ಮೇಲೆ ಕುಳಿತುಕೊಳ್ಳಲು ಹೇಳಿದರು.

"ವೇಮನ ! ನೀನು ದೀಕ್ಷೆ ಪಡೆಯಲು ಸಿದ್ಧನಿರುವೆಯಾ ?" ಕೇಳಿದರು ಗುರುಗಳು.

"ತಮ್ಮ ಅಪ್ಪಣೆಯಂತೆ....." ನುಡಿದರು ವೇಮನ.

ಗುರುಗಳು ಯುವಕ ವೇಮನರನ್ನು ಇನ್ನಷ್ಟು ಹತ್ತಿರಕ್ಕೆ ಕರೆದು ಆಪಾದ ಮಸ್ತಕ ವೀಕ್ಷಿಸಿದರು. ವೇಮನರ ಭೃಕುಟಿಯನ್ನು ತಮ್ಮ ಹೆಬ್ಬೆರಳಿನಿಂದ ಒತ್ತಿದರು. ಆಗ ವೇಮನರು ಪಡೆದ ಅನುಭವವು ಅನಿರ್ವಚನೀಯ ! ಗಿಡದಿಂದ ಹಾರಿ ಹೋಗುವ ಹಕ್ಕಿಗಳಂತೆ ಮನವು ಈ ಲೋಕದ ಸೊಡರು ಬಿಟ್ಟು ಹಾರಿತು. ಹಕ್ಕಿಗಳ ಹರುಷದ ಹತ್ತುಪಟ್ಟು ಹರುಷ ವೇಮನರಿಗಾಯಿತು. ಅವರ ಹೃದಯ ಗ್ರಂಥಿಯು ಬಿಚ್ಚಿತು. ಸಂಶಯಗಳೆಲ್ಲ ನಿರ್ಮೂಲವಾದವು. ಎಲ್ಲವೂ ಅದ್ಭುತದ ಘಟನೆಯಂತೆ ನಡೆಯಿತು. ಅದನ್ನು ವಿವರಿಸಲು ಶಬ್ದಗಳು ಸಾಲದೆನಿಸಿತು. ಅವರು ತಮ್ಮದೇ ಲೋಕದಲ್ಲಿ ಮಗ್ನರಾಗಿದ್ದರು.

"ಮಗೂ........" ಎಂದು ಕರೆದರು ಗುರುಗಳು.

"ಏನು ತಂದೆ........" ಎಂದರು ವೇಮನ.

"ನಾನೀಗ ದೀಕ್ಷೆ ನೀಡುವೆ" ಎನ್ನುತ್ತ ಕಿವಿಯಲ್ಲಿ ಪಂಚಾಕ್ಷರೀ ಮಂತ್ರವನ್ನು ಬೋಧಿಸಿದರು. ಇನ್ನೂ ಹಲವು ಮಂತ್ರಗಳನ್ನು ಬೋಧಿಸಿದರು. ಮುಂದೆ ಒಂದು ಘಂಟೆ ಕಾಲ ವೇಮನರನ್ನು ದಿಟ್ಟಿಸಿ, ಕಣ್ಣು ಮುಚ್ಚಿ ಧ್ಯಾನಾಸಕ್ತರಾದರು. ಆಗ ಶಕ್ತಿಪಾತ ಕ್ರಿಯೆ ಸಾಗಿತ್ತು. ದೀಕ್ಷಾ ದಾನ ಮುಗಿದ ಬಳಿಕ ಗುರುಗಳು ವೇಮನರನ್ನು ಉದ್ದೇಶಿಸಿ,

"ಮಗೂ ! ನೀನು ಪೂರ್ವ ಸುಕೃತ ಪಡೆದ ಪುಣ್ಯ ಪುರುಷ. ನಿನ್ನ ಸ್ವಂತದ ಉದ್ಧಾರವಷ್ಟೇ ನಿನ್ನ ಜೀವನದ ಗುರಿಯಲ್ಲ. ನಾಡಿನ ಜನರಲ್ಲಿ ಬೇರೂರಿದ, ಮೂಢ ಭಾವನೆ, ಕಂದಾಚಾರ, ಜಡಭಾವನೆಗಳನ್ನು ಕಳೆಯಬೇಕು. ಜನರ ಶೋಷಣೆಯನ್ನು ನಿಲ್ಲಿಸಬೇಕು. ಇಂಥ ವಿಚಾರಗಳನ್ನು ನೀನು ನಿನ್ನ ಸಾಹಿತ್ಯ ಮೂಲಕ ಮಾಡು. ಹೇಗೂ ನೀನು ಆಶು ಕವಿಯಾಗಿರುವೆ. ಶಿವಕವಿಯಾಗು. ನಿನ್ನ ನುಡಿ ಶ್ರುತಿಯಾಗಲಿ, ನೀನು ಆಡಿದುದೇ ವೇದವಾಗಲಿ, ಅವರಿವರ ಭಿಡೆ ಮುರುವತ್ತುಗಳಿಗೆ ಒಳಗಾಗಬೇಡ" ಎಂದರು.

"ಧನ್ಯ ; ಧನ್ಯನಾದೆ ಗುರುಗಳೇ !" ಎಂದು ಗುರುಗಳ ಚರಣಕಮಲಗಳಿಗೆರಗಿದರು ವೇಮನ.

"ಮಗು ! ಇನ್ನೊಂದು ಮಹತ್ವದ ವಿಚಾರ....." ಎಂದರು ಗುರುಗಳು.

"ಅಪ್ಪಣೆಯಾಗಲಿ" ಎಂದರು ವೇಮನ.

"ನೀನು ತಾಯಿಯುದರದಿಂದ ಹೇಗೆ ಬಂದಿರುವೆ ? ಮರಳಿ ಇಲ್ಲಿಂದ ತೆರಳುವಾಗ ಈ ದೇಹ ಹೇಗಿರುವುದು ? ಹಾಗೆಯೇ ಈ ದೇಹವನ್ನು ಇರಗೊಡುವೆಯಾ ?" ಎಂದು ಕೇಳಿದರು ಗುರುಗಳು. ವೇಮನ ಚಿಂತಿಸಿದರು. ತಟ್ಟನೆ ಹೊಳೆಯಿತು. ತನ್ನೆದುರು ನಿಂತ ದಿಗಂಬರ ಮೂರ್ತಿಯ ಇಂಗಿತವನ್ನು ಸಮರ್ಪಿತ ಭಾವದಿಂದ ಬಂದ ವೇಮನರು ಅರಿತುಕೊಂಡರು. ಗುರುಗಳನ್ನು ತದೇಕ ದೃಷ್ಟಿಯಿಂದ ನೋಡಿ ಮುಗುಳ್ನಕ್ಕರು. ಕೂಡಲೇ ಬಟ್ಟೆ ಕಳಚಿದರು. ಲಂಗೋಟಿಯತ್ತ ಕೈಹಾಕಿ, ಗುರುಗಳತ್ತ ನೋಡಿದರು.

"ಅದು ಇರಲಿ....." ಎಂದರು ಗುರುಗಳು. "ಪಶುಗಳಿಗೆ ಬಾಲವಿರುವಂತೆ ; ಪಕ್ಷಿಗಳಿಗೆ ರೆಕ್ಕೆಗಳಿರುವಂತೆ".

ಬಳಿಕ ದಿಗಂಬರನಾದ ಶಿಷ್ಯನನ್ನು ಬಳಿಗೆ ಕರೆದು ಮೈಯನ್ನೆಲ್ಲ ನೇವರಿಸಿ ಕಣ್ಣು ಮುಚ್ಚಿದರು. ಈಗಾಗಲೇ ಅಮಿತಾನಂದದಲ್ಲಿ ಲೋಲಾಡುತ್ತಿದ್ದ ವೇಮನರಿಗೆ ತಾವಾವ ಲೋಕದಲ್ಲಿ ಇದ್ದೇವೆಂಬುದೇ ತಿಳಿಯದಾಯಿತು. ತಾವೂ ಕೆಲ ಸಮಯ ಧ್ಯಾನ ಮಾಡಿ, ಎದ್ದು ಗುರುಗಳಿಗೆ ಸಾಷ್ಟಾಂಗ ಪ್ರಣಾಮ ಸಲ್ಲಿಸಿದರು. ಗುರುಗಳು ಹಲವು ರಹಸ್ಯ ವಿಚಾರಗಳನ್ನು ತಿಳಿಸಿ, "ಗುರು ಶಕ್ತಿಯನ್ನು ಪೂರ್ಣ ನಂಬು. ಅದೇ ನಿನಗೆ ದಾರಿ ದೀಪವಾಗುತ್ತದೆ" ಎಂದರು.

"ತಮ್ಮ ದರ್ಶನ ಭಾಗ್ಯ ಇನ್ನು ಯಾವಾಗ ?" ಎಂದರು ವೇಮನ.

"ಸೂಕ್ಷ್ಮ ಲೋಕದಲ್ಲಿ ಅದು ನಡೆದೇ ಇದೆಯಲ್ಲ. ಭೌತಿಕ ಲೋಕದಲ್ಲಿ ಇನ್ನು ಅದರ ಅಗತ್ಯವಿಲ್ಲ" ಎಂದು ನುಡಿದು ಮುಗುಳ್ನಕ್ಕರು. ಅವರು ಮುಂದುವರಿದು,

"ಮಗೂ ! ನನ್ನ ಕೆಲಸವಾಯಿತು. ನಾನು ಹೊರಡಬೇಕಾದ ಸಮಯ ಸನ್ನಿಹಿತವಾಯಿತು. ನೀನೀಗ ನಿನ್ನನರಿತ ಯೋಗಿಯಾದೆ, ಯೋಗಿರಾಜನಾದೆ. ನೀನು ಪಡೆಯಬೇಕಾದುದನ್ನು ಪಡೆದಿರುವೆ. ಈಗ ರಾಜಯೋಗ ಪ್ರಕ್ರಿಯೆಯನ್ನು ಮುಂದುವರೆಸಿ, ಅದರ ಪ್ರವರ್ತಕನಾಗು" ಎಂದು ಉಪದೇಶಿಸಿದರು.

"ಗುರುಗಳೇ ! ಅಭಿರಾಮಯ್ಯನವರೂ ಇಷ್ಟರಲ್ಲಿಯೇ ಬರಬಹುದು" ಎಂದರು ವೇಮನ.

"ಬರಲಿ ಅವರಿಗೆ ಅವರ ಪಾತ್ರತೆಗೆ ತಕ್ಕಂತೆ ನೀಡಿಯಾಗಿದೆ. ಅಭಿರಾಮಯ್ಯನಿಗೆ ನನ್ನ ಶುಭ ಸಂದೇಶ ತಿಳಿಸು" ಎಂದು ಹೇಳಿ ಹೊರಟೇ ಬಿಟ್ಟರು.

* * *

ಮುಂದೆ ಅರ್ಧ ಘಂಟೆಯ ನಂತರ ಕುತೂಹಲದಿಂದ ಆಗಮಿಸಿದ ಅಭಿರಾಮಯ್ಯನವರು ಗವಿಯನ್ನು ಭಕ್ತಿ ಭಾವದಿಂದ ಪ್ರವೇಶಿಸಿ ನೋಡುತ್ತಾರೆ ! ಗವಿಯಲ್ಲಿ ದಿಗಂಬರ ಮೂರ್ತಿಯೇನೋ ಇದ್ದರು. ಆದರೆ ತಾನು ನಿರೀಕ್ಷಿಸಿದ ಲಂಬಿಕಾ ಯೋಗಿಯಲ್ಲ. ಆದರೆ ಯುವಕ ವೇಮನ ಯೋಗಿ ! ಅವರಿಗೆ ಎಲ್ಲವೂ ಅರ್ಥವಾಯಿತು. ತಾವು ತಂದ ಹಣ್ಣು ಹಂಪಲಗಳನ್ನು ವೇಮನ ಯೋಗಿಗಳ ಮುಂದಿರಿಸಿ,

"ದಯವಿಟ್ಟು ಸ್ವೀಕರಿಸಿ" ಎಂದು ನುಡಿದು ಸಾಷ್ಟಾಂಗ ನಮಸ್ಕಾರ ಮಾಡಿದರು.





ವೇಮನ ಯೋಗಿಗಳು ಅವರನ್ನು ಎಬ್ಬಿಸುತ್ತ,

"ಇದೇನು ಅಭಿರಾಮಯ್ಯನವರೇ ! ತಾವು ಹಿರಿಯರು. ಗುರುಗಳು ಅರ್ಧ ಘಂಟೆ ಮೊದಲು ಹೊರಟು ಹೋದರು. ಹೋಗುವಾಗ ನಿಮಗೆ ಶುಭ ಹಾರೈಸಿ, ಸಾಧನದಲ್ಲಿ ಮುಂದುವರಿಯಲು ತಿಳಿಸಿದ್ದಾರೆ" ಎಂದರು ವೇಮನ ಯೋಗಿ.

"ಆಗಲಿ, ಇಂದಿನಿಂದ ನೀವೇ ನಮಗೆ ಗುರುಗಳು. ಲಂಬಿಕಾ ಯೋಗಿಗಳು ಪರಮ ಗುರುಗಳು" ಎಂದು ಫಲಾಹಾರದ ತಟ್ಟೆಯನ್ನು ವೇಮನ ಯೋಗಿಯೆದುರು ಇರಿಸಿದರು.

* * *

## ಗುರುವಿನ ಸ್ಮರಣೆಯಲ್ಲಿ :

ಆ॥ ಗುರುವೆ ತಾನಾಗುವ ಹರನ ತೋರುವವನು,
ಬ್ರಹ್ಮ ಲೋಕವನೆ ಪ್ರತ್ಯಕ್ಷಿಸುವ.
ಕಿಂಕರನ ಶೋಧಿಸಿ ಕತ್ತಲೆಯ ತೊಡೆವನು.
ವಿಶ್ವದಾಭಿರಾಮ ಕೇಳು ವೇಮ.

'ಹರತಿ ಇತಿ ಹರಃ' ಅಂದರೆ ತನ್ನ ಮನಸ್ಸನ್ನು ತನಗೆ ಗೊತ್ತಾಗದಂತೆ ಕದ್ದೊಯ್ಯುವವನೇ ಹರನು. ಅಂದರೆ ಯಾರನ್ನು ಧ್ಯಾನಿಸಿದರೆ ಹರಿದಾಡುವ ಮನಸ್ಸು ಇಲ್ಲವಾಗುವುದೋ ಅವನು. ಅಂಥ ಪರಮ ತತ್ತ್ವವಾದ ಹರನನ್ನು ಯಾರು ತೋರಿಸುವರೋ, ಅವನೇ ನಿಜವಾದ, ಅಂಧಕಾರ ನಿವಾರಕನಾದ ಗುರುವಾಗುತ್ತಾನೆ. ಅವನು ಶಿಷ್ಯನ ಮೇಲೆ ಕೃಪೆ ಬೀರಿ, ಶಕ್ತಿಪಾತ ಮಾಡಿ ಬ್ರಹ್ಮ ಲೋಕವನ್ನೇ ಪ್ರತ್ಯಕ್ಷಿಸುತ್ತಾನೆ. ಶಿಷ್ಯನು ಆ ಗುಣಾತೀತ ಅನುಭವ ಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ವಿಹರಿಸುತ್ತಾನೆ. ಅಂಥ ಗುರುವು ಅಧಿಕಾರಿ ಶಿಷ್ಯರನ್ನು ಶೋಧಿಸಿ, ಅವರ ಮನದೆದುರಿನ ಕತ್ತಲೆಯನ್ನು ತೊಡೆದು ಜ್ಞಾನ ದೀಪವನ್ನು ಹೊತ್ತಿಸುತ್ತಾನೆ.

ಆ॥ ಕೇಡು ಗುಣಗಳೆಲ್ಲ ಕೈಹಿಡಿದು ಶಿಕ್ಷಿಸಿ,
ಪರಮ ಪದವಿ ಸಿದ್ಧ, ಪ್ರಾಪ್ತಿ ಕಾಣು.
ಅಂಥ ಗುರುವ ಬೇಡಿ ಅಪರೋಕ್ಷವ ಹೊಂದು.
ವಿಶ್ವದಾಭಿರಾಮ ಕೇಳು ವೇಮ.

ನಮ್ಮಲ್ಲಿರುವ ಒಳಿತು ಕೆಡುಕು ಗುಣಗಳನ್ನು ವಿಂಗಡಿಸಿ ತಿಳಿದು, ನಮ್ಮ ಕೇಡಿ ಗುಣಗಳನ್ನು ಕೈಹಿಡಿದು ಶಿಕ್ಷಸಿ ನಮಗೆ ತತ್ತ್ವ ಬೋಧೆ ನೀಡುವ ಗುರುವಿನಿಂದ, ಪರಮ ಪದವಿಯು ನಮಗಾಗಿ ಸಿದ್ಧವಾಗಿರುತ್ತದೆ. ಅದರ ಪ್ರಾಪ್ತಿಯೂ ಆಗುವುದೆಂದು ತಿಳಿ. ಅಂಥ ಮಹಾ ಗುರುವನ್ನು ಸೇವಿಸಿ, ಅವರು ಉಪದೇಶಿಸಿದಂತೆ ಸಾಧನೆ ಮಾಡಿ, ಮುಕ್ತಿಗಾಗಿ ಬೇಡಿ, ಅಪರೋಕ್ಷ ಜ್ಞಾನವನ್ನು ಪಡೆ. ನೇರ ಅರಿವನ್ನು ಹೊಂದು.

ತೇಟ. ಗುರು ಪರಂಪರೆಯೀ ವಿದ್ಯೆ ಗೂಢವರಿತು,
ಪರಮ ಪರಿಪೂರ್ಣತೆಯಲಿ ಪರವಶನಿರೆ,
ನಿರುಪಮಾನಂದ ಸುಖ ಕೇಳಿ ಪಡೆಯಬೇಕು.
ಪರಶಿವನ ರೀತಿ ಭಾಸಿಸಲು ಬೇಕು ವೇಮ.

ಬ್ರಹ್ಮ ವಿದ್ಯೆಯು ತುಂಬಾ ರಹಸ್ಯವಾದುದು. ಇಂದ್ರಿಯ ಗೋಚರವಲ್ಲ. ಮಾತು ಮನಂಗಗಳಿಗೆ ಎಟುಕುವುದಲ್ಲ. ಪರಮ ಗುರು, ಗುರುವಿಗೆ ಈ ವಿದ್ಯೆ ಬೋಧಿಸುತ್ತಾನೆ. ಅವನು ತನ್ನ ಶಿಷ್ಯ ಪರಂಪರೆಗೆ ಬೋಧಿಸುತ್ತಾನೆ. ಹೀಗೆ ಗುರು ಪರಂಪರೆಯಿಂದ ದೊರೆಯುವ ಈ ರಹಸ್ಯ ವಿದ್ಯೆಯ ಗೂಢವನ್ನು ಅರಿತು ನಿತ್ಯವೂ, ಪರಿಪೂರ್ಣವೂ, ಆದ ಪರಮ ತತ್ತ್ವದಲ್ಲಿ ಪರವಶನಾಗಬೇಕು. ಮೈ ಮರೆಯಬೇಕು. ಆಗ ಪ್ರಾಪ್ತವಾಗುವ ಆನಂದಕ್ಕೆ ಉಪಮೆಯೇ ಇರದು. ಅದು ನಿರುಪಮ ಆನಂದದ ಸುಖ ಕೇಳಿಯಾಗಿರುತ್ತದೆ. ಅದನ್ನು ಪಡೆಯಬೇಕು.

ಕಂ. ಗುರುವೆನೆ ಧೇನುವು ಚೊಕ್ಕಟ,
ವರಶಿಷ್ಯನು ವತ್ಸನಾಗಿ ವರ್ತಿಸುತಿಪ್ಪನ್.
ಕರುಣೆಯುದಿಸಿದೊಡನೀವನು,
ನಿರುಪಮ ಲಕ್ಷ್ಯಾಮೃತವನು, ನಿಜವಿದು, ವೇಮಾ.

ಗುರುವು ಚೊಕ್ಕ ಆಕಳಿದ್ದಂತೆ. ಅವನು ಜ್ಞಾನ ದುಗ್ಧದ ಧಾರೆಯನ್ನೇ ಕರೆಯುತ್ತಾನೆ. ಇನ್ನು ಶ್ರೇಷ್ಠನಾದ ಶಿಷ್ಯನು ಆ ಜ್ಞಾನ ದುಗ್ಧವನ್ನು ಕುಡಿಯುವ ಕರುವಾಗಿ ವರ್ತಿಸುತ್ತಾನೆ. ಯಾವಾಗ ಶಿಷ್ಯನ ಮನ ಹೃದಯಗಳು ಶುದ್ಧವಾಗಿ ಅವನು ನಿರಹಂಕಾರಿಯಾಗಿ ಶರಣು ಕೋರುವನೋ. ಆಗ ಗುರುವಿಗೆ ಶಿಷ್ಯನನ್ನು ಕುರಿತು ಕರುಣೆ ಉದಿಸುತ್ತದೆ. ಆ ಕೂಡಲೇ ಅವನು ಶಿಷ್ಯನಿಗೆ, ಅಂದರೆ ತನ್ನ ಧ್ಯಾನ ಸಾಧನೆಯಲ್ಲಿ ಲಕ್ಷ್ಯವಿರಿಸಿದ ಶಿಷ್ಯನಿಗೆ, ನಿರುಪಮ ಅಮೃತವನ್ನು ಈಯುತ್ತಾನೆ. ಇದು ನಿಜವಾಗಿದೆ. ಸತ್ಯಸ್ಯ ಸತ್ಯವಾಗಿದೆ.

ಆ॥ ಕಾಗೆ ಗೂಡಿನಲ್ಲಿ ಕೋಗಿಲೆ ಇರುವಂತೆ,
ಭ್ರಮರವಪ್ಪ ಹುಳದ ಬದುಕಿನಂತೆ.
ಗುರು ಧ್ಯಾನದ ಬಳಿಕ ಗುರುವೆ ತಾನಾಗುವ.
ವಿಶ್ವದಾಭಿರಾಮ ಕೇಳು ವೇಮ.

ಕೋಗಿಲೆಯು ಕಾಗೆಯ ಗೂಡಿನಲ್ಲಿ ತತ್ತಿ ಹಾಕಿ ಹೋಗುತ್ತದೆ. ಕಾಗೆಯು ಆ ತತ್ತಿಗೆ ಕಾವು ಕೊಟ್ಟು ಮರಿ ಮಾಡುತ್ತದೆ. ನಂತರ ಅದಕ್ಕೆ ಗುಟುಕು ಕೊಟ್ಟು ಪೋಷಿಸುತ್ತದೆ. ಅದೇ ರೀತಿ, ಗುರು ತನ್ನ ಸಂಗದಲ್ಲಿ ಬಂದ ಶಿಷ್ಯನನ್ನು ಜ್ಞಾನದ ಗುಟುಕು ಕೊಟ್ಟು ಪೋಷಿಸುತ್ತಾನೆ. ಕೀಟ-ಹುಳುವು ತನ್ನ ಸುತ್ತ ಹಾರುವ ಭ್ರಮರವನ್ನು ನೋಡಿ ಭಯಪಡುತ್ತದೆ. ಅದರ ಗ್ರಂಥಿಗಳಿಂದ ರಸ ಸ್ರವಿಸಿ ರೆಕ್ಕೆಗಳು ಮೂಡುತ್ತವೆ. ಕೀಟವೂ ಭ್ರಮರವೇ ಆಗುತ್ತದೆ. ಅದೇ ರೀತಿ, ಶಿಷ್ಯನು ಗುರುವನ್ನೇ ಲಕ್ಷ್ಯದಲ್ಲಿರಿಸಿ ಧ್ಯಾನ ಮಾಡುತ್ತ ಮೊದಲು ಭೀತನಾದರೂ, ಬಳಿಕ ಭಕ್ತಿಯಿಂದ ಸಾಯುಜ್ಯ ಹೊಂದಿ, ತಾನೇ ಗುರುವಾಗಿ ಉದ್ದೀಪಿಸುತ್ತಾನೆ.

ಆ॥ ಗುರುವಿನ ಶಿಕ್ಷೆಯಿರದೆ, ಗುರುತು ದೊರೆವುದೆಂತು ?
ಅಜನೆ ಇರಲಿ, ಅವನ ಅಪ್ಪನಿರಲಿ ;
ಬೀಗದ ಕೈ ಇರದೆ ಬೀಗ ತೆರೆವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಶಿಷ್ಯನು ಅಧಿಕಾರಿಯಾಗಿರಬೇಕು. ಮೇಲಾಗಿ ಅವನಿಗೆ ಅಂಧಕಾರ ನಿವಾರಕನಾದ





ಗುರುವಿನಿಂದ ಸೂಕ್ತ ಶಿಕ್ಷಣ ದೊರೆಯಬೇಕು. ಆಗ ಮಾತ್ರ, ಬ್ರಹ್ಮ ಇರುವುದೆಲ್ಲಿ ? ಅದನ್ನು ಪಡೆಯುವ ಪ್ರಕ್ರಿಯೆಯು ಯಾವುದು ? ಅದನ್ನು ಹೇಗೆ ಗುರುತಿಸಬೇಕು ? ಎಂಬುದನ್ನೆಲ್ಲ ತಿಳಿಯಲು ಬ್ರಹ್ಮೋಪದೇಶ ಬೇಕು. ಹೀಗೆ ಗುರುವಿನ ಶಿಕ್ಷೆ ಇಲ್ಲದೆ ಹೋದರೆ, ಗುರುತು ಹೇಗೆ ದೊರೆಯುತ್ತದೆ ? ಇದು ಎಲ್ಲರಿಗೂ ಅನ್ವಯಿಸುತ್ತದೆ. ಅಜನಾದರೂ ಅಷ್ಟೇ. ಅವನ ಅಪ್ಪನಾದರೂ ಅಷ್ಟೇ. ಹಾಕಿದ ಬೀಗವನ್ನು ತೆರೆಯಬೇಕೆಂದರೆ ಬೀಗದ ಕೈ ಬೇಕಲ್ಲವೇ ? ಆ ರೀತಿ ಹೃದಯದ ಗಂಟನ್ನು ಭೇದಿಸಲು ಗುರುವಿನ ಶಿಕ್ಷೆಯೆಂಬ ಕೀಲಿ ಕೈ ಬೇಕೇಬೇಕು.

ಆ॥ ನೋಡಲೇಕೆ ವೇದ ? ಮಾಡಲೇಕೆ ವಾದ ?
ಅದುವೆ ತತ್ತ್ವ ; ತಿರುಗೆ ಆತ್ಮದೊಳಗೆ
ಗೂಡು ಕಟ್ಟಿಯುಂಟು ; ಗುರುವೊಬ್ಬನರಿವನು
ವಿಶ್ವದಾಭಿರಾಮ ಕೇಳು ವೇಮ.

ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳಲು, ವೇದ ಓದುವುದೇಕೆ ? ಏನೇನೋ ಶಬ್ದಾರಣ್ಯದಲ್ಲಿ ಅಲೆದು ದಾರಿಗಾಣದಾಗಿ ಇಲ್ಲವೆ ತಪ್ಪು ಗ್ರಹಿಕೆಯಿಂದ, ಇತರರೊಂದಿಗೆ ತನ್ನ ಗ್ರಹಿಕೆಯೇ ಸರಿ, ಎಂದು ವಾದ ಮಾಡುವುದೇಕೆ ? ನಾವು ಅರಿಯಬೇಕಾದ ಲಕ್ಷ್ಯವು ತತ್+ತ್ವವಷ್ಟೇ. ಅದು ಆತ್ಮದಲ್ಲಿಯೇ ಇದೇ. ಆತ್ಮವೇ ಆಗಿದೆ. ಹಾಗಾಗಿ ಆತ್ಮದತ್ತ ತಿರುಗಬೇಕು. ಅಲ್ಲಿ ತತ್ತ್ವವು ಗೂಡು ಕಟ್ಟಿ ಉಂಟು. ಆತ್ಮ ರಹಸ್ಯವೆಲ್ಲ ಅಲ್ಲಿಯೇ ಇದೆ. ಅದನ್ನು ಅಂಧಕಾರ ನಿವಾರಕನಾದ ಗುರುವೊಬ್ಬನೇ ಅರಿತಿದ್ದಾನೆ.

ಸೀಸ॥ ಗುರುಬೋಧೆ ತಿಳಿಯದ ಕುಟಿಲ ಶಾಸ್ತ್ರಂಗಳ,
ಪರಿಕಿಸಿದೊಡೆ ಏನು ಫಲವು ಉಂಟು ?
ಆತ್ಮೈಕ್ಯವರಿಯದೆ ಅಖಿಲ ಯೋಗಂಗಳು,
ಸಾಧಿಸುವ ಫಲವೇನು ಸತ್ಯವಾಗಿ ?
ತನ್ನ ಯತ್ನವನು ತಾನರಿಯದೆ ನರನು
ಸೇವೆ ಗೆಯ್ದೊಡೆ ಏನು ಸಿದ್ಧಿ ಉಂಟೆ ?
ತಮ್ಮ ಕುಂದನರಿಯದೆ ತಾನೆ ಬಹಳ
ಓದಿದ ಫಲವೇನು ಒಪ್ಪವಾಗಿ ?

ತೇಟ ನುಡಿವ ಸದ್ಗುರು ಬೋಧ ನಿತ್ಯವರಿತು,
ಮರೆಯದಿರುವಂಥವರು ಮಾಯವಾಗಿ,
ಅಂಟರೆನ್ನುತಿಹರು ; ಅಂದವಾಗಿ,
ತಿಳಿಸಿ ಹೇಳಿದ ವೇಮನ ದೇಶಿಕಾರ್ಯ.

ಗುರು ಪರಂಪರೆಯಿಂದ ದೊರೆಯುವ ಬ್ರಹ್ಮ ವಿದ್ಯೆಯನ್ನು ಉಪದೇಶಿಸುವ ಗುರು ಬೋಧೆಯನ್ನು ತಿಳಿಯದೆ, ಜನರ ಹಾದಿ ತಪ್ಪಿಸಿ, ಕಂದಾಚಾರ, ಕರ್ಮಗಳನ್ನು ಸೂಚಿಸುವ ಕುಟಿಲ ಶಾಸ್ತ್ರಗಳನ್ನು ಪರಿಕಿಸಿದರೆ ಏನು ಫಲವು ಉಂಟು ? "ಜೀವಾತ್ಮ ಪರಮಾತ್ಮ ಸಂಯೋಗೋ ಯೋಗಃ ಇತ್ಯಚ್ಯತೇ", ಅಂದರೆ ಜೀವಾತ್ಮ ಪರಮಾತ್ಮರ ಒಂದಾಗುವಿಕೆಯೇ ಯೋಗವೆನಿಸುತ್ತದೆ.

ಆದ್ದರಿಂದ ಆತ್ಮೈಕ್ಯವನ್ನು ಅರಿಯದ ಹಲವಾರು, ಯೋಗ ವಿಧಾನಗಳಿಂದ ನಿಜವಾಗಿ, ಸಾಧಿಸುವ ಫಲವಾದರೂ ಏನು ? 'ಅಹಂ ಕರ್ತಾ, ಫಲ ಭೋಕ್ತಾ'. ಅಂದರೆ ಅಹಂ ಮಾಡುತ್ತದೆ. ಅದೇ ಫಲ ಭೋಗಿಸುತ್ತದೆ. ಆದ್ದರಿಂದ ತನ್ನ ಯತ್ನದಲ್ಲಿ ಅಹಂ ಇದೆ. ಇದನ್ನು ಅರಿಯದೆ, ಅಹಂ ತೊರೆಯದೆ, ಪರಮನ ಸೇವೆ ಮಾಡಿದರೆ ಸಿದ್ಧಿಯು ಎನುಂಟು ? ತಮ್ಮಲ್ಲಿರುವ ಮೇಲು ಕೀಳು ಅರಿವುಗಳ ಕುಂದನ್ನು ತಾವು ತಿಳಿಯದೆ ಬಹಳಷ್ಟು ಒಪ್ಪವಾಗಿ ಓದಿದರೆ ಏನು ಫಲವುಂಟು?

ಯೋಗಿಗಳು ನುಡಿಯುವ ಸದ್ಗುರು ಬೋಧೆಯನ್ನು ನಿತ್ಯವೂ ಅರಿತು, ಮರೆಯದೆ ಇರುವಂಥವರು ಮಾಯವಾಗಿದ್ದಾರೆ, ಇಲ್ಲವಾಗಿದ್ದಾರೆ. ಹಾಗಾಗಿ ತಮ್ಮ ಲಕ್ಷ್ಯ ವಸ್ತುವಿಗೆ ಅಂಟರು, ಎನ್ನುತ್ತಾರೆ. ಅದರಿಂದಾಗಿಯೇ, ವೇಮನರು ಮತ್ತೆ ಅಂದವಾಗಿ ತಿಳಿಸಿ, ಹೇಳಿದ್ದಾರೆ.

ಆ ||
ಧರೆಯ ಜನರಿಗೆಲ್ಲ ಸರಿಯಾಗಿ ತಿಳಿಸುವೆ,
ಒಪ್ಪುವ ಹರನನರಿವ ಉಪಾಯವನು.
ಮನಸು ಚದರದಂತೆ ಮಹಿಮೆಯಿಂದ ಕಾಣು.
ವಿಶ್ವದಾಭಿರಾಮ ಕೇಳು ವೇಮ.

"ಹರತಿ ಇತಿ ಹರಃ" ಕದ್ದೊಯ್ಯುವನಾದುದರಿಂದ ಹರನೆನಿಸುತ್ತಾನೆ. ಯಾರ ಮೇಲೆ ಧ್ಯಾನ ಮಾಡುವುದರಿಂದ ನಮ್ಮ ಮನಸ್ಸು ನಮಗರಿವಿಲ್ಲದಂತೆ ಇಲ್ಲವಾಗುವುದೋ ಆ ತತ್ತ್ವವೇ ಹರನು. ಎಲ್ಲರೂ ಒಪ್ಪುವಂಥ ಹರನನ್ನು ಅರಿಯುವ ಉಪಾಯಗಳನ್ನು ಧರೆಯ ಎಲ್ಲ ಜನರಿಗೂ ತಿಳಿಸುವೆ. ಇಲ್ಲಿ ಕುಟೀಲ ಶಾಸ್ತ್ರಗಳನ್ನು ಹೇಳುವ, ಜಾತಿ ಕೋಮುಗಳ ಭೇದವೆಣಿಸದೆ, ಎಲ್ಲರಿಗೂ ಹೇಳುವೆ. ಅದನ್ನು ಕಾಣಲು ಮನಸ್ಸು ಅತ್ತಿತ್ತ ಚದರಬಾರದು. ಏಕಾಗ್ರವಾಗಿರಬೇಕು. ಆ ಪರಮ ತತ್ತ್ವದ ಮಹಿಮೆಯನ್ನು ನಾದಾನುಸಂಧಾನ, ತೇಜಾನುಸಂಧಾನ ಮೂಲಕ ಗುರುತಿಸಿ, ಆ ಹರನನ್ನು ಅರಿಯಬೇಕು.

ಗೀತ
ಚರ್ಚೆ ಮೀರಿದ ಜ್ಞಾನವನು ಸಂರಕ್ಷಿಸುತ,
ಮೂರ್ಛೆ ಹೋದಿದ ರೀತಿಯಲಿ, ಮುಕ್ತಿಯುಂಟು.
ಕುರಿತು ಮೆಚ್ಚಲು ಗುರಿದಾಟಿ ಕೋವಿದಾದ.
ಗುರು ದಡ ಸೇರಿಸಲು ತೀರಿತು, ಕಾಣು ವೇಮ.

ಆತ್ಮವು ಕಾರ್ಯ ಕಾರಣ ನ್ಯಾಯದ ಎಲ್ಲೆಯೊಳಗೆ ಇಲ್ಲ. ಹಾಗಾಗಿ ಆತ್ಮ ಜ್ಞಾನವು ಚರ್ಚೆಗೆ ಮೀರಿದ ಜ್ಞಾನವಾಗಿದೆ. ಇದನ್ನು ಪಡೆದು ಸಂರಕ್ಷಿಸಬೇಕು. ಆಗ ಎಲ್ಲ ಐಹಿಕ ಬಂಧನಗಳಿಂದ ಬಿಡುಗಡೆ ಇಲ್ಲವೆ ಮುಕ್ತಿಯುಂಟು. ಇದನ್ನು ಪಡೆದಾಗ ಅರಿವು ಮೂರ್ಛೆ ಹೊಂದಿದವನ ಅರಿವಿನಂತೆ ಇರುತ್ತದೆ. ಜಾಗ್ರತ ಮನಸ್ಸು ಸುಪ್ತವಾಗಿರುತ್ತದೆ. ಈ ಅವಸ್ಥೆಯನ್ನು ಕುರಿತು ಮೆಚ್ಚುವವನು. ತನ್ನ ಗುರಿಯಾದ ಆತ್ಮ ಸಾಕ್ಷಾತ್ಕಾರವನ್ನು ದಾಟಿ, ಕೋವಿದನಾಗುತ್ತಾನೆ. ಅಂಧಕಾರ ನಿವಾರಕನಾದ ಗುರುವು ಭವ ಸಾಗರವನ್ನು ದಾಟಿಸಿ ದಡ ಸೇರಿಸಿದನೆಂದರೆ ತೀರಿತು. ಅವನು ತೀರ್ಥನಾಗುತ್ತಾನೆ.

## ಉನ್ಮನೀ ಅವಸ್ಥೆ :

ಮಾನವ ಮನಸ್ಸು ಸಂಸ್ಕಾರವಶತೆಯಿಂದ ಅಧೋಮುಖವಾಗಿ ಸಂಕುಚಿತವಾಗಿ





ಇರುತ್ತದೆ. ಅದನ್ನು ಊರ್ಧ್ವಮುಖವಾಗಿರಿಸಿದರೆ ವಿಕಾಸಗೊಳ್ಳುತ್ತದೆ. ವಿಕಾಸಗೊಳ್ಳುವ ಗತಿಯು ಸಾಧನದ ತೀವ್ರತೆಯ ಮೇರೆಗೆ ತೀವ್ರವಾಗುತ್ತದೆ. ಸಾಧಕನು ಒಂದು ಹೆಜ್ಜೆ ಪರಮನತ್ತ ಇರಿಸಿದರೆ ಪರಮನು ಸಾಧಕನತ್ತ ಎರಡು ಹೆಜ್ಜೆ ಇರುಸುತ್ತಾನೆ. ಅವನು 'ತನ್ನ ಶೋಧಿಸುವವನ ತಾನೆ ಶೋಧಿಸುತಿಹನು' ಹೀಗಾಗಿ ಮುಕ್ತಿಯ ಆಕಾಂಕ್ಷೆಯು ತೀವ್ರವಾಗಿ ಈ ಮಧುರ ಆಕರ್ಷಣೆಯು ವರ್ಧಿಸುತ್ತದೆ. ರೂಢಿಗಿಂತ ವಿಕಾಸಗತಿಯು ಹೆಚ್ಚಾಗುತ್ತದೆ. ಆಗಿನ ಸಾಧಕನ ಮನಸ್ಸು ಲೌಕಿಕರಿಗೆ ಹುಚ್ಚು ಎನ್ನಿಸುತ್ತದೆ. ಯೌಗಿಕ ಭಾಷೆಯಲ್ಲಿ ಈ ಅವಸ್ಥೆಗಳನ್ನು ಪಿಶಾಚವತ್, ಉನ್ಮತ್ತವತ್ ಮತ್ತು ಬಾಲವತ್ ಎಂದು ಹೇಳುತ್ತಾರೆ. ನಿಜವಾಗಿ ಎಲ್ಲ ಮಹಾತ್ಮರೂ ಈ ಅವಸ್ಥೆಯನ್ನು ಹಾಯ್ದು ಹೋಗಿದ್ದಾರೆ. ಹುಬ್ಬಳ್ಳಿಯ ಶ್ರೀ ಸಿದ್ಧಾರೂಢರು, ಕೋಡಿಕೊಪ್ಪದ ಹುಚ್ಚಿರಪ್ಪನವರು, ಚೇಳ್ಳುಗುರ್ಕಿಯ ಯರ್ರಿ (ಪೆರ್ರಿ) ತಾತನವರು, ಗದಗಿನ ಶ್ರೀ ಶಿವಾನಂದರು, ಒಬ್ಬರೇ ಇಬ್ಬರೇ ಮುಕ್ತ ಪುರುಷರೆಲ್ಲರೂ ದಾಟಬೇಕಾದ ದಿವ್ಯ ಹುಚ್ಚಿನ ಅವಸ್ಥೆಯಿದು. ಚೀನಾ ದೇಶದಲ್ಲಿಯಂತೂ ಹುಚ್ಚು ಇರದೆ ಮುಕ್ತಿ ಲಭ್ಯವಿಲ್ಲ ; ಎಂಬ ಮಾತೇ ಇದೆ. ಕಲಕತ್ತೆಯ ರಾಮಕೃಷ್ಣ ಪರಮ ಹಂಸರು, ತಿರುವಣ್ಣಮಲೆಯ ಶ್ರೀ ರಮಣ ಮಹರ್ಷಿಗಳು ಇಂಥ ಅವಸ್ಥೆಯನ್ನು ದಾಟಿದ ಮಹಾತ್ಮರೇ ಆಗಿದ್ದಾರೆ. ಈ ಅವಸ್ಥೆಯನ್ನು ವೇಮನ ಯೋಗಿ, ಗುರುಗಳು ಸೂಚಿಸಿದಂತೆ, ತಲುಪಿದರು.

ಸದ್ಗುರುವಿನಿಂದ ಉಪದಿಷ್ಟರಾಗಿ ಗುರುಧ್ಯಾನದಲ್ಲಿ ಶ್ರದ್ಧಾ ಭಕ್ತಿಗಳಿಂದ ನಿರತರಾದ ವೇಮನ ಯೋಗಿಗಳಿಗೆ ಬೇರೆ ಬೆರೆ ಅವಸ್ಥೆಗಳುಂಟಾಗುತ್ತಿದ್ದವು.

ಆ ||
ಧ್ಯಾನಿಯಂತೆ ಉಂಟು ; ಮೌನಿಯಂತೆ ಉಂಟು
ಭೋಗಿಯಂತೆ ಉಂಟು, ರೋಗಿಯಂತೆ.
ಸಕಲವ ತಿಳಿದಿಪ್ಪ ಸರ್ವಜ್ಞನಾಗಿಯುಂಟು.
ಪರಮ ಯೋಗಿಯಂತೆ ಪೊಳೆಯೊ ವೇಮ.

ವೇಮನರು ಬಹುಕಾಲ ಧ್ಯಾನಮಗ್ನರಾಗಿರುತ್ತಿದ್ದರು. ಜಾಗ್ರತಾವಸ್ಥೆ ತಲುಪಿ ಪರಾಕ್ ಅಂದರೆ ಬಹಿರ್ಮುಖ ಆದಾಗಲೂ ಮೌನವಾಗಿರುತ್ತಿದ್ದರು. ಅದು ಮಾತಿನ ಮೌನವಷ್ಟೇ ಅಲ್ಲ. ಮನಸ್ಸಿನ ಮೌನವೂ ಆಗಿರುತ್ತಿತ್ತು. ಕೆಲವು ಸಮಯ ಜನರೊಂದಿಗೆ ಸೇರಿ, ಹಾಸ್ಯ ಚಟಾಕಿ ಹಾರಿಸುತ್ತ ಸುಗ್ರಾಸ ಭೋಜನ ಸೇವಿಸುತ್ತ ಭೋಗಿಯಂತೆ ಇರುತ್ತಿದ್ದರು. ಕೆಲವೊಮ್ಮೆ ಅಂಥ ಇಂಥ ಖಾದ್ಯ ಸೇವಿಸದೆ, ಯಾವುದೋ ಕಂದ ಮೂಲ ಮಾತ್ರ ಸೇವಿಸುತ್ತ, ರೋಗ 'ಪತ್ತೆ' ಮಾಡುವಂತೆ ಇರುತ್ತಿದ್ದರು. ಆದರೆ ಅವರು ಯಾವ ಅವಸ್ಥೆಯಲ್ಲಿದ್ದರೂ, ಸರ್ವವನ್ನೂ ತಿಳಿದ ಸರ್ವಜ್ಞರಾಗಿ ಇರುತ್ತಿದ್ದರು. ಇದುವೇ ಪರಮಯೋಗಿಯ ಸ್ಥಿತಿ. ಪರಮ ಯೋಗಿಯಂತೆ ಹೊಳೆಯುತ್ತಿದ್ದರು.

ಒಬ್ಬನು ಯೋಗಿಯಾದ, ಮತ್ತೊಬ್ಬನು ದಿಕ್ಕರಿತ ತ್ಯಾಗಿಯಾದ, ಬೇ
ರೊಬ್ಬನು ಭೋಗಿಯಾದ, ಮಗದೊಬ್ಬನು ಚೊಕ್ಕಟಿಹ ರೋಗಿಯಾದ, ತಾ
ನೊಬ್ಬ ಲಾಘವಾದ, ನಿನ್ನಂತೆಯೇ ಮಹಾತ್ಮನು, ಕಾಣು ಎಲ್ಲೆಡೇ.
ಕಬ್ಬದಬಿಲ ರೂಪಗಳು ನೀನೊಬ್ಬಗೆ ಸಲ್ಲುವವಲ್ತೆ ವೇಮನಾ ?

ವಿರಕ್ತರಲ್ಲಿ ಒಬ್ಬನು ಆತ್ಮೈಕ್ಯ ಸಾಧಿಸಿ ಯೋಗಿಯಾಗುತ್ತಾನೆ. ಮತ್ತೊಬ್ಬನು ತನ್ನ ದಿಕ್ಕು ದಿಶೆಗಳನ್ನು ಅರಿತು ತನ್ನ ವಿಷಯ ಭೋಗಗಳನ್ನು ತೊರೆದು ತ್ಯಾಗಿಯಾಗುತ್ತಾನೆ. ಇನ್ನೊಬ್ಬನು ತ್ಯಾಗ ಮಾಡದೆ, ತೋರಿಕೆಗೆ ಭೋಗಿಯಂತೆ ಕಂಡು ಬರುತ್ತಾನೆ. ಮಗುದೊಬ್ಬನು ಚೊಕ್ಕಟ ಯೋಗಿಯಾಗದೆ ಆತ್ಮರತನಾಗಿ ಆತ್ಮಾನಂದದಲ್ಲಿಯೇ ಇರುತ್ತಾನೆ. ತಾನೊಬ್ಬನು ಈ ಎಲ್ಲ ಹೊರೆಗಳನ್ನು ಕಳಚಿ, ಇಹದಿಂದ ಹಾರುವ ಹಕ್ಕಿಯಂತೆ ಹಗುರವಾಗುತ್ತಾನೆ. ಅಂದರೆ ಲಾಘವನಾಗುತ್ತಾನೆ. ಅವನು ನಿನ್ನಂತೆಯೇ ಮಹಾತ್ಮನು. ಅವರನ್ನು ಎಲ್ಲೆಡೆ ಕಾಣು. ಕಾವ್ಯದಲ್ಲಿ ವರ್ಣಿತವಾದ ಅಖಿಲ ರೂಪಗಳು ನೀನೊಬ್ಬನಿಗೇ ಸಲುತ್ತವೆ. ಅಲ್ಲವೇ ವೇಮನಾ ? ನೀನೇ ಯೋಗಿಯಾಗಿರುವೆ. ತ್ಯಾಗಿಯಾಗಿರುವೆ, ಭೋಗಿಯಾಗಿರುವೆ, ಚೊಕ್ಕಟವಾದ ರೋಗಿಯಾಗಿರುವೆ ಲಾಘವನಾಗಿರುವೆ, ಮಹಾತ್ಮನಾಗಿರುವೆ.

ವೇಮನರು ಇಂಥ ಅವಸ್ಥೆಯಲ್ಲಿರುವಾಗ, ಅರಿವೆ ಅಂಚಡಿಗಳತ್ತ ಲಕ್ಷ್ಯವಿರುತ್ತಿರಲಿಲ್ಲ. ದಿಗಂಬರರಾಗಿದ್ದರೂ, ಕೆಲವೊಮ್ಮೆ ಹರಕು ಬಟ್ಟೆ ಹೊದೆಯುತ್ತಿದ್ದರು.

ಆ ॥ ಚಿಂದಿ ಬಟ್ಟೆಯಲ್ಲ ಚೀನಾಂಬರವೆ ಹೊರತು,
ಮಲಿನ ಒಡಲು ಅಲ್ಲ ಮುಕ್ತಿ ಹೊರತು.
ಪರಮ ಯೋಗಿ ಮಹಿಮೆ ಪರಿಕಿಸುವರು ಎಂತು ?
ವಿಶ್ವದಾಭಿರಾಮ ಕೇಳು ವೇಮ.

ತಾನು ಧರಿಸಿದುದು ಚಿಂದಿಯಾದ ಹರಕು ಬಟ್ಟೆಯಲ್ಲ. ಅದು ನೀಡುವ ಸುಖವು ಚೀನಾಂಬರಕ್ಕೆ, ಅಂದರೆ ರೇಶ್ಮೆ ವಸ್ತ್ರಕ್ಕೆ ಸಮವಾಗಿದೆ. ನಾನು ಹೊಲಸು ನೀರು ಕುಡಿಯುತ್ತಿರಬಹುದು. ಹಳಸಿದ ಅನ್ನವನ್ನು ಸೇವಿಸುತ್ತಿರಬಹುದು. ಆದರೆ ಒಡಲಿಗೆ ಮಲವಾಗಿ ಪರಿಣಮಿಸದೆ, ಯೋಗ ಶಕ್ತಿಯಿಂದ ಜೀರ್ಣವಾಗಿ ಪರಿಣಮಿಸುತ್ತದೆ. ಇದು ಇಹದ ಮಲಿನತೆಯಿಂದ ಮುಕ್ತವಾದುದುರ ಸಂಕೇತ. ಪರಮ ಯೋಗಿಯ ಮಹಿಮೆಯಿಂದ ಎಲ್ಲವೂ ಪವಿತ್ರವಾಗುತ್ತದೆ. ಆದರೆ ಜನರು ಇದನ್ನು ಹೇಗೆ ಪರಿಕಿಸಬಲ್ಲರು ? ನಾಲಗೆಯ ರುಚಿಯನ್ನೂ, ಕಣ್ಣಿನ ರೂಪವನ್ನೂ, ಅಷ್ಟೇ ಏಕೆ ? ಇಂದ್ರಿಯಗಳ ವಿಷಯಲಾಲಸೆಯನ್ನೂ ತ್ಯಜಿಸಿದ ವಿರಕ್ತ ಅವಸ್ಥೆ ಇದಾಗಿದೆ.

ಉರ್ವಿ ಜನರು ಪರಮ ಯೋಗೀಶ್ವರನ ಕಂಡು,
ಜರಿಯುತಿಹರು ಹೊರತು ಅರಿಯುತಿಲ್ಲ.
ಅಮೃತಕಿರುವ ರುಚಿಯ ಅರಿವುದೆಂತು ಹಸ್ತ ?
ವಿಶ್ವದಾಭಿರಾಮ ಕೇಳು ವೇಮ.

ಪರಮ ಯೋಗೀಶ್ವರನ ಇರವು ಕೆಲವು ಅವಸ್ಥೆಗಳಲ್ಲಿ ವಿಚಿತ್ರವಾಗಿರುತ್ತದೆ. ಆದರೆ ಈ ಭೂಮಿಯ ಮೇಲಿನ ಜನರು ಅವನ ಜೀವನ ರೀತಿಯನ್ನು ಕಂಡು, ತಮ್ಮ ಹಾಗಿಲ್ಲವೆಂದು, ಜರಿಯುವರೇ ಹೊರತು, ಸಾಮಾನ್ಯ ಲೌಕಿಕ ಬುದ್ಧಿಗೆ ಅದು ತಿಳಿಯದು. ಅಮೃತದ ರುಚಿಯನ್ನು ಅರಿಯುತ್ತಿಲ್ಲ. ನಾಲಗೆ ಸವಿಯಬಲ್ಲದೇ ಹೊರತು ಹಸ್ತವು ಅದನ್ನು ಸ್ಪರ್ಶಿಸಿದರೂ ಅದರ ರುಚಿಯನ್ನೂ ಸವಿಯಲಾರದು.





ಆ ॥ ಕಂಡು ಜ್ಞಾನವಂತನ ಕರ್ಮ ಸಂಬದ್ಧರು,
ಹುಚ್ಚನೆನ್ನುತಿಹರು ಪ್ರಕೃತಿ ಬಿಡದೆ.
ಹುಚ್ಚಿರದೆ, ಪ್ರಕೃತಿ ಹುಡುಕಲು ಸಿಗುವುದೇ ?
ವಿಶ್ವದಾಭಿರಾಮ ಕೇಳು ವೇಮ.

ಕಾಮ್ಯ ಕರ್ಮಗಳಿಗೆ ಅಂಟಿಕೊಂಡ ಕರ್ಮ ಸಂಬಂದ್ಧರು ಜ್ಞಾನವಂತನನ್ನು ಕಂಡು, ತಾವು ತ್ರಿಗುಣಾತ್ಮಕವಾದ ಪ್ರಕೃತಿಗೆ ವಶರಾಗಿ, ಅರ್ಥ, ಕಾಮ, ಭೋಗ ಸುಖವನ್ನೇ ಬೆಂಬತ್ತಿ ಪರಮಾತ್ಮನ ಹುಚ್ಚು ಇರದೆ, ಗುಣಾತೀತನಾಗದೆ, ತ್ರಿಗುಣಾತ್ಮಕವಾದ ಪ್ರಕೃತಿಯನ್ನು ಹುಡುಕಲು, ಆ ದಿವ್ಯ ತತ್ತ್ವವು ದೊರಕುವುದೇನು ?

ಕಂ. ತಾವರೆ ಎಲೆಯಡಿ ನೀರಿರೆ,
ವೇಮನ ಚರಿಸುತಲುಂಟು ಹುಡುಕುತ ಶಿವನಾ.
ಈ ಮಾಯೆ ನಂಬಕೂಡದು ;
ಈ ಮಹಿಮೆ ತಿಳಿಯಲಾರರು ದೇವನ ವೇಮಾ.

ಕಮಲದ ಎಲೆಯ ಅಡಿಗೆ ನೀರಿದೆ. ಆದರೆ ಆ ಎಲೆಯು ನೀರಿಗಂಟದಂತಿರುತ್ತದೆ. ಅಂತೆಯೇ ವೇಮನರು ಲೋಕದಲ್ಲಿ ಜನರ ಮಧ್ಯೆ ಉಪಜೀವಿಸುತ್ತಿದ್ದರೂ, ಅಂದರೆ ಚರಿಸುತ್ತಿದ್ದರೂ, ಐಹಿಕ ವ್ಯಾಪಾರಗಳಲ್ಲಿ ಸಿಲುಕದೆ, ಶಿವನನ್ನು ಹುಡುಕುತ್ತ ಬಾಳುತ್ತಿದ್ದರು. ಈ ಜಗತ್ತು ಮಾಯೆ. "ಯಾ ಮಾ ಸಾ ಮಾಯಾ" ಅಂದರೆ ಯಾವುದು ಇಲ್ಲವೋ ಅದು ಮಾಯೆ. 'ಗಚ್ಛತಿ ಇತಿ ಜಗತ್' ಹೋಗುವುದಾದ್ದರಿಂದ ಜಗತ್ ಎನಿಸಿದೆ. ಆದ್ದರಿಂದ ಜಗತ್ತಿನ ಮಾಯೆಯನ್ನು ನಂಬ ಕೂಡದು. ಈ ಮಾಯೆಗೆ ಅಂಟದ ಬಾಳು ಒಂದು ಮಹಿಮೆಯೇ ಸರಿ. ಅದನ್ನು ದೇವತೆಗಳೂ ತಿಳಿಯಲಾರರು.

ಜನರ ಮಧ್ಯೆ ವೇಮನ ಯೋಗಿ ಎಲ್ಲಿ ವಾಸಿಸುತ್ತಿರಬಹುದು ? ತನ್ನ ಸಾಧನವನ್ನು ಹೇಗೆ ಮಾಡುತ್ತಿರಬಹುದು ?

ಕಂ. ಪರಮಾತ್ಮನ ಚಿಂತನದೋಳ್
ನಿರುತವು ಮನದೊಳಗಿದ್ದೊಡೆ, ಧರೆಯೊಳಗೋರ್ವಂ.
ತಿರಿಪೆಯನೆತ್ತಿ ಭುಜಿಸುವನು ;
ದೊರೆತಿಹ ಗೃಹ ವೇದಿಕೆಯಲಿ, ತಂಗುವ, ವೇಮಾ.

ಈ ಧರೆಯ ಮೇಲೆ, ವೇಮನ ಯೋಗಿಯೆಂಬ ಓರ್ವನು, ನಿರುತವೂ ಮನದೊಳಗೆ ಪರಮಾತ್ಮನ ಧ್ಯಾನದಲ್ಲಿ ಅಂದರೆ ಚಿಂತನದಲ್ಲಿ ಇರುತ್ತ, ತಿರಿಪೆಯನೆತ್ತಿ ಭುಜಿಸುತ್ತಾನೆ. ಇನ್ನು ರಾತ್ರಿ ಸಮಯದಲ್ಲಿ ಯಾರಾದರೂ ಸಹಾನುಭೂತಿ ಪರರ ಮನೆಯ ಕಟ್ಟೆಯ ಮೇಲೆ ತಂಗುತ್ತಾನೆ.

ಉಡುತಡಿಯ ಶರಣೆ ಮತ್ತು ಯೋಗಿಣಿ ಅಕ್ಕಮಹಾದೇವಿಯ ಉಪಜೀವನವೂ ಇದೇ ಪರಿಯಾಗಿತ್ತು. ಅವಳೂ ಬೆತ್ತಲೆಯಾಗಿರುತ್ತಿದ್ದಳು.

ಹಸಿವಾದೊಡೆ ಭಿಕ್ಷಾನ್ನಗಳುಂಟು,
ತೃಷೆಯಾದೊಡೆ ಕೆರೆ ಭಾವಿಗಳುಂಟು,
ಶಯನಕ್ಕೆ ಹಾಳು ದೇಗುಲಗಳುಂಟು,
ಆತ್ಮ ಸಂಗಾತಕ್ಕೆ ಚೆನ್ನ ಮಲ್ಲಿಕಾರ್ಜುನನುಂಟು.

ಎಂದು ಸುಂದರವಾಗಿ ಹಾಡಿದ್ದಾಳೆ ಅಕ್ಕ.

ಮಹಾ ಗುರುವಿನಿಂದ ದೀಕ್ಷೆ ಪಡೆದ ವೇಮನರು ಗುರುವಿನ ಸೂಚನೆಯಂತೆ ದಿಗಂಬರರಾದರು. ಈ ಮುನ್ನ ನಾಡಿನ ಖ್ಯಾತಿವೆತ್ತ ರಾಜವಂಶದ ಕುಡಿಯಾದ ಸುಂದರ ಯುವಕನು ಬೆತ್ತಲೆ ಇರುವುದನ್ನು ಕಂಡು ಜನರು ಹೆಚ್ಚಿನ ಕುತೂಹಲ ತಾಳಿದರು. ಅವರು ನಗ್ನರಾಗಿರುವ ಕುರಿತು ಅಲ್ಲಲ್ಲಿ ಪ್ರಶ್ನಿಸಿದರು.

ಆ ||
ತಾಯಿಯುದರದಿಂದ ತಾನು ಜನಿಸಿದಾಗ,
ಆದಿಗಿಲ್ಲ ಬಟ್ಟೆ, ಅಂತ್ಯಕಿಲ್ಲ.
ನಡುವೆ ಬಟ್ಟೆಯುಡಲು ನಗುಪಾಟಲಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಬೆತ್ತಲೆಯಾಗಿ ತಾಯಿಯ ಉದರದಿಂದ ಜನಿಸಿ, ಕೊನೆಗೆ ಪ್ರಾಣ ನಿಷ್ಕ್ರಮಣವಾದ ಮೇಲೆ ಬೆತ್ತಲೆಯಾಗಿ ಹೋಗುವ ಈ ದೇಹಕ್ಕೆ ನಡುವಿನ ಅವಧಿಯಲ್ಲಿ ಬಟ್ಟೆ ಉಡುವುದು ನಗೆಪಾಟಲೆನಿಸದೇ ? ಆದಿವಾಸಿಗಳು ಬಟ್ಟೆ ಉಡುತ್ತಿರಲಿಲ್ಲ. ನಾಗರಿಕತೆಯು ಬೆಳೆದ ಮೇಲೆ ಲಜ್ಜೆ ಭಾವ ಬೆಳೆದು ಬಟ್ಟೆ ತೊಡುವುದು ಮೊದಲಾಯಿತು.

"ಕೆಲವರಿಗೆ ನನ್ನ ಪಿಶಾಚವತ್, ಉನ್ಮತ್ತವತ್, ಬಾಲವತ್ ನಡೆನುಡಿಗಳು ಸರಿ ಕಾಣದೆ, ನಾನು ಯಾವುದೋ ಹೇತುವಿನಿಂದ ಹಾಗೆ ವರ್ತಿಸುತ್ತಿದ್ದೇನೆಂದು ತಪ್ಪಾಗಿ ಭಾವಿಸಿ ನನ್ನನ್ನು ದಂಡಿಸಲು ಮುಂದಾಗುವುದೂ ಉಂಟು".

ಆ ||
ತನ್ನ ಹೊಡೆದು, ಬಡಿದು, ತಲೆ ಮರೆಸಿ ನಿಲ್ಲಲು,
ದೂಷಣೆ ಗೈವುದು ದೊಡ್ಡ ಪಾಪ.
ಅಖಿಲರನು ದಂಡಿಸೆ, ಅಖಿಲೇಶನಿರನೇ ?
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ತಪ್ಪು ಗ್ರಹಿಕೆಯಿಂದ ತನ್ನನ್ನು ಹೊಡೆಯಬಹುದು, ಕೋಲುಗಳಿಂದ ಬಡಿಯಲೂಬಹುದು. ಬಳಿಕ ಜನರು ಏನೆಂದಾರೆಂದು ಹೆದರಿ, ತಲೆ ಮರೆಸಿಕೊಳ್ಳಲೂಬಹುದು. ಇದು ಸಾಮಾನ್ಯ ಅನುಭವ. ಹೀಗಾದಾಗ ಹೊಡೆಸಿಕೊಂಡವನು ಅವರನ್ನು ದೂಷಿಸುವುದು ದೊಡ್ಡ ಪಾಪ. ಬೇರೆಯವರ ದೂಷಣೆ ಮಾಡಿದಾಗ ಆ ದೂಷಿತ ಭಾವನೆಗಳು ತನ್ನ ಮನವನ್ನು ಮಲಿನಗೊಳಿಸಿ, ಪಾಪ ಘಟಿಸುತ್ತದೆ. ಯಾರು ತಪ್ಪು ಮಾಡುತ್ತಾರೋ, ಅವರಿಗೆ ತಕ್ಕ ದಂಡನೆ ಕೊಡಲು ಅಖಿಲೇಶನು ಅಂದರೆ ಮಹಾದೇವನು ಇಲ್ಲವೇ ?





ಆ ||
ಗೋಟಿ ಬಿಚ್ಚಿತೆಂದು ಕಾದಾಟವಾಡುತ,
ಹುಚ್ಚನೆಂದು ಊರ ಹೊರಗೆ ಹಾಕಿ,
ತರುಣಿಯೆದುರು ತಾವೆ ಗೋಟಿ ಬಿಚ್ಚದಿಹರೆ ?
ವಿಶ್ವದಾಭಿರಾಮ ಕೇಳು ವೇಮ.

ಕಟ್ಟಿದ ಲಂಗೋಟಿಯನ್ನು ಎಳೆದಾಡಿ, ಅದು ಬಿಚ್ಚಿತೆಂದು, ಗುಪ್ತಾಂಗದೊಡನೆ ಕಾದಾಟವಾಡುತ್ತ, 'ಹುಚ್ಚ ಹುಚ್ಚ' ಎಂದು ಹೀಗಳೆದು ಊರ ಹೊರಗೆ ಹಾಕುತ್ತಾರೆ. ಹೀಗೆ ಮಾಡುವ ಈ ಯುವಕರೇ, ಸಂಜೆಯಾದ ಮೇಲೆ ತಮ್ಮ ತರುಣಿಯರೆದುರು ತಾವೇ ಗೋಟಿಯನ್ನು ಬಿಚ್ಚುವರಲ್ಲವೇ ? ಅಂದ ಮೇಲೆ, ಯಾರಾದರೂ ಸಾಧಕರು ದಿಗಂಬರರಾದರೆ ಅವರನ್ನು ಕುರಿತು ಜನರು ವಿಕ್ಷಿಪ್ತ ಭಾವನೆ ತಾಳುವುದೇಕೆ ? ಸಂನ್ಯಾಸ ಪ್ರಕಾರಗಳಲ್ಲಿ ದಿಗಂಬರರಾಗಿರುವ ಅವಧೂತ ಸಂಪ್ರದಾಯವೂ ಮಾನ್ಯವಾಗಿದೆಯೆಲ್ಲವೇ ? ಜೈನ ಮತದಲ್ಲಿ ದಿಗಂಬರ ಜೈನ ಬಹುಕಾಲದಿಂದ ಪ್ರಚಲಿತವಾಗಿದೆಯಲ್ಲವೆ ?

ಆ ||
ತರುಣಿಯಂಗವೆಲ್ಲ ಪುರುಷನರಿತಿರುವನು.
ಪುರುಷನಂಗದರಿವು ತರುಣಿಗುಂಟು.
ಲುಂಗಿ ಚಡ್ಡಿ ಬಿಡಲು, ಲಜ್ಜೆ ಏನಡ್ಡಿಯೆ ?
ವಿಶ್ವದಾಭಿರಾಮ ಕೇಳು ವೇಮ.

ವಾಸ್ತವವಾಗಿ, ತರುಣಿಯ ಗುಪ್ತಾಂಗವನ್ನು ಪುರುಷನು ಅರಿತಿರುವನು. ಅದೇ ರೀತಿ ತರುಣಿಯೂ ಸಹ ಪುರುಷನ ಗುಪ್ತಾಂಗದ ಅರಿವು ಚಿಕ್ಕ ವಯಸ್ಸಿನಲ್ಲಿ ಹೊಂದಿಯೇ ಇರುತ್ತಾಳೆ. ಅಂದ ಮೇಲೆ, ಲುಂಗಿ ಚಡ್ಡಿಗಳನ್ನು ತೊರೆಯಲು ಲಜ್ಜೆಯು ಅಡ್ಡಿಯಾಗುವುದೇ? ನಾಗರಿಕತೆಯು ವಿಕಾಸಗೊಳ್ಳುವ ಮುನ್ನ ಸ್ತ್ರೀ ಪುರುಷರು ನಗ್ನರಾಗಿಯೇ ಇರುತ್ತಿದ್ದರು.

ಆ ||
ಪ್ರಾಣಿಗುಂಟು ಬಾಲ ; ಪಕ್ಷಿಗುಂಟು ರೆಕ್ಕೆ,
ಉಡುಪು ಅಂತೆ ಉಂಟು ಉರ್ವಿ ಜನಕೆ.
ಮಾನ ರಕ್ಷಣೆಯೇ ಮರ್ಯಾದೆ ಎನಿಪುದು.
ವಿಶ್ವದಾಭಿರಾಮ ಕೇಳು ವೇಮ.

ಮಾನವನು ಯಾವಾಗ, ಎಲ್ಲಿ, ಹೇಗೆ ಇರಬೇಕು ? ಹೇಗೆ ನಡೆಯಬೇಕು ? ಯಾವುದರಿಂದ ಎಷ್ಟು ಅಂತರ ಕಾಯ್ದುಕೊಳ್ಳಬೇಕು ? ಎನ್ನುವುದು ಮಾನಸಿಕ ಅಳತೆಯ ಮಾನ ಇಲ್ಲವೆ ಮರ್ಯಾದೆ. ಇದನ್ನು ಉಲ್ಲಂಘಿಸದಂತೆ ತಡೆಯುವ ಭಾವವೇ ಲಜ್ಜೆ.

ಪ್ರಾಣಿಯ ಗುಪ್ತಾಂಗವನ್ನು ಮುಚ್ಚಿ ರಕ್ಷಿಸಲು ಬಾಲವಿದೆ. ಪಕ್ಷಿಗೆ ರೆಕ್ಕೆಗಳುಂಟು. ಅದೇ ರೀತಿ ಉರ್ವಿಯಲ್ಲಿ ಮಾನವನ ಮಾನರಕ್ಷಣೆ ಮಾಡಲು ಉಡುಪು ಉಂಟು. ಈ ಮಾನ ರಕ್ಷಣೆಯೇ ಮರ್ಯಾದೆ ಎನಿಸುತ್ತದೆ. ಈ ಲೋಕದ ಎಲ್ಲ ಕಟ್ಟು-ಮರ್ಯಾದೆಗಳನ್ನು ಮೀರಿದ ಉದ್ದಿಪ್ತ ಮನ ಹೊಂದಿದ ಯೋಗಿಗೆ ಉಡುಪಿನ ಕಟ್ಟು ಎಲ್ಲಿಯದು ?

ಹುಬ್ಬಳ್ಳಿಯ ಶ್ರೀ ಸಿದ್ಧಾರೂಢರು ಬಹಳ ಕಾಲ ಲಂಗೋಟಿ ಧರಿಸುತ್ತಿದ್ದರು. ಜ್ಞಾನಿಗಳಾದ ಶ್ರೀ ರಮಣ ಮಹರ್ಷಿಗಳು ಲಂಗೋಟಿ ಧಾರಿಗಳಾಗಿದ್ದರು. ತಾಂತ್ರಿಕ ಯೋಗಿಗಳಾದ

ಶ್ರೀ ರಾಮಕೃಷ್ಣ ಪರಮಹಂಸರು, ಸಾಧನ ಸಮಯದಲ್ಲಿ ನಗ್ನರಾಗಿರುತ್ತಿದ್ದರು.

ನಾಚುಗೆ ಇರುವವರು ನಾಡಿನೊಳಗಿರುವವರು,
ಹುಚ್ಚು ವೇಮನನೆಂದು ಹೆದರುತಿಹರು.
ತನಗಿಪ್ಪ ನಾಚುಗೆ ದೈವಕ್ಕೆ ತಿಳಿವುದು.
ವಿಶ್ವದಾಭಿರಾಮ ಕೇಳು ವೇಮ.

ನಾಡಿನಲ್ಲಿ ಇರುವ ನಾಚುಗೆ ಇರುವ, ಮಾನ ರಕ್ಷಣೆಗಾಗಿ ಬಟ್ಟೆ ಉಡುವ ಮರ್ಯಾದೆ ಕಾಪಾಡಿಕೊಳ್ಳುವ ಜನರು, ದಿಗಂಬರ ವೇಮನರನ್ನು ಕಂಡು, ಮರ್ಯಾದೆ ಮೀರಿದ 'ಹುಚ್ಚು ವೇಮನ' ಎಂದು ಹೆದರುತ್ತಿದ್ದರು. ಆದರೆ ಯಾರ ನಾಚುಗೆ ಯಾವ ಬಗೆಯದು ? ನಾಚುಗೆ ಇರುವವನು ಲಲನೆಯನ್ನೂ ಮುಟ್ಟನು. ಅಂಥ ಉತ್ಕಟ ನಾಚುಗೆ, ಯೋಗಿ ವೇಮನನಲ್ಲಿದೆ. ಅದು ಜನರಿಗೆ ತಿಳಿಯದಿರಬಹುದು. ಆದರೆ ದೈವಕ್ಕೆ, ಅಂತರ್ಯವನ್ನು ಅರಿಯುವ ಶಕ್ತಿಗೆ, ಅದು ಸ್ಫುಟವಾಗಿ ತಿಳಿಯುತ್ತದೆ.

ಕೆಲವರಿಗೆ ದಿಗಂಬರ ಯೋಗಿಗಳ ಮಾತು ಕೇಳುವ ಸಹನೆಯೂ ಇರುತ್ತಿರಲಿಲ್ಲ. ಇನ್ನು ಗೂಢಾರ್ಥಗಳನ್ನು ಅರಿಯುವ ಬುದ್ಧಿಯೂ ಇರುತ್ತಿರಲಿಲ್ಲ. ಅವರು ದಂಡ ಪ್ರಯೋಗಕ್ಕೆ ಕೈಹಾಕುತ್ತಿದ್ದರು.

ಆ॥ ಬಯ್ದು ಹೊಡೆದರೆಂದು ಬಳಿಕ ಮಾತು ತೊರೆದು,
ಬಾಯಿ ಮುಚ್ಚಿ ಇರಲು, ಭೂಮಿ ಮೇಲೆ,
ಪರಮಾತ್ಮನಾಗುವ ಬಣ್ಣಿಸಲು ಶಕ್ಯವೆ ?
ವಿಶ್ವದಾಭಿರಾಮ ಕೇಳು ವೇಮ.

ಅನೇಕ ಸಲ ಜನರ ಮಧ್ಯೆ ಇರುವಾಗ ಹಲ ಕೆಲವು ತಿಳಿಗೇಡಿಗಳು, ಕಿಡಿಗೇಡಿಗಳು ನಗ್ನ ದೇಹ ಕಂಡು ಅಸಡ್ಡೆ ತಾಳಿ, ಬಯ್ಯುತ್ತಿದ್ದರು. ಕೆಲವೊಮ್ಮೆ ಹೊಡೆಯುತ್ತಿದ್ದರು. ಅವರು ಬಯ್ದು ಹೊಡೆದರೆಂದು, ಗಮನಿಸಿ, ನೀಚರೊಡನೆ ನಿಜವಾಡಬಾರದೆಂದು ವಾಙ್ಮಯ ತಪಸ್ಸು ಆಚರಿಸುತ್ತ ಮಾತು ತೊರೆದು ಭೂಮಿ ಮೇಲೆ ಬಾಯಿ ಮುಚ್ಚಿಕೊಂಡು ಇರುತ್ತಿದ್ದರು. ಇಂಥ ಸಮಯಕ್ಕೆ ಹಲವು ಸೂಕ್ಷ್ಮ ಬುದ್ಧಿಯ ಸಾಧಕರು ಬಂದು, ಮೌನಿ ಯೋಗಿಯ ಪರಿಸರದಲ್ಲಿ ಸೂಕ್ಷ್ಮ ಸ್ಪಂದನಗಳನ್ನು ಅನುಭವಿಸಿ, ಮನಶ್ಶಾಂತಿ ಪಡೆದು, "ಇವರು ದೊಡ್ಡ ಮಹಾತ್ಮರು" ಎಂದು ಜನರಿಗೆ ತಿಳಿಸುತ್ತಿದ್ದರು. ಆಗ ಎಲ್ಲರೂ ಸೇರಿ ಮಹಾತ್ಮ, ಪರಮಾತ್ಮ ಸ್ವರೂಪ ಎಂದು ಸ್ತುತಿಸುತ್ತಿದ್ದರು. ಹೀಗೆ ಮೌನಿ ಯೋಗಿ ಪರಮಾತ್ಮನಾಗುವುದನ್ನು ಬಣ್ಣಿಸಲು ಶಕ್ಯವೇ?

ಕರೆದೊಡೆ ಮಾತನಾಡದೆ, ಮರಳಿ ಕರೆಯೆ, ಮೌನವಿರುವಾ
ಅರಿತೊಡೆ, ಯಾರೆ ಆಡಲೇನನು ಅಲ್ಲವೆಂದು ನಗುತಿಪ್ಪನ್.
ಪರತತ್ತ್ವವಾತ್ಮದೊಳು, ವಿಚಾರಿಸಿ, ನಿತ್ಯವು ತಾನೆ ಇಪ್ಪ ಸದಾ
ಅರಿತಿಹ ಯೋಗಿ ವೇಮನ ಗತಿಯು, ಶಿವರೂಪನೆ, ಸರ್ವ ತಾಣದೋಳ್.

ಇಂಥ ಉನ್ಮತ್ತ ಸ್ಥಿತಿಯಲ್ಲಿರುವ ವೇಮನ ಯೋಗಿಯನ್ನು ಯಾರಾದರೂ ಕರೆದರೆ, ಅವರೊಂದಿಗೆ ಮಾತನ್ನೇ ಆಡುತ್ತಿರಲಿಲ್ಲ. ಪುನಃ ಪುನಃ ಕರೆದರೂ ಮೌನವೇ ಉತ್ತರವಾಗಿರುತ್ತಿತ್ತು.





ಯಾರು ಯಾವುದೊಂದು ವಿಷಯದಲ್ಲಿ ತಮ್ಮ ಲೌಕಿಕ ಬುದ್ಧಿಯಿಂದ ಏನನ್ನಾದರೂ ಆಡಿದರೆ, ತಲೆಯಾಡಿಸಿ 'ಅಲ್ಲ' ಎಂದು ನಕ್ಕು ಬಿಡುತ್ತಿದ್ದರು. ಅರಿತವರಿಗೆ ತಮ್ಮ ವಾದ ತಪ್ಪೆಂದು ಈ ನಗೆಯಿಂದಲೇ ಉತ್ತರ ದೊರೆಯುತ್ತಿತ್ತು. ತಾನು ನಿತ್ಯವೂ ಆತ್ಮದಲ್ಲಿಯೇ ಪರ ತತ್ತ್ವವನ್ನು ವಿಚಾರಿಸುತ್ತ ತತ್ತ್ವನಿಷ್ಠರಾಗಿರುತ್ತಿದ್ದರು ಯೋಗಿ. ಎಲ್ಲವನ್ನೂ ಅರಿತ ವೇಮನ ಯೋಗಿಯ ಗತಿಯು, ಎಲ್ಲ ತಾಣದಲ್ಲಿಯೂ ಶಿವರೂಪವಾಗಿರುತ್ತಿತ್ತು. ಜನರು ಸ್ತುತಿ ಮಾಡುವಲ್ಲಿಯೂ ಅದೇ ಸ್ಥಿತಿ ಇರುತ್ತಿತ್ತು. ನಿಂದೆ ಮಾಡುವ ತಾಣದಲ್ಲಿಯೂ ಅದೇ ಸ್ಥಿತಿ ಇರುತ್ತಿತ್ತು.

ಆ॥ ತಿಳಿಯೆನೆನ್ನುವವನು ತಿರೆಯೊಳು ಕಡು ಜಾಣ.
ತಿಳಿದೆನೆನ್ನುವವನು ತಿಳಿಯನೆಂದು.
ಮೌನವಾಗಿರುವವ ಮಹಿಮೋತ್ತಮನಿಹನು.
ವಿಶ್ವದಾಭಿರಾಮ ಕೇಳು ವೇಮ.

ಯಾರಿಗೂ ಎಲ್ಲವೂ ತಿಳಿಯಲಾರದು. ಬ್ರಹ್ಮವಿದನು ಸರ್ವಜ್ಞನಾದರೂ, ಬ್ರಹ್ಮಾನುಭೂತಿಯು ತಿಳಿವಿನ ಆಚೆಯ ಅವಸ್ಥೆಯಲ್ಲಿ ಆಗುವುದರಿಂದ, ಅದನ್ನು ಯಥಾವತ್ತಾಗಿ ವಿವರಿಸಲಾರನು. ಆದ್ದರಿಂದ ತಿಳಿಯೆನೆನ್ನುವವನು ಈ ಭೂಮಿಯಲ್ಲಿ ಕಡುಜಾಣನಾಗಿದ್ದಾನೆ. 'ತಿಳಿದೆನು' ಎನ್ನುವವನು ತನ್ನ ಸಾತ್ವಿಕ ಅಹಂಕಾರದಿಂದ ಹಾಗೆ ಹೇಳುವನಲ್ಲದೆ ಅವನೆಂದೂ ತಿಳಿಯನು. ಯಾರು ಮೌನವಾಗಿರುವರೋ, ತಿಳಿಯೆ, ತಿಳಿದೆ ಎಂದು ಹೇಳುವುದಿಲ್ಲವೋ, ಅವರು ಮಹಿಮೋತ್ತಮರಾಗಿರುತ್ತಾರೆ.

ಇಂಥ ಅವಸ್ಥೆಯಲ್ಲಿ ವೇಮನರು ಬಳಸುವ ಭಾಷೆಯೂ ಜನರಿಗೆ ಬೇಗ ಅರ್ಥವಾಗದೆ ಅವರ ಸಂಶಯವನ್ನು ಇಮ್ಮಡಿಸುತ್ತಿತ್ತು. ಮಹಾತ್ಮರ ಗುಣಸ್ವಭಾವಗಳನ್ನು ತಿಳಿಸಲು ಅವರು ಈ ರೀತಿ ಹಾಡುತ್ತಿದ್ದರು.

ನಾಯಿ ತಿನ್ನುವವನು ಗುರು-ಲಿಂಗ ಜಂಗಮ
ಹಂದಿ ತಿನ್ನುವವನು ಪರಮಯೋಗಿ.
ಆನೆ ತಿನ್ನುವವನು ಎಂಥ ಸುಜ್ಞಾನಿಯೊ ?
ವಿಶ್ವದಾಭಿರಾಮ ಕೇಳು ವೇಮ.

ನಾಯಿಯು ಎಲ್ಲರೂ ತಿಳಿದಿರುವಂತೆ ಶೀಘ್ರ ಕೋಪಿ. ನಾಯಿಯನ್ನು ತಿನ್ನುವುದೆಂದರೆ ಕೋಪ ನಿಗ್ರಹಿಸುವವನು, ಗುರುಲಿಂಗ ಜಂಗಮನೆನಿಸಲು ಯೋಗ್ಯನು. ಹಂದಿಯು ಬಹಳ ಆಸೆಬುರುಕ ಪ್ರಾಣಿ. ಹೊಲಸಿಗೂ ಬಹಳ ಆಸೆ ಪಡುತ್ತಿದೆ. ಅಂದ ಮೇಲೆ ಹಂದಿ ತಿಂದವನು ಎಂದರೆ, ಆಸೆಯನ್ನು ಗೆದ್ದವನು ಎಂದು ಅರ್ಥ. ಆಸೆಯನ್ನು ಗೆದ್ದವನು ಪರಮಯೋಗಿಯಾಗಲು ಯೋಗ್ಯ. ಆನೆಯು ಮದ ತುಂಬಿದ ಪ್ರಾಣಿ. ಮದವೇರಿದ ಆನೆಯನ್ನು ಮಣಿಸುವುದು ಕಷ್ಟ ಸಾಧ್ಯ, ಅಂದ ಮೇಲೆ ಅಹಂಕಾರದ ಮದವನ್ನು ನಿಗ್ರಹಿಸಿದವನು ಎಂಥ ಎಣೆಯಿಲ್ಲದ ಸುಜ್ಞಾನಿಯಾಗಿರಬಹುದೋ !

ಪದ್ಯವನ್ನು ಕೇಳಿ ಕ್ರುದ್ಧರಾದ ಜನರು ಅರ್ಥ ವಿವರಣೆ ಕೇಳಿ ತಲೆ ತಗ್ಗಿಸುತ್ತಿದ್ದರು. ಇದೇ ರೀತಿ, ತ್ರಿಗುಣಾತೀತ ಅವಸ್ಥೆಯ ಶಿವಯೋಗಿಯನ್ನು ವರ್ಣಿಸುವಾಗ ಬಳಸಿದ ಭಾಷೆಯ

ಬಗೆಗೂ ಅನೇಕರು ಆಕ್ಷೇಪ ವ್ಯಕ್ತಪಡಿಸುತ್ತಿದ್ದರು.

ಬ್ರಹ್ಮನನ್ನು ಕೊಂದು ವಿಷ್ಣುವಿನಲಿ ಬೆರೆಸಿ,
ವಿಷ್ಣುವನ್ನು ಕೊಂದು ಶಿವನ ಒಳಗೆ ಬೆರೆಸಿ,
ಶಿವನ ಕೊಂದು ಮತ್ತೆ ಶಿವಯೋಗಿಯಾಗುವ.
ವಿಶ್ವದಾಭಿರಾಮ ಕೇಳು ವೇಮ.

ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯ ಕಾರ್ಯಗಳನ್ನು ನೋಡಿಕೊಳ್ಳುವ ಸಗುಣ ಬ್ರಹ್ಮನಿಗೆ ಕ್ರಮವಾಗಿ ಬ್ರಹ್ಮ, ವಿಷ್ಣು ಮತ್ತು ಶಿವ ಎನ್ನುತ್ತಾರೆ. ಅಂದರೆ ಮೂಲ ತಮಸ್ಸಿನಿಂದ ಸೃಷ್ಟಿಯಾಗುವುದರಿಂದ ಬ್ರಹ್ಮನು ತಮೋ ಗುಣದ ಪ್ರತಿನಿಧಿ ಎನಿಸುತ್ತಾನೆ. ಕಾಪಾಡುವುದು ರಜೋ ಗುಣದ ಕಾರ್ಯವಾದುದರಿಂದ ವಿಷ್ಣುವು ರಜೋ ಗುಣದ ಪ್ರತಿನಿಧಿಯಾಗಿದ್ದಾನೆ. ಇನ್ನು ಜಗತ್ತಿನ ಪ್ರಳಯ ಕಾಲದಲ್ಲಿ ಸಕಲ ಸ್ಥೂಲ ವಸ್ತುಗಳೂ ಸೂಕ್ಷ್ಮಾತಿಸೂಕ್ಷ್ಮ ವಸ್ತುಗಳಲ್ಲಿ ಲಯ ಹೊಂದುತ್ತವೆ. ಇದು ಸತ್ವಗುಣದ ಪ್ರಭಾವ. ಆದ್ದರಿಂದ ಲಯಕರ್ತನಾದ ಶಿವನು ಸತ್ವಗುಣದ ಪ್ರತಿನಿಧಿಯು. ಈಗ ಪದ್ಯದ ಅರ್ಥದತ್ತ ಗಮನಿಸುವಾ :

ಬ್ರಹ್ಮನನ್ನು ಕೊಂದು ವಿಷ್ಣುವಿನಲ್ಲಿ ಬೆರೆಸಿ ಎಂದರೆ, ತಮೋಗುಣವನ್ನು ನಿಗ್ರಹಿಸಿ ರಜೋಗುಣದಲ್ಲಿ ಸೇರಿಸಿ, ಮುಂದೆ, ವಿಷ್ಣುವನ್ನು ಕೊಂದು ಶಿವನ ಒಳಗೆ ಬೆರೆಸಿ ಅಂದರೆ ರಜೋ ಗುಣವನ್ನು ನಿಗ್ರಹಿಸಿ ಸತ್ವದಲ್ಲಿ ಲಯಸಿ, ಕೊನೆಗೆ ಶಿವನ ಕೊಂದು ಮತ್ತೆ ಶಿವಯೋಗಿಯಾಗುವ. ಎಂದರೆ ಸತ್ತ್ವ ಗುಣವನ್ನೂ ಮೀರಿ, ಗುಣಾತೀತನಾಗಿ ಶಿವಯೋಗಿಯಾಗುತ್ತಾನೆ ಎಂದು ಅರ್ಥ. ಅರ್ಥ ತಿಳಿದ ಮೇಲೆ, ಅಪಾರ್ಥ ಮಾಡಿದ ಜನರು ತಲೆ ತಗ್ಗಿಸದೆ ಇನ್ನೇನು ಮಾಡಿಯಾರು ?

## ಗುರುವಿನಲ್ಲಿ ಬೇಡಿಕೆ :

ಗುರುವು ಸರಿಯಾದ ಮಾರ್ಗದರ್ಶಕನಾಗಿದ್ದಾನೆ. ನಾವು ಭವಾರಣ್ಯದಲ್ಲಿ ನಡೆಯುತ್ತ ಹಾದಿ ತಪ್ಪಿರಬಹುದು. ಮುಂದೇನು ? ಎಂದರಿಯದೆ ಅಂಧಕಾರದಲ್ಲಿರಬಹುದು. ಆಗ ಗುರುವು ದಾರಿ ದೀಪ ಹಿಡಿದು ಮಾರ್ಗ ತೋರುತ್ತಾನೆ. ಮನದ ಇಷ್ಟಾರ್ಥಗಳನ್ನು ಗುರುವಿಗೆ ನಿವೇದಿಸು. ಅವನಲ್ಲಿ ನೆರವಿಗಾಗಿ ಬೇಡಿಕೋ.

ಗೀತ. ಬಿನ್ನವಿಸುತಲಿ ಸದ್ಗುರುವ ಬೇಡುತಿರುವ ;
ಮುನ್ನ ಭ್ರಮರ ಕೀಟ ನ್ಯಾಯ ಮತ್ತೆ ಉಂಟು.
ವರಿಸಿ ನೆನೆಯುತಿರೆ ಅವನನೀ ವಸುಧೆಯಲ್ಲಿ,
ಸಾಧು ಸನ್ಮಾರ್ಗ ಅದುವಹುದು, ಜಗದಿ ವೇಮ.

ಐಹಿಕ ಬಂಧನಗಳಿಂದ ಬಿಡುಗಡೆ ಹೊಂದಲು ಸದ್ಗುರುವನ್ನು ಸಂಧಿಸಿ, ದಾರಿ ತೋರಲು ಬಿನ್ನವಿಸಬೇಕು. ಕಳಕಳಿಯಿಂದ ಬೇಡಿಕೊಳ್ಳಬೇಕು. ಮೊದಲು ಭಯವೆನಿಸಬಹುದು. ಆದರೆ ಕೀಟವೂ ಮೊದಲು ಹಾರುವ ಭ್ರಮರವನ್ನು ಕಂಡು ಭಯ ಪಡುತ್ತದೆ. ಬಳಿಕ ಅದರ ಗ್ರಂಥಿ ರಸ ಸ್ರವಿಸಿ ರೆಕ್ಕೆಗಳು ಮೂಡುತ್ತವೆ. ಕೀಟವೂ ಭ್ರಮರವಾಗುತ್ತದೆ. ಈ ಭ್ರಮರ ಕೀಟ ನ್ಯಾಯದಂತೆ ಭಯಭಕ್ತಿ ಹೊಂದಿದ ಶಿಷ್ಯನೂ ಮುಂದೆ ಗುರುವೇ ಆಗುತ್ತಾನೆ. ಅಂಥ ಸದ್ಗುರುವನ್ನೇ ವರಿಸಿ





ಅವನನ್ನೇ ಈ ವಸುಧೆಯಲ್ಲಿ ನೆನೆಯಬೇಕು. ಧ್ಯಾನಿಸಬೇಕು. ಇದುವೇ ಸಾಧು ಮಾರ್ಗ, ಇದುವೇ ಸನ್ಮಾರ್ಗ. ಈ ಜಗದಲ್ಲಿ ಇದುವೇ ಹಿಡಿಯಬೇಕಾದ ಹಾದಿ.

ಕಂ. ಪರದೇಶಿಕ ಚರಣಂಗಳ
ಉರದಲಿ ಧರಿಸುತ, ಮಿಗಿಲು ಉತ್ಸಾಹದೊಡಾ
ಗುರುವರನ ಬೇಡಿ, ಕೊನೆಯಲಿ
ಪರಿಪೂರ್ಣವ, ಹಲುಬಿ ಕಾಣು, ಭದ್ರತೆ ವೇಮಾ.

ಪರಮ ದಿಶೆ ತೋರುವ ಪರದೇಶಿಕನ ಚರಣಗಳನ್ನು ಅಂದರೆ ಮೂಲ ತತ್ತ್ವಗಳನ್ನು ಹೃದಯದಲ್ಲಿ ಧರಿಸಿ, ಮಿಗಿಲಾದ, ಉತ್ಸಾಹದಿಂದ ಕೂಡಿ, ತತ್ತ್ವದರಿವು ಮೂಡಿಸಲು ಗುರುವರನನ್ನು ಬೇಡಿಕೊಳ್ಳಬೇಕು. ಕೊನೆಗೆ ಅದಕ್ಕಾಗಿ ಹಂಬಲಿಸಿ, ನಿತ್ಯವಾದ ಪರಿಪೂರ್ಣವನ್ನು ಕಾಣಬೇಕು. ಅಲ್ಲಿಯೇ ಜೀವನದ ನಿಜವಾದ ಭದ್ರತೆ ಇದೆ.

ಕಂ. ನಿತ್ಯಾನಂದ ವಿವೇಕವು,
ಸತ್ಯವನು ತಿಳಿಯದಿದ್ದೊಡೆ ಶಕ್ಯವಿರುವುದೇಂ ?
ಮುಕ್ತಿಗೆ ಸಮ ಗುರು ಮರ್ಮವ
ಭೃತ್ಯನಿರುತ ಮನದರಿವುದು ಪೆಂಪಿಲಿ, ವೇಮಾ.

ಸತ್ ಎಂದರೆ ವಿಕಾರ ರಹಿತವಾದದ್ದು. ಆ ಸತ್ಯವನ್ನು ತಿಳಿಯದಿದ್ದರೆ, ನಿತ್ಯ ಆನಂದಮಯವೂ ಆದುದನ್ನು ವಿಶ್ಲೇಷಿಸಿ ಅರಿಯುವ ವಿವೇಕವನ್ನು ಪಡೆಯುವುದು ಶಕ್ಯವಿರುವುದೇನು ? ಗುರು ಬಿಚ್ಚಿ ಹೇಳುವ ಮರ್ಮವು ಮುಕ್ತಿಗೆ ಸಮನಾದುದು. ಅದರಿಂದ ಭವ ಬಂಧನದಿಂದ ಬಿಡುಗಡೆಯಾಗುತ್ತದೆ. ಗುರುವಿನ ಭೃತ್ಯನಾಗಿ ಅಂದರೆ ಸೇವಕನಾಗಿ ಇರುತ್ತ ಘನತೆಯಿಂದ ಅದನ್ನು ಮನದಲ್ಲಿ ಅರಿಯಬೇಕು.

ಕಂ. ವೇದಾಂತ ಸಾರ ಗುಣ ಸಂ-
ವಾದಿತನಹ ಗುರುವ ಬೇಡಿ, ಪರಿಪೂರ್ಣನು ತಾ
ಮೋದದಲಿ ಗುರಿಯನರಸುತ,
ಸಾಧನದಲಿ ಮುಕ್ತಿಯುಂಟು, ಸತ್ಯವು, ವೇಮಾ.

ವೇದಾಂತ ಸಾರ ಎಂದರೆ ಬ್ರಹ್ಮವಿದ್ಯೆ. ಬ್ರಹ್ಮವಿದ್ಯೆಯ ಗುಣವನ್ನು ವಾದ, ಸಂವಾದಗಳ ಮುಖಾಂತರ ಮನಗಾಣಿಸಬಲ್ಲ, ಗುರುವಿನಲ್ಲಿ ವಿದ್ಯೆಗಾಗಿ ಬೇಡಿಕೊಳ್ಳಬೇಕು. ಅದನ್ನು ಪಡೆದು ಪರಿಪೂರ್ಣನಾಗಬೇಕು. ಅವನನ್ನು ಆಶ್ರಯಿಸಿ, ಆನಂದದಿಂದ ಗುರಿಯನ್ನು ಅರಸುತ್ತ ಸಾಧನ ಮಾಡಿದರೆ, ಸತ್ಯವಾಗಿಯೂ ಮುಕ್ತಿ ಉಂಟು.

ಗೀತ. ಜನ್ಮ ಸಾಫಲ್ಯವನು ಕೋರಿ, ಜಯವ ಹೊಂದಿ,
ತನ್ಮಯತೆಯೊಳಿಹ ಗುರು ಸೇರಿ ತಿಳಿವು ನಿಲಿಸಿ,
ಮನ್ಮಯಾನಂದ ಪರಿಪೂರ್ತಿ ಮರೆಯ ಸೇರಿ,
ಚಿನ್ಮಯಾಕೃತಿ ಕಾಣುವುದೆ ಚೊಕ್ಕ ವೇಮ.

ಮಾನವ ಜನ್ಮವು ಸಫಲವಾಗಬೇಕಾದರೆ, ಜನನ ಮರಣ ಚಕ್ರದಿಂದ ಬಿಡುಗಡೆ ಹೊಂದಬೇಕು. ಇದಕ್ಕಾಗಿ ಗುರುವನ್ನು ಕೋರಿ ಅವನ ಕರುಣೆಗೆ ಪಾತ್ರನಾಗುವಲ್ಲಿ ಜಯವನ್ನು ಹೊಂದಬೇಕು. ಈ ಗುರಿಯಲ್ಲಿಯೇ ತನ್ಮಯನಾಗಿ ಗುರುವನ್ನು ಸೇರಿ, ಸಾಧನ ಮಾಡುತ್ತ ಊರ್ಧ್ವಕ್ಕೆ ತಿಳಿವಿನಾಚೆಗೆ ತಲುಪಬೇಕು. ಇಲ್ಲಿ ಮನ್ಮಯಾನಂದ ಅಂದರೆ ತಾನೇ ತಾನಾಗಿರುವ ಆನಂದದ ಪರಿಪೂರ್ತಿ ಮರೆಯನ್ನು ಅಂದರೆ ಆಶ್ರಯವನ್ನು ಸೇರಿ, ಚಿನ್ಮಯಾಕೃತಿಯನ್ನು ಅಂದರೆ ಅರಿವೇ ಆದ ಆಕೃತಿಯನ್ನು ಕಾಣುವುದು ಚೊಕ್ಕವಾಗಿದೆ.

ಕಂ. ವ್ಯಾಪಿಸಿ ಇರುತಿಹ ಲೋಕವ,
ಪ್ರಾಪ್ತಿಸದೆ, ಗುರುವ ಬೇಡುತ ಬಹು ತಂತ್ರಗಳಿಂ.
ಕೃಪೆ ಹೊಂದಿ ಮನ ನಿಲಿಸುತಿರು.
ರೂಪವು ಬಟ್ಟ ಬಯಲಾಯ್ತು, ರೂಢವು, ವೇಮಾ.

ಎಲ್ಲೆಡೆಗೂ ವ್ಯಾಪಿಸಿ ಇರುವ ಲೋಕವನ್ನು ಅಂದರೆ ಅನುಭವ ಕ್ಷೇತ್ರವನ್ನು ಪ್ರಾಪ್ತಿಸದೆ ಅಂದರೆ ಪಡೆದುಕೊಳ್ಳದೆ, ಏನನ್ನು ಪಡೆದುಕೊಳ್ಳಬೇಕೆಂಬ ಬಗ್ಗೆ ಗುರುವನ್ನು ಬೇಡಿ, ಬಹಳ ತಂತ್ರಗಳಿಂದ ಅವನ ಕೃಪೆ ಹೊಂದಿ, ಅವನ ಉಪದೇಶಾನುಸಾರ ನಡೆದು, ಮನವನ್ನು ನಿಲ್ಲಿಸಬೇಕು. ಆಗ ಮನಸ್ಸಿನಲ್ಲಿ ಗ್ರಹಿಸಿದ ಲಕ್ಷ್ಯ ವಸ್ತುವಿನ ರೂಪವು ಅಡಗಿ ಬಟ್ಟ ಬಯಲು ತೋರುತ್ತದೆ. ಇದೇ ರೂಢಿಯ ಕ್ರಮವು.

ತನ್ನ ಕರ್ಮಗಳ ಸಂಸ್ಕಾರಗಳ ಫಲಭೋಗಾಕ್ಕಾಗಿಯೇ ಮರುಜನ್ಮದ ಅಗತ್ಯವಿದೆ.ಜನನ-ಮರಣ ಚಕ್ರದಲ್ಲಿ ಸಿಲುಕುವುದು ಮಾನವನ ಪಾಪದ ಪರಿಣಾಮವಷ್ಟೇ.

ಗೀತ. ತಾವು ಮಾಡಿದ ಪಾಪಗಳು ತೊಲಗಲೆಂದು,
ಹುಟ್ಟಿ ಸಾವರು ಮತ್ತಂತೆ ಹುಟ್ಟುತಿಹರು.
ಗುರುವ ಸೇರುತ ಬೇಡಿ ತಾ ಕೋರುತಿದ್ದು,
ಹುಟ್ಟು ದುಃಖವು ಕೊನೆಗಳಿದು ಹೋಯ್ತು ವೇಮ.

ಮಾನವರು ಅನೇಕ ಪಾಪ ಕರ್ಮಗಳನ್ನು ಆಚರಿಸುತ್ತಾರೆ. ತಾವು ಮಾಡಿದ ಪಾಪ ಕರ್ಮಗಳ ಫಲವನ್ನು ಭೋಗಿಸಿ ಅವುಗಳನ್ನು ತೊಲಗಿಸಲೆಂದು ಹುಟ್ಟುತ್ತಾರೆ, ಸಾಯುತ್ತಾರೆ. ಅದೇ ರೀತಿ, ಮತ್ತೆ ಹುಟ್ಟುತ್ತಾರೆ. ಈ ಜನನ-ಮರಣ ಚಕ್ರಗತಿಯನ್ನು ಕೊನೆಗೊಳಿಸಲೆಂದು ಅಜ್ಞಾನಾಂಧಕಾರ ನಿವಾರಕನಾದ ಗುರುವನ್ನು ಸೇರಿ, ಈ ವಿಷ ಚಕ್ರದಿಂದ ಪಾರುಗಾಣಿಸಲೆಂದು ಅವನಲ್ಲಿ ಬೇಡಿ, ಸದಾ ತಾನು ಅದನ್ನೇ ಕೋರುತ್ತಿದ್ದರೆ, ಗುರು ಒಂದು ಹಾದಿ ತೋರುತ್ತಾನೆ. ಅದರಂತೆ ನಡೆದರೆ ಹುಟ್ಟು-ದುಃಖವು ಕೊನೆಗೆ ಅಳಿದು ಹೋಗಿ ತಾನು ಅಮರನಾಗುತ್ತಾನೆ.

ಗೀತ. ಹೆದೆಯೇರಿಸಿ ರೂಪವ ಹಿಡಿದು, ಗ್ರಹಿಸಿ,
ನಿತ್ಯ ಬಿಡದೆ, ನಿಜವೆಂದು ನಂಬಿ, ಮುಟ್ಟಿ,
ಚೊಕ್ಕ ನಿರುಕಿಸು ಪೂರ್ಣದಲಿ, ಸಿಕ್ಕಲೆಂದು,
ಕುದುರುವುದುಪಾಯ ; ಬೇಡಲು ಗುರುವ ವೇಮ.

ಮನಸ್ಸಿನ ಬಿಲ್ಲಿನ ಹೆದೆ (ಹಗ್ಗ) ಯನ್ನು ಏರಿಸಿ, ಇಷ್ಟದ ರೂಪವನ್ನು ಲಕ್ಷ್ಯವಾಗಿ





ಹಿಡಿದು ಗ್ರಹಿಸಿ, ಉಪದಿಷ್ಟ ಮಂತ್ರವನ್ನು ಅತ್ತ ಬಿಡು. ಆ ರೂಪವನ್ನು ನಿತ್ಯವೂ ಬಿಡದೆ ನಿಜವೆಂದು ನಂಬಿ ಅದನ್ನು ಮುಟ್ಟು. ಅದು ಸಿಗಲಿ ಎಂದು ಪೂರ್ಣದಲ್ಲಿ ಚೊಕ್ಕ ನಿರುಕಿಸು. ಮತ್ತು ಗುರುವನ್ನು ಬೇಡಿಕೋ. ಆಗ ರೂಪವು ಹಿಂದಾಗಿ ರೂಪಾತೀತ ಬಯಲು ಸೇರುವ ಉಪಾಯವು ಕುದುರುತ್ತದೆ.

## ಗುರುಭಕ್ತಿ :

ಗುರುವಿನಲ್ಲಿ ಭಕ್ತಿ ಬೇಕು. ಗುರು ಸೇವೆಯನ್ನು ಸ್ವಚ್ಛ ಮನದಿಂದ ಗೆಯ್ಯಬೇಕು. ಭಕ್ತಿಯು ಫಲವೀಯುತ್ತದೆ.

ಗೀತ. ಸಾವಿರ ಕ್ರತುಗಳ ಮಾಡೆ ಸಲ್ಲ ; ಸಂತಸ ಮೀರಿ
ಮಾಳ್ಪ ಕ್ರಿಯೆಯೆಲ್ಲ ಗುರುಭಕ್ತಿ ; ಮನಸಿನಲ್ಲಿ
ತಪ್ಪದಿಪ್ಪುದೆ ಮುಕ್ತಿಗೆ ಒಪ್ಪ ಹಾದಿ
ಆಯ್ತು ; ನ್ಯಾಯ ಮಾರ್ಗವಿದುವೇ ಅವನಿಲಿ ವೇಮ.

ಸಾವಿರಾರು ಯಜ್ಞಗಳನ್ನು ಮಾಡಿದರೂ ಸಲ್ಲದು. ಅದೆಲ್ಲ ಕಾಮ್ಯ ಕರ್ಮವೇ. ತ್ರೈಗುಣ್ಯಾತ್ಮಕವೇ. ಜನನ-ಮರಣ ಚಕ್ರದಲ್ಲಿ ಸಿಲುಕಿಸುವಂಥವೇ. ಆದರೆ ಅಮಿತ ಸಂತಸದಿಂದ ನಾವು ಯಾವುದೇ ಕ್ರಿಯೆಗಳನ್ನು ಮಾಡಲಿ. ಅದೆಲ್ಲ ಗುರುಭಕ್ತಿಯೇ ಎನಿಸುತ್ತದೆ. ಅದರಲ್ಲಿ ಸ್ವಾರ್ಥ ಇರದಿದ್ದರೆ ತೀರಿತು. ಮನಸ್ಸಿನಲ್ಲಿ ಗುರುಭಕ್ತಿಯು ತಪ್ಪದಿರುವುದೇ ಮುಕ್ತಿಗೆ ಒಪ್ಪ ಹಾದಿಯಾಗುತ್ತದೆ. ಭೂಮಿಯಲ್ಲಿ ಇದುವೇ ನ್ಯಾಯವಾದ ಹಾದಿಯಾಗಿದೆ.

ಗೀತ. ಊರ್ಜಿತಾನಂದ ಪರಿಪೂರ್ಣ ಯುಕ್ತಿಯಲ್ಲಿ,
ಸ್ವಾರ್ಜಿತವಾದ ಗುರುಭಕ್ತಿ ಸಮನಿಸುತ್ತ,
ದುರ್ಜಯವಾದುದ ತೊಲಗಿಸೆ, ತೊಲಗಬಹುದೆ ?
ಅರ್ಜಿಸಬೇಕು ಮುಕ್ತಿಯ, ಅರಿಯೆ ವೇಮ.

ಅತಿಶಯ ಆನಂದ ತುಂಬಿದ ಹೊಂದಿಕೆಯಲ್ಲಿ, ತಾನು ಸಂಪಾದಿಸಿದ ಗುರುಭಕ್ತಿಯನ್ನು ಒದಗಿಸುತ್ತ ಯಾವ ದುರ್ಜಯವಾದ ಅವಸ್ಥೆಯನ್ನು ತಲುಪುವನೋ, ಅದನ್ನು ತೊಲಗಿಸಬೇಕೆಂದರೂ ತೊಲಗದು. ಈ ಆನಂದ, ಭಕ್ತಿಗಳ ಕೂಟದಲ್ಲಿರುತ್ತ ಇಹದಿಂದ ಮುಕ್ತಿಯನ್ನು ಅಂದರೆ ಬಿಡುಗಡೆಯನ್ನು ಸಂಪಾದಿಸಬೇಕೆಂಬುದನ್ನು ಅರಿ.

ಗೀತ. ದೇಹ ಆತ್ಮಗಳು ಬೇರೆಂದು ತಿಳಿಯದಿರಲು,
ಮೋಹದಲಿ ಸಿಲುಕಿ, ನಿದ್ರೆಯೊಳು ಮುಳುಗದಿಹನೆ ?
ಸಾಹಸದಿಂದ ಗುರುಭಕ್ತಿ ಸಲಿಸೆ ಲೇಸು.
ಬಡಿಸಿ ಮಾತುಗಳ ತಿಳಿವುದು ಬೇಗ ವೇಮ.

ದೇಹವು ಸ್ಥೂಲವಾದುದು. ಅದರ ವ್ಯಾಪಾರವು ಸ್ಥೂಲ ಪ್ರಪಂಚಕ್ಕೆ ಮರ್ಯಾದಿತವಾದುದು. ದೇಹಕ್ಕೆ ಅಂಟಿದ ಮನ ಸೂಕ್ಷ್ಮವಾದುದು. ಅದು ಸೂಕ್ಷ್ಮ ಲೋಕಕ್ಕೆ ಅಂದರೆ ಅನುಭವ ಕ್ಷೇತ್ರಕ್ಕೆ ಸಂಬಂಧಿಸಿದುದು. ಇನ್ನು ಆತ್ಮವು ಸ್ಥೂಲ, ಸೂಕ್ಷ್ಮ ಮತ್ತು ಕಾರಣಗಳನ್ನು ಮೀರಿದ ತತ್ತ್ವವು. ಮಾತು ಮನಂಗಳಿಂದ ಅತ್ತತ್ತ ಇರುವ ತತ್ತ್ವವು.. ಹೀಗೆ

ದೇಹ ಮತ್ತು ಆತ್ಮಗಳು ಬೇರೆಯೆಂದು ತಿಳಿಯದಿದ್ದರೆ, ದೇಹಾತ್ಮ ಬುದ್ಧಿಯಿಂದ ಮೋಹದಲ್ಲಿ ಸಿಲುಕಬಹುದು. ನಿಜದ ಅರಿವಿನೆದುರು ಪರದೆ ಬೀಳಬಹುದು. ಜಾಗ್ರತ ಮನಸ್ಸು ಮರೆಯಾಗಿ, ಅಜ್ಞಾನದ ಅಂಧಕಾರ ಮುತ್ತಿ, ನಿದ್ರೆಯಲ್ಲಿ ಮುಳುಗಬಹುದು. ಇಂಥ ಅವಸ್ಥೆಯಲ್ಲಿ ಸಾಹಸದಿಂದ ಗುರುಭಕ್ತಿ ಸಲ್ಲಿಸಬೇಕು. ಅವನು ನೀಡುವ ಉಪದೇಶದ ಮಾತುಗಳನ್ನು ಬೇಗ ಬಿಡಿಸಿ, ಅವುಗಳ ಇಂಗಿತವನ್ನು ತಿಳಿಯಬೇಕು.

ಗೀತ
ದಿವ್ಯ ಪರತತ್ತ್ವದಲಿ ಜ್ಞಪ್ತಿ ಧೀಯೋಳುದಿಸಿ,
ಮರಳಿ ಪುಟ್ಟಲು, ಗುರುಭಕ್ತಿ ಮಹಿಮೆಯಿಂದ,
ಅಕ್ಷಯಾತ್ಮಕ ಪರನಾಗಿ ಅಮಲನಾದ.
ಯಾವ ಮಲಿನ ಮಾತಿಗಂಟ, ಎಂದೂ ವೇಮ.

ಶ್ರೇಷ್ಠವಾದ ಪರತತ್ತ್ವದಲ್ಲಿಯ ಅರಿವು ಬುದ್ಧಿಯಲ್ಲಿ ಉದಿಸಿ, ಬಳಿಕ ಮಹಿಮೆಯಿಂದ ಗುರುಭಕ್ತಿಯೂ ಹುಟ್ಟಲು, ಅವಿನಾಶಿಯಾದ ಆತ್ಮ ತತ್ತ್ವದ ಪರನಾಗಿ, ಇದ್ದರೆ, ಆವರಣೀ ಮತ್ತು ವಿಕ್ಷೇಪ ಮಲಗಳು ಸೋಂಕದ ಅಮಲನಾಗುವನು. ಮನದಲ್ಲಿ ಮಲಿನತೆಯನ್ನು ಅಂಟಿಸುವ ಯಾವ ಮಾತಿಗೂ ಅಂಟದೆ ಉಳಿಯುತ್ತಾನೆ.

ಗೀತ.
ಹರುಷ ಭೋಗವ ಭಾಗ್ಯಗಳ ಹೊಂದಬಹುದು.
ರಾಗ-ವೈಷಮ್ಯವೆಂಬೆರಡು ರಕ್ತಿ ಕಡಿದು,
ವೇಗದಿಂದ ಮನದಿ ಗುರುಭಕ್ತಿ ಬೀಗುತಿರಲು,
ಯೋಗಿವರರಿಗೆ ಸಮನಾದ ಯಶವು ವೇಮ.

ಮಾನವನು ಲೋಕದಲ್ಲಿ ಜೀವಿಸುವಾಗ ಹರುಷ ಪಡೆಯಬಹುದು. ಭೋಗ ಭಾಗ್ಯಗಳನ್ನು ಪಡೆಯಬಹುದು. ಆದರೆ ತತ್ಪೂರ್ವದಲ್ಲಿ ಅವನು ಯಾವ ವಸ್ತುವಿನ ಬಗೆಗಾಗಲಿ, ಯಾವ ವ್ಯಕ್ತಿಯ ಬಗೆಗಾಗಲಿ, ಯಾವ ವಿಷಯದ ಬಗೆಗಾಗಲಿ, ಇರುವ ರಾಗ ಇಲ್ಲವೆ ಆಸಕ್ತಿಯ ಮತ್ತು ವೈಷಮ್ಯ ಇಲ್ಲವೆ ಅಪ್ರೀತಿಯ ಸಕ್ತಿಯನ್ನು ಕಡಿದು ಹಾಕಬೇಕು. ಆಗ ಮನದಲ್ಲಿ ಗುರುಭಕ್ತಿಯು ವೇಗವಾಗಿ ಬೀಗುತ್ತಿರುವುದು. ಯೋಗಿಯೂ ಸಹ ಇದೇ ಬಗೆಯಲ್ಲಿ ರಾಗ-ದ್ವೇಷಗಳ ತ್ಯಾಗದಲ್ಲಿ ಜಯಿಸುತ್ತಾನಷ್ಟೇ.

ಗೀತ.
ಉತ್ತಮ ಜ್ಞಾನ ನಿಲಯದಂತೆ ಉಪಮೆಯಿಂದ
ಭಕ್ತಿ ಸಾಧಿಸುತ ಪೂರ್ಣತೆ ಪಡೆಯಬಹುದು
ಮುಕ್ತಿಗನುಗುಣ ಗುರುವಾಜ್ಞೆ ಮೊದಲಿಗಯ್ಯ !
ಅದು ಲಭಿಸಿದೊಡನೆ ಲಭ್ಯ ; ಅಖಿಲ ವೇಮ.

ಗುರುವು ಉತ್ತಮ ಜ್ಞಾನ ನಿಲಯದಂತೆ ಎಂಬ ಉಪಮೆಯಿಂದ ಅವನಲ್ಲಿ ಜ್ಞಾನ ಜಿಜ್ಞಾಸುವು ಭಕ್ತಿಯನ್ನು ಸಾಧಿಸುತ್ತ, ಪೂರ್ಣತೆಯನ್ನು ಪಡೆಯಬಹುದು. ಆದರೆ ಇದಕ್ಕೂ ಮುನ್ನ ಇಹದ ಬಂಧನದಿಂದ ಮುಕ್ತವಾಗಲು ಅನುಗುಣವಾದ ಗುರುವಿನ ಆಜ್ಞೆ ಇಲ್ಲವೆ ಆದೇಶವು ಮೊದಲು ಬೇಕು. ಅದು ಲಭಿಸಿದೊಡನೆ ಎಲ್ಲವೂ ಲಭ್ಯವಾಗುತ್ತದೆ.





ಕಂ.
ಇತರಾಪೇಕ್ಷೆಗಳಳಿದೊಡೆ,
ಸತತ ಗುರುಭಕ್ತಿ ಯುಕ್ತಿಗಳ ಸಾರ ಕಾಣಲ್,
ಗತಿಯು ಬ್ರಹ್ಮಾನಂದಕೆ,
ಮತಿಗಿಂಪಾಗಿ ದೊರೆಯುವುದು, ಮಹಿಯಲಿ, ವೇಮಾ.

ಮನುಷ್ಯನ ಅಪೇಕ್ಷೆಗಳು ಅನೇಕ. ತ್ರಿಗುಣಾತ್ಮಕನಾದ ಅವನು ಅನೇಕ ವಿಷಯಗಳ ಸಂಸರ್ಗ ಪಡೆಯುತ್ತಾನೆ. ಅವುಗಳಲ್ಲಿ ರಾಗ-ದ್ವೇಷಗಳು ಉದಿಸುವುದು ತೀರ ಸಹಜ. ಬ್ರಹ್ಮಾನಂದದ ಅಪೇಕ್ಷೆ ಉದಿಸುವುದು ಕ್ವಚಿತ್ತಾಗಿ. ಇತರ ಅಪೇಕ್ಷೆಗಳು ಅಳಿದಾಗ ಯಾವಾಗಲೂ ಗುರು ಭಕ್ತಿ ಸಂಪಾದಿಸುವ ಯುಕ್ತಿಗಳ ಸಾರವನ್ನು ಕಾಣಲು, ಆಗ ಬ್ರಹ್ಮಾನಂದದತ್ತ ಗತಿಯು, ಮಹಿಯಲ್ಲಿ ಮತಿಗೆ ಇಂಪಾಗಿ ದೊರೆಯುವುದು.

ಗೀತ.
ಗುಟ್ಟು, ಗುರು ಭಕ್ತಿಯೊಳು ಮುಟ್ಟಿ, ಗರ್ವ ಪಡದೆ,
ಜಟ್ಟಿಯಂತೆ ಹೋರಿ, ಒಳ ಮರ್ಮ ಶ್ರೇಷ್ಠವೆನುತ,
ತಟ್ಟನೆ ಮೀರಿ ನಡೆ, ಆಣೆ, ಮರೆಯೆ.
ಗಿಟ್ಟುವುದೇನು ಹರಟೆಯಿಂದ ಗಳಿಕೆ ? ವೇಮ.

ಅಂಧಕಾರ ನಿವಾರಕನೇ ಗುರು. ಅಂಧಕಾರ ನಿವಾರಕನಲ್ಲಿ ಭಕ್ತಿ ತಾಳುವುದರ ಹಿಂದೆ ಮನೋಶುದ್ಧಿಯ ಗುಟ್ಟು ಇದೆ. ಅದನ್ನು ಮುಟ್ಟಿ ಗುರು ಭಕ್ತಿ ಸಾಧಿಸಬೇಕು. ಏನೋ ಸಾಧಿಸಿದ್ದೇನೆಂಬ ಗರ್ವ ಬೇಡ. ಅರಿಷಡ್ವರ್ಗಗಳೊಡನೆ, ಮನವನ್ನು ಅತ್ತಿತ್ತ ಸೆಳೆಯುವ ಶಕ್ತಿಗಳೊಡನೆ ಜಟ್ಟಿಯಂತೆ ಮಾನಸಿಕವಾಗಿ ಹೋರಾಡು. ಒಳ ಮರ್ಮವೇ ಶ್ರೇಷ್ಠವೆನ್ನುತ್ತ ತಟ್ಟನೆ ಕಂಡುಕೊಂಡು ಅದನ್ನೂ ಮೀರಿ ನಡೆ. ಇದು ನನ್ನ ಕಳಕಳಿಯ ಆದೇಶ, ಆಣೆ, ಮರೆಯಬೇಡ. ಅಂಥ ಇಂಥ ಓದನೋದಿ ತಪ್ಪು ಗ್ರಹಿಕೆ ಮಾಡಿಕೊಂಡು, ಇತರರೊಡನೆ ವಾದ ಜಲ್ಪಕ್ಕಿಳಿಯುವಲ್ಲಾಗಲಿ, ಹರಟೆ ಹೊಡೆಯುವುದರಿಂದಾಗಲಿ ಗಿಟ್ಟುವುದೇನು ?

## ಗುರು ಶಕ್ತಿ :

ಅಜ್ಞಾನಾಂಧಕಾರವನ್ನು ಕಳೆಯುವವನೇ ಗುರು. ಅವನು ಜ್ಞಾನದೀಪ ಹೊತ್ತಿಸಿದಾಗ ಮುತ್ತಿದ ಕತ್ತಲೆ ಇಲ್ಲವಾಗುತ್ತದೆ. ಕಾಣದ ದಾರಿ ತೋರಿ ಬರುತ್ತದೆ. ಭವದ ಬಂಧನವು ಕಳಚುತ್ತದೆ. ಜನನ ಮರಣ ಚಕ್ರಗಳಿಂದ ದೂರವಾಗಬಹುದು. ಗುರು ಶಕ್ತಿಯಿಂದ ಇದೆಲ್ಲ ಸಾಧ್ಯ.

ಬಳಿ ಸಾರಿ, ಸಾಗರ ಗಮನ ಬಗೆದು ಮನದಿ,
ಈಜಿ ದಾಟುತ, ಗುರುಶಕ್ತಿ ಈಕ್ಷಿಸುತ್ತ,
ಜಪವ ಮಾಡುತ ತನ್ಮಯ ಜಾಡುಗಾಣು,
ಮಾನಸವ ಸ್ಥಿರಗೊಳಿಸುವುದೆ ಮೇಲು ವೇಮ.

ಸಹಸ್ರಾರದ ಕೆಳಭಾಗದಲ್ಲಿ ಯೋಗಿಗಳು ಗುರು ಚಕ್ರವನ್ನು ಕಲ್ಪಿಸಿಕೊಳ್ಳುತ್ತಾರೆ. ಗುರುಮೂರ್ತಿಯನ್ನು ಇಲ್ಲಿ ಗ್ರಹಿಸಿ ಮಂತ್ರ ಜಪ ಮಾಡುತ್ತಾರೆ. ಧ್ಯಾನ ಮಾಡುತ್ತಾರೆ. ಧ್ಯಾನ

ಮಗ್ನ ಬುದ್ಧಿಯನ್ನು ಇದರ ಬಳಿಗೆ ತಲುಪಿಸಿ, ಭವ ಸಾಗರ ಗಮನವನ್ನು ಮನದಲ್ಲಿ ತಿಳಿದು, ಅದರಲ್ಲಿ ಮುಳುಗದೆ ಈಜಿ ದಾಟುತ್ತ, ಗುರುಶಕ್ತಿಯನ್ನು ಈಕ್ಷಿಸುತ್ತ, ಮಂತ್ರ ಜಪ ಮಾಡುತ್ತ ಮಂತ್ರಾರ್ಥದಲ್ಲಿ ತನ್ಮಯನಾಗುವ ದಾರಿಯನ್ನು ಕಾಣು. ಹೀಗೆ ಮಾಡುತ್ತ ಮನಸ್ಸನ್ನು ಸ್ಥಿರಗೊಳಿಸುವುದೇ ಮೇಲು.

ಮಂತ್ರವು ಸದ್ಗುರು ಚಿಂತನ ;
ಮಂತ್ರಾರ್ಥವು ಅವನ ವಿನಾಶ, ಮನ್ಮಯನಿರುತಾ,
ಮಂತ್ರಾಧಿಕನಿಹ ಸದ್ಗುರು,
ಮಂತ್ರದ ಮೂಲಕ ಕಂಡು ಬಯಲನರಿ ವೇಮಾ.

'ಮನನಾತ್ ತ್ರಾಯತೇ ಇತಿ ಮಂತ್ರಃ ಇತ್ಯುಚ್ಯತೇ''. ಮನನ ಮಾಡುವುದರಿಂದ ರಕ್ಷಿಸುತ್ತಿದೆ. ಆದ್ದರಿಂದ ಮಂತ್ರ ಎನಿಸುತ್ತದೆ. ಗುರುವು ಅಂಧಕಾರ ನಿವಾರಕನಾಗಿ ರಕ್ಷಿಸುತ್ತಾನೆ. ಆದ್ದರಿಂದ ಸದ್ಗುರು ಚಿಂತನವೇ ಮಂತ್ರವು. ಯಾವಾಗ ಮಂತ್ರದ ಪ್ರಯೋಜನವಾಗುವುದೋ, ಆಗ ಗುರು ಚಕ್ರದಲ್ಲಿ ಕಲ್ಪಿಸಿದ್ದ ಸದ್ಗುರು ಮೂರ್ತಿಯ ವಿನಾಶವಾಗುತ್ತದೆ. ಆಗ ಮನ್ಮಯನಾಗಿರುತ್ತಾನೆ. ತಾನೇ ತಾನಾಗಿರುತ್ತಾನೆ. ಸದ್ಗುರುವು ಮಂತ್ರಕ್ಕಿಂತ ಅಧಿಕನಾಗಿರುತ್ತಾನೆ. ತನ್ನಲ್ಲಿ ತಾನು ಒಂದಾಗುವ ಸ್ಥಿತಿ ತಲುಪಿದ ಬಳಿಕ, ಮಂತ್ರ ನಿಲ್ಲುತ್ತದೆ. ಏಕೆಂದರೆ ಮನಸ್ಸು ನಿಲ್ಲುತ್ತದೆ. ಆದರೆ ಸದ್ಗುರುವಿನ ಕೃಪೆ ಇನ್ನೂ ಇರುತ್ತದೆ. ಏನೂ ಇಲ್ಲದ ಚಿದಾಕಾಶವನ್ನು ಅಂದರೆ ಬಯಲನ್ನು ಮಂತ್ರದ ಮೂಲಕ ಕಂಡು ಅರಿತುಕೋ.

ಆ ॥ ತಂತ್ರ ಮಂತ್ರಗಳನು, ತಾರಕವನು ಹೊಂದಿ,
ಯಂತ್ರ ಬಲದಿ ಗುರುವಿನ ಮಂತ್ರ ಗೆಯ್ದು,
ಚಿಂತನದೊಳಿರೆ ಸತತ ಚಿನ್ಮಯ ತಲುಪುವನು.
ವಿಶ್ವದಾಭಿರಾಮ ಕೇಳು ವೇಮ.

'ತನ್ ತ್ರಾಯತೇ ಇತಿ ತಂತ್ರಃ ಇತ್ಯುಚ್ಯತೇ' ಬೆಳೆಸುವ ಮೂಲಕ ರಕ್ಷಿಸುತ್ತಿದೆ. ಆದ್ದರಿಂದ ತಂತ್ರ ಎನಿಸುತ್ತದೆ. ತಂತ್ರ ಸಾಧನವು ಅತ್ಯಂತ ಪ್ರಾಚೀನವಾದುದು. ಕಳಸದ ಗೋವಿಂದ ಭಟ್ಟರು ಮತ್ತವರ ಶಿಷ್ಯ ಶಿಶುನಾಳ ಶರೀಫರು ಈ ಭಾಗದ ಸುವಿಖ್ಯಾತ ತಂತ್ರ ಸಾಧಕರು. ಸ್ಮಶಾನ ಸಾಧಕರಾಗಿದ್ದ ನವಿಲುಗುಂದದ ನಾಗಲಿಂಗಪ್ಪನವರು, ಉಣಕಲ್ಲಿನ ಸಿದ್ಧಪ್ಪನವರೂ ತಂತ್ರ ಸಾಧಕರೇ. ಜಗತ್ತಿನಲ್ಲಿ ಪ್ರಸಿದ್ಧರಾದ ಶ್ರೀ ರಾಮಕೃಷ್ಣ ಪರಮಹಂಸರು ಸರ್ವವೇದ್ಯ ತಂತ್ರ ಸಾಧಕರು. ಶ್ರೀ ಚಕ್ರ ಉಪಾಸನೆಯನ್ನು ಪ್ರಚುರಗೊಳಿಸಿದ ಆದಿ ಶಂಕರರೂ ತಂತ್ರ ಸಾಧಕರು. ತಂತ್ರ ಸಾಧನದಲ್ಲಿ ಅನೇಕ ವಿಧಗಳಿವೆ. ಅರುವತ್ತು ನಾಲ್ಕು ಗ್ರಂಥಗಳು ಜನಪ್ರಿಯವಾಗಿವೆ.ವೇಮನ ಯೋಗಿಗಳ ಕಾಲದಲ್ಲಿ ಬಹುಶ್ರುತವಾದ ಸಾಧನ ಪದ್ಧತಿ ಇದಾಗಿತ್ತು. ಚತುರ್ವೇದಗಳಲ್ಲಿ ಅಥರ್ವಣವೇದವು ಭಾರತದಲ್ಲಿ ರಚಿತವಾಗಿದೆ. ಅದರ ಮೇಲೆ ತಂತ್ರದ ಪ್ರಭಾವ ಎಷ್ಟಾಗಿದೆಯೆಂದರೆ, ಆರ್ಯರು ಅದನ್ನು ಬಹು ಕಾಲದ ವರೆಗೆ ಒಪ್ಪಿರಲೇ ಇಲ್ಲ. ಯಂತ್ರ ಎಂದರೆ ರೇಖಾ ಚಿತ್ರಗಳ ಮೂಲಕ ತತ್ತ್ವ ವಿಶ್ಲೇಷಣೆ ಮಾಡುವುದು.

ಈ ಪದ್ಯದ ಟೀಕಾರ್ಥಕ್ಕೆ ಬರುವಾ.





ಸೂಕ್ತ, ಉಪದಿಷ್ಟ ತಂತ್ರದ ವಿಧಿ ವಿಧಾನಗಳನ್ನೂ, ಉಪದಿಷ್ಟ ಮಂತ್ರದ ಪಠಣವನ್ನೂ ತಾರಕ ಮಂತ್ರವನ್ನೂ ಹೊಂದಿ, ಯಂತ್ರ (ಉದಾ: ಶ್ರೀ ಚಕ್ರ) ಬಲದಿಂದ ಗುರು ಉಪದೇಶಿಸಿದ ಮಂತ್ರ ಪಠಣ ಮಾಡಿ ಸತತ ತತ್ತ್ವ ಚಿಂತನದಲ್ಲಿ ಇದ್ದು, ಚಿನ್ಮಯವನ್ನೂ ಅಂದರೆ ನಿಜದ ಅರಿವನ್ನು ತಲುಪುತ್ತಾನೆ.

ಕಂ. ಈ ಲೋಕ ಚಿಹ್ನೆ ಎಲ್ಲವು
ಮೇಲ್ಮೆಯ ಗುರುಶಕ್ತಿ ಕೂಡಿ ಗಗನವ ತಲುಪಲ್,
ಕಾಲನೆದುರಾಗಲು ಮತ್ತೆ,
ಸಾಲವೆ ಜನ್ಮಗಳೆಂದು ಘೋಷಿಸು ವೇಮಾ.

ಈ ಲೋಕದ ಚಿಹ್ನೆಗಳು ಹಲವಾರು. ಸಾಧನ ಕಾಲದಲ್ಲಿ ಪೂರ್ವ ಸಂಸ್ಕಾರದ ಫಲವಾಗಿ ನಾದಾನುಸಂಧಾನದಲ್ಲಿ ದಶವಿಧ ನಾದಗಳು ಕೇಳಿ ಬರುತ್ತವೆ. ಘಂಟಾನಾದವೂ ಅವುಗಳಲ್ಲೊಂದು. ತೇಜಾನುಸಂಧಾನದಲ್ಲಿ, ಚಂದ್ರ ಕಳೆಯು, ಬೆಳದಿಂಗಳ ತನಿ ಬೆಳಕು ಮತ್ತು ಸೂರ್ಯನ ಪ್ರಕಾಶಗಳು ತೋರುತ್ತವೆ. ಇವುಗಳೆಲ್ಲ ಈ ಲೋಕದ ಚಿಹ್ನೆಗಳೇ. ಇವುಗಳೊಂದಿಗೆ ಮೇಲ್ಮೆಯುಳ್ಳ ಗುರುಶಕ್ತಿ ಸೇರಿ, ಚಿದಾಕಾಶವನ್ನು ತಲುಪಬಹುದು. ಈ ಸ್ಥಿತಿಯಿಂದ ದೇಶಾತೀತನೂ ಕಾಲಾತೀತನೂ ಆಗಬೇಕು. ಆದರೆ ಆ ಅವಸ್ಥೆಯನ್ನು ಕೆಡಿಸಲು ಮಾನಸಿಕ ಕಾಲವು ಆತಂಕ ಪಡಿಸಿದರೆ, "ಕಾಲನೇ ಅಡ್ಡಿಪಡಿಸಬೇಡ. ಈ ಇಷ್ಟ ಅವಸ್ಥೆಗೇರಲು ಇಷ್ಟೊಂದು ಜನ್ಮಗಳನ್ನು ಕಳೆದದ್ದು ಸಾಲದೇ ?'' ಎಂದು ಘೋಷಿಸು ಮತ್ತು ಬಯಲನ್ನು ಸೇರು.

ಗೀತ. ಚಿಮ್ಮಿ ನುಗಿಸಿ ಅರಿವ, ಅಗ್ನಿಗಿಟ್ಟು ಚಿತ್ತವನ್ನು
ಕಣ್ಣಿಗಿಂಪಾದ ಗುರುಶಕ್ತಿ ಗಗನ ಸೇರ್ರ್ಸಿ
ದ್ವಂದ್ವ ತೊಡೆಯಲು ಘನನವನು ತಾನು ಜಾಣ.
ಬಂಟತನ ಮನದೊಳು ತಾಳಿ ಭಾವ, ನೋಡು.

ಬಾಹ್ಯ ವಿಷಯ ಸಂಸರ್ಗವಿದೆ. ಇಂದ್ರಿಯ ವೃತ್ತಿಗಳು ತಂದಿರಿಸಿದ ವಿಕ್ಷೇಪ ಮಲ, ಪೂರ್ವವಾಸನೆಗಳಿಂದ ಉದಿತವಾದ ಆವರಣೀ ಮಲಗಳಿಂದ ಚಿತ್ತಪಟಲವು ಮಲಿನವಾಗಿರುತ್ತದೆ. ಜ್ಞಾನದ ಉರಿಯಿಂದ ಚಿತ್ತವನ್ನು ಸುಟ್ಟು, ಶುದ್ಧ ಮಾಡಬೇಕು. ಅರಿವನ್ನು ನಿಮ್ನ ಸ್ತರದಿಂದ ಊರ್ಧ್ವಕ್ಕೆ ಚಿಮ್ಮಬೇಕು. ಬಳಿಕ ಗುರು ಚಕ್ರದಲ್ಲಿಯ ಗುರು ಶಕ್ತಿಯು, ಒಳಗಣ್ಣಿಗೆ ಇಂಪಾಗಿದ್ದು ಅದನ್ನು ಅರಿವಿನೊಂದಿಗೆ ಸೇರಿಸಿ, ಗಗನ ತಲುಪಿಸಬೇಕು. ಬಳಿಕ ದ್ವಂದ್ವ ಭಾವಗಳನ್ನು ಅಂದರೆ ಪರಸ್ಪರ ವಿರೋಧಿ ಭಾವನೆಗಳನ್ನು ತೊಡೆದು ಹಾಕಿದರೆ ತಾನು ಘನನೆನಿಸುತ್ತಾನೆ. ಜಾಣನಾಗುತ್ತಾನೆ. ಈ ಗುರಿಯನ್ನು ಸಾಧಿಸಲು ಬಂಟತನಬೇಕು. ಧೈರ್ಯ ಸ್ಥೈರ್ಯಗಳು ಬೇಕು. ಪರಮನಲ್ಲಿ ಸೇರಿ ಅವನ್ನು ಬಯಸಿ ಪಡೆ.

ಪರಮ ಗುರುವರ ಮಂತ್ರ ಸಿದ್ಧಿಯ ಪಾಲುಗೊಳ್ಳುತ ಅಪ್ಪರೈ.
ಉರದೊಳಗೆ ಗುರಿ ಬಯಲು ತಾಕುತ, ಒಲಿದು ಹತ್ತಿ ಹೊಂದುತಾ
ಕರತಲಾಮಲಕವದು ಬ್ರಹ್ಮವು, ತೂರಿ ಬಪ್ಪುದು ಪ್ರಜ್ಞೆಯೋಳ್.
ಸ್ಥಿರವು ವೇಮನ ಸೇರು, ಪದವಿಯ, ಸಾಹಸದಿ ಮನದಿರಿಸಿಕೊ.

ಮಂತ್ರವು ಮಾನಸಿಕ ತರಂಗಗಳನ್ನು ಹುಟ್ಟಿಸುತ್ತದೆ. ಸೂಕ್ಷ್ಮವಾದ ಸ್ಪಂದನಗಳು ಸೂಕ್ಷ್ಮ ಲೋಕದಲ್ಲಿ, ಕಾರಣ ಲೋಕದಲ್ಲಿ ಚೈತನ್ಯವನ್ನು ಉಂಟು ಮಾಡುತ್ತವೆ. ಈ ಮಂತ್ರ ಚೈತನ್ಯವನ್ನು ಮಂತ್ರ ಸಿದ್ಧಿ ಎನ್ನುತ್ತಾರೆ. ಪರಮ ಗುರುವರನು ಮಂತ್ರ ಸಿದ್ಧಿಯಲ್ಲಿ ಪಾಲುಗೊಳ್ಳುತ್ತ ಇರುವನು. ಈ ಗುರುವರನ ತಾಣವು ಗುರು ಚಕ್ರವೇ ಆಗಿದೆ. ಅಂದರೆ ಸಹಸ್ರಾರ ಚಕ್ರದ ಅಡಿಭಾಗ. ಆಗ ಸಾಧಕನು ತನ್ನ ಉರದಲ್ಲಿ ಅಂದರೆ ಹೃದಯ ಕಮಲದಲ್ಲಿ ತನ್ನ ಲಕ್ಷ್ಯವಾದ ಅಂದರೆ ಗುರಿಯಾದ ಬಯಲನ್ನು ತಾಕುತ್ತಾನೆ. ಆ ಬಯಲಿಗೆ ಒಲಿದು ಹತ್ತಿ ಹೊಂದಿಕೊಳ್ಳುತ್ತಾನೆ. ಆಗ ಬ್ರಹ್ಮವು ಅಂಗೈ ನೆಲ್ಲಿಕಾಯಿಯಂತೆ, ಸಾಧ್ಯವಾಗಿ, ಪ್ರಜ್ಞೆಯಲ್ಲಿ ತೂರಿ ಬರುವುದು. ವೇಮನಾ! ಇದು ಸ್ಥಿರವಾದ, ನಿತ್ಯವಾದ, ಅಚಲವಾದ ಪದವಿಯು. ಅದನ್ನು ಧೀಮಂತಿಕೆಯಿಂದ, ಸಾಹಸದಿಂದ ಸೇರು.

## ಗುರುವನ್ನು ಸೇರುವುದು :

ಗುರುವನ್ನು ಸೇರುವುದು ಎರಡು ವಿಧ. ಒಂದು ಭೌತಿಕ ಲೋಕದಲ್ಲಿ ಭೌತಿಕ ಶರೀರ ಹೊತ್ತ ಗುರುವನ್ನು ಸೇರಿ ಸೇವಿಸುವುದು, ಪ್ರಾರ್ಥಿಸುವುದು. ಎರಡನೆಯದಾಗಿ ಮಾನಸಾಧ್ಯಾತ್ಮಿಕ ಕ್ಷೇತ್ರದಲ್ಲಿ, ಧ್ಯಾನ ಪ್ರಕ್ರಿಯೆಯಲ್ಲಿ ಗುರು ಚಕ್ರದಲ್ಲಿ ಗುರುಮೂರ್ತಿಯನ್ನು ಊಹಿಸಿಕೊಳ್ಳುವುದು. ಗುರು ಭಕ್ತಿ ತಾಳುವುದು. ಗುರು ಶಕ್ತಿ ಹೊಂದುವುದು.

## ಅ) ಭೌತಿಕ ಕ್ಷೇತ್ರದಲ್ಲಿ :

ಆ ||
ಸೋತು ಹೋಗಿ, ಗುರುವ ಸಲೆ ಹಿಡಿದು ಬಿಡದಿರೆ,
ಚಿಕ್ಕ ಬಲಗೂಡಿಸಿ, ಚಿಂತೆ ಬಿಟ್ಟು,
ಕುದುರಿದವನೆ ಮುಕ್ತಿ ಕಂಡವನು ಕಾಣಾ.
ವಿಶ್ವದಾಭಿರಾಮ ಕೇಳು ವೇಮ.

ತಾನು ಸ್ವಂತ ಬುದ್ಧಿಯಿಂದ ತನಗೆ ಹೊಳೆದ ಪ್ರಯತ್ನ ಮಾಡಿ ಕೊನೆಗೆ ಮಾರ್ಗದರ್ಶಕ ಗುರುವನ್ನು ಕಂಡು ಅವನ ಚರಣಗಳನ್ನು ಗಟ್ಟಿಯಾಗಿ ಹಿಡಿದು ಬಿಡದಿದ್ದರೆ, ತೀರಿತು. ಅವನ ಕರುಣೆಯಿಂದ ತನ್ನಲ್ಲಿರುವ ಅಲ್ಪ ಬಲವನ್ನು ಕೂಡಿಸಿ, ಅರಿಷಡ್ವರ್ಗಗಳನ್ನು ಹಿಮ್ಮೆಟ್ಟಿಸಿ, ಚಿಂತೆಗಳನ್ನು ಬಿಟ್ಟು, ಇದ್ದರೆ ಹೃದಯವು ಕುದುರುತ್ತದೆ. ಅಂದರೆ ಹೃದಯ ಕಮಲವು ಅರಳುತ್ತದೆ. ಅಂಥವನು ಭವ ಬಂಧನದಿಂದ ಮುಕ್ತಿ ಕಂಡವನು.

ಆ ||
ಛಾತ್ರ ಧರ್ಮವರಿತು ಚೊಕ್ಕ ಭಕ್ತಿಯಿಂದ,
ಗುರುವ ಸೇವೆ ಗೆಯ್ದು ಕುದುರಿದೊಡನೆ,
ಎಲ್ಲ ಮರ್ಮಗಳನು ಎಸೆದು ಹೋಗುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಗುರುವಿನ ಛತ್ರದಲ್ಲಿಯೇ ಅಧ್ಯಯನ ಮಾಡುತ್ತ ಇದ್ದು, ಚೊಕ್ಕ ಭಕ್ತಿಯಿಂದ ಗುರುವಿನ ಸೇವೆ ಮಾಡಬೇಕು. ಗುರು ಕರುಣೆಯಿಂದ ಹೃದಯವು ಅರಳಿದರೆ, ಎಲ್ಲ ರಹಸ್ಯಗಳನ್ನು ಎಸೆದು ಹೋಗುತ್ತಾರೆ.





ಆ ||
'ತಿಳಿಸು ಅಯ್ಯ' ಎಂದು, 'ದೇವರು ನೀ' ಎಂದು,
ಬೆನ್ನು ಬಿದ್ದ ಜನರ ಬವಣೆ ನೀಗೆ,
ಯಾವನಿರಲಿ ಹೇಳ್ವ ಏನಾದರೊಂದನು.
ವಿಶ್ವದಾಭಿರಾಮ ಕೇಳು ವೇಮ.

ಆ ||
ಎಡೆಬಿಡದೆ ಗುರುವನು ಬೇಡಿ ಬೇಸರಿಯದೆ,
ಸ್ಥಿರತೆಯಿಂದ ಪೂಜೆ ಸಲಿಸಿ, ಸಲಿಸಿ,
ಪರವ ಕಾಣುವವನು ಪರಿಪೂರ್ಣ ಯೋಗಿಯು.
ವಿಶ್ವದಾಭಿರಾಮ ಕೇಳು ವೇಮ.

ಆ ||
ಗುರುವು ಬರುತಲಿರಲು, ಕುಳಿತು ಏಳದಿರುವ,
ತುಂಟಗೆಂತು ದೊರೆಯುತಿಹುದು ಮುಕ್ತಿ ?
ಪತಿಯ ಲೆಕ್ಕಕಿಡದ ಸತಿಗೆ ಅಂಥ ಗತಿಯು.
ವಿಶ್ವದಾಭಿರಾಮ ಕೇಳು ವೇಮ.

ಆ ||
ಊಳಿಗವನು ಮಾಡಿ, ಉಬ್ಬಿಸಿ ಗುರುವನ್ನು,
ಕೂಡಿ ಹೊಂದಬೇಕು, ಕೋರ್ಕೆಯಡಗಿ,
ಬೇಡಿ ಪರಮ ಪದವಿ, ಬೆಳಗುತ ನೋಡಿರೋ.
ವಿಶ್ವದಾಭಿರಾಮ ಕೇಳು ವೇಮ.

ಗುರುವು ಕೊಟ್ಟ ಕಾರ್ಯವನ್ನು ಸೇವೆಯೆಂದು ಮಾಡಿ, ಗುರುವು ಸಂತೃಪ್ತಿಯಿಂದ ಉಬ್ಬುವಂತೆ ಮಾಡಬೇಕು. ಅವನ ಇಚ್ಛೆ ಅನಿಚ್ಛೆಗಳಿಗೆ ಹೊಂದಿಕೊಳ್ಳಬೇಕು. ತನ್ನ ಮನದಲ್ಲಿ ಯಾವುದೇ ಐಹಿಕ ಕೋರ್ಕೆಗಳು ಇರಬಾರದು. ಅಂಥ ಶುದ್ಧ ಮನಸ್ಕನು, ಪರಮ ಪದವಿಯ ಮಾರ್ಗ ತೋರೆದು ಗುರುವಿನಲ್ಲಿ ಬೇಡಿಕೊಳ್ಳಬೇಕು. ಹರ್ಷಿತನಾಗಿ ಕೃಪಾಧಾರೆ ಸುರಿಸಿ, ಪರಮ ಪದವಿಯ ಮಾರ್ಗವನ್ನು ಸೂಚಿಸುತ್ತಾನೆ.

ಆ ||
ಉಬ್ಬಿ ಗುರುವ ಬೇಡಿ, ಉಳಿಸಿ ನಂಬುಗೆಯನು,
ಮಿಥ್ಯೆ ನುಡಿಯಬೇಡ ; ತತ್ತರಿಸುತ.
ನಿಶ್ಚಯಿಸಿ ಮನದಲಿ ನಿರ್ವಿಣ್ಣತೆ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಹರ್ಷದಿಂದ ಉಬ್ಬಿ, ಗುರುವನ್ನು ಸಂಧಿಸಿ ಮಾರ್ಗ ದರ್ಶನ ನೀಡೆಂದು ಬೇಡಿಕೋ. ಅವನು ಉಪದೇಶಿಸಿದಂತೆ ನಡೆಯುವೆನೆಂದು ವಚನ ಕೊಡು. ಆ ವಚನದಂತೆ ನಡೆದು ಗುರುವು ನಿನ್ನಲ್ಲಿರಿಸಿದ ನಂಬುಗೆಯನ್ನು ಉಳಿಸಿಕೋ. ಯಾವುದಕ್ಕೂ ಭಯ ಪಡಬೇಡ. ಸುಳ್ಳಾಡಬೇಡ. ಗುರುವಿನಾಣತಿಯನ್ನು ಪಾಲಿಸುವ ನಿಶ್ಚಯವನ್ನು ತಾಳಿ, ಮನಸ್ಸಿನಲ್ಲಿ ನಿರ್ವಿಣ್ಣತೆಯನ್ನು ಅಂದರೆ ನಮ್ರಭಾವವನ್ನು ಹೊಂದು.

## ಆ. ಮಾನಸಾಧ್ಯಾತ್ಮಿಕ ಸೇರುವಿಕೆ

ಗುರುವು ಬಾಹ್ಯದಲ್ಲಿಯೂ ಉಂಟು, ಆಂತರ್ಯದಲ್ಲಿಯೂ ಉಂಟು. ಆಂತರ್ಯದ ಗುರುವು, ಧ್ಯಾತೃವಿಗೆ ಗುರು ಚಕ್ರದಲ್ಲಿ ತೋರುತ್ತಾನೆ.

ಕಂ.
ನೋಡುವ ವರೆಗೇ ಸಾಧನ
ನೋಡುತ, ಮನದಲ್ಲಿ ತೋಚಿ, ಸುಲಭವೆಯಾಗಳ್,
ಗೂಢವು, ತೋಚಿದ ಮರ್ಮದ
ಜಾಡರಿತು ನೀನೆ ಅರಿಯೊ ಗುರು ಸೇರಿ, ವೇಮಾ.

ಲಕ್ಷ್ಯ ವಸ್ತುವನ್ನು ನೋಡುವ ವರೆಗೆ ಸಾಧನ ಮಾಡುತ್ತಿರುವೆನೆಂಬ ಭಾವವಿರುತ್ತದೆ. ಅದನ್ನು ತಲುಪಿ, ಒಳ ಗಣ್ಣಿನಿಂದ ನೋಡುತ್ತ, ಯಾವಾಗ ಅಗ್ರ್ಯ ಬುದ್ಧಿಗೆ ಮನದಲ್ಲಿ ತೋಚುವುದೋ, ಆಗ ಎಲ್ಲವೂ ಸುಲಭವಾಗುತ್ತದೆ. ಯಾವುದು ಮೊದಲು ಗೂಢವೆನ್ನಿಸಿತ್ತೋ, ಅದೀಗ ತೋಚಿದೆ. ಅದರ ಮರ್ಮದ ರೀತಿಯನ್ನು ಅರಿತು, ಗುರು ಸೇರಿ, ಅದನ್ನೇ ನೀನು ಎಂದು ಅರಿ. 'ತತ್ ತ್ವಮ್ ಅಸಿ' ಅದೇ ನೀನಾಗಿದ್ದೀ, ಎಂದು ಅರಿ.

ಆ॥
ಗುರುವಿನೊಡನೆ ಹೊಂದಿ ಕೂಡಿಕೊಳ್ಳುವವನು,
ಬ್ರಹ್ಮಕಂಟಿ ಬೆರೆತು ಬೆಳಗುತಿಹನು.
ಗೌಪ್ಯ ತಿಳಿದೊಡಾಗ ಗುಟ್ಟು ರಟ್ಟೆ ಆಯ್ತು.
ವಿಶ್ವದಾಭಿರಾಮ ಕೇಳು ವೇಮ.

ಗುರು ಚಕ್ರದ ಮೇಲೆ ಧ್ಯಾನ ಮಾಡಿ, ಗುರುವಿನೊಂದಿಗೆ ತನ್ನ ಏಕಾಗ್ರ ಮನದ ದೃಷ್ಟಿಯನ್ನು ಹೊಂದಿಸಿ ಕೂಡಿಕೊಳ್ಳುವವನು, ಗುರು ಮೂರ್ತಿಯು ಲಯವಾಗಿ ಬ್ರಹ್ಮವು ತುಂಬಿಕೊಳ್ಳುವುದರ ಅನೂಭೂತಿ ಹೊಂದುತ್ತಾನೆ. ಎಲ್ಲವೂ ಬ್ರಹ್ಮಮಯವಾಗುತ್ತದೆ. ಆಗ ಬ್ರಹ್ಮಕ್ಕೆ ಅಂಟಿ ಬ್ರಹ್ಮದೊಡನೆ ಬೆರೆತು, ಬೆಳಗುತ್ತಾನೆ. ಯಾವಾಗ ಬ್ರಹ್ಮನನ್ನು ಕೂಡುವ ಈ ಗೌಪ್ಯವು ತಿಳಿಯುವುದೋ, ಆಗ ಎಲ್ಲ ಗುಟ್ಟೂ ರಟ್ಟಾಗುತ್ತದೆ.

ಆ॥
ನರನೆನೆ ಪರಮಾತ್ಮ ಗುರುವ ಸೇರಿದಾಗ,
ಹಸ್ತದಲ್ಲಿ ಮೋಕ್ಷ ; ಆಗ ನೋಡು.
ಕಡು ಸಂಪದಗಳಲಿ ಗರ್ವ ಪಡುವ ಜೀವಿ,
ಪರಮವರಿಯ ; ಯಮನ ಪಾಲು ವೇಮ.

ಗುರುವು ಅಜ್ಞಾನಾಂಧಕಾರ ನಿವಾರಕನು. ಅಂಥ ಗುರುವನ್ನು ಸೇರಿದಾಗ ನರನೆಂದರೆ ಪರಮಾತ್ಮರೂಪನೇ ಆಗುತ್ತಾನೆ. ಗುರು ಚಕ್ರದಲ್ಲಿ ಜೀವಾತ್ಮನು ಗುರು ಶಕ್ತಿಯನ್ನು ಸೇರಿದಾಗಲಂತೂ ಇದು ಸತ್ಯಸ್ಯ ಸತ್ಯವಾಗುತ್ತದೆ. ಆಗ ಮೋಕ್ಷವು ಹಸ್ತದಲ್ಲಿಯ ನೆಲ್ಲಿಕಾಯಿಯಂತೆ ಸುಲಭವಾಗಿ ಪ್ರಾಪ್ತವಾಗುತ್ತದೆ. ಆದರೆ ಇನ್ನೊಬ್ಬನು ಗುರುವನ್ನು ಬಾಹ್ಯದಲ್ಲಾಗಲಿ, ಆಂತರ್ಯದಲ್ಲಾಗಲಿ, ಸೇರದೆ, ಬಹಳ ಸಂಪತ್ತು ಗಳಿಸಿ, ಗರ್ವಪಡುವ ಜೀವಿಯಾಗಿದ್ದರೆ, ಅವನು ಪರಮನನ್ನು ಅರಿಯುವುದಂತೂ ದೂರವಿರಲಿ, ಯಮನ ಪಾಲಾಗುತ್ತಾನೆ.





ಗೀತ.
ಶುದ್ಧ ಪರಿಪೂರ್ಣ ದೃಷ್ಟಿಯಲಿ ಸುಸ್ಥಿರಾಗಿ,
ಇದ್ದು ನಿರ್ಗುಣ ಹೊಂದುತ, ನಿರ್ಮಲಾಗಿ,
ಗದ್ದುಗೆಯನೇರಿ, ಬ್ರಹ್ಮವನು ಕಾಣಬಹುದು.
ಸುದ್ದಿಯೇತಕೆ ? ಗುರು ಸೇರಿ, ಶ್ರಮಿಸು ವೇಮ.

ದೃಷ್ಟಿಯು ದೋಷಗಳನ್ನು ಕಳೆದು ಶುದ್ಧವಾಗಿರಬೇಕು. ಖಂಡಿತವಾಗಿರದೆ ಪರಿಪೂರ್ಣವಾಗಿರಬೇಕು. ಅಂಥ ದೃಷ್ಟಿಯಲ್ಲಿ ಸುಸ್ಥಿರವಾಗಿ ಇದ್ದು ಗುಣಗಳನ್ನು ಮೀರಿ ನಿರ್ಗುಣವನ್ನು ಹೊಂದಬೇಕು. ಆವರಣೀ ಮತ್ತು ವಿಕ್ಷೇಪ ಮಲಗಳನ್ನು ಅಳಿಸಿ ನಿರ್ಮಲವಾಗಬೇಕು. ಇಷ್ಟೆಲ್ಲ ಸಾಧಿಸಿದ ಮೇಲೆ, ಸಾಧಕನ ಇರವು ಊರ್ಧ್ವಕ್ಕೇರಿರುತ್ತದೆ. ಅಲ್ಲಿ ಗದ್ದುಗೆಯನ್ನು ಏರಿ, ಬ್ರಹ್ಮವನ್ನು ಕಾಣಬೇಕು. ಇದಕ್ಕಾಗಿ ಗುರು ಚಕ್ರದಲ್ಲಿ ಗುರುವನ್ನು ಸೇರಬೇಕು; ಶ್ರಮಿಸಬೇಕು. ಬರೀ ವಾದ ತರ್ಕಗಳ ಸುದ್ದಿ ಏತಕ್ಕೆ ? ಅದರಿಂದಾವ ಪ್ರಯೋಜನವೂ ಇಲ್ಲ.

ಆ॥
ಅರಸಿ ನೋಡಿದೊಡನೆ ಅಖಿಲ ಲೋಕಂಗಳು,
ತನುವಿನಲ್ಲಿ ಉಂಟು ; ತಿಳಿದು ಕಾಣು.
ಮನಸಿನಲ್ಲಿಹ ಗುರು ; ಮತ್ತೆ ಮುಟ್ಟಿ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಲೋಕ ಎಂದರೆ ಅನುಭವ ಕ್ಷೇತ್ರ. ಊರ್ಧ್ವ ಲೋಕಗಳು ಏಳು, ಅಧೋ ಲೋಕಗಳು ಏಳು. ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನರ್ಲೋಕ, ತಪೋಲೋಕ, ಸತ್ಯಲೋಕ ಎಂಬಿವು ಸಪ್ತಲೋಕಗಳು. ಈ ಲೋಕ ಅಂದರೆ ಅನುಭವ ಕ್ಷೇತ್ರಗಳು ಸಾಮಾನ್ಯ ಪ್ರಜ್ಞೆಯ ಅಳವಿನಲ್ಲಿ ಬರುವವೇ ? ಇಲ್ಲವೆ ? ಅರಸಿ ನೋಡಿದೊಡನೆ ಅಖಿಲ ಲೋಕಂಗಳು ತನುವಿನಲ್ಲಿ ಉಂಟು. ತಿಳಿದು ಕಾಣು. ಹೌದು. ಈ ತನುವಿನಲ್ಲಿ ಅನ್ನಮಯ ಕೋಶವಿದೆ. ಕಾಮಮಯ ಕೋಶವಿದೆ, ಮನೋಮಯ, ಅತಿಮಾನಸ, ವಿಜ್ಞಾನಮಯ, ಆನಂದಮಯ ಕೋಶಗಳೂ ಇವೆ. ಇನ್ನೊಂದು ಕೋಶಾತೀತ ಅವಸ್ಥೆಯೂ ಇದೆ. ಮನೋವಿಕಾಸವಾದಂತೆಲ್ಲ, ಈ ಸೂಕ್ಷ್ಮಾತಿ ಸೂಕ್ಷ್ಮ ಕೋಶಗಳು ನಮ್ಮ ಬೇರೆ ಬೇರೆ ಅನುಭವ ಕ್ಷೇತ್ರಗಳನ್ನು ಅರಿವಿಗೆ ತರುತ್ತವೆ. ಅದೇ ರೀತಿ, ಮಾರ್ಗದರ್ಶಕ ಗುರು ಕೂಡ ಮನಸ್ಸಿನಲ್ಲಿಯೇ ಗುರುಚಕ್ರದಲ್ಲಿ ಉಂಟು. ಮನವನ್ನು ಕೇಂದ್ರೀಕರಿಸಿ, ಇಷ್ಟ ಲಕ್ಷ್ಯದತ್ತ ಚಿಮ್ಮಿ ನುಗಿಸಿ, ಗುರುವನ್ನು ಮುಟ್ಟಿ ನೋಡು. ಅರಿವೇ ಗುರು ತಾನೇ ?

ಕಂ.
ನಿಂದಿಸುತ ಭ್ರಮೆ ಹೊಂದದೆ,
ಅಂದದಿ ಮನದಲ್ಲಿ ಸೇರಿ, ನಯದಿಂದ ತಾ
ಚೆಂದದರಿತು ಗುರು ರಹಸ್ಯ,
ಸಂದೇಹವಿರದೆ ಪೂರ್ಣನೆ ಆಗಿರು, ವೇಮಾ.

ವಿಷಯಾಸಕ್ತಿಯನ್ನು ನಿಂದಿಸುತ್ತ, ಅತ್ತ ಇತ್ತ ಇರುವ ಎಳೆತ ಸೆಳೆತಗಳಲ್ಲಿ ಭ್ರಮೆ ಹೊಂದದೆ, ಅಂದವಾಗಿ ಮನದಲ್ಲಿ ಸೇರಿ, ನಯದಿಂದ ಸಾಗಿ, ಚೆಂದವರಿತು ಅಂದರೆ ಔಚಿತ್ಯ

ಪೂರ್ಣವಾಗಿ ಗುರು ರಹಸ್ಯವನ್ನು ಅರಿತು, ಹೃದಯ ಕಮಲವನ್ನು ಅರಳಿಸಿಕೋ. 'ಭಿದ್ಯತೇ ಹೃದಯ ಗ್ರಂಥೀ ಛಿದ್ಯಂತೇ ಸರ್ವ ಸಂಶಯಃ'. ಅಂದರೆ ಹೃದಯ ಗ್ರಂಥಿಯು ಬಿಚ್ಚಿದರೆ ಎಲ್ಲ ಸಂಶಯಗಳೂ ದೂರಾಗುತ್ತವೆ. ಸಂದೇಹ ರಹಿತವಾಗಿ ಪೂರ್ಣನೇ ಆಗಿರು. ನಿತ್ಯ ಪರಿಪೂರ್ಣವಾದ ಆ ತತ್ ಪದವನ್ನು ಸೇರು.

ಗೀತ.
ದುರಿತಗಳನ್ನೆಲ್ಲ ಖಂಡಿಸುತ ಗುರುವ ಸೇರಿ,
ಪರಮ ನಿರ್ಗುಣ ಮನನವನು ಪೂರ್ತಿಗೊಳಿಸಿ,
ಗುರು ತರಂಗಗಳ ಗುಣಗಳ ಗಳಿಸಿಕೊಂಡು,
ಪರಶಿವನೆಂದು ಭಾವಿಸು, ಪೊಡವಿಲಿ ವೇಮ.

ಕೆಡುಕು ಭಾವನೆಗಳೆಲ್ಲವನ್ನೂ ಕೊಚ್ಚಿ ಹಾಕುತ್ತ, ಗುರು ಚಕ್ರದಲ್ಲಿ ಗುರುವನ್ನು ಸೇರಿ, ಪರಮ ನಿರ್ಗುಣ ಮನನವನ್ನು ಮಂತ್ರ ಧ್ಯಾನ ಮೂಲಕ ಪೂರ್ಣಗೊಳಿಸಬೇಕು. ಆಗ ಗುರು ತರಂಗಗಳು ಸತ್ವಗುಣ ಪ್ರತಿನಿಧಿಯಾದ ಶಿವತತ್ತ್ವ ದಾಟಿದ, ನಿರ್ಗುಣನಾದ ಪರಶಿವನೆಂದು ಪೊಡವಿಯಲ್ಲಿ ಬೆಳಗುತ್ತಿರು.

## ಫಲಶ್ರುತಿ :

ಸದ್ಗುರುವಿನ ಆಶ್ರಯ ಕೋರಿ, ಅವನ ಉಪದೇಶಾಮೃತ ಪಡೆದು, ತಮ್ಮ ಬಾಳಿನಲ್ಲಿ ಚಿರ ಶಾಂತಿಯನ್ನು ಪಡೆದವರ ಅನುಭೂತಿಯ ವಿವರಗಳನ್ನು ಇದು ವರೆಗೆ ಅರಿತಿದ್ದೇವೆ. ಈಗ ಸತ್ಸಂಗದ ಫಲಶ್ರುತಿಯಸ್ನು ಕುರಿತು ಸಮೀಕ್ಷಿಸುವಾ :

ಆ॥
ದೇಹವಾತ್ಮರೂಪ ತಿಳಿಸಿ ಬಿಚ್ಚಿ ಹೇಳಿ,
ಅವನಿ ನೋಟ ತೋರ್ಪ ಅವನೆ ಗುರುವು.
ಭ್ರಮರ ತನ್ನ ರೂಪ ಕೀಟಕಿತ್ತ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಈ ಪದ್ಯಕ್ಕೆ ಈ ಮುನ್ನ ಟೀಕಾರ್ಥವನ್ನು ನೀಡಿದ್ದೇವೆ. ಈಗ ಶಿಷ್ಯನು ಗುರುವನ್ನು ಸೇರಿ ಗುರುವೇ ಆಗುತ್ತಾನೆ ಎಂಬುದನ್ನು ತಿಳಿಯಬೇಕು. ಕೀಟವು ತನ್ನ ಸುತ್ತು ಹಾಕುವ ಭ್ರಮರವನ್ನು ಕಂಡು ಭಯಪಡುತ್ತದೆ. ಆಗ ಅದರ ಗ್ರಂಥಿ ರಸವು ಸ್ರವಿಸಿ ರೆಕ್ಕೆಗಳನ್ನು ಪಡೆಯುತ್ತದೆ. ತಾನೂ ಭ್ರಮರವಾಗುತ್ತದೆ. ಇದನ್ನು ಭ್ರಮರ-ಕೀಟ ನ್ಯಾಯ ಎನ್ನುತ್ತಾರೆ. ಶಿಷ್ಯ ಮುಂದೆ ಗುರವಾಗಿ ಹೊರಹೊಮ್ಮುವುದು ಈ ನ್ಯಾಯದಂತೆಯೇ.

ಆ॥
ಮೋದಗಳ ಗುರುವಿನ ಮುಖ್ಯ ಕರುಣೆಯಿಂದ,
ನವ ರಂಧ್ರ ಕಾಯವ ನೋಡಿ, ತ್ಯಜಿಸಿ,
ಸರ್ವ ಜೀವನಾದ ಸರ್ವವು ತಾನಾದ.
ವಿಶ್ವದಾಭಿರಾಮ ಕೇಳು ವೇಮ.





ನಮ್ಮ ಸ್ಥೂಲ ಕಾಯಕ್ಕೆ ಒಂಭತ್ತು ತೂತುಗಳಿವೆ. ಎರಡು ಕಿವಿ, ಎರಡು ಕಣ್ಣು, ಎರಡು ಮೂಗಿನ ಹೊರಳೆಗಳು, ಒಂದು ಬಾಯಿ, ಒಂದು ಗುದ, ಒಂದು ಗುಹ್ಯ. ನಮ್ಮ ಆಮೋದ ಪ್ರಮೋದಗಳು ಈ ಒಂಭತ್ತು ತೂತುಗಳ ಮುಖಾಂತರ ಆಗುತ್ತವೆ. ಇವುಗಳ ಅಸ್ಥಿರತೆ.ಯನ್ನು ನೋಡಿ, ಗುರುವಿನ ಮುಖ್ಯ ಕರುಣೆಯಿಂದ ಇವುಗಳಿಲ್ಲದೆ ದೊರೆಯುವ ಶಾಶ್ವತ ಆನಂದವನ್ನು ತಿಳಿದು, ಈ ದೇಹಾಭಿಮಾನವನ್ನು ತ್ಯಜಿಸಬೇಕು. ಆಗ ವಿದೇಹಿಯಾದ ಜೀವನು ಸರ್ವ ದೇಹಿಗಳಲ್ಲಿಯೂ ಸಮನಾಗಿರುತ್ತಾನೆ. ಆಗ ತಾನು ಸರ್ವ ಜೀವಿ ಎನಿಸುತ್ತಾನೆ. ಸರ್ವವೂ ತಾನಾಗುತ್ತಾನೆ. ಸರ್ವ ಭೂತಾಂತರಾತ್ಮ ಆಗುತ್ತಾನೆ.

ಆ.
ಹಾಲು ಗೂಡಿ ನೀರು ಹಾಲಾಗಿ ಬೆಳಗಿತು;
ಮಹಾ ಗುರುವಿನಿಂದ ಮಹಾ ಜ್ಞಾನಿ.
ಸಾಧು ಸಜ್ಜನಾದಿ ಸಂಗವಿಂತಿಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

ನೀರು ಬೇರೆ, ಹಾಲು ಬೇರೆ. ಆದರೆ ಹಾಲಿನಲ್ಲಿ ಸ್ವಲ್ಪು ನೀರು ಹಾಕಿದರೆ ಅದೆಲ್ಲ ಸೇರಿ ಹಾಲೇ ಎನಿಸುತ್ತದೆ. ಆ ನೀರೂ ಹಾಲೇ ಆಗಿ ಬೆಳಗುತ್ತದೆ. ಅದೇ ರೀತಿ, ಮಹಾ ಗುರುವಿಗೆ ಶರಣು ಹೋದ ಶಿಷ್ಯನು ಸಹ ಸತ್ಸಂಗದ ಫಲವಾಗಿ ಮಹಾಜ್ಞಾನಿಯಾಗಿ ಹೊರಬರುತ್ತಾನೆ. ಸಾಧು ಸಜ್ಜನರ ಸತ್ಸಂಗವೂ ಸಹ ಇಂಥ ಫಲವೀಯುತ್ತದೆ.

ಆ.
ಕಾಗೆ ಗೂಡಿನಲ್ಲಿ ಕೋಗಿಲೆ ಇರುವಂತೆ.
ಭ್ರಮರವಪ್ಪ ಕೀಟ ಬದುಕಿನಂತೆ.
ಗುರು ಧ್ಯಾನದ ಬಳಿಕ ಗುರುವೆ ತಾನಾಗುವ.
ವಿಶ್ವದಾಭಿರಾಮ ಕೇಳು ವೇಮ.

ಗುರುವಿನಲ್ಲಿ ಶರಣು ಕೋರಿದ ಶಿಷ್ಯನು ಗುರುವಿನ ಮಾರ್ಗ ದರ್ಶನದಲ್ಲಿ ಮುನ್ನಡೆದು ಗುರುವೇ ಆಗುತ್ತಾನೆ. ಕೋಗಿಲೆಯು ಕಾಗೆಯ ಗೂಡಿನಲ್ಲಿ ತತ್ತಿ ಇರಿಸುತ್ತದೆ. ಆದರೆ ಕಾಗೆಯು ಆ ತತ್ತಿಗೆ ಕಾವು ಕೊಟ್ಟು, ಮರಿ ಮಾಡಿಸುತ್ತದೆ. ಮುಂದೆ ಮರಿಗೆ ಆಹಾರ ತಂದು ಗುಟುಕು ಕೊಡುತ್ತ ಪೋಷಿಸುತ್ತದೆ. ಆ ಮರಿ ಕೋಗಿಲೆಯು ಹಾರುವಂತಾದ ಮೇಲೆ ಅಲ್ಲಿಂದ ತೊಲಗುತ್ತದೆ. ಅದೇ ರೀತಿ, ಕೀಟವೊಂದು ಭ್ರಮರದ ಸನಿಹದಲ್ಲಿರುವಾಗ ಭಯಪಟ್ಟು, ಗ್ರಂಥಿ ರಸ ಸ್ರವಿಸಿ, ರೆಕ್ಕೆ ಮೂಡಿ ಭ್ರಮರವೇ ಆಗುತ್ತದೆ. ಇನ್ನು ಶಿಷ್ಯನು ನಿಷ್ಠೆಯಿಂದ ಗುರುವಿನ ಧ್ಯಾನ ಮಾಡಿ ಗುರುವಿನ ಸ್ವರೂಪವನ್ನು ಹೊಂದಿ ಗುರುವೇ ಆಗುತ್ತಾನೆ.

ಆ॥
ತಿಳಿಸುವವನು ಯಾರೊ ? ತಿಳಿಯುವವನು ಯಾರೊ ?
ಗುಟ್ಟು ಅರಿತ ಮೇಲೆ ಬಟ್ಟ ಬಯಲು.
ಜಲದ ಭಾಂಡೆಯಲ್ಲಿ ಸೂರ್ಯ ಬಿಂಬದಂತೆ.
ವಿಶ್ವದಾಭಿರಾಮ ಕೇಳು ವೇಮ.

ಗುಹ್ಯಾತ್ ಗುಹ್ಯವಾದ ಬ್ರಹ್ಮ ಜ್ಞಾನವನ್ನು ಯಾರು ತಿಳಿಸುತ್ತಾರೆ ? ಮತ್ತಾರು ತಿಳಿಯುತ್ತಾರೆ ? ಏಕೆಂದರೆ ಪರಬ್ರಹ್ಮವು ಗುಣಾತೀತವಾಗಿದೆ. ಅದು ಸತ್ತ್ವ ಗುಣದ ಆಚೆಗಿದೆ. ಜ್ಞಾನ ಸಂಗವು ಸತ್ತ್ವ ಗುಣ. ಸತ್ತ್ವ ಗುಣದ ಆಚೆಗೆ ಅಂದರೆ ತಿಳಿವಿನ ಆಚೆಗೆ. ಅಲ್ಲಿ ತಿಳಿಸುವವನು ಯಾರು ? ಈ ಗುಟ್ಟಿನ ವಿದ್ಯೆಯನ್ನು ಅರಿತ ಮೇಲೆ ಎಲ್ಲವೂ ಬಯಲಿನಾಚೆಯ ಬಯಲಾಗಿರುತ್ತದೆ. ಬಟ್ಟಬಯಲಾಗಿರುತ್ತದೆ. ನೀರು ತುಂಬಿದ ಭಾಂಡೆಯಲ್ಲಿ ಸೂರ್ಯನ ಬಿಂಬವು ತೋರುತ್ತದಷ್ಟೇ. ಆ ಸೂರ್ಯ ಕಿರಣಗಳು ಎಲ್ಲೆಡೆ ಇದ್ದರೂ ಜಲ ಭಾಂಡೆಗಳಲ್ಲಿ ತೋರಿ ಬರುತ್ತದೆ.

ತೃಪ್ತಿ ತುಂಬಿ ಗುರುವ ಧ್ಯಾನಿಸಿ ಮನದೊಳಗೆ,
ತನುವ ಮರೆತು, ಗುರುವ ತಲುಪಿದಾಗ,
ತೊಳಗುತಿಹುದು ಬ್ರಹ್ಮ ತತ್ತ್ವವೆನುವರದನು.
ವಿಶ್ವದಾಭಿರಾಮ ಕೇಳು ವೇಮ.

ಕೋರಿಕೆಗಳೆಲ್ಲ ಅಡಗಿದ ಮೇಲೆ ಮನದಲ್ಲಿ ತೃಪ್ತಿ ತುಂಬುತ್ತದೆ. ಅಂಥ ಮನದೊಳಗೆ ಗುರುವನ್ನು ಮಂತ್ರ ಮೂಲಕ ಧ್ಯಾನಿಸಿ, ಮನವನ್ನು ಏಕಾಗ್ರಗೊಳಿಸಬೇಕು. ಏಕಾಗ್ರತೆಯು ತೀವ್ರಗೊಂಡಾಗ ದೇಹ ಭಾವವೂ ಮರೆತು ಹೋಗುತ್ತದೆ. ಹೀಗೆ ಗುರು ಚಕ್ರದಲ್ಲಿಯ ಗುರುವನ್ನು ತಲುಪಿದಾಗ, ಅಲ್ಲಿ ಗುರು ರೂಪವು ಲಯಿಸಿ ಬ್ರಹ್ಮವು ತೊಳಗುತ್ತದೆ. ಅದನ್ನೇ ತತ್ತ್ವವೆನ್ನುವರು.

-------



# ೧೬. ಯೋಗ ಮಹಿಮೆ ಮತ್ತು ಜನಜನಿತ ಕಥಾನಕಗಳು

ಯೋಗ ಸಾಧನದಲ್ಲಿ ಹಲವಾರು ಸಿದ್ಧಿಗಳು ಪ್ರಾಪ್ತವಾಗುವುದು ಸರ್ವವಿದಿತ. ಪಾತಂಜಲ ಯೋಗ ಸೂತ್ರಗಳಲ್ಲಿಯೂ ಇಂಥ ಹಲವಾರು ಅದ್ಭುತ ಸಿದ್ಧಿಗಳ ಬಣ್ಣನೆ ಇದೆ. ಇವುಗಳನ್ನು ಈಶ್ವರ ಶಕ್ತಿಗೆ ಸಂಬಂಧಿಸಿದ ಐಶ್ವರ್ಯ ಸಿದ್ಧಿಗಳೆನ್ನುತ್ತಾರೆ. ಇವು ಎಂಟು. ಅಣಿಮಾ, ಮಹಿಮಾ, ಲಘಿಮಾ, ಗರಿಮಾ, ಪ್ರಾಪ್ತಿ, ಪ್ರಕಾಮ್ಯ, ಈಶತ್ವ ಮತ್ತು ವಶಿತ್ವ. ಮಹಾಯೋಗಿ ವೇಮನರಂಥ ಮಹಾತ್ಮರು ಇವುಗಳನ್ನು ಪಡೆದಿದ್ದರೋ, ಇಲ್ಲವೋ ಎಂಬ ಮಾತು ಅಪ್ರಸ್ತುತ. ಆದರೆ ರಾಜಯೋಗದ ಅತ್ಯುಚ್ಚ ಶೃಂಗಕ್ಕೇರಿದ ಅವರು ತಾವು ಪಡೆದ ಸಿದ್ಧಿಗಳನ್ನು ಹೆಚ್ಚಾಗಿ ಪ್ರದರ್ಶಿಸಿದರೇ ಇಲ್ಲವೇ ಎಂಬುದು ಗಮನಾರ್ಹವಾದುದು.

## ಕಾವ್ಯ ಪ್ರಭೆ :

ವೇಮನ ಯೊಗಿಗಳು ಹೆಚ್ಚು ಕಲಿತವರಲ್ಲ ಎಂಬ ಬಗ್ಗೆ ಮತಭೇದವಿಲ್ಲ. ವೇಮನ ಯೋಗಿಗಳ ಕಟ್ಟಾ ಅಭಿಮಾನಿಗಳಾಗಿದ್ದ, ಮೈಸೂರ ವಿಶ್ವವಿದ್ಯಾಲಯದ ಪ್ರೊ. ಭಾಸ್ಕಲರರೂ ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿಗಳೂ, ಪ್ರಸಿದ್ಧ ವಿದ್ವಾಂಸರೂ ಆಗಿದ್ದ ಡಾ. ಸಿ. ಆರ್. ರೆಡ್ಡಿಯವರು ಮದ್ರಾಸು (ಈಗಿನ ಚೆನ್ನೈ) ಬಾನುಲಿ ಕೇಂದ್ರದಿಂದ (ಅಕ್ಟೋಬರ 1948) "ಜಾತ್ಯತೀತ ಸಮಾಜ : ವೇಮನ" ಎಂಬ ವಿಷಯವಾಗಿ ಮಾತನಾಡುತ್ತ, ಹೀಗೆ ಹೇಳಿದ್ದಾರೆ.

"ಅವರು ಕಲಿತವರೇನಲ್ಲ. ಪಂಡಿತರಂತೂ ಅಲ್ಲವೇ ಅಲ್ಲ. ಆದರೆ ಆಳ ವಿಚಾರಶೀಲರು, ಮಹಾ ಚಿಂತಕರು ಮತ್ತು ಬಾಳಿನಲ್ಲಿ ಮತ್ತದರ ಪ್ರಾಪಂಚಿಕ ಮತ್ತು ಆಧ್ಯಾತ್ಮಿಕ ಸಮಸ್ಯೆಗಳಲ್ಲಿ ತೂರುವ ಬೋಧಿ ಸಂಪನ್ನರು. ಅವರ ಕಾವ್ಯವೊಂದು ಚಿಮ್ಮುವ ಬುಗ್ಗೆ. ಶುದ್ಧ ಮತ್ತು ದೋಷದೂರ. ಸಂಪೂರ್ಣ ಸ್ಫುರಣಾತ್ಮಕವಾದದ್ದು ಮತ್ತು ವಿಚಾರ ಶೈಲಿಗಳಲ್ಲಿ ಮೌಲಿಕವಾದದ್ದು"

ವೇಮನರ ಸಾವಿರಾರು ಪದ್ಯಗಳನ್ನು ಆಳವಾಗಿ ಅಭ್ಯಸಿಸಿದರೆ, ವೇಮನರಿಗೆ ವೇದ-ಉಪನಿಷತ್ತುಗಳ ಬಗೆಗೆ, ವೈದಿಕರ ಸ್ಮೃತಿ ಶಾಸ್ತ್ರಗಳ ಬಗೆಗೆ, ಇತಿಹಾಸ ಗ್ರಂಥಗಳ ಬಗ್ಗೆ ಕೂಲಂಕುಷ ಮಾಹಿತಿ ಇತ್ತೆಂದು ತಿಳಿದು ಬರುತ್ತದೆ. ಬಹಳ ಕಡೆಗೆ ಅವರು ಪೂರ್ವ ಗ್ರಂಥಗಳಲ್ಲಿಯ ಪ್ರತಿಪಾದನೆಗಳನ್ನು ಖಂಡಿಸಿದ್ದಾರೆ. ಈ ಎಲ್ಲ ಜ್ಞಾನವು ಅವರಿಗೆ ಎಲ್ಲಿಂದ ಪ್ರಾಪ್ತವಾಗಿರಬಹುದು? ಪೂರ್ವ ಜನ್ಮದಲ್ಲಿ ಅವರು ಪಂಡಿತರೇ ಇದ್ದಿರಬಹುದು. ಯೋಗ ಭ್ರಷ್ಟರಾಗಿ ಮತ್ತೆ ಮರುಜನ್ಮ ತಾಳಿರಬಹುದು. ಹೀಗಾಗಿ, ಅವರಿಗೆ ಯೋಗ ಮಹಿಮೆಯಿಂದ ಪೂರ್ವಜನ್ಮದ ಆವಶ್ಯಕ ಸ್ಮರಣೆಗಳು ಕರತರಾಮಲಕವಾಗುತ್ತಿರಬಹುದು.

ಹುಟ್ಟುವವರು ಯಾರು ? ಹುಟ್ಟದವರು ಯಾರು ?
ಹುಟ್ಟಿ ಹುಟ್ಟದಂಥ ಪುರುಷರಾರು ?

ಹುಟ್ಟಿ ಹುಟ್ಟದಿಹುದ ಬೋಧಿಸಲು ಕಾಣೆಬೋ ?
ವಿಶ್ವದಾಭಿರಾಮ ಕೇಳು ವೇಮ.

ಕೆಲವರು ಕರ್ಮಫಲ ಭೋಗಿಸಲು ದೇಹ ಪಡೆಯಲು ಹುಟ್ಟುತ್ತಾರೆ. ಕೆಲವರು ತಾವು ದೇಹವಲ್ಲ. ಅಮರ ಆತ್ಮವೇ ಸರಿ ನನಗೆ ಹುಟ್ಟು ಇಲ್ಲ ಎಂದು ಅರಿತಿರುತ್ತಾರೆ. ಬೇರೆ ಕೆಲವರು ದೇಹ ಪಡೆಯಲು ಹುಟ್ಟಿದ್ದರೂ ತಮ್ಮ ಸಾಧನೆ ಸಿದ್ಧಿಯಿಂದ ಬ್ರಹ್ಮವಿದರಾಗಿ ಅಜರಾಗುತ್ತಾರೆ. ಹುಟ್ಟದಂಥ ಪುರುಷನಾಗುತ್ತಾನೆ. ಅಂಥ ಮಹಾತ್ಮರು ಜಗತ್ತಿನಲ್ಲಿ ಹುಟ್ಟಿ ಹುಟ್ಟದಿಹುದು ಹೇಗೆ ? ಎಂಬುದನ್ನು ಬೋಧಿಸುತ್ತಾರೆಂಬುದನ್ನು ತಿಳಿಯಿರಿ.

ವೇಮನ ಯೋಗಿಗಳು ತೆಲುಗಿನ ಆಶು ಕವಿಗಳೇನೋ ನಿಜ. ಅವರು ತೀರ ಸಹಜವಾಗಿ, ಸುಲಭವಾಗಿ ಪದ್ಯ ರಚಿಸಬಲ್ಲವರಾಗಿದ್ದರು. ಅವರೊಬ್ಬ ಶ್ರೇಷ್ಠ ಮಟ್ಟದ ದಾರ್ಶನಿಕರಾಗಿದ್ದರು. ಅವರನ್ನು ಆಳವಾಗಿ ಅರಿಯದ ಜನಪದ ಮತ್ತು ಅವರ ದಾರ್ಶನಿಕ ಪ್ರತಿಪಾದನೆಯನ್ನು ಅಪಾರ್ಥ ಮಾಡಿದ ಪೂರ್ವಾಗ್ರಹದೂಷಿತ ಪಂಡಿತ ಗಣ, ಅವರನ್ನು ಕೇವಲ ಜಾನಪದ ಕವಿಯೆಂದು ಸಾರಿ ಸಂತೃಪ್ತಿ ಪಟ್ಟಿದ್ದಾರೆ. ಅವರು ತಮ್ಮ ಕೃತಿಗಳ ಪ್ರಾರಂಭದಲ್ಲಿ ಸ್ತುತಿಸಿದ ಕವಿಗಣಕ್ಕೆ ಶಿವಕವಿ ಎಂದಿದ್ದಾರೆ.

ಶಿವ ಕವಿಗಳ ನವಕವಿಗಳ,
ಶಿವಭಕ್ತಿಯೆ ತತ್ವಗಳಿಗೆ ಚಿಂತಾಮಣಿಯೈ
ಶಿವಲೋಕದ ಪ್ರಮಥರಿಗೆ
ಶಿವನಿಗೆ, ಗುರುವಿಗೆ ಶರಣೆಂದೆನ್ನಲೋ ವೇಮಾ.

ಕವಿಗಳಲ್ಲಿ ಎರಡು ವಿಧ: ಶಿವ ಕವಿಗಳು ಒಂದು ವಿಧವಾದರೆ ನವಕವಿಗಳು ಇನ್ನೊಂದು ವಿಧ. ರೂಢಿಯ ಭಾಷೆಯಲ್ಲಿ ಇವರನ್ನು ನಾವು ದಾರ್ಶನಿಕ ಕವಿ ಮತ್ತು ಶೃಂಗಾರ ಕವಿ ಎಂದು ಅನುಕ್ರಮವಾಗಿ ಕರೆಯುತ್ತಾರೆ. ಅವರೀರ್ವರ ಶಿವಭಕ್ತಿಯೇ ಅಂದರೆ ಮಂಗಳ ಮತ್ತು ಕಲ್ಯಾಣಮಯ ಸೇವಾಭಾವವೇ ತತ್ವಗಳನ್ನು ಪ್ರಕಾಶಿಸುವ ಚಿಂತಾಮಣಿಯಾಗಿದೆ. ಅಂದರೆ ಚಿಂತಿಸಿದುದನ್ನು ಪ್ರಕಾಶಿಸುವ ರತ್ನಪ್ರಾಯವಾಗಿದೆ. ಶಿವಲೋಕದ ಪ್ರಮಥರಿಗೆ ಅಂದರೆ ಶಿವಗಣಕ್ಕೆ, ಶಿವನಿಗೆ ಮತ್ತು ಶಿವರೂಪವೇ ಆದ ಗುರುವಿಗೆ ವೇಮನಾ ಶರಣು ಶರಣೆನ್ನು ಎಂದಿದ್ದಾರೆ ; ಕವಿ ವೇಮನ.

ವೇಮನರು ಆಶು ಕವಿಯೂ ಅಹುದು ; ವರ ಕವಿಯೂ ಅಹುದು. ಮೊದಲಿನಿಂದಲೂ ಅವರು ತಾಳಿದ ಗೊಂದಲವಿಲ್ಲದ, ಸ್ಫುಟವಾದ ನಿಲುವಿನಿಂದ ಆಜನ್ಮ ಕಾವ್ಯ ಪ್ರತಿಭೆಯಿಂದ ಅವರು ಆಶು ಕವಿಗಳಾಗಿದ್ದರು. ಇದು ಎಲ್ಲರೂ ಒಪ್ಪಿರುವ ಮಾತೇ. ಆದರೆ ಅವರು ಪ್ರತಿಪಾದಿಸಿದ ಜೀವ, ಜಗತ್ತು, ದೇವ ದರ್ಶನಗಳ ಬಗೆಗೆ ಮಂದ ಬುದ್ಧಿಯವರಿಗೆ ತಿಳಿದಿಲ್ಲ. ದೂಷಿತ ಬುದ್ಧಿಯವರು ಅಪಾರ್ಥ ಕಲ್ಪಿಸಿಕೊಂಡಿದ್ದಾರೆ. ಸ್ವಚ್ಛ ಮನಸ್ಸಿನ ಹಲವರು ಅಭ್ಯಾಸ ನಡೆಸಿದ್ದಾರೆ. ಅವರು ನೀತಿ ಪದ್ಯಗಳನ್ನೇ ಉಲಿಯಲಿ, ದಾರ್ಶನಿಕ ಪದ್ಯಗಳನ್ನೇ ಶ್ರುತಪಡಿಸಿರಲಿ, ಅದಕ್ಕೆ ಆಧಾರವಾಗಿ ಅವರ ಆಳ ಚಿಂತನವಿದೆ. ಅವರು ಮಾನಸ ಸಮುದ್ರದ ಆಳಕ್ಕಿಳಿದು ನುಡಿಮುತ್ತುಗಳನ್ನು ಸಂಗ್ರಹಿಸಿ, ಲೋಕಕ್ಕೆ ಲೋಗರಿಗೆ ನೀಡಿದ್ದಾರೆ.





ಜ್ಞಾನಿಯಾದ ನರನು, ಘನ ತೇಜವಂತನು,
ಹೊಂದಿ ಪೂರ್ಣ ಸುಖವ, ಹುಟ್ಟುತಿಹನು.
ತಾನು ತನ್ನ ರೀತಿ ತನ್ನೊಳು ಬೆಳಗುವನು.
ವಿಶ್ವದಾಭಿರಾಮ ಕೇಳು ವೇಮ.

'ತತ್ ತ್ವಮ್ ಅಸಿ' ಎಂದರೆ ಅದೇ ನೀನು ಆಗಿದ್ದೀ ಎಂದು ಗುರುವು ಬಿಡಿಸಿ ಹೇಳಿದಾಗ, ಅಹುದು. 'ಅಹಂ ಬ್ರಹ್ಮಾಸ್ಮಿ'. ನಾನು ಬ್ರಹ್ಮನೇ ಆಗಿದ್ದೇನೆ ಎಂದು ರಹಸ್ಯದ ಮೂಲವನ್ನು ಒಳಹೊಕ್ಕು ಅರಿತ ಜ್ಞಾನಿಯಾದ ನರನು, ಸ್ವಯಂ ಜ್ಯೋತಿಯಾಗಿ, ತನಗೆ ತಾನೇ ಬೆಳಕಾಗಿ ಬಾಳುವನು. ಇಂಥ ಸ್ವಯಂ ಜ್ಯೋತಿ ಸ್ವರೂಪನು ತನ್ನ ಚಿಂತನೆಗೆ ಆಂತರ್ಯದಿಂದ ಸ್ಫೂರ್ತಿ ಪಡೆಯುತ್ತಾನೆ. ತನ್ನ ಅಂತರಾತ್ಮನಿಗೆ ಶರಣು ಹೋಗುತ್ತಾನೆ.

ಆ॥ ನುಡಿಯೆಂಬೆನೊ ದೇವ; ನುಡಿಯಲೊಲ್ಲೆಯೇಕೆ ?
ನುಡಿಯೆನ್ನನೆ ಕುರಿತು ಪ್ರಬಲ ವಾಕ್ಯ.
ನುಡಿಯಯ್ಯ ! ನಿನ್ನ ಧ್ವನಿ ನಾನು ಅರಿವೆ.
ವಿಶ್ವದಾಭಿರಾಮ ಕೇಳು ವೇಮ.

ನನ್ನ ಬುದ್ಧಿಗೆ ಬೆಳಕು ಕೊಡುವ ದೇವನೇ ! ನೀನೀಗ ನುಡಿ. ಏಕೆ ನುಡಿಯಲೊಲ್ಲೆ ? ನನ್ನನ್ನೇ ಕುರಿತು ಪ್ರಬಲ ವಾಕ್ಯವನ್ನು ನುಡಿ. ಅಯ್ಯಾ ದಯವಿಟ್ಟು ನುಡಿ. ನಿನ್ನ ಧ್ವನಿಯು ಎಷ್ಟೇ ಗಾಢವಾಗಿರಲಿ, ಪರಾ, ಪಶ್ಯತಿ, ಮಧ್ಯಮೀ ಸ್ವರದಲ್ಲಿದ್ದರೂ ನಾನು ಅರಿಯುತ್ತೇನೆ. ಇನ್ನು ವೈಖರೀ ಸ್ವರದ ವರೆಗೆ ಹರಿದು ಬಂದರಂತೂ ಸರಿಯೇ ?

ಎಂದು ಅಂತರ್ವಾಣಿಯ ಧ್ವನಿ ಆಲಿಸಲು ಹಂಬಲಿಸುತ್ತಾರೆ. ಆದ್ದರಿಂದ ಅವರು ಹೇಳುತ್ತಾರೆ.

ಆ॥ ಕಾಗುಣಿತ ಬೋಧಿಪ, ಗುರುವು ಅಲ್ಲವಲ್ಲ.
ಶಾಸ್ತ್ರ ಪಾಠ ಓದಿಸುವನು ಅಲ್ಲ.
ಮುಕ್ತಿ ಮಾರ್ಗ ತೋರೆ, ಮೂಲ ಗುರುವಾಗುವ.
ವಿಶ್ವದಾಭಿರಾಮ ಕೇಳು ವೇಮ.

ಕಾಗುಣಿತ ಎಂದರೆ ಕ ಮ ಕ ಮ ಅಕ್ಷರಮಾಲೆಯನ್ನು ಬೋಧಿಸುವವನು, ಅಂಧಕಾರ ಕಳೆಯುವ ಗುರುವಾಗಲಾರನು. ಶಾಸ್ತ್ರ ಪಾಠ ಓದಿಸುವ ಅಧ್ಯಾಪಕನೂ ನಿವಾರಕನೆನಿಸನು. ಆದರೆ ಯಾರು ಇಹದ ಅಜ್ಞಾನದ ಕತ್ತಲೆಯಿಂದ ಪರದ ಬೆಳಕನ್ನು ಕಾಣುವ ಬಿಡುಗಡೆಯ, ಮುಕ್ತಿಯ, ಮಾರ್ಗವನ್ನು ತೋರಿಸುವನೋ, ಅವನೇ ಮೂಲ ಗುರುವಾಗುತ್ತಾನೆ.

ಆ ಆಂತರ್ಯ ಶಕ್ತಿಗೆ ಸಂಪೂರ್ಣ ಶರಣಾಗಿ ಅದರೊಂದಿಗೆ ತಾದಾತ್ಮ್ಯ ಹೊಂದುತ್ತಾರೆ. ಆಗ ಅವರು ಹಾಡುತ್ತಾರೆ.

ಕಂ. ನೀನಾಡಲು ನಾನಾಡುವೆ,
ನೀನಿದ್ದರೆ ನಾನಿಹೆ, ನಿಷ್ಕಳಂಕನಿರುತಾ.

ನೀನು ತಿಳಿವಂತೆ ತಿಳಿವೆನು.
ನೀ ನಕ್ಕರೆ ನಾ ನಗುವೆನು, ನಿಜವಿದು, ವೇಮಾ.

ಆ ಅಂತಃ ಶಕ್ತಿಯು ಆಡಿದರೆ, ನಾನು ಆಡುವೆನು. ನಾನಾಡುವ ಮಾತು ಈ ಅಹಮಿನ ಧ್ವನಿಯಲ್ಲ ; ನಿರಹಂಕಾರದ ಇಂಚರ. ನೀನಿದ್ದರೆ ನಾನಿಹೆ. ನನ್ನ ಇರವಿನ ಅಸ್ತಿತ್ವ ಅಭಿಮಾನವೂ ನನಗಿಲ್ಲ. ನೀನು ಇರುವುದರಿಂದ ನಾನು ಇರುವೆನಷ್ಟೇ. ನೀನೇ ವಸ್ತು. ನಾನು ಬರೀ ನೆರಳು. ನಾನು ಯಾವುದೇ ಕಳಂಕವಿಲ್ಲದ ಸತ್ಪಾತ್ರನಾಗಿ ನಿನ್ನನ್ನು ಹೊಂದಿಕೊಳ್ಳುತ್ತಿದ್ದೇನೆ. ನೀನು ಏನು ತಿಳಿಯುವೆಯೋ ಅದುವೇ ನನ್ನ ತಿಳಿವು. ನಾನು ಸತ್ವಗುಣವನ್ನು ದಾಟಿ ನಿನ್ನಲ್ಲಿ ಸೇರಿದ್ದೇನೆ. ನನ್ನ ತಿಳಿವೆಂಬುದು ಪ್ರತ್ಯೇಕವಾಗಿ ಇಲ್ಲ.

ಸಾಧನದಲ್ಲಿ ಊರ್ಧ್ವ ಲೋಕ ತಲುಪಿದಾಗ, ಪರವನ್ನು ಧ್ಯಾತೃವು ಕಾಣಬಹುದು. ಆದರೆ ಅವನಿಗೆ ತನ್ನ ಅಸ್ತಿತ್ವದ ತಿಳಿವೇ ಉಳಿಯದು.

ಆ॥
ನಿನ್ನ ನೋಡುತಿರಲು, ತನ್ನ ತಾನೆ ಮರೆವ.
ತನ್ನ ನೋಡುತಿರಲು, ನಿನ್ನ ಮರೆವ.
ನಿನ್ನ ತನ್ನನರಿಯೆ, ನರಗೆ ವಿಧವಾವುದು ?
ವಿಶ್ವದಾಭಿರಾಮ ಕೇಳು ವೇಮ.

ಪರಮ ತತ್ತ್ವವು ತ್ರಿಗುಣಗಳಾಚೆ ಇದೆ. ಅಂದರೆ ಮಾತು ಮನಂಗಳಿಂದತ್ತ ಇದೆ. ತಿಳಿವಿನಾಚೆಗಿದೆ. ಆದ್ದರಿಂದ ಕವಿ ಹಾಡುತ್ತಾನೆ: ನಿನ್ನ ನೋಡುತಿರಲು ತನ್ನ ತಾನೆ ಮರೆವನು ಎಂದು. ಇನ್ನು ತನ್ನ ದೇಹ, ಇಂದ್ರಿಯ ವ್ಯಾಪಾರ, ಮನಸ್ಸಿನ ಚಿಂತನಗಳತ್ತ ಲಕ್ಷ್ಯ ಹರಿಸಿದರೆ, ನಿನ್ನನ್ನು ಅಂದರೆ ಆತ್ಮವನ್ನು ಮರೆಯುತ್ತಾನೆ. ಆದ್ದರಿಂದ ಮಾನವನು ನಿನ್ನನ್ನು ಅರಿಯುತ್ತ ತನ್ನನ್ನೂ ಅರಿಯಬಲ್ಲ ವಿಧ ಯಾವುದು ?

ಆ॥
ನಿನ್ನ ನೋಡುತಿರಲು ನೆರೆಗಂಡಿತು ತತ್ತ್ವ.
ತನ್ನ ನೋಡುತಿರೆ ತಗಲಿತು ಮಾಯೆ.
ನಿನ್ನನರಿತ ಬಳಿಕ ತನ್ನ ತಾನರಿವನು.
ವಿಶ್ವದಾಭಿರಾಮ ಕೇಳು ವೇಮ.

ನಿನ್ನ ಅಂದರೆ ಪರಶಿವನನ್ನು ನೋಡುತ್ತಿದ್ದರೆ, ತತ್+ತ್ವವು ಚೆನ್ನಾಗಿ ಗೋಚರಿಸುತ್ತದೆ. ಎಲ್ಲಿಯವರೆಗೆ ನಿನ್ನನ್ನು ಕಾಣದೆ ತನ್ನನ್ನು ಅಂದರೆ ಅನಾತ್ಮವನ್ನು ನೋಡುತ್ತಿದ್ದರೆ ಮಾಯೆ ತಗಲುತ್ತದೆ. 'ಯಾ ಮಾ ಸಾ ಮಾಯಾ' ಅಂದರೆ ಯಾವುದು ಇಲ್ಲವೋ ಅದೇ ಮಾಯೆ. ಈ ಜಗತ್ತು ಇದ್ದಂತೆ ಇರುವುದಿಲ್ಲ. ವಸ್ತು, ವ್ಯಕ್ತಿ ಮತ್ತು ವಿಚಾರಗಳು ಇದ್ದಂತೆ ಇರುವುದಿಲ್ಲ. ಆದರಿಂದ ಅವೆಲ್ಲ ಮಾಯೆ. ತನ್ನನ್ನೇ ನೋಡುತ್ತಿದ್ದರೆ ಈ ಮಾಯೆ ತಗಲುತ್ತದೆ. ಆದ್ದರಿಂದ ಮಾನವನು ಮೊದಲು ನಿನ್ನನ್ನು ಚೆನ್ನಾಗಿ ಅರಿಯಬೇಕು. ಬಳಿಕ ತನ್ನ ಇತಿಮಿತಿಗಳೇನು ದೋಷಗಳೇನು ? ಇವುಗಳನ್ನು ಮೀರಿ ಹೋಗುವುದು ಹೇಗೆ ? ಆತ್ಮನಲ್ಲಿ ಒಂದಾಗುವುದು ಹೇಗೆ ? ಎಂಬುದನ್ನು ಅಂದರೆ ತನ್ನನ್ನು ತಾನರಿಯುತ್ತಾನೆ.

ಕೊನೆಗೆ ಅವನು ಒಂದು ವಿವೇಕ ಸಮ್ಮತ ನಿಲುಮೆಗೆ ಬರುತ್ತಾನೆ.





ನಾನು ಎನ್ನುತಿಹುದು, ನೀನು ಎನ್ನಬಹುದು ;
ನೀನು ನಾನು ಏನುವ ನಿಷ್ಠೆಯರಿತು,
ನಾನು ನೀನೆ ನೀನು ನಾನೆ ಎನ್ನಬಹುದು.
ವಿಶ್ವದಾಭಿರಾಮ ಕೇಳು ವೇಮ.

'ನಾನು' ಎನ್ನುತಿಹುದೇ ನೀನು ಎನ್ನಬಹುದು. 'ಅಹಂ ಬ್ರಹ್ಮಾಸ್ಮಿ' ಅಂದರೆ ನಾನು ಬ್ರಹ್ಮನಿದ್ದೇನೆ. 'ತತ್ ತ್ವಮ್ ಅಸಿ'. ಅಂದರೆ ಅದೇ, ಆ ಬ್ರಹ್ಮವೇ, ನೀನಿದ್ದೀ. ಹೀಗೆ ನೀನು ನಾನೇ ಎನ್ನುವ ವಿಚಾರವನ್ನು ಅರಿತು, ಬಳಿಕ 'ನಾನೇ ನೀನು', 'ನೀನೇ ನಾನು' ಎನ್ನಬಹುದಾಗಿದೆ.

ಯೋಗ ಸಾಧನದಲ್ಲಿ ಶೃಂಗಪದ ತಲುಪಿದ ವೇಮನ ಯೋಗಿಗಳು ತಮ್ಮ ಯೋಗ ಶಕ್ತಿಯಿಂದ ಬೋಧಿಯನ್ನು ಉದ್ದೀಪಿಸಿಕೊಂಡಿದ್ದರು. ಹಾಗಾಗಿ ಅವರು ಧ್ಯಾನಸ್ಥ ಸ್ಥಿತಿಯಲ್ಲಿರುವಾಗ ಸರ್ವಜ್ಞರಾಗಿರುತ್ತಿದ್ದರು. ಅವರು ಯೋಗ ಪ್ರಕ್ರಿಯೆಗಳನ್ನು ಬಿಡಿಸಿ ಹೇಳುವಾಗ ಬಳಸಿದ ಭಾಷೆ, ರಚಿಸಿದ ಪದ್ಯಗಳ ವೃತ್ತಗಳು, ಅಳವಡಿಸಿದ ಕಂದ, ಸೀಸ, ತೇಟ, ಮತ್ತೇಭ ವಿಕ್ರೀಡಿತ ಛಂದಸ್ಸುಗಳನ್ನು ಅಚ್ಚರಿಯಿಂದ ಗಮನಿಸಿದ ಸಾಹಿತಿ ಮಿತ್ರರು, ಇವುಗಳನ್ನು ಆಟವೆಲದಿ (ಕುಣಿಯುವ ಹೆಣ್ಣು) ಛಂದಸ್ಸಿನ ವೇಮನರೇ ರಚಿಸಿದರೋ, ಇಲ್ಲವೇ ಬೇರೊಬ್ಬರು ರಚಿಸಿರಬಹುದೋ ಎಂದು ಸಂದೇಹ ಪಡುವಂತಾಯಿತು. ಸಾಂಖ್ಯಯೋಗ, ಶಿವಯೋಗ ಮತ್ತು ರಾಜಯೋಗಗಳನ್ನು ವೇಮನರು ವಿವರವಾಗಿ ಪ್ರತಿಪಾದಿಸಿದ್ದಾರೆ.

ವೈದಿಕ ಋಷಿಮುನಿಗಳು ತಮ್ಮ ಕುಟೀರಗಳಲ್ಲಿ, ಧ್ಯಾನಸ್ಥರಾಗಿ ಮನನ ಮೂಲಕ ಮಂತ್ರಗಳನ್ನು ಅಂದರೆ ಋಕ್ಕುಗಳನ್ನು ತಮ್ಮ ಮನಃ ಪಟಲದೆದುರು ಕಾಣುತ್ತಿದ್ದರು. ಋಕ್ಕುಗಳ ಸರಣಿಯೇ ವೇದವೆನಿಸುತ್ತಿತ್ತು. ಋಷಿಯು ದ್ರಷ್ಟಾ ಎನಿಸುತ್ತಿದ್ದನು. ಲಿಪಿ ಇಲ್ಲದ ಆ ಕಾಲದಲ್ಲಿ ಅಧ್ಯಾಪಕನು ಅಧ್ಯಯನ ಮಾಡುವವನಿಗೆ ಋಕ್ಕುಗಳನ್ನು ಕೇಳಿಸುತ್ತಿದ್ದನು. ಆದ್ದರಿಂದ ವೇದವು ಶ್ರುತಿ ಎನಿಸಿತು. ಈ ಅರ್ಥದಲ್ಲಿ ವೇಮನರ ಪದ್ಯ ಸಮುಚ್ಚಯವು ಶ್ರುತಿಯೇ, ವೇದವೇ. ಆದ್ದರಿಂದ,

ವೇದಾತೀತನು ವೇಮ ಕಣಾ
ವೇಮನ ನುಡಿಯೇ ವೇದ ಕಣಾ

ಎಂದು ಹೇಳಿದ್ದಾರೆ.

ಹೀಗೆ ವೇಮನ ಪದ್ಯಗಳಿಗೆ ಆಧಾರವಾಗಿ ಅವರ ಯೋಗ ಮಹಿಮೆ ಅಡಗಿದೆಯೆಂಬ ಸತ್ಯವನ್ನು ಸರಿಯಾಗಿ ಅರಿಯಬೇಕು.

## ರಸವಿದ್ಯೆ :

ಜೀವನ್ಮುಕ್ತಿಯೇ ಮಾನವನ ಲಕ್ಷ್ಯ. ದೇಹವು ಭಸ್ಮವಾದ ಬಳಿಕ ಇಲ್ಲವೆ ಕೊಳೆತು ಮಣ್ಣು ಗೂಡಿದ ಬಳಿಕ, ಲಿಂಗ ಶರೀರವು ವಿವಿಧ ಲೋಕಗಳಲ್ಲಿ ವಿಕಾಸಗೊಂಡು ಬ್ರಹ್ಮದೊಂದಿಗೆ ಒಂದಾಗುವುದೆಂಬ ಕಲ್ಪನೆಯನ್ನು ರಸವಾದಿಗಳು ಒಪ್ಪುವುದಿಲ್ಲ. ಸಾಧನೆಯು ಈ ದೇಹದಲ್ಲಿ ಇರುವಾಗ ಮಾತ್ರ ಸಾಧ್ಯ. 'ಶರೀರಂ ಖಲು ಧರ್ಮ ಸಾಧನಂ' ಎಂದರೆ, ಶರೀರವು ನಿಜವಾಗಿ ಧರ್ಮ ಸಾಧನವಾಗಿದೆ. ಆದ್ದರಿಂದ ಹೃದಯದ ಗಂಟು ಬಿಚ್ಚುವ ವರೆಗೆ ಮತ್ತು ಸರ್ವ ಸಂಶಯಗಳು ಕತ್ತರಿಸಲ್ಪಡುವ ವರೆಗೆ ಈ ಶರೀರರದಲ್ಲಿ ಜೀವಿಯನ್ನು ನಿಲ್ಲಿಸಿ ಸಾಧನೆ ಮಾಡಬೇಕು.

ಆ॥ ಜೀವಿ ಹೋಹ ಮುನ್ನ ಜೀವ ವಸ್ತುವಿತ್ತು,
ಜೀವಿ ನಿಲಿಸಬೇಕು ಜೀವನದೊಳು.
ಜೀವಿ ತೊಲಗಲಾಗ ಜೀವವಸ್ತುವೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಸಾಧನವು ಅಂದರೆ ಮಾನಸಿಕ ಕೋಶಗಳು ಸೂಕ್ಷ್ಮದಿಂದ ಸೂಕ್ಷ್ಮತರವಾಗುವುದು, ಮುಂದೆ ಸೂಕ್ಷ್ಮತಮವಾಗುವುದು, ಕಾರಣ-ತನುವಿನ ಕೋಶವಾಗುವುದು, ಅವಸ್ತುವೆನಿಸುವುದು. ಜೀವಿ ಶರೀರವನ್ನು ಅಗಲಿ ತೆರಳುವ ಮುನ್ನವೇ ನಡೆಯಬೇಕು. ಆದ್ದರಿಂದ ಸಾಧನದ ದೃಷ್ಟಿಯಿಂದ ಜೀವವಸ್ತುವಿತ್ತು, ಜೀವನದಲ್ಲಿ ಜೀವಿಯನ್ನು ನಿಲ್ಲಿಸಬೇಕು. ಜೀವಿ ತೊಲಗಿದ ಮೇಲೆ, ಜೀನವಸ್ತುವೇಕೆ ? ಪಿಂಡದಾನಗಳೇಕೆ ? ಸೂಕ್ಷ್ಮ ಕೋಶಗಳು ನೆಲೆಸಿದ ದೇಶ ಮಾಧ್ಯಮವನ್ನು ಸ್ವರ್ಗ ನರಕಗಳೆಂದು ಕರೆಯಬಹುದಾದರೂ, ಅಲ್ಲಿ ಸುಖ ದುಃಖಗಳ ಅನುಭವವು, ಪುರಾಣ ಕಲ್ಪನೆಯಂತೆ ಇರದು. ಏಕೆಂದರೆ ಸುಖ ದುಃಖಗಳ ಅನುಭವವಾಗಲು, ಸ್ಥೂಲ ಮಸ್ತಿಷ್ಕ ಮತ್ತು ಸ್ಥೂಲ ನರಜಾಲಬೇಕು. ಅವು ಲಿಂಗ ಶರೀರದೊಂದಿಗೆ ಇರುವುದಿಲ್ಲ.

ತೈತ್ತರೀಯ ಉಪನಿಷತ್ತಿನಲ್ಲಿ ಹೇಳಿರುವಂತೆ,"ರಸೋ ವೈ ಸಃ ರಸಂ ಹ್ಯವಾಯಂ ಲಬ್ಧ್ವಾ ಆನಂದೀ ಭವತಿ". ರಸವು ಭವ ಭಾರದಿಂದ ಪಾರು ಮಾಡುವ ತಾರಣೋಪಾಯವಾಗಿದೆ. ಹೆಚ್ಚೇನು ರಸವೇ ಪರಬ್ರಹ್ಮವಾಗಿದೆ.

ರಸ ವಿದ್ಯೆಯು ಕಾಯ ಕಲ್ಪದ ಮೂಲವಾಗಿದೆ. ಆಯುರ್ವೇದದಲ್ಲಿ ಕಾಯಕಲ್ಪ ಚಿಕಿತ್ಸೆಯ ವಿವರಗಳೂ ಲಭ್ಯ.

ಕಾಯವ ಸಲೆಗೂಡಿ ಕಡೆಗೆ ಯೋಗಿಯಾಗಬೇಕು.
ಕಾಯವಿಹದಿ ಬೀಳೆ, ಘನನು ಅಲ್ಲ
ಕಾಯದಲ್ಲಿ ಮುಕ್ತಿ ಕೊನೆಯ ಸೇರಬೇಕು.
ವಿಶ್ವದಾಭಿರಾಮ ಕೇಳು ವೇಮ.

ಜೀವನ್ಮುಕ್ತಿಯೇ ನಮ್ಮ ಲಕ್ಷ್ಯವಾಗಿರಬೇಕು. ಸತ್ತ ಮೇಲೆ ಮುಕ್ತಿ ಪಡೆವೆವು ಎಂಬುದು ಎತ್ತಣ ಮಾತು ? ಲಿಂಗ ಶರೀರಿಗಳಾದ ದೇವತೆಗಳೂ ಸಹ ಮುಕ್ತಿ ಪಡೆಯಬೇಕಾದರೆ ಮಾನವ ಜನ್ಮ ಪಡೆದು ಸಾಧನ ಮಾಡಬೇಕೆಂದು ಶಾಸ್ತ್ರಗಳು ಪ್ರತಿಪಾದಿಸುತ್ತಿವೆ. ಆದ್ದರಿಂದ ಇಲ್ಲಿ ತಿಳಿಯ ಬೇಕಾದ ಗುಟ್ಟೆಂದರೆ, ಕಾಯವನ್ನು ಹೊಂದಿ ಇರುವಾಗಲೇ ಜೀವಾತ್ಮವು ಪರಮಾತ್ಮನನ್ನು ಸೇರಿ ಯೋಗಿಯಾಗಬೇಕು. "ಜೀವಾತ್ಮ ಪರಮಾತ್ಮ ಸಂಯೋಗೋ ಯೋಗ ಇತ್ಯುಚ್ಯತೇ". ಯೋಗಿಯಾಗುವ ಮುನ್ನವೇ ಜನನ-ಮರಣ ಚಕ್ರದಿಂದ ಕೊನೆಯ ಬಿಡುಗಡೆಯನ್ನು ಕಾಯದಲ್ಲಿ ಇರುವಾಗಲೇ ಸೇರಬೇಕು.

ಆಯು ಕ್ಷೀಣಿಸುವುದು ಅವನಿಯಲಿ ; ಮಾರುತ-
ಪ್ರಿಯತೆಯೊದೊಡಾಗ ಬೆಳೆಯಬಹುದು.
ಕಾಯವನು ಭರಿಸುತ ಕಲ್ಪವ ಕಾಣಭೋ !
ವಿಶ್ವದಾಭಿರಾಮ ಕೇಳು ವೇಮ.





'ಜಾತಸ್ಯ ಹಿ ಧ್ರುವೋ ಮೃತ್ಯುಃ'. ಜನಿಸಿದವನಿಗೆ ಸಾವು ನಿಶ್ಚಿತ. ಹಾಗಾಗಿ ಈ ಭೂಮಿಯಲ್ಲಿ ಆಯುಸ್ಸು ಕ್ಷೀಣಿಸುತ್ತ ಹೋಗುತ್ತದೆ. ಯಾವಾಗ ಮಾರುತ ಪ್ರಿಯತೆಯಾಗುವುದೋ, ಅಂದರೆ ಪ್ರಾಣಾಯಾನು ಮೂಲಕ ಉಸಿರಾಟವನ್ನು ನಿಯಮನಗೊಳಿಸುವನೋ, ಆಗ ಆಯುವು ಬೆಳೆಯುತ್ತದೆ. ಕಾಯವನ್ನು ಪೋಷಿಸುತ್ತ ಅದರ ಕಲ್ಪವನ್ನು ಅಂದರೆ ಪ್ರಲಯವನ್ನು ಕಾಣಿರಿ.

ಉಕ್ಕು ಸುಧೆಯ ಮಾಡಿ, ಉಳಿಸಿ ತಿನ್ನುವವನು,
ಉಕ್ಕು ತಾನು ಸೇರಿ, ಉಂಟು ಜಗದಿ.
ಉಕ್ಕು ಸುಣ್ಣ ತಿನಲು ಎಲ್ಲಿಯದೋ ಕಲ್ಪ ?
ವಿಶ್ವದಾಭಿರಾಮ ಕೇಳು ವೇಮ.

ಉಕ್ಕನ್ನು ಪುಡಿ ಪುಡಿ ಮಾಡಿ, ಹಾಲಿನಲ್ಲಿ ಸೇರಿಸಿ, ಉಕ್ಕು ಸುಧೆಯನ್ನಾಗಿಸಿ, ಮಾಡಿಟ್ಟು ಕ್ರಮೇಣ ನಿಯಮಿತವಾಗಿ ಸೇವಿಸುವವನು, ಉಕ್ಕು ತನ್ನಲ್ಲಿ ಸೇರಿ, ಜಗದಲ್ಲಿ ಜೀವಿಸುವನು. ಉಕ್ಕು ಸುಣ್ಣ ಅಂದರೆ ಚೂರ್ಣ ಇಲ್ಲವೆ ಹುಡಿಯನ್ನು ತಿಂದರೆ ಕಲ್ಪ ಅಂದರೆ ಆಯುವಿನ ನಾಶವು ಎಲ್ಲಿಯದೋ ?

ಉಕ್ಕು ಶುದ್ಧಿ ಗೆಯ್ದು, ಉಳಿಸಿ ತಿನ್ನುವವನು,
ಉಕ್ಕು ದಿಟವು ಅಂತೆ ಉಂಟು ಜಗದಿ.
ಉಕ್ಕು ಚೂರ್ಣ ತಿನಲು ಒಪ್ಪವಿಹುದು ಕಲ್ಪ.
ವಿಶ್ವದಾಭಿರಾಮ ಕೇಳು ವೇಮ.

ಉಕ್ಕನ್ನು ಇತರ ಧಾತುಗಳಿಂದ ಬೇರ್ಪಡಿಸಿ, ಶುದ್ಧ ಮಾಡಿ, ಅದನ್ನು ಸ್ವಲ್ಪ ಸ್ವಲ್ಪ ತಿನ್ನುವವನು ಉಕ್ಕಿನಂತೆ ದಿಟ್ಟನಾಗಿ ಜಗದಲ್ಲಿ ಇರುವನು. ಉಕ್ಕನ್ನು ಚೂರ್ಣಗೊಳಿಸಿ, ನಿಯಮಿತವಾಗಿ ತಿಂದರೆ ಕಲ್ಪವು ಅಂದರೆ ಆಯುಸ್ಸು ಒಪ್ಪವಾಗಿರುವುದು.

ಉಕ್ಕು ಚೂರ್ಣ ತಿನಲು ಉಡುಗುವುದು ಕಷ್ಟವು.
ಉಕ್ಕು ಚೂರ್ಣ ತಿನಲು ಉಡುಗಿತು ಕ್ಷಯ.
ಉಕ್ಕು ಚೂರ್ಣ ತಿನಲು ಉಡುಗುವುದು ಕರ್ಮವು.
ವಿಶ್ವದಾಭಿರಾಮ ಕೇಳು ವೇಮ.

ಶರೀರಕ್ಕೆ ಅನೇಕ ಕಷ್ಟಗಳುಂಟು. ಉಕ್ಕು ಚೂರ್ಣವನ್ನು ತಿಂದರೆ ಅನೇಕ ದೇಹಬಾಧೆಗಳು ಉಡುಗುವವು. ಉಕ್ಕು ಚೂರ್ಣ ತಿಂದರೆ ಕ್ಷಯವು ಉಡುಗುತ್ತದೆ. ಅದೇ ರೀತಿ, ನಾವು ಮಾಡುತ್ತಿರುವ ಕರ್ಮಗಳಿಂದಾಗಿ ಬಲು ವಿಧದ ಅಹಿತ ಕರ್ಮ ಫಲಗಳು ಶರೀರವನ್ನು ಬಾಧಿಸಬಹುದು. ಉಕ್ಕು ಚೂರ್ಣ ತಿಂದರೆ ಅವೆಲ್ಲ ಉಡುಗುತ್ತದೆ. ಉಕ್ಕು ಚೂರ್ಣ ಮಾಡುವ ವಿಧಾನವನ್ನೂ, ಅದನ್ನು ಸೇವಿಸುವ ಪ್ರಮಾಣವನ್ನೂ, ತಜ್ಞರಿಂದ ಅರಿತುಕೊಂಡು ಇಂಥ ಮದ್ದಿನ ಪ್ರಯೋಗಕ್ಕಿಳಿಯಬೇಕು.

ಶುದ್ಧರೆಲ್ಲ ಕೂಡಿ, ಶೋಧಿಸುತ, ಶೋಧಿಸುತ,
ಶುದ್ಧಿ ಗೆಯ್ದು ಉಕ್ಕು ಸುಣ್ಣ ಮಾಡಿ ,
ಶುದ್ಧಿಗೆ ಪ್ರಥಮವು ಸುಣ್ಣವಲ್ಲವೆ ವೇಮ ?
ವಿಶ್ವದಾಭಿರಾಮ ಕೇಳು ವೇಮ.

ಮನೋಶುದ್ಧಿ ಹೊಂದಿದವರು ಸೇರಿ, ಉಕ್ಕನ್ನು ಶೋಧಿಸಿ ಶೋಧಿಸುತ್ತ ಎಲ್ಲ ಮಲಿನತೆಯನ್ನು ಇಲ್ಲವಾಗಿಸಿ, ಉಕ್ಕನ್ನು ಚೂರ್ಣವಾಗಿ ಮಾಡಬೇಕು. ಶುದ್ಧಿಯ ನಂತರ ಪ್ರಥಮವಾಗಿ ಉಳಿಯುವುದು ಸುಣ್ಣವಲ್ಲವೇನು ?

ವೇಮನ ಹೇಳಿದ ಕಲ್ಪವು,
ಯಾ ಮಾನವನಿದ್ದರೂ ಎದೆಯಲೂಹಿಸುತಾ
ತಾಮಸವಾಗುವುದೇತಕೆ ?
ವೇಮನನೇ ಸಿದ್ಧನರಿವ, ವಿಧವಿದು, ವೇಮಾ.

ವೇಮನರು ಹೇಳಿದ ಜಗತ್ತಿನ ಕಲ್ಪ ಎಂದರೆ ಪ್ರಳಯದ ಬಗೆಗೆ, ವ್ಯಕ್ತಿಯ ಕಾಯಕಲ್ಪದ ಬಗೆಗೆ, ಯಾವನೊಬ್ಬ ಮಾನವನು ತನ್ನ ಹೃದಯದಲ್ಲಿ ಊಹಿಸುತ್ತ ಆಲಸಿಯಾಗುವುದೇತಕ್ಕೆ ? ವೇಮನನು ಸಿದ್ಧಯೋಗಿ ಇರುವನು. ಅವನು ಇದೆಲ್ಲವನ್ನು ಅರಿಯುವ ವಿಧವೇ ಇದೆಲ್ಲವಾಗಿದೆ. ಇತರರು ಪ್ರಳಯ ಕುರಿತು ಚಿಂತಿಸುವುದೂ, ಸುಮ್ಮನೆ ಊಹಿಸುವುದೂ ಬೇಡ.

ವೇಮನರು ಕಾಯಕಲ್ಪ ಕುರಿತು ಪ್ರಸ್ತಾಪಿಸಿದ್ದಾರೆ. ಇದು ಆಯುರ್ವೇದದಲ್ಲಿ ವಿವರಿಸ್ಪಟ್ಟಿದೆ. ಆಸ್ಥೆಯುಳ್ಳವರು ಸೂಕ್ತ ಗ್ರಂಥಗಳನ್ನು ಅಭ್ಯಸಿಸಬೇಕು. ಕಾಯಕಲ್ಪದ ಚಿಕಿತ್ಸೆ ಪಡೆಯುವ ಮುನ್ನ ಅದಕ್ಕೆ ಚಿಕಿತ್ಸೆ ಪಡೆಯುವ ವ್ಯಕ್ತಿಯ ಪಾತ್ರತೆ ಏನು ? ಚಿಕಿತ್ಸಕನ ಅರ್ಹತೆ ಏನು ? ಎಂದು ಗುರುತಿಸುವುದು ಮುಖ್ಯ. ಕಾಯಕಲ್ಪದ ಒಂದು ನಿದರ್ಶನವನ್ನು ಇಲ್ಲಿ ತಿಳಿಯುವುದು ಅಗತ್ಯವೆನಿಸುತ್ತದೆ.

ಕ್ರಿ.ಶ. 1838 ರಲ್ಲಿ ಪಟಿಯಾಲಾದ ಯುವರಾಜರಾಗಿದ್ದ ಕೃಷ್ಣಸಿಂಗರಿಗೆ ದಿಲ್ಲಿಯ ಕೊನೆಯ ಮೊಘಲ ಚಕ್ರವರ್ತಿ ಬಹದೂರ ಶಾ ಜಫರ್ ಆನುಷಂಗಿಕವಾಗಿ ನೀಡಿದ, ಹಿತವಚನವು ಆ ಯುವರಾಜನನ್ನು ವಿರಕ್ತನನ್ನಾಗಿ ಮಾಡಿತು. ಅವರು ಹರಿದ್ವಾರಕ್ಕೆ ಹೋಗಿ ಅಲ್ಲಿ ಅಯೋಧ್ಯೆಯ ಪೂರ್ವ ನಿವಾಸಿಯಾದ, ತಮ್ಮ ಹೆಸರು ಹೇಳುತ್ತಿರದ, ಯೋಗಿಯಿಂದ ಹಠಯೋಗ ಪ್ರಕ್ರಿಯೆಗಳನ್ನು ಅಭ್ಯಸಿಸಿ, ಮುಂದೆ ಜ್ಞಾನ ಮಾರ್ಗದಲ್ಲಿಯೂ ಉಪದೇಶ ಪಡೆದರು. ಯುವರಾಜ ಕೃಷ್ಣಸಿಂಗರು ವಿಷ್ಣು ದಾಸ ಎಂಬ ದೀಕ್ಷಾ ನಾಮ ಪಡೆದರು. ಆರು ವರ್ಷ ಕಾಲ ದೀರ್ಘ ತಪಶ್ಚರ್ಯೆ ಮಾಡಿದರು. ಹಲವಾರು ಸಿದ್ಧಿಗಳನ್ನೂ ಸಂಪಾದಿಸಿದರು. ಕೊನೆಗೆ ಬದರಿ ಯಾತ್ರೆ, ನೇಪಾಳ ಯಾತ್ರೆ ಮುಗಿಸಿ, ಮುಪ್ಪಿನ ಕಾಲಕ್ಕೆ ಅಂದರೆ ತೊಂಭತ್ತೆಂಟು ವರ್ಷ ವಯಸ್ಸಿನಲ್ಲಿ ಪೂರ್ವಾಭಿಮುಖವಾಗಿ ಪಯಣಿಸುತ್ತ ಢಾಕಾ, ನಾಗಾಲ್ಯಾಂಡ, ಮಣಿಪುರಗಳನ್ನು ಸುತ್ತಿ ಪರಶುರಾಮ ಕುಂಡದಲ್ಲಿ ತಪಸ್ಸು ಮಾಡಲೆಂದು ಅಸ್ಸಾಮದ ಗುಡ್ಡಗಾಡು ಪ್ರದೇಶ ತಲುಪಿದ್ದರು. ಅಲ್ಲಿ ಅವರಿಗೊಬ್ಬ ಇಳಿವಯಸ್ಸಿನ ಮಹಾತ್ಮನ ಭೆಟ್ಟಿಯಾಯಿತು. ಅವನೊಂದು ಕುಟೀರದಲ್ಲಿ ವಾಸವಾಗಿದ್ದನು. ಪರಸ್ಪರ ಪರಿಚಯವಾದ ನಂತರ, ಮಧುರ ಬಾಂಧವ್ಯ ಕುದುರಿತು. ಪರಸ್ಪರ ಗೌರವಾದರಗಳು ಬೆಳೆದವು. ಅವರನ್ನು ಕುರಿತು ವಿಷ್ಣುದಾಸರು ತಮ್ಮ 98 ರ ವಯಸ್ಸನ್ನು ತಿಳಿಸಿ ತಾವಿನ್ನು ಈ ಪರಶುರಾಮ ಕುಂಡದ ಬಳಿ ಅಂತಿಮ ತಪಸ್ಸು ಮಾಡಿ, ಕೆಲ ದಿನಗಳಲ್ಲಿ ದೇಹ ತ್ಯಾಗ ಮಾಡುವೆ ಎಂದು ತಿಳಿಸಿದರು. ಅತಿಥೇಯ ಅಸ್ಸಾಮಿ ಮಹಾತ್ಮನು ಅದನ್ನು ಕೇಳಿ, ಸ್ವಲ್ಪ ಧ್ಯಾನಿಸಿ ಬಳಿಕ ಹೀಗೆ ನುಡಿದನು. "ಪರಮ ಹಂಸ ಯೋಗಿಗಳೇ ! ನಾನು ತಮ್ಮ ಸೇವೆ ಮಾಡಬಯಸುತ್ತೇನೆ. ತಮ್ಮ ಶರೀರ, ಅಂಗಾಂಗಗಳು ಮತ್ತು ಸಹಜ ಶಕ್ತಿಗಳು ಕುಗ್ಗಿರುವುದು





ನನಗೆ ಮನದಟ್ಟಾಗಿದೆ. ನನಗೆ ಕಾಯಕಲ್ಪ ಚಿಕಿತ್ಸೆಯ ವಿಧಾನ ತಿಳಿದಿದೆ. ನಾನು ಅದಕ್ಕೆ ಬೇಕಾದ ಔಷಧಿಗಳನ್ನು ತಯಾರಿಸುತ್ತೇನೆ. ಈ ಕಾಯಕಲ್ಪ ಚಿಕಿತ್ಸೆಯ ಪೂರ್ಣಫಲ ಪಡೆಯಲು ಶತಾಯುಷಿಗಳಾದ ನೀವು ತುಂಬಾ ಅರ್ಹರು. ನೀವು ಸಹಕರಿಸಲು ಒಪ್ಪುವಿರಾದರೆ, ಚಿಕಿತ್ಸೆಯನ್ನು ಪ್ರಾರಂಭಿಸೋಣ" ಎಂದರು. ಆಗ ವಿಷ್ಣುದಾಸರು "ಮರಳಿ ಯೌವನ ಪಡೆಯುವ ಹಂಬಲ ನನಗೇನೂ ಇಲ್ಲ. ಆದರೆ ನಿಮ್ಮ ಚಿಕಿತ್ಸೆಯ ಪ್ರಯೋಗವು ನನ್ನ ಮೇಲೆ ಆಗಬೇಕೆಂಬುದು ಈಶ್ವರೇಚ್ಛೆ ಇದ್ದಂತೆ ಕಾಣುತ್ತದೆ. ಏಕೆಂದರೆ ಅಯಾಚಿತವಾಗಿ ನನಗೆ ಇದೆಲ್ಲ ಒದಗಿ ಬಂದಿದೆ. ನಿಮ್ಮ ಪ್ರಯೋಗಕ್ಕೆ ನಾನು ಸಮ್ಮತಿಸುವೆ" ಎಂದರು.

ಆಸ್ಸಾಮ ಮಹಾತ್ಮನು ತನ್ನ ಕುಟೀರದ ಪಕ್ಕದಲ್ಲಿ ಇನ್ನೊಂದು ಕುಟೀರವನ್ನು ನಿರ್ಮಿಸಿ, ಅದರ ನೆಲದ ಮೇಲೆ ದಪ್ಪವಾಗಿ ಒತ್ತದ ಹುಲ್ಲನ್ನು ಹರಡಿದರು. ಚಿಕಿತ್ಸಕ ಮಹಾತ್ಮರು ತಿಳಿಸಿದಂತೆ, ವಿಷ್ಣುದಾಸರು ಆ ಬೆಚ್ಚನೆಯ ಹುಲ್ಲಿನ ಹಾಸುಗೆಯ ಮೇಲೆ ಪವಡಿಸಿದರು. ಮನಸ್ಸನ್ನು ನಿರ್ಮಲಗೊಳಿಸಿ, ಚಿಂತಾರಹಿತವನ್ನಾಗಿ ಮಾಡಿ, ತಮ್ಮ ದೇಹವನ್ನು ಆ ಮಹಾತ್ಮನ ಚಿಕಿತ್ಸೆಗೆ ಒಪ್ಪಿಸಿದರು.

ಆ ಮಹಾತ್ಮರು ಅವರ ಕುಟೀರದಲ್ಲಿ ಒಂದು ಬಟ್ಟಲು ಔಷಧ ಚೂರ್ಣವನ್ನೂ ಇನ್ನೊಂದರಲ್ಲಿ ಹಸುವಿನ ಹಾಲನ್ನೂ ಇಟ್ಟು, ಅವುಗಳನ್ನು ಯಾವಾಗ, ಯಾವ ಪ್ರಮಾಣದಲ್ಲಿ ಸೇವಿಸಬೇಕೆಂಬುದನ್ನೂ ಬರೆದಿಟ್ಟರು. ತಾವು ದಿನಾಲು ಒಮ್ಮೆ ವಿಷ್ಣುದಾಸರ ಕುಟೀರಕ್ಕೆ ಭೆಟ್ಟಿ ಕೊಡುತ್ತಿದ್ದರು. ಚಿಕಿತ್ಸಕ ಹೊರತು ಬೇರಾರೂ ವಿಷ್ಣು ದಾಸರನ್ನು ಭೆಟ್ಟಿಯಾಗುವಂತಿರಲಿಲ್ಲ. ಅವರ ಮಲ ಮೂತ್ರ ವಿಸರ್ಜನೆಯೂ ಕುಟೀರದೊಳಗೇ ನಡೆಯಬೇಕಿತ್ತು.

ಮೊದಲ ಐದು ದಿನ, ವಿಷ್ಣುದಾಸರು ಪೂರ್ಣ ಪ್ರಜ್ಞೆಯಲ್ಲಿದ್ದರು. ಆರನೆಯ ದಿನ ವೈದ್ಯ ಮಹಾತ್ಮರು, ಔಷಧಿ ಮತ್ತು ಹಾಲು ತೆಗೆದುಕೊಂಡು ಕುಟೀರವನ್ನು ಪ್ರವೇಶಿಸಿದಾಗ ವಿಷ್ಣುದಾಸರು ಅರೆ ಪ್ರಜ್ಞಾವಸ್ಥೆಯಲ್ಲಿದ್ದರು. ಆ ದಿನ ಸಾಯಂಕಾಲ ವಿಷ್ಣುದಾಸರು ಸಂಪೂರ್ಣ ಪ್ರಜ್ಞಾಹೀನರಾದರು. ಇಪ್ಪತ್ತೆರಡನೆಯ ದಿನ ವಿಷ್ಣುದಾಸರಿಗೆ ಪ್ರಜ್ಞೆ ಮರಳಿ ಬಂತು. ಅವರ ಕಣ್ಣೆದುರಿನ ಮಂಜು ಮಾಯವಾಗಿತ್ತು. ಹಲ್ಲಿಲ್ಲದ ಬಾಯಿಯಲ್ಲಿ ಹಲ್ಲು ಮೂಡಿದ್ದವು. ತಮ್ಮ ತಲೆಗೂದಲು, ಗಡ್ಡ ಮೀಸೆಗಳು ಕಪ್ಪಾಗಿರುವುದನ್ನು ಕಂಡು ವಿಷ್ಣುದಾಸರು ಚಕಿತರಾದರು.

ಮುಂದೆ ಅರವತ್ತೆಂಟು ದಿನಗಳ ವರೆಗೆ ಚಿಕಿತ್ಸೆ ಮುಂದುವರಿಯಿತು. ಅದು ಶಾಸ್ತ್ರ ವಿಧಿ. ಕಾಯಕಲ್ಪ ಚಿಕಿತ್ಸೆಯ ಪೂರ್ಣಾವಧಿ ವಿಷ್ಣುದಾಸರು, ಏಕಾಂಗಿತನ, ನಿಶ್ಚಲ ಚಿತ್ತಮೌನ ಮತ್ತು ಆಸನಗಳ ಅಭ್ಯಾಸಗಳಲ್ಲಿ ಅನುಭವಿಗಳಿದ್ದುದರಿಂದ ಈ ಕಾಲ ಕಳೆಯುವುದು ಅವರಿಗೆ ಸುಲಭವೇ ಆಗಿತ್ತು.

ಕೊನೆಗೆ ವಿಷ್ಣುದಾಸರಲ್ಲಾದ ಅದ್ಭುತ ರೂಪಾಂತ್ರಕರಣದಿಂದ ಚಿಕಿತ್ಸಕ ಮಹಾತ್ಮರಿಗೂ ,ರೋಗಿ ವಿಷ್ಣುದಾಸರಿಗೂ ಅಮಿತ ಸಂತಸವಾಯಿತು.

ಬಳಿಕ ಆಸಾಮ ಮಹಾತ್ಮರ ಬಿನ್ನಹದ ಮೇರೆಗೆ ವಿಷ್ಣುದಾಸರು ತಾವೇ ಚಿಕಿತ್ಸಕರಾಗಿ ಆ ವೃದ್ಧ ಮಹಾತ್ಮರಿಗೆ ಕಾಯಕಲ್ಪ ಚಿಕಿತ್ಸೆಯನ್ನು ಮಾಡಿದರು.

ಕಾಯಕಲ್ಪ ಕುರಿತು ಓದುಗರಿಗೆ ನಿಚ್ಚಳ ಅಭಿಪ್ರಾಯವಿರಲೆಂದು ಮತ್ತು ಈ ಚಿಕಿತ್ಸೆ

ಫಲವೀಯಲು ಯೋಗ ಸಾಧನದ ಮೂಲಕ ಮನಸ್ಸು ಊರ್ಧ್ವ ಮಟ್ಟಕ್ಕೇರಿರಬೇಕಾದುದು ಅಗತ್ಯವೆಂಬುದನ್ನು ತಿಳಿಯಪಡಿಸಲು ಮೇಲಿನ ದೃಷ್ಟಾಂತವನ್ನು ವಿಶದಪಡಿಸಿದ್ದೇವೆ.

ತಪಸ್ಸಿನಲ್ಲಿಯೇ ತಮ್ಮ ವಿರಕ್ತ ಜೀವನವನ್ನೆಲ್ಲ ಕಳೆದ ವಿಷ್ಣು ದಾಸರಿಗೆ ಅವರ ಪರಿಚಿತರು ತಪಸ್ವೀಜೀ ಮಹಾರಾಜ ಎಂದೇ ಕರೆಯುತ್ತಿದ್ದರು. ಇವರು 185 ವರ್ಷ ದೀರ್ಘಾಯುಸ್ಸು ಬಾಳಿದರು. ಬೆಂಗಳೂರು ಬಳಿ ವಿಷ್ಣುಧಾಮವೆಂಬ ಆಶ್ರಮವನ್ನು ಸ್ಥಾಪಿಸಿದ್ದಾರೆ. ಕ್ರಿ.ಶ. 1939 ರಿಂದ ಅನೇಕ ಬಾರಿ ಬೆಂಗಳೂರು, ಮೈಸೂರ, ಹೊಸಪೇಟೆಗಳನ್ನು ಸಂದರ್ಶಿಸಿ ಅನೇಕ ಪವಾಡ ಸದೃಶ ಘಟನೆಗಳಿಗೆ ಕಾರಣರಾಗಿದ್ದಾರೆ. ನನ್ನ ಸೋದರ ದಿ. ಕೆ. ಎಚ್. ಪಾಟೀಲರ ಆತ್ಮೀಯ ಮಿತ್ರರಾದ ಮಾಜಿ ಸಂಸದ ಶ್ರೀ ಸಚ್ಚಿದಾನಂದ ಸ್ವಾಮಿಯವರು ವಿಷ್ಣುದಾಸ (ತಪಸ್ವೀಜೀ ಮಹಾರಾಜ) ರಿಂದ ದೀಕ್ಷೆ ಪಡೆದು ಅವರ ಅಂತ್ಯ ಕಾಲದ ವರೆಗೆ ಸೇವೆ ಗೈದ್ದುವರು.

-----

ನಾನು ಹುಬ್ಬಳ್ಳಿಯಲ್ಲಿ ವಾಸಿಸುತ್ತಿದ್ದಾಗ, ಮಾಜಿ ಮಂತ್ರಿ ದಿ. ಕಲ್ಲನಗೌಡ ಎಫ್. ಪಾಟೀಲರೊಂದಿಗೆ ಶ್ರೀ ಶ್ರೀ ಶಂಕರ ಗಿರಿಜಿ ಸ್ವಾಮಿಗಳು ನಾನಿರುವಲ್ಲಿಗೆ ಬಂದಿದ್ದರು. ದಿ. ಪಾಟೀಲರು ಮುಂಬಯಿ ಮತ್ತು ಬೆಂಗಳೂರುಗಳಲ್ಲಿರುವ ಸ್ವಾಮಿಗಳ ಶಿಷ್ಯರ ಮನೆಗಳ ಹಿರಿಯರನ್ನು ವಿಚಾರಿಸಿ ಸಂಗ್ರಹಿಸಿದ ಮಾಹಿತಿಯ ಮೇರೆಗೆ ಸ್ವಾಮೀಜಿಗೆ ಕ್ರಿ. ಶ. 1968 ರಲ್ಲಿ 450 ಕ್ಕಿಂತ ಹೆಚ್ಚು ವರ್ಷ ವಯಸ್ಸಾಗಿತ್ತು. ಅವರು ಹೆಚ್ಚಾಗಿ ಗಿರಿನಾರ ಪರ್ವತ ಪ್ರದೇಶದಲ್ಲಿ ಸಂಚರಿಸುತ್ತಿದ್ದರು. ಹನುಮನಮಟ್ಟಿಯಲ್ಲಿ ಒಂದು ಜನರಲ್ ಹಾಸ್ಟೆಲಿಗೆ ಅವರ ನಾಮಕರಣ ಮಾಡಲಾಗಿದೆ.

ಬಳ್ಳಾರಿಯ ನೆರೆ ಗ್ರಾಮವಾದ ಅಲಿಪುರದಲ್ಲಿ, ದೀರ್ಘಕಾಲ ವಾಸಿಸಿ ಮಠ ಕಟ್ಟಿಸಿದ ಅಲೀಪುರ ಬಾಬಾ ಎಂದೇ ಖ್ಯಾತರಾದ ಶರಣರೊಬ್ಬರನ್ನು ನಾನು ಕ್ರಿ. ಶ. 1968ರಲ್ಲಿ ಧಾರವಾಡದಲ್ಲಿ ಆಗೀಗ ಭೆಟ್ಟಿಯಾಗುತ್ತಿದ್ದೆ. ಅವರಿಗೆ 130 ಕ್ಕಿಂತ ಹೆಚ್ಚು ವಯಸ್ಸಾಗಿತ್ತು. ನಾನೇ ಅವರಿಂದಲೇ ಕೇಳಿ ಟಿಪ್ಪಣಿ ಮಾಡಿಕೊಂಡ ಅಂಕಿಗಳಿಂದ ಅವರ ವಯಸ್ಸನ್ನು ಖಚಿತಪಡಿಸಿಕೊಂಡಿದ್ದೇನೆ. ಅವರು ಧಾರವಾಡದ ಶಾಲ್ಮಲಾ ನದಿಯ ಉಗಮ ಸ್ಥಳವಾದ ಸೋಮೇಶ್ವರದಲ್ಲಿ ತಮ್ಮದೊಂದು ಆಶ್ರಮವನ್ನು ಆಗ ಕಟ್ಟಿಸುತ್ತಿದ್ದರು. ಮುಂದೆ, ನಂಜನಗೂಡಿನ ಬಳಿ ಕಪಿಲಾ ಸಂಗಮದಲ್ಲಿ ಕೊನೆಯ ಆಶ್ರಮ ಕಟ್ಟಿಸಿ ಅಲ್ಲಿಯೇ ಐಕ್ಯರಾದರು.

------

ನಾನು ತುಂಬಾ ಶ್ರದ್ಧಾಭಕ್ತಿ ಹೊಂದಿರುವ ಬೆಂಗಳೂರಿನ ಕೈಲಾಸ ಆಶ್ರಮದ ಸಂಸ್ಥಾಪಕರಾದ ಶ್ರೀ ಶ್ರೀ ತಿರುಚಿ ಸ್ವಾಮಿಗಳಿಗೆ ಜ್ಞಾನ ಗುರುವಾದ ಶ್ರೀ ಶ್ರೀ ಶಿವಪುರಿ ಮಹಾರಾಜರು ನೇಪಾಳದ ಖಟಮಾಂಡುವಿನ ಬಳಿಯ ಪಶುಪತಿನಾಥ ದೇವಾಲಯದ ಸಮೀಪ ಶಿವಪುರಿ ಬೆಟ್ಟದಲ್ಲಿ ಕುಟೀರವೊಂದರಲ್ಲಿ ತಮ್ಮ ಕೊನೆಗಾಲವನ್ನು ಕಳೆದರು. ಶ್ರೀ ಶ್ರೀ ಶಿವಪುರಿ ಸ್ವಾಮಿಗಳು 165 ವರ್ಷಕಾಲ ಬದುಕಿದ್ದರು. (ಈ ಲೇಖಕನು ಅವರ ಚರಿತ್ರೆಯನ್ನು ಕನ್ನಡಿಸಿದ್ದರೂ ಅದು ಇಂದಿಗೂ ಅಪ್ರಕಟಿತವಾಗಿದೆ). ಅವರು ಮೊದಲು ಸಿಗರೇಟು ಸೇದುತ್ತಿರಲಿಲ್ಲ. ಕೇರಳದ ನಂಬೂದಿರಿ ಕುಲ ಸಂಜಾತ ಶ್ರೀ ಶಿವಪುರಿ ಸ್ವಾಮೀಜಿ ತಮ್ಮ 120 ನೆಯ ವಯಸ್ಸಿನಲ್ಲಿ ಕ್ಷಯ





ರೋಗಕ್ಕೆ ಬಲಿಯಾದಾಗ, ವಿಚಿತ್ರವೆನ್ನುವಂತೆ ಸಿಗರೇಟ ಸೇದಹತ್ತಿ ತಮ್ಮ ಕ್ಷಯ ರೋಗವನ್ನು ವಾಸಿ ಮಾಡಿಕೊಂಡಿದ್ದರು. ಅವರಿಗೆ ಕಾಯಕಲ್ಪ ತಿಳಿದಿತ್ತು.

-----

ಕೊನೆಯದಾಗಿ ನನ್ನ ಹುಟ್ಟೂರಾದ ಹುಲಕೋಟಿಯ ನೆರೆ ಗ್ರಾಮದಲ್ಲಿ ತಮ್ಮ ಅಂತಿಮ ಕಾಲವನ್ನು ಕಳೆದ ಹೊಸಹಳ್ಳಿಯ ಬೂದಿಸ್ವಾಮಿ ಎನ್ನುವ ಶರಣರು ಜನವಾಡಿಕೆಯಂತೆ 770 ವರ್ಷ ಕಾಲವನ್ನು ಕಳೆದ ಮಹಾ ಯೋಗಿಗಳಾಗಿದ್ದರು. ಹಗಲು ಹೊತ್ತು ಊರ ಹೊರಗೆ ಪ್ರಭುದೇವರ ಗದ್ದುಗೆಯ ಬಳಿ ಕುಳಿತು ಕಾಲ ಕಳೆಯುತ್ತಿದ್ದರು. ರಾತ್ರಿಯಾದೊಡನೆ ಸ್ಮಶಾನಕ್ಕೆ ತೆರಳಿ ಸಾಧನ ನಿರತರಾಗುತ್ತಿದ್ದರು. ಈಗ ಇವರ ಮಠವು ಹೊಸಹಳ್ಳಿಯಲ್ಲಿದೆ. ಇದೇ ರೀತಿ, ಏಳು ಶತಮಾನ ಕಾಲ ಬಾಳಿದ ಇನ್ನೊಬ್ಬ ಯೋಗಿ ಎಂದರೆ ಅಂಕಲಗಿಯ ಅಡವಿ ಸ್ವಾಮಿ. ಈ ಸ್ವಾಮಿಗಳು ಮಾರ್ಕಂಡೇಯ ನದಿಯ ದಂಡೆಯ ಮೇಲೆ ತಪಸ್ಸು ಮಾಡುತ್ತಿದ್ದರೆಂದು ತಿಳಿದು ಬಂದಿದೆ. ಇವರ ಗುರುಮೂರ್ತಿಯಾಗಿರಬಹುದಾದ ಶ್ರೀ ಸಿದ್ಧೇಶ್ವರರ ದೇವಾಲಯವು ಅಂಕಲಗಿ ಮಠದ ಆವಾರದಲ್ಲಿದೆ.

-----

ಕಾಯಕಲ್ಪದ ಆಯು ವರ್ಧಮಾನ ಪ್ರಕ್ರಿಯೆಯನ್ನು ತಿಳಿದೆವು. ಇನ್ನು ಹಲವಾರು ರೋಗ ಬಾಧೆಗಳಿಗೆ ವಿಶೇಷ ಔಷಧಿ ಚಿಕಿತ್ಸೆಯೂ ಈ ಪ್ರಕ್ರಿಯೆಯಲ್ಲಿ ಬರುತ್ತದೆ.

ಆ ||
ಉಕ್ಕು ಚೂರ್ಣ ತಿನಲು ಉಂಟು ಹಗುರವಾಗಿ.
ಉಕ್ಕು ಚೂರ್ಣ ತಿನಲು ಉಡುಗಿ ವ್ಯಾಧಿ,
ಉಕ್ಕು ಚೂರ್ಣಕಿಂತ ಉರ್ವಿಕಲ್ಪವಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಆಯುರ್ವೇದ ಪದ್ಧತಿಯಿಂದ ಸಿದ್ಧಪಡಿಸಿದ ಉಕ್ಕು-ಚೂರ್ಣವನ್ನು ನಿಯಮಿತವಾಗಿ ಸೇವಿಸಿದರೆ, ಮೈ ಹಗುರಾಗುತ್ತದೆ. ಆಲಸ್ಯ-ಬೇಸರಿಕೆಗಳು ಮಾಯವಾಗುತ್ತವೆ. ದೇಹಕ್ಕೆ ತಗಲಿದ ಅನೇಕ ವ್ಯಾಧಿಗಳು ದೂರಾಗುತ್ತವೆ. ಅಷ್ಟೇ ಏಕೆ ? ಉಕ್ಕು ಚೂರ್ಣವೇ ಆಯುಃ ಪ್ರಮಾಣವನ್ನು ನಿರ್ಧರಿಸುತ್ತದೆ. ಅದಕ್ಕಿಂತ ಬೇರೆ ಕಲ್ಪವು ಉರ್ವಿಯಲ್ಲಿ ಇಲ್ಲ.

ಆ ||
ಶ್ವಾನ ಕಡಿದೊಡಾಗ ಚೀರದಂತೆ ಹಿಡಿದು,
ಪಕ್ಕೆ ಮುರಿಯೆ ಹೊಡೆದು ಪವಡಿಸುತ್ತ,
ನಿಂಬೆ ಕಾಯಿ ತಂದು ನೆತ್ತಿಗೆ ತಿಕ್ಕಿದರೆ,
ಶ್ವಾನ ವಿಷವು ಇಳಿದು ಶಾಂತ ವೇಮ.

ಅನೇಕ ಬಾರಿ ಹುಚ್ಚು ನಾಯಿಗಳು ಕಚ್ಚುವುದುಂಟು. ಆಗ ಅದರ ವಿಷವೇರಿ ಕಡಿಸಿಕೊಂಡವನಿಗೆ ಸ್ಮೃತಿ ಭ್ರಮಣೆಯಾಗಿ ಅವನೂ ನಾಯಿಯಂತೆ ಕೂಗತೊಡಗುತ್ತಾನೆ. ಹೀಗೆ ಚೀರದಂತೆ ಹಿಡಿದು, ಅವನ ಪಕ್ಕೆಗೆ ಹೊಡೆದು ಮಲಗಿಸಿ, ಮಂತ್ರಿಸಿದ ಲಿಂಬೆಕಾಯಿಯನ್ನು ನೆತ್ತಿಗೆ ತಿಕ್ಕಿದರೆ, ನಾಯಿ ವಿಷವು ಇಳಿದು ಅವನು ಶಾಂತನಾಗುವನು.

ಕೊಯ್ದು ನಾಯಿ ಜಿಹ್ವೆ ಕೂಳು ಅಟ್ಟು ತಿನಲು,
ನರಿಯೆ ಆದ ತಾನು ನಿಮಿಷದಲ್ಲಿ.
ನರಿಯೆ ಆದ ಬಳಿಕ ಅರಿಯನಡವಿ ಸೇರೆ.
ವಿಶ್ವದಾಭಿರಾಮ ಕೇಳು ವೇಮ.

ನಾಯಿಯ ನಾಲಗೆಯನ್ನು ಕೊಯ್ದು ಪಾಕ ಮಾಡಿ ತಿಂದರೆ, ಅವನು ಅದರ ಪರಣಾಮವಾಗಿ ಕೂಡಲೇ ನರಿಯ ಠಕ್ಕತನವನ್ನು ಹೊಂದುವನು. ಠಕ್ಕನಾದ ಬಳಿಕ ಊರಿನಿಂದ ಹೊರ ಹಾಕಲ್ಪಟ್ಟ ಆ ಶ್ವಪಚನು ಅಡವಿ ಸೇರಬೇಕಾದ ಕಾರಣವನ್ನು ಸರಿಯಾಗಿ ಅರಿಯನು.

## ಹೇಮಕಾರಕ ವಿದ್ಯೆ :

ವೇಮನರು ತಮ್ಮ ಯೌವನದ ಆರಂಭದಲ್ಲಿ ತಾವು ಪೂರ್ವ ಸುಕೃತದಿಂದ ಪಡೆದ ಯೋಗ ಸಿದ್ಧಿಗಳಿಂದ ಈ ಜನ್ಮದಲ್ಲಿ ರಸ ಸಿದ್ಧರ ಆಯ್ಕೆಗೆ ಗುರಿಯಾದರು. ಅವರಿಗೆ ಸ್ವಭಾವತಃ ಹೆಣ್ಣಿನ ಮೋಹವೂ ಇರಲಿಲ್ಲ. ಹಣದ ಮೋಹವೂ ಇರಲಿಲ್ಲ. ಆದರೆ ಕಲೋಪಾಸನೆಯ ಆಸಕ್ತಿ ಅವರ ತಂದೆ ಕುಮಾರಗಿರಿಯ ರಕ್ತದಿಂದ ಬಂದಿತ್ತು. ಅದುವೇ ನರ್ತಕಿಯನ್ನು ಸೇರುವಂತೆ ಮಾಡಿ, ಅವಳಿಗೆ ಕುಲೀನ ಸ್ತ್ರೀಯ ಸ್ಥಾನ ಬರಲೆಂದು, ಅವಳೊಂದಿಗೆ ವಿವಾಹಕ್ಕೂ ಸಿದ್ಧವಾಗಿದ್ದರು. ಆದರೆ ಸಮಾಜ ಒಪ್ಪದ ಕಾರಣ ವೈರಾಗ್ಯಕ್ಕೆ ಹಾದಿಯಾಯಿತು. ಹೇಮದ ಮೋಹಕ್ಕೆ ಅವರ ಸಂಗಾತಿ ವಿಶ್ವಕರ್ಮ ಕುಲದ ಅಭಿರಾಮಯ್ಯನ ಸಹವಾಸವೇ ಕಾರಣ. ಆದರೆ ಈ ಸೆಳೆತಗಳಿಗೆ ತೋರಿಕೆಯ ಕಾರಣಗಳು ಇವುಗಳಾದರೂ, ಮೂಲ ಕಾರಣವು ಅವರ ಪೂರ್ವಜನ್ಮದ ಸಂಸ್ಕಾರಗಳೇ ಆಗಿದ್ದವು. ಹೆಣ್ಣಿಗಾಗಿ ರಾಜ್ಯ ಭಂಡಾರದ ನಗನಾಣ್ಯಗಳನ್ನು ಸೂರೆಗೊಂಡ ತಪ್ಪಿಗೆ ಹೇಮಕಾರಕ ಪ್ರಯೋಗಕ್ಕೆ, ಅನಿವಾರ್ಯವಾಗಿ, ಹೆಚ್ಚು ವಾಲಿದ್ದರು. ಇದನ್ನೆಲ್ಲ ಈ ಮುನ್ನ ತಿಳಿಸಿದ್ದೇವೆ. ಇಲ್ಲಿ ಮುಖ್ಯವಾಗಿ ತಿಳಿಯಬೇಕಾದುದು ನಿಮ್ನ ಧಾತುಗಳನ್ನು ಶ್ರೇಷ್ಠ ಧಾತುಗಳನ್ನಾಗಿ ಮಾಡಲು ಮಾನವನ ಯೋಗಶಕ್ತಿಯ ಅನಿವಾರ್ಯತೆ. ಧಾತುಗಳ ಅಣುಸಂರಚನೆಯು ಮಾನಸ ತರಂಗಗಳ ಸಂಘಾತದಿಂದ ನಿರ್ಣಯವಾಗುತ್ತದೆ. ಒಂದು ಅಂಗಾರ ಪರಮಾಣುವು ಒಂದು ವಜ್ರದ ಪರಮಾಣುವಿನ ದ್ರವ್ಯ ಹೊಂದಿದೆ. ಆದರೆ ಅಂಗಾರ ಮತ್ತು ವಜ್ರಗಳ ಪರಮಾಣುಗಳ ಆಂತರಿಕ ಸಂರಚನೆ ಬೇರೆ ಬೇರೆ ಇರುತ್ತದೆ. ಈ ಸಂರಚನೆಯನ್ನು ಮಾನಸ ತರಂಗಗಳಿಂದ ಬದಲಿಸಿದರೆ, ಅಂಗಾರವು ವಜ್ರವಾದೀತು. ಇದು ರಸ ಸಿದ್ಧರ ವಾದ. ಪಾರದ ಇಲ್ಲವೆ ಪಾರಜದಿಂದ ಸ್ವರ್ಣ ತಯಾರಿಸುತ್ತಾರೆ. ತಾಮ್ರ ಸತುವುಗಳಿಂದ ಸ್ವರ್ಣ ತಯ್ಯಾರಿಕೆಯ ಹತ್ತಾರು ವಿಧಗಳನ್ನು ವೇಮನರು ತಮ್ಮ ಪದ್ಯಗಳಲ್ಲಿ ತಿಳಿಸಿದ್ದಾರೆ. ಆದರೆ ವಾಚಕರು ಇಲ್ಲಿ ನೆನಪಿಡಬೇಕಾದ ಸಂಗತಿಯೆಂದರೆ ಈ ಪ್ರಯೋಗದಲ್ಲಿ ಬಳಸುವ ಘಟಕ ವಸ್ತುಗಳ ಪ್ರಮಾಣ ಎಷ್ಟೆಷ್ಟು ? ಅವುಗಳನ್ನು ಕಾಯಿಸುವ ಇಲ್ಲವೆ ಕುದಿಸುವ ಉಷ್ಣತೆಯೇನು? ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಸ್ವರ್ಣ ತಯ್ಯಾರಕನ ಅಂದರೆ ರಸಸಿದ್ಧನ ಮಾನಸಿಕ ಮಟ್ಟವಾವುದಿರಬೇಕು ? ಎಂಬಿತ್ಯಾದಿ ವಿವರಗಳನ್ನು ರಸಸಿದ್ಧರಿಂದ ಅರಿತಿರಬೇಕು. ಓದಿ ಕೆಟ್ಟ ಕೂಚು ಭಟ್ಟ ಎಂಬಂತೆ, ಇಂಥ ಪದ್ಯಗಳನ್ನು ಓದಿ ಪ್ರಯೋಗಕ್ಕಿಳಿಯುವುದಾಗಲಿ, ವಿಮರ್ಶೆ ಮಾಡುವುದಾಗಲಿ ಮಾಡಿದರೆ, ಅದು ಮೂರ್ಖತನವಾಗುತ್ತದೆ. ಕೆಲವು ತೆಲುಗು ಪಂಡಿತರು ಇಂಥ ಅನಿಷ್ಟ ಕೆಲಸ ಮಾಡಿದ್ದಾರೆ.





ಹಾಯಾಗಿರೆ ಇಹದಿ ಹೇಮಕಾರಕ ವಿದ್ಯೆ.
ಪರದಲ್ಲಿ ಸುಖಿಸಲು ಬ್ರಹ್ಮವಿದ್ಯೆ.
ಅನ್ಯ ವಿದ್ಯೆಯೆಲ್ಲ ಅಂತೆ ನಿಷ್ಫಲವದು.
ವಿಶ್ವದಾಭಿರಾಮ ಕೇಳು ವೇಮ.

ಇಲ್ಲ ಸ್ವಷ್ಟ ತಿಳಿವಳಿಕೆ ಇದೆ. ಇಹದಲ್ಲಿ ಸುಖಿಸಲು ಹೇಮಕಾರಕ ವಿದ್ಯೆ ಇರಲಿ. ಆದರೆ ಪರದಲ್ಲಿ ಸುಖಿಸಲು ಅದು ಬೇಡ. ಅದರ ಆಸಕ್ತಿಯೂ ಬೇಡ. ಅಲ್ಲಿ ಬ್ರಹ್ಮವಿದ್ಯೆ ಬೇಕು. ಆತ್ಮವನ್ನು ಅರಿಯುವ ವಿದ್ಯೆ ಬೇಕು. ಇವುಗಳನ್ನು ಹೊರತುಪಡಿಸಿದ ಉಳಿದ ವಿದ್ಯೆಗಳೆಲ್ಲ ಯಾವ ಫಲವನ್ನೂ ನೀಡವು.

ಇಹದ ಒಳಗೆ ಸುಖವು ಇಂಪಾಗಿ ಇರದನಕ,
ಪರದ ಒಳಗೆ ಸುಖವ ಪಡೆವುದೆಂತು ?
ಧನವು ಇರದೆ ಸುಖವು ತನಗೆ ದೊರೆವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಇಹದಲ್ಲಿ ಸುಖ ಎಂದರೆ ಅನುಕೂಲ ವೇದನೀಯವು ಯಾವುದು ? ವಿಷಯ ಭೋಗವಷ್ಟೇ. ಧನವು ವಿಷಯ ಭೋಗ ವಸ್ತುವಾಗಿದೆ. ಇಹದಲ್ಲಿ ವ್ಯವಹರಿಸುವ ವರೆಗೆ ಧನವು ತನಗೆ ಬೇಕೇ ಬೇಕು. ಅದಿಲ್ಲದೆ ಇಂಪಾಗಿ ಸುಖ ದೊರೆಯದು. ಆದರೆ ಪರದಲ್ಲಿ ಇಂದ್ರಿಯ ವಿಷಯಗಳ ಸಂಸರ್ಗದ ಮಾತೇ ಇಲ್ಲ. ಅಲ್ಲಿ ಸತ್ವಗುಣ ಅಂದರೆ ಸುಖ ಸಂಗದ ಒಲವು ಇರುತ್ತದೆ. ಇಹದಲ್ಲಿ ಸುಖಿಸುವ ಒಲವೇ ಪರದಲ್ಲಿ ಸುಖಿಸುವ ಒಲವಾಗುತ್ತವೆ. ಆದರೆ ಆಯಾ ಸ್ತರಗಳಲ್ಲಿ ಸುಖದ ಮೂಲವು ಬೇರೆ ಬೇರೆ ಇರುತ್ತದೆ.

ಇಹದಲ್ಲಿ ಸುಖವು ಈಡೇರದು ಎಂದು,
ಪರವ ನಂಬಿ ಮತ್ತೆ ಬದುಕಬಹುದೆ ?
ಆದಿಗಿರದ ಸುಖವು ಅಂತ್ಯದಲ್ಲಿ ಬರದು.
ವಿಶ್ವದಾಭಿರಾಮ ಕೇಳು ವೇಮ.

ಇಹದಲ್ಲಿ ಜೀವಿಸುವಾಗ ಇಲ್ಲಿ ಸುಖವು ಈಡೇರದು. 'ಅನುಕೂಲ ವೇದನೀಯಂ ಸುಖಂ'. ಇಲ್ಲಿ ಅನುಕೂಲ ವೇದನೆಗಳು ಘಟಿಸುತ್ತಿಲ್ಲ. ಹೋಗಲಿ, ಮುಂದೆ ಪರದಲ್ಲಿ ಸುಖವು ದೊರೆಯಬಹುದು ಎಂದು ಕೈಕಟ್ಟಿ ಕುಳಿತುಕೊಳ್ಳುವದು ತಾಮಸಿಯ ಲಕ್ಷಣ. ಇಹದ ಸುಖ ಸಾಧನಗಳೇ ಬೇರೆ. ಪರದಲ್ಲಿಯ ಸುಖಾನುಭೂತಿಯ ವಿಧವೇ ಬೇರೆ. ಇಲ್ಲಿ ಸುಖ ಪಡೆವ ಪ್ರಯತ್ನ ಮಾಡಿ, ಆಲಸ್ಯವನ್ನು ಕಳೆದುಕೊಂಡು ಮುಂದೆ, ಯತ್ನ ಮಾಡುವೆನೆಂಬ ಭಾವವನ್ನೂ ಮೀರಿ ಸತ್ತ್ವದಲ್ಲಿ ನಿಂತಾಗ, ಪರದಲ್ಲಿ ಸುಖ ಪಡೆಯಬಹುದು. ಇಲ್ಲಿ ಲಕ್ಷಿಸಬೇಕಾದ ಸಂಗತಿ ಎಂದರೆ, ಆಲಸ್ಯವನ್ನು ತೊಡೆಯಲು ಇಹದಲ್ಲಿ ಸುಖಿಸಲು ಪ್ರಯತ್ನಿಸಬೇಕು. ಮುಂದೆ, ಮಾಡುವವನೆಂಬ ಕರ್ತೃತ್ವಾಭಿಮಾನವನ್ನು ತೊರೆದು, ಅಸ್ತಿತ್ವಾಭಿಮಾನದ ಸತ್ತ್ವದಲ್ಲಿ ನಿಂತರೆ ಲೇಸು. ಏಕೆಂದರೆ ಆದಿಗಿಲ್ಲದ ಸುಖವು ಅಂತ್ಯದಲ್ಲಿ ಬರದು.

ಇಹದ ವ್ಯಾಪಾರದಿಂದ ಪಡೆವ ವಿಷಯ ಸುಖವು ಪರ್ಯಾಪ್ತವಿದೆ. ಅದು ಅನಂತ ಸುಖವಲ್ಲ.. ಅನಂತ ಸುಖವೇ ಆನಂದ. 'ಸುಖಂ ಅನಂತಂ ಆನಂದಂ' ಆನಂದಂ ಬ್ರಹ್ಮ

ಇತ್ಯಾಹುಃ' ಆನಂದವೇ ಬ್ರಹ್ಮವಾಗಿದೆ.

ವಿರಕ್ತಿ ಹೊಂದುವ ವರೆಗೆ ಮಾನವನು ಇಹದ ವ್ಯಾಪಾರದಲ್ಲಿ ಅನುರಕ್ತನಾಗಿರುವುದು ಸಹಜ. ಅದು ಹಿತಕರವೂ ಆಗಿದೆ. ಒಮ್ಮೆ ವಿರಕ್ತ ಭಾವ ತಾಳಿ ಸಾಧನೆಗಿಳಿದು ತತ್ತ್ವವನ್ನು ತಿಳಿದ ಮೇಲೆ ಎಲ್ಲವೂ ತಿರುವು ಮುರುವಾಗುತ್ತದೆ.

ತತ್ತ್ವವರಿತಿರುವವನು ದೈವವರಿಯುತಿಹನು.
ಸರ್ವ ಕಾಮಗಳನು ಸಾವ ಹೊಡೆವ.
ಬಾಳೆ ನುಂಗುವವನು ವಿಷವ ನುಂಗಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಯಾರಿಗೆ ತತ್‌ತ್ವವು ಅರಿವಾಗಿರುವುದೋ, ಅವನು ದೈವವನ್ನೂ ಅರಿಯುತ್ತಾನೆ. ತಾನೇ ಸಕಲವಾಗಿ ಸಕಲವನ್ನು ತನ್ನಲ್ಲಿ ಕಾಣುತ್ತಾನೆ. ಸರ್ವ ಕಾಮಗಳನ್ನು ನಾಶಗೊಳಿಸುವವನು. ಅವನು ಪರದಲ್ಲಿ ಸುಲಿದ ಬಾಳೆ ಹಣ್ಣಿನಂಥ ಆನಂದಾಮೃತವನ್ನು ಸವಿಯುವ ಸುಸಂಧಿ ಪಡೆದಿರುವಾಗ, ವಿಷಯ ಕಾಮನೆಗಳಿಂದ ಸಿಗುವ ವಿಷಪ್ರಾಯ ಭೋಗಕ್ಕಾಗಿ ಹಪಾಪಿಸುವನೇ? ಇಲ್ಲ. ಇಲ್ಲ.

ಇಂಥ ಅವಸ್ಥೆಯಲ್ಲಿರುವಾಗ, ಈ ಅವಸ್ಥೆಯನ್ನು ತಲುಪುವ ಮಾರ್ಗಕ್ಕಿಳಿದಾಗ, ಅವನ ನಿಲುಮೆಯೇ ಬೇರೆ.

ಹೊನ್ನು ಗೆಯ್ಸ ವಿದ್ಯೆ ಹೊಳೆದ ಮನುಜರೆಲ್ಲ,
ವ್ಯಥೆ ಪಡುವರಂಥ ವಿದ್ಯೆಯಿಂದ.
ತತ್ತ್ವ ತಿಳಿದ ಬಳಿಕ ತನಗೆ ಚಿಂತೆಯಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಹೊನ್ನುಗೈಯ್ಸ ಪ್ರಯೋಗದಲ್ಲಿ ಸಾಧಕನ ಕೇಂದ್ರೀಕೃತ ಮನಶ್ಶಕ್ತಿಯ ಬಳಕೆಯಾಗುತ್ತದೆ. ಅವನು ಐಹಿಕ ವ್ಯಾಪಾರದಲ್ಲಿ ಆಸಕ್ತನಾಗಿರುವಾಗ ಯಾವ ತೊಂದರೆಯೂ ಇಲ್ಲ. ಆದರೆ ಅವನು ತನ್ನ ಮಾನಸವನ್ನು ಊರ್ಧ್ವ ಸ್ತರಕ್ಕೇರಿಸಲಿಚ್ಛಿಸಿದರೆ, ಅವನಿಗೆ ಆ ವಿದ್ಯೆಯಿಂದ ವ್ಯಥೆಯಾಗುವುದು. ಆದರೆ ಅವನ ವಿರಕ್ತ ಭಾವವು ಬಲಿತು, ತತ್+ತ್ವವನ್ನು ತಿಳಿದರೆ ತಾನು ತನ್ಮಯವಾಗುತ್ತಾನೆ. ಆಗ ತನಗೆ ಚಿಂತೆಯಿಲ್ಲ.

ಮಾನವನ ಪುರುಷಾರ್ಥಗಳು ನಾಲ್ಕು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ. ಪ್ರಾಪಂಚಿಕರು ಧರ್ಮಾರ್ಥಕಾಮಗಳಲ್ಲಿ ಸಹಜವಾಗಿ ಆಸಕ್ತಿ ಹೊಂದಿರುತ್ತಾರೆ. ಅವರಿನ್ನೂ ತತ್ತ್ವದ ಹಾದಿಗಿಳಿಯದವರು. ಅಂಥವರಲ್ಲಿ ಕಾಪು ಜನರು ಬಹುಮಂದಿ. ಅವರಿಗೆ ಕ್ಷಾಮಡಾಮರಗಳಿಂದ ಆಗೀಗ ಕೊರತೆಯ ಅನುಭವವಾಗುತ್ತದೆ.

ಉಪ್ಪು ಕಳ್ಳಿ ಹಾಲು ಊರೊಳಗಿರುವಾಗ,
ಕೊರತೆ ಕೊರತೆ ಎನುವ ಕಾಪು ಜನರೆ !
ಸತುವು ಮೇಳವಿಸುತ ಸಾಧಿಸಲಾರರೇ ?
ವಿಶ್ವದಾಭಿರಾಮ ಕೇಳು ವೇಮ.





ಸ್ವರ್ಣ ತಯ್ಯಾರಿಕೆಯಲ್ಲಿ ಬಳಸುವ ಕಲ್ಲುಪ್ಪು ಡಬಗಳ್ಳಿ ರಸಗಳು ಗ್ರಾಮ ಗ್ರಾಮಗಳಲ್ಲಿ ಲಭ್ಯವಿರುತ್ತವೆ. 'ಸತುವು' ಎಂಬ ನಿಮ್ನ ಧಾತುವನ್ನು ಪೇಟೆಯಿಂದ ತರಬಹುದು. ಅವುಗಳನ್ನು ನಿರ್ದಿಷ್ಟ ಕ್ರಮದಿಂದ ಕುದಿಸಿ, ರಸ ಸಿದ್ಧರ ಮಾರ್ಗದರ್ಶನದಿಂದ ಸ್ವರ್ಣ ತಯ್ಯಾರಿಕೆಯನ್ನು ಮಾಡಿದರೆ, ಕಾಪು ಜನರೇ ! 'ಕೊರತೆ ಕೊರತೆ ' ಎನ್ನುವ ಬವಣೆ ತಪ್ಪುತ್ತದೆ.

ಉಪ್ಪು ಹುಣಸೆ ಹಣ್ಣು ಊರೊಳಗಿರುವಾಗ,
ಕ್ಷಾಮವೆಲ್ಲಿ ಬಂತು 'ಕಾಪು' ಜನರೆ ?
ಹಳದಿ ಅರಿಯಿರೇನು ? ತವರವರಿಯಿರೇನು ?
ವಿಶ್ವದಾಭಿರಾಮ ಕೇಳು ವೇಮ.

ರೈತಾಪಿ ಜನರೇ ! ಬರಗಾಲ ಬರಗಾಲ ಎಂದು ಪರಿತಪಿಸುವಿರೇಕೆ ? ನಿಮ್ಮ ಊರಿನಲ್ಲಿ ಕಲ್ಲುಪ್ಪು ಸಿಕ್ಕುತ್ತದೆ. ಹುಣಸೆ ಹಣ್ಣು ಸಿಕ್ಕುತ್ತದೆ. ನೆರೆಯ ಪೇಟೆಯಲ್ಲಿ ನಿಮ್ನ ಧಾತುವಾದ ತವರಿನ ತುಂಡುಗಳು ಸಿಗುತ್ತವೆ. ಪೇಟೆಯಲ್ಲಿ ಬಣ್ಣ ಬರಿಸುವ 'ಹಳದಿ' ($AS_2S_3$- Trisulphate of Arsenic) ಸಿಗುತ್ತದೆ. ಇವುಗಳನ್ನು ರಸ ಸಿದ್ಧರು ನಿರ್ದೇಶಿಸಿದ ಪ್ರಮಾಣದಲ್ಲಿ ಮತ್ತು ಕ್ರಮದಲ್ಲಿ ಕುದಿಸಿ, ಆರಿಸಿ, ಯೋಗ ಶಕ್ತಿಯಿಂದ ಅಣು ಸಂರಚನೆಯನ್ನು ಸರಿಪಡಿಸಿ ಸ್ವರ್ಣವನ್ನಾಗಿ ಸಿದ್ಧಪಡಿಸಿದರಾಯಿತು. ಆಗ ಕ್ಷಾಮ ಬಾಧೆ ಎಲ್ಲಿ ಪೀಡಿಸುತ್ತದೆ ?

----

ವೇಮನರ ಜೀವನದಲ್ಲಿ ಅನೇಕ ಪವಾಡ ಸದೃಶ ಘಟನೆಗಳು ನಡೆದಿವೆ. ವೇಮನರು ಅಷ್ಟೈಶ್ವರ್ಯ ಸಿದ್ಧಿಸಂಪನ್ನರಾಗಿದ್ದರೂ, ಅವರು ಅಪರೋಕ್ಷ ಜ್ಞಾನಿಗಳಾಗಿದ್ದರಿಂದ ಜನಮನ ರಂಜಿಸುವ ಪವಾಡಗಳತ್ತ ಲಕ್ಷ್ಯ ವಹಿಸುತ್ತಿರಲಿಲ್ಲ. ತುಂಬಾ ವಿಮರ್ಶಕ ಬುದ್ಧಿಯ ಈ ರಾಜಯೋಗಿ ಪವಾಡ ಪ್ರಾಯ ಘಟನೆಗಳಿಗೆ ಕಾರಣೀಭೂತರೆನಿಸಿದ್ದರೂ, ಪವಾಡ ಪ್ರದರ್ಶನವನ್ನು ದೋಷವೆಂದು ಬಗೆದಿದ್ದರು.

## ಕಾಶಿಗೆ ಹೋದರೂ ಕಾಸು ತಾಮ್ರವೇ :

ವೇಮನರಿಗೆ ಸಾಧನೆಯ ತೀವ್ರತೆಯಿಂದ ಉನ್ಮತ್ತಾವಸ್ಥೆ ಪ್ರಾಪ್ತವಾದಾಗ, ಅವರ ಇರವನ್ನು ಗುರುತಿಸಲಾರದ ಜನರು ಅವರಿಗೆ ಹುಚ್ಚು ಹಿಡಿದಿದೆ ಎಂದರು. ಕೆಲವು ಸಹಾನುಭೂತಿಪರರು, ಯಾರೋ ಭಾನುಮತಿ ಪ್ರಯೋಗ ಮಾಡಿರಬಹುದು ಎಂದರು. ಕೊನೆಗೆ ದಿಗಂಬರ ವೇಮನರ ತಾಯಿ ಯಾರೆಂದು ತಿಳಿದು, ವಿಧವೆ ಮಲ್ಲಮ್ಮನಿಗೆ ಸುದ್ದಿ ಮುಟ್ಟಿಸಿದರು. ಅವಳು ಕೆಲವು ಅವಿದ್ಯಾ ತಾಂತ್ರಿಕರನ್ನು ವಿಚಾರಿಸಿ, ಮದ್ದು ಪ್ರಯೋಗಿಸಿ ವಿಫಲವಾಗಿ ಕೊನೆಗೆ ತಾನು ದೃಢವಾಗಿ ನಂಬಿದ ಕಾಶಿ ವಿಶ್ವನಾಥನಲ್ಲಿ ಪ್ರಾರ್ಥಿಸಿದಳು. ತಾನೂ ಕೊನೆಗಾಲದ ಕಾಶಿಯಾತ್ರೆಯ ಸಿದ್ಧತೆಯನ್ನೂ ಮಾಡಿದಳು. ವೇಮನರಿಂದ ಕಾಶೀ ಯಾತ್ರೆ ಮಾಡಿಸಿದರೆ, ಅವನ ಹುಚ್ಚು ಹೋಗಬಹುದು ಮತ್ತು ಅವನು ಮದುವೆ ಮಾಡಿಕೊಳ್ಳಬಹುದೆಂದು ಭಾವಿಸಿದಳು. ಕಾಶಿ ಯಾತ್ರೆಗೆ ಹೋಗುವುದು ನಿಷ್ಪ್ರಯೋಜಕವೆಂದು ವೇಮನರಿಗೆ ಆ ಉನ್ಮತ್ತ ಅವಸ್ಥೆಯಲ್ಲಿಯೂ ಖಚಿತವೆನಿಸಿತ್ತು.

ಕಾಶಿಯಾತ್ರೆ ಗೆಯ್ದು, ಗಾಸಿ ಪಡುವುದೇಕೆ ?
ಹೊಲಸು ಗುಣ ವಿಕಾರ ಹೊಳಹು ತೊರೆದು,
ಮೋಸ ಹೋಗದರಿವು ಮೂಲ ಕಂಡುಕೊಳ್ಳು.
ವಿಶ್ವದಾಭಿರಾಮ ಕೇಳು ವೇಮ.

ಎಂದು ಗುನು ಗುನಿಸಿದರು. ಅಂತೂ ಕಾಶಿ ಯಾತ್ರೆಗೆ ಹೋಗಲು ನಿರಾಕರಿಸಿದರು. ವಿಧಿಯಿಲ್ಲದೆ ತಾಯಿ ತನ್ನ ಪರಿವಾರದವರೊಂದಿಗೆ ಹೊರಡಲನುವಾದಳು. ಹೊರಡುವ ಮುನ್ನ ವೇಮನರು ಒಂದು ತಾಮ್ರದ ನಾಣ್ಯಕ್ಕೆ ತೂತು ಕೊರೆದು ದಾರ ಕಟ್ಟಿ ತಾಯಿಯ ಕೊರಳಿಗೆ ಕಟ್ಟಿದರು. 'ಅಮ್ಮಾ ! ಕಾಶೀ ಯಾತ್ರೆ ಮುಗಿಸಿ, ಗಂಗಾಸ್ನಾನ ಮಾಡಿ ವಿಶ್ವನಾಥನ ದರ್ಶನ ಪಡೆವ ವೇಳೆಗೆ, ಅರ್ಜಿಸಿದ ಪುಣ್ಯ ಫಲವಾಗಿ, ಈ ತಾಮ್ರದ ನಾಣ್ಯವು ಸ್ವರ್ಣದ್ದಾಗುವುದೇನೋ ಪರೀಕ್ಷಿಸು ಎಂದು ಹುಸಿನಗೆ ನಕ್ಕರು. ಆಕೆಯು ಯಾತ್ರೆ ಮುಗಿಸಿದಳು. ಆಕೆಯ ಕೊರಳಲ್ಲಿಯ ನಾಣ್ಯ ತಾಮ್ರವಾಗಿಯೇ ಉಳಿದಿತ್ತು. ಅಮ್ಮಾ ! ತಾಮ್ರದ ನಾಣ್ಯ ಸ್ವರ್ಣದ್ದಾಗಲಿಲ್ಲವೇ ?' ಎಂದು ಕಟಕಿಯಾಡಿದರು. ಏತನ್ಮಧ್ಯೆ ವೇಮನರಿಗೆ ಉನ್ಮತ್ತಾವಸ್ಥೆ ಇಳಿದಿತ್ತು. ಅದನ್ನು ತಿಳಿದು ತಾಯಿ ಹರ್ಷಿಸಿದಳು. ಇದು ತನ್ನ ಯಾತ್ರೆಯ ಫಲ ಎಂದು ಸಾರಿದಳು. ವೇಮನರು ತಾವು ತಾಮ್ರದ ನಾಣ್ಯವನ್ನು ಕೈಯಲ್ಲಿ ತೆಗೆದುಕೊಂಡು ತದೇಕ ದೃಷ್ಟಿಯಿಂದ ನೋಡಿದರು. ಅಚ್ಚರಿಯೆಂಬಂತೆ ಅದು ಬಂಗಾರ ವರ್ಣದ್ದಾಯಿತು.

ಕಾಶಿ ಕಾಶಿ ಎಂದು ಕಡು ಹರ್ಷಿಸಿ ಹೋಹರು.
ಅಲ್ಲಿ ಇರುವ ದೇವರಿಲ್ಲವೇ ?
ಇಲ್ಲು, ಅಲ್ಲು, ಇರುವ ; ಹೃದಯ ಲೇಸಾಗಿರೆ ;
ವಿಶ್ವದಾಭಿರಾಮ ಕೇಳು ವೇಮ.

ತೀರ್ಥಯಾತ್ರೆಯ ಮೂಢ ನಂಬುಗೆಯನ್ನು ವೇಮನ ಭೇಡಿಸಿದರು. ಆದರೆ ಇದೆಲ್ಲ ವಿಶ್ವನಾಥನ ಮಹಿಮೆಯೇ ಎಂದು ಮಲ್ಲಮ್ಮ ತಾಯಿ ನಂಬಿದಳು.

## ವೇಮನರ ಸ್ನಾನ ವಿಧಾನ :

ವೇಮನರು ಮೋಕ್ಷ ಗುರುವನ್ನು ಸಂಧಿಸುವ ಮೊದಲು ಹಲವು ಬೈರಾಗಿ ಬಾವಾಗಳನ್ನು ಸಂಧಿಸಿದ್ದರು. ಯಾರ ಸಂಗದಲ್ಲಿರುತ್ತಿದ್ದರೊ, ಅವರ ಆಚರಣೆಗಳನ್ನು ರೂಢಿಸಿಕೊಳ್ಳುತ್ತಿದ್ದರು. ಒಮ್ಮೆ ಅಘೋರಿ ಸಂಪ್ರದಾಯದ ಸಾಧುಗಳ ಸಂಗದಲ್ಲಿದ್ದರು. ಆಗ ಅವರ ಸಾಧನ ಕ್ರಮಾನುಸಾರ ಹೊಲಸು ಬಟ್ಟೆಯನ್ನೂ , ಧರಿಸುತ್ತಿದ್ದರು. ಹೊಲಸು ನೀರು ಕುಡಿಯುತ್ತಿದ್ದರು. ಅಲ್ಲಿ ಇಲ್ಲಿ ಚೆಲ್ಲಿದ ಹಳಸಿದ ಅನ್ನವನ್ನು ಸೇವಿಸುತ್ತಿದ್ದರು. ಭೋಗೇಚ್ಛೆಗೆ ಎಳಸುತ್ತಿದ್ದ ಇಂದ್ರಿಯಗಳನ್ನು ದಂಡಿಸಿ ಅವುಗಳನ್ನು ಸಾಧುಗೊಳಿಸುವ ವಿಧಾನ ಇದಾಗಿತ್ತು.

ಚಿಂದಿ ಬಟ್ಟೆಯಲ್ಲ ಚೀನಾಂಬರವೆ ಹೊರತು,
ಮಲಿನ ಒಡಲು ಅಲ್ಲ ಮುಕ್ತಿ ಹೊರತು
ಪರಮ ಯೋಗಿ ಮಹಿಮೆ ಪರಿಕಿಸುವುದು ಎಂತು ?
ವಿಶ್ವದಾಭಿರಾಮ ಕೇಳು ವೇಮ.





ವೇಮನರು ಚಿಂದಿ ಚಿಂದಿಯಾದ ಬಟ್ಟೆಗಳನ್ನು ಉಡುತ್ತಿದ್ದರು, ಹೊರುತ್ತಿದ್ದರು. ಆಗಿನ್ನೂ ಅವರು ದಿಗಂಬರರಾಗಿರಲಿಲ್ಲ. ಅವರು ಕಾಲ ಕಾಲಕ್ಕೆ ಸ್ನಾನ ಮಾಡುತ್ತಿರಲಿಲ್ಲ. ಅವರ ಸ್ನಾನದ ವಿಧವೇ ವಿಚಿತ್ರವಾಗಿತ್ತು. ಜನರು ಅವರ ತಾಯಿಯ ಬಳಿ ವೇಮನರ ಪ್ರಸ್ತಾಪ ಮಾಡಿದಾಗ, ಈ ಎಲ್ಲ ಸಂಗತಿಗಳನ್ನು ವಿವರಿಸುತ್ತಿದ್ದರು. ಇದು, ಅವರಂದು ಆಚರಿಸುತ್ತಿದ್ದ ಅಘೋರ ಸಂಪ್ರದಾಯದ ಸಾಧನೆಯೇ ಎಂದು, ಅರಿಯದ ಆ ಮುಗ್ಧ ತಾಯಿ, ಮಗನನ್ನು ಕುರಿತು ಅನುಕಂಪ ತಾಳಿ ನಾಲ್ಕು ಹಿತವಚನ ಹೇಳಿ ನೋಡೋಣವೆಂದು, ಅವರಿರುವಲ್ಲಿಗೆ ಬಂದಳು.

"ಮಗೂ ಇದೆಲ್ಲ ಏನು ? ಏನು ನಿನ್ನ ಅವತಾರ ! ವಸ್ತ್ರವೆಲ್ಲ ಹರಿದು ಚಿಂದಿಯಾಗಿದೆ, ಮೈ ಎಲ್ಲ ಮಲಿನವಾಗಿದೆ. ತಿನ್ನುವುದು ಹಳಸಿದ ಅನ್ನವಂತೆ. ಕುಡಿಯುವುದು ಕೊಳಚೆಯ ನೀರಂತೆ. ಹೀಗಾದರೆ ಆರೋಗ್ಯದ ಗತಿಯೇನು ? ಹೋಗಲಿ, ನಿನ್ನ ಸೋದರ ಸಂಬಂಧಿಗಳಂತೆ ದಿನಾಲು ಸ್ನಾನ, ಜಪ-ತಪಗಳನ್ನು ಮಾಡಲಾರೆಯಾ ?" ಎಂದು ಕಳಕಳಿಯಿಂದ ಕೇಳಿದರು.

"ಅಮ್ಮಾ ! ನಾನು ತೊಟ್ಟಿರುವುದು ಚಿಂದಿ ಬಟ್ಟೆಯಂತೆ ಕಾಣಬಹುದು. ಆದರೆ ನನಗೆ ಅದು ಜಗತ್ತಿನ ಬಡವರ ಮೈ ಮುಚ್ಚುವ ಚೀನಾಂಬರವಾಗಿದೆ. ಅದು ನನಗೆ ರೇಶ್ಮೆ ಬಟ್ಟೆಯಷ್ಟೇ ಮೌಲ್ಯದ್ದಾಗಿದೆ. ಇನ್ನು, ಹಳಸಿದ ಅನ್ನ, ಕೊಳಚೆ ನೀರು ಸೇವನೆ ವಿಚಾರ. ಅವು ಮೃಷ್ಟಾನ್ನ ಮತ್ತು ಪನ್ನೀರು ಬಯಸುವ ನನ್ನ ನಾಲಗೆಗೆ ಸೂಕ್ತ ದಂಡ ಪ್ರಯೋಗವಾಗಿದೆ. ಮಲಿನ ದೇಹದ ವಿಚಾರ ಹೇಳುವುದಾದರೆ, ಈ ದೇಹಕ್ಕೆ ಹೊರಗಿನ ಸ್ನಾನ ಔಪಚಾರಿಕವಷ್ಟೇ ಅಂತಃ ಶೌಚವು ನಡದೇ ಇರುತ್ತದೆ. ಮನಸ್ಸು ನಿರ್ಮಲವಾಗಿರುತ್ತದೆ. "ಹೀಗಾಗಿ ದೇಹವು ಮಲಿನವಾಗದು. ಸುಗಂಧಯುಕ್ತವಾಗಿರುತ್ತದೆ" ಎಂದು ತಿಳಿಸಿ ಹೇಳಿದರು.

"ಏನೋಪ್ಪ ಏನಾದರೂ ಕೇಳಿದರೆ ಬೇರೇನೋ ಹೇಳುತ್ತೀ. ನನಗೆ ಅರ್ಥವಾಗದು" ಎಂದಳು

"ಆಗಲಿ, ಅಮ್ಮಾ ! ನಾಳೆ ಮುಂಜಾನೆ ತಟಾಕದ ಬಳಿ ಬಾ. ನನ್ನ ಸ್ನಾನವಿಧಿಯನ್ನು ಕಣ್ಣಾರೆ ನೋಡಿ ಸಂತಸ ಪಡುವಿಯಂತೆ" ಎಂದು, ತಾಯಿಗೆ ನಮಸ್ಕರಿಸಿ ಬೀಳ್ಕೊಟ್ಟರು.

ಮಲ್ಲಮ್ಮನವರು ಮಾರನೆಯ ಮುಂಜಾನೆ ಸೂರ್ಯೋದಯ ಕಾಲಕ್ಕೆ ಕೆಲ ಪರಿಚಾರಿಕೆಯರೊಂದಿಗೆ ಮಗನ ಸ್ನಾನ ವಿಧಿಯನ್ನು ವೀಕ್ಷಿಸಲು ಬಂದರು.

ವೇಮನರು ತಟಾಕದ ಮಧ್ಯ ಭಾಗದಲ್ಲಿ ನೀರಿನ ಮೇಲೆ ಪದ್ಮಾಸನದಲ್ಲಿ ಕುಳಿತುಕೊಂಡಿದ್ದರು. ಉದಾನ ನಾಡಿಯ ಸಹಾಯದಿಂದ ಶರೀರವನ್ನು ಲಘುವಾಗಿಸಿದ್ದರು. ಇದನ್ನು ನೋಡೇ ಅವರ ತಾಯಿ ಮತ್ತು ಪರಿಚಾರಿಕೆಯರು ಬೆಕ್ಕಸ ಬೆರಗಾದರು. ಇಷ್ಟರಲ್ಲಿ ವೇಮನರು ಕಣ್ಣು ಮುಚ್ಚಿ ಧ್ಯಾನಿಸುತ್ತ ತಮ್ಮ ಎದೆಯನ್ನು ಬಗಿದು, ಆಂತರ್ಯದ ಅಂಗಾಂಗಗಳನ್ನು ಹೊರ ತೆಗೆದು ನಿರ್ಮಲಗೊಳಿಸಿದರು. ವೇಮನರ ಯೋಗ ಪ್ರಕ್ರಿಯೆ ಬಲ್ಲವನೊಬ್ಬನು "ಇದು ದಿವ್ಯ ಸ್ನಾನ ! ನಿತ್ಯ ನೀರಿನ ಸ್ನಾನವಿಲ್ಲದ ಅವರ ದೇಹ ಮಲಿನ ದೇಹವಲ್ಲ. ಅದು ಮುಕ್ತಿಯ ಮಹಿಮೆ ; ಯೋಗಸಿದ್ಧಿ" ಎಂದು ತಿಳಿಸಿದನು. ಅಲ್ಲಿದ್ದವರೆಲ್ಲರೂ ಅಲ್ಲಿಂದ ಕೈಮುಗಿದರು.

ತಾಯಿ, ವೇಮನರ ಮಹಿಮೆಗೆ ಆಶ್ಚರ್ಯಪಡುತ್ತ ಮನೆಗೆ ಮರಳಿದರು.

ಕ್ರಿ.ಶ. 1966ರಲ್ಲಿ ನಾನು ಧಾರವಾಡದಲ್ಲಿ ವೇಮನರ ಪದ್ಯಗಳನ್ನು ಕನ್ನಡಕ್ಕೆ ಭಾಷಾಂತರಿಸುವಾಗ ಒಬ್ಬ ತೆಲುಗು ಬಲ್ಲವರ ನೆರವು ಪಡೆದಿದ್ದೆ. ಅವರು ಶ್ರೀರಾಯುಡು ಎಂಬ ನಿವೃತ್ತ ಮುಖ್ಯ ಪೋಸ್ಟ ಮಾಸ್ತರರು. ಅವರು ಗುರುದೇವ ರಾನಡೆಯವರ ಮೆಚ್ಚಿನ ಶಿಷ್ಯರು. ಅವರು ಚಿಕ್ಕವರಿರುವಾಗ ತಿರುಪತಿಯಲ್ಲಿ ವಾಸಿಸುತ್ತಿದ್ದರಂತೆ. ಆಗ ಸಾಯಂಕಾಲ ಒಬ್ಬ ದಿಗಂಬರ ಸಾಧು ಪೇಟೆಯಲ್ಲಿ ಬಂದು ಮಿಠಾಯಿ ಅಂಗಡಿಯಲ್ಲಿ ತನಗೆ ಬೇಕಾದ ಮಿಠಾಯಿ ತೆಗೆದು ಕೊಂಡು ತಿನ್ನುತ್ತ ಮುಂದೆ ಊರು ದಾಟಿದ ಮೇಲೆ ಮಲವನ್ನು ತಿನ್ನುತ್ತಿದ್ದನಂತೆ. ಕೊನೆಗೆ ಓಡುತ್ತ ಬೆಟ್ಟದ ಮೇಲಿನ ಕಾಳಿ ಗುಡಿಗೆ ಹೋಗಿ ಧ್ಯಾನಕ್ಕೆ ಕುಳಿತು, ಒಂದೊಂದೇ ಅಂಗವನ್ನು ಕಳಚಿ ಇಡುತ್ತಿದ್ದಂತೆ ರಾಮುಡು ಸಂಗಡಿಗರು ಮೋಜಿನಿಂದ ಇದನ್ನೆಲ್ಲ ನೋಡುತ್ತಿದ್ದಂತೆ ಸಾಧನ ಮುಗಿದ ಮೇಲೆ ಅಂಗಾಂಗಗಳನ್ನು ಜೋಡಿಸಿಕೊಂಡು, ವೇಗವಾಗಿ ಓಡುತ್ತಿದ್ದನಂತೆ.

## ಕುಚೋದ್ಯ ಕೆಲಸದ ಅಂತರಾರ್ಥ :

ರಾಜಮಹೇಂದ್ರವರಂ ಪಟ್ಟಣದಲ್ಲಿ ಇರುವಾಗ ವೇಮನರನ್ನು ಬಾಲ್ಯಾವಸ್ಥೆಯಿಂದಲೂ ಮುದ್ದಿಸಿ ಸಲಹಿದ ರಾಜ್ಯದ ಪ್ರಭು ವೀರಭದ್ರಾರಡ್ಡಿಯ ಪತ್ನಿ ನರಸಾಂಬೆಯೊಂದಿಗೆ ವೇಮನರ ವಿಶೇಷ ಸಲುಗೆ. ಎಷ್ಟಾದರೂ ಅವಳು ಸೋದರ ಸಂಬಂಧಿಯ ಹೆಂಡತಿಯಾಗಿ ಅತ್ತಿಗೆಯಾಗಿದ್ದಳು. ಅತ್ತಿಗೆಯು ತಾಯಿಗೆ ಸಮಾನ. ಒಂದು ದಿನ ನರಸಾಂಬೆ ಕೈ ತೋಟದಲ್ಲಿ ಹೂ ಕೀಳುವಲ್ಲಿ ಮಗ್ನಳಾಗಿದ್ದಳು. ವೇಮನರು ಅಲ್ಲಿಗೆ ಬಂದು ಏನೋ 'ಆವೇಶ' ಬಂದವರಂತೆ ನರಸಾಂಬೆಯ ಬಲಗಡೆಯ ಸ್ತನದ ಅಡಿಗೆ ಜೋರಾಗಿ ಚಿವುಟಿ ಗಾಯ ಮಾಡಿದರು. ಅಲ್ಲಿಯೇ ನಿಂತ ದಾಸೀ ಜನರು ಇದನ್ನು ನೋಡಿ, ಅವನನ್ನು 'ಛೀ ಥೂ' ಎಂದು ಛೀತ್ಕರಿಸಿದರು. ಮೊದಲು ಆವೇಶ ಬಂದವನಂತಿದ್ದ ವೇಮನರು ಈಗ ಸಹಜ ಪ್ರಜ್ಞೆ ಹೊಂದಿ, ತನ್ನ 'ಆವೇಶ'ಕ್ಕೆ ಏನು ಕಾರಣ ಎಂದು ತಿಳಿಯದಾದರು.

ಸ್ತನದ ಭಂಗಿ ಕಂಡು ಸಾಧುಗಳು ಮೂಢರು,
ತಾವು ಎಂತೆ ಅಂತೆ ತಿಳಿಯುತಿಹರು.
ಅದಕೆ ತಾನು ದೂರ ಅದುವೆ ತನಗು ಅಷ್ಟೆ.
ವಿಶ್ವದಾಭಿರಾಮ ಕೇಳು ವೇಮ.

ಸ್ತನಗಳ ಭಂಗಿಯನ್ನು ಸಾಧುಗಳೂ ನೋಡುತ್ತಾರೆ ; ಮೂಢರೂ ನೋಡುತ್ತಾರೆ. ಸಾಧುಗಳು ಮಗುವಿಗೆ ಹಾಲಿನ ಮೂಲವೆಂದು ಬಗೆದರೆ, ಮೂಢರು ಕಾಮ ಕ್ರೀಡೆಯ ಮೂಲವೆಂದು ಬಗೆಯುತ್ತಾರೆ. ತಾವು ಎಂತೋ, ಅಂತೆಯೇ ಸ್ತನಗಳು ಗೋಚರಿಸುತ್ತವೆ. ಕಾಮ ಕ್ರೀಡೆಯಿಂದ ತಾನೆಷ್ಟು ದೂರನೋ ಸ್ತನಗಳ ಮೋಹದಿಂದ ತಾನು ಅಷ್ಟೇ ದೂರನು, ಎಂದು ವೇಮನರು ಚಿಂತಿಸುತ್ತಿದ್ದರು. ಅವರಿಗೆ ಆ ಕುರಿತು ಇನ್ನೂ ಹೆಚ್ಚು ವಿಚಾರಗಳು ಮೂಡಿದವು.

ಕಂ. ಪತಿ ಸುತರಿಬ್ಬರು ಕೂಡಿಯೆ
ಸತಿಯೆಡಬಲ ಮಲಗಲ್, ಸತತ ಸ್ತನಗಳನೇ
ಪತಿ ನೋಳ್ಪ ಮಾಂಸ ಮುದ್ದೆಯ,
ಸುತನದರಲಿ ಹಾಲು, ಹದುಳವ, ಸತ್ಯವ, ವೇಮಾ.





ಸತಿಯ ಎಡ ಬಲದಲ್ಲಿ ಸುತನು ಮತ್ತು ಪತಿಯು ಮಲಗಿರುತ್ತಾರೆ. ಆಗ ಸ್ತ್ರೀಯ ಸ್ತನಗಳನ್ನು ಪತಿಯು ಯಾವಾಗಲೂ, ಬರೀ ಮಾಂಸದ ಮುದ್ದೆಗಳು, ಹಿಸುಕಿ ಕ್ರೀಡಿಸಬಹುದೆಂದು ತಿಳಿದು ನೋಡುತ್ತಾನೆ. ಅದೇ ಪಕ್ಕಕ್ಕೆ ಮಲಗಿದ ಸುತನ ದೃಷ್ಟಿಯು ಬೇರೆ. ಅವನು ಆ ಸ್ತನಗಳನ್ನು ಹಾಲಿನ ಮೂಲವಾಗಿ, ತನ್ನ ತಾಯಿಯ ಹದುಳದ ಸೆಲೆಯಾಗಿ ಕಾಣುತ್ತಾನೆ.

ಹೀಗೆ ವಿಚಾರಿಸುತ್ತ ಅಲ್ಲಿಂದ ಅವರು ಹೊರಹೋದರು. ಇದೆಲ್ಲ ಏಕೆ ಹೀಗೆ ? ಎಂದು ನರಸಾಂಬೆಗೂ ತಿಳಿಯದಾಯಿತು. ಆಗೀಗ ಇಂಥ ಕೌತುಕದ ಘಟನೆಗಳಿಗೆ ಕಾರಣಕರ್ತನಾಗುತ್ತಿದ್ದ ಮೈದುನರ ವರ್ತನೆಯಿಂದ ಅವಳಿಗೆ ಕುತೂಹಲ ಹೆಚ್ಚಾಯಿತು.

ಮುಂದೆ ಇನ್ನೂ ಒಂದು ವಾರ ಕಳೆದಿರಲಿಲ್ಲ. ತೋಟದಲ್ಲಿ ಹೂವು ಬಿಡಿಸಲು ಹೋದಾಗ ಹಾವೊಂದು ಅವಳ ಎದೆಗೆ ಕಚ್ಚಿತು. ಅವಳ ಬಾಯಿಯಲ್ಲಿ ಬುರುಗು ಬಂತು. ಅವಳು ಎಚ್ಚರದಪ್ಪದಂತೆ ವೇಮನ ಮತ್ತಿತರರು ಜಾಗ್ರತೆ ವಹಿಸಿದರು. ಚಿಕಿತ್ಸಕರು ಮಂತ್ರಪ್ರಯೋಗ ನಡೆಸಿದರು. ಕೊನೆಗೆ ಆಶ್ಚರ್ಯವೆಂಬಂತೆ. ಈ ಮುನ್ನ ಮೈದುನ ವೇಮನರು ಚಿಟಿವುಟಿದ ಜಾಗದಿಂದ ವಿಷವು ಸ್ರವಿಸಿ, ಕೆಲ ಘಂಟೆಗಳ ನಂತರ ನರಸಾಂಬೆ ದೊರೆಸಾನಿ ಎಚ್ಚರವಾದಳು. ಎಚ್ಚರಾದ ನಂತರ ವಿಷ ಸ್ರವಿಸಿದ ಜಾಗದಲ್ಲಿಯೇ ಮೈದುನನು ಈ ಮುನ್ನ ಚಿವುಟಿ ಗಾಯವಾದುದನ್ನು ನೆನಪಿಸಿಕೊಂಡು, ವೇಮನರ ಬಗ್ಗೆ ಇನ್ನಷ್ಟು ಪ್ರೀತ್ಯಾದರಗಳು ಹೆಚ್ಚಿದವು.

## ಬಂಗಾರ ಬೀಜಗಳುಳ್ಳ ಪಾಪರಕಾಯಿ ಬೆಳೆ :

ವೇಮನರು ಇನ್ನೂ ಮೋಕ್ಷ ಗುರುವಿನಿಂದ ದೀಕ್ಷೆಯನ್ನು ಪಡೆಯುವ ಮುನ್ನ, ಸಿದ್ಧಿ ಸಂಪನ್ನರಾದುದನ್ನು. ಈ ಮುನ್ನ ತಿಳಿಸಿದ್ದೇವೆ. ಅವರೊಮ್ಮೆ ಚಿಕ್ಕ ತೋಟ ಸಾಗುವಳಿ ಮಾಡಿ ಅಲ್ಲಿ ಇದ್ದು, ತಾವು ಬಾವಾ ಬೈರಾಗಿಗಳಿಂದ ಕಲಿತ ಸಾಧನ ವಿಧಿಗಳನ್ನು ಆಚರಿಸಲು ಬಯಸಿದರು. ಅದಕ್ಕಾಗಿ ಒಂದು ಎಕರೆ ಹೊಲವನ್ನು ಪಡೆದರು. ತಾವು ಸ್ವತಃ ಮುಂದಾಗಿ ಒಂದಿಬ್ಬರು ನೆಚ್ಚಿನ ಸಂಗಾತಿಗಳೊಂದಿಗೆ ಒಂದು ಕುಟೀರ ನಿರ್ಮಿಸಿಕೊಂಡರು. ಆ ಜಮೀನಿನಲ್ಲಿ ಒಂದು ಬಾವಿಯೂ ಇತ್ತು. ಕುಟೀರದ ಸುತ್ತುಮುತ್ತು ಪಾಪರ ಕಾಯಿ (ಕರಣೆ ಕಾಯಿ)ಯ ಬೀಜಗಳನ್ನು ಊರಿದರು. ಅವು ಹುಲಸಾಗಿ ಬೆಳೆದು, ಲಿಂಬೆಹಣ್ಣಿನ ಗಾತ್ರದ ಕಾಯಿಗಳನ್ನು ಬಿಟ್ಟವು. ಪಾಪರ ಕಾಯಿ ಖಾದ್ಯ ವಸ್ತುವಲ್ಲ. ಆದ್ದರಿಂದ ಅವುಗಳಿಂದ ಯಾರಿಗೇನು ಪ್ರಯೋಜನ ? ಹೀಗಾಗಿ, ಅವುಗಳನ್ನು ಒಯ್ಯಲು ಯಾರೂ ಬರಲಿಲ್ಲ.

ಒಂದು ದಿನ ಬಡ ಮುದುಕಿಯೊಬ್ಬಳು ಕೂಲಿ ಸಿಕ್ಕದೆ, ದುಃಖದಿಂದ ವೇಮನರ ತೋಟದ ಬಳಿ ಹೋಗುತ್ತಿರಲು, ವೇಮನರು ಆಕೆಯನ್ನು ಕರೆದು, ನಿಜಸ್ಥಿತಿಯನ್ನು ತಿಳಿದು, ಅವಳ ಬಡತನದ ಬಗೆಗೆ ಕರುಣೆ ತಾಳಿದರು. "ದುಃಖಿಸಬೇಡಮ್ಮ ! ಈ ಕಾಯಿಗಳನ್ನು ಬಿಡಿಸು. ನಿನಗೆ ಪ್ರತಿಫಲ ಸಿಗುವುದು" ಎಂದುಹೇಳಿದರು. ಅವಳು ಆ ರೀತಿ ಮಾಡಿ, ತನ್ನ ಶ್ರಮದ ಫಲವಾಗಿ ಪಾಪರ ಕಾಯಿಗಳನ್ನು ಉಡಿಲಲ್ಲಿ ಇರಿಸಿಕೊಂಡು ಹೋದಳು.

ಮನೆಯಲ್ಲಿ ಅವಳ ಆಲಸಿ ಮಗ ಏನು ತಂದಿರುವಳೆಂದು ಆ ಪಾಪರ ಕಾಯಿಗಳನ್ನು ತೆಗೆದು ನೋಡಿ, ಇವುಗಳಿಂದೇನು ಫಲ ? ಎಂದು ಬೀಸಿ ಒಗೆದನು. ಆ ಕಾಯಿಗಳು ಒಡೆದು ಚೂರಾದರೂ, ಅವುಗಳೊಳಗಿಂದ ಹೊಳೆಯುವ ಬೀಜಗಳು ಹೊರಬಿದ್ದವು. ಅವುಗಳ ಹೊಳಪಿನಿಂದ ಆಕರ್ಷಿತನಾಗಿ ಕೈಗೆತ್ತಿ ನೋಡುತ್ತಾನೆ. ಅವು ಬಂಗಾರದ ತುಣುಕುಗಳೇ ಆಗಿದ್ದವು.

ಕಣ್ಣು ನಂಬದಾದ ! ಅವುಗಳನ್ನು ತಂದುದೆಲ್ಲಿಂದ ? ಎಂಬ ವಿವರಗಳನ್ನೆಲ್ಲ ಆ ಮುದುಕಿ ತಾಯಿಯಿಂದ ತಿಳಿದು, ತಾನು ನೇರವಾಗಿ ಆ ತೋಟಕ್ಕೆ ಹೋಗಿ ಸಾಕಷ್ಟು ಕಾಯಿಗಳನ್ನು ಹರಿದು ತಂದ. ಆದರೆ ಆ ಕಾಯಿಗಳನ್ನು ಒಡೆದಾಗ ಹುಳುಗಳು ಹೊರಬಿದ್ದವು. ತನ್ನ ಹಣೆ ಗಟ್ಟಿಸಿಕೊಂಡ. ಸುದ್ದಿ ಎಲ್ಲೆಡೆಗೆ ಹರಡಿ, ವೇಮನರ ಮಹಿಮೆಯನ್ನು ಜನರು ಕೊಂಡಾಡಿದರು.

## ಮಳಲು ಬಿತ್ತಿ ಬೆಳೆ :

ವೇಮನ ಯೋಗಿಗಳು ಉನ್ಮತ್ತಾವಸ್ಥೆಯಲ್ಲಿ ಇದ್ದ ದಿನಗಳಲ್ಲಿ ಒಬ್ಬ ಬಡ ರೈತನು ತನ್ನ ಹೊಲದಲ್ಲಿ ಬಿತ್ತುವ ಧಾನ್ಯದ ಬೀಜಗಳು ಕಡಿಮೆ ಬಿದ್ದವು. ಬೇರೆ ಬೀಜ ಕೊಳ್ಳಲು ಅವನಲ್ಲಿ ಹಣವಿರಲಿಲ್ಲ. ಆಗ ಚಿಂತಾಕ್ರಾಂತನಾಗಿದ್ದನು. ಅಷ್ಟರಲ್ಲಿ ನೀರು ಕುಡಿಯಲೆಂದು ಸಮೀಪದ ಹಳ್ಳಕ್ಕೆ ಹೋದನು. ಅಲ್ಲಿ ದಿವ್ಯ ತೇಜಸ್ಸಿನ ದಿಗಂಬರ ಯೋಗಿಯನ್ನು ಕಂಡು, ಅವರಿಗೆ ಶರಣಾಗಿ ತನ್ನ ಬವಣೆಯನ್ನು ತೋಡಿಕೊಂಡನು. ಆ ಯೋಗಿ ನಸು ನಕ್ಕು ತನ್ನ ಕೈಯಿಂದ ಎರಡು ಹಿಡಿ ಮಳಲನ್ನು ಎತ್ತಿ, ಹೋಗು, ಇದನ್ನೇ ಬಿತ್ತು ಕಲ್ಯಾಣವಾಗುತ್ತದೆ ಎಂದು ಮಳಲನ್ನು ಅವನು ಹಾಸಿದ ವಸ್ತ್ರದಲ್ಲಿ ಸುರುವಿದರು. ಯೋಗಿಗಳ ಬಗೆಗೆ ಅಪಾರ ಶ್ರದ್ಧೆ ಇದ್ದ ಆ ಕೃಷಿಕನು ಯಾವ ಸಂದೇಹ ಪಡದೆ, ಮಳಲನ್ನೇ ಬಿತ್ತಿದನು. ಬಳಿಕ ನಾಲ್ಕಾರು ದಿನ ಬಿಟ್ಟು ಬಂದು ನೋಡುತ್ತಾನೆ. ಅವನಿಗೆ ಅಚ್ಚರಿಯಾಯಿತು. ಮಳಲು ಬಿತ್ತಿದಲ್ಲೂ ಧಾನ್ಯದ ಬೆಳೆಯೇ ಮೊಳಕೆಯೊಡೆದಿತ್ತು. ಅಬ್ಬಾ ! ಶಿವನ ಕೃಪೆ ! ಎಂದು ಕೊಂಡನು. ಆ ಬೆಳೆಯು ಉಳಿದ ಬೆಳೆಗಿಂತ ಚೆನ್ನಾಗಿ ಬೆಳೆದಿತ್ತು. ನಾಲ್ಕು ತಿಂಗಳಾದ ಮೇಲೆ ಒಕ್ಕಿದಾಗಲಂತೂ ಆ ಮಳಲು ಬಿತ್ತಿದ ಭಾಗದ ಇಳುವರಿ ಶೇಷಭಾಗದ ಇಳುವರಿಯ ದುಪ್ಪಟ್ಟು ಆಗಿತ್ತು.

ಈ ಸುದ್ದಿಯೂ ಪವಾಡವೆನಿಸಿ ಎಲ್ಲೆಡೆ ಕರ್ಣಾಕರ್ಣಿಯಾಗಿ ಹಬ್ಬಿತು. ಮರು ವರ್ಷ ಹಲವರು ಬಂಡಿಯಲ್ಲಿ ಮಳಲು ಮೂಟೆ ತಂದು ಮಂತ್ರಿಸಿಕೊಡಲು ದುಂಬಾಲು ಬಿದ್ದರು. ಆಗ ಯೋಗೀಶ್ವರರು ಅವರಿಗೆ ತಿಳಿಸಿ ಹೇಳುತ್ತ,

ಉಸುಗು ಬಿತ್ತಲೇನು ಉಂಟು ಲಾಭವೆಮಗೆ ?
ಅಂತೆ ಧಾನ್ಯ ಬಿತ್ತೆ, ಅದುವೆ ಫಲವು.
ಘನನ ಗುಣದ ದೋಷ ಗಣನೆ ಮಾಡಬೇಡ.
ವಿಶ್ವದಾಭಿರಾಮ ಕೇಳು ವೇಮ.

ಎಂದು ಹಾಡಿದರು. "ಯಾವುದೋ ಅವಸ್ಥೆಯಲ್ಲಿ ಇಂಥ ಪವಾಡಪ್ರಾಯ ಘಟನೆ ನಡೆದು ಹೋಗಿದೆ. ಅದು ಈಶ್ವರೇಚ್ಛೆ ಇರಬಹುದು. ಏನೇ ಆಗಲಿ, ಸಿದ್ಧಿ ಪ್ರದರ್ಶನವು ದೋಷವೇ. ಘನನ ಗುಣದ ದೋಷವನ್ನು ಗಣನೆ ಮಾಡಬೇಡಿರಿ. ನೀವು ನಿಮ್ಮ ಹೊಲದಲ್ಲಿ ಧಾನ್ಯವನ್ನೇ ಬಿತ್ತಿರಿ. ಫಸಲು ಹುಲುಸಾಗಲೆಂದು ಬೇಡಿಕೊಳ್ಳೋಣ" ಎಂದು ತಿಳಿಸಿ ಹೇಳಿದರು.

## ಮಳೆ ತರಿಸುವಿಕೆ :

ವೇಮನ ಯೋಗಿಗಳು ತಮ್ಮ ಪರ್ಯಟನ ಕಾಲದಲ್ಲಿ ಒಂದು ಊರಿನಲ್ಲಿ ತಂಗಿದ್ದರು. ಆ ಕಾಲಕ್ಕೆ ಅವರ ಯೋಗ ಸಿದ್ಧಿಗಳನ್ನು ಕುರಿತು ಕತೆಗಳು ಜನಜನಿತವಾಗಿದ್ದವು. ಅವರು ಇಷ್ಟಪಟ್ಟರೆ ಮಳೆ ತರಿಸಬಲ್ಲರೆಂದೂ, ಸತ್ತವರನ್ನು ಬದುಕಿಸಬಲ್ಲರೆಂದೂ ಅವರ ಅಭಿಮಾನಿಗಳು





ಹೇಳುತ್ತಿದ್ದರು.

ಆಗ ವರ್ಷಾಕಾಲ ಕೊನೆಗೊಳ್ಳುತ್ತ ಬಂದಿದ್ದರೂ ಮಳೆಯಾಗಿರಲಿಲ್ಲ. ಹೊಲಗಳನ್ನು ಉತ್ತಿ ಸಿದ್ಧಗೊಳಿಸಿದ್ದರು. ಆದರೆ ಬಿತ್ತಿರಲಿಲ್ಲ. ರೈತರು ಮಳೆಗಾಗಿ ಕಾಯುತ್ತಿದ್ದರು. ಮೋಡಗಳಿಗಾಗಿ ಮುಗಿಲು ನೋಡುತ್ತಿದ್ದರು. ಮುಂಬರುವ ಕ್ಷಾಮದ ಭೀಕರತೆಯಿಂದ ಭಯಗ್ರಸ್ತರಾಗಿದ್ದರು. ಆಗ ಆ ಗ್ರಾಮದ ಭಕ್ತ ಕಾಪುಗಳು, "ಅಪ್ಪಾಜಿ ! ಮಳೆಯೇ ಇಲ್ಲ ಮುಂದೆ ನಮ್ಮಂಥ ಬಡ ರೈತರ ಗತಿಯೇನು ? ಕರುಣೆ ತೋರಿ ಮಳೆ ಬರಿಸಬಾರದೇ ?" ಎಂದು ಕೇಳಿಕೊಂಡರು. ಅದಕ್ಕೆ ಯೋಗಿಗಳು ನಸುನಕ್ಕು,

ಮಳೆಯು ಬರುವ ಅಂದ, ಹರಣ ತೊಲಗುವಂದ,
ಅರಿಯರಾರ ಘನನೆ ಆದೊಡೇನು ?
ತಿಳಿಯಲು ಕಲಿಯುಗವು ಉಳಿಯುವುದು ಎಂತು ?
ವಿಶ್ವದಾಭಿರಾಮ ಕೇಳು ವೇಮ.

"ಅಪ್ಪಾಜಿ ! ಈ ಮೊದಲು ತಾವು ಮಳೆ ತರಿಸಿದ್ದಿರೆಂದು ಕೇಳಿದ್ದೇವೆ" ಎಂದರು.

"ಆ ಮಾತು ಬೇಡ. ಶಿವನ ಕರುಣೆಯಿಂದ ಅತಿಮಾನಸ ಪ್ರಜ್ಞೆಗೆ ಹೊಳೆಯುವುದುಂಟು ಆದರೆ ಇದು ಕಲಿಕಾಲ. ಜನರಲ್ಲಿ ಪಾಪ ತುಂಬಿದೆ ಅದರಿಂದಾಗಿ ಶಿವನ ಕರುಣೆ ಲಭಿಸುವುದು ಅನಿಶ್ಚಿತ" ಎಂದರು.

"ಹಾಗಾದರೆ ನಮ್ಮ ಗತಿ ?" ಎಂದು ಕೇಳಿದರು ಕಾಪು ಧುರೀಣ.

"ಚಿಂತೆ ಬೇಡ, ಭಕ್ತಿ ಭಾವದಿಂದ, ಮನೋಶುದ್ಧಿ ಹೊಂದಿ ಇರಿ. ಎಲ್ಲವೂ ದೊರೆಯುತ್ತದೆ" ಎಂದರು.

## ಬಾಲವತ್ ಅವಸ್ಥೆ :

ಯೋಗಿಯ ಮನವು ಉದ್ದೀಪನಗೊಂಡು ಉನ್ಮನೀ ಅವಸ್ಥೆಯನ್ನು ತಲುಪುವ ಮಾರ್ಗ ಮಧ್ಯೆ ಅವನು ಪಿಶಾಚವತ್, ಉನ್ಮತ್ತವತ್ ಮತ್ತು ಬಾಲವತ್ ಅವಸ್ಥೆಗಳನ್ನು ಹೊಂದುತ್ತಾನೆಂದು ಈ ಮುನ್ನ ತಿಳಿಸಿದ್ದೇವೆ. ಇವು ಎಲ್ಲ ಯೋಗಿಗಳಿಗೂ ಸಾಮಾನ್ಯ ಅವಸ್ಥೆಗಳೇ. ಕೆಲವರು ತುಂಬಾ ರಕ್ಷಿತ ಪರಿಸರದಲ್ಲಿ ಇರಬಹುದು. ಆಗ ಅವರ ಹಾವ-ಭಾವ, ನಡೆ-ನುಡಿ, ಕ್ರೀಡೆ-ಲೀಲೆಗಳನ್ನು ಅವರ ಪಾಲಕರು, ಪರಿಚಾರಕರು ಸರಿಯಾಗಿ ಅರ್ಥೈಸಿಕೊಂಡು ಅವರ ನಡೆವಳಿಗಳಿಗೆ ತಕ್ಕ ಅನುವು ನೀಡಿ, ವಿಕಾಸವನ್ನು ಸಕ್ರಮಗೊಳಿಸುವುದುಂಟು. ಇಂಥ ರಕ್ಷಣೆಯ ಅಭಾವದಲ್ಲಿ ಈ ಅವಸ್ಥೆಗಳು ಜನಪದದ ದೃಷ್ಟಿಯಲ್ಲಿ ಹುಚ್ಚು ಎನಿಸಿ ಕೌತುಕದ ವಿಷಯವಾಗಬಹುದು.

ವೇಮನ ಯೋಗಿಗಳು ಆಗೀಗ ಬಾಲವತ್ ಅವಸ್ಥೆಯಲ್ಲಿರುತ್ತಿದ್ದರು. ಆಗ ಅವರ ಪ್ರಜ್ಞೆಯು ಬಾಲರ ಪ್ರಜ್ಞೆಯಂತೆಯೇ ಇರುತ್ತಿತ್ತು.

ತಾಯಿಯುದರದಿಂದ ತಾನು ಜನಿಸುವಾಗ,
ಆದಿಗಿಲ್ಲ ಬಟ್ಟೆ ಅಂತ್ಯಕಿಲ್ಲ.
ನಡುವೆ ಬಟ್ಟೆಯುಡಲು ನಗುಪಾಟಲಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ಮೋಕ್ಷ-ಗುರುವಿನಿಂದ ದೀಕ್ಷೆ ಪಡೆದಾಗ ದಿಗಂಬರರಾದ ವೇಮನರು ಕಾಮವನ್ನು ಜಯಿಸಲು ಅದು ಪರಿಣಾಮಕಾರಿ ವಿಧವೆಂದು ಅರಿತಿದ್ದರು. ಆದರೆ ತಾವು ಬಾಲವತ್ ಅವಸ್ಥೆಯಲ್ಲಿ ಇರುವಾಗ ಬಾಲಪ್ರಜ್ಞೆಯನ್ನೇ ಹೊಂದಿರುತ್ತಿದ್ದರು. ತಾಯಿಯ ಗರ್ಭ ತೊರೆದು ತಾನು ಬರುವಾಗ ಮೊದಲು ಬಟ್ಟೆಯಿರದು. ಭೂಮಿಯನ್ನು ತೊರೆದು ಹೋಗುವಾಗ ಅಂತ್ಯಕ್ಕೂ ಬಟ್ಟೆ ಇರದು. ಅಂದ ಮೇಲೆ ಈ ಮಧ್ಯೆ ಬಟ್ಟೆಯುಡುವುದು ಪ್ರಕೃತಿಯ ವಿಧಿಗೆ ಚೇಷ್ಟೆ ಮಾಡಿದಂತಲ್ಲವೇ ? ಎಂದು ಭಾವಿಸುತ್ತಿದ್ದರು.

ಬಾಲವತ್ ಅವಸ್ಥೆಯಲ್ಲಿರುವಾಗ ಅವರ ಪ್ರಜ್ಞೆಯು ಪರತತ್ತ್ವದಲ್ಲಿ ವಿಚಾರ ಮಾರ್ಗದಲ್ಲಿದ್ದರೂ ಸಹ, ಇಹದ ಹಾವ-ಭಾವ, ನಡೆ-ನುಡಿಗಳು ಬಾಲರಂತೆಯೇ ಇರುತ್ತಿದ್ದವು.

ಕರೆದೊಡೆ ಮಾತನಾಡದೆ, ಮರಳಿ ಕರೆಯೆ ಮೌನನಿರುವಾ ;
ಅರಿತೊಡೆ, ಯಾರೆ ಆಡಲೇನನು 'ಅಲ್ಲ' ವೆಂದು ನಗುತಿಪ್ಪನ್.
ಪರತತ್ತ್ವವಾತ್ಮದೊಳು ವಿಚಾರಿಸಿ, ನಿತ್ಯವು ತಾನೆ ಇಪ್ಪ ಸದಾ.
ಅರಿತಿಹ ಯೋಗಿ ವೇಮನ ಗತಿಯು ಶಿವರೂಪನೆ ಸರ್ವ ತಾಣದೋಳ್.

ಕರೆದರೆ ಮಾತನಾಡುತ್ತಿರಲಿಲ್ಲ ಮರಳಿ ಕರೆಯೆ, ಕರೆದವರತ್ತ ನೋಡಿ ತುಟಿ ಬಿಚ್ಚದೆ ಮೌನವಾಗಿರುತ್ತಿದ್ದರು.. ಯಾರೇ ಆಗಲಿ ಏನನ್ನಾದರೂ ಆಡಿದರೆ ಸಮ್ಮತಿಸದೆ, 'ಅಲ್ಲ, ಅಲ್ಲ' ಎಂದು ತಲೆಯಾಡಿಸಿ ನಗುತ್ತಿದ್ದರು. ತನ್ನಲ್ಲಿಯೇ ಪರತತ್ತ್ವವನ್ನು ವಿಚಾರಿಸುತ್ತ ನಿತ್ಯವೂ ತಾನೇ ತಾನಾಗಿ ಇರುತ್ತಿದ್ದರು. ಹೀಗೆ ಪೂರ್ಣವಾಗಿ ಅರಿತಿಹ ಯೋಗಿ ವೇಮನರ ಪ್ರಜ್ಞೆಯ ಗತಿಯನ್ನೇತಿಳಿದರೆ, ಅವರು ಎಲ್ಲ ತಾಣಗಳಲ್ಲಿ ಶಿವರೂಪರೇ ಆಗಿರುತ್ತಿದ್ದರು.
ಬಾಲವತ್ ಅವಸ್ಥೆಗೆ ಪ್ರಜ್ಞೆಯು ಏರಿದಾಗ ಅವರಿಗೆ ತಮ್ಮ ತಾರುಣ್ಯದ ವಿಚಾರಗಳು ಮೂಢವೆನಿಸುತ್ತಿದ್ದವು.

ಬಾಲ್ಯದಲ್ಲಿ ನೀನು ಬಹಳ ವಿಧದಿ ಹಿಡಿದು,
ಸವಿದು ಚಪ್ಪರಿಸಿದ ಸ್ತನಕಾಗಿ,
ಮೋಹವಿನಿತು ಏಕೆ ? ಮೂಢಾತ್ಮ ತಿಳಿದುಕೊ.
ವಿಶ್ವದಾಭಿರಾಮ ಕೇಳು ವೇಮ.

ಸ್ತ್ರೀಯ ಸ್ತನಗಳನ್ನು ನೋಡಿದಾಗಲೂ ತಾವು ಬಾಲ್ಯದಲ್ಲಿ ಹಿಡಿದು ಹಾಲು ಸವಿದು ಚಪ್ಪರಿಸಿದ ತಾಯಿಯ ಮೊಲೆಗಳ ಸ್ಮೃತಿಯೇ ಬರುತ್ತಿತ್ತು. ಅವರ ಮನಸ್ಸು ಮೋಹದಿಂದ ಮೂಢವಾಗುತ್ತಿರಲಿಲ್ಲ.

ಇಂಥ ಬಾಲವತ್ ಅವಸ್ಥೆಯ ವೇಮನರು ಕೆಲವೊಮ್ಮೆ ಬಾಹ್ಯ ಪ್ರಜ್ಞೆಯನ್ನು ಕಳೆದುಕೊಂಡು ತಮ್ಮನ್ನು ಆಮಂತ್ರಿಸಿದ ಅತಿಥೇಯರ ಮನೆಗಳಲ್ಲಿಯೇ ಬಾಲಕರಂತೆ ಮಲಮೂತ್ರಗಳನ್ನು ವಿಸರ್ಜಿಸುತ್ತಿದ್ದರು. ಸೋಜಿಗವೆಂದರೆ, ಯಾರು ಭಕ್ತಿ ಗೌರವಗಳಿಂದ ಈ ಬಾಲವತ್ ಕ್ರೀಡೆಗಳನ್ನು ಕಾಣುತ್ತಿದ್ದರೋ, ಅವರಿಗೆ ಆ ಮಲ ಮೂತ್ರಗಳು ಚಿನ್ನದ ಗಟ್ಟಿಗಳಾಗುವುದೂ ಇತ್ತು. ಭಕ್ತಿ ಗೌರವ ತಾಳದೆ ಯೋಗಿಗಳನ್ನು ಛೀ ಥೂ ಎಂದವರು ದುರ್ಗಂಧಮಯ ಮಲವನ್ನು ಕಾಣುತ್ತಿದ್ದರು.





ಇಂಥ ವಿಚಿತ್ರ ಘಟನೆಗಳ ಸುದ್ದಿ ಎಷ್ಟು ಗಾಢವಾಗಿ ಹರಡಿತ್ತೆಂದರೆ, ಯೋಗಿಯ ಮೈಯಿಂದ ಚಿನ್ನ ಹೊರಬೀಳುತ್ತದೆ. ಯೋಗಿ ಸ್ಪರ್ಶಿಸಿದ್ದು ಚಿನ್ನವಾಗುತ್ತದೆ ಎಂದು ಜನರು ಅವರನ್ನು ಬೆಂಬತ್ತುತ್ತಿದ್ದರು.

ಯೋಗಿಗಳು ಸಮಾಧಿ ಸ್ಥಿತಿಯಿಂದ ಪರಾಕ ಅಂದರೆ ಬಾಹ್ಯಪ್ರಜ್ಞೆ ಪಡೆದಾಗ ತುಂಬಾ ಪ್ರಸನ್ನರಾಗಿರುತ್ತಿದ್ದರು. ಆಗ ಅವರ ದರ್ಶನ ಪಡೆದವರು ಅಪಾರ ಶಾಂತಿ ಪಡೆಯುತ್ತಿದ್ದರು. ಅವರ ಸುತ್ತಣ ಪರಿಸರದ ಸ್ಪಂದನಗಳೇ ಅಷ್ಟು ಸೂಕ್ಷ್ಮವಾಗಿರುತ್ತಿದ್ದವು. ಉತ್ತರವು ತಂತಾನೇ ದೊರಕುತ್ತಿತ್ತು.

ಒಮ್ಮೆ ಓರ್ವ ಹೆಣ್ಣು ಮಗಳು ತಮ್ಮ ತಂದೆಯೊಡನೆ ಯೋಗಿಗಳ ಸನ್ನಿಧಿಗೆ ಬಂದಿದ್ದಳು. ಅವಳ ದುರ್ಭಾಗ್ಯವೆಂದರೆ ಅವಳ ಕಣ್ಣು ಕಾಣುತ್ತಿರಲಿಲ್ಲ. ವೈದ್ಯರು, ಕಣ್ಣುಗಳೇನೋ ಸರಿಯಾಗಿವೆ. ಬಹುಶಃ ಮಸ್ತಿಷ್ಕದ ತಂತುಗಳ ಸಂಬಂಧ ತಪ್ಪಿರಬಹುದೆಂದು ಹೇಳಿದರು. ಅವಳ ತಂದೆ ಯೋಗಿಗಳಿಗೆ ಪೊಡಮಟ್ಟು, ತನ್ನ ಮಗಳ ಕುರುಡುತನದ ಪ್ರಸ್ತಾಪ ಮಾಡಿದನು. ಯೋಗಿಗಳು ಅವಳತ್ತ ಐದು ನಿಮಿಷ ನೋಡಿ ಕಣ್ಣು ಮುಚ್ಚಿದರು. ಆಗ ಆ ಹೆಣ್ಣು ಮಗಳು ಗಾಢ ಶಾಂತಿಯನ್ನು ಪಡೆದಳು. ಅವಳ ತಂದೆಗೆ ಸನ್ನೆ ಮಾಡಿ ಆ ಹೆಣ್ಣು ಮಗಳನ್ನು ಬಳಿಗೆ ಕರೆಸಿಕೊಂಡು, ತಮ್ಮ ಹಸ್ತದ ನಡುವಿನ ಮೂರು ಬೆರಳುಗಳಿಂದ ಅಕ್ಷಿ ದ್ವಾರವನ್ನು ಮತ್ತು ನಡುನೆತ್ತಿಯನ್ನೂ ಸ್ಪರ್ಶಿಸಿದರು. ಮುಂದೆ ಐದು ನಿಮಿಷ ಕಳೆದ ಮೇಲೆ ಅವಳಿಗೆ ಸಾವಕಾಶ ರೆಪ್ಪೆ ತೆಗೆಯಲು ಹೇಳಿದರು. ಕಣ್ಣು ತೆಗೆದು ನೋಡುತ್ತಾಳೆ. ಎದುರಿಗೆ ದಿಗಂಬರ ಮೂರ್ತಿ ! ಸ್ವಲ್ಪು ನಾಚಿ, ತಲೆ ತಗ್ಗಿಸಿದಳು. ದೀರ್ಘದಂಡ ನಮಸ್ಕಾರ ಮಾಡಿದಳು.

"ಅಪ್ಪಾ ! ಇವರು ಶಿವಸ್ವರೂಪರು !" ಎಂದು ತನ್ನ ತಂದೆಗೆ ತಿಳಿಸಿದಳು.

"ಎಲ್ಲವೂ ಶಿವನ ಲೀಲೆ !" ಎಂದರು ನಸುನಗುತ್ತ ಯೋಗಿಗಳು.

-----

# ೧೭. ಮಹಾ ನಿರ್ಯಾಣ

ಮಹಾಯೋಗಿ ವೇಮನರು ತಮ್ಮ ಜೀವನದ ಅರವತ್ತೆಂಟು. ವಸಂತಗಳನ್ನು ಕಳೆದಿದ್ದರು. ಯೋಗ ಸಿದ್ಧಿಯಿಂದ ಅವರು ಜೀವನ್ಮುಕ್ತರಾಗಿದ್ದರು. ಅವರು ತಮ್ಮ ಭೌತಿಕ ದೇಹವನ್ನು ಪ್ರಾರಬ್ಧ ಕರ್ಮಫಲ ಭೋಗಿಸಿ ತೀರಿಸುವುದಕ್ಕಾಗಿ ಉಳಿಸಿಕೊಂಡಿದ್ದರಷ್ಟೇ. ಅವರ ಮಹಾನಿರ್ಯಾಣ ಪ್ರಸಂಗದಲ್ಲಿ ನಡೆದ ಆಶ್ಚರ್ಯಕರ ಘಟನೆಯು, ಆ ಘಟನೆಯ ನಂತರ ದೀರ್ಘಕಾಲ ಪರ್ಯಂತ ಕುತೂಹಲಕಾರಿಯಾಗಿಯೇ ಉಳಿದಿದೆ.

ಅವರು ಮಹಾನಿರ್ಯಾಣ ಹೊಂದಿದ ಪ್ರಸಂಗ ಹೀಗೆ! ಅವರು ತಮ್ಮ ಯೋಗ ಶಕ್ತಿಯಿಂದ ತಮ್ಮ ಮರಣವನ್ನು ಮುಂನಂಡಿದ್ದರು. ಆ ಕುರಿತು ತಮ್ಮ ನೆಚ್ಚಿನ ಶಿಷ್ಯರಿಗೂ ತಿಳಿಸಿದ್ದರು. ಹೀಗಾಗಿ ಅವರು ತಮ್ಮ ಕೊನೆಗಾಲವನ್ನು ಕಳೆದ ಕಟಾರ್ಲುಪಲ್ಲೆಯಲ್ಲಿ ಜೀವಂತ ಸಮಾಧಿ ಹೊಂದಿದರು. ಈ ಬಗೆಗೆ ಅನೇಕ ಯೋಗಿ ಪುಂಗವರು ಖಚಿತಪಡಿಸಿದ್ದಾರೆ.

ಆದರೆ ಅವರ ಮಹಾನಿರ್ಯಾಣ ಕುರಿತು ಇನ್ನೊಂದು ಆಖ್ಯಾನವಿದೆ. ಅದೇಂದರೆ ಅವರು ಬಹು ಜನ ಯೋಗ ಸಾಧಕರಿಗೆ ತರಬೇತಿ ನೀಡಿದ ಪಾಮೂರು ( ಇಂದಿನ ಪ್ರಕಾಶಂ ಜಿಲ್ಲೆಯ ಒಂದು ಹಳ್ಳಿ) ಬೆಟ್ಟದ ದೊಡ್ಡ ಗವಿಯನ್ನು ಪ್ರವೇಶಿಸಿ, ಜನರಿಗೆ ಆಶೀರ್ವದಿಸಿ, ಕಾಣದಾದರು.

ಈ ಉಭಯ ಘಟನೆಗಳನ್ನು ಕಣ್ಣಾರೆ ಕಂಡವರು ಯಾರೂ ಇಲ್ಲ. ಏಕೆಂದರ, ಏರಡೂ ಘಟನೆಗಳು ಏಕ ಕಾಲಕ್ಕೆ ನಡೆದಿವೆ. ಮಹಾಯೋಗಿಯ ಯೋಗಸಿದ್ಧಿಯಲ್ಲಿ ಪೂರ್ಣ ವಿಶ್ವಾಸವಿಟ್ಟವರು ಮಾತ್ರ ಇವೆರಡೂ ಘಟನೆಗಳಿಗೆ ಸಮ್ಮತಿಸಬಲ್ಲರಷ್ಟೇ. ಇಂಥ ನಂಬಿದರೆ ನಂಬಿ, ಬಿಟ್ಟರೆ ಬಿಡಿ ಎನ್ನುವಂಥ ಅಚ್ಚರಿಯ ಘಟನೆಗಳಿಗೆ ಆಧಾರವಾದ ಮಹಾಯೋಗಿಯ ಸಿದ್ಧಿಯಾವುದು? ಇದು ಅವರ ವಿಶೇಷ ಸಿದ್ಧಿಯೇ ? ಹಾಗೇನಿಲ್ಲ. ಅನೇಕ ಯೋಗಿಗಳು, ಸಿದ್ಧರು ಇಂಥ ಸಿದ್ಧಿ ಸಂಪನ್ನರಾದುದನ್ನು ಇತಿಹಾಸ ತಿಳಿಸುತ್ತದೆ.

ಈ ಸಿದ್ಧಿಯೇ ಛಾಯಾ ಶರೀರ ಧಾರಣೆ. ಈ ಛಾಯಾ ಶರೀರವು ನೈಜ ಶರೀರದ ಛಾಯಾಮೂರ್ತಿಯಾಗಿದೆ. ಅದಕ್ಕಾವ ಜಠರವೂ ಇರದು. ಆದರಿಂದ ಅದು ಯಾರಿಂದಲೂ ಯಾವ ಆಹಾರವನ್ನೂ ಸ್ವೀಕರಿಸದು. ಬಹಳವಾದರೆ, ಪಾನೀಯವನ್ನು ಸ್ವೀಕರಿಸಬಹುದು. ಅದನ್ನು ತುಟಿಯ ವರೆಗೂ ಒಯ್ಯಬಹುದು. ಕಡೆಗೆ ಆ ಪಾನೀಯವು ಬಾಷ್ಪೀಭವನವಾಗುತ್ತದಷ್ಟೇ. ಕೆಲವು ಸಂದರ್ಭಗಳಲ್ಲಿ ಛಾಯಾ ಶರೀರದ ಧ್ವನಿಯು ನೈಜ ಶರೀರದ ಧ್ವನಿಗಿಂತ ಸ್ವಲ್ಪ ಭಿನ್ನವಾಗಿರಬಹುದು. ಆದರೂ ಅದನ್ನು ವಿಂಗಡಿಸಿ ಗುರುತಿಸುವುದು ಕಷ್ಟಸಾಧ್ಯ, ಛಾಯಾ ಮೂರ್ತಿಯನ್ನು ನೈಜ ಶರೀರದಿಂದ ವಿಂಗಡಿಸಿ ಗುರುತಿಸುವುದು ಕಷ್ಟಸಾಧ್ಯ. ಆದರೆ ಛಾಯಾ ಶರೀರಕ್ಕೆ ಭಕ್ತರ ತೋರುವ ಶ್ರದ್ಧಾ ಭಕ್ತಿಗಳು ನೈಜ ಶರೀರಕ್ಕೆ ತೋರಿದ ಶ್ರದ್ಧಾ ಭಕ್ತಿಗಳಂತೆಯೇ ಫಲ ನೀಡುತ್ತವೆ. ಇದನ್ನು ನಾನು ನನಗೆ ಪರಿಚಿತ ಛಾಯಾ ಶರೀರ ಧರಿಸುವ ಸಿದ್ಧಿ ಹೊಂದಿದ. ಮಹಾಕೌಲರೊಬ್ಬರ ಅಭಿಮತರ ಮೇರೆಗೆ ಹೇಳುತ್ತಿದ್ದೇನೆ. ಶ್ರೀ ಶ್ರೀ ಆನಂದಮೂರ್ತಿಯವರು ಇಂಥ ಮಹಾತ್ಮರು. ನಾನು ಓದಿ ತಿಳಿದ ಮೇರೆಗೆ ಸುಪ್ರಸಿದ್ಧ ಯೋಗಾನಂದರ ಆತ್ಮಚರಿತ್ರೆಯಲ್ಲಿ ವಿವರಿಸಿದಂತೆ ಅವರ ಪರಮ ಗುರು ಅಂದರೆ ಮುಕ್ತಾನಂದರ ಗುರು ಲಾಹಿರಿ ಮಹಾಶಯರು ಇಂಥ





ಸಿದ್ಧಿಸಂಪನ್ನರಾಗಿದ್ದರು. ಮಹಾಸಿದ್ಧ ಯೋಗಿಗಳಾದ ನಿತ್ಯಾನಂದರೂ. ಇಂಥ ಸಿದ್ಧ ಪುರುಷರಾಗಿದ್ದರು. ಅವರನ್ನು ಕಾಣಲು ಮುಂಬಯಿಯ ಗಣೇಶಪುರಿಯ ಆಶ್ರಮಕ್ಕೆ ಅಂದು ಮುಂಬಯಿ ರಾಜ್ಯದ ಉಪಮಂತ್ರಿಯಾದ, ನನ್ನ ಆತ್ಮೀಯ ಹಿರಿಯರಾಗಿದ್ದ ದಿ. ಕೆ.ಎಫ್.ಪಾಟೀಲರು. ಹೋದಾಗ ನಿತ್ಯಾನಂದರನ್ನು ಆಶ್ರಮದ ದಾರಿಯಲ್ಲಿ ಅರ್ಧ ಕಿಲೋಮೀಟರ ದೂರದಲ್ಲಿ, ಹಲವು ಶಿಷ್ಯರೊಂದಿಗೆ ಕುಳಿತಿರುವುದನ್ನು ಕಣ್ಣಾರೆ ಕಂಡು ಶಿರಬಾಗಿದರು. ಮುಂದೆ ತಮ್ಮ ಕಾರಿನಲ್ಲಿಯೇ ಆಶ್ರಮಕ್ಕೆ ಹೋಗಿ, ಸ್ವಾಮಿಗಳ ಬರವಿಗಾಗಿ ಕಾಯಬೇಕೆಂದುಕೊಂಡಿದ್ದರು. ಆದರೆ ಆಶ್ಚರ್ಯದಲ್ಲಿ ಆಶ್ಚರ್ಯ! ಕೆ. ಎಫ್. ಪಾಟೀಲರು ಅಶ್ರಮ ತಲುಪಿ, ಒಳನಡೆದಾಗ ತಮ್ಮ ಕಣ್ಣನ್ನೇ ನಂಬದಾದರು. ನಿತ್ಯಾನಂದರು ಶಿಷ್ಯರ ಮಧ್ಯೆ ವಿರಾಜಮಾನರಾಗಿ, ಶ್ರೀ ಪಾಟೀಲರನ್ನು ಕಂಡು ಮುಗುಳ್ನಕ್ಕರು. ನಮ್ಮ ಕಾಲದ ಜ್ಞಾನಯೋಗಿಗಳೆಂದು ಪ್ರಸಿದ್ಧರಾಗಿದ್ದ ತಿರುವಣ್ಣಮಲೆಯ ಶ್ರೀ ರಮಣ ಮಹರ್ಷಿಗಳು ಒಂದು ಬಾರಿ ತಮ್ಮ ಭಕ್ತನೊಬ್ಬನ ಮಂತ್ರಯಜ್ಞದಲ್ಲಿ ಉಪಸ್ಥಿತರಿರಲು ಹೋಗಿದ್ದರು. ಅನಂತರ ವಿಚಾರಿಸಿದಾಗ ಅವರ ನೈಜ ದೇಹವು ತಿರುವಣ್ಣಮಲೆಯಲ್ಲಿಯೇ ಇದ್ದಿತೆಂದೂ ಅವರು ಮಂತ್ರಯಜ್ಞದಲ್ಲಿ ತಮ್ಮ ಛಾಯಾ ಶರೀರ ಮೂಲಕ ಪಾಲ್ಗೊಂಡಿದ್ದರೆಂದೂ ತಿಳಿದು ಬಂದಿತು. ಅಷ್ಟೇಕೆ ? ಪವಾಡ ಪುರುಷರೆಂದೇ ಹೆಸರಾಗಿರುವ ಪುಟ್ಟಪರ್ತಿಯ ಶ್ರೀ ಸತ್ಯ ಸಾಯಿ ಬಾಬಾ ಅವರು ಮತ್ತು ಓಂ ನಗರದ ಶ್ರೀ ನೀಲಕಂಠ ತಾತನವರೂ ಒಂದೇ ಕಾಲಕ್ಕೆ ಎರಡು ಸ್ಥಳಗಳಲ್ಲಿ ಇದ್ದು ಧರ್ಮ ಕಾರ್ಯದಲ್ಲಿ ಭಾಗವಹಿಸಿದ್ದರೆಂದು ಲಿಖಿತ ಸಾಹಿತ್ಯದ ಮೂಲಕ ತಿಳಿದುಬರುತ್ತದೆ.

ಇನ್ನು ಮಹಾ ನಿರ್ಯಾಣ ಕಾಲಕ್ಕೆ ಸಿದ್ಧಿ ತೋರಿದ ಎರಡು ನಿದರ್ಶನಗಳಿವೆ. ವೇಮನರ ಸಮಕಾಲೀನರಾಗಿದ್ದು ಅವರ ನಂತರ ದೇಹ ತ್ಯಾಗ ಮಾಡಿದ ಮಹಾಸಂತ ಮಹಾತ್ಮ ಕಬೀರರು, ಅಂತ್ಯ ಸಂಸ್ಕಾರ ವಿಧಿ ವಿಧಾನ ಕುರಿತು, ಹಿಂದು ಮುಸ್ಲಿಮ ಶಿಷ್ಯರಲ್ಲಿಯ ಜಗಳ ತಪ್ಪಿಸಲು, ತಮ್ಮ ಕಳೇವರವನ್ನು ಪುಷ್ಪಗುಚ್ಛವಾಗಿ ಪರಿವರ್ತಿಸಿದರು. ವೇಮನ ಯೋಗಿಗಳ ನಂತರದ ದಿನಗಳಲ್ಲಿ, ಪ್ರಸಿದ್ಧ ಸಂತರಾದ ತುಕಾರಾಮ ಸದೇಹವಾಗಿ ಪುಷ್ಪಕ ವಿಮಾನದಲ್ಲಿ ಸ್ವರ್ಗ ಸೇರಿದರೆಂಬ ಆಖ್ಯಾನವು ಬಲವಾಗಿದೆ. ಇವರಿಬ್ಬರೂ ಮಹಾಯೋಗಿಗಳ ತತ್ತ್ವಪ್ರಣಾಲಿಯೊಂದಿಗ ಸಮರಸ ಹೊಂದಿದ್ದ ಮಹಾತ್ಮರು. ಮಹಾಯೋಗಿ ವೇಮನರ ಮಹಾನಿರ್ಯಾಣ ಕಾಲದಲ್ಲಿಯ ಘಟನೆಗೂ ಈ ಉಭಯ ಸಂತರ ಮಹಾನಿರ್ಯಾಣ ಕಾಲದ ಘಟನೆಗಳಲ್ಲಿ ಸಾದೃಶ್ಯವಿರುವುದು ಸೋಜಿಗವಾಗಿದೆ.

ಕಲ್ಯಾಣ ಖ್ಯಾತಿಯ ಅಲ್ಲಮ ಪ್ರಭು ಸಿದ್ಧಯೋಗಿ ಗೋರಖನಾಥರೊಡನೆ ಭೆಟ್ಟಿಯಾಗಿದ್ದರೆಂದೂ ಆಗ ಅವರ ಶರೀರಕ್ಕೆ ನೆರಳೇ ಇರುತ್ತಿರಲಿಲ್ಲವೆಂದು, ಅದನ್ನು ಕಡಿಯಲು ಕತ್ತಿ ಝಳಪಿಸಿದರೂ, ಶರೀರಕ್ಕಾವ ಬಾಧೆಯಾಗುತ್ತಿರಲಿಲ್ಲವೆಂದೂ ಆಖ್ಯಾನವಿದೆ. ಹಾಗಿದ್ದರೆ ಅಲ್ಲಮರನ್ನು ಛಾಯಾ ಶರೀರ ಧರಿಸಬಲ್ಲ ಸಿದ್ಧರೆಂದು ಗುರುತಿಸಬಹುದು. ಅವರ ವಿಚಿತ್ರ ನಡೆನುಡಿಗಳನ್ನು ತಿಳಿಸುವ ಒಂದು ವಚನದಲ್ಲಿ ''ನಿಂದರೆ ನೆಳಲಿಲ್ಲ; ಸುಳಿದರೆ ಹೆಜ್ಜೆಯಿಲ್ಲ,ಪ್ರಭುದೇವರೆಂಬ ಭಾವ ತೋರುತ್ತಿದೆ'', ಆದರೆ ಈ ಸ್ಥಿತಿಯನ್ನು ಅವರ ಅನುಭಾವ ಊರ್ಧ್ವ ಅವಸ್ಥೆಯ ಸಂದರ್ಭದಲ್ಲಿ ಹೇಳಿರುವುದರಿಂದ ಇದು ಅವರ ಭೌತಿಕ ಶರೀರದ ವರ್ಣನೆಯಂತೂ ಅಲ್ಲ, ಎಂದು ಗೊತ್ತಾಗುತ್ತದೆ.

ಛಾಯಾ ಶರೀರ ಕುರಿತು ಈ ಪೂರ್ವಪೀಠಿಕೆಯನ್ನು ಗಮನಿಸಿದ ಮೇಲೆ

ಮಾಹಾಯೋಗಿ ವೇಮನರ ಮಾಹಾನಿರ್ಯಾಣ ಕುರಿತು ವಿವೇಚಿಸುವಾ.

## ಅ. ಕಟಾರ್ಲುಪಲ್ಲೆಯಲ್ಲಿ ಸಜೀವ ಸಮಾಧಿ :

ಅಂದು ಶಾರ್ವರಿ ನಾಮ ಸಂವತ್ಸರದ, ಚೈತ್ರ ಮಾಸದ, ಶುಕ್ಲ ಪಕ್ಷದ ನವಮಿ ತಿಥಿಯಿತ್ತು. ವೇಮನಯೋಗಿ ಪೂರ್ವ ಸೂಚನೆ ನೀಡಿದಂತೆ, ಆ ದಿನ ಅವರು ದೇಹ ತೊರೆಯುವ ದಿನ. ಅಣು ಮನಸ್ಸಿನ ಪ್ರಕ್ರಿಯೆಯು ಮರಣವನ್ನು ತಿಳಿಯಲಾರದು. ಅವರೇ, ಆ ಮುನ್ನ, ಒಂದು ಬಾರಿ ತಿಳಿಸಿದಂತೆ,

ಹನಿಯು ಬೀಳುವಂದ, ಹರಣ ತೊಲಗುವಂದ,
ತಿಳಿಯಲಾರ ಘನನೆ ಆದೊಡೇನು ?
ತಿಳಿದೊಡಾಗ ಕಲಿಯುಗ ಉಳಿಯುವುದು ಎಂತು ?
ವಿಶ್ವದಾಭಿರಾಮ ಕೇಳು ವೇಮ.

ಆದರೆ, ಬ್ರಾಹ್ಮಿ ಮನವು ಆಗೀಗ ಬೋಧಿ ಸಂಪನ್ನರ ಮೂಲಕ ಕಾರ್ಯಮಾಡುವುದುಂಟು. ಆಗ ಅಣು ಮನಸ್ಸಿನ ಎಲ್ಲೆಯಾಚೆಯ ಸಂಗತಿಗಳು ವೇದ್ಯವಾಗುತ್ತವೆ. ಹೀಗಾಗಿ, ಯೋಗಿವರ್ಯರು ತಮ್ಮ ದೇಹತ್ಯಾಗದ ವಿಷಯವನ್ನು ಶಿಷ್ಯ ರಾಮರೆಡ್ಡಿಗೆ ತಿಳಿಸಿದ್ದರು. ಅವನ ಮುಖಾಂತರ ಇತರರಿಗೂ ತಿಳಿದಿತ್ತು. ಹೀಗಾಗಿ, ಸಮಾಧಿ ರಚನೆಯು ಆ ಮುನ್ನವೇ ಆಗಿತ್ತು. ಅಂದು ಕಟಾರ್ಲುಪಲ್ಲೆಯ ಹೊರವಲಯದ ದಿನ್ನೆಯ ಮೇಲೆ ಸಾಕಷ್ಟು ಜನ ಸೇರಿದ್ದರು. ಹಿಂದಿನ ಯೋಗಿಯೋರ್ವರ ಜೀವಂತ ಸಮಾಧಿಯ ವಿಚಾರವನ್ನು ಆ ಭಾಗದ ಹಲವು ಜನರು ಗ್ರಂಥಗಳಲ್ಲಿ ಓದಿದ್ದರೇ ಹೊರತು, ಕಣ್ಣಾರೆ ಕಂಡಿರಲಿಲ್ಲ.

ವೇಮನಯೋಗಿ ತಮ್ಮ ಕುಟೀರದಲ್ಲಿ ಆ ದಿನ ವಿಶೇಷ ಸ್ನಾನ ಮಾಡಿ ನಿತ್ಯದಂತೆ ಧ್ಯಾನಾದಿ ಕ್ರಿಯೆಗಳನ್ನು ತೀರಿಸಿದರು. ರಾಮರೆಡ್ಡಿ ಕೊಟ್ಟ ಒಂದು ಬಟ್ಟಲು ಸಿಹಿ ಹಾಲು ಸೇವಿಸಿದರು. ಹಾಲು ನೀಡುವಾಗ, ಇದೇ ಕೊನೆಯ ಸೇವೆಯೆಂಬ ನೆನಪಾಗಿ, ರಾಮರೆಡ್ಡಿಯ ಕಣ್ಣಂಚಿನಲ್ಲಿ ನೀರು ಕಾಣಿಸಿತು. ಹೊರಗೆ ಜನರ ಸದ್ದುಗದ್ದಲವಿತ್ತು. ವೇಮನ ಯೋಗಿಗಳಿಗೆ ಜಯವಾಗಲಿ ! ಪರಂಜ್ಯೋತಿ ವೇಮನ ಚಿರಾಯುವಾಗಲಿ ! ಎಂಬ ಉದ್ಘೋಷಗಳು ಕೇಳಿ ಬರುತ್ತಿದ್ದವು. ವೇಮನರು ಹೊರಬಂದರು. ತಮಗಾಗಿ ಸಿದ್ಧ ಪಡಿಸಿದ ಸಮಾಧಿ ಕಟ್ಟಡದತ್ತ ಹೆಜ್ಜೆ ಹಾಕಹತ್ತಿದರು. ನೆರೆದ ಜನ ಭಾವಾವೇಶಕ್ಕೊಳಗಾದರು.

‘ ತೊರೆಯದಿರು ತಂದೆ , ನಮ್ಮನ್ನು ತೊರೆಯದಿರು. ನಮ್ಮನ್ನು ಅನಾಥರನ್ನಾಗಿ ಮಾಡದಿರು ” ಎಂದು ಬೊಬ್ಬಿಟ್ಟರು. ಆಗ ವೇಮನರು,

“ಹುಟ್ಟುವವರು ಯಾರು ? ಹುಟ್ಟದವರು ಯಾರು ?
ಹುಟ್ಟಿ ಹುಟ್ಟದಂಥ ಪುರುಷರಾರು ?
ಹುಟ್ಟಿ ಹುಟ್ಟದಿಹುದ ಬೋಧಿಸಲು, ಕಾಣಭೋ !
ವಿಶ್ವದಾಭಿರಾಮ ಕೇಳು ವೇಮ.





ಬದುಕುವವರು ಯಾರು ? ಬದುಕದವರು ಯಾರು ?
ಬದುಕಿ ಬದುಕದಂಥ ಪ್ರಾಣಿ ಯಾರು ?
ಬದುಕು ಇರದ ಬದುಕು ಭ್ರಮೆಯಳಿದು ಕಾಣಿರೋ ?
ವಿಶ್ವದಾಭಿರಾಮ ಕೇಳು ವೇಮ.

ಕಟ್ಟುವವರು ಯಾರು ? ಕಟ್ಟದವರು ಯಾರು ?
ಕಟ್ಟಿ ಕಟ್ಟದಂಥ ಕರ್ಮಿ ಯಾರು ?
ಗಟ್ಟಿ ಹಿಡಿದು ಲೇಸ, ಕಣ್ಣು ಬಿಟ್ಟು ನೋಡಿಕೊ.
ವಿಶ್ವದಾಭಿರಾಮ ಕೇಳು ವೇಮ.

ನೀಡುವವರು ಯಾರೊ ? ನೀಡದವರು ಯಾರೊ ?
ನೀಡಿ ನೀಡದಂಥ ನಿಷ್ಠರಾರೊ ?
ಪಟ್ಟು ಹಿಡಿದು ಇದರ ಗುಟ್ಟು ಭಾವಿಸಿಕೊ !
ವಿಶ್ವದಾಭಿರಾಮ ಕೇಳು ವೇಮ.

ಸಾಯುವವರು ಯಾರು ? ಸಾಯದವರು ಯಾರು ?
ಸತ್ತು ಬದುಕುವಂಥ ಸುಜನರಾರು ?
ಬಿಚ್ಚಿ ತೆರೆದು ಬಿಡಿಸಿ ಬಗೆದು ನೋಡಿರಯ್ಯ !
ವಿಶ್ವದಾಭಿರಾಮ ಕೇಳು ವೇಮ. ”

ಇಷ್ಟು ಪದ್ಯಗಳನ್ನು ಪಠಿಸಿ, ರಾಮರೆಡ್ಡಿಯತ್ತ ನೋಡಿದರು. ಸುದೀರ್ಘ ಕಾಲ ಗುರು ಸೇವೆಯಲ್ಲಿದ್ದ ರಾಮರೆಡ್ಡಿ ಇಂಗಿತವರಿತು, ಯೋಗಿ ವಿರಚಿತ ಸೂಕ್ತ ಪದ್ಯಪಾಠ ಮಾಡಲಾರಂಭಿಸಿದನು. ಇತ್ತ ಯೋಗಿಗಳು ಧ್ಯಾನಸ್ಥರಾದರು.

ಸೀಸ : ದೇಹಗಳನಿತ್ಯ ದೇಹೀ ನಿತ್ಯನಿಹನು ;
ದೇಹೇಂದ್ರಿಯಾದಿಯು ತೀವ್ರ ಗತಿಯಲಿ,
ಮೋಹಂಗಳೆಲ್ಲವ ಮೊದಲಿಗೆ ವರ್ಜಿಸುತ,
ಆ ಪರಮಾತ್ಮನೊಡನೆ ಐಕ್ಯಗೊಂಡು,
ಚಿತ್ತ ಶಾಂತಿಯ ಹೊಂದಿ, ಚಿನ್ಮಾತ್ರದಲ್ಲಿ
ಇತರರನ್ನು ನೋಡದೆ ಎಂದಿಗೂನು,
ಸರ್ವಾತ್ಮವೆಂಬ ಸತ್ಯವನು ಸಲೆಗಾಣು-
ವವರೆ ತತ್ತ್ವಜ್ಞರು ವಸುಧೆಯಲ್ಲಿ.

ತೇ : ಅಂಥವರ ಮರ್ಮವನು ಅರಿತುಕೊಳಲು,
ಹರಿಹರ ಬ್ರಹ್ಮರಿರಲು, ಅಳವು ಅಲ್ಲ.
ಹೀಗೆ ಶಾಸ್ತ್ರಗಳೆಲ್ಲ ಹೇಳುತಿಪ್ಪವು.
ತಿಳಿದು ಹೇಳಿದ ವೇಮನ ದೇಶಿಕಾರ್ಯ.

ಸೀಸ : ಸಕಲ ವೇದಗಳ ಸಾರವಾಗಿ ಬೆಳಗುವ,
ಸದ್ಗುರು ವಾಕ್ಯವದು ಸತ್ಯವಿಹುದು.
ಮನದಲಿ ಸದ್ಭಕ್ತಿ ಮರೆಯದೆ ಮೂಡಿರಲು,
ಮಮತೆ ತೊರೆಯಲಾಗ ಮಹಿಮನಹನು.

ಚಿತ್ತ ವಿಭ್ರಮ ಭಾಷೆ ಚಿನ್ಮಾತ್ರದಲ್ಲಿಯೇ ,
ಸೇರಿ , ಬಯಸಿದ ಮುಕ್ತಿ ಸೇರುತಿಹನು ,

ಹರಿಹರಾದಿಯೆ ಇರಲಿ ; ಪೊಂದಲಳವಲ್ಲ ,
ಅನುಭವ ವೇದ್ಯವಾಗಿ ಅರಳುತಿಹುದು.

ತೇಟ : ಅಂಥ ಸದ್ಬೋಧ ಮರ್ಮವ ಅರಿಯಬೇಕು.
ಮನಸಿನೊಳು ಕಲ್ಮಷಗಳನು ಮಾಣಬೇಕು.
ಶೀಘ್ರ ಕಾಲದಲಿ ಆತ್ಮ ಶುದ್ಧಿಯಹುದು.
ವಿಮಲ ಗುಣ ರಾಜೇಂದ್ರ , ವೇಮನಾರ್ಯ .

ಸೀಸ : ಗುರುಬೋಧೆ ತಿಳಿಯದ ಕುಟಿಲ ಶಾಸ್ತ್ರಂಗಳ ,
ಪರಿಕಿಸಿದೊಡೆ ಏನು ಫಲವು ಉಂಟು ?
ಆತ್ಮೈಕ್ಯವರಿಯದ ಅಖಿಲ ಯೋಗಗಳು
ಸಾಧಿಸುವ ಫಲವೇನು, ಸತ್ಯವಾಗಿ ?
ತನ್ನ ಯತ್ನವನು ತಾನರಿಯದ ನರನು
ಸೇವೆ ಗೆಯ್ದೊಡೆ ಏನು ಸಿದ್ಧಿಯುಂಟೆ ?
ತಮ್ಮ ಕುಂದನರಿಯದೆ , ತಾನೋದಲು ಬಹಳ ,
ಓದಿನ ಫಲವೇನು ಒಪ್ಪವಾಗಿ ?

ತೇಟ : ನುಡಿದ ಸದ್ಗುರು ಬೋಧೆ ನಿತ್ಯವರಿತು ,
ಮರೆಯದಿರುವಂಥವರು , ಮಾಯೆ ಜಗಕೆ
ಅಂಟರೆನ್ನುತಿಹರು , ಅಂದವಾಗಿ ;
ತಿಳಿಸಿ ಹೇಳಿದ ವೇಮನ ದೇಶಿಕಾರ್ಯ .

ಯೋಗಿವರ್ಯರು ಕಣ್ಣು ತೆರೆದರು. ನೆರೆದ ಜನಸ್ತೋಮದತ್ತ ಕೃಪಾ ದೃಷ್ಟಿ ಹರಿಸಿದರು. ವರದ ಹಸ್ತ ಎತ್ತಿ ಅಭಯ ಮುದ್ರೆ ದಯಪಾಲಿಸಿದರು. ಜನಮಧ್ಯೆ ವಿದ್ಯುತ್ಸಂಚಾರವಾದಂತಾಯಿತು. ಗಂಭೀರತೆ ಪಸರಿಸಿತು. ಯೋಗಿಗಳು ಎದ್ದು , ಸಮಾಧಿ ಸ್ಥಳಕ್ಕೆ ಸಾಗಿ ಅಲ್ಲಿ ವೀರಾಸನದಲ್ಲಿ ಕುಳಿತು, ಇನ್ನೊಮ್ಮೆ ಜನತಾ ಜನಾರ್ದನನಿಗೆ ನಮಿಸಿ,





" ಓಂ ನಮಃ ಶಿವಾಯ" ಎಂದು ಶಿವ ಪಂಚಾಕ್ಷರಿ ಪಠಿಸಿದರು.

" ಶ್ರೀರಾಮನು ಹುಟ್ಟುವದರೊಂದಿಗೆ ತಾವು ..........." ಎಂದು ಊರಿನ ಹಿರಿಯ , ಭಕ್ತ ನುಡಿದ . ಆಗ ಯೋಗಿಗಳು,

" ಜಯ ಶ್ರೀರಾಮ " ಎಂದು ಕಣ್ಣು ಮುಚ್ಚಿಬಿಟ್ಟರು. ಮುಂದೆ ರಾಮರೆಡ್ಡಿ, ವಿಧಿ ವಿಧಾನಗಳನ್ನು ಪೂರೈಸಿದನು. ಜನತೆಯೆಲ್ಲ ಏಕ ಕಂಠದಿಂದ ,

ವೇದಾತೀತನು ವೇಮನ ಕಾಣಾ .
ವೇಮನ ಮಾತೇ ವೇದವು ಕಾಣಾ .

ವೇದ ಶಾಸ್ತ್ರಗಳು ವಾದವು ಕಾಣಾ .
ವಾದಿಪ ಬಾಯಿಗೆ ಬೂದಿಯು ಕಾಣಾ .

ಬೇಸರಿಯದೋದೆ ಬಲು ರುಚಿ ಕಾಣಾ .
ಕೇಳಿದವರು ಮತ್ತೆ ಹೇಳರು ಕಾಣಾ .

ಹೇಳುವರಾರೂ ಮಾಡರು ಕಾಣಾ .
ಸಾಧಿಸಿದವರು ಸಿದ್ಧರು ಕಾಣಾ .

ಜಾತರ ಜಾತರ ಜಾತರ ಕಾಣಾ.
ಜಾತರತೀತನು ವೇಮನ ಕಾಣಾ.

ಎಂದು ಪಠಿಸಿದರು .

ಕೊನೆಗೆ ರಾಮರೆಡ್ಡಿ , ಗದ್ಗದಿತನಾಗಿ

ವೇಮನೆಂಬ ಯೋಗಿ ವಾಸಿಸಿದ ಲೋಕದಿ ;
ಪೂಜೆ ಸಲಿಸಿರವಗೆ ಪುಣ್ಯನರರೆ !
ಸಲಿಸಿದಷ್ಟು ಪೂಜೆ ಶ್ರೇಯ ಭಾಗ್ಯ ಲಭ್ಯ .
ವಿಶ್ವದಾಭಿರಾಮ ಕೇಳು ವೇಮ .

ಓಂ ಶಾಂತಿ : ಓಂ ಶಾಂತಿ : ಓಂ ಶಾಂತಿ :

' ವೇಮನ ಮಹಾಯೋಗಿ ಚಿರಾಯುವಾಗಲಿ '

ಎಂಬ ಘೋಷವು ಎಲ್ಲೆಡೆ ಮಾರ್ದನಿಸಿತು .

## ಆ. ಪಾಮೂರು ಗುಹೆ ಪ್ರವೇಶ :

ಮಾಹಾಯೋಗಿ ವೇಮನರ ಮಹಾನಿರ್ಯಾಣ ಕುರಿತು, ಅವರು ಕದಿರಿ ತಾಲ್ಲೂಕಿನ ಕಟಾರ್ಲುಪಲ್ಲೆಯಲ್ಲಿ ಸಜೀವ ಸಮಾಧಿಸ್ಥರಾದ ಬಗ್ಗೆ ಇದು ವರಗೆ ವಿವರವಾಗಿ ತಿಳಿಸಿದ್ದೇನೆ. ಆದರೆ ಮಹಾಯೋಗಿಗಳು ಇಂದಿನ ಆಂಧ್ರ ರಾಜ್ಯದ ಪ್ರಕಾಶಂ ಜಿಲ್ಲೆಗೆ ಸೇರಿದ ಪಾಮೂರು ಗ್ರಾಮದ ಗುಹೆಯೊಂದಲ್ಲಿ ಪ್ರವೇಶಿಸಿದರೆಂಬ ಆಖ್ಯಾನಗಳೂ ಪ್ರಬಲವಾಗಿವೆ. ವೇಮನ ಯೋಗಿಗಳ ಕತೆಯನ್ನು ಚಿತ್ರೀಕರಿಸಿದ ಮೇಲಂತೂ ಈ ಆಖ್ಯಾನಿಕೆ ಜನಜನಿತವಾಗಿದೆ. ಶ್ರೀ ವೇಮನ ಯೋಗಿಗಳ ಅದ್ಭುತ ಯೋಗಶಕ್ತಿಯನ್ನು ಅವರ ಸಾಹಿತ್ಯ ಪಠಣ ಮೂಲಕ ಹಾಗೂ ಅವರ ಪವಾಡ ಪ್ರಾಯ ಘಟನೆಗಳನ್ನು ಶ್ರವಣ ಮಾಡುವ ಮೂಲಕ ಖಚಿತ ಪಡಿಸಿಕೊಂಡ ಜಿಜ್ಞಾಸುಗಳಿಗೆ ವೇಮನ ಯೋಗಿಗಳ ಛಾಯಾ ಶರೀರ ಧಾರಣೆಯ ಬಗ್ಗೆ ಪೂರ್ಣ ವಿಶ್ವಾಸ ಮೂಡಿದೆ.

ಮಹಾಯೋಗಿ ವೇಮನರು ತಮ್ಮ ಜೀವನದ ಕೊನೆಯ ದಿನಗಳನ್ನು ಪಾಮೂರಿನ ಗವಿಯಲ್ಲಿ ಸಾಧಕರೊಂದಿಗೆ ಹೆಚ್ಚಾಗಿ ಕಳೆಯುತ್ತಿದ್ದರು . ಆಗೀಗ ಕಟಾರ್ಲುಪಲ್ಲೆಯ ದಿನ್ನೆಯ ಮೇಲಿನ ಪರ್ಣ ಕುಟೀರಕ್ಕೂ ಹೋಗಿ ಬರುತ್ತಿದ್ದರು. ಕಟಾರ್ಲುಪಲ್ಲೆಯಲ್ಲಿ ಸಾಧಕರಿಗಿಂತ ಭಕ್ತ ಜನರೇ ಅಧಿಕವಾಗಿದ್ದರು. ತಮ್ಮ ಅಂತ್ಯಕಾಲದ ಮುನ್ಸೂಚನೆಯನ್ನು ಶಿಷ್ಯ ರಾಮರೆಡ್ಡಿಗೆ ತಿಳಿಸಿದ್ದರು. ತಾವು ಮುಂಗಂಡ ಮಹಾ ನಿರ್ಯಾಣದ ದಿನದಂದು ಸಜೀವ ಸಮಾಧಿಸ್ಥರಾಗುವುದಾಗಿಯೂ ತಿಳಿಸಿದ್ದರು. ಆ ಪ್ರಕಾರ ಅಲ್ಲಿಯೇ ಭಕ್ತರು ಎಲ್ಲ ಸಿದ್ಧತೆಗಳನ್ನು ಮಾಡಿದ್ದರು.

ಮಹಾಯೋಗಿಗಳು ತಮ್ಮ ಮಹಾನಿರ್ಯಾಣಕ್ಕಿಂತ ಎರಡು ದಿನ ಮುನ್ನ ಕಟಾರ್ಲುಪಲ್ಲೆಗೆ ಆಗಮಿಸಿದರು. ಅದು ವರೆಗೆ ಒಂದು ತಿಂಗಳು ಪಾಮೂರು ಗವಿಯಲ್ಲಿಯೇ ಸಾಧಕರೊಂದಿಗೆ ವಾಸವಾಗಿದ್ದರು, ಅವರ ಮಹಾನಿರ್ಯಾಣದ ವಾರ್ತೆಯು ಕಿವಿಯಿಂದ ಕಿವಿಗೆ ಹರಡಿ ಸಾಕಷ್ಟು ಜನರಿಗೆ ವೇದ್ಯವಾಗಿತ್ತು. ಜನ ಕುತೂಹಲಿಗಳಾಗಿದ್ದರು. ಮಹಾಯೋಗಿಗಳು ತಮ್ಮ ಮಹಾನಿರ್ಯಾಣದ ಕಾಲವನ್ನು ಸೂಚಿಸಿದ್ದರೇ ಹೊರತು ಸ್ಥಳದ ಬಗೆಗೆ ಹೇಳಿರಲಿಲ್ಲ.

ಹೀಗಾಗಿ, ಒಂದು ತಿಂಗಳಿಂದ ಪಾಮೂರಿನಲ್ಲಿಯೇ ನೆಲೆಗೊಂಡಿದ್ದ ಮಹಾಯೋಗಿಗಳು ಅಲ್ಲಿಯೇ ದೇಹ ತೊರೆಯುವರೆಂದು ಜನ ಭಾವಿಸಿದ್ದರು. ಹೀಗಾಗಿ ಆ ದಿನ ಸಮೀಪಿಸಿದಂತೆಲ್ಲ ದೂರದೂರದ ಸಾಧಕ ಶಿಷ್ಯರು ಪಾಮೂರಿನಲ್ಲಿ ಜಮಾಯಿಸಿದರು. ಬಹು ಜನರು ರಾಮನವಮಿಯ ಆಚರಣೆಯ ಉತ್ಸಾಹದಲ್ಲಿ ಕಾಲ ಕಳೆಯುತ್ತಿದ್ದರು. ರಾಮನಮಿಯು ಎರಡು ದಿನ ಇರುವಾಗ ಒಂದು ಪರಿವರ್ತನೆಯಾಯಿತು. ಯೋಗಿ ವೇಮನರು ಯಾರಿಂದಲೂ ಗಟ್ಟಿ ಆಹಾರ ಪದಾರ್ಥಗಳನ್ನು ಸ್ವೀಕರಿಸಲಿಲ್ಲ. ಸಾಧಕ ಶಿಷ್ಯರ ಬಲವಂತಕ್ಕೆ ನೀರನ್ನು ತಮ್ಮ ತುಟಿಯ ವರಗೆ ಒಯ್ದು ಅದು ಬಾಷ್ಪೀಕರಿಸುವಂತೆ ಮಾಡಿದರು. ಉಪವಾಸಕ್ಕೆ ಪೂರ್ಣವಿರೋಧಿಯಾದ ಮಹಾಯೋಗಿಗಳ ಈ ವರ್ತನೆ ಸಾಧಕರ ಸಂದೇಹಕ್ಕೆ ಎಡೆ ಮಾಡಿತು.

"ಅಪ್ಪಾಜೀ ತಾವು ಯಾವ ಆಹಾರವನ್ನು ಸೇವಿಸುತ್ತಿಲ್ಲ. ಏಕೆ ?" ಎಂದು ಒಬ್ಬ ಶಿಷ್ಯನು ತವಕ ತಾಳಲಾರದೆ ಕೇಳಿಯೇ ಬಿಟ್ಟ.





ಆಗ ಯೋಗಿಗಳು "ಅದು ಅನಂತರ ನಿಮಗೇ ತಿಳಿಯುತ್ತದೆ," ಎಂದು ನುಡಿದು ಸಾಧನದ ಅಭ್ಯಾಸಕ್ಕೂ , ಪದ್ಯಗಳ ಪಾರಕ್ಕೂ. ಲಕ್ಷ್ಯ ಕೊಡಲು ಹೇಳಿದರು.

ಸತ್ಯವೆಂದರೆ, ಈಗ ಅವರು ಛಾಯಾ ಮೂರ್ತಿಯಾಗಿದ್ದರು. ಅವರ ಛಾಯಾ ಶರೀರವು ಜಠರ ವರ್ಜಿತವಾಗಿತ್ತು. ಆದರೆ ಈ ಗೌಪ್ಯವನ್ನು ಅವರಾರಿಗೂ ತಿಳಿಸಲಿಲ್ಲ. ಅನೇಕ ಭಕ್ತ ಜನರು ಬಗೆ ಬಗೆಯ ಸ್ವಾದಿಷ್ಟ ಭಕ್ಷ್ಯಗಳೊಂದಿಗೆ ಬರುತ್ತಿದ್ದರು. ಯೋಗಿಗಳು ಎಂದಿನಂತೆ ಅವುಗಳನ್ನು ಹಸ್ತಸ್ಪರ್ಶಮಾಡಿ ಹರಸುತ್ತಿದ್ದರೇ ಹೊರತು ಸೇವಿಸುತ್ತಿರಲಿಲ್ಲ. ಇದೆಲ್ಲ ಕಲ್ಲು ದೇವರಿಗೆ ಎಡೆ ಮಾಡಿದಂತೆ ಇತ್ತು. ಭಕ್ತರಿಗೆ ತೃಪ್ತಿ ಇರುತ್ತಿತ್ತು.

ಶಾರ್ವರಿ ನಾಮ ಸಂವತ್ಸರದ, ಚೈತ್ರ ಮಾಸದ, ಶುಕ್ಲ ಪಕ್ಷದ ನವಮಿ ತಿಥಿ ಬಂದೇ ಬಿಟ್ಟಿತು. ಅಂದು ಗ್ರಾಮದಲ್ಲಿ ಶ್ರೀ ರಾಮ ಜನನ ಸಂಭ್ರಮ. ಅದೇ ಕಾಲಕ್ಕೆ ಮಹಾಯೋಗಿಗಳ ಮಹಾ ನಿರ್ಯಾಣದ ಮುಹೂರ್ತ. ಸಾಧಕರೂ, ಭಕ್ತರೂ ಬಹು ಸಂಖ್ಯೆಯಲ್ಲಿ ಗವಿಯ ಹೊರಗೆ ಸೇರಿದ್ದರು. ಶ್ರೀ ರಾಮ ಭಜನೆ ಭಕ್ತರಿಂದ ಸುಶ್ರಾವ್ಯವಾಗಿ ನಿನದಿಸುತ್ತಿತ್ತು. ಸಾಧಕರಲ್ಲಿ ಹಲವರು ಪದ್ಯ ಪಠಣದಲ್ಲಿ ನಿರತರಾಗಿದ್ದುರು. ಕೆಲವರು ಧ್ಯಾನಮಗ್ನರಾಗಿದ್ದರು.

ಅಭಿರಾಮಯ್ಯನವರು ಕೆಲವು ದಿನಗಳಿಂದ ಯೋಗಿಗಳ ಜೊತೆಗೇ ಇದ್ದರೂ ರಾಜಮಹೇಂದ್ರವರಂ ಅರಸು ಮನೆತನದ ವೈಭವ ಮೂರು ಶತಕ ಮುನ್ನವೇ ಕೊನೆಗೊಂಡು ರಾಜ್ಯವು ಕಳಿಂಗ ಸಾಮ್ರಾಜ್ಯಕ್ಕೆ ಸೇರಿತ್ತು. ಹಿಂದಿನ ಮಹಾಮಂತ್ರಿ ಅಳಿಯ ವೇಮಾ ರೆಡ್ಡಿಯು ಗತಿಸಿ ಮೂರು ದಶಕಗಳೇ ಸರಿದಿದ್ದವು. ಅವರ ವಿಧವಾ ಪತ್ನಿ ಮಲ್ಲಮ್ಮ ಮಾತ್ರ ಪೂರ್ವ ಸಂಬಂಧದ ಮೈದುನನ ಮಹಾನಿರ್ಯಣ ಕಾಲಕ್ಕೆ ಉಪಸ್ಥಿತರಿರಲು ತಪ್ಪಲಿಲ್ಲ. ಮಹಾಯೋಗಿಗಳ, ಗುಹೆ ಪ್ರವೇಶ ಮೂಲಕ ತಮ್ಮ ಅಂತ್ಯ ಸಂಸ್ಕಾರ ನೆರವೇರಿಸುವ ವೈಚಿತ್ರ್ಯವನ್ನು ಕುರಿತು ಅತ್ತಿಗೆ ಮಲ್ಲಮ್ಮ ಅಭಿರಾಮಯ್ಯನವರನ್ನು ಕೇಳದೆ ಬಿಡಲಿಲ್ಲ. ಅದಕ್ಕುತ್ತರವಾಗಿ ಅಭಿರಾಮಯ್ಯನವರು ದ್ವೈತ ಸಿದ್ಧಾಂತದ ಪ್ರವರ್ತಕರಾದ ಮಧ್ವರನ್ನು ಉದಹರಿಸಿ, ಅವರು ಪುಣ್ಯಕ್ಷೇತ್ರ ಬದರಿಯಲ್ಲಿ ಗುಹೆ ಪ್ರವೇಶ ಮಾಡಿದ ಬಗ್ಗೆ ಆಖ್ಯಾನವಿದೆ, ಎಂದು ವಿವರಿಸಿದರು,

ಕೊನೆಗೆ ಮಹಾನಿರ್ಯಾಣ ಕಾಲವು ಸಮೀಪಿಸಿದಂತೆ ಭಕ್ತಿಯ ಉತ್ಸುಕತೆಯು ತಾರಕಕ್ಕೇರಿತು. ವೇಮನ ಯೋಗಿಗಳೂ ಸಹ ತಮ್ಮ ಧ್ಯಾನ ಸ್ಥಿತಿಯಿಂದ ಹೊರಬಂದು ಜನರ ಮಧ್ಯೆ ನಿಂತರು.

'ಅಪ್ಪಾಜಿ ! ಇಂದು ಶ್ರೀ ರಾಮ ನವಮಿ. ಮಹಾ ಪುರುಷ ಶ್ರೀರಾಮ ಜನಿಸಿದ ಪುಣ್ಯದಿನ. ಇಚ್ಛಾ ಮರಣಿಗಳಾದ ತಾವು ಈ ಶುಭದಿನವನ್ನು ತಮ್ಮ ಮಹಾನಿರ್ಯಾಣಕ್ಕಾಗಿ ಆಯ್ದು ಕೊಂಡಿರುವಿರೇನು ?" ಎಂದು ಭಕ್ತನೊಬ್ಬ ಪ್ರಶ್ನಿಸಿದನು.

ವೇಮನ ಯೋಗಿ ನಸು ನಕ್ಕರು. ಆಗ ಅವರು ಕಣ್ಣು ಮುಚ್ಚಿ.

ಶ್ರೀರಾಮ ಎಂಬ ಮಂತ್ರವ,
ತಾರಕವೆಂದರಿತು ಮನದಿ ಧ್ಯಾನಿಪರಿರರ್,
ಸಾರವ ಕುಡಿಯುತಿಹ ನರರು,
ಸೇರುವರು ಪರಮ ಪದವಿಯ, ಸನಿಪದಿ ವೇಮಾ.

"ಶ್ರೀರಾಮನು ಹುಟ್ಟಿ ಧರೆ ಪಾವನವಾಯಿತಲ್ಲವೇ ?'' ಎಂದು ಪ್ರಶ್ನಿಸಿದನೊಬ್ಬ.

ರಾಮ ವಿಭವ ಹುಟ್ಟಿ, ರಘುಕುಲವು ಬೆಳೆಯಿತು.
ಕೌರವರಸು ಹುಟ್ಟಿ, ಕುಲದ ನಾಶ.
ಯಾರು ಬಳಿತು ಕಡುಕು ಎಣಿಸಿ ನೋಳ್ಪರು ತಿಳಿ.
ವಿಶ್ವದಾಭಿರಾಮ ಕೇಳು ವೇಮ.

'ಅಪ್ಪಾಜಿ ! ತಮ್ಮ ಅಂತಿಮ ಸಂದೇಶ ತಿಳಿಯಬಹುದೇ?'' ಎಂದು ವಿನಮ್ರತೆಯಿಂದ ಸಾಧಕನೊಬ್ಬ ಪ್ರಶ್ನಿಸಿದ.

ಯೋಗಿಗಳು ಅವನತ್ತ ನೋಡಿ ಮುಗುಳ್ನಕ್ಕು, ಹೀಗೆ ಪದ್ಯಪಠಿಸಿದರು

ಜೀವ ರಾಶಿಯೆಲ್ಲ ಚಿತ್ರ ಬೊಂಬೆ ತಾನು.
ಅಲ್ಲಿ ಪಂಚಭೂತ ಐದು ಬಣ್ಣ.
ತಿಳಿದ ಜನರಿಗೆಲ್ಲ ದೇಹವಿಷ್ಟೇ ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಕಾಯ ಸಂಬಂಧವು ಕಾಯ ಸಂಕೋಲೆಯು.
ಜೀವ ಸಂಬಂಧವು ಅಂಟು ಕೊಂಬೆ.
ಅರಿತು ಈ ಎರಡನ್ನು ಅರಿತುಕೊ ಬ್ರಹ್ಮವನು.
ವಿಶ್ವದಾಭಿರಾಮ. ಕೇಳು ವೇಮ.

ಒಳನೋಟ ನೋಟದಿ ಒಟ್ಟು ನೋಡುವಾಗ,
ಬೆಳಕಿನಲ್ಲಿ ಬೆಳಕು ಬೆಳಗುವಾಗ,
ಮಾತು ಮಥಿಸೆ ತತ್ತ್ವ ಮತ್ತೆ ಪ್ರಕಟವಾಯ್ತು
ವಿಶ್ವದಾಭಿರಾಮ ಕೇಳು ವೇಮ.

ಬಳಿಕ ಯೋಗಿಗಳು ಓಂ ನಮಃ ಶಿವಾಯ ಎಂದು ಉದ್ಘೋಷಿಸಿ, ಗವಿಯತ್ತ ಅಭಿಮುಖರಾಗಿ ಹೊರಟರು. ಜನತೆ ಒಕ್ಕೊರಲಿನಿಂದ.

ಜಯತು ವೇಮನ ಜಯತು ವೇಮನ
ಜಯತು ವೇಮನ ಯೋಗಿ ಮಹಿಮಗೆ.

ಜಯತು ವಿದ್ಯಾ ನಿಪುಣ ಪರತರ
ಪರಮ ಮಂಗಳ ಮೂರ್ತಿ ಶಿವನಿಗೆ

ಎಂದು, ಘೋಷಿಸುತ್ತ, ಪೊಡಮಟ್ಟರು.

ವೇಮನ ದೇಹವು ಗುಹೆಯೊಳಗೆ ದೂರ ಚಲಿಸಿ, ಕತ್ತಲಲ್ಲಿ ಕಾಣದಾಯಿತು. ಭೌತಿಕವಾಗಿ ಛಾಯಾ ಶರೀರವೂ ಮಾಯಾವಾಗಿ, ಕಟಾರ್ಲುಪಲ್ಲೆಯಲ್ಲಿ ಸಮಾಧಿಸ್ಥವಾದ ನೈಜ ಶರೀರದೊಂದಿಗೆ ಲೀನವಾಯಿತು.

ಓಂ. ಶಾಂತಿಃ ಶಾಂತಿಃ ಶಾಂತಿಃ

❖❖❖❖❖❖❖❖❖❖❖



# ೧೮. ಮುತ್ತಿನಹಾರ

## ೧. ದೇವರು :

ಧ್ವಜವನೆತ್ತಿ ಸಾರು ; ದೇವನೊಬ್ಬನೆಂದು
ನಿಜವಿದಿಹುದು ಒಳಗೆ ನಿಂತಿರುವನು.
ಚೊಕ್ಕ ನೋಡಲವನ ಸಂತಸದಿ ಮುಳುಗುವೆ.
ವಿಶ್ವದಾಭಿರಾಮ ಕೇಳು ವೇಮ. -1-

ಮೊಸರಿನಲ್ಲಿ ತುಪ್ಪ ; ಮರದ ಒಳಗೆ ಬೆಂಕಿ ;
ಸೌಮ್ಯ ಪುಷ್ಪಗಳಲಿ ಸೌರಭಗಳು ;
ಎಳ್ಳೆಣ್ಣೆಯಂತೆ ಹೊಳೆಯುವುದು ಚಿದಾತ್ಮ
ವಿಶ್ವದಾಭಿರಾಮ ಕೇಳು ವೇಮ. -೨-

ಕಿವಿಯ ಗೂಡು ಗೆಯ್ದು ಕೂಗಿದನು ವೇಮನ,
ಬಟ್ಟ ಬಯಲೊಳುಂಟು ಬ್ರಹ್ಮವೆಂದು.
ಹೊಳೆಯೆ ಬುದ್ಧಿಗದನೆ, ಹೊಂದಿ ಸುಖಿಸಹುದು.
ವಿಶ್ವದಾಭಿರಾಮ ಕೇಳು ವೇಮ. -೩-

ಊರ್ಧ್ವಲೋಕದಲ್ಲಿ ಉಚಿತ ಕ್ರಮದಿಂದ,
ರೂಪವೇನು ಇರದ ರೀತಿಯಲ್ಲಿ,
ಪರಮಯೋಗಿ ನೋಳ್ಪ ಪರಮಾತ್ಮನಿರವನು.
ವಿಶ್ವದಾಭಿರಾಮ ಕೇಳು ವೇಮ. -೪-

ಶೋಧದಿಂದ ದೊರೆವ ವೇದಾಂತ ವೇದ್ಯನು
ಶೋಧಿಸುವನ ತಾನೆ ಶೋಧಿಸುತಿಹ
ಶೋಧಿಸಲರಿತಂಥ ಸುಮತಿ ಸೇರುತಿಹನು.
ವಿಶ್ವದಾಭಿರಾಮ ಕೇಳು ವೇಮ. -೫-

ಆದಿ ನೋಡುತಿರಲು ಅದರೊಳಿಹುದು ಸಕಲ.
ಆದಿ ನೋಡಲಾರು ಆಳು ಅಲ್ಲ.
ಆದಿ ಮುಕ್ತಿ ಮಾರ್ಗ, ಆತ್ಮದಲ್ಲಿ ಇಹುದು.
ವಿಶ್ವದಾಭಿರಾಮ ಕೇಳು ವೇಮ. -೬-

ಕಂ. ನಿಖಿಲಾಕಾರನನಂತನು.
ನಿಖಿಲಾತ್ಮನು ಸರ್ವಸಾಕ್ಷಿ ; ನಿಜದಲಿ ತಾನೈ.
ನಿಖಿಲದ ಒಳಗೇ ನೋಡಲು
ನಿಖಿಲಾಗಿ ಉಂಟು, ತಾನೇ ನಿಜವಿದು ವೇಮಾ. -೭-

ಬ್ರಹ್ಮ ಘಟವು ದೇಹ ಪ್ರಾಣ ತಕ್ಕ ಗಾಳಿ
ನೇಸರಾಗ್ನಿ ಚಂದ್ರ ನೇತ್ರ ತ್ರಯವು.
ಮತ್ತೆ ಬ್ರಹ್ಮನೆನಲು ಮಹಿಯ ಮೇಲೆ ಇಹುದೆ ?
ವಿಶ್ವದಾಭಿರಾಮ ಕೇಳು ವೇಮ. -೮-

ಕಂ. ವಿಶ್ವೋತ್ಪತ್ತಿಗೆ ಅಜನೆನೆ,
ವಿಶ್ವವ ರಕ್ಷಿಪನು ಚೊಕ್ಕ ವಿಷ್ಣುವಿರೆ ಮತ್ತಾ
ವಿಶ್ವವ ಅಳಿಸುವ ಹರನೆನೆ,
ವಿಶ್ವೇಶನಿಗಿಷ್ಟು ಹೆಸರು, ವಿನುತವು, ವೇಮಾ. -೯-

ಕಂ. ಭಗವಂತನಾದ ದೇವನು,
ಜಗಗಳ ತನ್ನೊಳಗೆ ಬೆಳೆಸಿ, ಜಾಲವ ತೋರ್ಪಂ.
ಮಿಗೆ ಪರಿಯಲಿ ತಾನೆಲ್ಲೆಡೆ,
ಅಗಣಿತನಾಗಿ ಬೆಳಗುತಿಹನನುವಿಲಿ ವೇಮಾ. -೧೦-





## ೨. ಗುರು-ಶಿಷ್ಯ

ಗುರುವೆನಲಾ ಪರಮಾತ್ಮನು ;
ಪರಿಕಿಸಿ ನೋಡಲು ಶಿಷ್ಯರೆನೆ ಸಕಲ ಜೀವರ್.
ಆದಿ ಮುಕ್ತಿ ಮಾರ್ಗ, ಆತ್ಮದಲ್ಲಿ ಇಹುದು.
ವಿಶ್ವದಾಭಿರಾಮ ಕೇಳು ವೇಮ.

ಗುರುವೆ ತಾನಾಗುವ ಹರನ ತೋರುವವನು.
ಬ್ರಹ್ಮ ಲೋಕವನೆ ಪ್ರತ್ಯಕ್ಷಿಸುವ.
ಕಿಂಕರನ ಶೋಧಿಸಿ ಕತ್ತಲೆಯ ತೊಡೆವನು.
ವಿಶ್ವದಾಭಿರಾಮ ಕೇಳು ವೇಮ.

ಕೇಡು ಗುಣಗಳೆಲ್ಲ ಕೈ ಹಿಡಿದು ಶಿಕ್ಷಿಸಿ,
ಪರಮ ಪದವಿ ಸಿದ್ಧ ಪ್ರಾಪ್ತಿ ಕಾಣು.
ಅಂಥ ಗುರುವ ಬೇಡಿ ಅಪರೋಕ್ಷ ಹೊಂದು.
ವಿಶ್ವದಾಭಿರಾಮ ಕೇಳು ವೇಮ.

ಜ್ಞಾನವೆನಲು ಗುರುವು ; ಜ್ಞಾನ ಹೀನ ಬುದ್ಧಿ.
ಉಭಯ ಸಂಧಿ ದಿಮ್ಮು ಉಂಟು ಆಗ.
ದಿಮ್ಮೆನುವುದನರಿಯೆ, ತದ್ರೂಪಗಳೆರಡು.
ವಿಶ್ವದಾಭಿರಾಮ ಕೇಳು ವೇಮ.

ಗುರುವೆನ್ನಲು ಆದ್ಯಂತವು.
ಗುರು ಶಿಷ್ಯರೆನ್ನಲು, ಸಕಲ ಕೊಂಬೆಗಳಷ್ಟೇ.
ಗುರುವನು ಅರಿಯಲು ಬಲ್ಲರು ;
ಧರೆಯೊಳಗಿನ ಮನುಜರೆಲ್ಲ, ಧ್ಯಾನಿಸೆ ವೇಮಾ.

ಗುರುವಿನೊಡನೆ ಹೊಂದಿ ಕೂಡಿಕೊಳ್ಳುವವನು,
ಬ್ರಹ್ಮಕಂಟೆ ಬೆರೆತು ಬೆಳಗುತಿಹನು.
ಗೌಪ್ಯ ತಿಳಿದೊಡಾಗ ಗುಟ್ಟು ರಟ್ಟೆ ಆಯ್ತು.
ವಿಶ್ವದಾಭಿರಾಮ ಕೇಳು ವೇಮ.

ದೇಹವಾತ್ಮ ರೂಪ ತಿಳಿಸಿ ಬಿಚ್ಚಿ ಹೇಳಿ,
ಅವನಿ ನೋಟಿ ತೋರ್ಪ ಅನನೆ ಗುರುವು.
ಭ್ರಮರ ತನ್ನ ರೂಪ ಕೀಟಕಿತ್ತ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಕುರಿ ಹತ್ತು ಸಾವಿರ ಕೂಡಿರುವ ಸ್ಥಳದಿ,
ಅದರ ಮರಿ ತಾಯಿಯ ಅರಿಯುತಿಹುದು.
ಪರಮ ಯೋಗಿಯರಿತು ಭಕ್ತ ತಾನೆ ಬರುವ.
ವಿಶ್ವದಾಭಿರಾಮ ಕೇಳು ವೇಮ.

ಹಾಲು ಗೂಡಿ ನೀರು ಹಾಲಾಗಿ ಬೆಳಗಿತು
ಮಹಾ ಗುರುವಿನಿಂದ ಮಹಾ ಜ್ಞಾನಿ.
ಸಾಧು ಸಜ್ಜನಾದಿ  ಸಂಗವಿಂತಿಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

ತೃಪ್ತಿ ತುಂಬಿ ಗುರುವ ಧ್ಯಾನಿಸಿ ಮನದೊಳಗೆ,
ತನುವ ಮರೆತು, ಗುರುವ ತಲುಪಿದಾಗ,
ತೊಳಗುತಿಹುದು ಬ್ರಹ್ಮ ; ತತ್ತ್ವವೆನುವರದನೆ.
ವಿಶ್ವದಾಭಿರಾಮ ಕೇಳು ವೇಮ.





## ೩. ಸಾಧನೆ

ಕಾಯ ಪಣತೆ ಮಾಡಿ, ಗುಣವ ಬತ್ತಿ ಮಾಡಿ,
ತಮ್ಮ ಕರ್ಮ ಕುಲವ ತೈಲ ಮಾಡಿ,
ಮೂಲವೊಂದೆ ಜ್ಯೋತಿ ಮುಟ್ಟಿ ನೋಡಿದಾಗ.
ವಿಶ್ವದಾಭಿರಾಮ ಕೇಳು ವೇಮ.

ಸವೆ ಸವೆದು ಜನಿಸಿತು ತರುವಿನಲ್ಲಿ ಅನಲ.
ಸವೆ ಸವೆದು ಜನಿಸಿತು ಮೊಸರು-ತುಪ್ಪ.
ಸವೆ ಸವೆದು ಜನಿಸಿತು ತನುವಿನಲ್ಲಿ ತತ್ತ್ವ.
ವಿಶ್ವದಾಭಿರೈಮ ಕೇಳು ವೇಮ.

ತಾನು ಇಂದ್ರಿಯಗಳ ತೂಗಿ ಜಯಿಸಿ ಮತ್ತೆ,
ತತ್ತ್ವವರಸಿ ನೋಡೆ, ತಾನಾಗುವ.
ರಾಜಯೋಗಿಯಂತೆ ರಾರಾಜಿಸುತಿಹನು.
ವಿಶ್ವದಾಭಿರಾಮ ಕೇಳು ವೇಮ.

ಕಿವಿಯೊಳಗೆ ಜನಿಸುವ ರವವೆ ಆಕಾಶವು.
ಕಣ್ಣಿಗೆ ಕಾಣುವುದೆ ಕಳೆಯ ಜ್ವಾಲೆ.
ಮೂಗಿನೊಳಗಣ ಗಾಳಿ ಮುಕ್ತಿ ಪಥದ ದಾರಿ.
ವಿಶ್ವದಾಭಿರಾಮ ಕೇಳು ವೇಮ.

ಆಕಾಶದಿ ನೋಡು ಅಲ್ಲಿ ಶಬ್ದ ಜನನ.
ಶಬ್ದ ಮಧ್ಯೆ ನೋಡು ಸರಿಯಾಗಿಯೆ.
ಶಬ್ದರಹಿತವಾಯ್ತು ಶೋಭಿಸಿತು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ದಾರಿ ತಿಳಿಯದಿರಲು ದೂರವೆನಿಸುತಿಹುದು.
ತಾಣ ತಿಳಿಯದಿರಲು ಕಾಣಲಾರ.
ಕೋಟೆ ತುದಿಯ ಮೇಲೆ ನೀಟ ದೃಷ್ಟಿಯಿರಿಸು.
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮವೆಲ್ಲಿಯೆಂದು ಬಲು ಬಾರಿ ಎನುವರು.
ವಿಚಿತ್ರ ಮತಿ ಜನರು, ವಿಧವರಿಯದೆ.
ಬ್ರಹ್ಮವೆಲ್ಲರಲ್ಲಿ ಪರಿಪೂರ್ಣವುಂಟಲ !
ವಿಶ್ವದಾಭಿರಾಮ ಕೇಳು ವೇಮ.

ಬ್ರಹ್ಮನಿರುವ ತಾಣ ಪರೀಕ್ಷಿಸಿ ತಿಳಿಯದೆ,
ಎಲ್ಲೊ ಅರಸೆ ಬ್ರಹ್ಮ ಎಂತು ಸಿಗುವ ?
ಅಂಜನಿರದೆ ಯಾವ ಒಡವೆ ದೊರಕದಲ್ಲ !
ವಿಶ್ವದಾಭಿರಾಮ ಕೇಳು ವೇಮ.

ಇಂಥ ಕಣ್ಣಿನಿಂದ ಎಂಥ ಬೊಮ್ಮನರಿವು ?
ನೋಳ್ಪ ಕಣ್ಣು ಬೇರೆ ; ನೋಟ ಬೇರೆ ;
ನೋಟ ಒಳಗೆ ತಿರುಗಿ ನೋಡುವುದಲ್ಲವೇ ?
ವಿಶ್ವದಾಭಿರಾಮ ಕೇಳು ವೇಮ.

ಕಾಣಲಾರ ಹಣೆಯ ; ಕರ್ಣ, ಬೆನ್ನು ಭಾಗ,
ನೋಡಲಾರ ಕೇಶ, ನೆತ್ತಿ ಮೇಲೆ.
ತನ್ನ ಕಾಣಲಾರ ; ತತ್ತ್ವವೇನರಿವನು ?
ವಿಶ್ವದಾಭಿರಾಮ ಕೇಳು ವೇಮ.





## ೪. ಸಿದ್ಧಿ

ಆತ್ಮದೊಳಗೆ ಶಿವನ ಅರಿತು ಸಲೆ ಶೋಧಿಸಿ,
ನಿಶ್ಚಲಾಗಿ ಭಕ್ತಿ ನಿಲಿಸಿದವನು,
ಸರ್ವ ಮುಕ್ತನಹನು ; ಸರ್ವ ತಾನಾಗಿಹ.
ವಿಶ್ವದಾಭಿರಾಮ ಕೇಳು ವೇಮ.

ಹಗಲು ಇರುಳು ಮರೆತು, ಭಾವವನ್ನೆ ಮರೆತು,
ತಾನು ನಾನು ಎನುವ, ತಿಳಿವು ಮೀರಿ,
ಉಳ್ಳ ಮನುಜನೆ ತಿಳಿ ; ಉತ್ತಮ ಯೋಗಿಯವ.
ವಿಶ್ವದಾಭಿರಾಮ ಕೇಳು ವೇಮ.

ಅರಿತ ಮನುಜನ ಸುಖ ಆವ ಲೋಕದಿಲ್ಲ.
ಅರಿವು ಅರಿಯಲವಗೆ ಅರಿವೆ ಇಲ್ಲ.
ಅರಿವಿಗೆ ಸಮನರಿವೆ ; ಅರಿವೆ ತತ್ತ್ವವಿಹುದು.
ವಿಶ್ವದಾಭಿರಾಮ ಕೇಳು ವೇಮ.

ಒಡವೆ ಸಿಗುವ ತನಕ ಒಪ್ಪ ಬೆಳಕು ಬೇಕು.
ಒಡವೆ ಸಿಕ್ಕ ಬಳಿಕ ಗೊಡವೆ ಏಕೆ ?
ದೇವರಾದ ಬಳಿಕ ದೇಹದ ತೊಡಕೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಗಾಜುಗೊಳವೆಯೊಳಗೆ ಬೆಳಗುತಿಪ್ಪ ದೀಪ,
ಎಂತಿಹುದೋ ಜ್ಞಾನವಂತೆ ಉಂಟು.
ತಿಳಿದ ಜನರ ಹೃದಯ ದಂತರಾಳದಲ್ಲಿ.
ವಿಶ್ವದಾಭಿರಾಮ ಕೇಳು ವೇಮ.

ಭಕ್ತಿಯುಳ್ಳ ಎಡೆಗೆ ಪರಮೇಶ್ವರನುಂಟು,
ಭಕ್ತಿಯಿಲ್ಲದೆಡೆಗೆ ಪಾಪವುಂಟು.
ಭಕ್ತಿ ಹೊಂದಿದವನು ಪರಮಾತ್ಮನಾಗುವ.
ವಿಶ್ವದಾಭಿರಾಮ ಕೇಳು ವೇಮ.

ತಾನು ನಾನು ಎನುವ ತತ್ತ್ವ ಭೇದವನ್ನು
ಕೊಚ್ಚಿ ಕಡು ವಿವೇಕ ಕುದುರಿ ಮಹಿಮೆ,
ಸುಮ್ಮನಿರುವಾತನೆ ಸರ್ವೋತ್ತಮನಿಹ.
ವಿಶ್ವದಾಭಿರಾಮ ಕೇಳು ವೇಮ.

ನಿದ್ರೆಯೊಳಗೆ ನಿದ್ರೆ ; ನಿಜವಾಗಿ ತಿಳಿದೊಡೆ,
ಭದ್ರವಾದ ವಿದ್ಯೆ ಬ್ರಹ್ಮ ವಿದ್ಯೆ.
ನಿದ್ರೆ ತಿಳಿಯುವವನು ನಿರ್ಮಲ ಯೋಗಿಯೈ.
ವಿಶ್ವದಾಭಿರಾಮ ಕೇಳು ವೇಮ.

ಧ್ಯಾನಿಯಂತೆ ಉಂಟು ; ಮೌನಿಯಂತೆ ಉಂಟು,
ಭೋಗಿಯಂತೆ ಉಂಟು, ರೋಗಿಯಂತೆ.
ಸಕಲವ ತಿಳಿದಿಪ್ಪ ಸರ್ವಜ್ಞನಾಗಿಯುಂಟು
ವಿಶ್ವದಾಭಿರಾಮ ಕೇಳು ವೇಮ.

ಹಂಸ ಮಾನಸ ಜಲ ಹತ್ತದಂತೆ ಚಲನೆ ;
ಅಂತೆ ಕರ್ಮವೆಲ್ಲ ಅಂಟದಂತೆ,
ಯೋಗಿ ನಡೆವ ಸಕಲ ಭೋಗವೆದುರಿಗಿರಲು.
ವಿಶ್ವದಾಭಿರಾಮ ಕೇಳು ವೇಮ.





## ೫. ನೀತಿವಾದ

ಹೊಟ್ಟೆ ತುಂಬ ಸುಧೆಯ ಹವಣಾಗಿ ಕುಡಿಯಲು,
ಹಾಲ ಮೇಲೇಕೆ ಮನ ಹರಿಯಬಹುದು ?
ತತ್ತ್ವವರಿತ ಬಳಿಕ, ತದಿತರ ಗೊಡವೆಯೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಪಡೆದು ಚಿತ್ತ ಶುದ್ಧಿ, ಪುಣ್ಯ ಕಾರ್ಯ ಗೆಯ್ಯೆ,
ಕೊಂಚವಾದರೇನು ? ಕೀಳು ಅಲ್ಲ.
ಮರದ ಬೀಜ ಗಾತ್ರ ಮತ್ತೆ ಇರುವದೆಷ್ಟು ?
ವಿಶ್ವದಾಭಿರಾಮ ಕೇಳು ವೇಮ.

ಅರಿವುಗೇಡಿಯವನು ಅಖಿಲ ಓದುತಿಪ್ಪ,
ಓದುವಂಥ ವೇಳೆ ಒಳ್ಳೆ ಗುಣೆಯು.
ಕಮಲವೇರಿ ಕಪ್ಪೆ ಕುಳಿತುಕೊಳ್ಳದೇನು ?
ವಿಶ್ವದಾಭಿರಾಮ ಕೇಳು ವೇಮ.

ನೀತಿ ತಿಳಿಸ ಹೋಗು ನಿಜವಾಗಿ ವೇಮನ.
ಹಿಂಗಿ ಪಾಪವೆಲ್ಲ ಹೋಗುವಂತೆ.
ಆಳ ತತ್ತ್ವವರಸಿ ಅವನಿಗೆಲ್ಲ ತಿಳಿಸು.
ವಿಶ್ವದಾಭಿರಾಮ ಕೇಳು ವೇಮ.

ನೀತಿ ಹೀನರಿಂದ ನಾಣ್ಯ ಕವಡಿ ಕೇಳೆ,
ಹಿಂದೆ ತಿರುಗುವವನು, ಹುಚ್ಚನಷ್ಟೆ.
ಬೆಕ್ಕು ಕೋಳಿ ಹಿಡಿಯೆ, ಬರುವುದೇ ಕರೆಯಲು ?
ವಿಶ್ವದಾಭಿರಾಮ ಕೇಳು ವೇಮ.

ಅರಿಯೆ, ಬಹಳ ಸುಳ್ಳು ಆಡುವರ ಮನೆಯಲಿ,
ತೊಲಗದೆಂತು ಲಕ್ಷ್ಮಿ ತಾನು ಇಹಳು ?
ಒಡೆದ ಗಡಿಗೆ ನೀರು, ಒಡನೆ ಸೋರದಿರುವುದೆ ?
ವಿಶ್ವದಾಭಿರಾಮ ಕೇಳು ವೇಮ.

ನಿಜವ ಸುಳ್ಳನೆರಡು ನೀಲಕಂಠನರಿವ.
ನೀರಿನಾಳವರಿತು, ನಿಜವ ಕಾಣು.
ತನಯ ಜನನ ತಾಯಿ ತಾನು ಅರಿಯುತಿಹಳು.
ವಿಶ್ವದಾಭಿರಾಮ ಕೇಳು ವೇಮ.

ಉಸಿರು ಇರದ ತಿದಿಯ ಊದಲಿನಿತಾದರು,
ಪಂಚ ಲೋಹವೆಲ್ಲ ಭಸ್ಮವಹವು.
ದೊಡ್ಡವರುಸಿರಿದೊಡೆ ದೊಡ್ಡ ಉರಿಯೇಳದೆ ?
ವಿಶ್ವದಾಭಿರರಾಮ ಕೇಳು ವೇಮ.

ತನ್ನ ಹಡೆದ ಅವರು, ತಾವು ಹಡೆದಂಥವರು,
ಸಾವುದೆಲ್ಲ ತಮಗೆ ಸಾಕ್ಷಿಯಲ್ತೆ ?
ಬದುಕು ಸಕಲ ತಮಗೆ ಬ್ರಹ್ಮ ಸಂಕಲ್ಪವೈ.
ವಿಶ್ವದಾಭಿರಾಮ ಕೇಳು ವೇಮ.

ಅಂಕೆಯರಿತು ಮಾತು ಆಡಲು ಅರಿತಾಗ,
ಸಣ್ಣದೊಡ್ಡತನದ ಗಣನೆಯೇಕೆ ?
ಬಾಲ ಹಿಡಿದ ದೀಪ ಬೆಳಗದೆ ಬೃಹದಾಗಿ ?
ವಿಶ್ವದಾಭಿರಾಮ ಕೇಳು ವೇಮ.





## ೬. ದಾನ

ದಾನ ಒಪ್ಪ ಗೆಯ್ಯೆ, ದಡವ ಸೇರಬಹುದು.
ಮನವ ನಂಬಿ ಇರಲು, ಮಾಯೆ ಮುಳುಗು.
ಜ್ಞಾನ ಕಳೆಯ ನಂಬಿ ಜಡಿಯೊ ವೈರಿಗಳನು.
ವಿಶ್ವದಾಭಿರಾಮ ಕೇಳು ವೇಮ.

ಉಣ್ಣುವ ಬಾನದೊಳು, ಇನಿತು ದೈವಕಿಡಲು,
ಪುಣ್ಯ ಲೋಕಕವನು ಹೋಗುತಿಪ್ಪ.
ಅನ್ನ ದಾನಕಿಂತ ಮಿನ್ನ ದಾನವಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಒಂದರಡಿಯಲೊಂದು ಇಟ್ಟು, ಬಂದ ಲಬ್ಧ ;
ಒಂದಕೊಂದು ಗುಣಿಸೆ ಮುಂದು ಸಾಲು.
ಅಂದವಿದುವೆ ನೋಡು ಔದಾರ್ಯದ ಫಲಕೆ.
ವಿಶ್ವದಾಭಿರಾಮ ಕೇಳು ವೇಮ.

ಇತ್ತು ಪೋಷಿಸದಿರೆ ಇಳೆಯ ಬಾಳು ವ್ಯರ್ಥ
ಪುಟ್ಟಲೇನು ? ಅವರು ಸತ್ತರೇನು ?
ಹುತ್ತದಲಿ ಗೆದ್ದಲು ಹುಟ್ಟವೇ ಸಾಯವೆ ?
ವಿಶ್ವದಾಭಿರಾಮ ಕೇಳು ವೇಮ.

ಹಸಿದು ಬಂದವಂಗೆ ಹಾಕಲನ್ನವನ್ನು,
ಹರನಿಗರ್ಪಿತೆಂದು ಹರಸಿ ತಿನುವ.
ಧನ ವಿಹೀನನಿಹಗೆ ದಾನವೀಯಲಂತೆ.
ವಿಶ್ವದಾಭಿರಾಮ ಕೇಳು ವೇಮ.

ದಾನಗಳನು ಮಾಡೆ, ಧರೆ ಕೈವಶವಹುದು.
ಬಹಳ ಧನ ಕೂಡಿಸಿ ಬಿಟ್ಟು ಹೋಹ.
ತುದಿಗೆ ದಂಡವೀವ ; ಮೊದಲು ಕೆಡುವ ನರನು.
ವಿಶ್ವದಾಭಿರಾಮ ಕೇಳು ವೇಮ.

ಧನವ ಕೂಡಿ ಹಾಕಿ, ಧರ್ಮ ಗೆಯ್ಯದಿರಲು,
ಭೋಗ ಹೊಂದ ತಾನು ; ಬಚ್ಚಿ ಇಡುವ,
ಜೇನು ಕೂಡಿಸಿಟ್ಟು ಜನಕೀವ ನೊಣ ತೆರ.
ವಿಶ್ವದಾಭಿರಾಮ ಕೇಳು ವೇಮ.

ತಾನೆ ಒಲಿದು ಕೊಡಲು, ಸಕಲವುಂಟು.
ಕೇಳಲೀಯೆ, ತಮಗೆ ಕೇಳಿದಷ್ಟು.
ಕೇಳಲೀಯದಾತ ಕಾಣಲಾರ ಫಲವ.
ವಿಶ್ವದಾಭಿರಾಮ ಕೇಳು ವೇಮ.

ದಾನ ಕೇಳುವವನು ಧರಣಿಯೊಳಗಧಮನು ;
ದಾನ ಕೇಳುವವನು ದೈವ ಸಮನು.
ದಾನ ಕೊಡದಿರುವವ ಧನ್ಯನಲ್ಲ ನೋಡು.
ವಿಶ್ವದಾಭಿರಾಮ ಕೇಳು ವೇಮ.

ದಾತನಿರಲು ಕರೆದು ದಾನ ಕೊಡುವ ಮುನ್ನ,
ತನಗೆ ಇರದಿರೇನು ತಾನು ಕೊಡುವ ?
ಮಲೆತ ನೀರು ತೃಷೆಗೆ ಮದ್ದು ಆಗದಲ್ಲ.
ವಿಶ್ವದಾಭಿರಾಮ ಕೇಳು ವೇಮ.






## ೭. ಲೋಭ

ಕೇಳದರ್ಥವೀವ ತಾನೆ ಬ್ರಹ್ಮ ಜ್ಞಾನಿ.
ಕೇಳಲರ್ಥವೀವ ತಾನೆ ತ್ಯಾಗಿ.
ಕೇಳಲೀಯದಾತ ಕಾಣು ಮಹಾ.ಲೋಭಿ.
ವಿಶ್ವದಾಭಿರಾಮ ಕೇಳು ವೇಮ.

ತಾನು ಉಣ್ಣಲಿಲ್ಲ ; ತೆಗೆದು ಕೊಡನಾಪ್ತರಿಗೆ ;
ಬಳಿ ಬರಗೊಡನವರ ಬರಡು ಹಸುವು.
ಬೆದರು ಬೊಂಬೆ ಹೊಲದಿ ಭಯಕೆ ನಿಲಿಸಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ಲೋಭಿ ನರನ ಕೊಲಲು, ಲೋಕದೊಳಗೆ ಮತ್ತೆ,
ಮದ್ದು ಬೇಡ ; ಬೇರೆ ಮಾರ್ಗವುಂಟು.
ಹಣವ ಕೇಳೆ ಸಾಕು ; ಹೆದರಿ ಬಿದ್ದು ಸಾವ.
ವಿಶ್ವದಾಭಿರಾಮ ಕೇಳು ವೇಮ.

ಕಡು ಲೋಭಿಯಾದವ ಕನಕವನು ಆಶಿಸಿ,
ಬಡವನಾಗಿ ತಿರುಗೆ, ಪಡೆವನೇನು ?
ಟಗರು ಹಿಂದೆ ನರಿಯು ತಗಲಿಕೊಂಡ ಚಂದ.
ವಿಶ್ವದಾಭಿರಾಮ ಕೇಳು ವೇಮ.

ತೆಗೆದು ಮುಡಿಯಲಿಲ್ಲ ; ತೊಟ್ಟು ಉಣ್ಣಲಿಲ್ಲ.
ಬೋಧಿಯಲ್ಲ ; ವಿದ್ಯೆ ಶೋಧಕಲ್ಲ.
ಕೂಡಿ ಹೋಗುವವನು ಕಳೇವರದ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಮನೆಯೊಳಗಿನ ಹಣವು ಠಣ ಠಣಿಸುತಿಹುದು.
ಮಣ್ಣಿನಲ್ಲಿ ಹುಗಿವ ; ಮಂಕು ಜೀವಿ.
ಕಾಯ ನಡೆಯೆ, ಹಿಂದೆ ಕವಡಿ ಕಾಸು ಬರದು.
ವಿಶ್ವದಾಭಿರಾಮ ಕೇಳು ವೇಮ.

ಮೊದಲು ಆಶೆ ಬೆಳೆಸಿ, ತುದಿಗೆ ಇಲ್ಲವೆನಲು,
ಪರಮ ಲೋಭಿಯೇನು ? ಪಾಪವದುವೆ.
ಬೆಂದ ಉಸಿರು ಸೋಂಕಿ, ಬಳಲಿ ನಾಶವಹರು.
ವಿಶ್ವದಾಭಿರಾಮ ಕೇಳು ವೇಮ.

ನಾಯಿಯಾಗದು ಹಸು ; ಮೊಲವಾಗದು ಹುಲಿಯು.
ಕೀಟ ದೊಡ್ಡದಿರಲು, ಕರಿಯು ಅಲ್ಲ.
ಲೋಭಿ ದಾತನಲ್ಲ, ಲೋಕದೊಳಗೆ ಎಂದು.
ವಿಶ್ವದಾಭಿರಾಮ ಕೇಳು ವೇಮ.

ಜಿಪುಣನ ಮನೆಯಿಂದ ಜಾಗ ಬಿಡಲು ಶವವು,
ಸೌದೆ-ಸಿದಿಗೆಗಾಗಿ ಸೊತ್ತು ವೆಚ್ಚ
ಬಹಳ ಆಯಿತೆಂದು ಬಿಕ್ಕಿ ಬಿಕ್ಕಿ ಅಳುವ.
ವಿಶ್ವದಾಭಿರಾಮ ಕೇಳು ವೇಮ.

ನೀಡುವಪ್ಪನ ಬಳಿ ನೀಡದಪ್ಪನಿರಲು,
ಆಡಿದಂತೆ ಕೊಡಲು, ಅಡ್ಡ ಬರುವ ;
ಕಲ್ಪ ವೃಕ್ಷದಡಿಯ ಕಲ್ಲು ಮುಳ್ಳಿನಂತೆ.
ವಿಶ್ವದಾಭಿರಾಮ ಕೇಳು ವೇಮ.





## ೮. ಆಸೆ

ಮನಸಿನಲ್ಲಿ ಒಳ್ಳೆ ಮಲ್ಲಿಗೆ ಹೂ ಮಂಟಪ,
ಭಾವಿ ತೋಟ ಮಾಡಿ, ಬಾಲೆ ಗೂಡಿ,
ಭೋಗಿಸುವೆನೆನ್ನಲು, ಬರಿದೆ ಕಾಲ ಹೋಯ್ತು.
ವಿಶ್ವದಾಭಿರಾಮ ಕೇಳು ವೇಮ.

ಆಸೆಯಿಂದ ಮನುಜ ಆಯುವಿರುವ ಕಾಲ,
ತಿರುಗುತಿಪ್ಪ ಭ್ರಮೆಯ ತೊರೆಯದಿದ್ದು,
ಮುಸುರೆ ಪಾತ್ರೆಯಲ್ಲಿ ಮುಕುರುವ ನೊಣದಂತೆ.
ವಿಶ್ವದಾಭಿರಾಮ ಕೇಳು ವೇಮ.

ಆಸೆಯೆನಲು ಉಬ್ಬಿ, ಅಂದದಿ ಪರೀಕ್ಷಿಸಿ,
ಪಾರು ಆಗಬಹುದು ಪರವು ಇಲ್ಲ.
ಸಿಕ್ಕ ತಿಂಡಿ ಕೋರಿ, ಸಾವ ಹೆಗ್ಗಣಂತೆ.
ವಿಶ್ವದಾಭಿರಾಮ ಕೇಳು ವೇಮ.

ಅತಿಶಯಾದ ಆಸೆ ಅಂತರ್ಯದಲಿ ಇರಿಸಿ,
ದಿಕ್ಕುಗೆಟ್ಟು, ನರನು ತಿರುಗುತಿಹನು.
ಸೊಣಗದಂಥ ಆಸೆ ಸೇರಿಕೊಳಲು ಬಿಡದು.
ವಿಶ್ವದಾಭಿರಾಮ ಕೇಳು ವೇಮ.

ನೀರಿನಲ್ಲಿ ಮೀನು ನೆರೆ ಮಾಂಸಕಾಶಿಸಿ,
ಗಾಳದಲ್ಲಿ ಸಿಲುಕಿ ಗಾಸಿ ಪಡದೆ ?
ಆಸೆ ಹುಟ್ಟಿ ಮನುಜ ಆ ರೀತಿ ಕೆಡುತಿಪ್ಪ.
ವಿಶ್ವದಾಭಿರಾಮ ಕೇಳು ವೇಮ.

ಅಂಗನೆಯರ ಕಂಡು, ಅರ್ಥವನ್ನು ಕಂಡು,
ಸಾರವಿಪ್ಪ ರುಚಿಯ ಸ್ವಾದ ಕಂಡು,
ಅಯ್ಯರಾದರೇನು ? ಆಸೆಯುದಿಸದಿಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಪೂರ್ವ ಜನ್ಮದಲ್ಲಿ ಪುಣ್ಯ ಮಾಡದಿರುವ,
ಪಾಪಿ, ಧನಕೆ ಆಸೆ ಪಡುವುದೆಲ್ಲ,
ಬಿತ್ತದಿದ್ದು ಮತ್ತೆ ಬೆಳೆಯ ಒಕ್ಕಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಆಸೆ ಬಿಡದೆ ಇರಲು ಪಾಶಮುಕ್ತನಲ್ಲ.
ಮುಕ್ತನಾದರೂನು ಮುನಿಯು ಅಲ್ಲ.
ಮುನಿಯು ಆದರೂನು ಮೋಹವ ಬಿಡಲಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಬೆಣ್ಣೆ ಕೈಲಿ ಹಿಡಿದು, ಬಗೆದು ವಿವರವರಿಯ ;
ತುಪ್ಪ ಕೋರುತಿಪ್ಪ ; ತಪ್ಪು ರೀತಿ.
ತಾನು ದೈವವಿರಲು, ದೈವಕೆ ಕೋರುವನು.
ವಿಶ್ವದಾಭಿರಾಮ ಕೇಳು ವೇಮ.

ಆಸೆಯೆಂಬ ಪಾಶ ಅರಿತು ಕೊಯ್ದು ಹಾಕಿ,
ದೂರವೆಸೆಯದಿರಲು, ಪರವು ಇಲ್ಲ.
ತಿಂಡಿಗಾಸೆ ಪಡಲು ತೊಂದರೆ ಹೆಗ್ಗಣಕೆ.
ವಿಶ್ವದಾಭಿರಾಮ ಕೇಳು ವೇಮ.





## ೯. ಕಾಮ

ಕೂಳಿಗು ಗತಿಯಿರದೆ, ಕುಳಿತುಕೊಂಡ ನರನು,
ತರುಣಿ ಕಂಡು ಮತ್ತೆ ತಗುಲಿ ಮೋಹ.
ದೀಪ ಕಂಡ ಹುಳು ದಹಿಸುತಿಪ್ಪ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ವಿಕೃತ ಮತಿಯೆ ಇರಲಿ, ವೇಷಧಾರಿ ಇರಲಿ,
ರೋಗಿ ಇರಲಿ ; ಪರಮ ಯೋಗಿ ಇರಲಿ,
ಸ್ತ್ರೀಯ ಕಂಡ ಒಡನೆ ಚಿತ್ತ ರಂಜಿಸುವುದು.
ವಿಶ್ವದಾಭಿರಾಮ ಕೇಳು ವೇಮ.

ಸ್ತ್ರೀಯ ಸುಖವ ಕಂಡು ಚಿತ್ತ ಚಲಿಸದಿರಲು,
ಅಂಥ ನರರಿಗೆಲ್ಲ ಆಯ್ತು ಕೇಡು.
ನದಿಯ ದಡದ ಗಿಡವು ನಿಲದು ಚಲಿಸದಂತೆ.
ವಿಶ್ವದಾಭಿರಾಮ ಕೇಳು ವೇಮ.

ಚೋರತನ, ಜಾರತನ ಜಗದಿ ತುಂಬಿರುವವು.
ಜಾರಣೆಗೇನಿನಿತು ಶಂಕೆ ಇಹುದು.
ಕಳ್ಳಗೆ ಬೆಳ್ದಿಂಗಳು ಕೂಡಿ ಬಾರದಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಹೂವು ಮೊಲೆಯ ಹುಡುಗಿ ಭೂಮಿಯೆಲ್ಲ ಪಡೆಗು.
ಕುದುರು ಮೊಲೆಯ ಹುಡುಗಿ ಕೋಟಿಯಾಯ್ತು.
ತಟಗು ಮೊಲೆಯ ಹುಡುಗಿ ದೆವ್ವಕು ಸಹ ಬೇಡ.
ವಿಶ್ವದಾಭಿರಾಮ ಕೇಳು ವೇಮ.

ಮನೆಯ ಮಡದಿ ಬಿಟ್ಟು, ಮಹಿಯ ಜಾರ ಕಾಂತೆ,
ಹಿಂದೆ ತಿರುಗುವವನು ಹುಚ್ಚನಷ್ಟೆ.
ಬೆಳೆದ ಹೊಲವ ತೊರೆದು, ಮರಡಿ ಉತ್ತಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ರಾಜವರರಿಗಿಹುದು, ರಣರಂಗದ ಚಿಂತೆ.
ಪರಮ ಮುನಿವರರಿಗೆ ಪರದ ಚಿಂತೆ.
ಅಲ್ಪ ನರರಿಗೆಲ್ಲ ಅಂಗನೆಯರ ಚಿಂತೆ
ವಿಶ್ವದಾಭಿರಾಮ ಕೇಳು ವೇಮ.

ಅಂಗವೆಲ್ಲ ಸಡಲಿ, ಅಂತೆ ಹಲ್ಲು ಹೋಗಿ,
ತನುವು ಮುಪ್ಪಿನಿಂದ ತೀವ್ರ ಒಣಗಿ,
ಮುಪ್ಪು ಅಡರಿದರೂ ಮೋಹ ಬಿಡನು ಮತ್ತೆ.
ವಿಶ್ವದಾಭಿರಾಮ ಕೇಳು ವೇಮ.

ಹಲಸಿನ ತೊಳೆಗಿಂತ, ಹರಳು ಸಕ್ಕರೆಗಿಂತ,
ಮಧು ಪಿಯೂಷಕಿಂತ, ಮಧುರ ಗಿಣ್ಣ,
ಕಬ್ಬಿನ ರಸಕಿಂತ ಪ್ರೇಯಸಿ ಮಾತು ಸಿಹಿ.
ವಿಶ್ವದಾಭಿರಾಮ ಕೇಳು ವೇಮ.

ಸಿಹಿಯೊಳಗತಿ ಸಿಹಿಯು, ಅರಿತೊಡನೆ ಪ್ರಾಣ.
ಪ್ರಾಣಕಿಂತ ಬಹಳ ಹಣವೆ ಸಿಹಿಯು.
ಹಣದಕಿಂತ ಸಿಹಿಯು ಗಣಿಕೆ ಮಾತಿನ ಸಿಹಿ.
ವಿಶ್ವದಾಭಿರಾಮ ಕೇಳು ವೇಮ.





## ೧೦. ಸಮಾಜ

ಉರ್ವಿ ಜನರು ಪರಮ ಯೋಗೀಶ್ವರರನ ಕಂಡು,
ತೆಗಳುತಿಹರಷ್ಟೆ ; ತಿಳಿಯುತಿಲ್ಲ.
ಅಮೃತಕಿರುವ ರುಚಿಯ, ಅಂಗೈ ಅರಿಯುವುದೆ ?
ವಿಶ್ವದಾಭಿರಾಮ ಕೇಳು ವೇಮ.

ಬೇರಿಗೆ ಹುಳ ಹತ್ತಿ ಬಾಡುತಿಹುದು ವೃಕ್ಷ.
ಕೀಡೆ ಹುಳುವು ಹತ್ತಿ ಗಿಡವು ಹಾಳು.
ಕುತ್ಸಿತ ಜನ ಸೇರಿ ಗುಣವಂತನು ಕೆಡುವ.
ವಿಶ್ವದಾಭಿರಾಮ ಕೇಳು ವೇಮ.

ಕಣ್ಣು ಇಲ್ಲದವನು, ಕಾಲು ಇಲ್ಲದವನು,
ಇಬ್ಬರೊಂದು ಎಡೆಗೆ ಇರುತಿರುವೊಡೆ,
ಒಡವ ಒಡವನೊಡನೆ ಬೆರೆತು ಇರುವ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಕನಕವುಳ್ಳ ನರನು ಕಾಣನು ಮದದಿಂದ,
ಇಲ್ಲದವಗೆ ಮೊದಲೆ ಈಯದಿರಲು,
ಕನಕವಿಲ್ಲದಾಗ ಕೊಡಲು ಬರುವುದೇನು ?
ವಿಶ್ವದಾಭಿರಾಮ ಕೇಳು ವೇಮ.

ಕಾಲವಶದಿ ಸಿಕ್ಕ ಕರ್ಮ ಜೀವಿಯ ಹಿಂಡಿ,
ಮತ್ತರಾಗುತಿಹರು ಮತ್ಸರದಲಿ,
ಮತ್ತರಾದ ಜನರ ಮನವು ಎಂಥ ಮನವು ?
ವಿಶ್ವದಾಭಿರಾಮ ಕೇಳು ವೇಮ.

ಅಧಿಕನಾದ ರಾಜ ಅಲ್ಪನ ಕೈಡಿಯೆ,
ಅವನಿ ಸೈಗುಡುವುದು ಅವನ ನುಡಿಗೆ,
ಹರದನೊಪ್ಪಿದಾಗ ಹೌದು ಕವಡೆ ನಾಣ್ಯ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಒಡೆಯನೊಡನೆ ಹರಿತಾಯುಧದೊಡನೆ
ಉರಿವ ಬೆಂಕಿ, ಪರರ ನಾರಿಯೊಡನೆ,
ಗೇಲಿ ಮಾಡಲಾಗ ಕಾಲ ತೀರಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ಪತಿಯ ಕಾಲದಲ್ಲಿ ಸತಿಗೆ ಕಷ್ಟವಿಹುದು.
ಸುತನ ಕಾಲದಲ್ಲಿ ಸೌಖ್ಯವಿಹುದು.
'ಉಳ್ಳ' 'ಇಲ್ಲ'ವೆರಡು ಉಂಟು ಯಾರಿಗೇನು ?
ವಿಶ್ವದಾಭಿರಾಮ ಕೇಳು ವೇಮ.

ಗುಣವತಿಯಿರೆ ಯುವತಿ, ಗೃಹವು ಚೊಕ್ಕವುಂಟು.
ಕತ್ತಲು ಮನೆ ದೀಪ ಬೆಳಗುವಂತೆ.
ದೇವಿಯಿಪ್ಪ ಮನೆಯು ದೇವಾಲಯವಯ್ಯ.
ವಿಶ್ವದಾಭಿರಾಮ ಕೇಳು ವೇಮ.

ತಾಯಿ ತಂದೆ ಮೇಲೆ ದಯೆದೋರದ ಪುತ್ರ,
ಹುಟ್ಟಲೇನು ? ಸತ್ತು ಹೋದರೇನು ?
ಹುತ್ತದಲಿ ಗೆದ್ದಲು ಹುಟ್ಟವೆ ಸಾಯವೇ ?
ವಿಶ್ವದಾಭಿರಾಮ ಕೇಳು ವೇಮ.





# ೧. ನುಡಿಮುತ್ತು

ಉಪ್ಪು ಕಪ್ಪುರಕ್ಕೆ ಉಂಟು ಹೋಲಿಕೆಯೊಂದೆ.
ನೋಡೆ ನೋಡೆ, ರುಚಿಯ ಜಾಡು ಬೇರೆ.
ಪುರುಷರಲ್ಲಿ ಪುಣ್ಯ ಪುರುಷರಿಹರು ಬೇರೆ.
ವಿಶ್ವದಾಭಿರಾಮ ಕೇಳು ವೇಮ.

ಅಲ್ಪನಾಡಿದ ನುಡಿ ಆಡಂಬರ ಕಾಣು.
ಸಜ್ಜನಾಡಿದ ನುಡಿ ಸೊಂಪು ಇಹುದು.
ಕಂಚು ಮೊಳಗುವಂತೆ ಕನಕ ಮೊಳಗುತಿಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಕಣ್ಣಿನಲ್ಲಿ ಮದವು ; ಕಾಣದಿಹರು ತುಂಬಿ.
ಮುನ್ನ ತಮಗಿಂತಲು ನಿನ್ನೆ ಮೊನ್ನೆ
ದಗ್ಧರಾದ ಜನರು ತಮಗಿಂತ ಕಡಿಮೆಯೆ ?
ವಿಶ್ವದಾಭಿರಾಮ ಕೇಳು ವೇಮ.

ನಿಕ್ಕಿಯಾದ ಒಳ್ಳೆ ನೀಲವೊಂದೆ ಸಾಕು
ಥಳಕು ಬೆಳಕಿನ ಶಿಲೆ ತಟ್ಟೆಯೇಕೆ ?
ಓದಲರ್ಹ ಪದ್ಯ ಒಂದನೋದೆ ಸಾಕು.
ವಿಶ್ವದಾಭಿರಾಮ ಕೇಳು ವೇಮ.

ನೀರಿನೊಳಗೆ ನಾವು ನಡೆಯುವುದು ಮೆಲ್ಲಗೆ.
ನೀರ ಹೊರಗೆ ಬರಲು ನಡೆಯದಲ್ಲ !
ಸ್ಥಾನ ತಪ್ಪಿದಾಗ ಸಾಹಸವು ಕೂಡದು.
ವಿಶ್ವದಾಭಿರಾಮ ಕೇಳು ವೇಮ.

## ೨. ನುಡಿಮುತ್ತು

ಅನನುಕೂಲ ತಾಣ ಅಧಿಕನೆನಿಸೆ ಹೊಲ್ಲ.
ಕೊಂಚವಿಪ್ಪುದೆಲ್ಲ ಕೊರತೆಯಲ್ಲ.
ಗಿರಿಯು ಕನ್ನಡಿಯೊಳು ಕಿರಿದಾಗಿ ಕಾಣದೆ ?
ವಿಶ್ವದಾಭಿರಾಮ ಕೇಳು ವೇಮ.

ನೀರಿನೊಳಗೆ ಮೊಸಳೆ, ಆನೆ ಹಿಡಿಯುತಿಹುದು.
ಹೊರಗೆ ಶ್ವಾನವದನೆ ಹಿಂಸಿಸುವುದು.
ಸ್ಥಾನ ಬಲವದಷ್ಟೆ ಸ್ವಂತ ಬಲವದಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಓರ್ವನ ಬಾಯ್ಬಡಿದು ಓರ್ವ ಭಕ್ಷಿಸುತಿಹನು.
ಅವನ ಬಾಯ್ಗೆ ದೈವ ಅಂತೆ ಮಾಳ್ಕು.
ಮೀನು-ಮರಿಯನೆಲ್ಲ ಮೀನು ತಿನ್ನುತಿಹುದು.
ವಿಶ್ವದಾಭಿರಾಮ ಕೇಳು ವೇಮ.

ಮೂಢ ಮೂಢಗೆ ಮೆಚ್ಚು ; ಮತ್ತೆ ಅಜ್ಞಾನಿಯ,
ಭಾವದಲಿ ಮೆಚ್ಚುವ ಪಾಪಿ ನರನು.
ಹಂದಿ ಕೆಸರ ಮೆಚ್ಚಿತು ; ಪನ್ನೀರನು ಅಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಹಂದಿ ಈಯುತಿಹುದು ; ಹದಿನೈದು ಕುನ್ನಿ,
ಆನೆಯಿಇವುದೊಂದೆ ತಾನು ಮರಿಯ.
ಉತ್ತಮ ಪುರುಷನಿರೆ ಓರ್ವ ಸಾಲನೇನು ?
ವಿಶ್ವದಾಭಿರಾಮ ಕೇಳು ವೇಮ.





## ೩. ನುಡಿಮುತ್ತು

ಬಂಡೆ ಮೇಲೆ ಒರತೆ ಬಗಿದು ಬಹಳ ತೆಗೆಯೆ,
ಆಯ್ತು ಹೆಚ್ಚು ಕಷ್ಟ ; ಆಶೆಯಿಲ್ಲ.
ಕೆರೆಯ ತಳದ ಒರತೆ ಕುಲವನುದ್ಧರಿಪುದು.
ವಿಶ್ವದಾಭಿರಾಮ ಕೇಳು ವೇಮ.

ಹುಟ್ಟೆ ಬೆತ್ತಲಾಗಿ, ಹೋಹ ಬೆತ್ತಲಾಗಿ,
ತಿರುಗಿ ಬೆತ್ತಲಾಗಿ, ದೇಹಿ ಜಗದಿ.
ಇರುವ ಕಾಲವೆಲ್ಲ ಇರನು ಉಪಕಾರಿಯು.
ವಿಶ್ವದಾಭಿರಾಮ ಕೇಳು ವೇಮ.

ಭೂಪತಿ ಕೃಪೆ ನಂಬಿ ಭೂಮಿ ಕೆಡಿಸುವವನು,
ಪ್ರಜರ ಉಸಿರು ತಾಕಿ ಪಡನೆ ಕೇಡು ?
ಎಸೆದ ಚೆಂಡು ಮೇಲೆ ಎಷ್ಟು ಕಾಲ ಇಹುದು ?
ವಿಶ್ವದಾಭಿರಾಮ ಕೇಳು ವೇಮ.

ಭೂಮಿಯಲ್ಲಿ ಪುಣ್ಯ ಪುರುಷರಿಲ್ಲದಿರಲು,
ಜಗವು ನಿಲುವುದೇಕೆ ಹೋಗದಂತೆ ?
ಅಂಥ ಜನರು ಸಿಗರು ; ಅಲ್ಲಿ ಇಲ್ಲಿ ಬೇಗ.
ವಿಶ್ವದಾಭಿರಾಮ ಕೇಳು ವೇಮ.

ಕುಲದ ಒಳಗೆ ಓರ್ವ ಗುಣವಂತನಿರ್ದೊಡೆ,
ಕುಲವು ಶೋಭಿಸುವುದು ಗುಣಗಳಿಂದ.
ಕಾನನದಿ ಮೆರೆಯುವ ಗಂಧದ ಗಿಡದಂತೆ.
ವಿಶ್ವದಾಭಿರಾಮ ಕೇಳು ವೇಮ.

# ೪. ನುಡಿಮುತ್ತು

ಅತ್ತಿ ಹಣ್ಣು ಮೇಲೆ, ಅಂದವಾಗಿ ಇಹುದು.
ಹೊರಗೆ ಸಿಪ್ಪೆ ಸುಲಿಯೆ, ಹುಳುವೆ ಉಂಟು.
ಭಯಪಡುವನ ಮನದ ಬಿಂಕವಿಂಥ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಗಡಿಗೆ ಒಡೆಯಲಾಗ ಕೊಳ್ಳಬಹುದು ಹೊಸದು.
ಪೊಡವಿಯಲ್ಲಿ ಮತ್ತೆ ಪಡೆಯಬಹುದು.
ಮೂಲೆ ಹಿಡಿದ ನರನು ಮೇಲೇಳ್ವುದು ವಿರಳ.
ವಿಶ್ವದಾಭಿರಾಮ ಕೇಳು ವೇಮ.

ಮಾತನಾಡಬಹುದು ಮನಸು ನಿಲಿಸಲಾರ.
ತಿಳಿಸಬಹುದು ; ತನ್ನ ತಿಳಿಯಲಾರ.
ಚೂರಿ ಹಿಡಿಯಬಹುದು, ಶೂರನಾಗಲಾರ.
ವಿಶ್ವದಾಭಿರಾಮ ಕೇಳು ವೇಮ.

ಮಾತು ಎಲ್ಲ ಸುಳ್ಳು ; ಮನಸು ಎಲ್ಲ ಕಳ್ಳ,
ಇಂಥ ಪ್ರಾಣಿಗಿನ್ನು ಏಕೆ ಬದುಕು ?
ಮಾತು ಸತ್ಯವಿರಲು, ಮತ್ತೆ ಶತಾಯುಷಿಯು.
ವಿಶ್ವದಾಭಿರಾಮ ಕೇಳು ವೇಮ.

ಮಾತು ತಿದ್ದಬಹುದು ; ಮನದಿ ಎಗ್ಗಿರದಿರೆ,
ತಿದ್ದಬಹುದು ಶಿಲೆಯ, ತೀಡಿ ಕಟೆದು,
ಮನಸು ತಿದ್ದಲಾರ ; ಮಹಿಯ ಮೇಲೆ ಯಾರು ?
ವಿಶ್ವದಾಭಿರಾಮ ಕೇಳು ವೇಮ.





# ೫. ನುಡಿಮುತ್ತು

ಗೊಟ್ಟದಲ್ಲಿ ಇಟ್ಟ ಕಾಲ ನಾಯಿ ಬಾಲ,
ನೆಟ್ಟಗಿಹುದು ಕೊಂಚ ನಿಮಿಷ ಕಾಲ.
ಕೆಟ್ಟ ನರನು ಬಿಡನು ; ಕೇಡನೆಷ್ಟು ಹೇಳಿ.
ವಿಶ್ವದಾಭಿರಾಮ ಕೇಳು ವೇಮ.

ಬಾರಿ ಗಿಡ ಮುಳ್ಳನು ಸೇರಿ ಹುಟ್ಟುತಿಹುದು.
ಊರಿದ ಬೀಜದಿಂದ ತೂರಿದಂತೆ.
ಮೂರ್ಖಗೆ ದುರ್ಬುದ್ಧಿ ಮೊದಲೆ ಹುಟ್ಟುವಂತೆ.
ವಿಶ್ವದಾಭಿರಾಮ ಕೇಳು ವೇಮ.

ಹನಿಸೆ ಸಾವಿರ ವರುಷ ಹಾಲು ಬೇವಿನ ಮರಕೆ,
ಹಿಂಗಿ ಕಹಿಯ, ಸಿಹಿಯ ಹೊಂದಬಹುದೆ ?
ನೀಚ ಗುಣವ ತೊರೆದು ನರ ವಿವೇಕಿಯಾಗ.
ವಿಶ್ವದಾಭಿರಾಮ ಕೇಳು ವೇಮ.

ಪಡುವಲದ ಕಾಯಿಗೆ ಪಾಷಾಣ ಕಟ್ಟಲು,
ತೊರೆದು ಡೊಂಕು ನೀಟ ತಾನೆ ಆಯ್ತು.
ನಾಯಿ ಬಾಲ ಕಟ್ಟೆ, ನೇರವಾಗಲೆಂತು ?
ವಿಶ್ವದಾಭಿರಾಮ ಕೇಳು ವೇಮ.

ಭಂಡ ಮಾತನಾಳ್ವ ಭೂರಿ ನೀಚ ನರನು,
ದೊಡ್ಡ ಜನರ ಹಿರಿಮೆ ತಾನು ಅರಿಯ.
ಚಂದನದ ಘನತೆಯ ಹಂದಿಯರಿಯಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

## ೧. ನುಡಿಮುತ್ತು

ವಿವರಿಸಲು ಹೆಡ್ಡಗೆ ವರುಷವೊಂದು ಬೇಕು.
ಗವಿಯ ಮೌನಿಯರಿಯೆ, ಗಣನೆ ಮಾಸ.
ಮೂಢಗರುಹಲಿಕ್ಕೆ ಮೂವತ್ತು ವರುಷವು.
ವಿಶ್ವದಾಭಿರಾಮ ಕೇಳು ವೇಮ.

ಚಮಚೆಯಷ್ಟು ಸಾಕು, ಚೊಕ್ಕ ಆಕಳ ಹಾಲು.
ಗಡಗಿ ತುಂಬಲೇನು ಕತ್ತೆ ಹಾಲು ?
ಭಕ್ತಿಯುಳ್ಳ ಅನ್ನ ಸಾಕು ಮುಷ್ಟಿ ಮಾತ್ರ.
ವಿಶ್ವದಾಭಿರಾಮ ಕೇಳು ವೇಮ.

ಕತ್ತೆ ಹಾಲು ತಂದು, ಕಾಸಿ ಸಿಹಿ ಬೆರೆಸಲು,
ಭಕ್ಷ್ಯವೆನಿಸಬಹುದೆ ? ಭ್ರಷ್ಟಗೆಷ್ಟೆ
ತಿಳಿಸಿ ಹೇಳಿದರೂ ತಿಳಿದುಕೊಳ್ಳಲಾರ.
ವಿಶ್ವದಾಭಿರಾಮ ಕೇಳು ವೇಮ.

ಇರದೆ ವಿದ್ಯೆ ತನಗೆ ಇರಲೇನು ಸಭೆಯೊಳು,
ತಾನೆಂತು ಪಂಡಿತ ? ತಿಳಿದು ನೋಡೆ.
ಕೊಳದಿ ಹಂಸ ಬಕವು ಕೂಡಿ ಇಪ್ಪ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ತಂದು ಕರಡಿ ಚರ್ಮ ತೊಳೆದರೇನು ಎಷ್ಟೊ ?
ಅದರ ಕಪ್ಪು ಹಿಂಗಿ ಆಯ್ತೆ ಬಿಳುಪು ?
ಕೊರಡು ಮೂರ್ತಿ ಮಾಡೆ, ಗುಣವ ಹೊಂದಬಹುದೆ ?
ವಿಶ್ವದಾಭಿರಾಮ ಕೇಳು ವೇಮ.





## ೨. ನುಡಿಮುತ್ತು

ನೈಜವಾದ ಚೊಕ್ಕ ನೀಲವೊಂದೆ ಸಾಕು.
ಥಳಕು ಬೆಳಕಿನ ಶಿಲೆ ತಟ್ಟೆಯೇಕೆ ?
ಓದಲರ್ಹ ಪದ್ಯ ಒಂದನೋದೆ ಸಾಕು.
ವಿಶ್ವದಾಭಿರಾಮ ಕೇಳು ವೇಮ.

ಟೀಕೆ ಮಾಡುವಂಥನೇಕ ಹಿರಿಯರೆಲ್ಲ,
ಲೋಕಕೆ ಹೇಳಿದರು, ಏಕ ದೇವ.
ಕಾಗೆಯಂಥ ಜನರು ಕಾಣರಿದರ ಭಾವ.
ವಿಶ್ವದಾಭಿರಾಮ ಕೇಳು ವೇಮ.

ಶೈವ ವೈಷ್ಣವಾದಿ ಷಣ್ಮತಗಳೊಳಗೆಲ್ಲ,
ದೇವನೋರ್ವನೆಂದು ತಿಳಿಯರಲ್ಲ !
ತಮಗೆ ಭೇದವಿರಲು ತತ್ತ್ವಕೆ ಭೇದವೇ ?
ವಿಶ್ವದಾಭಿರಾಮ ಕೇಳು ವೇಮ.

ಭೂಮಿಯೆಂದರೇನು ? ಪೊಡವಿಯೆಂದರೇನು ?
ಧರಣಿಯೆಂದರೇನು ? ಪುರುಷವರರೆ
ಇಷ್ಟು ಒಂದೆ ಇರಲು, ಇನ್ನು ಮತಗಳೇಕೆ ?
ವಿಶ್ವದಾಭಿರಾಮ ಕೇಳು ವೇಮ.

ಹಸುಗಳಂದ ಬೇರೆ ; ಹಾಲು ಎಲ್ಲ ಒಂದೆ.
ಪುಷ್ಪ ಜಾತಿ ಬೇರೆ ; ಪೂಜೆಯೊಂದೆ.
ದರ್ಶನಗಳು ಬೇರೆ ; ದೈವವೆಂಬುದೊಂದೆ.
ವಿಶ್ವದಾಭಿರಾಮ ಕೇಳು ವೇಮ.

## ೮. ನುಡಿಮುತ್ತು

ವಿಶ್ವಕರ್ಮನಿರದೆ ವಿಶ್ವ ಮತ್ತೆ ಇಲ್ಲ.
ಉಣಲು ಊಟವಿಲ್ಲ, ಉಡುಗೆಯಿಲ್ಲ.
ವಿಶ್ವಮಯನೆ ಆದ ವಿಭುವ ತಿಳಿಯರೇಕೊ ?
ವಿಶ್ವದಾಭಿರಾಮ ಕೇಳು ವೇಮ.

ಕಮಲ ಭವನು ಗೆಯ್ದು ಕಡು ಸೃಷ್ಟಿಯೆನುವರು.
ಹರಿ ಪಾಲಿಪ ; ಕೊಲುವ ಹರನೆಂಬರು.
ಮೂರ್ತಿಗಳಿಷ್ಟಿರಲು ಮೂಲವೊಂದೆ ಅಲ್ತೆ ?
ವಿಶ್ವದಾಭಿರಾಮ ಕೇಳು ವೇಮ.

ಅಖಿಲ ದೇವತೆಗಳು ಹರಿಯ ಪೂಜೆ ಗೆಯ್ಯೆ,
ಹರನು ನೃತ್ಯ ಗೆಯ್ವ, ಆದಿಯಲ್ಲಿ.
ಆದಿ ಬ್ರಹ್ಮ ತಾನೆ ಅಂತೆ ಮದ್ದಳೆ ಬಡಿದ.
ವಿಶ್ವದಾಭಿರಾಮ ಕೇಳು ವೇಮ.

ಕಿವಿಯ ಗೂಡು ಗೆಯ್ದು ಕೂಗಿದನು ವೇಮನ.
ಬಟ್ಟೆ ಬಯಲೊಳುಂಟು, ಬ್ರಹ್ಮವೆಂದು.
ಹೊಳೆಯೆ ಬುದ್ಧಿಗದನೆ ಹೊಂದಿ ಸುಖಿಸಬಹುದು.
ವಿಶ್ವದಾಭಿರಾಮ ಕೇಳು ವೇಮ.

ಕಣ್ಣು ಕಂಡಿತೆನಲು ಕರ್ಮಾಧಿಕಾರವು.
ಹಿಂದೆ ಬಿದ್ದು ಕೆಡುವ ಹುಚ್ಚು ಮನುಜ.
ಬಟ್ಟೆ ಬಯಲು ಮುಕ್ತಿ, ಪರಿಪರಿಯಲಿ ನೋಡು.
ವಿಶ್ವದಾಭಿರಾಮ ಕೇಳು ವೇಮ.





## ೯. ನುಡಿಮುತ್ತು

ಬೊಂಬೆಯಾಟದವನು ಬೊಂಬೆಯಾಡಿಸುವನು,
ಧರಣಿ ಜನರ ನೋಟದೆಲ್ಲೆ ಮೀರಿ.
ತಾನು ಮರೆಯೊಳಿದ್ದು, ದೈವವಾಡಿಸುವನು.
ವಿಶ್ವದಾಭಿರಾಮ ಕೇಳು ವೇಮ.

ಘಟವ ಗಾಣ ಮಾಡಿ, ಗುಣಗಳೆತ್ತು ಮಾಡಿ,
ಎಲ್ಲ ಕರ್ಮಗಳನು ಎಳ್ಳು ಮಾಡಿ,
ತಿಳಿದು ಗಾಣವಾಡ್ಸ ತೈಲಕಾರನಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ಜನನ ಮರಣಗಳಿಗೆ ಸರಿ ಸ್ವತಂತ್ರನಲ್ಲ.
ಮೊದಲು ಕರ್ತನಲ್ಲ ; ತುದಿಗು ಅಲ್ಲ.
ನಡುವೆ ಕರ್ತನೆನಲು ನಗುಪಾಟಲಲ್ಲವೆ ?
ವಿಶ್ವದಾಭಿರಾಮ ಕೇಳು ವೇಮ.

ವಿಶ್ವನಾಥನಲ್ಲಿ, ವಿಪ್ರ ಜನತೆಯಲ್ಲಿ,
ವಿಭುಗಳಲ್ಲಿ, ವೇದ ವಿಧಗಳಲ್ಲಿ,
ಭಕ್ತಿ ಇಲ್ಲದವನು ಪಾಪಾತ್ಮ ಜಗದೊಳು.
ವಿಶ್ವದಾಭಿರಾಮ ಕೇಳು ವೇಮ.

ಎಲೆಯು ಅಡಿಕೆ ಸುಣ್ಣ ಅವಕೆ ಮೂರು ಬಣ್ಣ.
ಕೂಡಿ ಜಗಿಯುತಿರಲು ಕೆಂಪೆ ಆಯ್ತು.
ಸೋಂಕಿ ತ್ರಿಗುಣಗಳು ಶೋಭಿಪ ಪರಮಾತ್ಮ.
ವಿಶ್ವದಾಭಿರಾಮ ಕೇಳು ವೇಮ.

## ೧೦. ನುಡಿಮುತ್ತು

ಶಿವನೆಂದು ಭ್ರಮಿಸಿ ಶಿಲೆಗೆ ಶರಣೆಂಬಿರಿ.
ಮೂರ್ಖ ಜೀವಿಗಳೇ ! ಮೋಹ ಬಿಡಿರಿ.
ಜೀವದೊಳಗಿರುತಿಹುದು, ಶಿಲೆಯೊಳಗೇನುಂಟು ?
ವಿಶ್ವದಾಭಿರಾಮ ಕೇಳು ವೇಮ.

ಮಣ್ಣು ಲೋಹಗಳಲಿ, ಮರ ಶಿಲಾದಿಗಳಲಿ,
ಪಟ ಗೋಡೆಗಳಲಿ, ಪ್ರತಿಮೆಗಳಲಿ,
ತನ್ನ ನೆನಪು ಕೊಡಲು ತವಕಿಸ ಪರಮಾತ್ಮ.
ವಿಶ್ವದಾಭಿರಾಮ ಕೇಳು ವೇಮ.

ಕಲ್ಲು ಬೊಮ್ಮಗೇಕೆ ಕೆಲ ಬಣ್ಣದ ವಸ್ತ್ರ ?
ಗುಡಿ ಗೋಪುರವೆಲ್ಲ ಕಂಭ ಮತ್ತೆ ?
ಒಟ್ಟೆ ಅನ್ನ ತಾನು, ಬಯಸುತಿಹನೆ ದೇವ ?
ವಿಶ್ವದಾಭಿರಾಮ ಕೇಳು ವೇಮ.

ನೀರು ಮುಳುಗಲೇನು ? ನಿಧಿಯ ಹೂಳಲೇನು ?
ಮನದಿ ಗುಡಿಯೆಡೆ ಕರ ಮುಗಿದರೇನು ?
ಒಟ್ಟು ಕಪಟ, ದೋಷ ಒಡಲು ತುಂಬಿ ಇರಲು.
ವಿಶ್ವದಾಭಿರಾಮ ಕೇಳು ವೇಮ.

ಕುಕ್ಕರ ಏಕಾಂತ, ಕೊಕ್ಕರೆಯ ಧ್ಯಾನ
ಕತ್ತೆರಾಗ ಮತ್ತೆ ಕಪ್ಪೆ ಮುಳುಗು,
ಆತ್ಮವರಿವ ಭಾವ, ಅರಿತುಕೊಳ್ಳರೇಕೊ ?
ವಿಶ್ವದಾಭಿರಾಮ ಕೇಳು ವೇಮ.





## ೧೧. ನುಡಿಮುತ್ತು

ತಾಯಿಯೇ ಪಾರ್ವತಿಯು, ತಂದೆಯೇ ಶಂಭುವು
ಪ್ರಮಥ ಗಣವು ಅಖಿಲ ಬಂಧು ಬಳಗ.
ತಾನು ಹುಟ್ಟಿದ ಮನೆ ತನಗೆ ಕೈಲಾಸವು.
ವಿಶ್ವದಾಭಿರಾಮ ಕೇಳು ವೇಮ.

ಒಂದಾದ ಸತಿಪತಿ ಚಂದದ ಸಂಸಾರ
ನಂದನನ ನಡೆನುಡಿ, ನಂದಿನಿಯೊಳು.
ಸತಿಗಿತ್ತ ರಕ್ಷಣೆಯು ಸ್ವಂತಕ್ಕೆ ರಕ್ಷಣೆಯು.
ವಿಶ್ವದಾಭಿರಾಮ ಕೇಳು ವೇಮ.

ಸುಗುಣವಂತೆ ಕಾಂತೆ ಸುದತಿಯಾಗಿರ್ದೊಡೆ,
ಮಿಗಿಲು ಬುದ್ಧಿವಂತ ಮಕ್ಕಳಿರಲು,
ಸಗ್ಗ ವೇತಕಯ್ಯ ? ಸಂಸಾರ ಸಾಲದೆ ?
ವಿಶ್ವದಾಭಿರಾಮ ಕೇಳು ವೇಮ.

ಸತಿಯ ಕೂಡಲೆಂದು, ಸುತರ ಪಡೆಯಲೆಂದು,
ವ್ಯಥೆಯ ಪಡೆವುದೆಂಥ ವಿಕೃತ ಮತಿಯು ?
ನೆಲದೊಳಿರುವ ಕಲ್ಲು ನೆತ್ತಿಗೆತ್ತಿದಂತೆ.
ವಿಶ್ವದಾಭಿರಾಮ ಕೇಳು ವೇಮ.

ಸತಿಗೆಯ್ಯುವ ಕೆಡುಕು, ಪತಿಗವಶ್ಯ ಬಹುದು.
ಪತಿಗೆಯ್ಯುವ ಒಳಿತು ಸತಿಗರ್ಧವು.
ಪತಿ ಗೆಯ್ಯುವ ಕೆಡುಕು ಸತಿಗೇಕೆ ಬಾರದು ?
ವಿಶ್ವದಾಭಿರಾಮ ಕೇಳು ವೇಮ.

## ೧೨. ನುಡಿಮುತ್ತು

ಕೋಗಿಲೆ ವನದಲ್ಲಿ 'ಕು ಹೂ' ಉಲಿಯುವಂತೆ,
ಸುರಿತ ಜನರ ಭಾವ ನಡೆಯು ನುಡಿಯು.
ಕಾಗೆ ಕೂಗಿನಂತೆ ಕಲುಷಾತ್ಮನ ವಚನ.
ವಿಶ್ವದಾಭಿರಾಮ ಕೇಳು ವೇಮ.

ತನ್ನ ಒಳಿತು ಕೋರಿ, ಧರ್ಮ ಕರ್ಮ ತಿಳಿಸೆ,
ಮುನ್ನ ಜರಿದು ನುಡಿವ ಮೂಢ ಖಳನು.
ಗೂಳಿಗೆ ತಿನಲಿಡಲು ಕೊಂಬು ತಿವಿದ ಪರಿಯು.
ವಿಶ್ವದಾಭಿರಾಮ ಕೇಳು ವೇಮ.

ಅಲ್ಪನಾದವನಿಗೆ ಅಧಿಕಾರ ನೀಡಲು,
ದೊಡ್ಡ ಸಣ್ಣ ಎನದೆ ದೂಡುತಿಪ್ಪ.
ಕೆರಹ ಕಡಿವ ಸೊಣಗ ಕಬ್ಬಿನ ಸಿಹಿಯರಿವುದೆ ?
ವಿಶ್ವದಾಭಿರಾಮ ಕೇಳು ವೇಮ.

ಮಾತನಾಡೆ ಬೇರೆ ; ಮನದ ಕೋರ್ಕೆ ಬೇರೆ,
ಒಡಲ ಗುಣವು ಬೇರೆ, ಯೋಚ್ನೆ ಬೇರೆ.
ಎಂತು ಬಹುದು ಮುಕ್ತಿ ? ಇಂತು ನಡತೆ ಇರಲು ?
ವಿಶ್ವದಾಭಿರಾಮ ಕೇಳು ವೇಮ.

ಖಗಗಳಿರವು ಚಂದ, ಕಾಣಲಂದವಿಹುದು
ಗುಂಪು ನೋಡಿದೊಡನೆ ಗುರುತಾಗದೆ ?
ದೇವ ಕೊಡದ ಸೊಗಸು ತಾನು ಬಯಸಲೇಕೆ ?
ವಿಶ್ವದಾಭಿರಾಮ ಕೇಳು ವೇಮ.





## ೧೩. ನುಡಿಮುತ್ತು

ಠಕ್ಕರೊಡನೆ ಸೇರಿ ಠಬರು ಚೇಷ್ಟೆ ಗೆಯ್ಯೆ,
ನಿಜವಾಗಿಯು ಘನನು ನೀತಿಗೇಡು.
ಉಳ್ಳಿ ತೋಟದಲ್ಲಿ ಮಲ್ಲಿಗೆ ಲತೆಯಂತೆ
ವಿಶ್ವದಾಭಿರಾಮ ಕೇಳು ವೇಮ.

ಸಲ್ಲದವನ ಜೊತೆಗೆ ಸೇರಿ ಕೆಲಸ ಮಾಡೆ,
ಭೂರಿ ಹಾನಿ ತಪ್ಪದಾರಿಗೇನು ?
ಹೆಂಡ ಮರದ ಕೆಳಗೆ ಹಾಲು ಕುಡಿದ ಚೆಂದ
ವಿಶ್ವದಾಭಿರಾಮ ಕೇಳು ವೇಮ.

ಇಲ್ಲ ಒಳ್ಳೆಯವರು ಇಳೆಯಲ್ಲಿ ಅರಸಲು,
ದುಷ್ಟರೆಷ್ಟೊ ಇಹರು ಧರಣಿಯಲ್ಲಿ
ಹೊನ್ನು ಇಲ್ಲವಷ್ಟೆ ಮಣ್ಣಿಗೇನು ಕೊರತೆ ?
ವಿಶ್ವದಾಭಿರಾಮ ಕೇಳು ವೇಮ.

ಓದುಗ ಮತಿಗಿಂತ ಸಾಧಕ ಮತಿ ಮೇಲು.
ವೇದದಲ್ಲ ಇಲ್ಲು, ವಾದದಲ್ಲು,
ಒಡಲು ಶುದ್ಧ ಗೆಯ್ದು, ಒಡೆಯನನ್ನು ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಖಳರು ಬಯ್ದರೆಂದು ಕಳವಳ ಪಡಲೇಕೆ ?
ಒರಟು ಬಯ್ಗಳಿಂದ ಒಳಿತು ಕೆಡದು.
ಸಜ್ಜನರು ಬಯ್ಯಲು ಶಾಪವುಂಟು ನೋಡು.
ವಿಶ್ವದಾಭಿರಾಮ ಕೇಳು ವೇಮ.

## ೧೪. ನುಡಿಮುತ್ತು

ಕರಗಿ ಕರಗ ಬಂತು ಕನಕಗಿರುವ ಕಾಂತಿ.
ಸೇರಿ ಸೇರಿ ಜನನ ಸತಿಯ ಪ್ರೇಮ.
ಲಲನೆ ಲಲನೆಯಿಂದ ಲೋಭ ಮೋಹಂಗಳು.
ವಿಶ್ವದಾಭಿರಾಮ ಕೇಳು ವೇಮ.

ತಪ್ಪನೆಣಿಸುತಿಹರು ತಂಡೋಪತಂಡದಿ.
ಉರ್ವಿ ಜನತೆಗೆಲ್ಲ ಉಂಟು ತಪ್ಪು.
ತಪ್ಪನೆಣಿಸುವವರು ತಮ್ಮ ತಪ್ಪರಿಯರು.
ವಿಶ್ವದಾಭಿರಾಮ ಕೇಳು ವೇಮ.

ಕಮಲ ನಯನೆ ಕಂಡು, ಕನಕದೊಡವೆ ಕಂಡು,
ದಿಮ್ಮೆನುವುದು ಬೇಗ ತಿಳಿವಿಗೆಲ್ಲ.
ಮನುಜರೆಲ್ಲ ತತ್ವ ಮಹಿಮೆಯೆಂತರಿವರು ?
ವಿಶ್ವದಾಭಿರಾಮ ಕೇಳು ವೇಮ.

ಕಾಂತೆಯಂಗ ಕಂಡು, ಕಸಿವಿಸಿಗೊಳುವನು !
ಅಂತರಾಳ ಕಿಲುಬು ಕಾಣಲಾರ.
ಇಂಥ ಮಲವುದಿಸುವ ದೇಹವೇತಕಯ್ಯ ?
ವಿಶ್ವದಾಭಿರಾಮ ಕೇಳು ವೇಮ.

ಬಾಲ್ಯದಲ್ಲಿ ನೀನು ಬಹಳ ವಿಧದಿ ಹಿಡಿದು,
ಸವಿದು ಚಪ್ಪರಿಸಿದ ಸ್ತನಕ್ಕಾಗಿ,
ಮೋಹ ಇನಿತು ಏಕೆ ? ಮೂಢಾತ್ಮ ತಿಳಿದುಕೊ.
ವಿಶ್ವದಾಭಿರಾಮ ಕೇಳು ವೇಮ.





## ೧೫. ನುಡಿಮುತ್ತು

ಪೊಡವಿ ತಿರುಗಿ ಪಡೆವ ಪುಣ್ಯ ರಾಶಿಯೆಲ್ಲ,
ಸಾಧು ಜನರ ನೋಡೆ, ಶೀಘ್ರ ಲಭ್ಯ.
ಬಿದ್ದ ನೀರಿಂಗಲು ಶುದ್ಧ ನದಿಯ ತಳದಿ.
ವಿಶ್ವದಾಭಿರಾಮ ಕೇಳು ವೇಮ.

ಭೂಮಿ ತನ್ನದೆನಲು ಭೂಮಿ ನಗುವುದಲ್ಲ ?
ದಾನ ಹೀನನ ಕಂಡು, ಧನ ನಗುವುದು.
ಕದನ ಭೀರು ಕಂಡು, ಕಾಲರಾಯ ನಗುವ.
ವಿಶ್ವದಾಭಿರಾಮ ಕೇಳು ವೇಮ.

ಇಲಿಯ ಹಿಡಿಯೆ ಬೆಕ್ಕು ಇಷ್ಟ ಪೂರ್ತಿಯಹುದೆ ?
ಕೋಳಿ ಹಿಡಿಯೆ ಮತ್ತೆ ಕೋರುತಿಹುದು.
ಮಮತೆ ತೊರೆಯದನಕ ಮೋಕ್ಷ ದೊರೆವುದೆಂತು ?
ವಿಶ್ವದಾಭಿರಾಮ ಕೇಳು ವೇಮ.

ಆಸೆಗಳನು ಕಡಿದು ಅಗ್ನಿಯನು ಆರಿಸಿ,
ಕಚ್ಚೆ ಬಿಗಿದು ಚಿಡ್ಡಿ, ಕೋಪ ತಗ್ಗಿ,
ಆಸೆ ತೊರೆದು ಇರುವ ಅವನೆ ಯೋಗಿ ಎನಿಪ.
ವಿಶ್ವದಾಭಿರಾಮ ಕೇಳು ವೇಮ.

ಹುಚ್ಚು ಪೆದ್ದನೇನು ? ಹುಟ್ಟು ಬಡವನೇನು ?
ಕುಷ್ಠರೋಗಿಯೇನು ? ಕುಂಟನೇನು ?
ಭಾಮೆ ಕಾಣಲಾಗ ಕಾಮ ಮುತ್ತುತಿಹುದು.
ವಿಶ್ವದಾಭಿರಾಮ ಕೇಳು ವೇಮ.

# ೧೭. ನುಡಿಮುತ್ತು

ಆಪತ್ತಿರುವಾಗ ನೋಡು ಬಂಧು ಭಾವ.
ಭಯದ ವೇಳೆ ನೋಡು ಬಂಟ ಗುಣವ.
ಬಡತನ ಬಂದಾಗ ಮಡದಿಯ ಗತಿ ನೋಡು.
ವಿಶ್ವದಾಭಿರಾಮ ಕೇಳು ವೇಮ.

ಸ್ವಂತ ಉಣ್ಣಲಾರ ; ಸಂಪದಕಾಪ್ತರನು
ಸೇರಿಸಿಕೊಳದವನು ಶುದ್ಧ ಪಶುವು.
ಬೆಳೆದ ಭೂಮಿಯಲ್ಲಿ ಬೆದರು ನಿಂತ ರೀತಿ.
ವಿಶ್ವದಾಭಿರಾಮ ಕೇಳು ವೇಮ.

ಸಿಕ್ಕು ಬದ್ದ ವೇಳೆ ಸಿಂಹವಾದರೇನು ?
ಪಕ್ಕೆ ನಾಯಿ ಕೂಡ ಬಾಧಿಸುವುದು.
ಬಲವಿರದ ಕಾಲದಿ ಪಂಥವೆಲ್ಲ ಹೊಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಸಕ್ತಿ ಇರುವ ಕಾರ್ಯ ಸರಿಯಾಗಿ ನಡೆವುದು ;
ಭಕ್ತಿ ಇರುವ ಪೂಜೆ ಫಲವೀವುದು.
ಯುಕ್ತಿ ಇರುವ ಮಾತು ಯುಕ್ತವಿಹುದು ಜಗದಿ.
ವಿಶ್ವದಾಭಿರಾಮ ಕೇಳು ವೇಮ.

ವಿತ್ತ ಓರ್ವಗಿತ್ತು ವಿತರಣ ಗುಣವನ್ನು
ಮತ್ತೆ ಓರ್ವಗಿತ್ತು ಮಂದಿ ಕೆಡಿಪ.
ಬ್ರಹ್ಮ ಕೆಲಸವೆಲ್ಲ ಬರಿಯ ಹಾಳು ಕೆಲಸ.
ವಿಶ್ವದಾಭಿರಾಮ ಕೇಳು ವೇಮ.





# ೧೮. ನುಡಿಮುತ್ತು

ಕೊಡುಗೆಯಷ್ಟು ಫಲವ ಕೊಡುವುದಪಕಾರವ
ಗೆಯ್ಯದಿರಲು, ತಾನು ಕೆಡಸದಿರಲು,
ಮದುವೆ ಮಾಡಿದಷ್ಟು ಮಹಾ ಫಲವು ಉಂಟು.
ವಿಶ್ವದಾಭಿರಾಮ ಕೇಳು ವೇಮ.

ದಾನ ಧರ್ಮಗಳನು ದೂಡಿ ನಾಳೆ ನಾಳೆ,
ಕಾಲ ಕಳೆ.ಯುತಿಹರು ಕೇಡಿ ಜನರು.
ತಾನು ಏನಾಗುವ ? ತನ್ನ ಬದುಕು ಏನು ?
ವಿಶ್ವದಾಭಿರಾಮ ಕೇಳು ವೇಮ.

ದಾನಿಯಲ್ಲದವಗೆ ದುಂಬಾಲು ಬೀಳಲು
ಕಾಲ ಕಳೆಯುತಿಹರು ಕೇಡಿ ಜನರು.
ತಾನು ಏನಾಗುವೆ ? ತನ್ನ ಬದುಕು ಏನು ?
ವಿಶ್ವದಾಭಿರಾಮ ಕೇಳು ವೇಮ.

ಕರ್ಣನೋರ್ವ ಘನನು ಎಂದು ಕರೆವುದೇಕೆ ?
ದಾನಶೀಲ ಗುಣದಿ ಮುಕುಟ ಮಣಿಯು.
ಮೇರು ಧನವು ಕರ್ಣ ದಾತನೆನಿಸೆ ಮೂಲ.
ವಿಶ್ವದಾಭಿರಾಮ ಕೇಳು ವೇಮ.

ದಾನ ಧರ್ಮಗಳನು ತಾನು ಮಾಡಿ ಜನಿಪ
ಕರ್ಮಗತಿಯಲಿ ಯಮನು ಕಷ್ಟವೀಯ.
ಕರ್ಮ ಧರ್ಮಗಳನು ಕಡೆಗಾಣಲು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

## ೧೮. ನುಡಿಮುತ್ತು

ಪರಚಿಂತೆಯದೇಕೆ ? ಪೇಚಾಟಗಳೇಕೆ ?
ಅವನಿ ಮರೆತು, ಅಂಟಿ ಅರಗಿನಂತೆ,
ಸತತ ಆತ್ಮದಲ್ಲಿ ಸರಸಾಟವಾಡೆಲೊ.
ವಿಶ್ವದಾಭಿರಾಮ ಕೇಳು ವೇಮ.

ಸ್ವಾನುಭೂತಿಯಿರದೆ, ಶಾಸ್ತ್ರವಾಸನೆಯಲಿ,
ಸಂಶಯಗಳಳಿಯವು, ಸಾಧು ಜನಕೆ.
ಚಿತ್ರ ದೀಪದಿಂದ ಚದುರದು ಕತ್ತಲೆಯು
ವಿಶ್ವದಾಭಿರಾಮ ಕೇಳು ವೇಮ.

ನಿಜವನಾಡುವವನ ನಿಂದಿಸುವುದು ಜಗವು.
ನಿಜವಾಡಬಾರದು ನೀಚರೊಡನೆ.
ನಿಜ ಮಹಾತ್ಮರೊಡನೆ ನಿಜವನಾಡಬೇಕು.
ವಿಶ್ವದಾಭಿರಾಮ ಕೇಳು ವೇಮ.

ಮಾತನಾಡಬಹುದು ಮರ್ಮ ತಿಳಿದ ಬಳಿಕ.
ಗರಿಮೆ ಕಿರಿತನಗಳ ಗಣನೆಯೇಕೆ ?
ಬಾಲನ ಕೈ ದೀಪ ಬೆಳಗದೆ ಬೃಹದಾಗಿ ?
ವಿಶ್ವದಾಭಿರಾಮ ಕೇಳು ವೇಮ.

ತಿಳಿಯೆನೆನ್ನುವವನು ತಿರಿಯೊಳು ಕಡು ಜಾಣ.
ತಿಳಿದೆನೆನ್ನುವವನು ತಿಳಿಯನೆಂದು.
ಮೌನವಾಗಿರುವವ ಮಹಿಮೋತ್ತಮನಿಹನು.
ವಿಶ್ವದಾಭಿರಾಮ ಕೇಳು ವೇಮ.





## ೧೯. ನುಡಿಮುತ್ತು

ಕಾಲಧರ್ಮವರಿತು, ಕಪಟ ವೃತ್ತಿ ತೊರೆದು,
ಅಂಗನೆ ಮಕ್ಕಳಲಿ ಆಸೆ ಬಿಟ್ಟು,
ಮೇಲ್ಮೆಯುಳ್ಳ ಶಿವನ ಮೇಲೆ ಎದ್ದು ನೋಡು.
ವಿಶ್ವದಾಭಿರಾಮ ಕೇಳು ವೇಮ.

ಆಸೆಯುಡುಗುವನಕ ಪಾಶಮುಕ್ತನಲ್ಲ.
ಮುಕ್ತನಾಗಬಹುದು, ಮುನಿಯಾಗನು.
ಮುನಿಯೆ ಆಗಬಹುದು, ಮೋಹವ ಬಿಡಲಾರ.
ವಿಶ್ವದಾಭಿರಾಮ ಕೇಳು ವೇಮ.

ಭವ ಸಾಗರದಂತೆ, ಭಾರ್ಯೆ ಮೊಸಳೆಯಂತೆ.
ಮೀನು ನೀರು ಜಂತು, ಮಕ್ಕಳೆಲ್ಲ,
ಭವಹರನ ನೆನೆಯದೆ, ಪಾರುಗಾಣರಾರು ?
ವಿಶ್ವದಾಭಿರಾಮ ಕೇಳು ವೇಮ.

ಬಂಗಾರವ ಕಂಡು, ಭಾಮೆಯನ್ನು ಕಂಡು,
ಮನದಲ್ಲಿ ಚಿಂತೆ ಮಾಡದಿರಲು,
ಅವನೆ ಪರಮ ಯೋಗಿ ಅವನಿಯಲಿ ಬಣ್ಣಿಸೆ.
ವಿಶ್ವದಾಭಿರಾಮ ಕೇಳು ವೇಮ.

ಅರುಣನುದಯ ಸಂಖ್ಯೆ, ಅಸ್ತಮಾನ ಸಂಖ್ಯೆ
ಜನನ ಮರಣ ಸಂಖ್ಯೆ, ಜಾತಿ ಸಂಖ್ಯೆ,
ತಿಳಿದು ಯೋಗಿಯಿದನೆ ಧೀರನಾಗಿ ಇಹನು.
ವಿಶ್ವದಾಭಿರಾಮ ಕೇಳು ವೇಮ.

# ೨೦. ನುಡಿಮುತ್ತು

ಜನ್ಮ ಕಳೆದು ಬೇರೆ ಜನ್ಮವೆತ್ತಿ ಬರಲು,
ಕರ್ಮಧರ್ಮಗಳದು ಗಣನೆಯುಂಟೆ ?
ಕರ್ಮ ಧರ್ಮಗಳನು ಕಡೆಗಣಿಸಲು ಬಹುದೆ ?
ವಿಶ್ವದಾಭಿರಾಮ ಕೇಳು ವೇಮ.

ಕರ್ಮ ಗುಣಗಳೆಲ್ಲ ಕಡೆಗಣಿಸಿ ನಡೆದರೆ,
ತತ್ತ್ವವೆಂತು ತನಗೆ ತಗಲಿ ಇಹುದು ?
ಎಣ್ಣೆಯಿರದೆ ದೀಪ ಎಳ್ಳಿಂದ ಉರಿವುದೆ ?
ವಿಶ್ವದಾಭಿರಾಮ ಕೇಳು ವೇಮ.

ವಿಧಿಯು ಬೆನ್ನಿಗಿರಲು ವರವೀವುದು ದೈವ.
ಅದುವೆ ಕರ್ಮದಿಂದ, ಅಲ್ಲ ವಿಧಿಯು.
ಕರ್ತ ಅಜನು ವಿಧಿಗೆ, ಕರ್ಮಕೆ ತಾ ಕರ್ತ.
ವಿಶ್ವದಾಭಿರಾಮ ಕೇಳು ವೇಮ.

ಬೇಕು ಎನಲು ಬರದು, ಬೇಡವೆನಲು ಬಿಡದು.
ಪೂರ್ವ ಕರ್ಮಕಂಟಿ ಫಲವು ಉಂಟು.
ಹೃದಯದಲ್ಲಿ ದುಃಖ ಪಡದಿರುವುದೆ ಧರ್ಮ.
ವಿಶ್ವದಾಭಿರಾಮ ಕೇಳು ವೇಮ.

ಚಿತ್ತ ಶುದ್ಧಿ ಹೊಂದಿ ಗೆಯ್ದ ಪುಣ್ಯ ಕಾರ್ಯ,
ಕೊಂಚವಾದರೇನು ? ಕ್ಷುಲ್ಲಕಲ್ಲ
ಆಲದ ಮರವೆಷ್ಟು ? ಅದರ ಬೀಜವೆಷ್ಟು ?
ವಿಶ್ವದಾಭಿರಾಮ ಕೇಳು ವೇಮ.





# ೨೧. ನುಡಿಮುತ್ತು

ಜಾತಿ ಮತವ ತೊರೆದು ಯೋಗಿಯಾಗೆ ಮೇಲು,
ಜಾತಿ ಮುಳುಗಿ ನೀತಿ ಹೇಳಲೇನು ?
ಮತವು ತಿಳಿಯೆ ಜಾತಿ ಬಿಡಲು ಅಂಜಬೇಡ.
ವಿಶ್ವದಾಭಿರಾಮ ಕೇಳು ವೇಮ.

ಯಾವ ಕುಲವು ನಿನಗೆ ? ಯಾವ ಮತವು ಮತ್ತೆ ?
ಪೂರ್ಣಗೊಂಡ ಹೃದಯ ಪಕ್ವವರಿತು,
ಆದರಿಸುವ ಮನುಜ ಅಂತ್ಯವ ತಿಳಿಯುವನು.
ವಿಶ್ವದಾಭಿರಾಮ ಕೇಳು ವೇಮ.

ಕುಲದ ಮೇಲು ಕೀಳು ಗೊಡವೆಯಿಂದಲೇನು ?
ಸಾನುಜಾತ ಸಕಲ ಕುಲಗಳೆಲ್ಲ
ಮೇಲು ಕೀಳು ಮಾತು ತಿಳಿದೊಡೆಲ್ಲಿ ಬಂತು ?
ವಿಶ್ವದಾಭಿರಾಮ ಕೇಳು ವೇಮ.

ಶೂದ್ರಯುವತಿ ಸುತಗಿದೆ ಶುದ್ಧಾಂತರಂಗವು
ವೇದ ವೇದ್ಯ ಮೂಲ ವರಿಯಲಾಗ,
ಬೊಮ್ಮಪದವ ಹೊಂದಿ ಬ್ರಾಹ್ಮಣನಾಗನೆ ?
ವಿಶ್ವದಾಭಿರಾಮ ಕೇಳು ವೇಮ.

ಜಾತಿ ಭೇದಗಳನು, ನೀತಿ ಭೇದಗಳನು,
ಚರ್ಮ ಭೇದಗಳನು, ಕರ್ಮ ಭೇದಗಳನು,
ಚಿತ್ತ ಶುದ್ಧಿಗಾಗಿ ಸೃಷ್ಟಿಸಿಹುದೆ ದೈವ ?
ವಿಶ್ವದಾಭಿರಾಮ ಕೇಳು ವೇಮ.

## ೨೨. ನುಡಿಮುತ್ತು

ಉತ್ತಮೋತ್ತಮನಿಹ ತತ್ತ್ವಜ್ಞನಿಳೆಯಲ್ಲಿ.
ಮಹಿಮೆ ತೋರುವವನು ಮಧ್ಯಮನು.
ವೇಷಧಾರಿ ಉದರ ಪೋಷಕನಧಮನಲ !
ವಿಶ್ವದಾಭಿರಾಮ ಕೇಳು ವೇಮ.

ಕೆಡುಕು ಗುಣಗಳಿಲ್ಲ ಕೈ ಹಿಡಿದು ಶಿಕ್ಷಿಸಿ,
ಪರಮ ಪದವಿಯನ್ನು ಪ್ರತ್ಯಕ್ಷಿಸುವ,
ಅಂಥ ಗುರುವ ಬೇಡಿ ಅಪರೋಕ್ಷವ ಹೊಂದು.
ವಿಶ್ವದಾಭಿರಾಮ ಕೇಳು ವೇಮ.

ಹಾಲು ಗೂಡಿ ನೀರು, ಹಾಲಾಗಿ ಬೆಳಗಿತು.
ಮಹಾ ಗುರುವಿನಿಂದ ಮಹಾ ಜ್ಞಾನಿ
ಸಾಧು ಸಜ್ಜನಾದಿ ಸಂಗವಿಂತಿಪ್ಪುದು.
ವಿಶ್ವದಾಭಿರಾಮ ಕೇಳು ವೇಮ.

ಗುರುವಿನ ಶಿಕ್ಷೆಯಿರದೆ, ಗುರುತು ದೊರೆವುದೆಂತು ?
ಅಜನೆ ಇರಲಿ, ಅವನ ಅಪ್ಪನಿರಲಿ ;
ಬೀಗದ ಕೈಯಿರದೆ, ಬೀಗ ತೆರೆವುದಂತು ?
ವಿಶ್ವದಾಭಿರಾಮ ಕೇಳು ವೇಮ.

ಕಾಗುಣಿತ ಬೋಧಿಪ ಗುರುವು ಅಲ್ಲವಲ್ಲ.
ಶಾಸ್ತ್ರ ಪಾಠ ಓದಿಸುವವನಲ್ಲ.
ಮುಕ್ತಿ ದಾರಿ ತೋರ್ಪ ಮೂಲ ಗುರುವು ಕಾಣು.
ವಿಶ್ವದಾಭಿರಾಮ ಕೇಳು ವೇಮ.





## ೨೩. ನುಡಿಮುತ್ತು

ಶ್ವಾಸ ಎಳೆದು ಬಿಡುವ ಸಾಧನೆಯ ತಿಳಿದರೆ,
ಮೋಸಗೊಳದೆ ಮುಕ್ತಿ ಮುಟ್ಟುತಿಹನು.
ಗುಣದೋಷಗಳಿಂದ ಗಾಸಿಪಡದ ಹೋಹ.
ವಿಶ್ವದಾಭಿರಾಮ ಕೇಳು ವೇಮ.

ಅಡವಿ ತಿರುಗಲಿಲ್ಲ ; ಆಗಸದೊಳಗಿಲ್ಲ ;
ಅವನಿ ತೀರ್ಥಯಾತ್ರೆಯಲ್ಲು ಇಲ್ಲ.
ಒಡಲು ಶುದ್ಧ ಗೆಯ್ದು, ಒಡನೆಯನ್ನು ಕಾಣು.
ವಿಶ್ವದಾಭಿರಾಮ ಕೇಳು ವೇಮ.

ಸಾಧು ಬೋಧೆಯು ಛಾಯೆಯೀವ ಮರವು.
ವಿನಯದಿ ಬಳಿ ಸೇರಿ ವರಿಸಬಹುದು.
ಅತ್ತ ಇತ್ತ ಅಲೆಯೆ, ಅದು ಹೋಹುದಿದಿಲ್ಲ.
ವಿಶ್ವದಾಭಿರಾಮ ಕೇಳು ವೇಮ.

ಒಡವೆ ಇರುವ ತಾಣ ಒಪ್ಪ ಅರಸೆ ಲಭ್ಯ.
ಒಡವೆ ಇರದ ತಾಣ ಹುಡುಕಲೇಕೆ ?
ಅಂಜನಾದಿ ಇರದೆ ಆ ಒಡವೆ ಸಿಕ್ಕದು.
ವಿಶ್ವದಾಭಿರಾಮ ಕೇಳು ವೇಮ.

ಸೋಂಕಿ ಪರುಷ ಲೋಹ, ಸ್ವರ್ಣವಾದ ರೀತಿ.
ಕಪ್ಪುರಕೆ ಜ್ಯೋತಿ ಕಲೆಯುವಂತೆ.
ಹೂವಿನಲ್ಲಿ ಗಂಧ ಹೊಂದಿಕೊಂಡಿಹಂತೆ.
ವಿಶ್ವದಾಭಿರಾಮ ಕೇಳು ವೇಮ.

## ೨೪. ನುಡಿಮುತ್ತು

ಬ್ರಹ್ಮವೆನಲು ಬೇರೆ ಪರದೇಶದೊಳಿಲ್ಲ.
ಬ್ರಹ್ಮವೆನಲು ತಾನೆ ಬಟ್ಟಬಯಲು.
ತನ್ನ ತಾನರಿಯಲು ತಾನೆ ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.

ತಿಳಿವು ನಿಲಿಸಿ ನೋಡು, ತೊಳಗುತಿಹ ಕಳೆಗಳ,
ಕಳೆಯುಡುಗದೆ ನೋಡು, ಕಾಣು ಬಯಲು.
ಬಯಲಿಗಂಟಿ ನೋಡು, ಬ್ರಹ್ಮವು ಕಾಣುವುದು.
ವಿಶ್ವದಾಭಿರಾಮ ಕೇಳು ವೇಮ.

ನಾನು ಎನ್ನುತಿಹುದೆ ನೀನು ಎನ್ನಬಹುದು.
ನಾನು ನೀನು ಎನುವ ನಿಷ್ಠೆಯರಿತು,
ನಾನು ನೀನೆ, ನೀನು ನಾನು ಎನ್ನಬಹುದು.
ವಿಶ್ವದಾಭಿರಾಮ ಕೇಳು ವೇಮ.

ನಿನ್ನ ನೋಡುತಿರಲು ತನ್ನ ತಾನೆ ಮರೆವ.
ತನ್ನ ನೋಡುತಿರಲು ನಿನ್ನ ಮರೆವ.
ನಿನ್ನ ತನ್ನನರಿಯೆ, ನರಗೆ ವಿಧವಾವುದು ?
ವಿಶ್ವದಾಭಿರಾಮ ಕೇಳು ವೇಮ.

ನಿನ್ನ ನೋಡುತಿರಲು, ನೆರೆಗಂಡಿತು ತತ್ತ್ವ.
ತನ್ನ ನೋಡುತಿರಲು ತಗಲಿ ಮಾಯೆ.
ನಿನ್ನನರಿತ ಬಳಿಕ ತನ್ನ ತಾನರಿವನು.
ವಿಶ್ವದಾಭಿರಾಮ ಕೇಳು ವೇಮ.





## ೨೫. ನುಡಿಮುತ್ತು

ಚಿತ್ತ ಶುದ್ಧ ಯೋಗಿ ಶಿವನ ರೀತಿ ಇಹನು.
ಮಿಥ್ಯೆ ಯೋಗಿಯುಂಟು, ಮಿಡತೆ ತೆರದಿ.
ನಿತ್ಯನಾದ ಯೋಗಿ ನಿನ್ನ ರೀತಿ ಇಹನು.
ವಿಶ್ವದಾಭಿರಾಮ ಕೇಳು ವೇಮ.

ಮನುಜ ತಿಳಿವು ಹೊಂದಿ, ಮನವ ಚಲಿಸದಿಹನು.
ದೈವವನು ತಿಳಿಯಲು ಧೀ ಬೆಳಗಿತು.
ಕಂಡು ಉದಯ ರವಿಯ ಕತ್ತಲೆ ನಿಲ್ಲುವುದೆ ?
ವಿಶ್ವದಾಭಿರಾಮ ಕೇಳು ವೇಮ.

ಮನಸು ಕುದುರೆ ಮಾಡಿ, ಮಾಯೆಯ ಹತ್ತಿಸುತ,
ಮೋಸಗೊಳಿಪ ಬ್ರಹ್ಮ ಮೂರ್ಖ ಜನರ.
ಬ್ರಹ್ಮ ನಡತೆ ತಿಳಿಯೆ, ಬ್ರಹ್ಮ ಜ್ಞಾನಿ ಬಲ್ಲ.
ವಿಶ್ವದಾಭಿರಾಮ ಕೇಳು ವೇಮ.

ವಿವೇಕವೆನ್ನುತಿಹ ವಿಚಿತ್ರ ಕೊಡಲಿಯಿಂದ,
ಅವಿದ್ಯೆಯೆನ್ನುತಿಹ ಅಡವಿ ಕಡಿದು,
ದೊಡ್ಡ ಜ್ಞಾನವೆಂಬ ದೀಪ ಕೈಯೊಳು ಹಿಡಿ.
ವಿಶ್ವದಾಭಿರಾಮ ಕೇಳು ವೇಮ.

ಮನಸಿನೊಳಗೆ ತಿಳಿದು, ಮನಸಿನೊಳಗೆ ಬೆರೆತು,
ಮನಸಿನೊಳಗಿರುವವನ ಮರಳಿ ಸೆಳೆದು,
ಮನಸು ನಿಲಿಸುವವನು ಮರ್ಮಜ್ಞನಹ ಯೋಗಿ.
ವಿಶ್ವದಾಭಿರಾಮ ಕೇಳು ವೇಮ.

## ೨೬. ನುಡಿಮುತ್ತು (ಪಂಚಕೈಷ್ಯವು)

ಹುಟ್ಟುವವರು ಯಾರು ? ಹುಟ್ಟದವರು ಯಾರು ?
ಹುಟ್ಟಿ ಹುಟ್ಟದಂಥ ಪುರುಷರಾರು ?
ಹುಟ್ಟಿ ಹುಟ್ಟದಿಹುದ ಬೋಧಿಸಲು ಕಾಣೆ ಭೊ
ವಿಶ್ವದಾಭಿರಾಮ ಕೇಳು ವೇಮ.

ಬದುಕುವವರು ಯಾರು ? ಬದುಕದವರು ಯಾರು ?
ಬದುಕಿ ಬದುಕದಂಥ ಪ್ರಾಣಿ ಯಾರು ?
ಬದುಕು ಇರದ ಬದುಕು ಭ್ರಮೆಯಳಿದು ಕಾಣೆ ಭೊ.
ವಿಶ್ವದಾಭಿರಾಮ ಕೇಳು ವೇಮ.

ಕಟ್ಟುವವರು ಯಾರು ? ಕಟ್ಟದವರು ಯಾರು ?
ಕಟ್ಟಿ ಕಟ್ಟದಂಥ ಕರ್ಮಿ ಯಾರು ?
ಗಟ್ಟಿ ಹಿಡಿದು ಲೇಸ, ಕಣ್ಣು ಬಿಟ್ಟು ನೋಡಿಕೊ.
ವಿಶ್ವದಾಭಿರಾಮ ಕೇಳು ವೇಮ.

ನೀಡುವವರು ಯಾರು ? ನೀಡದವರು ಯಾರೊ ?
ನೀಡಿ ನೀಡದಂಥ ನಿಷ್ಠರಾರೊ ?
ಪಟ್ಟು ಹಿಡಿದು ಇದರ ಗುಟ್ಟು ಭಾವಿಸಿಕೊ.
ವಿಶ್ವದಾಭಿರಾಮ ಕೇಳು ವೇಮ.

ಸಾಯುವವರು ಯಾರೊ ? ಸಾಯದವರು ಯಾರೊ ?
ಸತ್ತು ಬದುಕುವಂಥ ಸುಜನರಾರು ?
ಬಿಚ್ಚಿ ತೆರೆದು ಬಿಡಿಸಿ, ಬಗೆದು ನೋಡಿರಯ್ಯ.
ವಿಶ್ವದಾಭಿರಾಮ ಕೇಳು ವೇಮ.





## ೧. ಇಂಚರ

ವೇಮನೆಂಬ ಯೋಗಿ ವಾಸಿಸಿದ ಲೋಕದಿ,
ಪೂಜೆ ಸಲಿಸಿರವಗೆ ಪುಣ್ಯ ನರರೆ !
ಸಲಿಸಿದಷ್ಟು ಪೂಜೆ ಸೌಖ್ಯ ಭಾಗ್ಯ ಲಭ್ಯ.
ವಿಶ್ವದಾಭಿರಾಮ ಕೇಳು ವೇಮ.

V. S. College of Business Administration
Vidyanagar
Unkal Cross
HUBLI-31

ವೇದಾತೀತನು ವೇಮ ಕಣಾ.
ವೇಮನ ಮಾತೇ ವೇದ ಕಣಾ.

ವೇದ ಶಾಸ್ತ್ರಗಳು ವಾದ ಕಣಾ.
ವಾದಿಪ ಬಾಯಿಗೆ ಬೂದಿ ಕಣಾ.

ಬೇಸರಿಯದೋದೆ ಬೇಸಿ ಕಣಾ.
ಕೇಳಿದವನು ಮತ್ತೆ ಹೇಳ ಕಣಾ.

ಹೇಳುವನಾರೂ ಮಾಡ ಕಣಾ.
ಸಾಧಿಸಿದವನು ಸಿದ್ಧ ಕಣಾ.

ಜಾತರ ಜಾತರ ಜಾತ್ರೆ ಕಣಾ
ಜಾತರತೀತನು ವೇಮ ಕಣಾ.

## ೨. ಇಂಚರ

ಸೀಸ. ಧರಣಿಯೊಳು ಓದು ಎಲ್ಲ, ಪರಮಾತ್ಮನೊಳು ಆತ್ಮ
ಐಕ್ಯಗೊಳದಿರೆ, ಬ್ರಹ್ಮನಿಗೂ ದೋಷ.
ಪಂಚ ಭೂತಗಳ ವಿಶೇಷ ಪ್ರಕೃತಿಯ, ತಲೆ ಹಾಕಿ,
ನಿಲುಗಡೆಯರಿಯದವನ ನೆತ್ತಿ ದೋಷ.
ಪಂಚವಿಂಶತಿ ತತ್ತ್ವ ಪದ್ಧತಿ ಇಲ್ಲದೆ,
ವೇದಾಂತಿ ನಾನೆನುವಾತಗೊಂದು ದೋಷ.
ಅಂತರಂಗದ ಒಳಗೆ ಅನುಕೂಲವರಿಯದೆ,
ಯೋಗಿ ನಾನೆವಾತಗೊಂದು ದೋಷ.

ತೇಟ. ತಾನು ತಾನಾದ ತತ್ತ್ವಗಳಿಗೆ ತಗಲಿಕೊಂಡು,
ಒಳಗೆ ಹೊರಗ ಒಂದಾಗಿ ತಿಳಿದು ತಿಳಿದು,
ಬ್ರಹ್ಮವೇದಗಳು ಗೊತ್ತಿರದ ಪಾಮರರಿಗು
ಹಿಂದೆ ಒಂದು ದೋಷ ; ಹೌದಲ್ಲೊ ವೇಮ.

ಬಯಲಲಿ ಸರ್ವವು ಹುಟ್ಟಿತು.
ಬಯಲಲ್ಲಿಯೆ ಲೀನವಹುದು ಆ ಬ್ರಹ್ಮವೆನಲ್.
ಬಯಲನು ಮನದೊಳು ತಿಳಿವೊಡೆ,
ಬಯಲಿನಲಿ ಮುಕ್ತಿಯು ಬಟ್ಟ ಬಯಲೈ ವೇಮಾ.

ಜೀವದ ಶಾಶ್ವತ ರೂಪವ,
ಭಾವದಲಿ ನಿಲಿಸುತ, ಅಂತರ್ಮುಖಿ ಇರಲಾಗಳ್,
ಕೇವಲ ನಿರ್ಗುಣವದಾಯ್ತು,
ಕಾವರವನು ಕಡೆಗೆ ಕೊಟ್ಟಿ, ಕಾಣೈ, ವೇಮಾ.





## ೩. ಇಂಚರ

ರಗಳೆ ಲೋಕಾ ಲೋಕವು ನಾನೇನಲ್ಲವು.
ನಾಕವು ಶಬ್ದವು ನಾನೇನಲ್ಲವು.
ಹೋಹುದು ಬರುವುದು ನಾನೇನಲ್ಲವು..

ತಾಕಿದೆ ; ಸಿಕ್ಕಿತು; ದಕ್ಕಿತು ಎಂದಿರಿ.
ಏಕವನೇಕವು ನಾನೇ ಎಂದಿರಿ.
ಸೋಕಿದ ಮನದಲಿ ತಾಕಿದೆನೆಂದಿರಿ.

ಪಾಕವ ತಪ್ಪದೆ ಬಡಿಸಿರಿ ಎಂದಿರಿ.
ಪ್ರಾಕ್ದಿಶೆ ಉಷೆಯನು ಅರಿಯಿರಿ ಎಂದಿರಿ.
ನೆಪ ನೀಡಲೇಕೆ ? ಸತ್ಯವ ನುಡಿದಿರಿ.

ಆಕಾರಗಳಿಗೆ ಆದಿಯು ಎಂದಿರಿ.
ಸಾಕಾರಗಳಿಗೆ ಸಾಕ್ಷಿಯು ಎಂದಿರಿ.
ನಿತ್ಯಾನಂದವು ನಿರ್ಮಲ ಎಂದಿರಿ.

ಸತ್ಯಂ ಪರತೆಯು ಸಂಧಿಯು ಎಂದಿರಿ.
ಸಂಧಿಲಿ ವೇಮನ ಶೋಭಿಪನೆಂದಿರಿ.
ಸೋಹಂ ಭಾವದಿ ಮುಳುಗಿಹನೆಂದಿರಿ.

ನಿತ್ಯಂ ಸತ್ಯಂ ನಿರಾಮಯ ರೂಪಂ
ನಿಜಗುರು ಬ್ರಹ್ಮವಿಚಾರಣ ಭಾವಾತೀತಂ.

## ೪. ಇಂಚರ

ಸೀಸ. ಸಕಲ ವೇದಗಳ ಸಾರವಾಗಿ ಬೆಳಗುವ,
ಸದ್ಗುರು ವಾಕ್ಯವದು ಸತ್ಯ ಸತ್ಯ.
ಮನದಲಿ ಸದ್ಭಕ್ತಿ ಮರೆಯದೆ ಮೂಡಿರಲಿ,
ಮಮತೆ ತೊರೆಯಲಾಗ ಮಹಿಮೆ ನಿತ್ಯ.
ಚಿತ್ತ ವಿಭ್ರಮ ಭಾಷೆ ಚಿನ್ಮಾತ್ರದಲ್ಲಿಯೇ
ಸೇರಿ ಬಯಸಿದ ಮುಕ್ತಿ ಸೇರುತಿಹನು.
ಹರಿ ಹರಾದಿಯೆ ಇರಲಿ ಹೊಂದಲಳವಲ್ಲ.
ಅನುಭವ ವೇದ್ಯವಾಗಿ ಅರಳುತಿಹನು.

ತೇಟ. ಅಂಥ ಸದ್ಬೋಧ ಮರ್ಮವ ಅರಿಯಬೇಕು.
ಮನಸಿನೊಳು ಕಲ್ಮಷಗಳನು ಮಾಣಬೇಕು.
ಶೀಘ್ರ ಕಾಲದಲಿ ಆತ್ಮಶುದ್ಧಿ ಕಾರ್ಯ.
ವಿಮಲ ಗುಣ ರಾಜೇಂದ್ರ ವೇಮನಾರ್ಯ.

ಊರ್ಜಿತಾನಂದ ಪರಿಪೂರ್ಣ ಯುಕ್ತಿಯಲ್ಲಿ,
ಸ್ವಾರ್ಜಿತವಾದ ಗುರುಭಕ್ತಿ ಸಂಪಾದಿಸಿ,
ದುರ್ಜಯದಲ್ಲ ತೊಲಗಿಸುತ್ತ ದೂರಗೊಳಿಸು.
ಕರ್ಜವಹ ಮುಕ್ತಿ ಲಭಿಸುವುದು ಕಾಣು, ವೇಮ.

ಅವನು ಅವನು, ಅವನು ಅವನೊಳಗೇ ಉಂಟು.
ಅವನೇ ಅವನು, ಅವನು ಅವನೆ ಅಲ್ಲ.
ಅವನು ಅವನ ಸೇರೆ, ಅವನೆ ಹೋಗು ಬ್ರಹ್ಮ.
ವಿಶ್ವದಾಭಿರಾಮ ಕೇಳು ವೇಮ.





## ೫. ಇಂಚರ

ಸೀಸ. ಗುರುಬೋಧೆ ತಿಳಿಯದ ಕುಟಿಲ ಶಾಸ್ತ್ರಗಳ.
ಪರಿಕಿಸಿದೊಡೆ ಏನು ? ಫಲವು ಉಂಟೆ ?
ಆತ್ಮೈಕ್ಯವರಿಯದ ಅಖಿಲ ಯೋಗಗಳು,
ಸಾಧಿಸುವ ಫಲವೇನು ಸತ್ಯವಾಗಿ ?
ತನ್ಮಯತ್ವವ ತಾನರಿಯದ ನರನು
ಸೇವೆ ಗೆಯ್ದೊಡೆ ಏನು ? ಸಿದ್ಧಿ ಯುಂಟೆ ?
ತಮ್ಮ ಕುಂದನರಿಯದೆ, ತಾನೋದಲು ಬಹಳ,
ಓದಿನ ಫಲವೇನು ? ಒಪ್ಪವಾಗಿ.

ತೇಟ. ನುಡಿದ ಸದ್ಗುರು ಬೋಧೆ ನಿತ್ಯವರಿತು,
ಮರೆಯದಿರುವಂಥವರು, ಮಾಯೆ ಜಗಕೆ
ಅಂಟರೆನ್ನುತಿಹರು ; ಅಂದವಾಗಿ !
ತಿಳಿಸಿ ಹೇಳಿದ ವೇಮನ ತಿಳಿವು ಬೆಳಗೆ

ಗುರುವೆನ್ನಲು ಆದ್ಯಂತವು.
ಗುರು ಶಿಷ್ಯರೆನ್ನಲು ಸಕಲ ಕೊಂಬೆಗಳಷ್ಟೆ.
ಗುರುವನು ಅರಿಯಲು ಬಲ್ಲರು.
ಧರೆಯೊಳಗಿನ ಮನುಜರೆಲ್ಲ, ಧ್ಯಾನಿಸಿ ವೇಮಾ.

ಗುರು ಪರಂಪರೆಯೇ ವಿದ್ಯೆ ಗೂಢವರಿತು,
ಪರಮ ಪರಪೂರ್ಣತೆಯಲಿ ಪರವಶವಿರೆ,
ನಿರುಪಮಾನಂದ ಸುಖ ಕೇಳಿ ಪಡೆಯಬೇಕು.
ಪರಶಿವನ ರೀತಿ ಭಾಸಿಸು ವೇಮ.

## ೬. ಇಂಚರ

ಸೀಸ. ದೇಹಗಳನಿತ್ಯ ದೇಹೀ ನಿತ್ಯನಿಹನು.
ದೇಹೇಂದ್ರಿಯಾದಿಯೂ ತೀವ್ರ ಗತಿಲಿ
ಮೋಹಂಗಳೆಲ್ಲವ ಮೊದಲಿಗೆ ವರ್ಜಿಸುತ,
ಆ ಪರಮಾತ್ಮನೊಡನೆ ಐಕ್ಯಗೊಳಲಿ.
ಚಿತ್ತ ಶಾಂತಿಯ ಹೊಂದಿ, ಚಿನ್ಮಾತ್ರದಲಿ,
ಇತರರನ್ನು ನೋಡದೆ ಇರುವ ಘಳಿಗೆ
ಸರ್ವಾತ್ಮವೆಂಬ ಸತ್ಯವನು ಸಲೆಗಾಣು-
ವವರೆ ತತ್ತ್ವಜ್ಞರು ವಸುಧೆಯೊಳಗೆ.

ತೇಟ. ಅಂಥವರ ಮರ್ಮವನು ಅರಿತುಕೊಳಲು,
ಹರಿ ಹರ ಬ್ರಹ್ಮರಿರಲಿ ಅಳವೆ ಅಯ್ಯ ?
ಹೀಗೆ ಶಾಸ್ತ್ರಗಳೆಲ್ಲ ಹೇಳುತಿಪ್ಪವು.
ತಿಳಿದು ಹೇಳಿದ ವೇಮನ ದೇಶಿಕಾರ್ಯ.

ಎಷ್ಟು ವಿಧದಲ ತನುವನು
ಪೋಷಿಸಲೇನು ? ನಶಿಸಿ ಹೋಗದಿಹುದೇ ?
ದೋಷವ ತೊಳೆಯೆ, ಮುಗಿಬಿದ್ದ,
ದೂಷಿತ ಭೇದವಳಿದು, ಮುಕ್ತಿ, ಹೊಳೆವುದು ವೇಮಾ.

ಪರಮ ನಿರ್ಗುಣ ವಿದ್ಯೆಯಲಿ ಭಾವದುಂಬಿ,
ಮಾನಸ ಜ್ಞಾನ ಪರಿಪೂರ್ಣ ಮನನದಲ್ಲಿ,
ಏಕ ರೂಪವ ಮನದೆಣಿಸಿ ನಿತ್ಯ ಕಾಣು.
ಶಾಶ್ವತಾನಂದ ಸಿದ್ಧ ಜರುಗು ವೇಮ.





## ೭. ಇಂಚರ

ಸೀಸ. ನಿಯಮಾದಿ ಸಂಗಿಯಾಗಿ ನಿಲಿಸಿದ ಚಿತ್ತವದು,
ತಾಮಸದಿ ನಿದ್ರೆಗಿಳಿಯುತಿಹುದು.
ನಿದ್ರೆ ತೊಲಗಿದೊಡನೆ ನಿರ್ಭೀತಿ ಹೊಂದುವುದು.
ಶಮದೊಳಗಾನಂದ ಸಮಿತಿ ಬಹುದು.
ತತ್ತ್ವವಿಂದ್ರಿಯ ಪಂಚಕತ್ವದಲ್ಲ ನಿಲ್ಲಿಸುತಲಿ,
ತತ್ತ್ವವನು ನಿಲ್ಲಿಸಲು ತಾನೆ ಅಹುದು.

ತೇಟ. ರಾಜಯೋಗೀಂದ್ರ ನಾತನೈ ರಾಜಿಸುವನು.
ಮೆರೆವ ; ಜಗದಿ ವಿಹರಿಸುತ ಮಹಿಮ ನಾಮ.
ಬಹಳ ವಿಧದಲಿ ವರ್ಧಿಸಿ ಬೀದಿ ತಲುಪಿ,
ಕಾಣೆ , ಮೂಢ ಕ್ರೀಡ ವಿಧವ, ಘನತೆ ವೇಮ.

ತಾನಾಗುವ ಅರಿತು ಸರ್ವವು.
ತಾನಾಗುವ ತಿಳಿದು ಎಲ್ಲ ತತ್ತ್ವ ತಾನೇ
ತಾನರಿತು ಪರಿಣಮಿಸದೆ,
ಮಾನವನಿಗೆ ಮುಕ್ತಿ ಇಲ್ಲ, ಮಹಿಯಲಿ, ವೇಮಾ.

ಅರಿತೊಡೆ ಆ ಇದು ವರ ಪರಬ್ರಹ್ಮವೇ.
ತಾನೆಂದರಿತಿಹ ತಿಳಿವು ಬಿಡನು.
ನಿರತವಾತ್ಮನ ನುತಿಸಿ, ನಿರ್ಗುಣ ಪದವ ಹೊಂದಿ,
ನಿಶ್ಚಲ ಬ್ರಹ್ಮನಿದ್ದ ನಿಯತಿ ಬಿಡನು.

## ೮. ಇಂಚರ

ಸೀಸ. ತಮ್ಮ ಯೋಚನೆಗಳಲಿ ತತ್ತ್ವ ಶಿಖಾಮಣಿ,
ತಿಳಿಯುವವರೆಲ್ಲ ತತ್ತ್ವವಿದರು.
ಘನವಪ್ಪ ನಿಬಿಡಾಂಧಕಾರದಲಿ,
ಜ್ಯೋತಿಯನುವಿಂದ ಕಂಡ, ಯೋಗಿ ಬುಧರು
ಶಿವನೊಳಗೆ ಜೀವನನು, ಜೀವನೊಳಗೆ ಶಿವನಿಹುದ,
ಅರಿಯುವವನೆ ಯೋಗ ದೃಕ್ಕು.
ಸಾಂಖ್ಯ ಯೋಗದಲ್ಲಿ ಸಕಲವೂ ಶಿವನೆಂದು
ನಿಶ್ಚಯಿಸುತಿರುವವನೆ ನಿರ್ಮಲಕ್ಕು.

ಗೀತ. ಅಂಥ ಜಾಡನು ಕಾಣಲು ಅವರೆಷ್ಟಿರಲೇನು ?
ಸ್ಥಿರವಾಗಿ ಶಿವನ ಗ್ರಹಿಸಲು ಸಾಧ್ಯವೇನು ?
ನಿಜವ ಕೋರುತಿಹ ಮಾನವರು ನಿಖಿಲ ಜಗದಿ.
ತತ್ತ್ವ ಶಿಖಾಮಣಿ ಅರಿತವ ತಾನು ವೇಮ.

ತತ್ಪದವೆನ್ನಲು ಪ್ರತ್ಯಗಾತ್ಮ ಕಾಣು.
ತ್ವಂಪದವೆ ಬ್ರಹ್ಮ ರೂಪವಲ್ತೆ.
ಅಸಿ ಪದದಲಿ ಲಕ್ಷ್ಯ, ಐಕ್ಯವಾಗಿರುವುದು.
ಸೋಹಮೇರ್ಪಡುವುದು, ಸಲೆಯರಿ, ವೇಮಾ.

ತಿಳಿವು ಮರೆವುಗಳಿಲ್ಲದಲ್ಲಿ ತಾಕಿ ಆಗ,
ತಾನು ಬ್ರಹ್ಮದೊಳು ಸೇರುತ ತೊಲಗದಿದ್ದು,
ತತ್ ಪದದೊಳಗೆ ಸಂಧಿಸಲು ತಾನೆ ಬ್ರಹ್ಮ.
ಜ್ಞಾನದಿಂದ ದೊರೆಯುವುದು ಘನತೆ, ವೇಮ.





## ೯. ಇಂಚರ

ಸೀಸ. ಮೊದಲು ಮೇಲಕೆ ಇರುವ, ತುದಿ ಮೊದಲಿಗೆ ಇರುವ
ವೃಕ್ಷ ತಾ ಮೊಳೆತ ವಿಚಿತ್ರ ಏನು ?
ಮಹಿ ಮನೆಯ ಮೇಲಕೆ ಮದಗಜವು ಒಂದೇ
ವಿವರಿಸುತ ಇರುವಂಥ ವಿವರವೇನು ?
ಗೆದ್ದಲಿರಿಸಿದ ಬಂಟ ವಿಧದಲಿ, ಗಜವನು
ಇರುವೆಗಳು ನುಂಗಿದ ಚಿತ್ರವೇನು ?
ಕಂದು ಕುದುರೆಯ ಮೇಲೆ, ಕೊನೆಯಲೊಂದು ಚಿಂತೆ
ವೃಕ್ಷವ ಕಟ್ಟಿದಂತಹ ವ್ಯಥೆಯು ಏನು ?

ತೇಟ. ಚಿಂತ ವೃಕ್ಷದ ಮೇಲೆ ಸೇವಂತಿಗೆ ಹೂವಿ ಅರಳಿ,
ಕೊನರಿ ಪುಷ್ಪಿಸುವಂಥ ಆ ಕೌತುಕೇನು ?
ಅರಿಯೆ, ಕಲಿತಿರುವ ಸರ್ವಜ್ಞ ನುರಿತ ಜನರು
ವಿವರ ನುಡಿಯುವರೆಂತೊ ಕೇಳು ವೇಮ.

ಮೊದಲ ತರುವಿನಲ್ಲಿ ಮೂರು ರೆಂಬೆ ಹುಟ್ಟಿ
ಚಿಗುರು ಒಡೆದು ಬೆಳೆದು ಎಲೆಗಳಾಗಿ,
ಹೂವು, ಮಿಡಿಯು, ಹಣ್ಣು ಭುವನವ ತುಂಬಿವೆ
ವಿಶ್ವದಾಭಿರಾಮ ಕೇಳು ವೇಮ.

ಮರವ ಸುಟ್ಟು, ಹಾಕಿ ಮಹಿಯೊಳೊಬ್ಬ, ಜಾಣ,
ಶ್ರಮಿಸಿ ತಿರುಗುತಿರುವ ಶರೀರ ಹೊಂದಿ,
ಸುಟ್ಟು ಹೋದ ಮರವು ಸಲೆ ರಮ್ಯವಿಪ್ಪದು
ವಿಶ್ವದಾಭಿರಾಮ ಕೇಳು ವೇಮ.

## ೧೦. ಇಂಚರ

ಸೀಸ. ದಿನಕರ ಚಂದ್ರರು ಬರುವ ಹಾದಿ ಹಿಡಿದು,
ಹಾಸುಗೆಯಲ್ಲಿಯೆ ಸಿರಿಯ ಕೂಡಿ ಹಾಕಿ,
ಮೂರು ಮೂಲೆಯ ಗೃಹದಿ ಮಲಗಿ ನಿದ್ರಿಸುತ,
ಮುಂದಿನಂಗಳ ಮೇಲೆ ಶರಣು ಕೋರಿ,
ಕಡೆ ಹುಟ್ಟಿದನ ಗುರುತಿಸಿ ನಡೆಯೆ, ನಡುಬೀದಿ
ಶೋಧಿಸಿದ ಮಾತ್ರವೆ ಊರ್ಧ್ವದಿರಿಸಿ,
ಅಣುವಿನಲಿ ಜ್ಯೋತಿಯೈ ; ಆನಂದ ರೂಪವೈ.
ದಿವ್ಯ ತೇಜಂಗಳ ಮೇಲೆ ದೃಷ್ಟಿಯಿರಿಸಿ.

ತೇಟ. ತಿಳಿಯಬರದಿದನ್ನು ತಿಳಿಯೆ, ಇರದು ಭೇದ.
ಜೋಕಾಲಿಯರ್ಥಿಯಾಗಿ ತಾ ಜೀಕಾಡುವವನು,
ಯೋಗಿಂದ್ರನೆಂದು ಹೇಳೆ ಒಪ್ಪವಹುದು.
ವೇಮನೆಂಬ ಯೋಗಿಗೆ ವಿಭವ ಭುವಿಯಲಿ.

ಇಡ ಪಿಂಗಳ ನಾಡಿಗಳಿಗೆ
ನಡುವೆ ಸುಷುಮ್ನೆಯು ಬೆಳಗುತ ಅಲೆದಾಡುತಿರಲ್,
ಕಡು ದುಸ್ತರ ಮನದಿ ಕಾಣೆ.
ನಡುವೆಯೆ ಇನ, ಚಂದ್ರ, ಹರರ ನಗರವು ವೇಮಾ.

ಚಂದ್ರ ಸೂರ್ಯಾಗ್ನಿಗಳೇರ್ಪಟ್ಟ ಚಂದ್ರ ಶಾಲೆ,
ಸೇರಿ ಪರಶಿವನಾತ್ಮದೊಳು ಚಿಂತನ ಗೆಯ್ದು,
ಚಿನ್ಮಯಾನಂದದಲಿ ಸೇರಿ, ತನ್ಮಯಾಗೆ,
ಮುಕ್ತಿ ಮೂಲವಿದೇ ಜನ್ಮಗಳಿಗೆ ವೇಮಾ.



## ಗ್ರಂಥ ಋಣ


1. ಎಸ್. ಆರ್. ಪಾಟೀಲ ಬಿ.ಈ. — 'ವೇಮನ ವಿಶ್ವಗೀತೆ' (1998)
ಪ್ರ. ಮಹಾಯೋಗಿ ವೇಮನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

2. ಎಸ್. ಆರ್. ಪಾಟೀಲ ಬಿ.ಈ. — 'ಮಹಾಯೋಗಿ ವೇಮನ' (1993)
ಪ್ರ. ವೇಮನ ಗ್ರಂಥಾಲಯ,
ಹುಲಕೋಟಿ

3. ಸ್ವಾಮಿ ಆದಿ ದೇವಾನಂದ — 'ಶ್ರೀಮದ್ ಭಗವದ್ಗೀತಾ' (1994)
ಪ್ರ. ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು

4. ಪ್ರೊ. ಎನ್. ನಂಜುಂಡ ಶಾಸ್ತ್ರೀ — 'ಪರಮಹಂಸ ಅಂಜನಪ್ಪ
ಸ್ವಾಮಿಗಳವರ ದಿವ್ಯ ಜೀವನ ಮತ್ತು
ತತ್ತ್ವ ಚಿಂತನ' (1993)
ಪ್ರ. ಶ್ರೀ ಅಂಜನಪ್ಪ ಸ್ವಾಮಿ ಟ್ರಸ್ಟ್,
(ರ) ಗುಟ್ಟಹಳ್ಳಿ ಹೋಳೂರು ಹೋಬಳಿ,
ಕೊಲಾರ ತಾಲೂಕ

5. ತ. ಪು. ವೆಂಕಟರಾಮ್ — 'ತಪಸ್ವಿ (1996)
ಪ್ರ ಹೇಮಂತ ಸಾಹಿತ್ಯ,
ನಂ.972 ಸಿ. 4 ನೇ 'ಇ' ವಿಭಾಗ
ರಾಜಾಜಿನಗರ,
ಬೆಂಗಳೂರು - 560 010

6. ಶೇಷ ನವರತ್ನ ಎಂ.ಎ. — 'ಮನುಸ್ಮೃತಿ' (1998)
ಪ್ರ. ಸಮಾಜ ಪುಸ್ತಕಾಲಯ
ಶಿವಾಜಿ ಬೀದಿ ಧಾರವಾಡ-1

7. ಶ್ರೀ ಮ. ಶ್ರೀ. ದೇಶಪಾಂಡೆ ಎಂ.ಎ. — 'ಪ್ರಭುವಿನ ಪ್ರಭೆ' (1994)
ಪ್ರ. ಬಸವ ಸಮಿತಿ, ಬಸವ ಭವನ,
ಬೆಂಗಳೂರು-1

8. ಶ್ರೀ ಶ್ರೀ ಆನಂದ ಮೂರ್ತಿ — 'ನಮಃ ಶಿವಾಯ ಶಾಂತಾಯ'
ಕನ್ನಡಾನುವಾದ (1984)
ಪ್ರ. ಆಚಾರ್ಯ ನಾರಾಯಣಾನಂದ

| | | |
|---|---|---|
| | | ಅವಧೂತ ಪ್ರಕಾಶನ ಸಚಿವ, ಆನಂದ ಮಾರ್ಗ ಪ್ರಚಾರಕ ಸಂಘ (ರಜಿ) ಆನಂದ ನಗರ, ಪೊ. ಬಾಗಲತಾ, ಜಿ. ಪುರುಲಿಯಾ ಪಶ್ಚಿಮ ಬಂಗಾಲ |
| 9. | M. Somasekhar Sarmn | 'History of the Reddi Kingdoms (1993) Pub. The all India Reddi Welfare Association Srisailam - 518 101 |
| 10. | ಸೋಮನಾಥಾನಂದ | 'ಉಪನಿಷತ್ ಭಾವಧಾರೆ' (1983) ಪ್ರ. ಶ್ರೀ ರಾಮಕೃಷ್ಣಾಶ್ರಮ ಮೈಸೂರು-20 |
| 11. | ಡಾ. ಬಿ. ಆರ್. ಅಂಬೇಡ್ಕರ ಕನ್ನಡಾನುವಾದ : ಎ. ಡಿ. ಕೃಷ್ಣಯ್ಯ | 'ಬುದ್ಧ ಮತ್ತು ಆತನ ಧರ್ಮ'(1996) ಪ್ರ. ನಿರ್ದೇಶಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು |
| 12. | ಧರ್ಮಾನಂದ ಕೋಸಂಬೀ ಕನ್ನಡಾನುವಾದ : ಆದ್ಯ ರಂಗಾಚಾರ್ಯ | 'ಭಗವಾನ ಬುದ್ಧ' (1956) ಪ್ರ. ಸಾಹಿತ್ಯ ಅಕಾಡಮಿ ಹೊಸದಿಲ್ಲಿ |
| 13. | ಎಸ್. ಆರ್. ಪಾಟೀಲ ಬಿ.ಈ. | 'ಯುಗಪುರುಷ' : ಪಿ. ಆರ್. ಸರಕಾರ ಪ್ರ.ವೇಮನ ಗ್ರಂಥಾಲಯ, ಹುಲಕೋಟಿ-582 205, ಗದಗ ಜಿಲ್ಲಾ |




# ವೇಮನ ಮತ್ತು ಮುತ್ತಿನಹಾರ

## ಪದ್ಯಗಳ ಅಕ್ಷರಾನುಕ್ರಮಣಿಕೆ


-ಅ-

| | |
|---|---|
| ಅಂಕೆಯರಿತ ಮಾತು | 236 |
| ಅಂಗನೆಯರ ಕಂಡು | 242 |
| ಅಂಗ ಭಾವವೆಲ್ಲ | 31,134 |
| ಅಂಗವೆಲ್ಲ ಸಡಲಿ | 244 |
| ಅಂತರಂಗದಲ್ಲಿ | 55 |
| ಅಂದವರಿತ ಮಾತು | 150 |
| ಅಖಿಲ ಜಾತಿಗಳಿಗೆ | 113 |
| ಅಖಿಲ ದೇವತೆಗಳು | 254 |
| ಅಡಲು ಬಂದರಾಗ | 23 |
| ಅಡವಿಯೊಳಗೊಂದು | 91 |
| ಅಡವಿ ತಿರುಗಲಿಲ್ಲ | 269 |
| ಅತಿಶಯಾದ ಆಶೆ | 241 |
| ಅತ್ತಿ ಹಣ್ಣು ಮೇಲೆ | 250 |
| ಅಧಿಕನಾದ ರಾಜ | 246 |
| ಅಧಿಕ ರಾಜನೊಬ್ಬ | 6 |
| ಅಧಮ ಪಾಪಿ ನರಸು | 134 |
| ಅನನುಕೂಲ ತಾಣ | 139,248 |
| ಅನ್ನ ಜೀರ್ಣಿಸದವಗೆ | 104 |
| ಅಬಬ ! ಲಲನೆ ಕಣ್ಣು | 157 |
| ಅರ್ಥವಂತನ ಸಿರಿ | 109 |
| ಅರಸಿ ನೋಡಿದೊಡನೆ | 191 |
| ಅರಿತೊಡೆ ಆ ಇದು | 279 |
| ಅರಿ ತನ್ನಾಸ್ತಿಯೆನದೆ | 154 |
| ಅರಿತ ಮನುಜನ ಸುಖ | 233 |
| ಅರಿಯೆ, ದೋಚುವವನು | 160 |
| ಅರಿಯೆ, ಬಹಳ ಸುಳ್ಳು | 236 |
| ಅರಿವುಗೇಡಿಯನು | 235 |
| ಅರುಣನುದಯ ಸಂಖ್ಯೆ | 265 |
| ಅಲ್ಪನಾಡಿದ ನುಡಿ | 247 |
| ಅಲ್ಪನಾದವನಿಗೆ | 250 |
| ಅಲ್ಪ ವಯಸಿನಲ್ಲಿ | 86 |
| ಅವನಿ ತಿರುಗಲಿಲ್ಲ | 64 |
| ಅವನಿ ಶೂದ್ರರೆಂದು | 119 |
| ಅವನು, ಅವನು, ಅಲ್ಲ | 7 |
| ಅವನು, ಅವನು, ಅವನು | 276 |
| ಅಕ್ಷರಾದಿ ಹಿಂದೆ | 55 |
| ಅಜ್ಞಾನವೆ ಶೂದ್ರತ್ವವು | 136 |

-ಆ-

| | |
|---|---|
| ಆಕಾಶದಿ ನೋಡು ಅಲ್ಲಿ | 231 |
| ಆತ್ಮದೊಳಗೆ ಶಿವನ | 233 |
| ಆದಿ ನೋಡುತಿರಲು | 228 |
| ಆಪತ್ತಿರುವಾಗ ನೋಡು | 262 |
| ಆಭಜಾತ್ಯನೆಂದು | 116 |
| ಆಯು ಕ್ಷೀಣಿಸುವುದು | 200 |
| ಆವುದಾವುದೆಂದು | 53 |
| ಆಸೆಗಳನು ಕಡಿದು | 262 |
| ಆಶೆಯುಡುಗುವನಕ | 265 |
| ಆಸೆ ಬಿಡದೆ ಇರಲು | 242 |
| ಆಸೆಯಿಂದ ಮನುಜ | 241 |
| ಆಸೆಯೆನಲು ಉಬ್ಬಿ | 241 |
| ಆಸೆಯೆಂಬ ಪಾಶ | 242 |

-ಇ-

| | |
|---|---|
| ಇಂಥ ಕಣ್ಣಿನಿಂದ | 232 |
| ಇಡ ಪಿಂಗಳ ನಾಡಿ | |
| ಇತರಾಪೇಕ್ಷೆಗಳಿದ್ದೊಡೆ | 185 |
| ಇತ್ತು ಪೋಷಿಸದಿರೆ | 237 |
| ಇರದೆ ವಿದ್ಯೆ ತನಗೆ | 252 |
| ಇಲಿಯ ಹಿಡಿಯೆ ಬೆಕ್ಕು | 261 |
| ಇಲ್ಲ ಒಳ್ಳೆಯವರು | 259 |
| ಇಹದ ಒಳಗೆ ಸುಖವು | 32,99,207 |

ಇಹದಲಿ ಎನಿತೆದಿತೊ 161
ಇಹದಲ್ಲಿ ಸುಖವು 18,207

-ಈ-

ಈ ಲೋಕ ಚಿಹ್ನೆ 187

-ಉ-

ಉಂಟು ಉಂಟು ಜ್ಞಾನಿ 3,129
ಉಚಿತವಾಡುತ ಇರುವಾತ 151
ಉಚ್ಚೆಯೊಳುದುಸಿದ ತನುವಿದು 71
ಉಕ್ಕು ಚೂರ್ಣ ತಿನಲು 201,205
ಉಕ್ಕು ಶುದ್ಧಿ ಗೆಯ್ಯು 201
ಉಕ್ಕು ಸುಧೆಯ ಮಾಡಿ 201
ಉಣ್ಣುವ ಬಾನದೊಳು 153,237
ಉತ್ತಮೋತ್ತಮನಿಹ 268
ಉತ್ತಮರ ಉದರದಿ 91
ಉತ್ತಮ ಶಿವಯೋಗಿ 2
ಉತ್ತಮ ಜ್ಞಾನ ನಿಲಯ 184
ಉಪ್ಪು ಕರ್ಪೂರಕ್ಕೆ 247
ಉಪ್ಪು ಕಳ್ಳಿ ಹಾಲು 19,33,208
ಉಪ್ಪು ಹುಣಸೆ ಹಣ್ಣು 19,33,209
ಉಬ್ಬಿ ಗುರುವ ಬೇಡಿ 189
ಉರ್ವಿ ಜನರು ಪರಮ 174,245
ಉಸಿರು ಇರದ ಶಿವಿಯ 236
ಉಸುಗು ಬಿತ್ತಲೇನು 214

-ಊ-

ಊರ್ಜಿತಾನಂದ ಪರಿಪೂರ್ಣ 183,276
ಊರ್ಧ್ವ ಲೋಕದಲ್ಲಿ 53,227
ಊರ ಹಂದಿಗಿರದು 31
ಊರ ಕಾಡು ತಿರುಗಿ 161
ಊರು ಕೊಂಡವೀಡು 5
ಊಳಿಗವನು ಮಾಡಿ 189

-ಋ-

ಋಗ್ಯ ಜುಸ್ಸನರಿತು 120
ಋಷಿ ಕುಲದಲಿ ತಾವು 76,114
ಋಷಿಯರಿಯದಂಥ
ಋತವನೃತವರಿಯಲು 140

-ಎ-

ಎಂಬರು ಮತ ವೇಷ 50
ಎಡೆಬಿಡದ ಗುರುವನು 189
ಎಷ್ಟೆ ಇರುವ ದೀಪ 107
ಎದುರಾಳಿಯ ಬಲವು 132
ಎಲೆಯು ಅಡಿಕೆ ಸುಣ್ಣ 255
ಎಷ್ಟು ಗೆಯ್ದೊಡೇನು 136
ಎಷ್ಟು ವಿಧದಲಿ ತನುವನು 278

-ಐ-

ಐದು ಬೆರಳ ಶಕ್ತಿಯಿಂದ 150

-ಒ-

ಒಂದಾದ ದಂಪತಿ 95,257
ಒಂದರಡಿಯಲೊಂದು 237
ಒಡವೆ ಇರುವ ತಾಣ 269
ಒಡವೆ ಸಿಗುವ ತನಕ 233
ಒಡ್ಡಿದ ಸತಿಯೊನಪನರಿಯದ 133
ಒಣ ಪೂಜೆಗಿಂತ
ಒಬ್ಬನು ರೋಗಿಯಾದ 173
ಒಳನೋಟ ನೋಟದಿ 286
ಒಳ್ಳೆ ಶಕುನಗಳನು 82

-ಓ-

ಓದನೋದಲೇಕೆ 39
ಓದಿದಾತಗಿಂತ 120
ಓದುಗ ಮತಿಗಿಂತ 259
ಓರ್ವ ತಾಯಿಯುದರ 90
ಓರ್ವನ ಬಾಯ್ಬಡಿದು 248

-ಔ-

ಔರಸ ಮಗ ನಿನಗೆ 92

-ಕ-

ಕಂಡ ಸುದ್ದಿ ಕೆಲವು 141
ಕಂಡು ಕಾಣಲಾರ 105





ಕಂಡು ಹೇಳಿ ಸೊಗಸು 157
ಕಂಡು ಸಂಪದ ಬಲ 81
ಕಂಡು ಜ್ಞಾನವಂತನ 2,175
ಕಂದನಿಲ್ಲವೆಂದು 88
ಕಟ್ಟುವವರು ಯಾರು 221,272
ಕಡು ದೊಡ್ಡ ಪರಾಶರ 125
ಕಡು ಲೋಭಿಯಾದವ 239
ಕಡು ವಿಚಿತ್ರ ಅರಿಯೆ 24
ಕಣ್ಣಿನಲ್ಲಿ ಮದವು 247
ಕಣ್ಣು ಇಲ್ಲದವನು 245
ಕಣ್ಣು ಕಂಡಿತೆನಲು 52,254
ಕತ್ತೆ ಹಾಲು ತಂದು 252
ಕನಕ ಉಳ್ಳ ನರನು 295
ಕನಕ ಕಂಡು ಮತ್ತೆ ಕಾಂತೆ 143
ಕನಕ ನೋಡಿ ಕೊಡಲು 81
ಕನಕವಿಪ್ಪ ಕಾಲ 102,106
ಕನಕವಿರುವವನನ್ನು 81
ಕನಕ ಹೊಂದಿದವಗೆ 102
ಕನ್ನ ಜೊತೆಗೆ ವರನ 116
ಕಮಲ ನಯನೆ ಕಂಡು 260
ಕಮಲ ಭವನು ಗೆಯ್ದು 254
ಕರ್ಣನೋರ್ವ ಘನನು 263
ಕರಗಿ ಕರಗಿ ಬಂತು 260
ಕರೆದೊಡೆ ಮಾತನಾಡದೆ 1,178
ಕರ್ಮ ಗುಣಗಳಿಲ್ಲ 266
ಕಲಿಯುಗದಲಿ ಇಪ್ಪ 8
ಕಲ್ಲು ಬಸವನಿಗತಿ ರಂಗು 58
ಕಲ್ಲು ಬೊಂಬೆಗೇಕೆ 56,256
ಕಳ್ಳ ಗುರು ಕಟ್ಟುವ 159
ಕಳ್ಳ ಯಾತ್ರೆ ಗೆಯ್ದು 132
ಕಳ್ಳು ಕುಡಿಯುವವನು 138
ಕಾಂಚನಾದಿ ಮೇಲೆ 108
ಕಾಂತೆಯಂಗ ಕಂಡು 260
ಕಾಗುಣಿತ ಬೋಧಿಪ 159,197,268
ಕಾಗೆ ಗೂಡಿನಲ್ಲಿ 170,193
ಕಾಣಲಾರ ಹಣೆಯ 53,232
ಕಾಪು ಕುಲಜರೆಷ್ಟೊ 8
ಕಾಮಿಯಾದ ನರನು 158
ಕಾಯ ಪಣತೆ ಮಾಡಿ 231
ಕಾಯ ಸಂಬಂಧವು 226
ಕಾಯವ ಸಲೆಗೂಡಿ 200
ಕಾಯುವಂಥ ಗಂಡ 85
ಕಾಲಧರ್ಮವರಿತು 265
ಕಾಲ ವಶದಿ ಅಪ್ಪ 245
ಕಾಶಿ ಕಾಶಿಯೆಂದು 210
ಕಾಶಿ, ಮಧುರೆ ಕಂಚಿ 63
ಕಾಶಿ ಯಾತ್ರೆ ಗೆಯ್ದು 64,210
ಕಿವಿಯ ಗೂಡು ಗೆಯ್ದು 55,227,254
ಕಿವಿಯೊಳಗೆ ಜನಿಸುವ 231
ಕುಕ್ಕರ ಏಕಾಂತವು 256
ಕುರಿ ಹತ್ತು ಸಾವಿರ 164,230
ಕುಲದ ಒಳಗೆ ಓರ್ವ 249
ಕುಲದ ಮೇಲು ಕೀಳು 267
ಕೂಳಿಗೂ ಗತಿಯಿರದೆ 243
ಕೆಡುಕು ಗುಣಗಳಿಲ್ಲ 108,268
ಕೇಡು ಗುಣಗಳಿಲ್ಲ 169,229
ಕೇಳದರ್ಥವೀವ 155,239
ಕೊಡುಗೆಯಷ್ಟು ಫಲವು 263
ಕೊಡುವ ಕೊಳುವ ಹಿತ 82
ಕೊಯ್ದು ನಾಯಿ ಜಿಹ್ವೆ 206
ಕೋಗಿಲೆ ವನದಲ್ಲಿ 151,258
ಕೌಂಡಿನ್ಯನು ಮುಂಡೆ ಮಗನು 122

-ಖ-

ಖಗಗಳೆರವು ಚೆಂದ 147,258
ಖಳರು ಬಯ್ದರೆಂದು 259

-ಗ-

ಗಡಿಗೆ ಒಡೆಯಲಾಗ 250
ಗಾಜುಗೊಳವೆಯೊಳಗೆ 233
ಗಿರಿಯ ಹಿರಿಯ ಮಾವ 57
ಗುಟ್ಟು ಗುರು ಭಕ್ತಿಯೊಳು 185
ಗುಡಿಯ ದೇವರೆಂದು 57,129
ಗುಣವಂತೆ ತಾನಿರೆ 94
ಗುಣವತಿಯಿರೆಯುವತಿ 94,246
ಗುಣವು ತೀರಿತಲ್ಲ 30
ಗುರು ಪರಂಪರೆಯೀ ವಿದ್ಯೆ 169,277
ಗುರುಬೋಧೆ ತಿಳಿಯದ 171,222,277
ಗುರುವಿನೊಡನೆ ಹೊಂದಿ 190,230
ಗುರುವಿನ ಶಿಕ್ಷೆಯಿರದೆ 170,268
ಗುರುವು ದೊರೆಯಲಾಗ 162
ಗುರುವು ಬರುತಲಿರಲು 189
ಗುರುವೆ ತಾನಾಗುವ 169
ಗುರುವೆನಲಾ ಪರಮಾತ್ಮನು 229
ಗುರುವೆನೆ ಧೇನುವು 170
ಗುರುವೆನ್ನಲು ಆದ್ಯಂತವು 229,277
ಗುಹೆಗಳ ಹದಿಸಾವಿರ 161
ಗೊಟ್ಟದಲ್ಲಿ ಇಟ್ಟ ಕಾಲ 251
ಗೋಟಿ ಬಿಚ್ಚಿತೆಂದು 177

-ಘ-

ಘಟವ ಗಾಣ ಮಾಡಿ 255

-ಚ-

ಚಂಚಲ ಮತಿಯಧಿಕ 107
ಚಂದ್ರ ಸೂರ್ಯಾಗ್ನಿಗಳೇರ್ಪಟ್ಟ
ಚರ್ಚೆ ಮೀರಿದ ಜ್ಞಾನ 172
ಚಮಚೆಯಷ್ಟು ಸಾಕು 252
ಚಿಂದಿ ಬಟ್ಟೆಯಲ್ಲ 174,210
ಚಿತ್ತ ಶುದ್ಧ ಯೋಗಿ 271
ಚಿತ್ತ ಶುದ್ಧಿ ಹೊಂದಿ 152,266
ಚಿಮ್ಮಿ ನುಗಿಸಿ ಅರಿವ 187
ಚೊಕ್ಕವಾಗಿರುವನ 135
ಚೋರತನ ಜಾರತನ 243

-ಛ-

ಛಾತ್ರಧರ್ಮವರಿತು 73,188

-ಜ-

ಜಗದಲ್ಲಿಯು ಇಲ್ಲ 65
ಜನನ ಮರಣಗಳಿಗೆ 255
ಜನನ ಮರಣವೆಲ್ಲ 38
ಜನ್ಮ ಕಳೆದು ಬೇರೆ 266
ಜನ್ಮ ಸಾಫಲ್ಯವನು 181
ಜನಿಸಿದ ಜನರೆಲ್ಲ 38
ಜನುಮದಿಂದ ಯಾರು 73
ಜಾತಿಗಳಲಿ ಮೇಲು 111
ಜಾತಿ ನಾನರಿಯೆನು 70,110
ಜಾತಿ ಬೇರೆ ಇಲ್ಲ 71,110
ಜಾತಿ ಭೇದಗಳನು 126,267
ಜಾತಿ ಭೇದವೆಣಿಸಿ 70
ಜಾತಿ ಭೇದವೇಕೆ 110
ಜಾತಿ ಮತಗಳಲಿ 69
ಜಾತಿ ಮತವ ತೊರೆದು 9,267
ಜಾತಿಯಲ್ಲಿ ಯಾವ 70
ಜಾತಿಯೊಳಗೆ ಮೇಲು 118
ಜಿಪುಣನ ಮನೆಯಿಂದ 240
ಜಿಹ್ವೆ ರುಚಿಯ ಕೋರಿ 130
ಜೀವದ ಶಾಶ್ವತ ರೂಪದ 274
ಜೀವ ರಾಶಿಯೆಲ್ಲ 226
ಜೀವ ಲಿಂಗ ಪೂಜೆ 58
ಜೀವಿ ಹೋಹ ಮುನ್ನ 200

-ಝ-

-ಞ-

-ಟ-

ಟಿಪ್ಪಣಿಗಳ ಗೆಯ್ದು 49







ಟೀಕೆ ಮಾಡುವಂಥನೇಕ 253

-ಠ-

ಠಕ್ಕರೊಡನೆ ಸೇರಿ 259

-ಣ-

-ಡ-

-ಢ-

ಢೋಂಗಿ ಮಾತನಾಡೆ 142

-ತ-

ತಂತ್ರ ಮಂತ್ರಗಳನು 186
ತಂದು ಕಡಿ ಚರ್ಮ 252
ತಂದೆಗಿದ್ದು ಧನವು 88
ತತ್ಪದವೆನ್ನಲು ಪ್ರತ್ಯಗಾತ್ಮ 280
ತತ್ತ್ವವರಿತಿರುವನು 18,208
ತನ್ನ ಆತ್ಮದಲ್ಲಿ 64
ತನ್ನ ಒಡೆಯನೊಡನೆ 246
ತನಗೆ ಬಂಧುವೆಂದು 82,102
ತನ್ನ ಒಳಿತು ಕೋರಿ 258
ತನ್ನ ತಾಯಿ ವೇಶ್ಯೆ 123
ತನ್ನ ತಾಯಿ ಸೂಳೆ 73
ತನ್ನ ಮೌಢ್ಯ ಗುರುತು 91
ತನ್ನ ರಕ್ತಿಯಿಂದ 31
ತನ್ನ ಸೊತ್ತು ನೋಡಿ 154
ತನ್ನ ಹಡೆದ ಅವರು 236
ತನ್ನ ಹೊಡೆದು ಬಡಿದು 176
ತಪ್ಪನೆಣಿಸುತಿಹರು 260
ತಮ್ಮ ಯೋಚನೆಗಳು 280
ತರುಣಿ ಪುಣ್ಯವತಿ 95
ತರುಣಿಯಂಗವೆಲ್ಲ 177
ತಾತ ಹೆತ್ತ ತಾಯಿ 75
ತಾನು ಇಂದ್ರಿಯಗಳ 231
ತಾನು ಉಣ್ಣಲಿಲ್ಲ 239
ತಾನು ಒಲಿದು ಕೊಡಲು 238
ತಾನು ನಾನು ಎನುವ 234
ತಾನಾಗುವ ಅರಿತು 279
ತಾಯಿ ತಂದೆ ಎನಲು 79
ತಾಯಿ ತಂದೆಗಳಲಿ 79
ತಾಯಿ ತಂದೆ ಮಡಿಯೆ 79
ತಾಯಿ ತಂದೆ ಮೇಲೆ 246
ತಾಯಿ ತಂದೆಯರಲಿ 89
ತಾಯಿ ಯುದರದಿಂದ 176,215
ತಾಯಿಯೇ ಪಾರ್ವತಿಯು 78,257
ತಾವರೆ ಎಲೆಯಡಿ 175
ತಾವು ಮಾಡಿದ ಪಾಪಗಳು 182
ತಿಳಿವು ನಿಲಿಸಿ ನೋಡು 270
ತಿಳಿವು ಮರೆವುಗಳಲ್ಲದಲ್ಲಿ 280
ತಿಳಿಯೆನೆನ್ನುವವನು 179,264
ತಿಳಿಸು ಅಯ್ಯ ! ಎಂದು 189
ತಿಳಿಸುವವನು ಯಾರೊ 193
ತೀರ್ಥಯಾತ್ರೆಯೆಂದು 64
ತುಪ್ಪವಿರದ ಊಟ 23
ತೃಪ್ತಿ ತುಂಬಿ ಗುರುವ 194,236
ತೆಗೆದು ಮುಡಿಯಲಿಲ್ಲ 239
ತೊಡೆ ಕುಂಡಿಯ ಕಂಡು 25
ತೊಡೆಯ ಮೆರಗು ಕಂಡು 25

-ಥ-

-ದ-

ದರ್ಶನಗಳೊಳು ಧರೆ
ದರ್ಶನಗಳೊಳು ಸಲೆ 39
ದಾಟಿ ಬಂದು ನದಿಯ 1
ದಾತನಿರಲು ಕರೆದು 238
ದಾನ ಒಪ್ಪಗೆಯ್ಯೆ 154,237
ದಾನ ಕೇಳುವವನು 238
ದಾನಗಳನು ಮಾಡೆ 238
ದಾನ ಧರ್ಮಗಳನು ತಾನು 263
ದಾನ ಧರ್ಮಗಳನು ದೂಡಿ 263

ದಾನಿಯಲ್ಲದವಗೆ 263
ದಾರ ಕೊರಳ ಸುತ್ತಿ 76,115
ದಾರಿ ತಿಳಿಯದಿರಲು 232
ದಾಸನೆನೆ ಲೇಸು 127
ದಿವ್ಯ ಪರತತ್ವದಲ್ಲಿ 184
ದುಡ್ಡು ಉಳ್ಳ ನರನ 107
ದುರಿತಗಳನೆಲ್ಲ ಖಂಡಿಸುತ 192
ದೆಸೆಯು ತಿರುಗಲವನ 103
ದೇವ ಗುಡಿಗಳಲ್ಲಿ 58
ದೇವ ಪೂಜೆ ಗೆಯ್ಯೆ 4
ದೇವ ಭೂಮಿಯಲ್ಲಿ 66
ದೇಶ ದೇಶಗಳನು 62
ದೇಹ ಆತ್ಮಗಳು 183
ದೇಹ ಆತ್ಮಗಳನು 162
ದೇಹದೊಳಗೆ ಇಪ್ಪ 65
ದೇಹಗಳನಿತ್ಯ ದೇಹಿ 281,278
ದೇಹವಾತ್ಮ ರೂಪ 192,238
ದೋಷಕಾರಿಯಿರಲಿ 108
ದ್ರವ್ಯಹೀನನಾಗೆ 100
ದ್ವಿಜ ಜನರು ಕೆಟ್ಟು 119

-ಧ-

ಧನದ ಮದವು ತುಂಬಿ 106
ಧನವ ಕೂಡಿ ಹಾಕಿ 238
ಧನವ ನೋಡುವವನು 143
ಧನವ ಘನತೆ ನೋಡಿ 101
ಧನವಿರದಿರೆ ಸುತರು 100
ಧನವಿರುವಾತಂಗೆ 101
ಧನವು ಇರದೆ ಗುಣವು 33,22
ಧನವು ಇಲ್ಲವೆನಲು 103
ಧನವೇ ಮೂಲವು ಜಗಕೆ 100
ಧರಣಿಯೊಳು ಓದು ಎಲ್ಲ 274
ಧರೆಯ ಜನರಿಗೆಲ್ಲ 172
ಧ್ಯಾನಿಯಂತೆ ಉಂಟು 1,173,234
ಧ್ವಜವನೆತ್ತಿ ಸಾರು 41,227

-ನ-

ನಂದನ ಸಂವತ್ಸರದಲಿ 5
ನದಿ ತೀರವ ಕುರಿತು 62
ನಭವಾದರು ಹೊಂದಬಹುದು 136
ನರನೆನೆ ಪರಮಾತ್ಮ 190
ನಾಚುಗೆ ಇರುವವನು 178
ನಾಥನ ಪಡೆದಂಥ 95
ನಾನಾ ರತ್ನವ ನೀಡುತ 36
ನಾನು ಎನ್ನುತಿಹುದು 187,270
ನಾಯಿ ತಿನ್ನುವವನು 179
ನಾಯಿಯಾಗದು ಹಸು 240
ನಾರಿ ಪಾಪ ಜಾತಿ 148
ನಾರಿಯನ್ನು ಆರು 24
ನಿಂದಿಸುತ ಭ್ರಮೆ 191
ನಿಕ್ಕಿಯಾದ ಒಳ್ಳೆ 247
ನಿಖಿಲಾಕಾರನನಂತನು 228
ನಿಜವನೆ ನುಡಿಯುವ ಜನರಿಗೆ 149
ನಿಜವನಾಡುವವನ 264
ನಿಜವನಾಡುವವನು ನಿರ್ಮಲ 149
ನಿಜವ ಸುಳ್ಳನೆರಡು 140,236
ನಿತ್ಯಾನಂದ ವಿವೇಕವ 181
ನಿದ್ರೆಯೊಳಗೆ ನಿದ್ರೆ 234
ನಿನ್ನ ನೋಡುತಿರಲು ತನ್ನ 198,270
ನಿನ್ನ ನೋಡುತಿರಲು ನೆರೆ 198,270
ನಿಯಮಾದಿ ಸಂಗಿಯಾಗಿ 279
ನೀಡುತ್ತಿರುವವರ 154
ನೀಡುವಪ್ಪನ ಒಳಿ 240
ನೀಡುವವರು ಯಾರು 221,272
ನೀತಿ ತಿಳಿಸ ಹೋಗು 235
ನೀತಿ ಹೀನರಿಂದ 235
ನೀನಾಡಲು ನಾನಾಡುವೆ 197
ನೀರಿನೊಳಗೆ ನಾವು 247
ನೀರಿನಲ್ಲಿ ಮೀನು 241
ನೀರಿನೊಳಗೆ ಮೊಸಳೆ 240





ನೀರು ಮುಳುಗಲೇನು 256
ನುಡಿಯೆಂಬೆನೊ ದೇವ 197
ನೆರೆ ಬಡವರ ರಕ್ಷಿಸುವ 105
ನೈಜವಾದ ಚೊಕ್ಕ 253
ನೊಸಲು ಭಕ್ತನಹುದು 146
ನೋಡಲೇಕೆ ವೇದ 171
ನೋಡುವ ವರೆಗೇ ಸಾಧನ 190

-ಪ-

ಪಂಚ ಭೂತಗಳನು 52
ಪಂಚಮ ವೇದವೆನೆ 42,93,131
ಪಡುವಲದ ಕಾಯಿಗೆ 251
ಪಡೆದು ಚಿತ್ತ ಶುದ್ಧಿ 235
ಪತಿಯ ಕಾಲದಲ್ಲಿ 246
ಪತಿಯೊಪ್ಪಿರೆ ಸತಿ 97
ಪತಿ ಸುತರಿಬ್ಬರು 212
ಪತ್ನಿ, ಪುತ್ರ, ಧನವ 98
ಪರಚಿಂತೆಯದೇಕೆ 264
ಪರದೇಶಿಕ ಚರಣಂಗಳ 181
ಪರನಾರಿಯ ಸಂಗ 147
ಪರನಾರೀ ದೂರವಿಹನು 152
ಪರಮ ಗುರುವರ 187
ಪರಮ ನಿರ್ಗುಣ ವಿದ್ಯೆಯಲಿ 2,278
ಪರಮ ಭದ್ರಾಸನ 13
ಪರರ ಆಸ್ತಿಯಲ್ಲಿ 147
ಪರರ ಕೆಡಿಸಲೆಂದು 153
ಪರರ ಮೋಸಗೊಳಿಸಿ 143
ಪರರಿಗಾಗಿ ಭೂಮಿ 127
ಪರರಿಗುಪಕರಿಸಲು 152
ಪರರಿಗುಪಕರಿಸಲು ಪಾಪ 153
ಪರಮಾತ್ಮ ಚಿಂತನದೋಳ್ 175
ಪರಸತಿ ಗಮನವು 133
ಪಕ್ಷಿ ಕುಲವ ಹಿಡಿದು 130
ಪಾಯನಿ ನಡಿಸಾಂಬಾರ 23
ಪುಣ್ಯವೆಲ್ಲ ಕೂಡಿ 83
ಪುಣ್ಯ ಸುಖಿವ ಪುತ್ರ 88
ಪೂಜೆ ಮಾಡಿ ಮಾಡಿ 58
ಪೂರ್ವಜನ್ಮದಲ್ಲಿ 242
ಪೂರ್ಣವಾಗಿ ತನ್ನ 131
ಪೊಡವಿ ತಿರುಗಿ ಪಡೆವ 66
ಪೊಡವಿಯಲ್ಲಿ ನರರು 87
ಪ್ರಭುವಿಗೀವ ರೀತಿ 105
ಪ್ರಾಣ ಗುಂಟು ಬಾಲ 177

-ಫ-

-ಬ-

ಬಂಗಾರವ ಕಂಡು 265
ಬಂಡೆ ಮೇಲೆ ಒರತೆ 249
ಬಡವನಾಗಿರುವಗೆ 80
ಬದುಕುವವರು ಯಾರೊ 221,272
ಬಯಲಲಿ ಸರ್ವವು ಹುಟ್ಟಿತು 274
ಬಯ್ವು ಹೊಡೆದರೆಂದು 3,178
ಬಳಿ ಸಾರಿ ಸಾಗರ 185
ಬಹಳ ಜನರ ಇರಿದು 131
ಬಾಯಿ ಬಡಿಯಲೊಬ್ಬ 142
ಬಾಯಿ ಯೋನಿಯವನ 72
ಬಾರಿ ಗಿಡ ಮುಳ್ಳನು 251
ಬಾಲ್ಯದಲ್ಲಿ ನೀನು 216,260
ಬಿಂದು ರಕ್ತದಿಂದ 116
ಬಿನ್ನವಿಸುತಲಿ ಸದ್ಗುರುವ 180
ಬಿಳಿಯ ಶಿಲೆಯ ತಂದು 60
ಬೆಟ್ಟ ಕಲ್ಲಿನಿಂದ 60
ಬೆಣ್ಣೆ ಕೈಯೊಳಿದ್ದು
ಬೆಣ್ಣೆ ಕೈಲಿ ಹಿಡಿದು 242
ಬೆವರು ಸುರಿಯುವಂತೆ 127
ಬೇಕು ಎನಲು ಬರದು 266
ಬೇರಿಗೆ ಹುಳ ಹತ್ತಿ 245
ಬೊಂಬೆಯಾಟದವನು 253
ಬೊಮ್ಮಣಂಗೆ ನಮಿಸಲವನು 114
ಬೌದ್ಧ ಮತದ ಜನರು 43
ಬ್ರಹ್ಮ ಕೊಂದು ವಿಷ್ಣು 112

ಬ್ರಹ್ಮನನ್ನು ಕೊಂದು 180
ಬ್ರಹ್ಮ ಘಟವು ದೇಹ 228
ಬ್ರಹ್ಮನಿರುವ ತಾಣ 232
ಬ್ರಹ್ಮ, ನೃಪತಿ, ವೈಶ್ಯ 113
ಬ್ರಹ್ಮ, ವಿಷ್ಣು, ಶಿವರ 112
ಬ್ರಹ್ಮವೆನಲು ಬೇರೆ 270
ಬ್ರಹ್ಮವೆಲ್ಲಿಯೆಂದು 232
ಬ್ರಹ್ಮವೇತ್ತರೆಂದು 112
ಬ್ರಾಹ್ಮಣನಿಗೆ ಸಕಲ 49
ಭ್ರಾಂತಿ ಚೇತನ ಮರ್ತ್ಯ 144

-ಭ-

ಭಂಡ ಮಾತನಾಳ್ವ 251
ಭಕ್ತಿಯುಳ್ಳ ಎಡೆಗೆ 234
ಭಗವಂತನಾದ ದೇವರು 228
ಭವದೂರನು ಶರಭಾಂಕನು 13,156
ಭವ ಸಾಗರದಂತೆ 265
ಭುಕ್ತಿ ಮುಕ್ತಿಯುಂಟು 96
ಭೂಪತಿ ಕೃಪೆ ನಂಬಿ 249
ಭೂಮಿ ಎಂದರೇನು 253
ಭೂಮಿ ತನ್ನದೆನಲು 262
ಭೂಮಿಯಲ್ಲಿ ಪುಣ್ಯ 249
ಭೂಮಿ ಹಸರಿನಿಂದ 66
ಭ್ರಾಂತಿ ಚೇತನ ಮರ್ತ್ಯರು 144

-ಮ-

ಮಂತ್ರವು ಸದ್ಗುರು ಚಿಂತನ 186
ಮಡದಿ ನೀಡಿದವನ 80
ಮಣ್ಣು ಲೋಹಗಳಲಿ 54,256
ಮತದ ದಾರಿ ಮರೆತು 157
ಮತ್ತು ಏರಿದ ವೇಳೆ 138
ಮದನನಂಥ ಪತಿಯು 135
ಮದ್ದು ಹಾಕಿ ಪತಿಗೆ 136
ಮನವಾರೆ ಮುದಿಸುವ 96
ಮದ್ಯ ಕುಡಿದು ಮತ್ತೆ 137
ಮನಸಿನಲ್ಲಿ ಒಳ್ಳೆ 241
ಮನಸಿನೊಳಗೆ ತಿಳಿದು 271
ಮನಸು ಕುದುರೆ ಮಾಡಿ 271
ಮನುಜ ತಿಳಿವು ಹೊಂದಿ 271
ಮನೆಯ ಮಡದಿ ಬಿಟ್ಟು 134,244
ಮನೆಯೊಳಗಿನ ಹಣವು 240
ಮಳೆಯು ಬರುವ ಅಂದ 215
ಮಾತಂಗ ಮುನಿ ಮರಿ ಮಕ್ಕು 121
ಮಾತಂಗ ಮುನಿಯ 73
ಮಾತನಾಡಬಹುದು ಮನಸು 250
ಮಾತನಾಡಬಹುದು ಮರ್ಮ 250,264
ಮಾತನಾಡೆ ಬೇರೆ 258
ಮಾತು ಎಲ್ಲ ಸುಳ್ಳು 141,250
ಮಾತು ತಿದ್ದಬಹುದು 250
ಮಾತು ಮುನ್ನವರಿತು 150
ಮಾದಿಗನೆನೆ ಬೇಡ 123
ಮಿಥ್ಯೆ ತಿಳಿವಿನಿಂದ 160
ಮೂಢ ಮೂಢಗೆ ಮೆಚ್ಚು 248
ಮೊದಲ ತರುವಿನಲ್ಲಿ
ಮೊದಲಿಗಿಹ ಮಾತ್ರ ದೇವತೆ 78
ಮೊದಲು ಆಸೆ ಬೆಳೆಸಿ 240
ಮೊದಲು ಬಿಡದೆ ತನ್ನ 40
ಮೊಸರಿನಲ್ಲಿ ತುಪ್ಪ 227
ಮೋದಗಳ ಗುರುವಿನ 192

-ಯ-

ಯಾತ್ರೆ ಹೋಗಿರುವವ 63
ಯಾರ ಬಾಯಿ ತುತ್ತು 144
ಯಾವ ಕುಲವು ನಿನಗೆ 69,124,267
ಯೋನಿಯಲ್ಲಿ ಹುಟ್ಟಿ 70,111

-ರ-

ರಾಜವರರಿಗಿಹುದು ರಣ 244
ರಾಜಯೋಗೀಂದ್ರ 279
ರಾಮ ನಾಮ ಪಠಣ ಗೆಯ್ದು 126
ರಾಮ ವಿಭವ ಹುಟ್ಟಿ 226







-ಲ-

ಲೋಕಾ ಲೋಕವು ನಾನೇನಲ್ಲ 275
ಲೋಭಿ ನರನ ಕೊಲಲು 239

-ವ-

ವರ ಬ್ರಹ್ಮಾಂಡದಿ 74
ವಿಕೃತ ಮತಿಯೆ ಇರಲಿ 243
ವಿಟನು ಬಳಸಿಕೊಂಡು 136
ವಿತ್ತ ಓರ್ವಗಿತ್ತು 262
ವಿಧಿಯು ಬೆನ್ನಿಗಿರಲು 266
ವಿಪ್ರವರರು ಎಂದು
ವಿವರಿಸಲು ಹೆಸ್ಸಗೆ 252
ವಿವೇಕವೆನ್ನುತಿಹ 271
ವಿಶ್ವಕರ್ಮನಿರದ ವಿಶ್ವ 254
ವಿಶ್ವನಾಥನಲ್ಲಿ 255
ವಿಶ್ವೋತ್ಪತ್ತಿಗೆ 228
ವಿಷ್ಣು ಭಕ್ತರೆಲ್ಲ 41
ವೀರಶೈವ ಧರ್ಮ ವಿಭವ 42
ವೀರಶೈವೆಂಬ ವಿಭವ 42
ವೇದಗಳನು ಓದಿ 46
ವೇದ ವಿದ್ಯೆಯಲ್ಲ ವೀರ 51
ವೇದವಿದ್ಯೆಯೆಲ್ಲ ವೇಶ್ಯೆ
ವೇದಾಂತ ಸಾರ ಗುಣ 181
ವೇದಾತೀತನು ವೇಮ 223,273
ವೇಮನೆಂಬ ಯೋಗಿ 4,223,273
ವೇಮನ ಹೇಳಿದ ಕಲ್ಪವು 202
ವ್ಯಾಪಿಸಿ ಇರುತಿಹ 182

-ಶ-

ಶಿವಕವಿಗಳ ನವಕವಿಗಳ 196
ಶಿವನ ಮಂತ್ರವದು 41
ಶಿವನೆಂದು ಭ್ರಮಿಸಿ 54,256
ಶಿಲೆಯ ದೇವತೆಗಳ 57
ಶಿಲೆಯ ಪ್ರತಿಮೆ ತಂದು 61
ಶಿಷ್ಯ ವರ್ಗಕೆಲ್ಲ 160
ಶುದ್ಧ ಪರಿಪೂರ್ಣ 191
ಶುದ್ಧರೆಲ್ಲ ಕೂಡಿ 201
ಶೂದ್ರರಲ್ಲಿ ಹುಟ್ಟಿ 76
ಶೂದ್ರ ಯುವತಿ ಸುತಗಿದೆ 77,207
ಶೈವ ವೈಷ್ಣವಾದಿ 253
ಶೋಧದಿಂದ ದೊರೆವ 163,227
ಶ್ರೀಮಂತರಾಗಿರುವವರ 106
ಶ್ರೀರಾಮ ಎಂಬ ಮಂತ್ರವ 225
ಶ್ವಾನ ಕಡಿದೊಡಾಗ 205
ಶ್ವಾಸ ಎಳೆದು ಬಿಡುವ 267

-ಷ-

-ಸ-

ಸಕಲ ವೇದಗಳ ಸಾರ 223,276
ಸಕ್ತಿಯಿರುವ ಕಾರ್ಯ 150,262
ಸತಿ ಗೆಯ್ಯುವ ಕೆಡುಕು 84,257
ಸತಿಯ ಕೂಡಲೆಂದು 87,25
ಸತಿಯ ದೋಷ ತಿಳಿಯೆ 86
ಸತಿಯ, ಸುತರ, ಧನವ 98
ಸತಿಯು ಸುತರ ಕೂಡಿ 98
ಸತಿಯೆ ರಂಭೆ ಇರಲು 133
ಸತಿಯರು ಸಹ ಜಪವ 84
ಸತಿಯು ಜಪ ತಪಗಳ 83
ಸತ್ತು ಬಿದ್ದ ಪಶುವ 5
ಸತ್ಯ ಒಪ್ಪವಿರಲು 125,148
ಸತ್ಯವನ್ನು ಬಿಡದೆ 148
ಸಲ್ಲದವನ ಕೈಗೆ 104
ಸಲ್ಲದವನ ಜೊತೆಗೆ 259
ಸವೆ ಸವೆದು ಜನಿಸಿತು 231
ಸಹನೆಯಿರದ ಸತಿಯ 87
ಸಾಕು ಇನ್ನು ಮೇಲೆ 43
ಸಾಧು ಚರಿತೆಯುಳ್ಳ 30
ಸಾಧು ಬೋಧೆಯತರ 269
ಸಾಯುವವರ ಕಂಡು

ಸಾಯುವವರು ಯಾರು 221,272
ಸಾವಿರ ಕ್ರತುಗಳ 183
ಸಿಕ್ಕು ಕ್ರತುಗಳ
ಸಿಕ್ಕು ಬಿದ್ದ ವೇಳೆ 262
ಸಿಹಿಯೊಳಗತಿ ಸಿಹಿಯು 244
ಸುಗುಣವಂತೆ ಕಾಂತೆ 257
ಸುರರು ಮೌನವಿಹರು 50
ಸುಳ್ಳು ಸತ್ಯವೆರಡು 141
ಸೆರೆ ಗಡಿಗೆಗೆ ಬೂದಿ 119
ಸೇರಿ ಉಣ್ಣಬಹುದು 92
ಸೋಂಕಿ ಪರುಷ ಲೋಹ 269
ಸೋತು ಹೋಗಿ ಗುರುವ 188
ಸೋಮಯಾಜಿಯೆಂದು 49
ಸ್ತನದ ಭಂಗಿ ಕಂಡು 212
ಸ್ತ್ರೀ ನೆತ್ತಿಯಲ್ಲಿ ರುದ್ರಗೆ 97
ಸ್ತ್ರೀಯ ಸುಖವ ಕಂಡು 243
ಸ್ವಂತ ಉಣ್ಣಲಾರ 262
ಸ್ವಾನುಭೂತಿಯರದೆ 264

–ಹ–

ಹಂದಿ ಈಯುತಿಹುದು ಹದಿನೈದು 89,248
ಹಂಸ ಮಾನಸ ಜಲ 234
ಹಕ್ಕಿ ಜಾತಿ ಹಿಡಿದು 130
ಹಗಲು ಇರುಳು ಮರೆತು 233
ಹಡೆದ ತಾಯಿ ತಂದೆ 79
ಹನಿಯು ಬೀಳುವಂದ 220
ಹನಿಸೆ ಸಾವಿರ ವರುಷ 251
ಹರುಷ ಭೋಗವ 184
ಹಲವು ಹೀನ ಕಾರ್ಯ 115
ಹಲಸಿನ ತೊಳೆಗಿಂತ 244
ಹಸಿದು ಬಂದವರಿಗೆ 237
ಹಸುಗಳಂದ ಬೇರೆ 253
ಹಾದರದ ಕಥೆಯಿದು 42,93
ಹಾಯಾಗಿರೆ ಇಹದಿ 17,33,99,158,207
ಹಾಲುಗೂಡಿ ನೀರು 193,230,268
ಹಾಲು ಸಾಗರದೊಳು 109
ಹಿಂಸೆ ಗೆಯ್ಯದಿಹುದೆ 130,146
ಹಿಂಸೆ ಗೈಯ್ಯದಿಹುದೆ ಹಿರಿಯ 146
ಹಿತ್ತಲಗಿಡ ನೆಟ್ಟು 135
ಹುಚ್ಚು ನರಿಗಳಂತ 51
ಹುಚ್ಚು ಪೆದ್ದನೇನು 262
ಹುಟ್ಟಿ ಚೆತ್ತಲಾಗಿ 249
ಹುಟ್ಟುವವರು ಯಾರು 195,220,272
ಹೂವು ಮಾಲೆಯ ಹುಡುಗಿ 243
ಹೃದಯದಲ್ಲಿ ಶಿವನು 54
ಹೆಂಡಕೀಯುವಂತೆ 137
ಹೆಂಡತಿಯೆನೆ ಆತ್ಮ 96
ಹೆಂಡ ಮಡಿಕೆ ಮೆಯ್ಸೆ 50
ಹೆದೆಯೇರಿಸಿ ರೂಪವ 182
ಹೊಂಚು ಹಾಕಿ ಹಾವು 143
ಹೊಟ್ಟೆ ತುಂಬ ಸುಧೆಯ 235
ಹೊನ್ನು ಉಳ್ಳ ನರನ 103
ಹೊನ್ನು ಗೆಯ್ಯು ವಿದ್ಯೆ 17,159,208
ಹೊನ್ನು ಜಿಂಕೆ ಜಗದಿ 109
ಹೊನ್ನು ನೋಡಿದೊಡನೆ 148
ಹೊಲೆಯನೆಂದು ಏಕೆ 73

–ಳ–

–ಕ್ಷ–

–ಜ್ಞ–

ಜ್ಞಾನಿಯಾದ ನರನು 197,229